ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೩

ಉದ್ಯೋಗಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೧೩

ಉದ್ಯೋಗಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಪಿ. ಎಸ್. ಶೇಷಗಿರಿ ಆಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಉದ್ಯೋಗಪರ್ವ -ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಉದ್ಯೋಗಪರ್ವ

© ತತ್ತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-69-9

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XII + 560 = 572
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	ವಾಗರ್ಥ, ಬೆಂಗಳೂರು
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮುನೀನ್ನುಮಃ

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೧೩

ಉದ್ಯೋಗಪರ್ವ

ಅಧ್ಯಾಯ ಸಂ.		ಪುಟ ಸಂ.
123.	ಕೃಷ್ಣನಿಂದ ಧೃತರಾಷ್ಟ್ರನ ಪ್ರಾರ್ಥನೆಯಂತೆ ದುರ್ಯೋಧನನ ಅನುನಯ	1
124.	ಭೀಷ್ಮ-ದ್ರೋಣ-ವಿದುರ-ಧೃತರಾಷ್ಟ್ರರಿಂದ ಕೃಷ್ಣನ ಮಾತುಗಳನ್ನು ಸ್ವೀಕರಿಸುವಂತೆ ದುರ್ಯೋಧನನಿಗೆ ಒತ್ತಾಯ	15
125.	ಪಾಂಡವರು ಯುದ್ಧಸನ್ನದ್ಧರಾಗುವುದಕ್ಕಿಂತ ಮೊದಲೇ ಸಂಧಿಯನ್ನು ಮಾಡಿಕೊಳ್ಳುವಂತೆ ಭೀಷ್ಮ-ದ್ರೋಣರಿಂದ ದುರ್ಯೋಧನನಿಗೆ ಕಥನ	21
126.	ಪಾಂಡವರಿಗೆ ಸೂಜಿಯ ಮೊನೆಯಿಂದ ಚುಚ್ಚುವಷ್ಟು ಭೂಮಿಯನ್ನೂ ಕೊಡುವುದಿಲ್ಲವೆಂದು ದುರ್ಯೋಧನನ ಉತ್ತರ	25
127.	ಕೃಷ್ಣನಿಂದ ದುರ್ಯೋಧನನು ಪಾಂಡವರಿಗೆ ಮಾಡಿದ ಅಪಚಾರಗಳ ವರ್ಣನೆ. ಕುಲದ ಕ್ಷೇಮಕ್ಕಾಗಿ ದುರ್ಯೋಧನಾದಿಗಳನ್ನು ಬಂಧಿಸುವಂತೆ ಭೀಷ್ಮಾದಿಗಳಿಗೆ ಸೂಚನೆ	31
128.	ದುರ್ಯೋಧನನಿಗೆ ಗಾಂಧಾರಿಯ ಉಪದೇಶ	41
129.	ಪುನಃ ಸಭೆಯಿಂದ ಹೊರಗೆ ಹೋಗಿ ಕೃಷ್ಣನನ್ನು ಬಂಧಿಸಲು ದುರ್ಯೋಧನನ ಮಂತ್ರಾಲೋಚನೆ. ಸಾತ್ಯಕಿಯಿಂದ ಅದು ಕೃಷ್ಣನಿಗೆ ನಿವೇದನೆ. ಅದನ್ನು ತಿಳಿದ ವಿದುರನಿಂದ ದುರ್ಯೋಧನನ ನಿಂದನೆ	55
130.	ವಿಶ್ವರೂಪವನ್ನು ತೋರಿಸಿ ಸಭೆಯಿಂದ ಕೃಷ್ಣನ ನಿರ್ಗಮನ	67
131.	ಕುಂತಿಗೆ ಕೃಷ್ಣನಿಂದ ಸಭಾವೃತ್ತಾಂತದ ಕಥನ ಮತ್ತು ಯುಧಿಷ್ಠಿರನಿಗೆ ಕುಂತಿಯ ಸಂದೇಶ	76
132.	ಯುಧಿಷ್ಠಿರ ಬೋಧನೆಗಾಗಿ ಕುಂತಿಯಿಂದ ವಿದುಲೋಪಾಖ್ಯಾನ ಕಥನ	83
133.	ಸೃಂಜಯನಿಗೆ ತಾಯಿಯಾದ ವಿದುಲೆಯ ಉಪದೇಶ	93
134.	ಕುಂತಿಯಿಂದ ವಿದುಲೋಪಾಖ್ಯಾನದ ಕಥನ	102
135.	ವಿದುಲೋಪಾಖ್ಯಾನದ ಉಪಸಂಹಾರ	112

136. ಕೃಷ್ಣನ ಮೂಲಕ ಅರ್ಜುನಾದಿಗಳಿಗೆ ಕುಂತಿಯ ಸಂದೇಶ 117

137. ಕುಂತಿಯ ವಾಕ್ಯವನ್ನು ಕೇಳಿ, ಭೀಷ್ಮ-ದ್ರೋಣರಿಂದ ದುರ್ಯೋಧನನಿಗೆ ಸಂಧಿಯನ್ನು ಮಾಡಿಕೊಳ್ಳುವಂತೆ ಒತ್ತಾಯ. ಕರ್ಣನ ಜೊತೆಯಲ್ಲಿ ಮಾತನಾಡಿ ಕೃಷ್ಣನ ಉಪಪ್ಲಾವ್ಯನಗರ ಗಮನ 123

138. ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಬೇಕಾಗಿ ಬಂದುದಕ್ಕೆ ಭೀಷ್ಮ-ದ್ರೋಣರ ಪರಿತಾಪ. ದುರ್ಯೋಧನನಿಗೆ ಸಮಾಧಾನವನ್ನು ಮಾಡಲು ಪುನಃ ಪ್ರಯತ್ನ 129

139. ವೈಶಂಪಾಯನರಿಂದ ಕೃಷ್ಣ-ಕರ್ಣರ ಸಂಭಾಷಣೆಯ ಕಥನ 136

140. ಕೃಷ್ಣನ ಮಾತುಗಳಿಗೆ ಕರ್ಣನ ಉತ್ತರ ಮತ್ತು ಕೃಷ್ಣನ ಸಲಹೆಯ ನಿರಾಕರಣೆ 142

141. ಕೃಷ್ಣನಿಂದ ಕರ್ಣನನ್ನು ಕುರಿತು ಪಾಂಡವರ, ಜಯನಿರ್ಧಾರವನ್ನು ಹೇಳಿ ಭೀಷ್ಮಾದಿಗಳಿಗೆ ಯುದ್ಧಕ್ಕೆ ಸನ್ನದ್ಧವಾಗಿರುವಂತೆ ಸಂದೇಶವನ್ನು ಕೊಡಲು ಸೂಚನೆ 154

142. ಕೃಷ್ಣನಿಗೆ ಪಾಂಡವರ ಜಯದ ಮತ್ತು ಕೌರವರ ಅಪಜಯದ ಸೂಚನೆಗಳನ್ನು ಹೇಳಿ, ಕರ್ಣನ ನಿರ್ಗಮನ 158

143. ಯುದ್ಧದಲ್ಲಿ ಉಂಟಾಗಲಿರುವ ವಿನಾಶವನ್ನು ಚಿಂತಿಸಿ ವಿದುರನ ಶೋಕ. ಗಂಗಾತೀರದಲ್ಲಿ ಕುಂತೀ-ಕರ್ಣರ ಸಮಾಗಮ 169

144. ಕರ್ಣನ ಜನ್ಮವೃತ್ತಾಂತವನ್ನು ಹೇಳಿದ ಕುಂತಿಯಿಂದ ಪಾಂಡವರನ್ನು ಸೇರುವಂತೆ ಅವನಿಗೆ ಪ್ರಚೋದನೆ 176

145. ಕುಂತಿಗೆ ಕರ್ಣನ ಉತ್ತರ. ಅರ್ಜುನನನ್ನು ಬಿಟ್ಟು ಬೇರೆ ಪಾಂಡವರನ್ನು ಕೊಲ್ಲುವುದಿಲ್ಲವೆಂದು ವಾಗ್ದಾನ 179

146. ಕೃಷ್ಣನಿಂದ ಉಪಪ್ಲಾವ್ಯನಗರದಲ್ಲಿ ಪಾಂಡವರನ್ನು ಕುರಿತು ಕೌರವ ಸಭೆಯಲ್ಲಿ ನಡೆದ ವೃತ್ತಾಂತಗಳ ಕಥನ 185

147. ಕೃಷ್ಣನಿಂದ ದ್ರೋಣರ, ವಿದುರನ ಮತ್ತು ಗಾಂಧಾರಿಯ ಮಾತುಗಳ ಅನುವಾದ 194

148. ಕೃಷ್ಣನಿಂದ ಧೃತರಾಷ್ಟ್ರನ ಮಾತುಗಳ ಅನುವಾದ 202

149. ಕೃಷ್ಣನಿಂದ ಸಭಾವೃತ್ತಾಂತ ಕಥನದ ಉಪಸಂಹಾರ 210

150. ಕೃಷ್ಣವಚನದಂತೆ ಧೃಷ್ಟದ್ಯುಮ್ನನನ್ನು ಪಾಂಡವರ ಸೇನಾಪತಿಯಾಗಿ ನಿರ್ಧರಿಸಿ, ಕುರುಕ್ಷೇತ್ರದಲ್ಲಿ ಸೇನಾನಿವೇಶ 215

151. ಕರ್ಣನನ್ನು ಮುಂದೆ ಮಾಡಿಕೊಂಡು ದುರ್ಯೋಧನನಿಂದ ಯುದ್ಧ ಸನ್ನಾಹ 233

152. ಕರ್ತವ್ಯಮೌಢ್ಯವನ್ನು ಹೊಂದಿದ ಯುಧಿಷ್ಠಿರನಿಗೆ ಕೃಷ್ಣಾರ್ಜುನರಿಂದ ಉದ್ಬೋಧನೆ 238

153. ದುರ್ಯೋಧನನ ಸೇನಾಸಿದ್ಧತೆ ಮತ್ತು ಸೇನಾನಾಯಕರ ಆಯ್ಕೆ 245

154. ದುರ್ಯೋಧನನ ಪ್ರಾರ್ಥನೆಯಂತೆ ಭೀಷ್ಮರು ಸೈನ್ಯಾಪತ್ಯವನ್ನು ಸ್ವೀಕರಿಸಿ, ಕುರುಕ್ಷೇತ್ರಕ್ಕೆ ಗಮನ 253

155. ಯುಧಿಷ್ಠಿರನಿಂದ ಧೃಷ್ಟದ್ಯುಮ್ನನನ್ನು ಸೇನಾಪತಿಯಾಗಿ ಶಾಸನ. ಬಲರಾಮನ ತೀರ್ಥಯಾತ್ರಾಗಮನ 261

156. ಅರ್ಜುನ ಮತ್ತು ದುರ್ಯೋಧನನಿಂದ ದರ್ಪಿಷ್ಠನಾದ ರುಗ್ಮರಥನ ಸಹಾಯದ ನಿರಾಕರಣೆ 268

157. ಸಂಜಯ-ಧೃತರಾಷ್ಟ್ರ ಸಂವಾದ 276

158. ದುರ್ಯೋಧನನಿಂದ ಉಲೂಕನ ಮೂಲಕ ಯುಧಿಷ್ಠಿರಾದಿಗಳಿಗೆ ಯುದ್ಧಸಂದೇಶ 280

159. ಪಾಂಡವರನ್ನು ಸಮೀಪಿಸಿ ಉಲೂಕನಿಂದ ಯುಧಿಷ್ಠಿರಾದಿಗಳಿಗೆ ದುರ್ಯೋಧನನ ಸಂದೇಶಹರಣ 299

160. ಕೃಷ್ಣ ಮತ್ತು ಪಾಂಡವರಿಂದ ದುರ್ಯೋಧನನಿಗೆ ಉಲೂಕನ ಮೂಲಕ ಪ್ರತಿಸಂದೇಶ 309

161. ಅರ್ಜುನನಿಂದ ಉಲೂಕನ ಮೂಲಕ ದುರ್ಯೋಧನನಿಗೆ ಪ್ರತಿಸಂದೇಶ ಕರ್ಣನಿಂದ ಯುದ್ಧಸನ್ನಾಹದ ಉದ್ಘೋಷಣೆ 321

162. ಸೇನಾ ಪ್ರಸ್ಥಾನ. ಧೃಷ್ಟದ್ಯುಮ್ನನಿಂದ ದ್ವಂದ್ವಯುದ್ಧದ ಸಮಾಯೋಜನೆ 333

163. ಭೀಷ್ಮರಿಂದ ದುರ್ಯೋಧನನ ಸಾಂತ್ವನ ಮತ್ತು ರಥಾತಿರಥರ ಗಣನೆ 337

164. ಭೀಷ್ಮರಿಂದ ದುರ್ಯೋಧನನ ಸೈನ್ಯದಲ್ಲಿ ಮುಂದುವರಿದ ರಥಾತಿರಥರ ಗಣನೆ 344

165. ಭೀಷ್ಮರಿಂದ ದುರ್ಯೋಧನನ ಸೈನ್ಯದಲ್ಲಿ ರಥಾತಿರಥರ ಗಣನೆಯ ಅನುವೃತ್ತಿ 349

166. ಭೀಷ್ಮರು ಕರ್ಣನನ್ನು ಅರ್ಧರಥ ಎಂದು ಎಣಿಸುತ್ತಿರಲು, ಕರ್ಣನ ಕೋಪ ಮತ್ತು ಭೀಷ್ಮರು ಇರುವವರೆಗೆ ತಾನು ಯುದ್ಧವನ್ನು ಮಾಡುವುದಿಲ್ಲವೆಂಬ ಪ್ರತಿಜ್ಞೆ 357

167. ದುರ್ಯೋಧನನಿಂದ ಭೀಷ್ಮರ ಸಾಂತ್ವನ. ಭೀಷ್ಮರಿಂದ ಪಾಂಡವರ ಪಕ್ಷದಲ್ಲಿ ರಥಾತಿರಥರ ಗಣನೆ 363

168. ಪಾಂಡವರ ಪಕ್ಷದಲ್ಲಿ ಭೀಷ್ಮರ ಮುಂದುವರೆದ ರಥಗಣನೆ 372

169. ಭೀಷ್ಮರಿಂದ ಮುಂದುವರೆದ ಪಾಂಡವರ ಸೈನ್ಯದ ರಥಾತಿರಥಗಣನೆ 376

170. ಮುಂದುವರಿದ ಭೀಷ್ಮರ ರಥಗಣನೆ ಮತ್ತು ಶಿಖಂಡಿಯ ಜೊತೆಯಲ್ಲಿ ಯುದ್ಧ ಮಾಡುವುದಿಲ್ಲವೆಂಬ ಪ್ರತಿಜ್ಞೆ 381

171. ಭೀಷ್ಮರಿಂದ ಕಾಶಿರಾಜನ ಸ್ವಯಂವರದಲ್ಲಿದ್ದ ಕನ್ಯೆಯರ ಹರಣ 387

172. ವಿವಾಹ ಸಮಯದಲ್ಲಿ ಅಂಬೆಯಿಂದ ತಾನು ಸಾಲ್ವಪೂರ್ವಳೆಂದು ಕಥನ 392

173. ಸಾಲ್ವನಿಂದ ತನ್ನ ಬಳಿಗೆ ಬಂದ ಅಂಬೆಯ ಪರಿತ್ಯಾಗ 395

174. ಭೀಷ್ಮರಿಗೆ ಪ್ರತೀಕಾರವನ್ನು ಮಾಡಲು ಅಂಬೆಯಿಂದ ತಾಪಸಾಶ್ರಮಗಳಿಗೆ ಹೋಗಿ ತನ್ನ ವೃತ್ತಾಂತದ ಕಥನ 400

175. ತಾಪಸರ ಆಶ್ರಮಕ್ಕೆ ಅಂಬೆಯ ಮಾತಾಮಹನಾದ ಹೋತ್ರವಾಹನನ ಆಗಮನ ಮತ್ತು ಪರಶುರಾಮರಿಗೆ ಶರಣಾಗತಳಾಗುವಂತೆ ಪ್ರೇರಣೆ 405

176. ಹೋತ್ರವಾಹನನಿಂದ ಅಕೃತವ್ರಣನಿಗೆ ತನ್ನ ಮೊಮ್ಮಗಳ ವೃತ್ತಾಂತ ಕಥನ 411

177. ಅಕೃತವ್ರಣನಿಂದ ಭೀಷ್ಮರಿಗೆ ಪ್ರತಿಕಾರ ಮಾಡುವಂತೆ ನಿರ್ಧಾರ. ಭೀಷ್ಮರನ್ನು ಕೊಲ್ಲುವಂತೆ ಪರಶುರಾಮರಿಗೆ ಅಂಬೆಯ ಪ್ರಾರ್ಥನೆ 417

178. ಪರಶುರಾಮರಿಂದ ಅಂಬೆಯನ್ನು ಕರೆದುಕೊಂಡು ಕುರುಕ್ಷೇತ್ರಕ್ಕೆ ಗಮನ 427

179. ಭೀಷ್ಮರಿಂದ ಪರಶುರಾಮರಿಗೆ ಯುದ್ಧಾಹ್ವಾನ 432

180. ತಾಯಿಯ ಆಶೀರ್ವಾದವನ್ನು ಪಡೆದು ಭೀಷ್ಮರ ಕುರುಕ್ಷೇತ್ರಗಮನ. ಯುದ್ಧವನ್ನು ಮಾಡದಂತೆ ಪರಶುರಾಮರಿಗೆ ಮತ್ತು ಭೀಷ್ಮರಿಗೆ ಗಂಗೆಯ ಒತ್ತಾಯ 441

181. ಭೀಷ್ಮ-ಪರಶುರಾಮರ ಯುದ್ಧದ ವರ್ಣನೆ 447

182. ಪರಶುರಾಮ ಮತ್ತು ಭೀಷ್ಮರ ಯುದ್ಧದ ವರ್ಣನೆ 455

183. ಪರಶುರಾಮ ಮತ್ತು ಭೀಷ್ಮರ ಯುದ್ಧದ ವರ್ಣನೆ 463

184. ಪರಶುರಾಮರ ಪ್ರಹಾರದಿಂದ ಭೀಷ್ಮರ ಪಾತ. ಋಷಿಗಳಿಂದ ಅವರ ಸಮಾಶ್ವಾಸನೆ. ಯುದ್ಧವನ್ನು ನಿಲ್ಲಿಸುವಂತೆ ಪರಶುರಾಮರಿಗೆ ಪ್ರಾರ್ಥನೆ 468

185. ದಿವ್ಯಪುರುಷರಿಂದ ಭೀಷ್ಮರಿಗೆ ಸ್ವಪ್ನದಲ್ಲಿ ಸ್ವಾಪನಾಸ್ತ್ರದ ಸ್ಮಾರಣ 474

186. ಪರಶುರಾಮ ಮತ್ತು ಭೀಷ್ಮರ ಯುದ್ಧ. ಭೀಷ್ಮರಿಗೆ ಸ್ವಾಪನಾಸ್ತ್ರದ ಸ್ಮರಣೆ 478

187. ನಾರದರ ವಚನದಂತೆ ಪ್ರಸ್ವಾಪಾಸ್ತ್ರವನ್ನು ಪ್ರಯೋಗಿಸದೆ ಯುದ್ಧ ವಿರಾಮ. ಪರಶುರಾಮರಿಂದ ತಮ್ಮ ಪರಾಭವದ ಅಂಗೀಕಾರ 483

188. ಪರಶುರಾಮರ ಅಪ್ಪಣೆಯನ್ನು ಪಡೆದು ಹೊರಟ ಅಂಬೆಯಿಂದ ಪುಣ್ಯಾಶ್ರಮಗಳಲ್ಲಿ ದುಶ್ಚರ ತಪಾಚರಣ 491

189. ರುದ್ರದೇವರಿಂದ ಅಂಬೆಗೆ, ಜನ್ಮಾಂತರದಲ್ಲಿ ಪುಂಸ್ತ್ವಪ್ರಾಪ್ತಿರೂಪವಾದ ವರದಾನ ಮತ್ತು ಅಂಬೆಯ ಅಗ್ನಿಪ್ರವೇಶ 500

190. ದ್ರುಪದನಿಗೆ ರುದ್ರದೇವರಿಂದ ವರಪ್ರದಾನ. ಸ್ತ್ರೀಶಿಶುವಿನ ಜನನ. ಸ್ತ್ರೀತ್ವವನ್ನು ಮುಚ್ಚಿಟ್ಟು ಶಿಖಂಡಿ ಎಂದು ನಾಮಕರಣ 504

191. ದ್ರೋಣರಿಂದ ಶಿಖಂಡಿಯ ಧನುರ್ವಿದ್ಯಾ ಪ್ರಾಪ್ತಿ. ವಿವಾಹ ಮತ್ತು ದಶಾರ್ಣಾಧಿಪತಿಯ ಕ್ರೋಧ 508

192. ದಾಶಾರ್ಣನಿಂದ ಪುನಃ ದೂತಪ್ರೇಷಣ. ದ್ರುಪದನಿಂದ ಪತ್ನಿಯ ಜೊತೆಯಲ್ಲಿ ಕರ್ತವ್ಯಸಮಾಲೋಚನೆ 513

193. ಶಿಖಂಡಿಯಿಂದ ವನಕ್ಕೆ ಹೋಗಿ ಸ್ಥೂಣಾಕರ್ಣನಲ್ಲಿ ಪುಂಸ್ತ್ವವರಣ 518

194. ಶಿಖಂಡಿಯ ಪುಂಸ್ತ್ವ ಪ್ರಾಪ್ತಿ 524

195. ದುರ್ಯೋಧನನಿಂದ ಭೀಷ್ಮಾದಿಗಳು ವಿಜಯಕ್ಕಾಗಿ ಅಪೇಕ್ಷಿಸಿದ ಕಾಲದ ಪ್ರಶ್ನೆ. ಅವರ ಉತ್ತರ 539

196. ಯುಧಿಷ್ಠಿರನ ಮುಂದೆ ಅರ್ಜುನನಿಂದ ತನ್ನ ಸಾಮರ್ಥ್ಯದ ಕಥನ 544

197. ದುರ್ಯೋಧನನಿಂದ ಮೂರುಭಾಗವನ್ನಾಗಿ ಮಾಡಿ ಸೇನೆಯ ಪ್ರಸ್ಥಾನ. ಎಲ್ಲರ ಶಿಬಿರ ಪ್ರವೇಶ 548

198. ಯುಧಿಷ್ಠಿರನಿಂದಲೂ ಸೈನ್ಯವನ್ನು ಮೂರುಭಾಗವಾಗಿ ಮಾಡಿ ಕುರುಕ್ಷೇತ್ರಕ್ಕೆ ಪ್ರಸ್ಥಾನ 552

★ ★ ★ ★ ★

ಮಹಾಭಾರತ

ಉದ್ಯೋಗಪರ್ವ

ನೂರ ಇಪ್ಪತ್ಮೂರನೆಯ ಅಧ್ಯಾಯ

ಕೃಷ್ಣನಿಂದ ಧೃತರಾಷ್ಟ್ರನ ಪ್ರಾರ್ಥನೆಯಂತೆ ದುರ್ಯೋಧನನ ಅನುನಯ.

ಧೃತರಾಷ್ಟ್ರಃ

ಭಗವನ್ನೇವಮೇವೈತದ್ ಯಥಾ ವದಸಿ ನಾರದ ।
ಇಚ್ಛಾಮಿ ಚಾಹಮಪ್ಯೇವಂ ನ ತ್ವೀಶೋ ಭಗವನ್ನಹಮ್ ॥೧॥

ಧೃತರಾಷ್ಟ್ರ- ಪೂಜ್ಯರಾದ ನಾರದರೇ, ನೀವು ಹೇಳಿದಂತೆಯೇ ಎಲ್ಲವೂ ಸರಿ. ನಾನೂ ಹಾಗೆಯೇ ಆಶಿಸುತ್ತೇನೆ. ಆದರೆ ಪೂಜ್ಯರೇ, ನಾನು ಸ್ವತಂತ್ರನಲ್ಲ.

ವೈಶಂಪಾಯನಃ

ಏವಮುಕ್ತ್ವಾ ತತಃ ಕೃಷ್ಣಮಭ್ಯಭಾಷತ ಭಾರತ ॥೨॥

ಸ್ವರ್ಗ್ಯಂ ಲೋಕ್ಯಂ ಚ ಮಾಮಾತ್ಥ ಧರ್ಮ್ಯಂ ನ್ಯಾಯ್ಯಂ ಚ ಮಾಧವ ।
ನ ತ್ವಹಂ ಸ್ವವಶಸ್ತಾತ ಕ್ರಿಯಮಾಣಂ ನ ಮೇ ಪ್ರಿಯಮ್ ॥೩॥

191. ದ್ರೋಣರಿಂದ ಶಿಖಂಡಿಯ ಧನುರ್ವಿದ್ಯಾ ಪ್ರಾಪ್ತಿ. ವಿವಾಹ ಮತ್ತು ದಶಾರ್ಣಾಧಿಪತಿಯ ಕ್ರೋಧ 508

192. ದಾಶಾರ್ಣನಿಂದ ಪುನಃ ದೂತಪ್ರೇಷಣ. ದ್ರುಪದನಿಂದ ಪತ್ನಿಯ ಜೊತೆಯಲ್ಲಿ ಕರ್ತವ್ಯಸಮಾಲೋಚನೆ 513

193. ಶಿಖಂಡಿಯಿಂದ ವನಕ್ಕೆ ಹೋಗಿ ಸ್ಥೂಣಾಕರ್ಣನಲ್ಲಿ ಪುಂಸ್ತ್ವವರಣ 518

194. ಶಿಖಂಡಿಯ ಪುಂಸ್ತ್ವ ಪ್ರಾಪ್ತಿ 524

195. ದುರ್ಯೋಧನನಿಂದ ಭೀಷ್ಮಾದಿಗಳು ವಿಜಯಕ್ಕಾಗಿ ಅಪೇಕ್ಷಿಸಿದ ಕಾಲದ ಪ್ರಶ್ನೆ. ಅವರ ಉತ್ತರ 539

196. ಯುಧಿಷ್ಠಿರನ ಮುಂದೆ ಅರ್ಜುನನಿಂದ ತನ್ನ ಸಾಮರ್ಥ್ಯದ ಕಥನ 544

197. ದುರ್ಯೋಧನನಿಂದ ಮೂರುಭಾಗವನ್ನಾಗಿ ಮಾಡಿ ಸೇನೆಯ ಪ್ರಸ್ಥಾನ. ಎಲ್ಲರ ಶಿಬಿರ ಪ್ರವೇಶ 548

198. ಯುಧಿಷ್ಠಿರನಿಂದಲೂ ಸೈನ್ಯವನ್ನು ಮೂರುಭಾಗವಾಗಿ ಮಾಡಿ ಕುರುಕ್ಷೇತ್ರಕ್ಕೆ ಪ್ರಸ್ಥಾನ 552

★ ★ ★ ★ ★

ಮಹಾಭಾರತ

ಉದ್ಯೋಗಪರ್ವ

ನೂರ ಇಪ್ಪತ್ಮೂರನೆಯ ಅಧ್ಯಾಯ

ಕೃಷ್ಣನಿಂದ ಧೃತರಾಷ್ಟ್ರನ ಪ್ರಾರ್ಥನೆಯಂತೆ ದುರ್ಯೋಧನನ ಅನುನಯ.

ಧೃತರಾಷ್ಟ್ರಃ

ಭಗವನ್ನೇವಮೇವೈತದ್ ಯಥಾ ವದಸಿ ನಾರದ ।
ಇಚ್ಛಾಮಿ ಚಾಹಮಪ್ಯೇವಂ ನ ತ್ವೀಶೋ ಭಗವನ್ನಹಮ್ ॥೧॥

ಧೃತರಾಷ್ಟ್ರ- ಪೂಜ್ಯರಾದ ನಾರದರೇ, ನೀವು ಹೇಳಿದಂತೆಯೇ ಎಲ್ಲವೂ ಸರಿ. ನಾನೂ ಹಾಗೆಯೇ ಆಶಿಸುತ್ತೇನೆ. ಆದರೆ ಪೂಜ್ಯರೇ, ನಾನು ಸ್ವತಂತ್ರನಲ್ಲ.

ವೈಶಂಪಾಯನಃ

ಏವಮುಕ್ತ್ವಾ ತತಃ ಕೃಷ್ಣಮಭ್ಯಭಾಷತ ಭಾರತ ॥೨॥

ಸ್ವರ್ಗ್ಯಂ ಲೋಕ್ಯಂ ಚ ಮಾಮಾತ್ಥ ಧರ್ಮ್ಯಂ ನ್ಯಾಯ್ಯಂ ಚ ಮಾಧವ ।
ನ ತ್ವಹಂ ಸ್ವವಶಸ್ತಾತ ಕ್ರಿಯಮಾಣಂ ನ ಮೇ ಪ್ರಿಯಮ್ ॥೩॥

ವೈಶಂಪಾಯನ– ಎಲೈ ಭಾರತನೇ, ಹೀಗೆ ಹೇಳಿ ಅನಂತರ ಧೃತರಾಷ್ಟ್ರನು ಕೃಷ್ಣನನ್ನು ಕುರಿತು ಮಾಧವನೇ, ನೀನು ಧರ್ಮದಿಂದ ಮತ್ತು ನ್ಯಾಯದಿಂದ ಕೂಡಿದ ಇಹಲೋಕ ಮತ್ತು ಸ್ವರ್ಗಲೋಕಕ್ಕೆ ಸಾಧನವಾದ ಮಾತುಗಳನ್ನು ನನ್ನನ್ನು ಕುರಿತು ಆಡಿದ್ದೀಯೆ. ಪ್ರೀತಿಪಾತ್ರನೇ, ಆದರೆ ನಾನು ಸ್ವತಂತ್ರನಲ್ಲ, ನನ್ನ ಪುತ್ರರು ಮಾಡುತ್ತಿರುವ ಕಾರ್ಯವು ನನಗೆ ಇಷ್ಟವಲ್ಲ.

ನ ಮಂಸ್ಯತೇ ದುರಾತ್ಮಾನಃ ಪುತ್ರಾ ಮಮ ಜನಾರ್ದನ ॥೪॥

ಅಂಗ ದುರ್ಯೋಧನಂ ಕೃಷ್ಣ ಮಂದಂ ಶಾಸ್ತ್ರಾತಿಗಂ ಮಮ ।
ಅನುನೇತುಂ ಮಹಾಬಾಹೋ ಯತಸ್ವ ಪುರುಷೋತ್ತಮ ॥೫॥

ಎಲೈ ಜನಾರ್ದನನೇ, ದುರಾತ್ಮರಾದ ನನ್ನ ಮಕ್ಕಳು ಇದನ್ನು ತಿಳಿಯುವುದಿಲ್ಲ. ಪ್ರೀತಿಪಾತ್ರನಾದ ಕೃಷ್ಣನೇ, ಮಹಾಬಾಹುವೇ, ಪುರುಷೋತ್ತಮನೇ, ಶಾಸ್ತ್ರವನ್ನು ಮೀರಿದ ಮಂದನಾದ ನನ್ನ ಪುತ್ರನಾದ ದುರ್ಯೋಧನನನ್ನು ಸರಿಯಾದ ಮಾರ್ಗಕ್ಕೆ ತರಲು ಪ್ರಯತ್ನಿಸು.

ನ ಶೃಣೋತಿ ಮಹಾಬಾಹೋ ವಚನಂ ಸಾಧುಭಾಷಿತಮ್ ॥೬॥

ಗಾಂಧಾರ್ಯಾಶ್ಚ ಹೃಷೀಕೇಶ ವಿದುರಸ್ಯ ಚ ಧೀಮತಃ ।
ಅನ್ಯೇಷಾಂ ಚೈವ ಸುಹೃದಾಂ ಭೀಷ್ಮಾದೀನಾಂ ಹಿತೈಷಿಣಾಮ್ ॥೭॥

ಎಲೈ ಮಹಾಬಾಹುವೇ, ಹೃಷೀಕೇಶನೇ, ಗಾಂಧಾರಿಯ, ಮೇಧಾವಿಯಾದ ವಿದುರನ, ಉಳಿದ ಹಿತೈಷಿಗಳಾದ ಭೀಷ್ಮಾದಿ ಸಜ್ಜನರ ಒಳ್ಳೆಯ ಮಾತುಗಳನ್ನು ಅವನು ಕೇಳುತ್ತಿಲ್ಲ.

ಸ ತ್ವಂ ಪಾಪಮತಿಂ ಕ್ರೂರಂ ಸ್ವಯಂ ದುರ್ಯೋಧನಂ ನೃಪಮ್ ।
ಅನುಶಾಧಿ ದುರಾತ್ಮಾನಂ ಸ್ವಯಂ ದುರ್ಯೋಧನಂ ನೃಪಮ್ ॥೮॥

ಸುಹೃತ್ಕಾರ್ಯಂ ತು ಸುಮಹತ್ ಕೃತಂ ತೇ ಸ್ಯಾಜ್ಜನಾರ್ದನ ॥೯॥

ನೀನು ಕ್ರೂರನೂ, ಜ್ಞಾನರಹಿತನೂ, ಪಾಪಬುದ್ಧಿಯುಳ್ಳವನೂ, ದುರಾತ್ಮನೂ ಆದ ದುರ್ಯೋಧನನನ್ನು ಸ್ವತಃ ಶಾಸನ ಮಾಡುವವನಾಗು. ಜನಾರ್ದನನೇ, ಹಾಗೆ ಮಾಡಿದರೆ ನೀನು ದೊಡ್ಡ ಬಂಧುಕಾರ್ಯವನ್ನು ಮಾಡಿದಂತಾಗುತ್ತದೆ.

ವೈಶಂಪಾಯನಃ

ತತೋ ವ್ಯಾವೃತ್ಯ ವಾಷ್ಣೇಯೋ ದುರ್ಯೋಧನಮಮರ್ಷಣಮ್ ।
ಅಬ್ರವೀನ್ಮಧುರಾಂ ವಾಚಂ ಸೂಕ್ಷ್ಮಧರ್ಮಾರ್ಥತತ್ತ್ವವಿತ್ ॥೧೦॥

ಆಗ ಸೂಕ್ಷ್ಮಧರ್ಮಾರ್ಥಗಳನ್ನು ತಿಳಿದ ವಾಷ್ಣೇಯನಾದ ಕೃಷ್ಣನು ರೋಷಶೀಲನಾದ ದುರ್ಯೋಧನನ ಕಡೆಗೆ ತಿರುಗಿ ಮಧುರವಾದ ಮಾತುಗಳನ್ನು ಆಡಿದನು.

ದುರ್ಯೋಧನ ನಿಬೋಧೇದಂ ಮದ್ವಾಕ್ಯಂ ಕುರುಸತ್ತಮ ।
ಸಮರ್ಥಂ ತೇ ವಿಶೇಷೇಣ ಸಾನುಬಂಧಸ್ಯ ಭಾರತ ॥೧೧॥

ಎಲೈ ಕುರುಶ್ರೇಷ್ಠನಾದ ದುರ್ಯೋಧನನೇ, ಭಾರತನೇ, ನಿನಗೆ ಮತ್ತು ನಿನ್ನ ಪರಿವಾರಕ್ಕೆ ವಿಶೇಷವಾಗಿ ಯೋಗ್ಯವಾದ ಈ ಮಾತುಗಳನ್ನು ಕೇಳು.

ಮಹಾಪ್ರಾಜ್ಞಕುಲೇ ಜಾತಃ ಸಾಧ್ವೇತತ್ ಕರ್ತುಮರ್ಹಸಿ ।
ಶ್ರುತವೃತ್ತೋಪಸಂಪನ್ನಃ ಸರ್ವೈಃ ಸಮುದಿತೋ ಗುಣೈಃ ॥೧೨॥

ಮಹಾಪ್ರಾಜ್ಞರ ಕುಲದಲ್ಲಿ ಜನಿಸಿ, ವಿದ್ಯೆ ಮತ್ತು ನಡತೆಗಳಿಂದ ಸಂಪನ್ನನಾಗಿ ಸರ್ವಗುಣಗಳಿಂದಲೂ ಕೂಡಿರುವ ನೀನು ನಾನು ಹೇಳುವ ಕಾರ್ಯವನ್ನು ಮಾಡುವುದು ಉಚಿತವಾಗುತ್ತದೆ.

ದೌಷ್ಕುಲೇಯಾ ದುರಾತ್ಮಾನೋ ನೃಶಂಸಾ ನಿರಪತ್ರಪಾಃ ।
ತ ಏತದೀದೃಶಂ ಕುರ್ಯುರ್ಯಥಾ ತ್ವಂ ತಾತ ವರ್ತಸೇ ॥೧೩॥

ಎಲೈ ಪ್ರೀತಿಪಾತ್ರನೇ, ದುಷ್ಕುಲಗಳಲ್ಲಿ ಜನಿಸಿದವರೂ, ದುರಾತ್ಮರೂ, ಕ್ರೂರಿಗಳೂ, ಲಜ್ಜೆಗೆಟ್ಟವರೂ ನೀನು ಮಾಡುತ್ತಿರುವಂತಹ ಇಂತಹ ಕರ್ಮಗಳನ್ನು ಮಾಡುತ್ತಾರೆ.

ಧರ್ಮಾರ್ಥಯುಕ್ತಾ ಲೋಕೇಽಸ್ಮಿನ್ ಪ್ರವೃತ್ತಿರ್ಲಕ್ಷ್ಯತೇ ಸತಾಮ್ ।
ಅಸತಾಂ ವಿಪರೀತಾ ತು ಲಕ್ಷ್ಯತೇ ಭರತರ್ಷಭ ॥೧೪॥

ವಿಪರೀತಾ ತ್ವಿಯಂ ವೃತ್ತಿರಸಕೃಲ್ಲಕ್ಷ್ಯತೇ ತ್ವಯಿ ॥೧೫॥

ಈ ಲೋಕದಲ್ಲಿ ಸಜ್ಜನರಲ್ಲಿ ಧರ್ಮಾರ್ಥಯುಕ್ತವಾದ ಪ್ರವೃತ್ತಿಯು ಕಂಡುಬರುತ್ತದೆ. ಎಲೈ ಭರತರ್ಷಭನೇ, ಅಸಜ್ಜನರಲ್ಲಿ ಇದಕ್ಕೆ ವಿರುದ್ಧವಾದ ಪ್ರವೃತ್ತಿಯು ಕಂಡುಬರುತ್ತದೆ. ಈ ವಿರುದ್ಧವಾದ ಪ್ರವೃತ್ತಿಯು ನಿನ್ನಲ್ಲಿ ಅನೇಕ ಬಾರಿ ಕಂಡುಬಂದಿದೆ.

ಅನರ್ಥಶ್ಚಾನುಬಂಧೋಽತ್ರ ಘೋರಃ ಪ್ರಾಣಹರೋ ಮಹಾನ್ ।
ಅನೇಕಶಸ್ತ್ವನ್ನಿಮಿತ್ತಮಯಶಸ್ಯಂ ಚ ಭಾರತ ॥೧೬॥

ಎಲೈ ಭಾರತನೇ, ಈ ಪ್ರವೃತ್ತಿಯ ಫಲವೆಂದರೆ ಘೋರವಾದ, ಪ್ರಾಣಹರವಾದ ದೊಡ್ಡ ಅನರ್ಥ. ಎಲೈಭಾರತನೇ, ಅನೇಕ ರೂಪವಾದ ಈ ಅನರ್ಥವು ಅಕೀರ್ತಿಕರವಾದುದು.

ತಮನರ್ಥಂ ಪರಿಹರನ್ನಾತ್ಮಶ್ರೇಯಃ ಕರಿಷ್ಯಸಿ ।
ಭ್ರಾತೄಣಾಮಥ ಭೃತ್ಯಾನಾಂ ಮಿತ್ರಾಣಾಂ ಚ ಪರಂತಪ ॥೧೭॥

ಅಧರ್ಮ್ಯಾದಯಶಸ್ಯಾಚ್ಚ ಕರ್ಮಣಸ್ತ್ವಂ ಪ್ರಮೋಕ್ಷ್ಯಸೇ ॥೧೮॥

ಎಲೈ ಪರಂತಪನೇ, ಅಂತಹ ಅನರ್ಥವನ್ನು ಪರಿಹರಿಸಿ ನಿನಗೂ, ನಿನ್ನ ಸಹೋದರರಿಗೂ, ಭೃತ್ಯರಿಗೂ ಮತ್ತು ಮಿತ್ರರಿಗೂ ಶ್ರೇಯಸ್ಸನ್ನು ಉಂಟುಮಾಡುವಿ (ನಾನು ಹೇಳಿದಂತೆ ಕೇಳಿದರೆ ಅಧರ್ಮಯುಕ್ತವಾದ, ಅಕೀರ್ತಿಕರವಾದ ಕರ್ಮದಿಂದ ನೀನು ಬಿಡುಗಡೆಯನ್ನು ಹೊಂದುವಿ).

ಪ್ರಾಜ್ಞೈಃ ಶೂರೈರ್ಮಹೋತ್ಸಾಹೈರಾತ್ಮವಿದ್ಭಿರ್ಬಹುಶ್ರುತೈಃ ।
ಸಂಧತ್ಸ್ವ ಪುರುಷವ್ಯಾಘ್ರ ಪಾಂಡವೈರ್ಭರತರ್ಷಭ ॥೧೯॥

ಎಲೈ ಪುರುಷವ್ಯಾಘ್ರನೇ, ಭರತರ್ಷಭನೇ, ಪ್ರಾಜ್ಞರೂ, ಶೂರರೂ, ಮಹೋತ್ಸಾಹ ಉಳ್ಳವರೂ, ಆತ್ಮಜ್ಞಾನವನ್ನು ಹೊಂದಿದವರೂ, ಬಹುವಿದ್ಯಾಸಂಪನ್ನರೂ ಆದ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ.

ತದ್ಧಿತಂ ಚ ಪ್ರಿಯಂ ಚೈವ ಧೃತರಾಷ್ಟ್ರಸ್ಯ ಧೀಮತಃ ।
ಪಿತಾಮಹಸ್ಯ ದ್ರೋಣಸ್ಯ ವಿದುರಸ್ಯ ಮಹಾಮತೇಃ ॥೨೦॥

ಕೃಪಸ್ಯ ಸೋಮದತ್ತಸ್ಯ ಬಾಹ್ಲೀಕಸ್ಯ ಚ ಧೀಮತಃ ।
ಅಶ್ವತ್ಥಾಮ್ನೋ ವಿಕರ್ಣಸ್ಯ ಸಂಜಯಸ್ಯ ವಿವಿಂಶತೇಃ ॥೨೧॥

ಜ್ಞಾತೀನಾಂ ಚೈವ ಭೂಯಿಷ್ಠಂ ಮಿತ್ರಾಣಾಂ ಚ ಪರಂತಪ ।
ಶಮೇ ಶರ್ಮ ಭವೇತ್ ತಾತ ಸರ್ವಸ್ಯ ಜಗತಸ್ತಥಾ ॥೨೨॥

ಅದು ಮೇಧಾವಿಯಾದ ಧೃತರಾಷ್ಟ್ರನಿಗೆ ಹಿತವೂ, ಪ್ರಿಯವೂ ಆಗುತ್ತದೆ. ಪಿತಾಮಹರಾದ ಭೀಷ್ಮರಿಗೂ, ದ್ರೋಣರಿಗೂ, ಮಹಾಮತಿಯಾದ ವಿದುರನಿಗೂ, ಕೃಪರಿಗೂ, ಸೋಮದತ್ತನಿಗೂ, ಮೇಧಾವಿಯಾದ ಬಾಹ್ಲೀಕನಿಗೂ, ಅಶ್ವತ್ಥಾಮನಿಗೂ, ವಿಕರ್ಣನಿಗೂ, ಸಂಜಯನಿಗೂ, ವಿವಿಂಶತಿಗೂ, ದಾಯಾದಿಗಳಿಗೂ ಮತ್ತು ಮಿತ್ರರಿಗೂ ಬಹಳವಾಗಿ ಹಿತವೂ ಪ್ರಿಯವೂ ಆಗುತ್ತದೆ. ಎಲೈ ಪರಂತಪನೇ, ಪ್ರೀತಿಪಾತ್ರನೇ, ಸಂಧಿಯನ್ನು ಮಾಡಿಕೊಂಡರೆ ಎಲ್ಲ ಜಗತ್ತಿಗೂ ಸುಖವುಂಟಾಗುತ್ತದೆ.

ಹ್ರೀಮಾನಸಿ ಕುಲೇ ಜಾತಃ ಶ್ರುತವಾನಾನೃಶಂಸ್ಯವಾನ್ ।
ತಿಷ್ಠ ತಾತ ಪಿತುಃ ಶಾಸ್ತ್ರೇ ಮಾತುಶ್ಚ ಭರತರ್ಷಭ ॥೨೩॥

ನೀನು ಒಳ್ಳೆಯ ಕುಲದಲ್ಲಿ ಜನಿಸಿ ನಾಚಿಕೆಯ ಪ್ರಜ್ಞೆಯನ್ನು ಹೊಂದಿದ್ದೀಯೆ. ವಿದ್ಯಾಭ್ಯಾಸವನ್ನು ಮಾಡಿ ದಯಾಪರನಾಗಿದ್ದೀಯೆ. ಎಲೈ ಭರತರ್ಷಭನೇ, ತಂದೆಯ ಮತ್ತು ತಾಯಿಯ ಶಾಸನದಲ್ಲಿ ಇರುವವನಾಗು.

ಏತಚ್ಛ್ರೇಯೋ ಹಿ ತನ್ಮನ್ಯೇ ಪಿತಾ ಯಚ್ಚಾಸ್ತಿ ಭಾರತ ।
ಉಕ್ತಮಾಪದ್ಗತಃ ಪೂರ್ವಂ ಪಿತುಃ ಸ್ಮರಸಿ ಶಾಸನಮ್ ॥೨೪॥

ಎಲೈ ಭಾರತನೇ, ನಿನ್ನ ತಂದೆಯು ಏನು ಶಾಸನವನ್ನು ಮಾಡುತ್ತಿದ್ದಾನೆಯೋ ಅದು ನಿನಗೆ ಶ್ರೇಯಸ್ಕರವೆಂದು ನಾನು ತಿಳಿದಿದ್ದೇನೆ. ಇಲ್ಲದಿದ್ದರೆ ನೀನು ಆಪತ್ತಿಗೆ ಸಿಲುಕಿ ಹಿಂದೆ ತಂದೆಯು ಹೇಳುತ್ತಿದ್ದ ಶಾಸನವನ್ನು ಸ್ಮರಿಸುತ್ತೀಯೆ.

ರೋಚತೇ ತೇ ಪಿತುಸ್ತಾತ ಪಾಂಡವೈಃ ಸಹ ಸಂಗಮಃ ।
ಸಾಮಾತ್ಯಸ್ಯ ಕುರುಶ್ರೇಷ್ಠ ತತ್ ತುಭ್ಯಂ ತಾತ ರೋಚತಾಮ್ ॥೨೫॥

ಎಲೈ ಕುರುಶ್ರೇಷ್ಠನೇ, ಅಮಾತ್ಯರಿಂದ ಕೂಡಿದ ನಿನ್ನ ತಂದೆಗೆ ಪಾಂಡವರ ಜೊತೆಯಲ್ಲಿ ಸಂಧಿಯು ಇಷ್ಟವಾಗುತ್ತದೆ. ಪ್ರೀತಿಪಾತ್ರನೇ, ಅದು ನಿನಗೂ ಇಷ್ಟವಾಗಲಿ.

ಶ್ರುತ್ವಾ ಯಃ ಸುಹೃದಾಂ ಶಾಸ್ತ್ರಂ ಮತ್ಯೋ೯ ನ ಪ್ರತಿಪದ್ಯತೇ ।
ವಿಪಾಕಾಂತೇ ದಹತ್ಯೇನಂ ಕಿಂಪಾಕಮಿವ ಭಕ್ಷಿತಮ್ ॥೨೬॥

ಯಾವನು ಸುಹೃಜ್ಜನರ ಶಾಸನವನ್ನು ಕೇಳಿ ಅದರಂತೆ ನಡೆದುಕೊಳ್ಳುವುದಿಲ್ಲವೋ ಅಂತಹವನಿಗೆ ತನ್ನ ನಡತೆಯಿಂದ ಉಂಟಾಗುವ ವಿರುದ್ಧ ಪರಿಣಾಮವು ಭಕ್ಷಣೆ ಮಾಡಿದ ತೊಂಡೆ ಹಣ್ಣಿನಂತೆ ಅವನನ್ನು ಸುಡುತ್ತದೆ.

ಯಸ್ತು ನಿಶ್ರೇಯಸಂ ವಾಕ್ಯಂ ಮೋಹಾನ್ನ ಪ್ರತಿಪದ್ಯತೇ ।
ಸ ದೀರ್ಘಸೂತ್ರೋ ಹೀನಾರ್ಥಃ ಪಶ್ಚಾತ್ ತಾಪೇನ ಯುಜ್ಯತೇ ॥೨೭॥

ಯಾವನು ಶ್ರೇಯಸ್ಕರವಾದ ವಾಕ್ಯಗಳನ್ನು ಮೋಹದಿಂದ ಅನುಸರಿಸುವುದಿಲ್ಲವೋ ಅವನು ದೀರ್ಘದ್ವೇಷಿಯಾಗಿ ತನ್ನ ಎಲ್ಲವನ್ನೂ ಕಳೆದುಕೊಂಡು ಪಶ್ಚಾತ್ತಾಪವನ್ನು ಹೊಂದುತ್ತಾನೆ.

ಯಸ್ತು ನಿಶ್ರೇಯಸಂ ಶ್ರುತ್ವಾऽಪಾಪಮೇವಾಭಿಪದ್ಯತೇ ।
ಆತ್ಮನೋ ಮತಮುತ್ಸೃಜ್ಯ ಸ ಲೋಕೇ ಸುಖಮೇಧತೇ ॥೨೮॥

ಯಾವನು ಶ್ರೇಯಸ್ಕರವಾದ ವಾಕ್ಯಗಳನ್ನು ಕೇಳಿ, ತನ್ನ ಸ್ವಂತ ಅಭಿಪ್ರಾಯವನ್ನು ಬಿಟ್ಟು, ಪಾಪವಲ್ಲದ ಮಾರ್ಗವನ್ನೇ ಅನುಸರಿಸುತ್ತಾನೆಯೋ ಅವನು ಲೋಕದಲ್ಲಿ ಸುಖವನ್ನು ಹೊಂದುತ್ತಾನೆ.

ಯೋऽರ್ಥಕಾಮಸ್ಯ ವಚನಂ ಪ್ರಾತಿಕೂಲ್ಯಾನ್ನ ಮೃಷ್ಯತೇ ।
ಶೃಣೋತಿ ಪ್ರತಿಕೂಲಾನಿ ದ್ವಿಷತಾಂ ವಶಮೇತಿ ಸಃ ॥೨೯॥

ಯಾವನು ತನ್ನ ಹಿತವನ್ನು ಬಯಸುವವರ ಮಾತುಗಳು ತನಗೆ ಅನುಕೂಲವಾಗಿಲ್ಲ ಎಂಬ ಕಾರಣದಿಂದ ಅವುಗಳನ್ನು ಸಹಿಸುವುದಿಲ್ಲವೋ ಅವನು ಶತ್ರುಗಳಿಗೆ ವಶನಾಗಿ ಅವರ ಪ್ರತಿಕೂಲ ವಚನಗಳನ್ನು ಕೇಳುತ್ತಾನೆ.

ಸತಾಂ ಮತಮತಿಕ್ರಮ್ಯ ಯೋಽಸತಾಂ ವರ್ತತೇ ಮತೇ ।
ಶೋಚಂತೇ ವ್ಯಸನೇ ತಸ್ಯ ಸುಹೃದೋ ನಚಿರಾದಿವ ॥೩೦॥

ಯಾವನು ಸಜ್ಜನರ ಅಭಿಪ್ರಾಯವನ್ನು ಮೀರಿ ಅಸಜ್ಜನರ ಅಭಿಪ್ರಾಯದಂತೆ ನಡೆದುಕೊಳ್ಳುತ್ತಾನೆಯೋ ಅವನ ಹಿತೈಷಿಗಳು ಶೀಘ್ರದಲ್ಲಿ ಒದಗಲಿರುವ ಅವನ ವ್ಯಸನಕಾಲದಲ್ಲಿ ಶೋಕಪಡುತ್ತಾರೆ.

ಮುಖ್ಯಾನಮಾತ್ಯಾನುತ್ಸೃಜ್ಯ ಯೋ ನಿಹೀನಾನ್ ನಿಷೇವತೇ ।
ಸ ಘೋರಮಾಪದಂ ಪ್ರಾಪ್ಯ ನೋತ್ತಾರಮಧಿಗಚ್ಛತಿ ॥೩೧॥

ಯಾವನು ತನ್ನ ಶ್ರೇಷ್ಠರಾದ ಅಮಾತ್ಯರನ್ನು ಬಿಟ್ಟು ನೀಚರಾದವರನ್ನು ಸೇವಿಸುತ್ತಾನೆಯೋ ಅವನು ಘೋರವಾದ ಆಪತ್ತನ್ನು ಹೊಂದಿ ದಾಟಿಸುವ ಯಾರನ್ನೂ ಕಾಣುವುದಿಲ್ಲ.

ಯೋಽಸತ್ಸೇವೀ ವೃಥಾಚಾರೋ ನಶ್ರೋತಾ ಸುಹೃದಾಂ ಸತಾಮ್ ।
ಪರಾನ್ ವೃಣೀತೇ ಸ್ವಾನ್ ದ್ವೇಷ್ಟಿ ತಂ ಗೌಸ್ತ್ಯಜತಿ ಭಾರತ ॥೩೨॥

ಎಲೈ ಭಾರತನೇ, ಯಾವನು ಅಸಜ್ಜನರ ಸಹವಾಸದಲ್ಲಿದ್ದು, ಮೋಸದ ಆಚಾರಗಳನ್ನು ಮಾಡಿ, ಸಜ್ಜನರಾದ ಸುಹೃಜ್ಜನರ ಮಾತುಗಳನ್ನು ಕೇಳುವುದಿಲ್ಲವೋ, ತನ್ನವರನ್ನು ದ್ವೇಷ ಮಾಡಿ ಪರರನ್ನು ಸ್ವೀಕರಿಸುತ್ತಾನೆಯೋ ಅವನನ್ನು ಭೂಮಿಯು ತ್ಯಜಿಸುತ್ತದೆ.

ಸ ತ್ವಂ ವಿರುದ್ಧ್ಯ ತೈರ್ವೀರೈರನ್ಯೇಭ್ಯಸ್ತ್ರಾಣಮಿಚ್ಛಸಿ ।
ಅಶಿಷ್ಟೇಭ್ಯೋಽಸಮರ್ಥೇಭ್ಯೋ ಮೂಢೇಭ್ಯೋ ಭರತರ್ಷಭ ॥೩೩॥

ಎಲೈ ಭರತರ್ಷಭನೇ, ಅಂತಹ ನೀನು ಆ ವೀರರ ಜೊತೆಯಲ್ಲಿ ವಿರೋಧವನ್ನು ಮಾಡಿ ಅಶಿಷ್ಟರೂ, ಅಸಮರ್ಥರೂ, ಮೂಢರೂ ಆದ ಬೇರೆಯವರಿಂದ ರಕ್ಷಣೆಯನ್ನು ಬಯಸುತ್ತಿದ್ದೀಯೆ.

ಕೋ ಹಿ ಶಕ್ರಸಮಾನ್ ಜ್ಞಾತೀನತಿಕ್ರಮ್ಯ ಮಹಾರಥಾನ್ ।
ಅನ್ಯೇಭ್ಯಸ್ತ್ರಾಣಮಾಶಂಸೇತ್ ತ್ವದನ್ಯೋ ಭುವಿ ಮಾನವಃ ॥೩೪॥

ನಿನ್ನನ್ನು ಬಿಟ್ಟು ಬೇರೆ ಯಾವನು ತಾನೇ ಇಂದ್ರನಿಗೆ ಸಮರಾದ, ಮಹಾರಥರಾದ ಜ್ಞಾತಿಗಳನ್ನು ಬಿಟ್ಟು ಬೇರೆಯವರಿಂದ ರಕ್ಷಣೆಯನ್ನು ಆಶಿಸಿಯಾನು?

ಜನ್ಮಪ್ರಭೃತಿ ಕೌಂತೇಯಾ ನಿತ್ಯಂ ವಿನಿಕೃತಾಸ್ತ್ವಯಾ ।
ನ ಚ ತೇ ಜಾತು ಕುಪ್ಯಂತಿ ಧರ್ಮಾತ್ಮಾನೋ ಹಿ ಪಾಂಡವಾಃ ॥೩೫॥

ನೀನು ಹುಟ್ಟಿದಾಗಿನಿಂದಲೂ ಪಾಂಡವರಿಗೆ ಅಪಕಾರವನ್ನು ಮಾಡಿದ್ದೀಯೆ. ಆದರೆ ಅವರು ಎಂದೂ ನಿನ್ನ ಮೇಲೆ ಕೋಪಗೊಂಡಿಲ್ಲ. ಏಕೆಂದರೆ ಪಾಂಡವರು ಧರ್ಮಾತ್ಮರು.

ಮಿಥ್ಯೋಪಚರಿತಾಸ್ತಾತ ಜನ್ಮಪ್ರಭೃತಿ ಪಾಂಡವಾಃ ।
ತ್ವಯಿ ಸಮ್ಯಙ್ ಮಹಾಬಾಹೋ ಪ್ರತಿಪನ್ನಾ ಯಶಸ್ವಿನಃ ॥೩೬॥

ಎಲೈ ಮಹಾಬಾಹುವೇ, ಕೀರ್ತಿವಂತರಾದ ಪಾಂಡವರು ನಿನ್ನಲ್ಲಿ ಒಳ್ಳೆಯ ರೀತಿಯಿಂದ ನಡೆದುಕೊಂಡಿದ್ದಾರೆ. ಆದರೆ ಪ್ರೀತಿಪಾತ್ರನೇ, ನೀನು ಹುಟ್ಟಿದಾಗಿನಿಂದಲೂ ಪಾಂಡವರಿಗೆ ಕಪಟವನ್ನೇ ಆಚರಿಸಿದ್ದೀಯೆ.

ತ್ವಯಾऽಪಿ ಪ್ರತಿಪತ್ತವ್ಯಂ ತಥೈವ ಭರತರ್ಷಭ ।
ಸ್ವೇಷು ಬಂಧುಷು ಮುಖ್ಯೇಷು ಮಾ ಮನ್ಯುವಶಮನ್ವಗಾಃ ॥೩೭॥

ಎಲೈ ಭರತರ್ಷಭನೇ, ಅವರು ನಿನ್ನನ್ನು ನೋಡಿದಂತೆಯೇ ನೀನೂ ಅವರನ್ನು ನೋಡಬೇಕು. ನಿನ್ನ ಮುಖ್ಯವಾದ ಬಂಧುಗಳ ವಿಷಯದಲ್ಲಿ ಕೋಪಕ್ಕೆ ವಶನಾಗಬೇಡ.

ತ್ರಿವರ್ಗಯುಕ್ತಃ ಪ್ರಾಜ್ಞಾನಾಮಾರಂಭೋ ಭರತರ್ಷಭ ।
ಧರ್ಮಾರ್ಥಾವನುರುದ್ಧ್ಯಂತೇ ತ್ರಿವರ್ಗಾಸಂಭವೇ ನರಾಃ ॥೩೮॥

ಎಲೈ ಭರತರ್ಷಭನೇ, ವಿವೇಕಿಗಳ ಕಾರ್ಯಾರಂಭವು ಧರ್ಮಾರ್ಥಕಾಮಗಳ ಉದ್ದೇಶದಿಂದ ಕೂಡಿರುತ್ತದೆ. ತ್ರಿವರ್ಗವು ಕೂಡದಿದ್ದರೆ ಮನುಷ್ಯರು ಧರ್ಮಾರ್ಥಗಳನ್ನು ಅನುಸರಿಸುತ್ತಾರೆ.

ಪೃಥಕ್ ಚ ವಿನಿವಿಷ್ಟಾನಾಂ ಧರ್ಮಂ ಧೀರೋऽನುರುದ್ಧ್ಯತೇ ।
ಮಧ್ಯಮೋऽರ್ಥಂ ಕಲಿಂ ಬಾಲಃ ಕಾಮಮೇವಾನುರುದ್ಧ್ಯತೇ ॥೩೯॥

ಧರ್ಮಾರ್ಥಕಾಮಗಳು ಭಿನ್ನಭಿನ್ನವಾಗಿದ್ದಾಗ ಧೀರನು ಧರ್ಮವನ್ನು ಅನುಸರಿಸುತ್ತಾನೆ, ಮಧ್ಯಮನು ಅರ್ಥವನ್ನು ಅನುಸರಿಸುತ್ತಾನೆ, ಅಧಮನಾದ ಬಾಲನು ಕಾಮವನ್ನೂ ಮತ್ತು ವಿರೋಧವನ್ನೂ ಅನುಸರಿಸುತ್ತಾನೆ.

ಇಂದ್ರಿಯೈಃ ಪ್ರಸೃತೋ ಬಾಲಃ ಧರ್ಮಂ ವಿಪ್ರಜಹಾತಿ ಯಃ ।
ಕಾಮಾರ್ಥಾವನುಪಾಯೇನ ಲಿಪ್ಸಮಾನೋ ವಿನಶ್ಯತಿ ॥೪೦॥

ಯಾವನು ಬಾಲನಾಗಿ ಇಂದ್ರಿಯಗಳನ್ನು ಹರಿಯಲು ಬಿಟ್ಟು ಧರ್ಮವನ್ನು ತ್ಯಜಿಸುತ್ತಾನೆಯೋ ಅವನು ಉಪಾಯವಲ್ಲದ ರೀತಿಯಿಂದ ಕಾಮಾರ್ಥಗಳನ್ನು ಪಡೆಯಲು ಬಯಸಿ ವಿನಾಶವನ್ನು ಹೊಂದುತ್ತಾನೆ.

ಕಾಮಾರ್ಥೌ ಲಿಪ್ಸಮಾನಸ್ತು ಧರ್ಮಮೇವಾದಿತಶ್ಚರೇತ್ ।
ನ ಹಿ ಧರ್ಮಾದಪೈತ್ಯರ್ಥಃ ಕಾಮೋ ವಾऽಪಿ ಕದಾಚನ ॥೪೧॥

ಕಾಮಾರ್ಥಗಳನ್ನು ಹೊಂದಲು ಅಪೇಕ್ಷಿಸುವವನು ಮೊದಲು ಧರ್ಮವನ್ನೇ ಆಚರಿಸಬೇಕು. ಅರ್ಥವಾಗಲೀ ಅಥವಾ ಕಾಮವಾಗಲೀ ಎಂದೂ ಧರ್ಮವನ್ನು ಬಿಟ್ಟಿರುವುದಿಲ್ಲ.

ಉಪಾಯಂ ಧರ್ಮಮೇವಾಹುಃ ತ್ರಿವರ್ಗಸ್ಯ ವಿಶಾಂಪತೇ ।
ಲಿಪ್ಸಮಾನೋ ಹಿ ತೇನಾಶು ಕಕ್ಷೇऽಗ್ನಿರಿವ ವರ್ಧತೇ ॥೪೨॥

ಎಲೈ ರಾಜನೇ, ತ್ರಿವರ್ಗಸಾಧನೆಗೆ ಧರ್ಮವೇ ಉಪಾಯವೆಂದು ಹೇಳುತ್ತಾರೆ. ಧರ್ಮದಿಂದ ತ್ರಿವರ್ಗವನ್ನು ಸಂಪಾದಿಸಲು ಬಯಸುವವನು ಹುಲ್ಲುಗಾವಲಿನಲ್ಲಿ ಬಿದ್ದ ಅಗ್ನಿಯಂತೆ ಅಭಿವೃದ್ಧಿಯನ್ನು ಹೊಂದುತ್ತಾನೆ.

ಸ ತ್ವಂ ತಾತಾನುಪಾಯೇನ ಲಿಪ್ಸಸೇ ಭರತರ್ಷಭ ।
ಆಧಿರಾಜ್ಯಂ ಮಹದ್ ದೀಪ್ತಂ ಪ್ರಥಿತಂ ಸರ್ವರಾಜಸು ॥೪೩॥

ಎಲೈ ಭರತರ್ಷಭನೇ, ಪ್ರೀತಿಪಾತ್ರನೇ, ನೀನು ಎಲ್ಲ ರಾಜರಲ್ಲೂ ಪ್ರಖ್ಯಾತವಾದ ದೊಡ್ಡದಾಗಿ ಪ್ರಜ್ವಲಿಸುವ ಆಧಿರಾಜ್ಯವನ್ನು ಅನುಪಾಯದಿಂದ ಪಡೆಯಲು ಬಯಸುತ್ತಿದ್ದೀಯೆ.

ಆತ್ಮಾನಂ ತಕ್ಷತಿ ಹ್ಯೇಷ ವನಂ ಪರಶುನಾ ಯಥಾ ।
ಯಃ ಸಮ್ಯಗ್ ವರ್ತಮಾನೇಷು ಮಿಥ್ಯಾ ರಾಜನ್ ಪ್ರವರ್ತತೇ ॥೪೪॥

ಎಲೈ ರಾಜನೇ, ಯಾವನು ತನ್ನ ಬಗ್ಗೆ ಸರಿಯಾಗಿ ನಡೆದುಕೊಳ್ಳುತ್ತಿರುವವರಲ್ಲಿ ಕಪಟದಿಂದ ನಡೆದುಕೊಳ್ಳುತ್ತಾನೆಯೋ ಅವನು ವನವನ್ನು ಕೊಡಲಿಯಿಂದ ಕತ್ತರಿಸಿದಂತೆ ತನ್ನನ್ನೇ ಕೆತ್ತಿಕೊಳ್ಳುತ್ತಾನೆ.

ಅಮಿತ್ರೋ ನಾತಿಕರ್ತವ್ಯಃ ನಾತಿದೇಯಃ ಕದಾಚನ ।
ಜೀವಿತಂ ಹ್ಯಪಿ ದುಃಖಾರ್ತಾಃ ಸಂತ್ಯಜಂತಿ ಕದಾಚನ ॥೪೫॥

ಶತ್ರುವಾದವನಿಗೆ ಅತಿಯಾಗಿ ಅಪಚಾರವನ್ನೂ ಮಾಡಬಾರದು, ಅತಿಯಾಗಿ ಬಹುಮಾನವನ್ನೂ ಮಾಡಬಾರದು. ದುಃಖಾರ್ತರಾದವರು ಒಮ್ಮೊಮ್ಮೆ ಜೀವನವನ್ನೂ ತೊರೆಯುತ್ತಾರೆ.

ಸ ಸಂಪನ್ನಮಭಿಚ್ಛಿಂದ್ಯಾತ್ ಯಸ್ಯ ನೇಚ್ಛೇತ್ ಪರಾಭವಮ್ ॥೪೬॥
ಅಭಿಚ್ಛಿನ್ನಸ್ಯ ಧೀರಸ್ಯ ಕಲ್ಯಾಣೇ ಧೀಯತೇ ಮತಿಃ ॥೪೭॥

ಯಾವನಿಗೆ ಪರಾಭವವಾಗಬಾರದೆಂದು ಬಯಸುತ್ತಾನೆಯೋ ಅವನ ಬುದ್ಧಿ ಛೇದವನ್ನು ಮಾಡಬೇಕು (ಕೆಟ್ಟಬುದ್ಧಿಯನ್ನು ಛೇದಿಸಬೇಕು). ಬುದ್ಧಿಯು ಕೆಟ್ಟ ವಸ್ತುವಿನಿಂದ ಛೇದವನ್ನು ಹೊಂದಿದರೆ ಧೀರನಾದ ಅವನ ಬುದ್ಧಿಯು ಶುಭದಲ್ಲಿಯೇ ನಿಲ್ಲುತ್ತದೆ.

ತ್ಯಕ್ತಾತ್ಮಾನಂ ನ ಬಾಧೇತ ತ್ರಿಷು ಲೋಕೇಷು ಭಾರತ ।
ಅಪ್ಯನ್ಯಂ ಪ್ರಾಕೃತಂ ಕಂಚಿತ್ ಕಿಮು ತಾನ್ ಪಾಂಡವರ್ಷಭಾನ್ ॥೪೮॥

ಎಲೈ ಭಾರತನೇ, ಜೀವದ ಹಂಗನ್ನು ತೊರೆದ ಪ್ರಾಕೃತಜನರನ್ನೂ ಸಹ ಮೂರುಲೋಕದಲ್ಲಿಯೂ ಬಾಧಿಸಬಾರದು. ಇನ್ನು ಪಾಂಡವರ್ಷಭರ ವಿಷಯದಲ್ಲಿ ಹೇಳುವುದೇನಿದೆ?

ಅಮರ್ಷವಶಮಾಪನ್ನೋ ನ ಕಿಂಚಿದ್ ಬುದ್ಧ್ಯತೇ ನರಃ ।
ಭಿದ್ಯತೇ ಹ್ಯಾತತಂ ಸರ್ವಂ ಪ್ರಮಾಣಂ ಪಶ್ಯ ಭಾರತ ॥೪೯॥

ಎಲೈ ಭಾರತನೇ, ರೋಷಕ್ಕೆ ವಶನಾದವನು ಏನನ್ನೂ ತಿಳಿಯುವುದಿಲ್ಲ. ಅತಿ ಎತ್ತರವಾದುದೆಲ್ಲವೂ ಒಡೆದು ಹೋಗುತ್ತದೆ. ಈ ವಿಷಯದಲ್ಲಿ ನಿನ್ನ ಅನುಭವ ರೂಪ ಪ್ರಮಾಣವನ್ನು ನೋಡು.

ಶ್ರೇಯಸ್ತೇ ದುರ್ಜನಾತ್ ತಾತ ಪಾಂಡವೈಃ ಸಹ ಸಂಗತಮ್ ॥೫೦॥

ತೈರ್ಹಿ ಸಂಪ್ರೀಯಮಾಣಸ್ತ್ವಂ ಪರಾನ್ ಕಾಮಾನವಾಪ್ಸ್ಯಸಿ ।
ಪಾಂಡವೈರ್ನಿರ್ಜಿತಾಂ ಭೂಮಿಂ ಭುಂಜಾನೋ ರಾಜಸತ್ತಮ ॥೫೧॥

ಎಲೈ ಪ್ರೀತಿಪಾತ್ರನೇ, ದುರ್ಜನರ ಸಂಗಕ್ಕಿಂತಲೂ ಪಾಂಡವರ ಸಂಗವು ನಿನಗೆ ಶ್ರೇಯಸ್ಕರವಾದುದು. ಎಲೈ ರಾಜಶ್ರೇಷ್ಠನೇ, ನೀನು ಅವರ ಜೊತೆಯಲ್ಲಿ ಪ್ರೀತಿಯಿಂದಿದ್ದರೆ ಪಾಂಡವರು ಜಯಿಸಿದ ಭೂಮಿಯನ್ನು ಭೋಗಿಸುತ್ತಾ ಶ್ರೇಷ್ಠವಾದ ಕಾಮಗಳನ್ನು ಹೊಂದುವಿ.

ಪಾಂಡವಾನ್ ಪೃಷ್ಠತಃ ಕೃತ್ವಾ ತ್ರಾಣಮಾಶಂಸಸೇऽನ್ಯತಃ ।
ದುಃಶಾಸನೇ ದುರ್ವಿಷಹೇ ಕರ್ಣೇऽಥಾಪಿ ಚ ಸೌಬಲೇ ॥೫೨॥

ಪಾಂಡವರನ್ನು ತಿರಸ್ಕರಿಸಿ ದುಃಶಾಸನ, ದುರ್ವಿಷಹ, ಕರ್ಣ, ಶಕುನಿ ಮೊದಲಾದವರಿಂದ ರಕ್ಷಣೆಯನ್ನು ಬಯಸುತ್ತಿದ್ದೀಯೆ.

ಏತೇಷ್ವೈಶ್ವರ್ಯಮಾಧಾಯ ಭೂತಿಮಿಚ್ಛಸಿ ಭಾರತ ।
ನ ಚೈತೇ ತವ ಪರ್ಯಾಪ್ತಾ ಜ್ಞಾನೇ ಧರ್ಮಾರ್ಥಯೋಸ್ತಥಾ ॥೫೩॥

ಎಲೈ ಭಾರತನೇ, ಇವರಲ್ಲಿ ನಿನ್ನ ಐಶ್ವರ್ಯವನ್ನು ಹಾಕಿ ಸಮೃದ್ಧಿಯನ್ನು ಬಯಸುತ್ತಿದ್ದೀಯೆ. ಇವರು ಜ್ಞಾನದಲ್ಲಾಗಲೀ, ಧರ್ಮಾರ್ಥಗಳಲ್ಲಾಗಲೀ ನಿನಗೆ ಸಾಟಿಯಲ್ಲ.

ವಿಕ್ರಮೇ ಚಾಪ್ಯಪರ್ಯಾಪ್ತಾಃ ಪಾಂಡವಾನ್ ಪ್ರತಿ ಭಾರತ ।
ನ ಹೀಮೇ ಸರ್ವರಾಜಾನಃ ಪರ್ಯಾಪ್ತಾಃ ಸಹಿತಾಸ್ತ್ವಯಾ ॥೫೪॥

ಎಲೈ ಭಾರತನೇ, ಇವರು ವಿಕ್ರಮದಲ್ಲಿ ಪಾಂಡವರಿಗೆ ಎಂದೂ ಸರಿಗಟ್ಟುವವರಲ್ಲ. ನಿನ್ನಿಂದ ಸಹಿತರಾದ ಈ ಎಲ್ಲ ರಾಜರೂ ಸಹ ಪಾಂಡವರಿಗೆ ಸರಿಸಾಟಿಯಾಗುವುದಿಲ್ಲ.

ಕ್ರುದ್ಧಸ್ಯ ಭೀಮಸೇನಸ್ಯ ಪ್ರೇಕ್ಷಿತುಂ ಮುಖಮಾಹವೇ ।
ಇದಂ ಸನ್ನಿಹಿತಂ ತಾತ ಸಮಗ್ರಂ ಪಾರ್ಥಿವಂ ಬಲಮ್ ॥೫೫॥

ಎಲೈ ಪ್ರೀತಿಪಾತ್ರನೇ, ಯುದ್ಧದಲ್ಲಿ ಕ್ರುದ್ಧನಾದ ಭೀಮಸೇನನ ಮುಖವನ್ನು ನೋಡಲು ಸನ್ನಿಹಿತವಾದ ಸಮಗ್ರವಾದ ರಾಜರ ಬಲಕ್ಕೇ ಸಾಧ್ಯವಿಲ್ಲ.

ಅಯಂ ಭೀಷ್ಮಸ್ತಥಾ ದ್ರೋಣಃ ಕರ್ಣಶ್ಚಾಪಿ ತಥಾ ಕೃಪಃ ।
ಭೂರಿಶ್ರವಾಃ ಸೌಮದತ್ತಿರಶ್ವತ್ಥಾಮಾ ಜಯದ್ರಥಃ ॥೫೬॥

ಅಶಕ್ತಾಃ ಸರ್ವ ಏವೈತೇ ಪ್ರತಿಯೋದ್ಧುಂ ಧನಂಜಯಮ್ ॥೫೭॥

ಈ ಭೀಷ್ಮ, ದ್ರೋಣ, ಕರ್ಣ, ಕೃಪ, ಸೋಮದತ್ತನ ಮಗನಾದ ಭೂರಿಶ್ರವ, ಅಶ್ವತ್ಥಾಮ, ಜಯದ್ರಥ ಇವರೆಲ್ಲರೂ ಧನಂಜಯನ ಜೊತೆಯಲ್ಲಿ ಯುದ್ಧಮಾಡಲು ಸಮರ್ಥರಲ್ಲ.

ಅಜೇಯೋ ಹ್ಯರ್ಜುನಃ ಕ್ರುದ್ಧಃ ಸರ್ವೈರಪಿ ಸುರಾಸುರೈಃ ।
ಮಾನುಷೈರಪಿ ಗಂಧರ್ವೈರ್ಮಾ ಯುದ್ಧೇ ಚೇತ ಆದಧಾಃ ॥೫೮॥

ಕ್ರುದ್ಧನಾದ ಅರ್ಜುನನು ಯುದ್ಧದಲ್ಲಿ ಎಲ್ಲಾ ಸುರಾಸುರರಿಂದಲೂ, ಮನುಷ್ಯರಿಂದಲೂ ಮತ್ತು ಗಂಧರ್ವರಿಂದಲೂ ಅಜೇಯನಾದವನು. ಯುದ್ಧದಲ್ಲಿ ಮನಸ್ಸನ್ನು ಇಡಬೇಡ.

ದೃಶ್ಯತಾಂ ವಾ ಪುಮಾನ್ ಕಶ್ಚಿತ್ ಸಮಗ್ರೇ ಪಾರ್ಥಿವೇ ಬಲೇ ।
ಯೋಽರ್ಜುನಂ ಸಮರೇ ಪ್ರಾಪ್ಯ ಸ್ವಸ್ತಿಮಾನಾವ್ರಜೇದ್ ಗೃಹಾನ್ ॥

ಅರ್ಜುನನನ್ನು ಯುದ್ಧದಲ್ಲಿ ಎದುರಿಸಿ ಕ್ಷೇಮದಿಂದ ಮನೆಗೆ ಹಿಂದಿರುಗುವ ಒಬ್ಬ ಪುರುಷನನ್ನು ಈ ಸಮಸ್ತವಾದ ರಾಜರ ಸೈನ್ಯದಲ್ಲಿ ಒಬ್ಬನನ್ನಾದರೂ ತೋರಿಸು.

ಕಿಂ ತೇ ಜನಕ್ಷಯೇಣೇಹ ಕೃತೇನ ಭರತರ್ಷಭ ।
ಯಸ್ಮಿನ್ ಜಿತೇ ಜಿತಂ ತೇ ಸ್ಯಾತ್ ಪುಮಾನೇಕಃ ಸ ದೃಶ್ಯತಾಮ್ ॥೬೦॥

ಎಲೈ ಭರತರ್ಷಭನೇ, ಈ ಜನಕ್ಷಯವನ್ನು ಮಾಡಿ ನಿನಗೆ ಏನು ಪ್ರಯೋಜನ? ಯಾವನನ್ನು ವಶಪಡಿಸಿಕೊಂಡರೆ ಎಲ್ಲವೂ ವಶವಾಗುವುದೋ ಅಂತಹ ಒಬ್ಬ ಪುರುಷನನ್ನು ನೋಡು.

ಯಃ ಸ ದೇವಾನ್ ಸಗಂಧರ್ವಾನ್ ಸಯಕ್ಷಾಸುರಪನ್ನಗಾನ್ ।
ಅಜಯತ್ ಖಾಂಡವಪ್ರಸ್ಥೇ ಕಸ್ತಂ ಯುದ್ಧ್ಯೇತ ಮಾನವಃ ॥೬೧॥

ಯಾವ ಅರ್ಜುನನು ಖಾಂಡವಪ್ರಸ್ಥದಲ್ಲಿ ಗಂಧರ್ವರಿಂದ ಮತ್ತು ಯಕ್ಷರಾಕ್ಷಸಸರ್ಪಗಳಿಂದ ಸಹಿತರಾದ ದೇವತೆಗಳನ್ನು ಜಯಿಸಿದನೋ ಅವನ ಜೊತೆಯಲ್ಲಿ ಯಾವ ಮನುಷ್ಯನು ಯುದ್ಧ ಮಾಡಿಯಾನು?

ತಥಾ ವಿರಾಟನಗರೇ ಶ್ರೂಯತೇ ಮಹದದ್ಭುತಮ್ ।
ಏಕಸ್ಯ ಚ ಬಹೂನಾಂ ಚ ಪರ್ಯಾಪ್ತಂ ತನ್ನಿದರ್ಶನಮ್ ॥೬೨॥

ವಿರಾಟನಗರದಲ್ಲಿ ಒಬ್ಬ ಅರ್ಜುನನಿಗೆ ಅನೇಕರ ಜೊತೆಯಲ್ಲಿ ನಡೆದ ಮಹದದ್ಭುತವಾದ ಯುದ್ಧವು ಕೇಳಿ ಬರುತ್ತದೆ. ಅದೊಂದು ದೃಷ್ಟಾಂತವು ಸಾಕು.

ತಮಜೇಯಮನಾಧೃಷ್ಯಂ ವಿಜೇತುಂ ಜಿಷ್ಣುಮಚ್ಯುತಮ್ ।
ಆಶಂಸಸೀಹ ಸಮರೇ ವೀರಮರ್ಜುನಮೂರ್ಜಿತಮ್ ॥೬೩॥

ಅಜೇಯನಾದ, ಸೋಲಿಸಲು ಸಾಧ್ಯವಿಲ್ಲದ, ತನ್ನ ಗುಣಗಳಿಂದ ಚ್ಯುತನಾಗದ, ಜಯಶೀಲನಾದ, ವೀರನಾದ, ಅಭಿವೃದ್ಧಿಯನ್ನು ಹೊಂದುತ್ತಿರುವ ಅರ್ಜುನನನ್ನು ಯುದ್ಧದಲ್ಲಿ ಗೆಲ್ಲಲು ಬಯಸುತ್ತಿದ್ದೀಯೆ.

ಮದ್ದ್ವಿತೀಯಂ ಪುನಃ ಪಾರ್ಥಂ ಕಃ ಪ್ರಾಪಯಿತುಮರ್ಹತಿ ।
ಯುದ್ಧೇ ಪ್ರತೀಯಮಾನಂ ತಮಪಿ ಸಾಕ್ಷಾತ್ ಪುರಂದರಃ ॥೬೪॥

ಯುದ್ಧದಲ್ಲಿ ಮುನ್ನುಗ್ಗುತ್ತಿರುವ ನನ್ನ ಸಹಾಯವುಳ್ಳ ಪಾರ್ಥನನ್ನು ಸಾಕ್ಷಾತ್ ಪುರಂದರನೇ ಆದರೂ ಯಾವನು ಹಿಂದಿರುಗಿಸುತ್ತಾನೆ?

ಬಾಹುಭ್ಯಾಮುದ್ಧರೇದ್ ಭೂಮಿಂ ದಹೇತ್ ಕ್ರುದ್ಧ ಇಮಾ ಪ್ರಜಾಃ ।
ಪಾತಯೇತ್ ತ್ರಿವಿಧಾನ್ ದೇವಾನ್ ಯೋऽರ್ಜುನಂ ಸಮರೇ ಜಯೇತ್॥

ಯಾವನು ಅರ್ಜುನನನ್ನು ಯುದ್ಧದಲ್ಲಿ ಜಯಿಸುವನೋ ಅವನು ತನ್ನ ಬಾಹುಗಳಿಂದ ಭೂಮಿಯನ್ನು ಎತ್ತಿಯಾನು? ಕ್ರೋಧದಿಂದ ಎಲ್ಲ ಪ್ರಜೆಗಳನ್ನೂ ಸುಟ್ಟಾನು! ಮೂರುವಿಧರಾದ ದೇವತೆಗಳನ್ನೂ ಸ್ವರ್ಗದಿಂದ ಬೀಳಿಸಿಯಾನು!

ಪಶ್ಯ ಪುತ್ರಾಂಸ್ತಥಾ ಭ್ರಾತೄನ್ ಜ್ಞಾತೀನ್ ಸಂಬಂಧಿಬಾಂಧವಾನ್ ।
ತ್ವತ್ಕೃತೇ ನ ವಿನಶ್ಯೇಯುರಿಮೇ ಭರತಸತ್ತಮಾಃ ॥೬೬॥

ನಿನ್ನ ಸಹೋದರರನ್ನೂ, ಪುತ್ರರನ್ನೂ, ಜ್ಞಾತಿಗಳನ್ನೂ ಮತ್ತು ಸಂಬಂಧಿ ಬಾಂಧವರನ್ನೂ ನೋಡು. ನಿನ್ನ ಸಲುವಾಗಿ ಈ ಭರತಶ್ರೇಷ್ಠರು ನಾಶವನ್ನು ಹೊಂದದಿರಲಿ.

ಅಸ್ತು ಶೇಷಂ ಕೌರವಾಣಾಂ ಮಾ ಪರಾಭೂದಿದಂ ಕುಲಮ್ ।
ಕುಲಘ್ನ ಇತಿ ನೋಚ್ಯೇಥಾ ನಷ್ಟಕೀರ್ತಿರ್ನರಾಧಿಪ ॥೬೭॥

ಎಲೈ ನರಾಧಿಪನೇ, ಕೌರವರು ಉಳಿಯಲಿ. ಈ ಕುಲವು ನಾಶ ಹೊಂದದಿರಲಿ. ನಿನಗೆ ಕುಲನಾಶಕನೆಂಬ ಅಪಕೀರ್ತಿಯು ಬರದಿರಲಿ.

ತ್ವಾಮೇವ ಸ್ಥಾಪಯಿಷ್ಯಂತಿ ಯೌವರಾಜ್ಯೇ ಮಹಾರಥಾಃ ।
ಮಹಾರಾಜ್ಯೇऽಪಿ ಪಿತರಂ ಧೃತರಾಷ್ಟ್ರಂ ಜನೇಶ್ವರಮ್ ॥೬೮॥

ಮಹಾರಥರಾದ ಪಾಂಡವರು ನಿನ್ನ ತಂದೆಯಾದ ಧೃತರಾಷ್ಟ್ರನನ್ನು ಮಹಾರಾಜ್ಯದಲ್ಲಿ ಸ್ಥಾಪಿಸಿ, ನಿನ್ನನ್ನೇ ಯೌವರಾಜ್ಯದಲ್ಲಿ ಸ್ಥಾಪಿಸುವರು.

ಮಾ ತಾತ ಶ್ರಿಯಮಾಯಾಂತೀಮವಮಂಸ್ಥಾಃ ಸಮುದ್ಯತಾಮ್ ।
ಅರ್ಧಂ ಪ್ರದಾಯ ಪಾರ್ಥೇಭ್ಯೋ ಮಹತೀಂ ಶ್ರಿಯಮಾಪ್ಸ್ಯಸಿ ॥೬೯॥

ಎಲೈ ಪ್ರೀತಿಪಾತ್ರನೇ, ತಾನಾಗಿ ಬರುತ್ತಿರುವ ಅಪಾರವಾದ ಸಂಪತ್ತಿಗೆ ಅವಮಾನ ಮಾಡಬೇಡ. ಪಾಂಡವರಿಗೆ ಅರ್ಧವನ್ನು ಕೊಟ್ಟು ದೊಡ್ಡ ಸಂಪತ್ತನ್ನು ಹೊಂದುವಿ.

ಪಾಂಡವೈಃ ಸಂಶಮಂ ಕೃತ್ವಾ ಕೃತ್ವಾ ಚ ಸುಹೃದಾಂ ವಚಃ ।
ಸಂಪ್ರೀಯಮಾಣೋ ಮಿತ್ರೈಶ್ಚ ಚಿರಂ ಭದ್ರಾಣ್ಯವಾಪ್ಸ್ಯಸಿ ॥೭೦॥

ಸುಹೃಜ್ಜನರ ಮಾತುಗಳನ್ನು ಕೇಳಿ, ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಂಡು, ಮಿತ್ರರ ಜೊತೆಯಲ್ಲಿ ಸಂತೋಷದಿಂದಿದ್ದು, ಬಹುಕಾಲದವರೆಗೆ ಎಲ್ಲಾ ಮಂಗಳಗಳನ್ನೂ ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿವಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುಃಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ನಾಲ್ಕನೆಯ ಅಧ್ಯಾಯ

ಭೀಷ್ಮ-ದ್ರೋಣ-ವಿದುರ-ಧೃತರಾಷ್ಟ್ರರಿಂದ ಕೃಷ್ಣನ ಮಾತುಗಳನ್ನು ಸ್ವೀಕರಿಸುವಂತೆ ದುರ್ಯೋಧನನಿಗೆ ಒತ್ತಾಯ.

ವೈಶಂಪಾಯನಃ

ತತಃ ಶಾಂತನವೋ ಭೀಷ್ಮೋ ದುರ್ಯೋಧನಮರಿಂದಮಮ್ ।
ಕೇಶವಸ್ಯ ವಚಃ ಶ್ರುತ್ವಾ ಪ್ರೋವಾಚ ಭರತರ್ಷಭ ॥೧॥

ವೈಶಂಪಾಯನ– ಎಲೈ ಭರತರ್ಷಭನೇ, ಅನಂತರ ಕೇಶವನ ಮಾತುಗಳನ್ನು ಕೇಳಿ, ಶಂತನುಪುತ್ರನಾದ ಭೀಷ್ಮನು ಅರಿಂದಮನಾದ ದುರ್ಯೋಧನನನ್ನು ಕುರಿತು ಮಾತನಾಡಿದನು.

ಕೃಷ್ಣೇನ ವಾಕ್ಯಮುಕ್ತೋऽಸಿ ಸುಹೃದಾಂ ಶಮಮಿಚ್ಛತಾ ।
ಅನ್ವಪದ್ಯಸ್ವ ತತ್ ತಾತ ಮಾ ಮನ್ಯುವಶಮನ್ವಗಾಃ ॥೨॥

ಬಾಂಧವರಲ್ಲಿ ಶಾಂತಿಯನ್ನು ಬಯಸುವ ಕೃಷ್ಣನ ಮಾತುಗಳನ್ನು ನೀನು ಕೇಳಿದ್ದೀಯೆ. ಪ್ರೀತಿಪಾತ್ರನೇ, ಆ ಮಾತಿನಂತೆ ನಡೆದುಕೊ. ಕ್ರೋಧಕ್ಕೆ ವಶನಾಗಬೇಡ.

ಅಕೃತ್ವಾ ವಚನಂ ತಸ್ಯ ಕೇಶವಸ್ಯ ಮಹಾತ್ಮನಃ ।
ಶ್ರೇಯೋ ನ ಜಾತು ನ ಸುಖಂ ನ ಕಲ್ಯಾಣಮವಾಪ್ಸ್ಯಸಿ ॥೩॥

ಮಹಾತ್ಮನಾದ ಕೇಶವನ ಮಾತುಗಳನ್ನು ನಡೆಸದಿದ್ದರೆ ಎಂದಿಗೂ ನೀನು ಶ್ರೇಯಸ್ಸನ್ನಾಗಲೀ, ಸುಖವನ್ನಾಗಲೀ, ಕಲ್ಯಾಣವನ್ನಾಗಲೀ ಹೊಂದುವುದಿಲ್ಲ.

ಧರ್ಮ್ಯಮರ್ಥ್ಯಂ ಮಹಾಬಾಹುರಾಹ ತ್ವಾಂ ತಾತ ಕೇಶವಃ ।
ತಮರ್ಥಮಭಿಪದ್ಯಸ್ವ ಮಾ ರಾಜನ್ ನೀನಶಃ ಪ್ರಜಾಃ ॥೪॥

ಎಲೈ ಪ್ರೀತಿಪಾತ್ರನೇ, ಮಹಾಬಾಹುವಾದ ಕೇಶವನು ನಿನಗೆ ಧರ್ಮಾರ್ಥ ಸಾಧಕವಾದ ಮಾತುಗಳನ್ನು ಹೇಳಿದ್ದಾನೆ. ರಾಜನೇ, ಅದರಂತೆ ನಡೆದುಕೊ. ಪ್ರಜೆಗಳನ್ನು ನಾಶ ಮಾಡಬೇಡ.

ಜ್ವಲಿತಾಂ ತ್ವಮಿಮಾಂ ಲಕ್ಷ್ಮೀಂ ಭಾರತೀಂ ಸರ್ವರಾಜಸು ।
ಜೀವತೋ ಧೃತರಾಷ್ಟ್ರಸ್ಯ ದೌರಾತ್ಮ್ಯಾದ್ ಭ್ರಂಶಯಿಷ್ಯಸಿ ॥೫॥

ಎಲ್ಲ ರಾಜರಲ್ಲಿ ಪ್ರಜ್ವಲಿಸುವ ಈ ಭರತವಂಶದ ಲಕ್ಷ್ಮಿಯನ್ನು ಧೃತರಾಷ್ಟ್ರನು ಬದುಕಿರುವಾಗಲೇ ನೀನು ದೌರಾತ್ಮ್ಯದಿಂದ ನಾಶ ಮಾಡುವಿ.

ಆತ್ಮಾನಂ ಚ ಸಹಾಮಾತ್ಯಂ ಸಪುತ್ರಭ್ರಾತೃಬಾಂಧವಮ್ ।
ಅಹಮಿತ್ಯನಯಾ ಬುದ್ಧ್ಯಾ ಜೀವಿತಾದ್ ಭ್ರಂಶಯಿಷ್ಯಸಿ ॥೬॥

ನಿನ್ನ ಅಹಂಕಾರಬುದ್ಧಿಯಿಂದ ನಿನ್ನನ್ನೂ, ಅಮಾತ್ಯರನ್ನೂ, ಪುತ್ರ-ಭ್ರಾತೃ ಬಾಂಧವರನ್ನೂ ಜೀವಿತದಿಂದ ಭ್ರಷ್ಟರಾಗುವಂತೆ ಮಾಡುವಿ.

ಅತಿಕ್ರಾಮನ್ ಕೇಶವಸ್ಯ ತಥ್ಯಂ ವಚನಮರ್ಥವತ್ ।
ಪಿತುಶ್ಚ ಭರತಶ್ರೇಷ್ಠ ವಿದುರಸ್ಯ ಚ ಧೀಮತಃ ॥೭॥

ಮಾ ಕುಲಘ್ನಃ ಕುಪುರುಷೋ ದುರ್ಮತಿಃ ಕಾಪಥಂ ಗಮಃ ॥೮॥

ಮಾತರಂ ಪಿತರಂ ಚೈವ ವೃದ್ಧೌ ಶೋಕಾಯ ಮಾ ದದಾಃ ॥೯॥

ಎಲೈ ಭರತಶ್ರೇಷ್ಠನೇ, ಕೇಶವನ ಹಿತವಾದ ಮತ್ತು ಅರ್ಥವತ್ತಾದ ಮಾತುಗಳನ್ನು ಮೀರಿ, ತಂದೆಯ ಮತ್ತು ಮೇಧಾವಿಯಾದ ವಿದುರನ ಮಾತುಗಳನ್ನು ಮೀರಿ,

ಕುಲವನ್ನು ನಾಶಮಾಡಿ, ಕೆಟ್ಟ ಪುರುಷನಾಗಿ ದುರ್ಮತಿಯನ್ನು ಹೊಂದಿ, ದುರ್ಗತಿಯನ್ನು ಹೊಂದಬೇಡ. ವೃದ್ಧರಾದ ತಂದೆ-ತಾಯಿಗಳನ್ನು ಶೋಕಕ್ಕೆ ಗುರಿಮಾಡಬೇಡ.

ಅಥ ದ್ರೋಣೋಽಬ್ರವೀತ್ ತತ್ರ ದುರ್ಯೋಧನಮಿದಂ ವಚಃ ।
ಅಮರ್ಷವಶಮಾಪನ್ನಂ ನಿಃಶ್ವಸಂತಂ ಪುನಃ ಪುನಃ ॥೧೦॥

ಅನಂತರ ಅಲ್ಲಿ ದ್ರೋಣರು ಕ್ರೋಧವಶನಾಗಿ ಪುನಃಪುನಃ ನಿಟ್ಟುಸಿರನ್ನು ಬಿಡುತ್ತಿದ್ದ ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದರು.

ಧರ್ಮಾರ್ಥಯುಕ್ತಂ ವಚನಮಾಹ ತ್ವಾಂ ತಾತ ಕೇಶವಃ ।
ತಥಾ ಭೀಷ್ಮಃ ಶಾಂತನವಃ ತಜ್ಜುಷಸ್ವ ನರಾಧಿಪ ॥೧೧॥

ಎಲೈ ಪ್ರೀತಿಪಾತ್ರನೇ, ಕೇಶವನು ಧರ್ಮಾರ್ಥಯುಕ್ತವಾದ ಮಾತುಗಳನ್ನೇ ನಿನಗೆ ಹೇಳಿದ್ದಾನೆ. ಹಾಗೆಯೇ ಶಂತನುಪುತ್ರರಾದ ಭೀಷ್ಮರೂ ಹೇಳಿದ್ದಾರೆ. ರಾಜನೇ, ಅದನ್ನು ಇಷ್ಟಪಡುವವನಾಗು.

ಪ್ರಾಜ್ಞೌ ಮೇಧಾವಿನೌ ದಾಂತಾವರ್ಥಕಾಮೌ ಬಹುಶ್ರುತೌ ।
ಆಹತುಸ್ತ್ವಾಂ ಹಿತಂ ವಾಕ್ಯಂ ತದಾದತ್ಸ್ವ ನರಾಧಿಪ ॥೧೨॥

ಎಲೈ ನರಾಧಿಪನೇ, ಪ್ರಾಜ್ಞರೂ, ಮೇಧಾವಿಗಳೂ, ಇಂದ್ರಿಯನಿಗ್ರಹವುಳ್ಳವರೂ, ನಿನ್ನ ಹಿತವನ್ನು ಬಯಸುವವರೂ, ಬಹುಶ್ರುತರೂ ಆದ ಅವರಿಬ್ಬರೂ ನಿನಗೆ ಹಿತವನ್ನೇ ಹೇಳಿದ್ದಾರೆ. ಅದನ್ನು ಸ್ವೀಕರಿಸು.

ಅನುತಿಷ್ಠ ಮಹಾಪ್ರಾಜ್ಞ ಕೃಷ್ಣಭೀಷ್ಮೌ ಯದೂಚತುಃ ।
ಮಾ ವಚೋ ಲಘುಬುದ್ಧೀನಾಂ ಸಮಾಸ್ಥಾಸ್ತ್ವಂ ಪರಂತಪ ॥೧೩॥

ಎಲೈ ಮಹಾಪ್ರಾಜ್ಞನೇ, ಕೃಷ್ಣ ಮತ್ತು ಭೀಷ್ಮರು ಹೇಳಿದುದನ್ನು ಅನುಷ್ಠಾನಕ್ಕೆ ತೆಗೆದುಕೊಂಡು ಬಾ. ಎಲೈ ಪರಂತಪನೇ, ಲಘುಬುದ್ಧಿಯುಳ್ಳವರ ಮಾತುಗಳನ್ನು ಕೇಳಬೇಡ.

ಮಾಧವಂ ಬುದ್ಧಿಮೋಹೇನ ಮಾಽವಮಂಸ್ಥಾಃ ಪರಂತಪ ।
ಯೇ ತ್ವಾಂ ಪ್ರೋತ್ಸಾಹಯಂತ್ಯೇತೇ ನೈತೇ ಕೃತ್ಯಾಯ ಕರ್ಹಿಚಿತ್ ॥೧೪॥

ವೈರಂ ಪರೇಷಾಂ ಗ್ರೀವಾಯಾಂ ಪ್ರತಿಮೋಕ್ಷ್ಯಂತಿ ಸಂಯುಗೇ ॥೧೫॥

ಎಲೈ ಪರಂತಪನೇ, ಮಾಧವನ ಮಾತುಗಳನ್ನು ಬುದ್ಧಿಮೋಹದಿಂದ ಅವಮಾನಗೊಳಿಸಬೇಡ. ನಿನಗೆ ಪ್ರೋತ್ಸಾಹವನ್ನು ಕೊಡುತ್ತಿರುವ ಇವರು ಯಾವ ಪ್ರಯೋಜನಕ್ಕೂ ಬಂದವರಲ್ಲ. ಇವರು ಯುದ್ಧದಲ್ಲಿ ನಮ್ಮ ಕುತ್ತಿಗೆಗೆ ಪಾಂಡವರ ವೈರವನ್ನು ಕಟ್ಟುತ್ತಾರೆ.

ಮಾ ನೀನಶಃ ಪ್ರಜಾಃ ಸರ್ವಾಃ ಪುತ್ರಾನ್ ಭ್ರಾತೄಂಸ್ತಥೈವ ಚ ।
ವಾಸುದೇವಾರ್ಜುನೌ ಯತ್ರ ವಿದ್ಧ್ಯಜೇಯಂ ಬಲಂ ಹಿ ತತ್ ॥೧೬॥

ಎಲ್ಲ ಪ್ರಜೆಗಳನ್ನೂ ಮತ್ತು ಪುತ್ರ-ಭ್ರಾತೃಗಳನ್ನೂ ನಾಶಮಾಡಬೇಡ. ಎಲ್ಲಿ ಕೃಷ್ಣಾರ್ಜುನರು ಇದ್ದಾರೆಯೋ ಆ ಸೈನ್ಯವು ಅಜೇಯವೆಂದೇ ತಿಳಿ.

ಏತಚ್ಚೈವ ಮತಂ ಸತ್ಯಂ ಸುಹೃದೋಃ ಕೃಷ್ಣಭೀಷ್ಮಯೋಃ ।
ಯದಿ ನಾದಾಸ್ಯತೇ ತಾತ ಪಶ್ಚಾತ್ ತಪ್ಸ್ಯಸಿ ಭಾರತ ॥೧೭॥

ಹಿತಚಿಂತಕರಾದ ಕೃಷ್ಣ ಮತ್ತು ಭೀಷ್ಮರ ಈ ಸತ್ಯವಾದ ಅಭಿಪ್ರಾಯವನ್ನು ನೀನು ಸ್ವೀಕರಿಸದಿದ್ದರೆ ಎಲೈ ಪ್ರೀತಿಪಾತ್ರನಾದ ಭಾರತನೇ, ನೀನು ಪಶ್ಚಾತ್ತಾಪವನ್ನು ಪಡುವಿ.

ಯಥೋಕ್ತಂ ಜಾಮದಗ್ನ್ಯೇನ ಭೂಯಾನೇಷ ತತೋಽರ್ಜುನಃ ।
ಕೃಷ್ಣೋ ಹಿ ದೇವಕೀಪುತ್ರೋ ದೇವೈರಪಿ ಸುದುಃಸಹಃ ॥೧೮॥

ಪರಶುರಾಮರು ಹೇಳಿದಂತೆ ಈ ಅರ್ಜುನನು ಕಾರ್ತವೀರ್ಯಾರ್ಜುನನಿಗಿಂತ ಮಿಗಿಲಾದವನು. ದೇವಕೀಪುತ್ರನಾದ ಕೃಷ್ಣನಾದರೂ ದೇವತೆಗಳಿಗೂ ದುಃಸಹನಾದವನು.

ಕಿಂ ತೇ ಮುಖಪ್ರಿಯೇಣೇಹ ಪ್ರೋಕ್ತೇನ ಭರತರ್ಷಭ ॥೧೯॥

ಏತತ್ ತೇ ಸರ್ವಮಾಖ್ಯಾತಂ ಯಥೇಚ್ಛಸಿ ತಥಾ ಕುರು ।
ನ ಹಿ ತ್ವಾಮುತ್ಸಹೇ ವಕ್ತುಂ ಭೂಯೋ ಭರತಸತ್ತಮ ॥೨೦॥

ಎಲೈ ಭರತರ್ಷಭನೇ, ನಿನ್ನ ಮುಖಸ್ತುತಿಯನ್ನು ಮಾಡಿ ಏನು ಪ್ರಯೋಜನ? ಎಲ್ಲವನ್ನೂ ಹೇಳಿದ್ದೇನೆ. ನಿನಗೆ ಇಷ್ಟಬಂದಂತೆ ಮಾಡು. ಎಲೈ ಭರತಸತ್ತಮನೇ, ಇದಕ್ಕಿಂತ ಹೆಚ್ಚು ಏನನ್ನೂ ಹೇಳಲಾರೆ.

ತಸ್ಮಿನ್ ವಾಕ್ಯಾಂತರೇ ವಾಕ್ಯಂ ಕ್ಷತ್ತಾಽಪಿ ವಿದುರೋಽಬ್ರವೀತ್ ।
ದುರ್ಯೋಧನಮಭಿಪ್ರೇಕ್ಷ್ಯ ಧಾರ್ತರಾಷ್ಟ್ರಮಮರ್ಷಣಮ್ ॥೨೧॥

ದ್ರೋಣರ ವಾಕ್ಯವು ಮುಗಿಯುತ್ತಿರಲು ವಿದುರನೂ ಸಹ ರೋಷಾವಿಷ್ಟನಾಗಿದ್ದ ದುರ್ಯೋಧನನನ್ನು ನೋಡಿ ಮಾತನಾಡಿದನು.

ದುರ್ಯೋಧನ ನ ಶೋಚಾಮಿ ತ್ವಾಮಹಂ ಭರತರ್ಷಭ ।
ಇಮೌ ತು ವೃದ್ಧೌ ಶೋಚಾಮಿ ಗಾಂಧಾರೀಂ ಪಿತರಂ ಚ ತೇ ॥೨೨॥

ಎಲೈ ಭರತಶ್ರೇಷ್ಠನಾದ ದುರ್ಯೋಧನನೇ, ನಿನಗಾಗಿ ನಾನು ಶೋಕಪಡುತ್ತಿಲ್ಲ. ವೃದ್ಧರಾದ ನಿನ್ನ ತಂದೆಯನ್ನೂ ಮತ್ತು ಗಾಂಧಾರಿಯನ್ನೂ ಕುರಿತು ಶೋಕಪಡುತ್ತಿದ್ದೇನೆ.

ಯಾವನಾಥೌ ಭವಿಷ್ಯೇತೇ ತ್ವಯಾ ನಾಥೇನ ದುರ್ಹೃದಾ ।
ಹತಮಿತ್ರೌ ಹತಾಮಾತ್ಯೌ ಲೂನಪಕ್ಷವಿವಾಂಡಜೌ ॥೨೩॥

ನಿನ್ನಂತಹ ಕೆಟ್ಟ ಹೃದಯವುಳ್ಳ ನಾಥನನ್ನು ಹೊಂದಿ, ಅವರು ಮಿತ್ರರನ್ನು ಕಳೆದುಕೊಂಡು, ಅಮಾತ್ಯರನ್ನು ಕಳೆದುಕೊಂಡು ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಗಳಂತೆ ಅನಾಥರಾಗುವರು.

ಭಿಕ್ಷುಕೌ ವಿಚರಿಷ್ಯೇತೇ ಶೋಚಂತೌ ಪೃಥಿವೀಮಿಮಾಮ್ ।
ಕುಲಘ್ನಮೀದೃಶಂ ಪಾಪಂ ಜನಯಿತ್ವಾ ಕುಪೂರುಷಮ್ ॥೨೪॥

ನಿನ್ನಂತಹ ಕುಲನಾಶಕನಾದ ಕುಪುರುಷನಾದ ಪಾಪಿಯನ್ನು ಮಗನನ್ನಾಗಿ ಪಡೆದು ಶೋಕಪಡುತ್ತಾ, ಭಿಕ್ಷೆಯನ್ನು ಬೇಡುತ್ತಾ ಈ ಭೂಮಿಯಲ್ಲಿ ತಿರುಗುವರು.

ಅಥ ದುರ್ಯೋಧನಂ ರಾಜಾ ಧೃತರಾಷ್ಟ್ರೋಽಭ್ಯಭಾಷತ ।
ಆಸೀನಂ ಭ್ರಾತೃಭಿಃ ಸಾರ್ಧಂ ರಾಜಭಿಃ ಪರಿವಾರಿತಮ್ ॥೨೫॥

ಅನಂತರ ರಾಜರಿಂದ ಪರಿವಾರಿತನಾಗಿ ತಮ್ಮಂದಿರ ಜೊತೆಯಲ್ಲಿ ಕುಳಿತಿದ್ದ ದುರ್ಯೋಧನನನ್ನು ಕುರಿತು ರಾಜನಾದ ಧೃತರಾಷ್ಟ್ರನು ಮಾತನಾಡಿದನು.

ದುರ್ಯೋಧನ ನಿಬೋಧೇದಂ ಶೌರಿಣೋಕ್ತಂ ಮಹಾತ್ಮನಾ ।
ಆದತ್ಸ್ವ ಶಿವಮತ್ಯಂತಂ ಯೋಗಕ್ಷೇಮವದವ್ಯಯಮ್ ॥೨೬॥

ದುರ್ಯೋಧನನೇ, ಮಹಾತ್ಮನಾದ ಶೌರಿಯು ಹೇಳಿದ ಮಾತುಗಳನ್ನು ಚೆನ್ನಾಗಿ ತಿಳಿದುಕೊ. ನಮ್ಮ ಯೋಗಕ್ಷೇಮಕ್ಕೆ ಸಾಧಕವಾದ, ಅತ್ಯಂತ ಮಂಗಳವಾದ ಅವ್ಯಯವಾದ ಆ ಮಾತುಗಳನ್ನು ಸ್ವೀಕರಿಸು.

ಅನೇನ ಹಿ ಸಹಾಯೇನ ಕೃಷ್ಣೇನಾಕ್ಲಿಷ್ಟಕರ್ಮಣಾ ।
ಇಷ್ಟಾನ್ ಸರ್ವಾನಭಿಪ್ರಾಯಾನ್ ಪ್ರಾಪ್ಸ್ಯಾಮಃ ಸರ್ವರಾಜಸು ॥೨೭॥

ಅಕ್ಲಿಷ್ಟಕಾರಿಯಾದ ಈ ಕೃಷ್ಣನ ಸಹಾಯದಿಂದ ನಾವು ಸರ್ವರಾಜರಲ್ಲಿ ನಮಗೆ ಅಭೀಷ್ಟವಾದ ಎಲ್ಲಾ ವಸ್ತುಗಳನ್ನೂ ಪಡೆಯುವೆವು.

ಸುಸಂಹಿತಃ ಕೇಶವೇನ ತಾತ ಗಚ್ಛ ಯುಧಿಷ್ಠಿರಮ್ ।
ಚರ ಸ್ವಸ್ತ್ಯಯನಂ ಕೃತ್ಸ್ನಂ ಭರತಾನಾಮನಾಮಯಮ್ ॥೨೮॥

ಎಲೈ ಪ್ರೀತಿಪಾತ್ರನೇ, ಕೇಶವನ ಜೊತೆಯಲ್ಲಿ ಒಂದಾಗಿ ಯುಧಿಷ್ಠಿರನ ಬಳಿಗೆ ಹೋಗು. ಭರತರಿಗೆಲ್ಲಾ ಕ್ಷೇಮವನ್ನೂ ಮತ್ತು ಸಮಗ್ರವಾದ ಮಂಗಳವನ್ನೂ ಉಂಟು ಮಾಡುವವನಾಗು.

ವಾಸುದೇವೇನ ತೀರ್ಥೇನ ತಾತ ಗಚ್ಛಸ್ವ ಸಂಗತಿಮ್ ।
ಕಾಲಪ್ರಾಪ್ತಮಿದಂ ಮನ್ಯೇ ಮಾ ತ್ವಂ ದುರ್ಯೋಧನಾತಿಗಾಃ ॥೨೯॥

ಎಲೈ ಪ್ರೀತಿಪಾತ್ರನೇ, ಪೂಜ್ಯನಾದ ವಾಸುದೇವನಿಂದ ಒಂದುಗೂಡುವವನಾಗು. ಇದು ಈ ಕಾಲಕ್ಕೆ ಯೋಗ್ಯವಾದುದೆಂದು ಭಾವಿಸುತ್ತೇನೆ. ದುರ್ಯೋಧನನೇ ಅವನ ಮಾತನ್ನು ಮೀರಬೇಡ.

ಶಮಂ ಚೇದ್ಯಾಚಮಾನಂ ತ್ವಂ ನಾಖ್ಯಾಸ್ಯಸಿ ಕೇಶವಮ್ ।
ತ್ವದರ್ಥಮಭಿಜಲ್ಪಂತಂ ನ ತವಾಸ್ಯಪರಾಭವಃ ॥೩೦॥

ನಿನ್ನ ಹಿತಕ್ಕಾಗಿ ಮಾತನಾಡುತ್ತಾ ಸಂಧಿಯನ್ನು ಯಾಚಿಸುವ ಕೇಶವನಿಗೆ ನೀನು ಸಂಧಿಯ ಮಾತನ್ನು ಹೇಳದಿದ್ದರೆ ನಿನಗೆ ಸೋಲು ಉಂಟಾಗದೇ ಇರಲು ಸಾಧ್ಯವಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರ್ವಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೈದನೆಯ ಅಧ್ಯಾಯ

ಪಾಂಡವರು ಯುದ್ಧಸನ್ನದ್ಧರಾಗುವುದಕ್ಕಿಂತ ಮೊದಲೇ ಸಂಧಿಯನ್ನು ಮಾಡಿಕೊಳ್ಳುವಂತೆ ಭೀಷ್ಮ-ದ್ರೋಣರಿಂದ ದುರ್ಯೋಧನನಿಗೆ ಕಥನ.

ವೈಶಂಪಾಯನಃ

ಧೃತರಾಷ್ಟ್ರವಚಃ ಶ್ರುತ್ವಾ ಭೀಷ್ಮದ್ರೌಣೀ ಸಮೇತ್ಯ ತೌ ।
ದುರ್ಯೋಧನಮಿದಂ ವಾಕ್ಯಮೂಚತುಃ ಶಾಸನಾತಿಗಮ್ ॥೧॥

ವೈಶಂಪಾಯನ– ಧೃತರಾಷ್ಟ್ರನ ಮಾತುಗಳನ್ನು ಕೇಳಿ ಭೀಷ್ಮ-ದ್ರೋಣರು ದೊಡ್ಡವರ ಶಾಸನವನ್ನು ಮೀರುವ ದುರ್ಯೋಧನನನ್ನು ಕುರಿತು ಒಟ್ಟಿಗೆ ಈ ಮಾತುಗಳನ್ನು ಆಡಿದರು.

ಯಾವತ್ ಕೃಷ್ಣಾವಸನ್ನದ್ಧೌ ಯಾವತ್ ತಿಷ್ಠತಿ ಗಾಂಡಿವಮ್ ।
ಯಾವದ್ ಧೌಮ್ಯೋ ನ ಸೇನಾಗ್ನೌ ಜುಹೋತೀಹ ದ್ವಿಷದ್ಬಲಮ್ ॥೨॥

ಯಾವನ್ನ ಪ್ರೇಕ್ಷತೇ ಕ್ರುದ್ಧಃ ಸೇನಾಂ ತವ ಯುಧಿಷ್ಠಿರಃ ।
ಹ್ರೀನಿಷೇಧೋ ಮಹಾಬಾಹುಃ ತಾವಚ್ಚಾಮ್ಯತು ವೈಶಸಮ್ ॥೩॥

ಎಲ್ಲಿಯವರೆಗೆ ಕೃಷ್ಣಾರ್ಜುನರು ಯುದ್ಧಸನ್ನದ್ಧವಾಗುವುದಿಲ್ಲವೋ, ಗಾಂಡೀವವು ಸುಮ್ಮನೆ ಇರುತ್ತದೆಯೋ, ಎಲ್ಲಿಯವರೆಗೆ ಧೌಮ್ಯರು ಸೇನಾಗ್ನಿಯಲ್ಲಿ ಶತ್ರುಸೈನ್ಯವನ್ನು ಹೋಮಮಾಡುವುದಿಲ್ಲವೋ, ಎಲ್ಲಿಯವರೆಗೆ ದಾಕ್ಷಿಣ್ಯಸ್ವಭಾವದವನೂ,

ಮಹಾಬಾಹುವೂ ಆದ ಯುಧಿಷ್ಠಿರನು ಕ್ರುದ್ಧನಾಗಿ ನಿನ್ನ ಸೈನ್ಯವನ್ನು ನೋಡುವುದಿಲ್ಲವೋ ಅಷ್ಟರೊಳಗೆ ಯುದ್ಧವು ಶಾಂತವಾಗಲಿ.

ಯಾವನ್ನ ದೃಶ್ಯತೇ ಪಾರ್ಥಃ ಸ್ವೇಷ್ವನೀಕೇಷ್ವವಸ್ಥಿತಃ ।
ಭೀಮಸೇನೋ ಮಹೇಷ್ವಾಸಃ ತಾವಚ್ಛಾಮ್ಯತು ವೈಶಸಮ್ ॥೪॥

ಎಲ್ಲಿಯವರೆಗೆ ತನ್ನ ಸೈನ್ಯದಲ್ಲಿರುವ ಅರ್ಜುನನೂ ಮಹಾಧನುರ್ಧಾರಿಯಾದ ಭೀಮಸೇನನೂ ಕಂಡುಬರುವುದಿಲ್ಲವೋ ಅಷ್ಟರೊಳಗೆ ಯುದ್ಧವು ಶಾಂತವಾಗಲಿ.

ಯಾವನ್ನ ಚರತೇ ಮಾರ್ಗಾನ್ ಪೃತನಾಮಭಿಹರ್ಷಯನ್ ।
ಭೀಮಸೇನೋ ಗದಾಪಾಣಿಸ್ತಾವತ್ ಸಂಶಾಮ್ಯ ಪಾಂಡವೈಃ ॥೫॥

ಎಲ್ಲಿಯವರೆಗೆ ಭೀಮಸೇನನು ಗದೆಯನ್ನು ಹಿಡಿದು ಮಾರ್ಗಗಳಲ್ಲಿ ಸಂಚರಿಸುತ್ತಾ ತನ್ನ ಸೈನ್ಯವನ್ನು ಸಂತೋಷಗೊಳಿಸುವುದಿಲ್ಲವೋ ಅಷ್ಟರೊಳಗೆ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ.

ಯಾವನ್ನ ಶಾತಯತ್ಯಾಜೌ ಶಿರಾಂಸಿ ಗಜಯೋಧಿನಾಮ್ ।
ಗದಯಾ ವೀರಘಾತಿನ್ಯಾ ಫಲಾನೀವ ವನಸ್ಪತೇಃ ॥೬॥

ಕಾಲೇನ ಪರಿಪಕ್ವಾನಿ ತಾವಚ್ಛಾಮ್ಯತು ವೈಶಸಮ್ ॥೭॥

ಎಲ್ಲಿಯವರೆಗೆ ಭೀಮಸೇನನು ವೀರರನ್ನು ಕೊಲ್ಲುವ ತನ್ನ ಗದೆಯಿಂದ ಕಾಲದಿಂದ ಪಕ್ವವಾದ ಫಲಗಳನ್ನು ವೃಕ್ಷದಿಂದ ಬೀಳಿಸಿದಂತೆ ಯುದ್ಧದಲ್ಲಿ ಗಜಯೋಧಿಗಳ ಶಿರಸ್ಸನ್ನು ಕೆಡಹುವುದಿಲ್ಲವೋ ಅಷ್ಟರೊಳಗೆ ಯುದ್ಧವು ಶಾಂತವಾಗಲಿ.

ನಕುಲಃ ಸಹದೇವಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ವಿರಾಟಶ್ಚ ಶಿಖಂಡೀ ಚ ಶೈಶುಪಾಲಿಶ್ಚ ದಂಸಿತಾಃ ॥೮॥

ಯಾವನ್ನ ಪ್ರವಿಶಂತ್ಯೇತೇ ನಕ್ರಾ ಇವ ಮಹಾರ್ಣವಮ್ ।
ಕೃತಾಸ್ತ್ರಾಃ ಕ್ಷಿಪ್ರಮಸ್ಯಂತಃ ತಾವಚ್ಛಾಮ್ಯತು ವೈಶಸಮ್ ॥೯॥

ಎಲ್ಲಿಯವರೆಗೆ ಅಸ್ತ್ರಜ್ಞರಾದ ನಕುಲ, ಸಹದೇವ, ದ್ರುಪದನ ಮಗನಾದ ಧೃಷ್ಟದ್ಯುಮ್ನ, ವಿರಾಟ, ಶಿಖಂಡಿ, ಶಿಶುಪಾಲನ ಮಗನಾದ ಧೃಷ್ಟಕೇತು ಇವರು

ಕವಚಗಳನ್ನು ಧರಿಸಿ, ಶೀಘ್ರವಾಗಿ ಬಾಣಗಳನ್ನು ಪ್ರಯೋಗಿಸುತ್ತಾ, ಮೊಸಳೆಗಳು ಸಮುದ್ರವನ್ನು ಪ್ರವೇಶ ಮಾಡಿದಂತೆ ಸೈನ್ಯವನ್ನು ಪ್ರವೇಶಿಸುವುದಿಲ್ಲವೋ ಅಷ್ಟರೊಳಗೆ ಯುದ್ಧವು ಶಾಂತವಾಗಲಿ.

ಯಾವನ್ನ ಸುಕುಮಾರೇಷು ಶರೀರೇಷು ಮಹೀಕ್ಷಿತಾಮ್ ।
ಗಾರ್ಧ್ರಪತ್ರಾಃ ಪತಂತ್ಯುಗ್ರಾಃ ತಾವಚ್ಛಾಮ್ಯತು ಕೇಶವಮ್ ॥೧೦॥

ಎಲ್ಲಿಯವರೆಗೆ ರಾಜರ ಸುಕುಮಾರ ಶರೀರಗಳಲ್ಲಿ ಹದ್ದಿನ ಗರಿಗಳ ಪುಂಖವನ್ನು ಹೊಂದಿದ ಉಗ್ರವಾದ ಬಾಣಗಳು ಬೀಳುವುದಿಲ್ಲವೋ ಅಷ್ಟರೊಳಗೆ ಯುದ್ಧವು ಶಾಂತವಾಗಲಿ.

ಚಂದನಾಗರುದಿಗ್ಧೇಷು ಹಾರನಿಷ್ಕಧರೇಷು ಚ ।
ನೋರಸ್ಸು ಯಾವದ್ಯೋಧಾನಾಂ ಮಹೇಷ್ವಾಸೈರ್ಮಹೇಷವಃ ॥೧೧॥

ಕೃತಾಸ್ತ್ರೈಃ ಕ್ಷಿಪ್ರಮಸ್ಯದ್ಭಿರ್ದೂರಪಾತಿಭಿರಾಯಸಾಃ ।
ಅತಿಲಕ್ಷ್ಯನಿಪಾತ್ಯಂತೇ ತಾವಚ್ಛಾಮ್ಯತು ವೈಶಸಮ್ ॥೧೨॥

ಎಲ್ಲಿಯವರೆಗೆ ಚಂದನಾಗರು ಲೇಪಿತವಾದ ಹಾರನಿಷ್ಕಗಳನ್ನು ಧರಿಸಿದ ಯೋಧರ ವಕ್ಷಸ್ಥಲಗಳಲ್ಲಿ ಮಹಾಧನುರ್ಧಾರಿಗಳೂ, ಕೃತಾಸ್ತ್ರರೂ, ಕ್ಷಿಪ್ರವಾಗಿ ಬಾಣಗಳನ್ನು ಪ್ರಯೋಗಿಸುವವರೂ, ದೂರದವರೆಗೆ ಬಾಣಪ್ರಯೋಗವನ್ನು ಮಾಡುವವರೂ, ಅತಿಶಯವಾಗಿ ಲಕ್ಷ್ಯವನ್ನು ಭೇದಿಸುವವರೂ ಆದ ಶತ್ರುಯೋಧರ ಉಕ್ಕಿನ ಬಾಣಗಳು ಬೀಳುವುದಿಲ್ಲವೋ ಅಷ್ಟರೊಳಗೆ ಯುದ್ಧವು ಶಾಂತವಾಗಲಿ.

ಅಭಿವಾದಯಮಾನಂ ತ್ವಾಂ ಶಿರಸಾ ರಾಜಕುಂಜರಃ ।
ಪಾಣಿಭ್ಯಾಂ ಪ್ರತಿಗೃಹ್ಣಾತು ಧರ್ಮರಾಜೋ ಮಹಾಮತಿಃ ॥೧೩॥

ರಾಜಶ್ರೇಷ್ಠನೂ, ಮಹಾಮತಿಯೂ ಆದ ಧರ್ಮರಾಜನು ಶಿರಸಾ ನಮಸ್ಕಾರ ಮಾಡುವ ನಿನ್ನನ್ನು ತನ್ನ ಕೈಗಳಿಂದ ಸ್ವೀಕರಿಸಲಿ.

ಧ್ವಜಾಂಕುಶಪತಾಕಾಂಕಂ ದಕ್ಷಿಣಂ ತೇ ಸುದಕ್ಷಿಣಮ್ ।
ಸ್ಕಂಧೇ ನಿಕ್ಷಿಪತಾಂ ಬಾಹುಂ ಶಾಂತಯೇ ಭರತರ್ಷಭ ॥೧೪॥

ಎಲೈ ಭರತರ್ಷಭನೇ, ಧ್ವಜಾಂಕುಶಪತಾಕ ರೇಖೆಗಳಿಂದ ಕೂಡಿದ, ಬಹಳ ದಕ್ಷಿಣೆಗಳನ್ನೂ ನೀಡಿದ ನಿನ್ನ ದಕ್ಷಿಣ ಬಾಹುವನ್ನು ಶಾಂತಿಗಾಗಿ ತನ್ನ ಹೆಗಲಿನ ಮೇಲೆ ಇಟ್ಟುಕೊಳ್ಳಲಿ.

ರತ್ನೌಷಧಿಸಮೇತೇನ ರತ್ನಾಂಗುಲಿತಳೇನ ಚ ।
ಉಪವಿಷ್ಟಸ್ಯ ಪೃಷ್ಠಂ ತೇ ಪಾಣಿನಾ ಪರಿಮಾರ್ಜತಾಮ್ ॥೧೫॥

ಬ್ರಾಹ್ಮಣರಿಗೆ ದಾನ ಕೊಡುವ ಸಮಯದಲ್ಲಿ ರತ್ನದ ಉಂಗುರ ಸಂಬಂಧವುಳ್ಳ ರತ್ನಾಂಗುಲಿತಳಗಳನ್ನು ಧರಿಸಿದ ತನ್ನ ಹಸ್ತದಿಂದ ಅವನ ಸಮೀಪದಲ್ಲಿ ಕುಳಿತ ನಿನ್ನ ಬೆನ್ನನ್ನು ನೇವರಿಸುವವನಾಗಲಿ.

ಸಾಲಸ್ಕಂಧೋ ಮಹಾಬಾಹುಃ ತ್ವಾಂ ಸಜಾತೋ ವೃಕೋದರಃ ।
ಸಾಮ್ನಾಽಭಿವದತಾಂ ಚಾಪಿ ಶಾಂತಯೇ ಭರತರ್ಷಭ ॥೧೬॥

ಎಲೈ ಭರತರ್ಷಭನೇ, ಸಾಲಸ್ಕಂಧದಂತೆ ಉನ್ನತವಾದವನೂ, ಮಹಾಬಾಹುವೂ, ನಿನಗೆ ಸಮಾನನಾಗಿ ಜನಿಸಿದವನೂ ಆದ ವೃಕೋದರನು ಶಾಂತಿಗಾಗಿ ನಿನ್ನ ಜೊತೆಯಲ್ಲಿ ಮಧುರವಾಗಿ ಮಾತನಾಡಲಿ.

ಅರ್ಜುನೇನ ಯಮಾಭ್ಯಾಂ ಚ ತ್ರಿಭಿಸ್ತೈರಭಿವಾದಿತಃ ।
ಮೂರ್ಧ್ನಿ ತಾನ್ ಸಮುಪಾಘ್ರಾಯ ಪ್ರೇಮ್ಣಾಽಭಿವದ ಪಾರ್ಥಿವ॥೧೭॥

ಎಲೈ ರಾಜನೇ, ಅರ್ಜುನ, ನಕುಲ-ಸಹದೇವರು ಈ ಮೂವರಿಂದ ನಮಸ್ಕರಿಸಲ್ಪಟ್ಟು, ಅವರನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ, ಪ್ರೀತಿಯಿಂದ ಅವರ ಜೊತೆಯಲ್ಲಿ ಮಾತನಾಡು.

ದೃಷ್ಟ್ವಾ ತ್ವಾಂ ಪಾಂಡವೈರ್ವೀರೈಃ ಭ್ರಾತೃಭಿಃ ಸಹ ಸಂಗತಮ್ ।
ಯಾವದಾನಂದಜಾಶ್ರೂಣಿ ಪ್ರಮುಂಚಂತು ನರಾಧಿಪಾಃ ॥೧೮॥

ನೀನು ವೀರರೂ, ಸಹೋದರರೂ ಆದ ಪಾಂಡವರ ಜೊತೆಯಲ್ಲಿ ಸಂಗತವಾದುದನ್ನು ನೋಡಿ ರಾಜರು ಆನಂದಾಶ್ರುಗಳನ್ನು ಸುರಿಸಲಿ.

ಘುಷ್ಯತಾಂ ರಾಜಧಾನೀಷು ಸರ್ವಸಂಪನ್ಮಹೀಕ್ಷಿತಾಮ್ ।
ಪೃಥಿವೀ ಭ್ರಾತೃಭಾವೇನ ಭುಜ್ಯತಾಂ ವಿಜ್ವರೋ ಭವ ॥೧೯॥

ಎಲ್ಲ ರಾಜರ ರಾಜಧಾನಿಗಳಲ್ಲಿ ಸರ್ವಸಂಪತ್ತು (ಸರ್ವಸಂಪತ್ತಿನಿಂದ ಕೂಡಿದ ಮಹೋತ್ಸವವು) ಘೋಷಿಸಲ್ಪಡಲಿ. ಭೂಮಿಯು ಭ್ರಾತೃಭಾವದಿಂದ ಇಬ್ಬರಿಂದಲೂ ಭೋಗಿಸಲ್ಪಡಲಿ, ನಿಶ್ಚಿಂತನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚವಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಷಟ್‌ಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತಾರನೆಯ ಅಧ್ಯಾಯ

ಪಾಂಡವರಿಗೆ ಸೂಜಿಯ ಮೊನೆಯಿಂದ ಚುಚ್ಚುವಷ್ಟು ಭೂಮಿಯನ್ನೂ ಕೊಡುವುದಿಲ್ಲವೆಂದು ದುರ್ಯೋಧನನ ಉತ್ತರ.

ವೈಶಂಪಾಯನಃ

ಶ್ರುತ್ವಾ ದುರ್ಯೋಧನೋ ವಾಕ್ಯಂ ಹೇತುಮತ್ ಕುರುಸಂಸದಿ ।
ಪ್ರತ್ಯುವಾಚ ಮಹಾಬಾಹುಂ ವಾಸುದೇವಂ ಯಶಸ್ವಿನಮ್ ॥೧॥

ವೈಶಂಪಾಯನ– ಕುರುಸಭೆಯಲ್ಲಿ ಹೇತುಬದ್ಧವಾದ ಮಾತುಗಳನ್ನು ಕೇಳಿ ದುರ್ಯೋಧನನು ಮಹಾಬಾಹುವೂ, ಕೀರ್ತಿವಂತನೂ ಆದ ವಾಸುದೇವನನ್ನು ಕುರಿತು ಮಾತನಾಡಿದನು.

ಪ್ರಸಮೀಕ್ಷ್ಯ ಭವಾನೇತದ್ ವಕ್ತುಮರ್ಹತಿ ಕೇಶವ ।
ಮಾಮೇವ ಹಿ ವಿಶೇಷೇಣ ವಿಭಾಷ್ಯ ಪರಿಗರ್ಹಸೇ ॥೨॥

ಎಲೈ ಕೇಶವನೇ, ನೀನು ಎಲ್ಲವನ್ನೂ ಸರಿಯಾಗಿ ತಿಳಿದು ಮಾತನಾಡಬೇಕು. ಏಕೆಂದರೆ ವಿಶೇಷವಾಗಿ ನನ್ನನ್ನೇ ಸಂಬೋಧಿಸಿ ನೀನು ನಿಂದಿಸುತ್ತಿದ್ದೀಯೆ.

ಭಕ್ತಿವಾದೇನ ಪಾರ್ಥಾನಾಮಕಸ್ಮಾನ್ಮಧುಸೂದನ ।
ಭವಾನ್ ಗರ್ಹಯತೇ ನಿತ್ಯಂ ಕಿಂ ಸಮೀಕ್ಷ್ಯ ಬಲಾಬಲಮ್ ॥೩॥

ಎಲೈ ಮಧುಸೂದನನೇ, ಪಾಂಡವರಿಗೆ ನಿನ್ನ ಮೇಲಿರುವ ಪ್ರೀತಿಯಿಂದ ನಿತ್ಯವೂ ಯಾವ ಬಲಾಬಲಗಳನ್ನು ಗಮನಿಸಿ ನನ್ನನ್ನು ನಿಂದಿಸುತ್ತಿದ್ದೀಯೆ?

ಭವಾನ್ ಕ್ಷತ್ತಾ ಚ ರಾಜಾ ಚ ಆಚಾರ್ಯೋ ವಾ ಪಿತಾಮಹಃ ।
ಮಾಮೇವ ಪರಿಗರ್ಹಂತೇ ನಾನ್ಯಂ ಕಶ್ಚನ ಪಾರ್ಥಿವಮ್ ॥೪॥

ನೀನು, ವಿದುರ, ರಾಜನಾದ ಧೃತರಾಷ್ಟ್ರ, ಆಚಾರ್ಯರಾದ ದ್ರೋಣರು ಮತ್ತು ಪಿತಾಮಹರಾದ ಭೀಷ್ಮರು ನನ್ನನ್ನೇ ನಿಂದಿಸುತ್ತಿದ್ದೀರಿ. ಬೇರೆ ಯಾವ ರಾಜನನ್ನೂ ನಿಂದಿಸುವುದಿಲ್ಲ.

ನ ಚಾಹಂ ಲಕ್ಷಯೇ ಕಂಚಿದ್ ವ್ಯಭಿಚಾರಮಿಹಾತ್ಮನಃ ।
ಅಥ ಸರ್ವೇ ಭವಂತೋ ಮಾಂ ವಿದ್ವಿಷಂತಿ ಸರಾಜಕಾಃ ॥೫॥

ನಾನು ಮಾಡಿದ ಯಾವ ಅಪಚಾರವೂ ನನಗೆ ಕಾಣುವುದಿಲ್ಲ. ಆದರೂ ನೀವೆಲ್ಲರೂ ರಾಜರಿಂದ ಸಹಿತರಾಗಿ ನನ್ನನ್ನು ದ್ವೇಷ ಮಾಡುತ್ತೀರಿ.

ನ ಚಾಹಂ ಕಂಚಿದತ್ಯರ್ಥಮಪರಾಧಮರಿಂದಮ ।
ವಿಚಿಂತಯನ್ ಪ್ರಪಶ್ಯಾಮಿ ಸುಸೂಕ್ಷ್ಮಮಪಿ ಕೇಶವ ॥೬॥

ಎಲೈ ಅರಿಂದಮನೇ, ಕೇಶವನೇ, ನಾನು ಎಷ್ಟು ಯೋಚಿಸಿದರೂ ಅಲ್ಪವಾದ ಅಪರಾಧವನ್ನು ನಾನು ಮಾಡಿರುವುದೂ ಕಾಣುವುದಿಲ್ಲ.

ಪ್ರಿಯಾಭ್ಯುಪಗತೇ ದ್ಯೂತೇ ಪಾಂಡವಾ ಮಧುಸೂದನ ।
ಜಿತಾಃ ಶಕುನಿನಾ ರಾಜ್ಯಂ ತತ್ರ ಕಿಂ ಮಮ ದುಷ್ಕೃತಮ್ ॥೭॥

ಎಲೈ ಮಧುಸೂದನನೇ, ಪ್ರೀತಿಯಿಂದ ನಡೆದ ದ್ಯೂತದಲ್ಲಿ ಶಕುನಿಗೆ ಪಾಂಡವರು ರಾಜ್ಯವನ್ನು ಸೋತರೆ ಅಲ್ಲಿ ನಾನು ಮಾಡಿದ ದುಷ್ಕೃತ್ಯವೇನು?

ಯತ್ಪುನರ್ದ್ರವಿಣಂ ಕಿಂಚಿತ್ ತತ್ರಾಜೇಯಂತ ಪಾಂಡವಾಃ ।
ತೇಭ್ಯ ಏವಾಭ್ಯನುಜ್ಞಾತಂ ತತ್ ತದಾ ಮಧುಸೂದನ ॥೮॥

ಎಲೈ ಮಧುಸೂದನನೇ, ಪಾಂಡವರು ಆ ದ್ಯೂತದಲ್ಲಿ ಯಾವ ದ್ರವ್ಯವನ್ನು ಕಳೆದುಕೊಂಡರೋ ಅದನ್ನು ಆಗಲೇ ಅವರಿಗೆ ಹಿಂದಿರುಗಿಸಿದ್ದಾಯಿತು.

ಅಪರಾಧೋ ನ ಚಾಸ್ಮಾಕಂ ಯತ್ ತೇ ಹ್ಯಕ್ಷಪರಾಜಿತಾಃ ।
ಅಜೇಯಾ ಜಯತಾಂ ಶ್ರೇಷ್ಠ ಪಾರ್ಥಾಃ ಪ್ರವ್ರಾಜಿತಾ ವನಮ್ ॥೯॥

ಜಯಶೀಲರಲ್ಲಿ ಶ್ರೇಷ್ಠನಾದವನೇ, ಅಜೇಯರಾದ ಪಾಂಡವರು ದ್ಯೂತದಲ್ಲಿ ಪರಾಜಿತರಾಗಿ ಕಾಡಿಗೆ ಹೋದುದರಲ್ಲಿ ನಮ್ಮ ಅಪರಾಧವೇನೂ ಇಲ್ಲ.

ಕೇನ ವಾऽಪ್ಯವಮಾನೇನ ವಿರುದ್ಧ್ಯಾಂತ್ಯರಿಭಿಃ ಸಹ ।
ಅಶಕ್ತಾಃ ಪಾಂಡವಾಃ ಕೃಷ್ಣ ಪ್ರಕೃಷ್ಟಾಃ ಸ(ಪ್ರ)ತ್ಯಮಿತ್ರವತ್ ॥೧೦॥

ಎಲೈ ಕೃಷ್ಣನೇ, ನಾನು ಮಾಡಿದ ಯಾವ ಅವಮಾನದ ನಿಮಿತ್ತದಿಂದಾಗಿ ಅಶಕ್ತರಾದ ಪಾಂಡವರು ದ್ಯೂತದಲ್ಲಿ ರಾಜ್ಯವನ್ನು ಕಳೆದುಕೊಂಡು, ಈಗ ನಮ್ಮ ಶತ್ರುಗಳ ಜೊತೆಯಲ್ಲಿ ಸೇರಿ ತಾವೂ ಶತ್ರುಗಳಂತೆ ವಿರೋಧವನ್ನು ಏಕೆ ಮಾಡುತ್ತಿದ್ದಾರೆ?

ಕಿಮಸ್ಮಾಭಿಃ ಕೃತಂ ತೇಷಾಂ ಕಸ್ಮಿನ್ ವಾ ಪುನರಾಗಸಿ ।
ಧಾರ್ತರಾಷ್ಟ್ರಾನ್ ಜಿಘಾಂಸಂತಿ ಪಾಂಡವಾಃ ಸೃಂಜಯೈಃ ಸಹ ॥೧೧॥

ನಾವು ಅವರಿಗೆ ಏನು ಮಾಡಿದೆವು? ಯಾವ ಅಪರಾಧದ ನಿಮಿತ್ತದಿಂದಾಗಿ ಪಾಂಡವರು ಸೃಂಜಯರ ಜೊತೆಯಲ್ಲಿ ಧೃತರಾಷ್ಟ್ರನ ಪುತ್ರರನ್ನು ಕೊಲ್ಲಲು ಬಯಸುತ್ತಾರೆ?

ನ ಚಾಪಿ ವಯಮುಗ್ರೇಣ ಕರ್ಮಣಾ ವಚನೇನ ವಾ ।
ವಿತ್ರಸ್ತಾಃ ಪ್ರಣಮಾಮೇಹ ಭಯಾದಪಿ ಶತಕ್ರತೋಃ ॥೧೨॥

ನಾವಾದರೂ ಉಗ್ರವಾದ ಕರ್ಮದಿಂದಾಗಲೀ, ಉಗ್ರವಚನದಿಂದಾಗಲೀ ಹೆದರಿ, ಇಂದ್ರನ ಭಯದಿಂದಲಾದರೂ ನಮಸ್ಕಾರ ಮಾಡುವವರಲ್ಲ.

ನ ಚ ತಂ ಕೃಷ್ಣ ಪಶ್ಯಾಮಿ ಕ್ಷತ್ರಧರ್ಮಮನುಷ್ಠಿತಮ್ ।
ಉತ್ಸಹೇತ ಯುಧಾ ಜೇತುಂ ಯೋ ನಃ ಶತ್ರುನಿಬರ್ಹಣ ॥೧೩॥

ಎಲೈ ಶತ್ರುಸಂಹಾರಕನಾದ ಕೃಷ್ಣನೇ, ಕ್ಷತ್ರಧರ್ಮವನ್ನು ಅನುಷ್ಠಾನ ಮಾಡುವ ಮತ್ತು ನಮ್ಮನ್ನು ಯುದ್ಧದಲ್ಲಿ ಗೆಲ್ಲುವ ಉತ್ಸಾಹವುಳ್ಳ ಯಾವೊಬ್ಬ ಕ್ಷತ್ರಿಯನನ್ನೂ ನಾನು ಕಾಣುವುದಿಲ್ಲ.

ನ ಹಿ ಭೀಷ್ಮಕೃಪದ್ರೋಣಾಃ ಸಕರ್ಣಾ ಮಧುಸೂದನ ।
ದೇವೈರಪಿ ಯುಧಾ ಜೇತುಂ ಶಕ್ಯಾಃ ಕಿಮುತ ಪಾಂಡವೈಃ ॥೧೪॥

ಎಲೈ ಮಧುಸೂದನನೇ, ಕರ್ಣನಿಂದ ಸಹಿತರಾದ ಭೀಷ್ಮ-ಕೃಪ-ದ್ರೋಣರನ್ನು ಯುದ್ಧದಲ್ಲಿ ದೇವತೆಗಳೂ ಗೆಲ್ಲಲಾರರು. ಇನ್ನು ಪಾಂಡವರ ಮಾತೇನು?

ಸ್ವಧರ್ಮಮನುಪಶ್ಯಂತೋ ಯದಿ ಮಾಧವ ಸಂಯುಗೇ ।
ಅಸ್ತ್ರೇಣ ನಿಧನಂ ಕಾಲೇ ಪ್ರಾಪ್ಸ್ಯಾಮಃ ಸ್ವರ್ಗಮೇವ ತತ್ ॥೧೫॥

ಎಲೈ ಮಾಧವನೇ, ನಮ್ಮ ಧರ್ಮವನ್ನು ಅನುಷ್ಠಾನ ಮಾಡುತ್ತಾ, ಯೋಗ್ಯವಾದ ಕಾಲದಲ್ಲಿ ಯುದ್ಧದಲ್ಲಿ ಅಸ್ತ್ರದಿಂದ ನಿಧನವನ್ನು ಹೊಂದಿದರೆ ಅದು ನಮಗೆ ಸ್ವರ್ಗವೇ ಸರಿ.

ಮುಖ್ಯಶ್ಚೈವೇಷ ನೋ ಧರ್ಮಃ ಕ್ಷತ್ರಿಯಾಣಾಂ ಜನಾರ್ದನ ।
ಯಚ್ಛಯೀಮಹಿ ಸಂಗ್ರಾಮೇ ಶರತಲ್ಪಗತಾ ವಯಮ್ ॥೧೬॥

ಎಲೈ ಜನಾರ್ದನನೇ, ಯುದ್ಧದಲ್ಲಿ ಶರತಲ್ಪಗತರಾಗಿ ಮಲಗುವುದು ಕ್ಷತ್ರಿಯರಾದ ನಮಗೆ ಮುಖ್ಯವಾದ ಧರ್ಮವೇ ಆಗಿದೆ.

ತೇ ವಯಂ ವೀರಶಯನಂ ಪ್ರಾಪ್ಸ್ಯಾಮೋ ಯದಿ ಸಂಯುಗೇ ।
ಅಪ್ರಣಮ್ಯೈವ ಶತ್ರೂಣಾಂ ನ ನಸ್ತಪ್ಸ್ಯತಿ ಕೃಷ್ಣ ತತ್ ॥೧೭॥

ಎಲೈ ಕೃಷ್ಣನೇ, ಅಂತಹ ನಾವು ಶತ್ರುಗಳಿಗೆ ಬಗ್ಗದೇ ಯುದ್ಧದಲ್ಲಿ ವೀರಶಯನವನ್ನು ಹೊಂದುವುದಾದರೆ ಅದು ನಮಗೆ ತಾಪವನ್ನು ಉಂಟುಮಾಡುವುದಿಲ್ಲ.

ಕಶ್ಚ ಜಾತು ಕುಲೇ ಜಾತಃ ಕ್ಷತ್ರಧರ್ಮೇಣ ವರ್ತಯನ್ ।
ಭಯಾದ್ವಾ ವೃತ್ತಿಹೇತೋರ್ವಾ ಪ್ರಣಮೇದಿಹ ಕಸ್ಯಚಿತ್ ॥೧೮॥

ಕ್ಷತ್ರಿಯ ಕುಲದಲ್ಲಿ ಜನಿಸಿ ಕ್ಷತ್ರಧರ್ಮದಿಂದ ಜೀವಿಸುವ ಯಾವನು ತಾನೇ ಭಯದಿಂದಾಗಲೀ, ಬದುಕುವ ಆಸೆಯಿಂದಾಗಲೀ ಇನ್ನೊಬ್ಬನಿಗೆ ನಮಸ್ಕಾರವನ್ನು ಮಾಡಿಯಾನು?

ಉದ್ಯಚ್ಛೇದೇವ ನ ನಮೇದ್ ಉದ್ಯಮೋ ಹ್ಯೇವ ಪೌರುಷಮ್ ।
ಅಪ್ಯಪರ್ವಣಿ ಭಜ್ಯೇತ ನ ನಮೇದಿಹ ಕಸ್ಯಚಿತ್ ॥೧೯॥

ಉದ್ಯಮವನ್ನೇ ಮಾಡಬೇಕು, ಬಗ್ಗಬಾರದು, ಉದ್ಯಮವೇ ಪೌರುಷ. ಪರ್ವವಲ್ಲದ ಸ್ಥಳದಲ್ಲಿ ಮುರಿಯಬಹುದು. ಆದರೆ ಯಾರಿಗೂ ಬಗ್ಗಬಾರದು.

ಇತಿ ಮಾತಂಗವಚನಂ ಪರೀಪ್ಸಂತಿ ಹಿತೇಪ್ಸವಃ ।
ಧರ್ಮಾಯ ಚೈವ ಪ್ರಣಮೇದ್ ಬ್ರಾಹ್ಮಣೇಭ್ಯಶ್ಚ ಮದ್ವಿಧಃ ॥೨೦॥

ಎಂಬ ಈ ಮಾತಂಗಋಷಿಗಳ ವಾಕ್ಯವನ್ನು, ಹಿತವನ್ನು ಬಯಸುವವರು ಬಯಸುತ್ತಾರೆ. ನನ್ನಂತಹವನು ಧರ್ಮಕ್ಕೆ ಮತ್ತು ಬ್ರಾಹ್ಮಣರಿಗೆ ಬಗ್ಗಬೇಕು (ನಮಸ್ಕಾರವನ್ನು ಮಾಡಬೇಕು)

ಅಚಿಂತಯನ್ ಕಂಚಿದನ್ಯಂ ಯಾವಜ್ಜೀವಂ ತಥಾ ಚರೇತ್ ।
ಏಷ ಧರ್ಮಃ ಕ್ಷತ್ರಿಯಾಣಾಂ ಮತಮೇತಚ್ಚ ಮೇ ಸದಾ ॥೨೧॥

ಇನ್ನೊಂದು ವಿಷಯವನ್ನು ಯೋಚಿಸದೆ ಬದುಕಿರುವವರೆಗೆ ಹಾಗೆಯೇ ಮಾಡಬೇಕು. ಇದು ಕ್ಷತ್ರಿಯರ ಧರ್ಮ, ಇದು ಸದಾ ನನಗೆ ಅಭಿಪ್ರೇತವಾದುದು.

ರಾಜ್ಯಾಂಶಶ್ಚಾಭ್ಯನುಜ್ಞಾತೋ ಯೋ ಮೇ ಪಿತ್ರಾ ಪುರಾऽಭವತ್ ।
ನ ಸ ಲಭ್ಯಃ ಪುನರ್ಜಾತು ಮಯಿ ಜೀವತಿ ಕೇಶವ ॥೨೨॥

ಎಲೈ ಕೇಶವನೇ, ನನ್ನ ತಂದೆಯು ಹಿಂದೆ ಪಾಂಡವರಿಗೆ ಯಾವ ರಾಜ್ಯಭಾಗವನ್ನು ಕೊಟ್ಟನೋ ಅದನ್ನು ನಾನು ಬದುಕಿರುವವರೆಗೆ ಅವರು ಪುನಃ ಪಡೆಯಲಾರರು.

ಯಾವತ್ ತು ರಾಜಾ ಧ್ರಿಯತೇ ಧೃತರಾಷ್ಟ್ರೋ ಜನಾರ್ದನ ।
ನ್ಯಸ್ತಶಸ್ತ್ರಾ ವಯಂ ತೇ ವಾऽಪ್ಯುಪಜೀವಾಮ ಮಾಧವ ॥೨೩॥

ಎಲೈ ಮಾಧವನೇ, ಜನಾರ್ದನನೇ, ಎಲ್ಲಿಯವರೆಗೆ ರಾಜನಾದ ಧೃತರಾಷ್ಟ್ರನು ಜೀವಿಸಿರುತ್ತಾನೆಯೋ ಅಲ್ಲಿಯವರೆಗೆ ನಾವಾಗಲೀ ಅಥವಾ ಅವರಾಗಲೀ ಶಸ್ತ್ರವನ್ನು ಕೆಳಗಿಟ್ಟು ಜೀವಿಸುವುದು ಒಳ್ಳೆಯದು.

ಯದ್ಧಿ ದೇಯಂ ಪುರಾ ದತ್ತಂ ರಾಜ್ಯಂ ಪರವತೋ ಮಮ ॥೨೪॥

ಅಜ್ಞಾನಾದ್ವಾ ಭಯಾದ್ವಾಽಪಿ ಮಯಿ ಬಾಲೇ ಜನಾರ್ದನ ।
ನ ತದದ್ಯ ಪುನರ್ಲಭ್ಯಂ ಪಾಂಡವೈರ್ವೃಷ್ಣಿನಂದನ ॥೨೫॥

ಎಲೈ ಜನಾರ್ದನನೇ, ನಾನು ಚಿಕ್ಕವನಿರುವಾಗ ಅಜ್ಞಾನದಿಂದಾಗಲೀ, ಭಯದಿಂದಾಗಲೀ ಯಾವ ಪರಾಧೀನನಾದ ನನ್ನ ರಾಜ್ಯವು ಅವರಿಗೆ ಕೊಡಲ್ಪಟ್ಟಿತ್ತೋ ಎಲೈ ವೃಷ್ಣಿನಂದನನೇ, ಆ ರಾಜ್ಯಭಾಗವು ಪಾಂಡವರಿಗೆ ಈ ದಿನ ಲಭ್ಯವಿಲ್ಲ.

ಧ್ರಿಯಮಾಣೇ ಮಹಾಬಾಹೋ ಮಯಿ ಸಂಪ್ರತಿ ಕೇಶವ ॥೨೬॥

ಯಾವದ್ಧಿ ತೀಕ್ಷ್ಣಯಾ ಸೂಚ್ಯಾ ವಿದ್ಧ್ಯೇದಗ್ರೇಣ ಮಾಧವ ।
ತಾವದಪ್ಯಪರಿತ್ಯಾಜ್ಯಂ ಭೂಮೇರ್ನಃ ಪಾಂಡವಾನ್ ಪ್ರತಿ ॥೨೭॥

ಎಲೈ ಮಹಾಬಾಹುವೇ, ಕೇಶವನೇ, ಮಾಧವನೇ, ನಾನು ಬದುಕಿರುವವರೆಗೆ ಈಗ ಸೂಜಿಯ ತುದಿಯಿಂದ ಚುಚ್ಚುವಷ್ಟು ಭೂಮಿಯ ಭಾಗವನ್ನೂ ಸಹ ನಮ್ಮಿಂದ ಪಾಂಡವರಿಗೆ ಕೊಡಲ್ಪಡತಕ್ಕದ್ದಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಡ್‌ವಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೇಳನೆಯ ಅಧ್ಯಾಯ

ಕೃಷ್ಣನಿಂದ ದುರ್ಯೋಧನನು ಪಾಂಡವರಿಗೆ ಮಾಡಿದ ಅಪಚಾರಗಳ ವರ್ಣನೆ. ಕುಲದ ಕ್ಷೇಮಕ್ಕಾಗಿ ದುರ್ಯೋಧನಾದಿಗಳನ್ನು ಬಂಧಿಸುವಂತೆ ಭೀಷ್ಮಾದಿಗಳಿಗೆ ಸೂಚನೆ.

ವೈಶಂಪಾಯನಃ

ತತಃ ಪ್ರಸಹ್ಯ ದಾಶಾರ್ಹಃ ಕ್ರೋಧಪರ್ಯಾಕುಲೇಕ್ಷಣಃ ।
ದುರ್ಯೋಧನಮಿದಂ ವಾಕ್ಯಮಬ್ರವೀತ್ ಕುರುಸಂಸದಿ ॥೧॥

ವೈಶಂಪಾಯನ– ಆಗ ಕ್ರೋಧದಿಂದ ಕೆಂಪಾದ ಕಣ್ಣುಳ್ಳ ಕೃಷ್ಣನು ಕೌರವ ಸಭೆಯಲ್ಲಿ ಗಟ್ಟಿಯಾದ ಸ್ವರದಲ್ಲಿ ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದನು.

ಲಪ್ಸ್ಯಸೇ ವೀರಶಯನಂ ಕಾಮಮೇತದವಾಪ್ಸ್ಯಸಿ ।
ಸ್ಥಿರೋ ಭವ ಸಹಾಮಾತ್ಯೋ ವಿಮರ್ದೋ ಭವಿತಾ ಮಹಾನ್ ॥೨॥

ವೀರಶಯನವನ್ನು ಪಡೆಯುವಿ. ನಿನ್ನ ಈ ಆಸೆಯು ಪೂರ್ಣವಾಗುವುದು. ಅಮಾತ್ಯರ ಜೊತೆಯಲ್ಲಿ ಸ್ಥಿರವಾಗಿರು. ದೊಡ್ಡ ಸಂಘರ್ಷವು ನಡೆಯುವುದು.

ಯಚ್ಚೈವಂ ಮನ್ಯಸೇ ಮೂಢ ನ ಮೇ ಕಶ್ಚಿದ್ ವ್ಯತಿಕ್ರಮಃ ।
ಪಾಂಡವೇಷ್ವಿತಿ ತತ್ ಸರ್ವಂ ನಿಬೋಧ ತ್ವಂ ನರಾಧಿಪ ॥೩॥

ಎಲೈ ನರಾಧಿಪನೇ, ಮೂಢನೇ, ಪಾಂಡವರಿಗೆ ಏನೂ ಅಪಚಾರ ಮಾಡಿಲ್ಲವೆಂದು ತಿಳಿದಿದ್ದೀಯಷ್ಟೆ! ಅದೆಲ್ಲವನ್ನೂ ಕೇಳುವವನಾಗು.

ಶ್ರಿಯಾ ಸಂತಪ್ಯಮಾನೇನ ಪಾಂಡವಾನಾಂ ಮಹಾತ್ಮನಾಮ್ ।
ತ್ವಯಾ ದುರ್ಮಂತ್ರಿತಂ ದ್ಯೂತಂ ಸೌಬಲೇನ ಚ ಭಾರತ ॥೪॥

ಎಲೈ ಭಾರತನೇ, ಮಹಾತ್ಮರಾದ ಪಾಂಡವರ ಸಂಪತ್ತನ್ನು ನೋಡಿ ಸಹಿಸದೇ ನೀನು ಶಕುನಿಯ ಜೊತೆಯಲ್ಲಿ ದ್ಯೂತದ ದುರಾಲೋಚನೆಯನ್ನು ಮಾಡಿದೆ.

ಕಥಂ ನು ಜ್ಞಾತಯಸ್ತಾತ ಶ್ರೇಯಾಂಸಃ ಸಾಧುಸಮ್ಮತಾಃ ।
ತಥಾ ನ್ಯಾಯ್ಯಮುಪಸ್ಥಾತುಂ ಜಿಹ್ಮೇನಾಜಿಹ್ಮಚಾರಿಣಃ ॥೫॥

ಪ್ರೀತಿಪಾತ್ರನೇ, ಶ್ರೇಷ್ಠರೂ, ಸಾಧುಸಮ್ಮತರೂ, ನೇರವಾದ ನಡತೆಯುಳ್ಳವರೂ ಆದ ಬಂಧುಗಳ ವಿಷಯದಲ್ಲಿ ಕಪಟದಿಂದ ವರ್ತಿಸುವುದು ಹೇಗೆ ನ್ಯಾಯವಾಗುತ್ತದೆ?

ಅಕ್ಷದ್ಯೂತಂ ಮಹಾಪ್ರಾಜ್ಞ ಸತಾಂ ಮತಿವಿನಾಶನಮ್ ।
ಅಸತಾಂ ತತ್ರ ಜಾಯಂತೇ ಭೇದಾಶ್ಚ ವ್ಯಸನಾನಿ ಚ ॥೬॥

ಎಲೈ ಮಹಾಪ್ರಾಜ್ಞನೇ, ಅಕ್ಷದ್ಯೂತವು ಸಜ್ಜನರಿಗೆ ಬುದ್ಧಿಯನ್ನು ನಾಶಮಾಡುತ್ತದೆ. ಅಸಜ್ಜನರಿಗೆ ವಿರೋಧವನ್ನೂ ಮತ್ತು ಚಟಗಳನ್ನೂ ಉಂಟುಮಾಡುತ್ತದೆ.

ತದಿದಂ ವ್ಯಸನಂ ಘೋರಂ ತ್ವಯಾ ದ್ಯೂತಮುಖಂ ಕೃತಮ್ ।
ಅಸಮೀಕ್ಷ್ಯ ಸದಾಚಾರಾನ್ ಸಾರ್ಧಂ ಪಾಪಾನುಬಂಧನೈಃ ॥೭॥

ನೀನು ಸದಾಚಾರಗಳನ್ನು ಗಮನಿಸದೆ ಪಾಪದಲ್ಲಿಯೇ ಪ್ರೀತಿಯುಳ್ಳವರ ಜೊತೆಯಲ್ಲಿ ಸೇರಿ ದ್ಯೂತಮುಖದಿಂದ ಉಂಟಾದ ಈ ಘೋರವಾದ ವ್ಯಸನವನ್ನು ತಂದೊಡ್ಡಿದ್ದೀಯೆ.

ಕಶ್ಚಾನ್ಯೋ ಜ್ಞಾತಿದಾರಾನ್ ವೈ ವಿಪ್ರಕರ್ತುಂ ತಥಾऽರ್ಹತಿ ।
ಆನೀಯ ಚ ಸಭಾಂ ವಕ್ತುಂ ಯಥೋಕ್ತಾ ದ್ರೌಪದೀ ತ್ವಯಾ ॥೮॥

ಸಹೋದರರ ಪತ್ನಿಯರನ್ನು, ದುರ್ವಾಕ್ಯಗಳನ್ನು ಆಡುವುದಕ್ಕಾಗಿಯೇ ಸಭೆಗೆ ಕರೆತಂದು, ಹಾಗೆ ದುರ್ವಾಕ್ಯಗಳನ್ನು ನೀನು ಮಾತನಾಡಿದಂತೆ ಮಾತನಾಡಿ ಯಾರು ಅಪಚಾರವನ್ನು ಮಾಡುತ್ತಾರೆ?

ಕುಲೀನಾ ಶೀಲಸಂಪನ್ನಾ ಪ್ರಾಣೇಭ್ಯೋऽಪಿ ಗರೀಯಸೀ ।
ಮಹಿಷೀ ಪಾಂಡುಪುತ್ರಾಣಾಂ ತಥಾ ವಿನಿಕೃತಾ ತ್ವಯಾ ॥೯॥

ಕುಲೀನಳೂ, ಶೀಲಸಂಪನ್ನಳೂ, ಪಾಂಡವರಿಗೆ ಪ್ರಾಣಕ್ಕಿಂತಲೂ ಪ್ರಿಯಳಾದ ಪತ್ನಿಯೂ ಆದ ಅವಳನ್ನು ನೀನು ಹಾಗೆ ಅವಮಾನ ಮಾಡಿದೆ.

ಜಾನಂತಿ ಕುರವಃ ಸರ್ವೇ ಯಥೋಕ್ತಾಃ ಕುರುಸಂಸದಿ ।
ದುಃಶಾಸನೇನ ಕೌಂತೇಯಾಃ ಪ್ರವ್ರಜಂತಃ ಪರಂತಪಾಃ ॥೧೦॥

ಪರಂತಪರಾದ ಪಾಂಡವರು ಕಾಡಿಗೆ ಹೋಗುವಾಗ ದುಃಶಾಸನನು ಹೇಗೆ ಮಾತನಾಡಿದನೆಂದು ಸಭೆಯಲ್ಲಿದ್ದ ಎಲ್ಲ ಕೌರವರೂ ತಿಳಿದಿದ್ದಾರೆ.

ಸಮ್ಯಗ್ ವೃತ್ತೇಷ್ವಲುಬ್ಧೇಷು ಸತತಂ ಧರ್ಮಚಾರಿಷು ।
ಸ್ವೇಷು ಬಂಧುಷು ಕಃ ಸಾಧುಃ ಚರೇದೇವಮಸಾಂಪ್ರತಮ್ ॥೧೧॥

ಯಾವಾಗಲೂ ಒಳ್ಳೆಯ ನಡತೆಯುಳ್ಳ, ಲೋಭವಿಲ್ಲದ, ಯಾವಾಗಲೂ ಧರ್ಮಾಚರಣೆಯನ್ನು ಮಾಡುವ ತನ್ನ ಬಂಧುಗಳ ವಿಷಯದಲ್ಲಿ ಯಾವ ಸಜ್ಜನನು ಹೀಗೆ ಅಯೋಗ್ಯವಾದ ರೀತಿಯಲ್ಲಿ ನಡೆದುಕೊಳ್ಳುತ್ತಾನೆ?

ನೃಶಂಸಾನಾಮನಾರ್ಯಾಣಾಂ ಯಥಾ ಪರುಷಭಾಷಣಮ್ ।
ಕರ್ಣದುಃಶಾಸನಾಭ್ಯಾಂ ಚ ತ್ವಯಾ ಚ ಬಹುಶಃ ಕೃತಮ್ ॥೧೨॥

ಕ್ರೂರಿಗಳು, ಅನಾರ್ಯರು ಹೇಗೆ ಒರಟಾದ ಮಾತುಗಳನ್ನು ಆಡುತ್ತಾರೆಯೋ ಅದರಂತೆ ನೀನೂ ಮತ್ತು ಕರ್ಣ-ದುಃಶಾಸನರು ಅನೇಕ ಬಾರಿ ಮಾತನಾಡಿದ್ದೀರಿ.

ಸಹ ಮಾತ್ರಾ ಪ್ರದಗ್ಧುಂ ತಾನ್ ಬಾಲಕಾನ್ ವಾರಣಾವತೇ ।
ಆಸ್ಥಿತಃ ಪರಮೋ ಯತ್ನೋ ನ ಸಮೃದ್ಧಂ ಚ ತತ್ ತವ ॥೧೩॥

ವಾರಣಾವತದಲ್ಲಿ ತಾಯಿಯಾದ ಕುಂತಿಯ ಜೊತೆಯಲ್ಲಿ ಆ ಬಾಲಕರನ್ನು ದಹಿಸಲು ನೀನು ಬಹಳ ಪ್ರಯತ್ನವನ್ನು ಮಾಡಿದೆ. ಆದರೆ ಅದು ನಿನಗೆ ಫಲಿಸಲಿಲ್ಲ.

ಊಷುಶ್ಚ ಸುಚಿರಂ ಕಾಲಂ ಪ್ರಚ್ಛನ್ನಾಃ ಪಾಂಡವಾಸ್ತದಾ ।
ಮಾತ್ರಾ ಸಹೈಕಚಕ್ರಾಯಾಂ ಬ್ರಾಹ್ಮಣಸ್ಯ ನಿವೇಶನೇ ॥೧೪॥

ಪಾಂಡವರು ಪ್ರಚ್ಛನ್ನರಾಗಿ ತಾಯಿಯ ಜೊತೆಯಲ್ಲಿ ಏಕಚಕ್ರಾನಗರದಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಬಹುಕಾಲ ವಾಸವನ್ನು ಮಾಡಿದರು.

ವಿಷೇಣ ಬಂಧೈಃ ಸರ್ಪೈಶ್ಚ ಘಾತಿತಾಃ ಪಾಂಡವಾಸ್ತ್ವಯಾ ।
ಸರ್ವೋಪಾಯೈರ್ವಿನಾಶಾಯ ನ ಸಮೃದ್ಧಂ ಚ ತತ್ ತವ ॥೧೫॥

ವಿಷಪ್ರಯೋಗದಿಂದ, ಬಂಧನಗಳಿಂದ, ಸರ್ಪಗಳಿಂದ ಪಾಂಡವರನ್ನು ಕೊಲ್ಲಲು ನೀನು ಪ್ರಯತ್ನಪಟ್ಟೆ. ಎಲ್ಲಾ ಉಪಾಯಗಳಿಂದಲೂ ಪಾಂಡವರ ವಿನಾಶಕ್ಕೆ ಪ್ರಯತ್ನವನ್ನು ಮಾಡಿದೆ. ಆದರೆ ಅವು ನಿನಗೆ ಫಲಿಸಲಿಲ್ಲ.

ಏವಂವೃತ್ತಃ ಕಥಂ ರಾಜ್ಯೇ ಸ್ಥಾತುಮರ್ಹಸಿ ಪಾಪಕೃತ್ ।
ಸ ರಾಜ್ಯಾಚ್ಚ ಸುಖಾಚ್ಚೈವ ಹಾಸ್ಯಸೇ ಕುಲಪಾಂಸನ ॥೧೬॥

ಇಂತಹ ನಡತೆಯುಳ್ಳ ಪಾಪಾಚಾರಿಯಾದ ನೀನು ರಾಜ್ಯದಲ್ಲಿ ಇರಲು ಹೇಗೆ ಅರ್ಹನಾಗುತ್ತೀಯೆ? ಎಲೈ ಕುಲಪಾಂಸನನೇ, ನೀನು ರಾಜ್ಯದಿಂದಲೂ ಮತ್ತು ಸುಖದಿಂದಲೂ ಭ್ರಷ್ಟನಾಗುವಿ.

ಏವಂಬುದ್ಧಿಃ ಪಾಂಡವೇಷು ಮಿಥ್ಯಾವೃತ್ತಃ ಸದಾ ಭವಾನ್ ।
ಕಥಂ ತೇ ನಾಪರಾಧ್ಯೋಽಸ್ತಿ ಪಾಂಡವೇಷು ಮಹಾತ್ಮಸು ॥೧೭॥

ಪಾಂಡವರಲ್ಲಿ ಇಂತಹ ಬುದ್ಧಿಯನ್ನು ಹೊಂದಿ ನೀನು ಯಾವಾಗಲೂ ಕಪಟದಿಂದಲೇ ನಡೆದುಕೊಂಡಿದ್ದೀಯೆ. ಮಹಾತ್ಮರಾದ ಪಾಂಡವರಿಗೆ ನೀನು ಅಪರಾಧವನ್ನು ಮಾಡಿಲ್ಲ ಎನ್ನುವುದು ಹೇಗೆ?

ಕೃತ್ವಾ ಬಹೂನ್ಯಕಾರ್ಯಾಣಿ ಪಾಂಡವೇಷು ನೃಶಂಸವತ್ ।
ಮಿಥ್ಯಾವೃತ್ತಿರನಾರ್ಯಃ ಸನ್ನದ್ಯ ವಿಪ್ರತಿಪದ್ಯಸೇ ॥೧೮॥

ಪಾಂಡವರಿಗೆ ಕ್ರೂರಿಯಂತೆ ಅನೇಕ ಅಕಾರ್ಯಗಳನ್ನು ಮಾಡಿ, ಅನಾರ್ಯನಾಗಿ ಕಪಟದ ಕ್ರಿಯೆಗಳನ್ನು ಮಾಡಿ, ಈ ದಿನ ಏನೂ ಮಾಡಿಲ್ಲವೆಂದು ಹೇಳುತ್ತಿದ್ದೀಯೆ.

ಮಾತಾಪಿತೃಭ್ಯಾಂ ಭೀಷ್ಮೇಣ ದ್ರೋಣೇನ ವಿದುರೇಣ ಚ ।
ಶಾಮ್ಯೇತಿ ಮುಹುರುಕ್ತೋಽಸಿ ನ ಚ ಶಾಮ್ಯಸಿ ಪಾರ್ಥಿವ ॥೧೯॥

ಎಲೈ ರಾಜನೇ, ತಂದೆ-ತಾಯಿಗಳಿಂದ, ಭೀಷ್ಮದ್ರೋಣ ವಿದುರರಿಂದ ಸಂಧಿಯನ್ನು ಮಾಡಿಕೊ ಎಂದು ಮತ್ತೆ ಮತ್ತೆ ಹೇಳಿಸಿಕೊಂಡರೂ ನೀನು ಶಾಂತಿಯನ್ನು ಹೊಂದಿ ಸಂಧಿಯನ್ನು ಮಾಡಿಕೊಳ್ಳುತ್ತಿಲ್ಲ.

ಶಮೇ ಹಿ ಸುಮಹಾನ್ ಲಾಭಸ್ತವ ಪಾರ್ಥಸ್ಯ ಚೋಭಯೋಃ ।
ತತ್ ತೇ ನ ರೋಚತೇ ರಾಜನ್ ಕಿಮನ್ಯದ್ ಬುದ್ಧಿಲಾಘವಾತ್ ॥೨೦॥

ಸಂಧಿಯನ್ನು ಮಾಡಿಕೊಂಡರೆ ನಿನಗೂ ಮತ್ತು ಪಾಂಡವರಿಗೂ ದೊಡ್ಡ ಲಾಭವಿದೆ. ಆದರೆ ಅದು ನಿನಗೆ ಹಿಡಿಸುವುದಿಲ್ಲ. ರಾಜನೇ, ಇದಕ್ಕೆ ನಿನ್ನ ಅಲ್ಪಬುದ್ಧಿಯನ್ನು ಬಿಟ್ಟು ಬೇರೆ ಏನು ಕಾರಣವಿದೆ?

ನ ಶರ್ಮ ಪ್ರಾಪ್ಸ್ಯಸೇ ರಾಜನ್ನುತ್ಕ್ರಮ್ಯ ಸುಹೃದಾಂ ವಚಃ ।
ಅಧರ್ಮ್ಯಮಯಶಸ್ಯಂ ಚ ಕ್ರಿಯತೇ ಪಾರ್ಥಿವ ತ್ವಯಾ ॥೨೧॥

ಎಲೈ ರಾಜನೇ, ಸುಹೃಜ್ಜನರ ಮಾತನ್ನು ಮೀರಿ ನೀನು ಸುಖವನ್ನು ಹೊಂದುವುದಿಲ್ಲ. ಎಲೈ ಪಾರ್ಥಿವನೇ, ನೀನು ಯಾವಾಗಲೂ ಅಧರ್ಮವನ್ನು ಉಂಟುಮಾಡುವ ಅಕೀರ್ತಿಕರವಾದ ಕಾರ್ಯಗಳನ್ನೇ ಮಾಡುತ್ತೀಯೆ.

ಏವಂ ಬ್ರುವತಿ ದಾಶಾರ್ಹೇ ದುರ್ಯೋಧನಮಮರ್ಷಣಮ್ ।
ದುಃಶಾಸನ ಇದಂ ವಾಕ್ಯಮಬ್ರವೀತ್ ಕುರುಸಂಸದಿ ॥೨೨॥

ದಾಶಾರ್ಹನಾದ ಕೃಷ್ಣನು ಕೌರವರ ಸಭೆಯಲ್ಲಿ ರೋಷಾವಿಷ್ಟನಾದ ದುರ್ಯೋಧನನನ್ನು ಕುರಿತು ಹೀಗೆ ಮಾತನಾಡುತ್ತಿರಲು ದುಃಶಾಸನನು ಈ ಮಾತುಗಳನ್ನು ಆಡಿದನು.

ನ ಚೇತ್ ಸಂಧಾಸ್ಯಸೇ ರಾಜನ್ ಸ್ವೇನ ಕಾಮೇನ ಪಾಂಡವೈಃ ।
ಬದ್ಧ್ವಾ ಕಿಲ ತ್ವಾಂ ದಾಸ್ಯಂತಿ ಕುಂತೀಪುತ್ರಾಯ ಕೌರವಾಃ ॥೨೩॥

ಎಲೈ ರಾಜನೇ, ನಿನ್ನ ಸ್ವಂತ ಇಚ್ಛೆಯಿಂದ ನೀನು ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳದಿದ್ದರೆ ಕೌರವರು ನಿನ್ನನ್ನು ಬಂಧಿಸಿ ಧರ್ಮರಾಜನಿಗೆ ಕೊಡುವರು.

ವೈಕರ್ತನಂ ತ್ವಾಂ ಚ ಮಾಂ ಚ ತ್ರೀನೇತಾನ್ ಮನುಜರ್ಷಭ ।
ಪಾಂಡವೇಭ್ಯಃ ಪ್ರದಾಸ್ಯಂತಿ ಭೀಷ್ಮೋ ದ್ರೋಣಃ ಪಿತಾ ಚ ತೇ ॥೨೪॥

ಎಲೈ ಮನುಜರ್ಷಭನೇ, ಭೀಷ್ಮ-ದ್ರೋಣ ಮತ್ತು ನಿನ್ನ ತಂದೆ ಈ ಮೂವರೂ ಸೇರಿ ಕರ್ಣ, ನೀನು ಮತ್ತು ನಾನು ಈ ಮೂವರನ್ನು ಪಾಂಡವರಿಗೆ ಕೊಡುವರು.

ಭ್ರಾತುರೇತದ್ವಚಃ ಶ್ರುತ್ವಾ ಧಾರ್ತರಾಷ್ಟ್ರಃ ಸುಯೋಧನಃ ।
ಕ್ರುದ್ಧಃ ಪ್ರಾತಿಷ್ಠತೋತ್ಥಾಯ ಮಹಾನಾಗ ಇವ ಶ್ವಸನ್ ॥

ವಿದುರಂ ಧೃತರಾಷ್ಟ್ರಂ ಚ ಮಹಾರಾಜಂ ಚ ಬಾಹ್ಲಿಕಮ್ ।
ಕೃಪಂ ಚ ಸೋಮದತ್ತಂ ಚ ಭೀಷ್ಮಂ ದ್ರೋಣಂ ಜನಾರ್ದನಮ್ ॥೨೫॥

ಸರ್ವಾನೇತಾನನಾದೃತ್ಯ ದುರ್ಮತಿರ್ನಿರಪತ್ರಪಃ ।
ಅಶಿಷ್ಟವದಮರ್ಯಾದೋ ಮಾನೀ ಮಾನ್ಯಾವಮಾನಿತಾ ॥೨೬॥

ತಮ್ಮನ ಈ ಮಾತನ್ನು ಕೇಳಿ ಕೋಪಗೊಂಡ ದುರ್ಯೋಧನನು ಮಹಾಸರ್ಪದಂತೆ ಉಸಿರನ್ನು ಬಿಡುತ್ತಾ ವಿದುರನನ್ನೂ, ಧೃತರಾಷ್ಟ್ರನನ್ನೂ, ಮಹಾರಾಜನಾದ ಬಾಹ್ಲಿಕನನ್ನೂ, ಕೃಪರನ್ನೂ, ಸೋಮದತ್ತನನ್ನೂ, ಭೀಷ್ಮ-ದ್ರೋಣ-ಕೃಷ್ಣರನ್ನೂ ಮತ್ತು ಉಳಿದ ಎಲ್ಲರನ್ನೂ ತಿರಸ್ಕರಿಸಿ ಲಜ್ಜಾರಹಿತನೂ, ದುರ್ಬುದ್ಧಿಯುಳ್ಳವನೂ, ಅಹಂಕಾರಿಯೂ, ಗೌರವಕ್ಕೆ ಯೋಗ್ಯರಾದವರನ್ನು ಅವಮಾನ ಮಾಡುವವನೂ, ಅಶಿಷ್ಟರಂತೆ ಮರ್ಯಾದಾ ರಹಿತನೂ ಆದ ಅವನು ಎದ್ದು ಹೊರಗೆ ಹೊರಟನು.

ತಂ ಪ್ರಸ್ಥಿತಮಭಿಪ್ರೇಕ್ಷ್ಯ ಭ್ರಾತರೋ ಭರತರ್ಷಭ ।
ಅನುಜಗ್ಮುಃ ಸಹಾಮಾತ್ಯಾ ರಾಜಾನಶ್ಚಾಪಿ ಸರ್ವಶಃ ॥೨೮॥

ಎಲೈ ಭರತರ್ಷಭನೇ, ಹೊರಗೆ ಹೊರಟ ಅವನನ್ನು ನೋಡಿ ಅವನ ತಮ್ಮಂದಿರೂ, ಮಂತ್ರಿಗಳೂ ಮತ್ತು ಅವನ ಸಹಾಯಕ್ಕೆ ಬಂದಿದ್ದ ಎಲ್ಲಾ ರಾಜರೂ ಅವನನ್ನು ಹಿಂಬಾಲಿಸಿದರು.

ಸಭಾಯಾಮುತ್ಥಿತಂ ಕ್ರುದ್ಧಂ ಪ್ರಸ್ಥಿತಂ ಭ್ರಾತೃಭಿಃ ಸಹ ।
ದುರ್ಯೋಧನಮಭಿಪ್ರೇಕ್ಷ್ಯ ಭೀಷ್ಮಃ ಶಾಂತನವೋಽಬ್ರವೀತ್ ॥೨೯॥

ಸಭೆಯಲ್ಲಿ ಎದ್ದು ಕ್ರುದ್ಧನಾಗಿ ತಮ್ಮಂದಿರ ಜೊತೆಯಲ್ಲಿ ಹೊರಗೆ ಹೊರಟ ದುರ್ಯೋಧನನನ್ನು ನೋಡಿ ಶಂತನು ಪುತ್ರರಾದ ಭೀಷ್ಮರು ಮಾತನಾಡಿದರು.

ಧರ್ಮಾರ್ಥಾವಭಿಸಂತ್ಯಜ್ಯ ಸಂರಂಭಂ ಯೋಽನುಪದ್ಯತೇ ।
ಹಸಂತಿ ವ್ಯಸನೇ ತಸ್ಯ ದುರ್ಹೃದೋ ನಚಿರಾದಿವ ॥೩೦॥

ಯಾವನು ಧರ್ಮಾರ್ಥಗಳನ್ನು ತ್ಯಜಿಸಿ ಕ್ರೋಧವನ್ನೇ ಹೊಂದುತ್ತಾನೆಯೋ ಅವನು ಶೀಘ್ರದಲ್ಲಿಯೇ ಅನರ್ಥಕ್ಕೆ ಸಿಲುಕಿದಾಗ ಅವನ ಶತ್ರುಗಳು ನಗುತ್ತಾರೆ.

ದುರಾತ್ಮಾ ರಾಜಪುತ್ರೋಽಯಂ ಧಾರ್ತರಾಷ್ಟ್ರೋಽನುಪಾಯವಿತ್ ।
ಮಿಥ್ಯಾಭಿಮಾನೀ ರಾಜ್ಯಸ್ಯ ಕ್ರೋಧಲೋಭವಶಾನುಗಃ ॥೩೧॥

ಈ ದುರಾತ್ಮನಾದ ರಾಜಪುತ್ರನಾದ ದುರ್ಯೋಧನನು ಯಾವ ಒಳ್ಳೆಯ ಮಾರ್ಗವನ್ನೂ ಬಲ್ಲವನಲ್ಲ. ಕೆಟ್ಟ ಅಹಂಕಾರವುಳ್ಳವನು. ರಾಜ್ಯದ ಆಸೆಯುಳ್ಳವನು. ಕ್ರೋಧ ಮತ್ತು ಲೋಭಗಳಿಗೆ ವಶನಾಗಿದ್ದಾನೆ.

ಕಾಲಪಕ್ವಮಿದಂ ಮನ್ಯೇ ಸರ್ವಕ್ಷತ್ರಂ ಜನಾರ್ದನ ।
ಸರ್ವೇ ಹ್ಯನುಸೃತಾ ಮೋಹಾತ್ ಪಾತಿತಾಃ ಸಹ ಮಂತ್ರಿಭಿಃ ॥೩೨॥

ಎಲೈ ಜನಾರ್ದನನೇ, ಈ ಎಲ್ಲ ಕ್ಷತ್ರಿಯರೂ ಕಾಲದಿಂದ ಪಕ್ವರಾಗಿದ್ದಾರೆ ಎಂದು ನಾನು ಭಾವಿಸುತ್ತೇನೆ. ಮೋಹದಿಂದ ಅವನನ್ನು ಅನುಸರಿಸಿ ಹೊರಟ ಎಲ್ಲ ರಾಜರೂ ಮತ್ತು ಮಂತ್ರಿಗಳೂ ಪಾತವನ್ನು ಹೊಂದಿದ್ದಾರೆ.

ಭೀಷ್ಮಸ್ಯಾಥ ವಚಃ ಶ್ರುತ್ವಾ ದಾಶಾರ್ಹಃ ಪುಷ್ಕರೇಕ್ಷಣಃ ।
ಭೀಷ್ಮದ್ರೋಣಮುಖಾನ್ ಸರ್ವಾನಭ್ಯಭಾಷತ ವೀರ್ಯವಾನ್ ॥೩೩॥

ಅನಂತರ ಭೀಷ್ಮರ ಮಾತುಗಳನ್ನು ಕೇಳಿ ಕಮಲನಯನನಾದ ಪರಾಕ್ರಮಶಾಲಿಯಾದ ಕೃಷ್ಣನು ಭೀಷ್ಮ-ದ್ರೋಣ ಮೊದಲಾದ ಎಲ್ಲರನ್ನೂ ಕುರಿತು ಮಾತನಾಡಿದನು.

ಸರ್ವೇಷಾಂ ಕುರುವೃದ್ಧಾನಾಂ ಮಹಾನಯಮತಿಕ್ರಮಃ ।
ಪ್ರಸಹ್ಯ ಮಂದಮೈಶ್ವರ್ಯೇ ನ ನಿಯಚ್ಛಂತಿ ಯನ್ನೃಪಮ್ ॥೩೪॥

ಮಂದನಾದ ದುರ್ಯೋಧನನನ್ನು ಬಲಾತ್ಕಾರದಿಂದ ಹಿಡಿದು, ಆ ರಾಜನನ್ನು ಪ್ರಭುತ್ವದ ವಿಷಯದಲ್ಲಿ ನಿಯಂತ್ರಿಸುವುದಿಲ್ಲವಾದ ಕಾರಣ ಎಲ್ಲಾ ಕುರುವೃದ್ಧರಿಗೂ ಈ ದೊಡ್ಡ ಅಪಚಾರವು ತಗಲುತ್ತದೆ.

ತತ್ರ ಕಾರ್ಯಮಹಂ ಮನ್ಯೇ ಪ್ರಾಪ್ತಕಾಲಮರಿಂದಮಾಃ ।
ಕ್ರಿಯಮಾಣೇ ಭವೇಚ್ಛ್ರೇಯಃ ತತ್ ಸರ್ವಂ ಶೃಣುತಾನಘಾಃ ॥೩೫॥

ಎಲೈ ಅರಿಂದಮರೇ, ಇಂತಹ ಸಂದರ್ಭದಲ್ಲಿ ಯಾವುದನ್ನು ಮಾಡಿದರೆ ಉಚಿತವೂ ಮತ್ತು ಶ್ರೇಯಸ್ಸೂ ಆಗುತ್ತದೆ ಎಂದು ನಾನು ತಿಳಿದಿದ್ದೇನೆಯೋ ಅದನ್ನು ಹೇಳುತ್ತೇನೆ, ಎಲೈ ಅನಘರೇ, ನೀವೆಲ್ಲರೂ ಕೇಳಿ.

ಪ್ರತ್ಯಕ್ಷಮೇತದ್ ಭವತಾಂ ಯದ್ ವಕ್ಷ್ಯಾಮಿ ಹಿತಂ ವಚಃ ।
ಭವತಾಮಾನುಕೂಲ್ಯೇನ ಯದಿ ರೋಚೇತ ಭಾರತಾಃ ॥೩೬॥

ಎಲೈ ಭಾರತರೇ, ನಿಮ್ಮ ಎದುರಿಗೇ ನಿಮ್ಮ ಅನುಕೂಲಕ್ಕಾಗಿ ಈ ಹಿತವಾದ ನುಡಿಗಳನ್ನು ಆಡುವೆನು. ನಿಮಗೆ ಅದು ಇಷ್ಟವಾಗುವುದಾದರೆ ಸರಿಯಾದೀತು.

ಭೋಜರಾಜಸ್ಯ ವೃದ್ಧಸ್ಯ ದುರಾಚಾರೋ ಹ್ಯನಾತ್ಮವಾನ್ ।
ಜೀವತಃ ಪಿತುರೈಶ್ವರ್ಯಂ ಹೃತ್ವಾ ಮೃತ್ಯುವಶಂ ಗತಃ ॥೩೭॥

ವೃದ್ಧನಾದ ಭೋಜರಾಜನ ಮಗನಾದ ದುರಾಚಾರಿಯೂ, ಮನೋಜಯರಹಿತನೂ ಆದ ಕಂಸನು ತಂದೆಯು ಬದುಕಿರುವಾಗಲೇ ಪ್ರಭುತ್ವವನ್ನು ಕಿತ್ತುಕೊಂಡು ಮೃತ್ಯುವಶನಾದನು.

ಉಗ್ರಸೇನಸುತಃ ಕಂಸಃ ಪರಿತ್ಯಕ್ತಃ ಸ ಬಾಂಧವೈಃ ।
ಜ್ಞಾತೀನಾಂ ಹಿತಕಾಮೇನ ಮಯಾ ಶಸ್ತೋ ಮಹಾಮೃಧೇ ॥೩೮॥

ಉಗ್ರಸೇನನ ಸುತನಾದ ಆ ಕಂಸನು ಬಾಂಧವರಿಂದ ಪರಿತ್ಯಕ್ತನಾದನು. ಬಂಧುಗಳಿಗೆ ಹಿತವನ್ನು ಮಾಡಲು ಬಯಸಿ ನಾನು ದೊಡ್ಡ ಯುದ್ಧದಲ್ಲಿ ಅವನನ್ನು ಸಂಹರಿಸಿದೆನು.

ಆಹುಕಃ ಪುನರಸ್ಮಾಭಿಃ ಜ್ಞಾತಿಭಿಶ್ಚಾಭಿಸತ್ಕೃತಃ ।
ಉಗ್ರಸೇನಃ ಕೃತೋ ರಾಜಾ ಭೋಜರಾಜನ್ಯವರ್ಧನಃ ॥೩೯॥

ಆಹುಕನು ಪುನಃ ದಾಯಾದಿಗಳಾದ ನಮ್ಮಿಂದ ಗೌರವಿಸಲ್ಪಟ್ಟನು. ಭೋಜರಾಜ ಕುಲವನ್ನು ಅಭಿವೃದ್ಧಿಪಡಿಸುವ ಉಗ್ರಸೇನನನ್ನು ರಾಜನನ್ನಾಗಿ ಮಾಡಿದೆವು.

ಕಂಸಮೇಕಂ ಪರಿತ್ಯಜ್ಯ ಕುಲಾರ್ಥೇ ಸರ್ವಯಾದವಾಃ ।
ಸಂಭೂಯ ಸುಖಮೇಧಂತೇ ಭಾರತಾಂಧಕವೃಷ್ಣಯಃ ॥೪೦॥

ಎಲೈ ಭಾರತನೇ, ಕುಲದ ಕ್ಷೇಮದ ಸಲುವಾಗಿ ಕಂಸನೊಬ್ಬನನ್ನು ಪರಿತ್ಯಜಿಸಿ ಎಲ್ಲ ಯಾದವರೂ, ಅಂಧಕರೂ ಮತ್ತು ವೃಷ್ಣಿಗಳೂ ಒಟ್ಟಿಗೆ ಇದ್ದು ಸುಖವನ್ನು ಪಡೆಯುತ್ತಿದ್ದಾರೆ.

ಅಪಿ ಚಾಪ್ಯವದದ್ ರಾಜನ್ ಪರಮೇಷ್ಠೀ ಪ್ರಜಾಪತಿಃ ।
ವ್ಯೂಢೇ ದೇವಾಸುರೇ ಯುದ್ಧೇಽಭ್ಯುದ್ಯತೇಷ್ವಾಯುಧೇಷು ಚ ॥೪೧॥

ದ್ವೇಧೀಭೂತೇಷು ಲೋಕೇಷು ವಿನಶ್ಯತ್ಸು ಚ ಭಾರತ ।
ಅಬ್ರವೀತ್ ತು ತದಾ ದೇವೋ ಭಗವಾನ್ ಲೋಕಭಾವನಃ ॥೪೨॥

ದೇವಾಸುರ ಯುದ್ಧದಲ್ಲಿ ಸೈನ್ಯವನ್ನು ವ್ಯೂಹ ಮಾಡಿ, ಆಯುಧಗಳನ್ನು ಹಿಡಿದು ಲೋಕವು ಇಬ್ಭಾಗವಾಗಿ ವಿನಾಶದ ಸಮೀಪದಲ್ಲಿದ್ದಾಗ ಎಲೈ ಭಾರತನೇ, ಲೋಕಭಾವನನಾದ, ಪೂಜ್ಯನಾದ ಬ್ರಹ್ಮದೇವನು ಮಾತನಾಡಿದನು.

ಪರಾಭವಿಷ್ಯಂತ್ಯಸುರಾಃ ದೈತೇಯಾ ದಾನವೈಃ ಸಹ ।
ಆದಿತ್ಯಾ ವಸವೋ ರುದ್ರಾ ಭವಿಷ್ಯಂತಿ ದಿವೌಕಸಃ ॥೪೩॥

ದೇವಾಸುರಮನುಷ್ಯಾಶ್ಚ ಗಂಧರ್ವೋರಗರಾಕ್ಷಸಾಃ ।
ಅಸ್ಮಿನ್ ಯುದ್ಧೇ ಸುಸಂಯತ್ತಾ ಭವಿಷ್ಯಂತಿ ಪರಸ್ಪರಮ್ ॥೪೪॥

ಇತಿ ಮತ್ವಾಽಬ್ರವೀದ್ ಧರ್ಮಂ ಪರಮೇಷ್ಠೀ ಪ್ರಜಾಪತಿಃ ॥೪೫॥

ವರುಣಾಯ ಪ್ರಯಚ್ಛೈತಾನ್ ಬದ್ಧ್ವಾ ದೈತೇಯದಾನವಾನ್ ॥೪೬॥

ಅಸುರರೂ, ದೈತ್ಯರೂ ಮತ್ತು ದಾನವರೂ ಪರಾಭವವನ್ನು ಹೊಂದುವರು. ಆದಿತ್ಯರೂ, ವಸುಗಳೂ ಮತ್ತು ರುದ್ರರೂ ಮತ್ತು ಉಳಿದ ದೇವತೆಗಳೂ ಸಮೃದ್ಧಿಯನ್ನು ಹೊಂದುವರು. ದೇವಾಸುರ ಮನುಷ್ಯರೂ, ಗಂಧರ್ವೋರಗರಾಕ್ಷಸರೂ ಈ ಯುದ್ಧದಲ್ಲಿ ಪರಸ್ಪರವಾಗಿ ಬಹಳ ಎಚ್ಚರಿಕೆಯಿಂದ ಸನ್ನದ್ಧರಾಗಿ ಇರುವರು ಎಂದು ತಿಳಿದ ಪ್ರಜಾಪತಿಯಾದ ಬ್ರಹ್ಮದೇವರು ಧರ್ಮನನ್ನು ಕುರಿತು (ಯಮನನ್ನು ಕುರಿತು) ಹೇಳುವವರಾಗಿ ಈ ದೈತ್ಯ-ದಾನವರನ್ನು ಬಂಧಿಸಿ ವರುಣನಿಗೆ ಕೊಟ್ಟುಬಿಡು ಎಂದು ಹೇಳಿದರು.

ಏವಮುಕ್ತಸ್ತತೋ ಧರ್ಮೋ ನಿಯೋಗಾದ್ ಪರಮೇಷ್ಠಿನಃ ।
ವರುಣಾಯ ದದೌ ಸರ್ವಾನ್ ಬದ್ಧ್ವಾ ದೈತೇಯದಾನವಾನ್ ॥೪೭॥

ಹೀಗೆ ಹೇಳಲ್ಪಟ್ಟ ಯಮಧರ್ಮನು ಬ್ರಹ್ಮದೇವರ ಅಪ್ಪಣೆಯಂತೆ ದೈತ್ಯ-ದಾನವರನ್ನು ಬಂಧಿಸಿ ಅವರೆಲ್ಲರನ್ನೂ ವರುಣನಿಗೆ ನೀಡಿದನು.

ತಾನ್ ಬದ್ಧ್ವಾ ಧರ್ಮಪಾಶೈಶ್ಚ ಸ್ಪೃಶ್ಚ ಪಾಶೈರ್ಜಲೇಶ್ವರಃ ।
ವರುಣಃ ಸಾಗರೇ ಯತ್ತೋ ನಿತ್ಯಂ ರಕ್ಷತಿ ದಾನವಾನ್ ॥೪೮॥

ವರುಣನು ಅವರೆಲ್ಲರನ್ನೂ ಧರ್ಮಪಾಶಗಳಿಂದಲೂ ಮತ್ತು ತನ್ನ ಪಾಶಗಳಿಂದಲೂ ಬಿಗಿದು ಸಮುದ್ರದಲ್ಲಿ ಹಾಕಿ ಎಚ್ಚರಿಕೆಯಿಂದ ಯಾವಾಗಲೂ ಆ ದಾನವರನ್ನು ರಕ್ಷಿಸುತ್ತಿದ್ದಾನೆ.

ತಥಾ ದುರ್ಯೋಧನಂ ಕರ್ಣಂ ಶಕುನಿಂ ಚಾಪಿ ಸೌಬಲಮ್ ।
ಬದ್ಧ್ವಾ ದುಃಶಾಸನಂ ಚಾಪಿ ಪಾಂಡವೇಭ್ಯಃ ಪ್ರಯಚ್ಛತ ॥೪೯॥

ಅದರಂತೆ ದುರ್ಯೋಧನ, ಕರ್ಣ ಮತ್ತು ಸೌಬಲನಾದ ಶಕುನಿ ಮತ್ತು ದುಃಶಾಸನ ಇವರನ್ನು ಬಂಧಿಸಿ ಪಾಂಡವರಿಗೆ ಕೊಟ್ಟುಬಿಡು.

ತ್ಯಜೇತ್ ಕುಲಾರ್ಥೇ ಪುರುಷಂ ಗ್ರಾಮಸ್ಯಾರ್ಥೇ ಕುಲಂ ತ್ಯಜೇತ್ ।
ಗ್ರಾಮಂ ಜನಪದಸ್ಯಾರ್ಥೇ ಆತ್ಮಾರ್ಥೇ ಪೃಥಿವೀಂ ತ್ಯಜೇತ್ ॥೫೦॥

ಒಂದು ಕುಲದ ಸಲುವಾಗಿ ಒಬ್ಬ ಪುರುಷನನ್ನು ತ್ಯಜಿಸಬೇಕು. ಗ್ರಾಮದ ಸಲುವಾಗಿ ಒಂದು ಕುಲವನ್ನು ತ್ಯಜಿಸಬೇಕು. ರಾಜ್ಯದ ಸಲುವಾಗಿ ಒಂದು ಗ್ರಾಮವನ್ನು ತ್ಯಜಿಸಬೇಕು. ತನ್ನ ಸಲುವಾಗಿ ಸಮಗ್ರವಾದ ಭೂಮಿಯನ್ನೇ ತ್ಯಜಿಸಬೇಕು.

ತಸ್ಮಾದ್ ದುರ್ಯೋಧನಂ ಬದ್ಧ್ವಾ ತತಃ ಸಂಶಾಮ್ಯ ಪಾಂಡವೈಃ ।
ತ್ವತ್ಕೃತೇ ನ ವಿನಶ್ಯೇಯುಃ ಕ್ಷತ್ರಿಯಾಃ ಕ್ಷತ್ರಿಯರ್ಷಭ ॥೫೧॥

ಆದ್ದರಿಂದ ದುರ್ಯೋಧನನನ್ನು ಬಂಧಿಸಿ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ. ಎಲೈ ಕ್ಷತ್ರಿಯರ್ಷಭನೇ, ನಿನ್ನ ನಿಮಿತ್ತದಿಂದಾಗಿ ಕ್ಷತ್ರಿಯರು ನಾಶವನ್ನು ಹೊಂದುವುದು ಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತವಿಂಶೋತ್ತಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಇಪ್ಪತ್ತೆಂಟನೆಯ ಅಧ್ಯಾಯ

ದುರ್ಯೋಧನನಿಗೆ ಗಾಂಧಾರಿಯ ಉಪದೇಶ

ವೈಶಂಪಾಯನಃ

ಕೃಷ್ಣಸ್ಯ ತು ವಚಃ ಶ್ರುತ್ವಾ ಧೃತರಾಷ್ಟ್ರೋ ಜನೇಶ್ವರಃ ।
ವಿದುರಂ ಸರ್ವಧರ್ಮಜ್ಞಂ ತ್ವರಮಾಣೋಽಭ್ಯಭಾಷತ ॥೧॥

ವೈಶಂಪಾಯನ– ಕೃಷ್ಣನ ಮಾತುಗಳನ್ನು ಕೇಳಿ ರಾಜನಾದ ಧೃತರಾಷ್ಟ್ರನು ಸರ್ವಧರ್ಮವನ್ನು ತಿಳಿದ ವಿದುರನನ್ನುಕುರಿತು ಶೀಘ್ರವಾಗಿ ಮಾತನಾಡಿದನು.

ಗಚ್ಛ ತಾತ ಮಹಾಪ್ರಾಜ್ಞ ಗಾಂಧಾರೀಂ ದೀರ್ಘದರ್ಶಿನೀಮ್ ।
ಆನಯೇಹ ತಯಾ ಸಾರ್ಧಮನುನೇಷ್ಯಾಮಿ ದುರ್ಮತಿಮ್ ॥೨॥

ಎಲೈ ಪ್ರೀತಿಪಾತ್ರನಾದ ಮಹಾಪ್ರಾಜ್ಞನೇ, ಹೋಗಿ ದೀರ್ಘದೃಷ್ಟಿಯುಳ್ಳ ಗಾಂಧಾರಿಯನ್ನು ಇಲ್ಲಿಗೆ ಕರೆದುಕೊಂಡು ಬಾ. ಅವಳ ಜೊತೆಯಲ್ಲಿ ದುರ್ಮತಿಯಾದ ದುರ್ಯೋಧನನನ್ನು ಶಾಂತಗೊಳಿಸುವೆನು.

ಯದಿ ಸಾ ನ ದುರಾತ್ಮಾನಂ ಶಮಯೇದ್ ದುಷ್ಟಚೇತಸಮ್ ।
ಅಪಿ ಕೃಷ್ಣಸ್ಯ ಸುಹೃದಃ ತಿಷ್ಠೇಮ ವಚನೇ ವಯಮ್ ॥೩॥

ಒಂದು ಪಕ್ಷ ಅವಳು ದುರಾತ್ಮನೂ, ದುಷ್ಟಚೇತನನೂ ಆದ ದುರ್ಯೋಧನನನ್ನು ಸಮಾಧಾನಗೊಳಿಸದಿದ್ದರೆ ನಾವಾದರೂ ಹಿತೈಷಿಯಾದ ಕೃಷ್ಣನ ಮಾತಿನಂತೆ ನಡೆದುಕೊಳ್ಳೋಣ.

ಅಪಿ ಲೋಭಾಭಿಭೂತಸ್ಯ ಪಂಥಾನಮನುದರ್ಶಯೇತ್ ।
ದುರ್ಬುದ್ಧೇಃ ದುಸ್ಸಹಾಯಸ್ಯ ಸಮಕ್ಷಂ ಬ್ರುವತೀ ವಚಃ ॥೪॥

ಪ್ರತ್ಯಕ್ಷವಾಗಿ ಮಾತನಾಡುತ್ತಾ ಗಾಂಧಾರಿಯು ದುರ್ಬುದ್ಧಿಯೂ, ದುಷ್ಟ ಸಹಾಯವುಳ್ಳವನೂ, ಲೋಭದಿಂದ ಕೂಡಿದವನೂ ಆದ ಅವನಿಗೆ ಸರಿಯಾದ ದಾರಿಯನ್ನು ತೋರಿಸಿಯಾಳು.

ಅಪಿ ನೋ ವ್ಯಸನಂ ಘೋರಂ ದುರ್ಯೋಧನಕೃತಂ ಮಹತ್ ।
ಶಮಯೇಚ್ಚಿರರಾತ್ರಾಯ ಯೋಗಕ್ಷೇಮವದವ್ಯಯಮ್ ॥೫॥

ನಮಗೆ ದುರ್ಯೋಧನನಿಂದ ಉಂಟಾದ ಘೋರಸಂಕಟವು ಶಮನವನ್ನು ಹೊಂದಿ, ಶಾಶ್ವತವಾದ ಯೋಗಕ್ಷೇಮವು ಉಂಟಾದೀತು (ಎಂದು ಹೇಳಿದನು).

ರಾಜ್ಞಸ್ತು ವಚನಂ ಶ್ರುತ್ವಾ ವಿದುರೋ ದೀರ್ಘದರ್ಶಿನೀಮ್ ।
ಆನಯಾಮಾಸ ಗಾಂಧಾರೀಂ ಧೃತರಾಷ್ಟ್ರಸ್ಯ ಶಾಸನಾತ್ ॥೬॥

ರಾಜನ ಮಾತುಗಳನ್ನು ಕೇಳಿ ವಿದುರನು ಧೃತರಾಷ್ಟ್ರನ ಅಪ್ಪಣೆಯಂತೆ ದೀರ್ಘದರ್ಶಿನಿಯಾದ ಗಾಂಧಾರಿಯನ್ನು ಕರೆತಂದನು.

ಧೃತರಾಷ್ಟ್ರ

ಏಷ ಗಾಂಧಾರಿ ಪುತ್ರಸ್ತೇ ದುರಾತ್ಮಾ ಶಾಸನಾತಿಗಃ ।
ಐಶ್ವರ್ಯಲೋಭಾದೈಶ್ವರ್ಯಂ ಜೀವಿತಂ ಚ ಪ್ರಹಾಸ್ಯತಿ ॥೭॥

ಧೃತರಾಷ್ಟ್ರ– ಎಲೌ ಗಾಂಧಾರಿಯೇ, ಈ ನಿನ್ನ ದುಷ್ಟನೂ, ದೊಡ್ಡವರ ಶಾಸನವನ್ನು ಮೀರುವವನೂ ಆದ ಪುತ್ರನು ಐಶ್ವರ್ಯಲೋಭದಿಂದ ಐಶ್ವರ್ಯವನ್ನೂ ಮತ್ತು ಜೀವಿತವನ್ನೂ ತೊರೆಯುವನು.

ಅಶಿಷ್ಟವದಮರ್ಯಾದಃ ಪಾಪೈಃ ಸಹ ದುರಾತ್ಮಭಿಃ ।
ಸಭಾಯಾ ನಿರ್ಗತೋ ಮೂಢೋ ವ್ಯತಿಕ್ರಮ್ಯ ಸುಹೃದ್ವಚಃ ॥೮॥

ಅಶಿಷ್ಟರಂತೆ ಮರ್ಯಾದಾಹೀನನಾಗಿ ಮೂಢನಾದ ಅವನು ಸುಹೃಜ್ಜನರ ಮಾತುಗಳನ್ನು ಮೀರಿ ದುಷ್ಟರ ಜೊತೆಯಲ್ಲಿ ಸಭೆಯಿಂದ ಹೊರಗೆ ಹೋಗಿದ್ದಾನೆ.

ವೈಶಂಪಾಯನಃ

ಸಾ ಭರ್ತೃವಚನಂ ಶ್ರುತ್ವಾ ರಾಜಪುತ್ರೀ ಯಶಸ್ವಿನೀ ।
ಅನಿಚ್ಛಂತೀ ಮಹಚ್ಛ್ರೇಯೋ ಗಾಂಧಾರೀ ವಾಕ್ಯಮಬ್ರವೀತ್ ॥೯॥

ವೈಶಂಪಾಯನ– ಪತಿಯ ಮಾತುಗಳನ್ನು ಕೇಳಿದ ಯಶಸ್ವಿನಿಯಾದ, ರಾಜಪುತ್ರಿಯಾದ ಗಾಂಧಾರಿಯು ದೊಡ್ಡ ಶ್ರೇಯಸ್ಸನ್ನು ಬಯಸುವವಳಾಗಿ ಮಾತನಾಡಿದಳು.

ಆನಯೈನಂ ಸುತಂ ಕ್ಷಿಪ್ರಂ ರಾಜ್ಯಕಾಮುಕಮಾತುರಮ್ ॥೧೦॥

ನ ಹಿ ರಾಜ್ಯಮಶಿಷ್ಟೇನ ಶಕ್ಯಂ ಧರ್ಮಾರ್ಥಲೋಪಿನಾ ।
ಆಪ್ತುಮಾಪ್ತಂ ಯಥಾऽಪೀದಮವಿನೀತೇನ ಸರ್ವಥಾ ॥೧೧॥

ರಾಜ್ಯಕಾಮುಕನೂ, ಸಜ್ಜನರ ದ್ವೇಷವೆಂಬ ರೋಗಗ್ರಸ್ತನೂ ಆದ ಈ ನನ್ನ ಪುತ್ರನನ್ನು ಕರೆಸು. ಅಶಿಷ್ಟನಾದವನೂ ಮತ್ತು ಧರ್ಮಾರ್ಥಗಳನ್ನು ತ್ಯಜಿಸುವವನೂ ಆದ ವ್ಯಕ್ತಿಯಿಂದ ರಾಜ್ಯವನ್ನು ಹೊಂದಲು ಸಾಧ್ಯವಿಲ್ಲ. ಆದರೂ ಸರ್ವಥಾ ಅವಿನೀತನಾದ ಅವನು ಈ ರಾಜ್ಯವನ್ನು ಹೊಂದಿದನು.

ತ್ವಮೇವಾತ್ರ ಭೃಶಂ ಗರ್ಹ್ಯೋ ಧೃತರಾಷ್ಟ್ರ ಸುತಪ್ರಿಯಃ ।
ಯೋ ಜಾನನ್ ಪಾಪತಾಮಸ್ಯ ತತ್ಪ್ರಜ್ಞಾಮನುವರ್ತಸೇ ॥೧೨॥

ಎಲೈ ಧೃತರಾಷ್ಟ್ರನೇ, ಅವನ ಪಾಪತ್ವವನ್ನು ತಿಳಿದಿದ್ದರೂ ಅವನ ಬುದ್ಧಿಯನ್ನೇ ಅನುಸರಿಸುವ ಸುತಪ್ರಿಯನಾದ ನೀನೇ ವಿಶೇಷವಾಗಿ ನಿಂದನೀಯನಾದವನು.

ಸ ಏಷ ಕಾಮಮನ್ಯುಭ್ಯಾಂ ಪ್ರಲಬ್ಧೋ ಮೋಹಮಾಸ್ಥಿತಃ ।
ಅಶಕ್ಯೋऽದ್ಯ ತ್ವಯಾ ರಾಜನ್ ವಿನಿವರ್ತಯಿತುಂ ಬಲಾತ್ ॥೧೩॥

ಎಲೈ ರಾಜನೇ, ಅಂತಹ ಈ ಯಾವ ದುರ್ಯೋಧನನು ಕಾಮ-ಕ್ರೋಧಗಳಿಂದ ಪ್ರಲೋಭಕ್ಕೆ ಒಳಗಾಗಿ ಮೋಹವನ್ನು ಹೊಂದಿದ್ದಾನೆಯೋ ಅವನನ್ನು ನೀನು ಈ ದಿನ ನಿನ್ನ ಬಲದಿಂದ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ.

ರಾಷ್ಟ್ರಪ್ರದಾನೇ ಮೂಢಸ್ಯ ಬಾಲಿಶಸ್ಯ ದುರಾತ್ಮನಃ ।
ದುರ್ಯೋಧನಸ್ಯ ಲುಬ್ಧಸ್ಯ ಧೃತರಾಷ್ಟ್ರೋऽಶ್ನುತೇ ಫಲಮ್ ॥೧೪॥

ದುರಾತ್ಮನೂ, ಬಾಲಿಶನೂ, ಮೂಢನೂ, ಲೋಭಿಯೂ ಆದ ದುರ್ಯೋಧನನಿಗೆ ರಾಷ್ಟ್ರವನ್ನು ಕೊಟ್ಟುದರ ಫಲವನ್ನು ಈ ದಿನ ಧೃತರಾಷ್ಟ್ರನು ಅನುಭವಿಸುತ್ತಾನೆ.

ಕಥಂ ಹಿ ಸ್ವಜನೇ ಭೇದಮುಪೇಕ್ಷೇತ ಮಹೀಪತಿಃ ।
ಭಿನ್ನಂ ಹಿ ಸ್ವಜನೇನ ತ್ವಾಂ ಪ್ರಹಸಿಷ್ಯಂತಿ ಶತ್ರವಃ ॥೧೫॥

ರಾಜನಾದವನು ಸ್ವಜನರಲ್ಲಿ ವಿರೋಧವನ್ನು ಹೇಗೆ ಉದಾಸೀನ ಮಾಡಿಯಾನು? ಸ್ವಜನರ ವಿರೋಧವನ್ನು ಸಂಪಾದಿಸಿದ ನಿನ್ನನ್ನು ಶತ್ರುಗಳು ಅಪಹಾಸ ಮಾಡುವರು.

ಯೋ ಹಿ ಶಕ್ಯೋ ಮಹಾರಾಜ ಸಾಮ್ನಾ ಭೇದೇನ ವಾ ಪುನಃ ।
ನಿಸ್ತರ್ತುಮಾಪದಃ ಸ್ವೇಷು ದಂಡಂ ಕಸ್ತತ್ರ ಪಾತಯೇತ್ ॥೧೬॥

ಎಲೈ ಮಹಾರಾಜನೇ, ಯಾವ ಆಪತ್ತನ್ನು ಸಾಮಭೇದೋಪಾಯಗಳಿಂದ ದಾಟಲು ಸಾಧ್ಯವೋ ಅಂತಹ ಆಪತ್ತು ಒದಗಿದಾಗ ಅದನ್ನು ದಾಟಲು ಯಾವನು ತನ್ನವರಲ್ಲಿಯೇ ದಂಡವನ್ನು ವಿಧಿಸಿಯಾನು?

ವೈಶಂಪಾಯನಃ

ಶಾಸನಾದ್ ಧೃತರಾಷ್ಟ್ರಸ್ಯ ದುರ್ಯೋಧನಮಮರ್ಷಣಮ್ ।
ಮಾತುಶ್ಚ ವಚನಾದ್ ಕ್ಷತ್ತಾ ಸಭಾಂ ಪ್ರಾವೇಶಯತ್ ಪುನಃ ॥೧೭॥

ವೈಶಂಪಾಯನ– ಧೃತರಾಷ್ಟ್ರನ ಶಾಸನದಂತೆ ಮತ್ತು ತಾಯಿಯಾದ ಗಾಂಧಾರಿಯ ವಚನದಂತೆ ಕೋಪಶೀಲನಾದ ದುರ್ಯೋಧನನನ್ನು ವಿದುರನು ಪುನಃ ಸಭೆಗೆ ಕರೆತಂದನು.

ಸ ಮಾತುರ್ವಚನಾಕಾಂಕ್ಷೀ ಪ್ರವಿವೇಶ ಪುನಃ ಸಭಾಮ್ ।
ಅತಿತಾಮ್ರೇಕ್ಷಣಃ ಕ್ರೋಧಾನ್ನಿಃಶ್ವಸನ್ನಿವ ಪನ್ನಗಃ ॥೧೮॥

ತಾಯಿಯ ಮಾತನ್ನು ಕೇಳುವ ಆಕಾಂಕ್ಷೆಯಿಂದ ಬಹಳ ಕೆಂಪಾದ ಕಣ್ಣುಳ್ಳವನೂ, ಕ್ರೋಧದಿಂದ ಸರ್ಪದಂತೆ ಉಸಿರಾಡುತ್ತಿದ್ದವನೂ ಆದ ದುರ್ಯೋಧನನು ಪುನಃ ಸಭೆಗೆ ಬಂದನು.

ತಂ ಪ್ರವಿಷ್ಟಮಭಿಪ್ರೇಕ್ಷ್ಯ ಪುತ್ರಮುತ್ಪಥಮಾಸ್ಥಿತಮ್ ।
ವಿಗರ್ಹಮಾಣಾ ಗಾಂಧಾರೀ ಶಮಾರ್ಥಂ ವಾಕ್ಯಮಬ್ರವೀತ್ ॥೧೯॥

ಸಭೆಯನ್ನು ಪ್ರವೇಶಿಸಿದ ಉನ್ಮಾರ್ಗಗಾಮಿಯಾದ ಪುತ್ರನನ್ನು ನೋಡಿ ಗಾಂಧಾರಿಯು ಅವನನ್ನು ನಿಂದಿಸುತ್ತಾ ಶಾಂತಿಯ ಸಲುವಾಗಿ ಮಾತನಾಡಿದಳು.

ದುರ್ಯೋಧನ ನಿಬೋಧೇದಂ ವಚನಂ ಮಮ ಪುತ್ರಕ ।
ಹಿತಂ ತೇ ಸಾನುಬಂಧಸ್ಯ ತಥಾऽऽಯತ್ಯಾಂ ಸುಖೋದಯಮ್॥೨೦॥

ಎಲೈ ಪ್ರೀತಿಯ ಪುತ್ರನಾದ ದುರ್ಯೋಧನನೇ, ನಿನಗೂ ಮತ್ತು ನಿನ್ನ ಪರಿವಾರಕ್ಕೂ ಹಿತವಾದ ದೀರ್ಘಕಾಲದಲ್ಲಿ ಸುಖವನ್ನು ಸಂಪಾದಿಸುವ ಈ ನನ್ನ ಮಾತುಗಳನ್ನು ಕೇಳು.

ದುರ್ಯೋಧನ ಯದಾಹ ತ್ವಾಂ ಪಿತಾ ಭರತಸತ್ತಮಃ ।
ಭೀಷ್ಮೋ ದ್ರೋಣಃ ಕೃಪಃ ಕ್ಷತ್ತಾ ಸುಹೃದಾಂ ಕುರು ತದ್ವಚಃ ॥೨೧॥

ದುರ್ಯೋಧನನೇ, ನಿನಗೆ ಭರತಶ್ರೇಷ್ಠನಾದ ತಂದೆಯೂ, ಭೀಷ್ಮದ್ರೋಣಕೃಪರೂ ಮತ್ತು ವಿದುರನೂ ಏನು ಹೇಳಿದರೋ ಅಂತಹ ಸುಹೃಜ್ಜನರ ಮಾತನ್ನು ನಡೆಸು.

ಭೀಷ್ಮಸ್ಯ ತು ಪಿತುಶ್ಚೈವ ಮಮ ಚಾಪಚಿತಿಃ ಕೃತಾ ।
ಭವೇದ್ ದ್ರೋಣಮುಖಾನಾಂ ಚ ಸುಹೃದಾಂ ಶಾಮ್ಯತಾ ತ್ವಯಾ ॥

ನೀನು ಶಾಂತನಾದರೆ ಭೀಷ್ಮರಿಗೂ, ದ್ರೋಣರಿಗೂ ಮತ್ತು ನನಗೂ ಮತ್ತು ಸುಹೃಜ್ಜನರಿಗೂ ಪೂಜೆಯನ್ನು ಮಾಡಿದಂತಾಗುತ್ತದೆ.

ನ ಹಿ ರಾಜ್ಯಂ ಮಹಾಪ್ರಾಜ್ಞ ಸ್ವೇನ ಕಾಮೇನ ಶಕ್ಯತೇ ।
ಅವಾಪ್ತುಂ ರಕ್ಷಿತುಂ ವಾऽಪಿ ಭೋಕ್ತುಂ ಭರತಸತ್ತಮ ॥೨೩॥

ಎಲೈ ಭರತಸತ್ತಮನೇ, ಮಹಾಪ್ರಾಜ್ಞನೇ, ತನ್ನ ಇಚ್ಛೆಯಿಂದ ರಾಜ್ಯವನ್ನು ಪಡೆಯಲು ಅಥವಾ ರಕ್ಷಿಸಲು ಅಥವಾ ಭೋಗಿಸಲು ಸಾಧ್ಯವಿಲ್ಲ.

ನ ಹ್ಯವಶ್ಯೇಂದ್ರಿಯೋ ರಾಜ್ಯಮಶ್ನೀಯಾದ್ ದೀರ್ಘಮಂತರಮ್ ।
ವಿಜಿತಾತ್ಮಾ ತು ಮೇಧಾವೀ ಸ ರಾಜ್ಯಮಭಿಪಾಲಯೇತ್ ॥೨೪॥

ಜಿತೇಂದ್ರಿಯನಲ್ಲದವನು ದೀರ್ಘಕಾಲದವರೆಗೆ ರಾಜ್ಯವನ್ನು ಭೋಗಿಸಲಾರ. ಮನೋಜಯವುಳ್ಳ ಮೇಧಾವಿಯು ಮಾತ್ರ ರಾಜ್ಯವನ್ನು ಪಾಲಿಸಿಯಾನು.

ಕಾಮಕ್ರೋಧೌ ಹಿ ಪುರುಷಮರ್ಥೇಭ್ಯೋ ವ್ಯಪಕರ್ಷತಃ ।
ತೌ ತು ಶತ್ರೂ ವಿನಿರ್ಜಿತ್ಯ ರಾಜಾ ವಿಜಯತೇ ಮಹೀಮ್ ॥೨೫॥

ಕಾಮ-ಕ್ರೋಧಗಳು ಪುರುಷನನ್ನು ಅರ್ಥದಿಂದ ದೂರಸೆಳೆಯುತ್ತವೆ. ಶತ್ರುಗಳಾದ ಅವೆರಡನ್ನು ಜಯಿಸಿ ರಾಜನು ಭೂಮಿಯನ್ನು ಜಯಿಸುತ್ತಾನೆ.

ಲೋಕೇಶ್ವರಾಭಿಭೂತಂ ಹಿ ಮಹದೇತದ್ ದುರಾತ್ಮಭಿಃ ।
ರಾಜ್ಯಂ ನಾಮೇಪ್ಸಿತಂ ಸ್ಥಾನಂ ನ ಶಕ್ಯಮಭಿರಕ್ಷಿತುಮ್ ॥೨೬॥

ಲೋಕೇಶ್ವರರ ಅವಕೃಪೆಗೆ ಪಾತ್ರವಾದ ಈ ದೊಡ್ಡ ರಾಜ್ಯವು ಮತ್ತು ರಾಜನ ಸ್ಥಾನವು ದುಷ್ಟಾತ್ಮರಿಂದ ರಕ್ಷಿಸಲ್ಪಡಲು ಸಾಧ್ಯವಿಲ್ಲ.

ಇಂದ್ರಿಯಾಣಿ ಮಹತ್ ಪ್ರೇಪ್ಸುರ್ನಿಯಚ್ಛೇದರ್ಥಧರ್ಮಯೋಃ ।
ಇಂದ್ರಿಯೈರ್ನಿಯತೈರ್ಬುದ್ಧಿರ್ವರ್ಧತೇಽಗ್ನಿರಿವೇಂಧನೈಃ ॥೨೭॥

ದೊಡ್ಡದನ್ನು ಸಂಪಾದಿಸಲು ಬಯಸುವವನು ಇಂದ್ರಿಯಗಳನ್ನು ಅರ್ಥಗಳಲ್ಲಿ ನಿಯಂತ್ರಿಸಬೇಕು. ಇಂದ್ರಿಯಗಳನ್ನು ನಿಯಂತ್ರಿಸಿದರೆ ಕಟ್ಟಿಗೆಗಳಿಂದ ಅಗ್ನಿಯು ಬೆಳೆದಂತೆ ಬುದ್ಧಿಯು ಅಭಿವೃದ್ಧಿಯನ್ನು ಹೊಂದುತ್ತದೆ.

ಅವಿಧೇಯಾನಿ ಹೀಮಾನಿ ವ್ಯಾಪಾದಯಿತುಮಪ್ಯಲಮ್ ।
ಅವಿಧೇಯಾ ಇವಾದಾಂತಾ ಹಯಾಃ ಪಥಿಷು ಸಾರಥಿಮ್ ॥೨೮॥

ಅವಿಧೇಯವಾದ ಅಶ್ವಗಳು ದಾರಿಯಲ್ಲಿ ಸಾರಥಿಯನ್ನು ಕೊಲ್ಲುವಂತೆ, ಅವಿಧೇಯವಾದ ಈ ಇಂದ್ರಿಯಗಳು ಪುರುಷನನ್ನು ಕೊಲ್ಲಲೂ ಸಮರ್ಥವಾಗಿವೆ.

ಅವಿಜಿತ್ಯ ಯ ಆತ್ಮಾನಮಮಾತ್ಯಾನ್ ವಿಜಿಗೀಷತೇ ।
ಅಜಿತಾತ್ಮಾಽಜಿತಾಮಾತ್ಯಃ ಸೋಽವಶಃ ಪರಿಹೀಯತೇ ॥೨೯॥

ಯಾವನು ತನ್ನನ್ನು ಗೆಲ್ಲದೇ ಅಮಾತ್ಯರನ್ನು ಗೆಲ್ಲಲು ಬಯಸುತ್ತಾನೋ ಅಜಿತಾತ್ಮನಾದ ಅವನು ಅಮಾತ್ಯರನ್ನು ಗೆಲ್ಲಲು ಸಾಧ್ಯವಾಗದೇ ಅವಶನಾಗಿ ಕ್ಷಯವನ್ನು ಹೊಂದುತ್ತಾನೆ.

ಆತ್ಮಾನಮೇವ ಪ್ರಥಮಂ ದ್ವೇಷ್ಯರೂಪೇಣ ಯೋಜಯೇತ್ ।
ತತೋಽಮಾತ್ಯಾನಮಿತ್ರಾಂಶ್ಚ ನ ಮೋಘಂ ವಿಜಿಗೀಷತೇ ॥೩೦॥

ಕಷ್ಟಸಾಧ್ಯವಾದ ಕಾರ್ಯಗಳಲ್ಲಿ ಮೊದಲು ತನ್ನನ್ನೇ ವಿನಿಯೋಗಿಸಿಕೊಳ್ಳಬೇಕು. ಅನಂತರ ಅಮಾತ್ಯರನ್ನು ಮತ್ತು ಶತ್ರುಗಳನ್ನು ವಿನಿಯೋಗಿಸಬೇಕು. ಅಂತಹವನ ಜಯದ ಆಸೆಯು ವ್ಯರ್ಥವಾಗುವುದಿಲ್ಲ.

ವಶ್ಯೇಂದ್ರಿಯಂ ಜಿತಾಮಾತ್ಯಂ ಧೃತದಂಡಂ ವಿಕಾರಿಷು ।
ಪರೀಕ್ಷ್ಯಕಾರಿಣಂ ವೀರಮತ್ಯರ್ಥಂ ಶ್ರೀರ್ನಿಷೇವತೇ ॥೩೧॥

ಇಂದ್ರಿಯ ಜಯವುಳ್ಳ, ಅಮಾತ್ಯರನ್ನು ಜಯಿಸಿದ, ದುಷ್ಟರಲ್ಲಿ ದಂಡವನ್ನು ಪ್ರಯೋಗಿಸುವ, ವಿಚಾರ ಮಾಡಿ ಎಲ್ಲ ಕಾರ್ಯಗಳನ್ನು ಮಾಡುವ ವೀರನನ್ನು ಸಂಪತ್ತು ಬಹಳವಾಗಿ ಸೇವಿಸುತ್ತದೆ.

ಕ್ಷುದ್ರಾಕ್ಷೇಣೇವ ಜಾಲೇನ ರುಷಾವಪಿಹಿತಾವುಭೌ ।
ಕಾಮಕ್ರೋಧೌ ಶರೀರಸ್ಥೌ ಪ್ರಜ್ಞಾನಂ ತೌ ವಿಲುಂಪತಃ ॥೩೨॥

ಅಲ್ಪವಾದ ಶಂಕುಗಳಿರುವ ಬಲೆಯಿಂದ ಕಾಮ-ಕ್ರೋಧಗಳೆಂಬ ಎರಡು ಮೀನುಗಳು ಮುಚ್ಚಲ್ಪಟ್ಟಿವೆ. ಮೀನುಗಳು ಆ ಬಲೆಯನ್ನೂ ಹರಿದಂತೆ ಶರೀರದಲ್ಲಿರುವ ಕಾಮ-ಕ್ರೋಧಗಳು ಪ್ರಜ್ಞೆಯನ್ನೇ ನಾಶಮಾಡುತ್ತವೆ.

ಯಾಭ್ಯಾಂ ಹಿ ದೇವಾಃ ಸ್ವರ್ಯಾತುಃ ಸ್ವರ್ಗಸ್ಯಾಪಿದಧುರ್ಮುಖಮ್ ।
ಬಿಭ್ಯತೋಽನುಪರಾಗಸ್ಯ ಕಾಮಕ್ರೋಧೌ ಸ್ಮ ವರ್ಧಿತೌ ॥೩೩॥

ಯಾವ ಕಾಮ-ಕ್ರೋಧಗಳನ್ನು ನೋಡಿ ಅದರ ಜೊತೆಯಲ್ಲಿ ಬರುವ ಮನುಷ್ಯರಿಗೆ ದೇವತೆಗಳು ಸ್ವರ್ಗದ ಬಾಗಿಲನ್ನೇ ಮುಚ್ಚಿದರೋ ಅಂತಹ ಕಾಮ-ಕ್ರೋಧಗಳು ವಿಷಯ ಸೇವನೆಯಿಂದ ಅಭಿವೃದ್ಧಿಯನ್ನು ಹೊಂದಿದ್ದರೂ ವಿಷಯಾಭಿಲಾಷೆ ಇಲ್ಲದ ಮನುಷ್ಯನಿಗೆ ತಾವೇ ಹೆದರುತ್ತವೆ.

ಕಾಮಂ ಕ್ರೋಧಂ ಚ ಲೋಭಂ ಚ ಡಂಭಂ ದರ್ಪಂ ಚ ಭೂಮಿಪ ।
ಸಮ್ಯಗ್ ವಿಜೇತುಂ ಯೋ ವೇದ ಸ ಮಹೀಮಭಿಜಾನತೇ ॥೩೪॥

ಎಲೈ ರಾಜನೇ, ಕಾಮ, ಕ್ರೋಧ, ಲೋಭ, ಡಂಭ ಮತ್ತು ದರ್ಪಗಳನ್ನು ಯಾವನು ಸರಿಯಾಗಿ ಜಯಿಸಲು ತಿಳಿದಿದ್ದಾನೆಯೋ ಅವನೇ ಭೂಮಿಯನ್ನು ಪಡೆಯುತ್ತಾನೆ.

ಸತತಂ ನಿಗ್ರಹೇ ಯುಕ್ತ ಇಂದ್ರಿಯಾಣಾಂ ಭವೇನ್ನೃಪಃ ।
ಈಪ್ಸನ್ನರ್ಥಂ ಚ ಧರ್ಮಂ ಚ ದ್ವಿಷತಾಂ ಚ ಪರಾಭವಮ್ ॥೩೫॥

ಅರ್ಥದಿಂದ ಧರ್ಮವನ್ನು ಬಯಸುವ ಮತ್ತು ಶತ್ರುಗಳ ಪರಾಭವವನ್ನು ಬಯಸುವ ರಾಜನು ಸತತವಾಗಿ ಇಂದ್ರಿಯಗಳನ್ನು ನಿಗ್ರಹಿಸುವುದರಲ್ಲಿ ಜಾಗರೂಕನಾಗಿರಬೇಕು.

ಕಾಮಾಭಿಭೂತಃ ಕ್ರೋಧಾದ್ವಾ ಯೋ ಮಿಥ್ಯಾ ಪ್ರತಿಪದ್ಯತೇ ।
ಸ್ವೇಷು ಚಾನ್ಯೇಷು ವಾ ತಸ್ಯ ನ ಸಹಾಯಾ ಭವಂತ್ಯುತ ॥೩೬॥

ಕಾಮದಿಂದಲೂ ಅಥವಾ ಕ್ರೋಧದಿಂದಲೂ ಅಭಿಭೂತನಾಗಿ ಯಾವನು ತನ್ನವರ ಅಥವಾ ಪರರ ವಿಷಯದಲ್ಲಿ ಕೆಟ್ಟ ರೀತಿಯಲ್ಲಿ ನಡೆದುಕೊಳ್ಳುತ್ತಾನೆಯೋ ಅವನಿಗೆ ಯಾರೂ ಸಹಾಯವನ್ನು ಮಾಡುವುದಿಲ್ಲ.

ಏಕೀಭೂತೈರ್ಮಹಾಪ್ರಾಜ್ಞೈಃ ಶೂರೈರರಿನಿಬರ್ಹಣೈಃ ।
ಪಾಂಡವೈಃ ಪೃಥಿವೀಂ ತಾತ ಭೋಕ್ಷ್ಯಸೇ ಸಹಿತಃ ಸುಖೀ ॥೩೭॥

ಶೂರರೂ, ಶತ್ರುಸಂಹಾರಕರೂ, ಮಹಾಪ್ರಾಜ್ಞರೂ ಆದ ಪಾಂಡವರ ಜೊತೆಯಲ್ಲಿ ಒಂದುಗೂಡಿ ಎಲೈ ಪ್ರೀತಿಪಾತ್ರನೇ, ನೀನು ಅವರ ಜೊತೆಯಲ್ಲಿ ಸುಖವಾಗಿ ಭೂಮಿಯನ್ನು ಆಳುವಿ.

ಯಥಾ ಭೀಷ್ಮಃ ಶಾಂತನವೋ ದ್ರೋಣಶ್ಚಾಪಿ ಮಹಾಯಶಾಃ ।
ಆಹತುಸ್ತಾತ ತತ್ ಸತ್ಯಮಜೇಯೌ ಕೃಷ್ಣಪಾಂಡವೌ ॥೩೮॥

ಎಲೈ ಪ್ರೀತಿಪಾತ್ರನೇ, ಶಂತನುಪುತ್ರರಾದ ಭೀಷ್ಮರು ಮತ್ತು ಮಹಾಕೀರ್ತಿಶಾಲಿಗಳಾದ ದ್ರೋಣರು ಹೇಳಿದುದು ಸತ್ಯವಾದ ಮಾತು, ಕೃಷ್ಣಾರ್ಜುನರು ಅಜೇಯರಾದವರು.

ಪ್ರಪದ್ಯಸ್ವ ಮಹಾಬಾಹುಂ ಕೃಷ್ಣಮಕ್ಲಿಷ್ಟಕಾರಿಣಮ್ ।
ಪ್ರಪನ್ನೋ ಹಿ ಸುಖಾಯ ಸ್ಯಾದುಭಯೋರೇವ ಕೇಶವಃ ॥೩೯॥

ಮಹಾಬಾಹುವೂ, ಅಕ್ಲಿಷ್ಟಕಾರಿಯೂ ಆದ ಕೃಷ್ಣನನ್ನು ಶರಣುಹೊಂದು. ಕೇಶವನು ಪ್ರಸನ್ನನಾದರೆ ಎರಡು ಪಕ್ಷಗಳಿಗೂ ಸುಖವುಂಟಾದೀತು.

ಸುಹೃದಾಮರ್ಥಕಾಮಾನಾಂ ಯೋ ನ ತಿಷ್ಠತಿ ಶಾಸನೇ ।
ಪ್ರಾಜ್ಞಾನಾಂ ಕೃತವಿದ್ಯಾನಾಂ ಸ ನರಃ ಶತ್ರುನಂದನಃ ॥೪೦॥

ಯಾವ ಮನುಷ್ಯನು ತನ್ನ ಹಿತವನ್ನು ಬಯಸುವ ಪ್ರಾಜ್ಞರಾದ, ವಿದ್ಯಾಸಂಪನ್ನರಾದ ಸುಹೃಜ್ಜನರ ಶಾಸನದಲ್ಲಿ ಇರುವುದಿಲ್ಲವೋ ಅವನು ಶತ್ರುಗಳಿಗೆ ಸಂತೋಷವನ್ನು ಉಂಟುಮಾಡುವವನಾಗುತ್ತಾನೆ.

ನ ಯುದ್ಧೇ ತಾತ ಕಲ್ಯಾಣಂ ನ ಧರ್ಮಾರ್ಥೌ ಕುತಃ ಸುಖಮ್ ।
ನ ಚಾಪಿ ವಿಜಯೋ ನಿತ್ಯಂ ಮಾ ಯುದ್ಧೇ ಚೇತ ಆದಧಾಃ ॥೪೧॥

ಪ್ರೀತಿಪಾತ್ರನೇ, ಯುದ್ಧದಲ್ಲಿ ಯಾವ ಕಲ್ಯಾಣವೂ ಇಲ್ಲ, ಧರ್ಮಾರ್ಥಗಳೂ ಇಲ್ಲ. ಇನ್ನು ಸುಖವು ಎಲ್ಲಿಂದ ಬರಬೇಕು? ಮತ್ತು ವಿಜಯವು ಉಂಟಾಗುವುದೆಂಬ ನಿಶ್ಚಯವೂ ಇಲ್ಲ. ಆದ್ದರಿಂದ ಯುದ್ಧದಲ್ಲಿ ಮನಸ್ಸನ್ನು ಮಾಡಬೇಡ.

ಭೀಷ್ಮೇಣ ಹಿ ಮಹಾಪ್ರಾಜ್ಞ ಪಿತ್ರಾ ತೇ ಬಾಹ್ಲಿಕೇನ ಚ ।
ದತ್ತೋಽಂಶಃ ಪಾಂಡುಪುತ್ರಾಣಾಂ ಭೇದಾದ್ ಭೀತೈರರಿಂದಮ ॥೪೨॥

ಎಲೈ ಮಹಾಪ್ರಾಜ್ಞನೇ, ಅರಿಂದಮನೇ, ಭೀಷ್ಮರೂ, ನಿನ್ನ ತಂದೆಯೂ ಮತ್ತು ಬಾಹ್ಲಿಕರಾಜನೂ ಸೇರಿ ವಿರೋಧ ಉಂಟಾಗಬಹುದೆಂಬ ಭಯದಿಂದ ಪಾಂಡವರಿಗೆ ರಾಜ್ಯದ ಅಂಶವನ್ನು ಕೊಟ್ಟರು.

ತಸ್ಯ ಚೈತತ್ ಪ್ರದಾನಸ್ಯ ಫಲಮದ್ಯಾನುಪಶ್ಯಸಿ ।
ಯದ್ ಭುಂಕ್ಷೇ ಪೃಥಿವೀಂ ಕೃತ್ಸ್ನಾಂ ಶೂರೈರ್ನಿಹತಕಂಟಕಾಮ್ ॥೪೩॥

ಪಾಂಡವರಿಗೆ ರಾಜ್ಯಾಂಶವನ್ನು ದಾನಮಾಡಿದ ಫಲವನ್ನು ಈ ದಿನ ನೀನು ನೋಡುತ್ತಿದ್ದೀಯೆ. ಏಕೆಂದರೆ ಶೂರರಾದ ಅವರಿಂದ ಸಂಪಾದಿಸಲ್ಪಟ್ಟ, ನಿಹತಕಂಟಕವಾದ (ಶತ್ರುಗಳಿಲ್ಲದ) ಸಮಸ್ತವಾದ ಪೃಥಿವಿಯನ್ನು ನೀನು ಭೋಗಿಸುತ್ತಿದ್ದೀಯೆ.

ಪ್ರಯಚ್ಛ ಪಾಂಡುಪುತ್ರಾಣಾಂ ಯಥೋಚಿತಮರಿಂದಮ ।
ಯದೀಚ್ಛಸಿ ಸಹಾಮಾತ್ಯೋ ಭೋಕ್ತುಮರ್ಧಮಹೀಮಿಮಾಮ್ ॥೪೪॥

ಅರಿಂದಮನೇ, ನೀನು ಅಮಾತ್ಯರ ಜೊತೆಯಲ್ಲಿ ಈ ಭೂಮಿಯ ಅರ್ಧಭಾಗವನ್ನು ಭೋಗಿಸಲು ಬಯಸುವುದಾದರೆ ಪಾಂಡುಪುತ್ರರಿಗೆ ಯಥೋಚಿತವಾದ ಭಾಗವನ್ನು ಕೊಡು.

ಅಲಮರ್ಧಂ ಪೃಥಿವ್ಯಾಸ್ತೇ ಸಹಾಮಾತ್ಯಸ್ಯ ಜೀವಿತುಮ್ ।
ಸುಹೃದಾಂ ವಚನೇ ತಿಷ್ಠನ್ ಯಶಃ ಪ್ರಾಪ್ಸ್ಯಸಿ ಭಾರತ ॥೪೫॥

ನೀನು ಮತ್ತು ನಿನ್ನ ಮಂತ್ರಿಗಳು ಜೀವಿಸಲು ಪೃಥಿವಿಯ ಅರ್ಧಭಾಗವು ಸಾಕು. ಎಲೈ ಭಾರತನೇ, ಸುಹೃಜ್ಜನರ ಶಾಸನದಂತೆ ನಡೆದುಕೊಂಡು ನೀನು ಬಹಳ ಕೀರ್ತಿಯನ್ನು ಹೊಂದುವಿ.

ಶ್ರೀಮದ್ಭಿರಾತ್ಮವದ್ಭಿಸ್ತೈಃ ಬುದ್ಧಿಮದ್ಭಿರ್ಜಿತೇಂದ್ರಿಯೈಃ ।
ಪಾಂಡವೈರ್ವಿಗ್ರಹಸ್ತಾತ ಭ್ರಂಶಯೇನ್ಮಹತಃ ಸುಖಾತ್ ॥೪೬॥

ಎಲೈ ಪ್ರೀತಿಪಾತ್ರನೇ, ತೇಜಸ್ವಿಗಳೂ, ಜಿತಮನಸ್ಕರೂ, ಬುದ್ಧಿವಂತರೂ, ಜಿತೇಂದ್ರಿಯರೂ ಆದ ಪಾಂಡವರ ಜೊತೆಯಲ್ಲಿ ವಿರೋಧವು ದೊಡ್ಡ ಸುಖವನ್ನು ನಾಶಮಾಡುತ್ತದೆ.

ನಿಗೃಹ್ಯ ಸುಹೃದಾಂ ಮನ್ಯುಂ ಶಾಧಿ ರಾಜ್ಯಂ ಯಥೋಚಿತಮ್ ।
ಸ್ವಮಂಶಂ ಪಾಂಡುಪುತ್ರೇಭ್ಯಃ ಪ್ರದಾಯ ಪುರುಷರ್ಷಭ ॥೪೭॥

ಎಲೈ ಪುರುಷರ್ಷಭನೇ, ಪಾಂಡವರಿಗೆ ಅವರ ಭಾಗವನ್ನು ಕೊಟ್ಟು ಸುಹೃಜ್ಜನರಿಗೆ ಉಂಟಾಗಿರುವ ಕೋಪವನ್ನು ಶಮನಗೊಳಿಸಿ ಯಥೋಚಿತವಾಗಿ ರಾಜ್ಯವನ್ನು ಆಳು.

ಅಲಂ ಮಹಾನ್ ನಿಕಾರೋಽಯಂ ತ್ರಯೋದಶಸಮಾಃ ಕೃತಾಃ ।
ಶಮಯೈನಂ ಮಹಾಪ್ರಾಜ್ಞ ಕಾಮಕ್ರೋಧಸಮೇಧಿತಮ್ ॥೪೮॥

ಈ ಹದಿಮೂರು ವರ್ಷಗಳ ಕಾಲ ಪಾಂಡವರಿಗೆ ಮಾಡಿದ ಅಪಚಾರವು ಸಾಕು. ಮಹಾಪ್ರಾಜ್ಞನೇ, ಕಾಮ-ಕ್ರೋಧಗಳಿಂದ ಉದ್ಬುದ್ಧವಾದ ಈ ಅಪಚಾರವನ್ನು ಶಾಂತಗೊಳಿಸುವವನಾಗು.

ನ ಚೈಷ ಶಕ್ತಃ ಪಾರ್ಥಾನಾಂ ಯಸ್ತ್ವದರ್ಥಮಭೀಪ್ಸತಿ ।
ಸೂತಪುತ್ರೋ ದೃಢಕ್ರೋಧೋ ಭ್ರಾತಾ ದುಃಶಾಸನಶ್ಚ ತೇ ॥೪೯॥

ನಿನ್ನ ಸಲುವಾಗಿ ಯುದ್ಧವನ್ನು ಬಯಸುವ, ಬಹಳ ಕ್ರೋಧವುಳ್ಳ ಸೂತಪುತ್ರನಾದ ಕರ್ಣನಾಗಲೀ ಅಥವಾ ನಿನ್ನ ತಮ್ಮನಾದ ದುಃಶಾಸನನಾಗಲೀ ಪಾಂಡವರನ್ನು ಜಯಿಸಲು ಶಕ್ತರಲ್ಲ.

ಭೀಷ್ಮೇ ದ್ರೋಣೇ ಕೃಪೇ ಕರ್ಣೇ ಭೀಮಸೇನೇ ಧನಂಜಯೇ ।
ಧೃಷ್ಟದ್ಯುಮ್ನೇ ಚ ಸಂಕ್ರುದ್ಧೇ ನ ಸ್ಯುಃ ಸರ್ವಾ ಪ್ರಜಾ ಧ್ರುವಮ್ ॥೫೦॥

ಭೀಷ್ಮರೂ, ದ್ರೋಣರೂ, ಕೃಪರೂ, ಕರ್ಣ, ಭೀಮಸೇನ, ಅರ್ಜುನ, ಧೃಷ್ಟದ್ಯುಮ್ನ ಇವರೆಲ್ಲರೂ ಸಂಕ್ರುದ್ಧರಾದರೆ ಖಂಡಿತವಾಗಿ ಯಾವ ಪ್ರಜೆಗಳೂ ಉಳಿಯಲಾರರು.

ಅಮರ್ಷವಶಮಾಪನ್ನೋ ಮಾ ಕುರುಸ್ತಾತ ಜೀವನಃ ।
ಸರ್ವಾ ಹಿ ಪೃಥಿವೀ ತಾತ ಮಾ ಗಮತ್ ತ್ವತ್ಕೃತೇ ವಧಮ್ ॥೫೧॥

ಪ್ರೀತಿಪಾತ್ರನೇ, ಜೀವಿಸುವ ಯಾವ ಕೌರವನೂ ಕ್ರೋಧವಶನಾಗುವುದು ಬೇಡ. ನಿನ್ನ ಸಲುವಾಗಿ ಎಲ್ಲ ಭೂಮಿಯೂ ವಧೆಯನ್ನು ಹೊಂದದಿರಲಿ.

ಯಚ್ಚ ತ್ವಂ ಮನ್ಯಸೇ ಮೂಢ ಭೀಷ್ಮದ್ರೋಣಕೃಪಾಃ ಪರಾನ್ ।
ಯೋತ್ಸ್ಯಂತೇ ಸರ್ವಶಕ್ತ್ಯೇತಿ ನೈತದದ್ಯೋಪಪದ್ಯತೇ ॥೫೨॥

ಎಲೈ ಮೂಢನೇ, ಭೀಷ್ಮದ್ರೋಣಕೃಪರು ಪಾಂಡವರ ಜೊತೆಯಲ್ಲಿ ಸರ್ವಶಕ್ತಿಯಿಂದ ಯುದ್ಧವನ್ನು ಮಾಡುವರು ಎಂದು ಏನು ಭಾವಿಸಿದ್ದೀಯೋ ಅದು ಈ ದಿನ ಹಾಗೆ ಆಗುವುದಿಲ್ಲ.

ಸಮಂ ಹಿ ರಾಜ್ಯಂ ಪ್ರೀತಿಶ್ಚ ಸ್ಥಾನಂ ಚ ವಿದಿತಾತ್ಮನಾಮ್ ।
ಪಾಂಡವೇಷ್ವಥ ಯುಷ್ಮಾಸು ಧರ್ಮಸ್ತ್ವಭ್ಯಧಿಕಸ್ತತಃ ॥೫೩॥

ವಿವೇಕಿಗಳಾದವರ ದೃಷ್ಟಿಯಲ್ಲಿ ರಾಜ್ಯ , ಪ್ರೀತಿ, ಸ್ಥಾನ ಇವುಗಳು ನಿನಗೂ ಮತ್ತು ಪಾಂಡವರಿಗೂ ಸಮವಾಗಿವೆ. ಆದರೆ ಪಾಂಡವರಲ್ಲಿ ಧರ್ಮವು ಅಧಿಕವಾಗಿದೆ.

ಧೃತರಾಷ್ಟ್ರಃ

ರಾಜಪಿಂಡಭಯಾದೇತೇ ಯದಿ ಹಾಸ್ಯಂತಿ ಜೀವಿತಮ್ ।
ನ ಹಿ ಶಕ್ಷ್ಯಂತಿ ರಾಜಾನಂ ಯುಧಿಷ್ಠಿರಮುದೀಕ್ಷಿತುಮ್ ॥೫೪॥

ಧೃತರಾಷ್ಟ್ರ– ರಾಜನ ಅನ್ನದ ಋಣದಿಂದ ಈ ಭೀಷ್ಮಾದಿಗಳು ಜೀವಿತವನ್ನು ತೊರೆಯಲು ಬಯಸಿದರೂ ಯುಧಿಷ್ಠಿರನನ್ನು ನೋಡುವುದಕ್ಕೂ ಸಮರ್ಥರಾಗುವುದಿಲ್ಲ.

ನ ಲೋಭಾದರ್ಥಸಂಪತ್ತಿರ್ನರಾಣಾಮಿಹ ದೃಶ್ಯತೇ ।
ತದಲಂ ತಾತ ಲೋಭೇನ ಪ್ರಶಾಮ್ಯ ಭರತರ್ಷಭ ॥೫೫॥

ಲೋಭದಿಂದ ಮನುಷ್ಯರಿಗೆ ಧನಸಂಪತ್ತಿಯು ಎಲ್ಲೂ ಕಾಣಬರುವುದಿಲ್ಲ. ಪ್ರೀತಿಪಾತ್ರನೇ, ಲೋಭವನ್ನು ಮಾಡಬೇಡ. ಭರತರ್ಷಭನೇ, ಪಾಂಡವರ ಜೊತೆಯಲ್ಲಿ ಶಾಂತಿಸಂಧಾನವನ್ನು ಮಾಡಿಕೊಳ್ಳುವವನಾಗು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಾವಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕೋನಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ ಅಧ್ಯಾಯಃ - ೨೪

ಸ ವಾಸುದೇವೇನ ವಿಬೋಧಿತೋऽಪಿ
ಪಾಪಾಭಿಸಂಧಿರ್ದುತರಾಷ್ಟ್ರಸೂನುಃ ।
ಉತ್ಥಾಯ ತಸ್ಮಾದನುಜೈರಮಾತ್ಯೈ-
ರ್ನಿಯಂತುಮೀಶಂ ಕುಮತಿರ್ವ್ಯಧಾನ್ಮತಿಮ್ ॥೭೪॥

ಶ್ರೀಕೃಷ್ಣ ಎಷ್ಟು ಬೋಧಿಸಿದರೂ ಪಾಪಸಂಕಲ್ಪವುಳ್ಳ, ದುರ್ಬುದ್ಧಿಯವನಾದ ದುರ್ಯೋಧನ ತಮ್ಮಂದಿರೊಡನೆ ಮತ್ತು ಮಂತ್ರಿಗಳೊಡನೆ ಅಲ್ಲಿಂದ ಎದ್ದು ಹೋಗಿ ಕೃಷ್ಣನನ್ನು ಬಂಧಿಸಲು ಸಂಕಲ್ಪಿಸಿದ.

ಯೇ ಯೇ ತದಾ ಕೇಶವಸಂಯಮಾಯ
ನ್ಯಮಂತ್ರಯಂಸ್ತೇ ವಿಬುಧಪ್ರತೀಪಾಃ ।
ಅತೋ ವಿಕರ್ಣಪ್ರಮುಖಾ ಅಪಿ ಸ್ಮ
ವಧ್ಯತ್ವಮಾಯನ್ನಶುಭಾಂ ಗತಿಂ ಚ ॥೭೫॥

ಯಾರು ಯಾರು ಕೃಷ್ಣನ ಬಂಧನ ಮಾಡಬೇಕೆಂದು ಆಲೋಚಿಸಿದರೋ ಅವರೆಲ್ಲರೂ ಅಸುರರು. ಅದರಿಂದ ವಿಕರ್ಣ ಮುಂತಾದವರೂ ವಧಾರ್ಹರೆನಿಸಿದರು. ದುರ್ಗತಿಗೆ ಈಡಾದರು.

ಕರ್ಣಃ ಸುರಾಗ್ರ್ಯೋಽಪಿ ಸುಯೋಧನಾರ್ಥೇ
ನ್ಯಮಂತ್ರಯದ್ ಭಾವತೋ ನೈವ ದುಷ್ಟಃ ।
ಅತೋ ಗತಿಶ್ಚಾಸ್ಯ ಸುಶೋಭನಾಽಭೂದ್
ಯೇಽತ್ರಾನುಕೂಲಾಃ ಪರಮಸ್ಯ ತೇ ಶುಭಾಃ ॥೭೬॥

ಕರ್ಣ ದೇವಾಂಶನಾದರೂ ಅಸುರಾವೇಶದಿಂದ ದುರ್ಯೋಧನನ ಸಂತೋಷಕ್ಕಾಗಿಯೇ ಮಂತ್ರಾಲೋಚನೆಯಲ್ಲಿ ಸೇರಿದ್ದ ಹೊರತು ಹೃದಯದಲ್ಲಿ ದುಷ್ಟನಲ್ಲ. ಅದರಿಂದ ಅವನಿಗೆ ಒಳ್ಳೆಯ ಗತಿಯೇ ಆಯಿತು. ಈ ಸಮಯದಲ್ಲಿ ಯಾರು ಕೃಷ್ಣನಿಗೆ ಅನುಕೂಲರಾಗಿದ್ದರೋ ಅವರೆಲ್ಲರೂ ಸಜ್ಜನರು.

ಋಷಿಭಿರ್ಜಾಮದಗ್ನ್ಯೇನ ವ್ಯಾಸೇನಾಪ್ಯಮಿತೌಜಸಾ ।
ವಾಸುದೇವಾತ್ಮನಾ ಚೈವ ತ್ರಿರೂಪೇಣೈವ ವಿಷ್ಣುನಾ ॥೭೭॥

ಮಾತಾಪಿತೃಭ್ಯಾಂ ಭೀಷ್ಮಾದ್ಯೈರನುಶಿಷ್ಟೋಽಪಿ ದುರ್ಮತಿಃ ।
ದುರ್ಯೋಧನೋ ಮಂತ್ರಯತೇ ಮುಕುಂದಸ್ಯಾಽಶು ಬಂಧನಮ್ ॥

ಋಷಿಗಳು, ಪರಶುರಾಮ ವೇದವ್ಯಾಸ ಕೃಷ್ಣ ಎಂಬ ಮೂರು ರೂಪಗಳಿಂದಿದ್ದ ವಿಷ್ಣು ತಾಯಿ-ತಂದೆಗಳು, ಭೀಷ್ಮ ಮುಂತಾದ ಎಲ್ಲರೂ ಉಪದೇಶಿಸಿದರೂ ದುರ್ಬುದ್ಧಿಯವನಾದ ದುರ್ಯೋಧನ ಭವಬಂಧಮೋಚಕನಾದ ಕೃಷ್ಣನ ಬಂಧನಕ್ಕೆ ಮಂತ್ರಾಲೋಚನೆ ಮಾಡಿದ.

ಸಾತ್ಯಕಿಃ ಕೃತವರ್ಮಾ ಚ ತಚ್ಛುಶ್ರುವತುರಂಜಸಾ ।
ಸಂಸ್ಥಾಪ್ಯ ಕೃತವರ್ಮಾಣಂ ರಹಃ ಸಾತ್ಯಕಿರತ್ರ ಚ ।
ಅಭ್ಯೇತ್ಯ ಕೇಶವಂ ಪ್ರಾಹ ದುರ್ಯೋಧನವಿನಿಶ್ಚಯಮ್ ॥೭೯॥

ಸಾತ್ಯಕಿ, ಕೃತವರ್ಮರು ಈ ಮಂತ್ರಾಲೋಚನೆಯ ಮಾತುಗಳನ್ನು ಕೇಳಿಸಿಕೊಂಡರು. ಸಾತ್ಯಕಿ ಕೃತವರ್ಮನನ್ನು ಸಭಾದ್ವಾರದಲ್ಲಿ ನಿಲ್ಲಿಸಿ ಕೃಷ್ಣನ ಬಳಿಗೆ ಬಂದು ರಹಸ್ಯದಲ್ಲಿ ದುರ್ಯೋಧನನ ನಿರ್ಧಾರವನ್ನು ಹೇಳಿದ.

ಜಾನನ್ನಪ್ಯಖಿಲಂ ಕೃಷ್ಣಸ್ತಚ್ಛ್ರುತ್ವಾ ಸಾತ್ಯಕೇರ್ಮುಖಾತ್ ।
ವೈಚಿತ್ರವೀರ್ಯಮವದತ್ ಪಶ್ಯ ಮಾಮಿತಿ ಸರ್ವಗಮ್ ॥೮೦॥

ಕೃಷ್ಣ ಎಲ್ಲವನ್ನೂ ತಿಳಿದವನೇ ಆದರೂ ಸಾತ್ಯಕಿಯ ಮುಖದಿಂದ ಕೇಳಿದ ಬಳಿಕ ಧೃತರಾಷ್ಟ್ರನಿಗೆ ಹೇಳಿದ 'ಸರ್ವವ್ಯಾಪ್ತನಾದ ನನ್ನನ್ನು ನೋಡು' ಎಂದು.

ಅಥ ತೇನಾऽಹುತೇ ಪುತ್ರೇ ಸಾಮಾತ್ಯೇ ಪುರುಷೋತ್ತಮಃ ।
ಸ್ವಂ ರೂಪಂ ದರ್ಶಯಾಮಾಸ ಸರ್ವಗಂ ಪೂರ್ಣಸದ್ಗುಣಮ್ ॥೮೧॥

ಬಳಿಕ ಧೃತರಾಷ್ಟ್ರ ದುರ್ಯೋಧನನನ್ನೂ ಅವನ ಮಂತ್ರಿಗಳನ್ನು ಕರೆಸಿದಾಗ ಶ್ರೀಕೃಷ್ಣ ಸರ್ವವ್ಯಾಪ್ತವಾದ ತನ್ನ ಷಡ್ಗುಣಪೂರ್ಣರೂಪವನ್ನು ತೋರಿದ.

ತತ್ಕಾಲಸೂರ್ಯಾಮಿತದೀಪ್ತಿ ಸರ್ವಜಗದ್ಭರಂ
ಶಾಶ್ವತಮಪ್ರಮೇಯಮ್ ।
ದೃಷ್ಟ್ವೈವ ಚಕ್ಷೂಂಷಿ ಸುಯೋಧನಾದ್ಯಾ
ನ್ಯಮೀಲಯನ್ ದೀಧಿತಿವಾರಿತಾನಿ ॥೮೨॥

ಪ್ರಳಯಕಾಲದ ಸೂರ್ಯನಂಥ ಅಮಿತಪ್ರಕಾಶವುಳ್ಳ ಸಕಲ ಲೋಕಧಾರಕ ಶಾಶ್ವತ ಅಪ್ರಮೇಯವಾದ ವಿಶ್ವರೂಪವನ್ನು ಕಂಡೊಡನೆ ದುರ್ಯೋಧನ ಮುಂತಾದವರು ಕಣ್ಣುಮುಚ್ಚಿಕೊಂಡರು. ಏಕೆಂದರೆ ಆ ಬೆಳಕು ಕಣ್ಣುಕೋರೈಸುತ್ತಿತ್ತು.

ಪಿಧಾಯ ರೂಪಂ ಪುನರೇವ ತದ್ಧರಿ-
ರ್ವೈಚಿತ್ರವೀರ್ಯೇಣ ಸಮರ್ಥಿತಃ ಪುನಃ ।
ಕೃತ್ವಾऽಂಧಮೇವ ಪ್ರಯಯೌ ಸುಯೋಧನಂ
ಸಹಾನುಗಂ ಪಾಪತಮಂ ಪ್ರಕಾಶ್ಯ ॥೮೩॥

ಶ್ರೀಕೃಷ್ಣ ವಿಶ್ವರೂಪವನ್ನು ಮರೆಮಾಡಿ, ಧೃತರಾಷ್ಟ್ರ ಪುನಃ ಪುನಃ ಬೇಡಿಕೊಂಡದ್ದರಿಂದ ಅವನನ್ನು ಹಿಂದಿನಂತೆಯೇ ಅಂಧನನ್ನಾಗಿ ಮಾಡಿ, ದುರ್ಯೋಧನನನ್ನೂ ಅವನ ಕಡೆಯವರನ್ನೂ ಮಹಾಪಾಪಿಗಳೆಂದು ಲೋಕಕ್ಕೆ ತೋರಿಸಿ ಹೊರಗೆ ನಡೆದ.

ಅನಂತಶಕ್ತಿಃ ಪುರುಷೋತ್ತಮೋಽಸೌ
ಶಕ್ತೋಽಪಿ ದುರ್ಯೋಧನಚಿತ್ತನಿಗ್ರಹೇ ।
ನೈವ ವ್ಯಧಾದೇನಮಥೋಕ್ತಕಾರಿಣಂ
ನಿಪಾತಯನ್ನಂಧತಮಸ್ಯನಂತಃ ॥೮೪॥

ಅನಂತಶಕ್ತಿಯುಳ್ಳ ಪುರುಷೋತ್ತಮ ಶ್ರೀಕೃಷ್ಣ ದುರ್ಯೋಧನನ ಪಾಪಬುದ್ಧಿಯನ್ನು ಕಳೆಯಲು ಶಕ್ತನಾಗಿದ್ದರೂ ಅವನಿಗೆ ತನ್ನ ಮಾತಿನಂತೆ ನಡೆಯಲು ಒಳಗೆ ಪ್ರೇರಣೆ ಮಾಡಲಿಲ್ಲ. ಇದು ಅವನನ್ನು ಬೇಗನೆ ಅಂಧಂತಮಸ್ಸಿನಲ್ಲಿ ಹಾಕುವುದಕ್ಕಾಗಿ.

★ ★ ★ ★ ★

ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ

ಪುನಃ ಸಭೆಯಿಂದ ಹೊರಗೆ ಹೋಗಿ ಕೃಷ್ಣನನ್ನು ಬಂಧಿಸಲು ದುರ್ಯೋಧನನ ಮಂತ್ರಾಲೋಚನೆ. ಸಾತ್ಯಕಿಯಿಂದ ಅದು ಕೃಷ್ಣನಿಗೆ ನಿವೇದನೆ. ಅದನ್ನು ತಿಳಿದ ವಿದುರನಿಂದ ದುರ್ಯೋಧನನ ನಿಂದನೆ.

ವೈಶಂಪಾಯನಃ

ತತ್ತು ವಾಕ್ಯಮನಾದೃತ್ಯ ಸೋಽರ್ಥವನ್ಮಾತೃಭಾಷಿತಮ್ ।
ಪುನಃ ಪ್ರತಸ್ಥೇ ಸಂರಂಭಾತ್ ಸಕಾಶಮಕೃತಾತ್ಮನಾಮ್ ॥೧॥

ವೈಶಂಪಾಯನ– ತಾಯಿಯು ಆಡಿದ ಹಿತನುಡಿಗಳನ್ನು ಧಿಕ್ಕರಿಸಿ ದುರ್ಯೋಧನನು ಪುನಃ ಕೋಪದಿಂದ ಸಭೆಯನ್ನು ಬಿಟ್ಟು ದುಷ್ಟರ ಸಮೀಪಕ್ಕೆ ಹೊರಟನು.

ತತಃ ಸಭಾಯಾ ನಿರ್ಗತ್ಯ ಮಂತ್ರಯಾಮಾಸ ಕೌರವಃ ।
ಸೌಬಲೇನ ಮತಾಕ್ಷೇಣ ರಾಜ್ಞಾ ಶಕುನಿನಾ ಸಹ ॥೨॥

ಆಗ ದುರ್ಯೋಧನನು ಸಭೆಯಿಂದ ಹೊರಗೆ ಹೋಗಿ ಅಕ್ಷವಿದ್ಯೆಯನ್ನು ಬಲ್ಲ ಶಕುನಿಯ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿದನು.

ದುರ್ಯೋಧನಂ ಧಾರ್ತರಾಷ್ಟ್ರಂ ಕರ್ಣಂ ದುಃಶಾಸನೋಽಬ್ರವೀತ್ ॥೩॥

ನೋ ಚೇತ್ ಸಂಧಾಸ್ಯತೇ ರಾಜನ್ ಸ್ವೇನ ಕಾಮೇನ ಪಾಂಡವೈಃ ।
ಬದ್ಧ್ವಾವ ತ್ವಾಂ ಪ್ರದಾಸ್ಯಂತಿ ಪಾಂಡುಪುತ್ರಾಯ ಭಾರತ ॥೪॥

ವೈಕರ್ತನಂ ತ್ವಾಂ ಚ ಮಾಂ ಚ ತ್ರೀನೇತಾನ್ ಭರತರ್ಷಭ ।
ಪಾಂಡವೇಭ್ಯಃ ಪ್ರದಾಸ್ಯಂತಿ ಭೀಷ್ಮದ್ರೌಣೀ ಪಿತಾ ಚ ತೇ ॥೫॥

ದುಃಶಾಸನನು ದುರ್ಯೋಧನ ಮತ್ತು ಕರ್ಣನನ್ನು ಕುರಿತು, ಎಲೈ ರಾಜನೇ, ಭರತರ್ಷಭನೇ, ಭಾರತನೇ, ನೀನು ನಿನ್ನ ಸ್ವಂತ ಇಚ್ಛೆಯಿಂದ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳದಿದ್ದರೆ ಭೀಷ್ಮ-ದ್ರೋಣರು ಮತ್ತು ನಿನ್ನ ತಂದೆಯು ನನ್ನನ್ನೂ, ನಿನ್ನನ್ನೂ ಮತ್ತು ಕರ್ಣನನ್ನೂ ಬಂಧಿಸಿ ಪಾಂಡವರಿಗೆ ಕೊಡುವರು ಎಂದು ಹೇಳಿದನು.

ವೈಶಂಪಾಯನಃ

ದುಃಶಾಸನಸ್ಯ ತದ್ವಾಕ್ಯಂ ನಿಶಮ್ಯ ಭರತರ್ಷಭ ।
ದುರ್ಯೋಧನೋ ಧಾರ್ತರಾಷ್ಟ್ರೋ ನಿಃಶ್ವಸ್ಯ ಪ್ರಹಸನ್ನಿವ ॥೬॥

ಏಕಾಂತಮುಪಸೃತ್ಯೇಹ ಮಂತ್ರಂ ಪುನರಮಂತ್ರಯತ್ ।
ಸೌಬಲೇನ ಮತಾಕ್ಷೇಣ ರಾಜ್ಞಾ ಶಕುನಿನಾ ಸಹ ॥೭॥

ವೈಶಂಪಾಯನ– ಎಲೈ ಭರತರ್ಷಭನಾದ ಜನಮೇಜಯನೇ, ದುಃಶಾಸನನ ಆ ಮಾತನ್ನು ಕೇಳಿ ಧೃತರಾಷ್ಟ್ರನ ಪುತ್ರನಾದ ದುರ್ಯೋಧನನು ನಿಟ್ಟುಸಿರನ್ನು ಬಿಟ್ಟು ನಗುವವನಂತೆ ಏಕಾಂತಕ್ಕೆ ಹೋಗಿ ಪುನಃ ಅಕ್ಷವಿದ್ಯೆಯನ್ನು ಬಲ್ಲ ಸೌಬಲರಾಜನಾದ ಶಕುನಿಯ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿದನು.

ದುರ್ಯೋಧನಸ್ಯ ಕರ್ಣಸ್ಯ ಶಕುನೇಃ ಸೌಬಲಸ್ಯ ಚ ।
ದುಃಶಾಸನಚತುರ್ಥಾನಾಮ್ ಇದಮಾಸೀದ್ ವಿಚೇಷ್ಟಿತಮ್ ॥೮॥

ದುರ್ಯೋಧನ, ಕರ್ಣ, ಸೌಬಲನಾದ ಶಕುನಿ, ನಾಲ್ಕನೆಯವನಾದ ದುಶ್ಶಾಸನ ಇವರು ಇಂತಹ ಕಾರ್ಯವನ್ನು ಮಾಡಿದರು.

ದುರ್ಯೋಧನಾದಯಃ

ಪುರಾऽಯಮಸ್ಮಾನ್ ಗೃಹ್ಣಾತಿ ಕ್ಷಿಪ್ರಕಾರೀ ಜನಾರ್ದನಃ ।
ಸಹಿತೋ ಧೃತರಾಷ್ಟ್ರೇಣ ರಾಜ್ಞಾ ಶಾಂತನವೇನ ಚ ॥೯॥

ವಯಮೇವ ನಿಗೃಹ್ಣೀಮ ಹೃಷೀಕೇಶಂ ಬಲಾದಿವ ।
ಪ್ರಸಹ್ಯ ಪುರುಷವ್ಯಾಘ್ರಮಿಂದ್ರೋ ವೈರೋಚನಿಂ ಯಥಾ ॥೧೦॥

ದುರ್ಯೋಧನಾದಿಗಳು– ಕ್ಷಿಪ್ರಕಾರಿಯಾದ ಜನಾರ್ದನನು ರಾಜನಾದ ಧೃತರಾಷ್ಟ್ರ ಮತ್ತು ಭೀಷ್ಮರಿಂದ ಸಹಿತನಾಗಿ ನಮ್ಮನ್ನು ಹಿಡಿಯುವುದಕ್ಕಿಂತ ಮುಂಚೆಯೇ ನಾವೇ ಇಂದ್ರನು ಬಲಿಯನ್ನು ಹಿಡಿದಂತೆ ಪುರುಷವ್ಯಾಘ್ರನಾದ ಹೃಷೀಕೇಶನನ್ನು ನಮ್ಮ ಬಲದಿಂದ ವಶಮಾಡಿಕೊಂಡು ಹಿಡಿಯೋಣ.

ಶ್ರುತ್ವಾ ಗೃಹೀತಂ ವಾರ್ಷ್ಣೇಯಂ ಪಾಂಡವಾ ಹತಚೇತಸಃ ।
ನಿರುತ್ಸಾಹಾ ಭವಿಷ್ಯಂತಿ ಭಗ್ನದಂಷ್ಟ್ರಾ ಇವೋರಗಾಃ ॥೧೧॥

ಕೃಷ್ಣನು ಗೃಹೀತನಾದುದನ್ನು ಕೇಳಿ ಪಾಂಡವರು ತಮ್ಮ ಮನಸ್ಸನ್ನು ಕಳೆದುಕೊಂಡು ನಿರುತ್ಸಾಹರಾಗಿ ಹಲ್ಲು ಮುರಿದ ಸರ್ಪಗಳಂತೆ ಆಗುವರು.

ಅಯಂ ಹ್ಯೇಷಾಂ ಮಹಾಬಾಹುಃ ಸರ್ವೇಷಾಂ ಶರ್ಮ ವರ್ಮ ಚ ॥

ಅಸ್ಮಿನ್ ಗೃಹೀತೇ ವಾರ್ಷ್ಣೇಯೇ ಋಷಭೇ ಸರ್ವಸಾತ್ವತಾಮ್ ।
ನಿರುದ್ಯಮಾ ಭವಿಷ್ಯಂತಿ ಪಾಂಡವಾಃ ಸೋಮಕೈಃ ಸಹ ॥೧೩॥

ಈ ಮಹಾಬಾಹುವಾದ ಕೃಷ್ಣನು ಅವರೆಲ್ಲರಿಗೂ ಸುಖಪ್ರದನು ಮತ್ತು ಕವಚದಂತೆ ಇರುವವನು. ಸರ್ವಸಾತ್ವತಶ್ರೇಷ್ಠನಾದ ಇವನನ್ನು ಹಿಡಿದರೆ ಪಾಂಡವರು ಸೋಮಕರ ಜೊತೆಯಲ್ಲಿ ನಿರುದ್ಯಮಿಗಳಾಗುವರು.

ತಸ್ಮಾದ್ ವಯಮಿಹೈವೈಕಂ ಕೇಶವಂ ಕ್ಷಿಪ್ರಕಾರಿಣಮ್ ।
ಕ್ರೋಶತೋ ಧೃತರಾಷ್ಟ್ರಸ್ಯ ಬದ್ಧ್ವಾ ಯೋತ್ಸ್ಯಾಮಹೇ ರಿಪೂನ್ ॥೧೪॥

ಆದ್ದರಿಂದ ನಾವು ಧೃತರಾಷ್ಟ್ರನು ಕಿರುಚಿಕೊಳ್ಳುತ್ತಿದ್ದರೂ ಕ್ಷಿಪ್ರಕಾರಿಯಾದ ಕೇಶವನೊಬ್ಬನನ್ನು ಬಂಧಿಸಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡೋಣ.

ವೈಶಂಪಾಯನಃ

ತೇಷಾಂ ಪಾಪಮಭಿಪ್ರಾಯಂ ಪಾಪಾನಾಂ ದುಷ್ಟಚೇತಸಾಮ್ ।
ಇಂಗಿತಜ್ಞಃ ಕವಿಃ ಕ್ಷಿಪ್ರಮನ್ವಬುದ್ಧ್ಯತ ಸಾತ್ಯಕಿಃ ॥೧೫॥

ವೈಶಂಪಾಯನ– ಪಾಪಿಗಳೂ, ದುಷ್ಟಚೇತನರೂ ಆದ ಅವರ ದುರಭಿಪ್ರಾಯವನ್ನು ಇಂಗಿತಜ್ಞನೂ, ಜ್ಞಾನಿಯೂ ಆದ ಸಾತ್ಯಕಿಯು ಶೀಘ್ರವಾಗಿ ತಿಳಿದನು.

ತದರ್ಥಮಭಿನಿಷ್ಕಮ್ಯ ಹಾರ್ದಿಕ್ಯೇನ ಸಹಾಸ್ಥಿತಃ ।
ಅಬ್ರವೀತ್ ಕೃತವರ್ಮಾಣಂ ಕ್ಷಿಪ್ರಂ ಯೋಜಯ ವಾಹಿನೀಮ್ ॥೧೬॥

ವ್ಯೂಢಾನೀಕಃ ಸಭಾದ್ವಾರಮುಪತಿಷ್ಠಸ್ವ ದಂಸಿತಃ ।
ಯಾವದಾಖ್ಯಾಮ್ಯಹಂ ಚೈತತ್ ಕೃಷ್ಣಾಯಾಕ್ಲಿಷ್ಟಕಾರಿಣೇ ॥೧೭॥

ಅದಕ್ಕೋಸ್ಕರವಾಗಿ ಕೃತವರ್ಮನ ಜೊತೆಯಲ್ಲಿ ಹೊರಗೆ ಹೋಗಿ ನಿಂತಿದ್ದ ಅವನು ಕೃತವರ್ಮನನ್ನು ಕುರಿತು ಬೇಗ ಸೈನ್ಯವನ್ನು ಸಿದ್ಧಗೊಳಿಸು. ಸೈನ್ಯವನ್ನು ವ್ಯೂಹವಾಗಿ ರಚಿಸಿ, ಕವಚವನ್ನು ಧರಿಸಿ, ಸಭಾದ್ವಾರದಲ್ಲಿ ಇರುವವನಾಗು. ಅಷ್ಟರಲ್ಲಿ ನಾನು ಅಕ್ಲಿಷ್ಟಕಾರಿಯಾದ ಕೃಷ್ಣನಿಗೆ ಈ ವಿಷಯವನ್ನು ತಿಳಿಸುತ್ತೇನೆ ಎಂದು ಹೇಳಿದನು.

ಸ ಪ್ರವಿಶ್ಯ ಸಭಾಂ ವೀರಃ ಸಿಂಹೋ ಗಿರಿಗುಹಾಮಿವ ।
ಆಚಷ್ಟ ತಮಭಿಪ್ರಾಯಂ ಕೇಶವಾಯ ಮಹಾತ್ಮನೇ ॥೧೮॥

ಆ ವೀರನು ಸಿಂಹವು ಪರ್ವತದ ಗುಹೆಯನ್ನು ಪ್ರವೇಶಿಸಿದಂತೆ ಆ ಸಭೆಯನ್ನು ಪ್ರವೇಶಿಸಿ, ಮಹಾತ್ಮನಾದ ಕೇಶವನಿಗೆ ದುರ್ಯೋಧನಾದಿಗಳ ಅಭಿಪ್ರಾಯವನ್ನು ತಿಳಿಸಿದನು.

ಧೃತರಾಷ್ಟ್ರಂ ತತಶ್ಚೈವ ವಿದುರಂ ಚಾತ್ಮಭಾವಿನಮ್ ।
ತೇಷಾಮೇತಮಭಿಪ್ರಾಯಮಾಚಚಕ್ಷೇ ಸ್ಮಯನ್ನಿವ ॥೧೯॥

ಅನಂತರ ಧೃತರಾಷ್ಟ್ರನಿಗೂ ಮತ್ತು ಭಗವದ್ಭಕ್ತನಾದ ವಿದುರನಿಗೂ ಅವರ ಈ ಅಭಿಪ್ರಾಯವನ್ನು ನಗುವವನಂತೆ ತಿಳಿಸಿದನು.

ಸಾತ್ಯಕಿಃ

ಧರ್ಮಾದರ್ಥಾಚ್ಚ ಕಾಮಾಚ್ಚ ಕರ್ಮ ಸಾಧುವಿಗರ್ಹಿತಮ್ ।
ಮಂದಾಃ ಕರ್ತುಮಿಹೇಚ್ಛಂತಿ ನ ಚಾವಾಪ್ಯಂ ಕಥಂಚನ ॥೨೦॥

ಸಾತ್ಯಕಿ– ಧರ್ಮದಿಂದಲೂ, ಅರ್ಥದಿಂದಲೂ ಮತ್ತು ಕಾಮದಿಂದಲೂ ರಹಿತವಾದ, ಸಜ್ಜನರಿಂದ ನಿಂದಿತವಾದ ಕಾರ್ಯವನ್ನು ಮಾಡಲು ಈ ಮಂದರು ಬಯಸುತ್ತಿದ್ದಾರೆ, ಅದು ಎಂದೂ ಸಾಧ್ಯವಾಗುವುದಿಲ್ಲ.

ಪುರಾ ವಿಕುರ್ವತೇ ಮೂಢಾಃ ಪಾಪಾತ್ಮಾನಃ ಸಮಾಗತಾಃ ।
ಧರ್ಷಿತಾಃ ಕಾಮಮನ್ಯುಭ್ಯಾಂ ಕ್ರೋಧಲೋಭವಶಾನುಗಾಃ ॥೨೧॥

ಕಾಮ-ಕ್ರೋಧಗಳ ತುಳಿತಕ್ಕೆ ಸಿಲುಕಿದ, ಕ್ರೋಧ-ಲೋಭವಶರಾದ, ಪಾಪಚೇತನರಾದ, ಮೂಢರಾದ, ಇವರು ಒಟ್ಟಿಗೇ ಸೇರಿ ಮೊದಲು (ಮನೋ) ವಿಕಾರವನ್ನು ಹೊಂದುತ್ತಿದ್ದಾರೆ.

ಇಮಂ ಹಿ ಪುಂಡರೀಕಾಕ್ಷಂ ಜಿಘೃಕ್ಷಂತ್ಯಲ್ಪಚೇತಸಃ ।
ಪಟೇನಾಗ್ನಿಂ ಪ್ರಜ್ವಲಿತಂ ಯಥಾ ಬಾಲಾ ಯಥಾ ಜಡಾಃ ॥೨೨॥

ಬಾಲಕರೂ ಮತ್ತು ಜಡರೂ (ಬುದ್ಧಿ ಇಲ್ಲದವರು) ವಸ್ತ್ರದಿಂದ ಪ್ರಜ್ವಲಿಸುವ ಅಗ್ನಿಯನ್ನು ಕಟ್ಟಿದಂತೆ ಈ ಅಲ್ಪಚೇತನರು ಪುಂಡರೀಕಾಕ್ಷನನ್ನು ಬಂಧಿಸಲು ಇಚ್ಛಿಸುತ್ತಾರೆ.

ವೈಶಂಪಾಯನಃ

ಸಾತ್ಯಕೇಸ್ತದ್ವಚಃಶ್ರುತ್ವಾ ವಿದುರೋ ದೀರ್ಘದರ್ಶಿವಾನ್ ।
ಧೃತರಾಷ್ಟ್ರಂ ಮಹಾಬಾಹುಮಬ್ರವೀತ್ ಕುರುಸಂಸದಿ ॥೨೩॥

ವೈಶಂಪಾಯನ– ಸಾತ್ಯಕಿಯ ಆ ಮಾತುಗಳನ್ನು ಕೇಳಿ ದೀರ್ಘದರ್ಶಿಯಾದ ವಿದುರನು ಕೌರವರ ಸಭೆಯಲ್ಲಿ ಮಹಾಬಾಹುವಾದ ಧೃತರಾಷ್ಟ್ರನನ್ನು ಕುರಿತು ಮಾತನಾಡಿದನು.

ಯಥಾ ವಾರಾಣಸೀ ದಗ್ಧಾ ಸಾಶ್ವಾ ಸರಥಕುಂಜರಾ ।
ಸಾನುಬಂಧಸ್ತು ಕೃಷ್ಣೇನ ಕಾಶೀನಾಮೃಷಭೋ ಹತಃ ॥೨೪॥

ತಥಾ ನಾಗಪುರಂ ದಗ್ಧ್ವಾ ಶಂಖಚಕ್ರಗದಾಧರಃ ।
ಸ್ವಯಂ ಕಾಲೇಶ್ವರೋ ಭೂತ್ವಾ ನಾಶಯಿಷ್ಯತಿ ಕೌರವಾನ್ ॥೨೫॥

ಹೇಗೆ ಕೃಷ್ಣನು ಅಶ್ವರಥಗಜಗಳಿಂದ ಸಹಿತವಾದ ವಾರಣಾಸಿ ಪಟ್ಟಣವನ್ನು ದಹಿಸಿ ಪರಿವಾರಸಹಿತನಾದ ಕಾಶಿರಾಜನನ್ನು ವಧೆ ಮಾಡಿದನೋ ಹಾಗೆಯೇ ಶಂಖಚಕ್ರಗದಾಧರನಾದ ಅವನು ಸ್ವತಃ ಕಾಲನಿಯಾಮಕನಾಗಿ ಹಸ್ತಿನಪುರವನ್ನು ಸುಟ್ಟು ಕೌರವರನ್ನು ನಾಶಪಡಿಸುವನು.

ಪಾರಿಜಾತಹರಂ ಹ್ಯೇನಮೇಕಂ ಯದುಸುಖಾವಹಮ್ ।
ನಾಭ್ಯವರ್ತತ ಸಂರಬ್ಧೋ ವೃತ್ರಹಾ ವಸುಭಿಃ ಸಹ ॥೨೬॥

ವಸುಗಳಿಂದ ಸಹಿತನಾದ, ಕ್ರುದ್ಧನಾದ ಇಂದ್ರನೂ ಸಹ ಯದುಗಳ ಸುಖಕ್ಕೆ ಕಾರಣನಾದ, ಪಾರಿಜಾತ ಹರನಾದ ಒಬ್ಬ ಕೃಷ್ಣನನ್ನು ಮೀರಲು ಸಾಧ್ಯವಾಗಲಿಲ್ಲ.

ಪ್ರಾಪ್ಯ ನಿರ್ಮೋಚನೇ ಪಾಶಾನ್ ಷಟ್‌ಸಹಸ್ರಾಂಸ್ತರಸ್ವಿನಃ ।
ಹೃತಾಸ್ತೇ ವಾಸುದೇವೇನ ಹ್ಯುಪಸಂಕ್ರಮ್ಯ ಮೌರವಾನ್ ॥೨೭॥

ನಿರ್ಮೋಚನ ಕ್ಷೇತ್ರವನ್ನು ತಲುಪಿ ಮೌರವ, ಪಾಶಗಳನ್ನು ಛೇದಿಸಿ ವಾಸುದೇವನು ಆರುಸಾವಿರ ಅಸುರರನ್ನು ಸಂಹರಿಸಿದನು.

ದ್ವಾರಮಾಸಾದ್ಯ ಸೌಭಸ್ಯ ವಿಧೂಯ ಗದಯಾ ಗಿರಿಮ್ ।
ದ್ಯುಮತ್ಸೇನಃ ಸಹಾಮಾತ್ಯಃ ಕೃಷ್ಣೇನ ವಿನಿಪಾತಿತಃ ॥೨೮॥

ಸೌಭದ ದ್ವಾರವನ್ನು ತಲುಪಿ ಕೃಷ್ಣನು ತನ್ನ ಗದೆಯಿಂದ ಪರ್ವತದಂತಿದ್ದ ಅದನ್ನು ಛೇದಿಸಿ ಅಮಾತ್ಯರಿಂದ ಕೂಡಿದ ದ್ಯುಮತ್ಸೇನನನ್ನು ಉರುಳಿಸಿದನು.

ಶೇಷವತ್ತ್ವಾತ್ ಕುರೂಣಾಂ ಚ ಧರ್ಮಾಪೇಕ್ಷೀ ತಥಾಽಚ್ಯುತಃ ।
ಕ್ಷಮತೇ ಪುಂಡರೀಕಾಕ್ಷಃ ಶಕ್ತಃ ಸನ್ ಪಾಪಕರ್ಮಣಾಮ್ ॥೨೯॥

ಪುಂಡರೀಕಾಕ್ಷನು ಪಾಪಕರ್ಮವನ್ನು ಮಾಡುವ ಕೌರವರನ್ನು ದಮನ ಮಾಡಲು ಶಕ್ತನಾದರೂ ಕೌರವರಿಗೆ ಇನ್ನೂ ಆಯುಸ್ಸು ಉಳಿದಿರುವುದರಿಂದ ಧರ್ಮವನ್ನು ಬಯಸುವ ಅಚ್ಯುತನು ಕ್ಷಮೆಯಿಂದ ಕೂಡಿದ್ದಾನೆ.

ಏತೇ ಹಿ ಯದಿ ಗೋವಿಂದಮಿಚ್ಛಂತಿ ಸಹ ರಾಜಭಿಃ ।
ಅದ್ಯೈವಾತಿಥಯಃ ಸರ್ವೇ ಭವಿಷ್ಯಂತಿ ಯಮಸ್ಯ ತೇ ॥೩೦॥

ಈ ದುರ್ಯೋಧನಾದಿಗಳು ರಾಜರ ಸಹಾಯದಿಂದ ಗೋವಿಂದನನ್ನು ಬಂಧಿಸಲು ಬಯಸಿದರೆ ಅವರೆಲ್ಲರೂ ಈ ದಿನವೇ ಯಮನಿಗೆ ಅತಿಥಿಗಳಾಗುವರು.

ಯಥಾ ವಾಯೋಸ್ತೃಣಾಗ್ರಾಣಿ ವಶಂ ಯಾಂತಿ ಬಲೀಯಸಃ ।
ತಥಾ ಚಕ್ರಭೃತಃ ಸರ್ವೇ ವಶಮೇಷ್ಯಂತಿ ಕೌರವಾಃ ॥೩೧॥

ಪ್ರಬಲವಾದ ವಾಯುವಿಗೆ ಹೇಗೆ ಹುಲ್ಲಿನ ಚೂರು ವಶವಾಗುತ್ತದೆಯೋ ಅದರಂತೆ ಕೌರವರೆಲ್ಲರೂ ಚಕ್ರಧಾರಿಯಾದ ಕೃಷ್ಣನಿಗೆ ವಶವಾಗುವರು.

ರಾಜನ್ ಪರೀತಕಾಲಸ್ತೇ ಪುತ್ರಾಃ ಸರ್ವೇ ಪರಂತಪ ।
ಅಶಕ್ಯಮಯಶಸ್ಯಂ ಚ ಕರ್ಮ ಕರ್ತುಂ ಸಮುದ್ಯತಾಃ ॥೩೨॥

ಎಲೈ ಪರಂತಪನೇ, ರಾಜನೇ, ನಿನ್ನ ಮಕ್ಕಳಿಗೆ ಕಾಲವು ಕೂಡಿ ಬಂದಿದೆ. ಆದ್ದರಿಂದ ಅವರು ಅಶಕ್ಯವಾದ, ಅಕೀರ್ತಿಕರವಾದ ಕರ್ಮವನ್ನು ಮಾಡಲು ಉದ್ಯುಕ್ತರಾಗಿದ್ದಾರೆ.

ಇಮಂ ಹಿ ಪುಂಡರೀಕಾಕ್ಷಮಭಿಭೂಯ ಪ್ರಸಹ್ಯ ಚ ।
ನಿಗೃಹೀತುಂ ಕಿಲೇಚ್ಛಂತಿ ಸಹಿತಾ ವಾಸವಾನುಜಮ್ ॥೩೩॥

ಎಲ್ಲರೂ ಸೇರಿ ಇಂದ್ರನ ತಮ್ಮನಾದ ಈ ಪುಂಡರೀಕಾಕ್ಷನನ್ನು ಪರಾಭವಗೊಳಿಸಿ ತಮ್ಮ ಬಲದಿಂದ ಅವನನ್ನು ಬಂಧಿಸಲು ಇಚ್ಛಿಸುತ್ತಾರೆ.

ಇಮಂ ಪುರುಷಶಾರ್ದೂಲಮಪ್ರಧೃಷ್ಯಂ ದುರಾಸದಮ್ ।
ಆಸಾದ್ಯ ನ ಭವಿಷ್ಯಂತಿ ಪತಂಗಾ ಇವ ಪಾವಕಮ್ ॥೩೪॥

ಯಾರಿಗೂ ಸೋಲದ, ಯಾರೂ ಸಮೀಪಕ್ಕೆ ಸುಳಿಯಲಾರದ ಈ ಪುರುಷ ಶಾರ್ದೂಲನನ್ನು ಸಮೀಪಿಸಿ ಅಗ್ನಿಯನ್ನು ಸಮೀಪಿಸಿದ ಪತಂಗಗಳಂತೆ ನಿನ್ನ ಮಕ್ಕಳು ನಾಶವನ್ನು ಹೊಂದುವರು.

ಏತೇ ನ ಶಕ್ತಾಃ ಸರ್ವೇ ಹಿ ಸಾಹಸಾತ್ ಕರ್ತುಮುದ್ಯತಾಃ ।
ಅಯಮಿಚ್ಛನ್ ಹಿ ತಾನ್ ಸರ್ವಾನ್ ಯುಧ್ಯಮಾನಾನ್ ಜನಾರ್ದನಃ॥

ಸಿಂಹೋ ಮೃಗಾನಿವ ಕ್ರುದ್ಧೋ ಗಮಯೇದ್ ಯಮಸಾದನಮ್॥೩೬॥

ಇವರೆಲ್ಲರೂ ಸೇರಿ ಕೃಷ್ಣನನ್ನು ಹಿಡಿಯಲು ಶಕ್ತರಲ್ಲ. ಅವಿವೇಕದಿಂದ ಅದನ್ನು ಮಾಡಲು ಹೊರಟಿದ್ದಾರೆ. ಕೃಷ್ಣನು ಇಚ್ಛಿಸಿದರೆ ಜನಾರ್ದನನಾದ ಅವನು ಯುದ್ಧ ಮಾಡುವವರೆಲ್ಲರನ್ನೂ ಕೋಪಗೊಂಡ ಸಿಂಹವು ಜಿಂಕೆಗಳನ್ನು ಸಂಹರಿಸಿದಂತೆ ಯಮಲೋಕಕ್ಕೆ ಕಳುಹಿಸಿಯಾನು.

ನ ತ್ವಯಂ ನಿಂದಿತಂ ಕರ್ಮ ಕುರ್ಯಾತ್ ಪಾಪಂ ಕಥಂಚನ ।
ನ ಚ ಧರ್ಮಾದಪಕ್ರಾಮೇದಚ್ಯುತಃ ಪುರುಷೋತ್ತಮಃ ॥೩೭॥

ಆದರೆ ಅಚ್ಯುತನೂ, ಪುರುಷೋತ್ತಮನೂ ಆದ ಇವನು ನಿಂದಿತವಾದ ಪಾಪಕರ್ಮವನ್ನು ಎಂದೂ ಮಾಡುವುದಿಲ್ಲ. ಎಂದೂ ಧರ್ಮದಿಂದ ಚಲಿತನಾಗುವುದಿಲ್ಲ.

ವೈಶಂಪಾಯನಃ

ವಿದುರೇಣೈವಮುಕ್ತೇ ತು ಕೇಶವೋ ವಾಕ್ಯಮಬ್ರವೀತ್ ।
ಧೃತರಾಷ್ಟ್ರಮಭಿಪ್ರೇಕ್ಷ್ಯ ಸುಹೃದಾಂ ಶೃಣ್ವತಾಂ ಮಿಥಃ ॥೩೮॥

ವೈಶಂಪಾಯನ– ವಿದುರನು ಹೀಗೆ ಮಾತನಾಡುತ್ತಿರಲು ಕೃಷ್ಣನು ಧೃತರಾಷ್ಟ್ರನನ್ನು ನೋಡುತ್ತಾ ಸುಹೃಜ್ಜನರು ಕೇಳುವಂತೆ ಮಾತನಾಡಿದನು.

ಶ್ರೀಭಗವಾನ್

ರಾಜನ್ನೇತೇ ಯದಿ ಕ್ರುದ್ಧಾ ಮಾಂ ನಿಗೃಹ್ಣೀಯುರೋಜಸಾ ।
ಏತೇ ವಾ ಮಾಮಹಂ ವೈನಾನ್ ಅನುಜಾನೀಹಿ ಪಾರ್ಥಿವ ॥೩೯॥

ಶ್ರೀಭಗವಾನ್– ಎಲೈ ರಾಜನೇ, ಇವರು ಕ್ರುದ್ಧರಾಗಿ ತಮ್ಮ ಸಾಮರ್ಥ್ಯದಿಂದ ನನ್ನನ್ನು ಬಂಧಿಸುವುದಾದರೆ ಇವರು ನನ್ನನ್ನು ಬಂಧಿಸಲಿ ಅಥವಾ ನಾನು ಅವರನ್ನು ಬಂಧಿಸಲಿ, ನನಗೆ ಅನುಮತಿಯನ್ನು ಕೊಡು.

ಏತಾನ್ ಹಿ ಸರ್ವಾನ್ ಸಂರಬ್ಧಾನ್ ನಿಯಂತುಮಹಮುತ್ಸಹೇ ।
ನ ತ್ವಹಂ ನಿಂದಿತಂ ಕರ್ಮ ಕುರ್ಯಾಂ ಪಾಪಂ ಕಥಂಚನ ॥೪೦॥

ಕೋಪಗೊಂಡ ಇವರೆಲ್ಲರನ್ನೂ ನಾನು ನಿಗ್ರಹಿಸಲು ಸಮರ್ಥನಾಗಿದ್ದೇನೆ. ಆದರೆ ನಾನು ನಿಂದಿತವಾದ ಪಾಪಕರ್ಮವನ್ನು ಎಂದೂ ಮಾಡುವುದಿಲ್ಲ.

ಪಾಂಡವಾರ್ಥೇ ಹಿ ಲುಭ್ಯಂತಃ ಸ್ವಾರ್ಥಾದ್ ಭ್ರಂಶ್ಯಂತಿ ತೇ ಸುತಾಃ ।
ಏತೇ ಚೇದೇವಮಿಚ್ಛಂತಿ ಕೃತಕಾರ್ಯೋ ಯುಧಿಷ್ಠಿರಃ ॥೪೧॥

ಪಾಂಡವರ ದ್ರವ್ಯವನ್ನು ಬಯಸುವ ಈ ನಿನ್ನ ಮಕ್ಕಳು ತಮ್ಮ ದ್ರವ್ಯವನ್ನೂ ಕಳೆದುಕೊಳ್ಳುತ್ತಾರೆ. ಇವರು ಹೀಗೆ ಬಯಸಿದರೆ ಯುಧಿಷ್ಠಿರನು ಕೃತಕೃತ್ಯನಾಗುತ್ತಾನೆ.

ಅದ್ಯೈವ ಹ್ಯಹಮೇನಾಂಶ್ಚ ಯೇ ಚೈನಾನನು ಭಾರತ ।
ನಿಗೃಹ್ಯ ರಾಜ್ಯೇ ರಾಜಾನಂ ಸ್ಥಾಪಯಿಷ್ಯಾಮಿ ಪಾಂಡವಮ್ ॥೪೨॥

ಎಲೈ ಭಾರತನೇ, ನಾನು ಈ ದಿನವೇ ಇವರನ್ನೂ ಮತ್ತು ಇವರ ಅನುಯಾಯಿಗಳನ್ನೂ ನಿಗ್ರಹಿಸಿ, ಯುಧಿಷ್ಠಿರನನ್ನು ರಾಜನನ್ನಾಗಿ ರಾಜ್ಯದಲ್ಲಿ ಸ್ಥಾಪಿಸುವೆನು.

ಏಷ ಮೇ ನಿಶ್ಚಯೋ ರಾಜನ್ ಯದ್ಯೇಷೋಽಸ್ಯ ವಿನಿಶ್ಚಯಃ ।
ನರ್ದಂತು ಸಹಿತಾಃ ಶಂಖಾಃ ಪಣವಾನಕನಿಸ್ವನೈಃ ॥೪೩॥

ಎಲೈ ರಾಜನೇ, ಇದೇ ದುರ್ಯೋಧನನ ನಿಶ್ಚಯವಾದರೆ, ಇದು ನನ್ನ ನಿಶ್ಚಯ. ಪಣವಾನಕ ಶಬ್ದಗಳಿಂದ ಕೂಡಿದ (ರಣ) ಶಂಖಗಳು ಮೊಳಗಲಿ.

ಅನಾಯಾಸೇನ ಪಾರ್ಥಾನಾಂ ವರ್ತತಾಂ ಚ ಶಿವಂ ಮಹತ್ ।
ನಿಗೃಹ್ಯ ರಾಜನ್ ಪಾರ್ಥೇಭ್ಯೋ ದದ್ಯಾಂ ಚೇತ್ ಸುಕೃತಂ ಭವೇತ್ ॥

ಅನಾಯಾಸದಿಂದ ಪಾರ್ಥರಿಗೆ ದೊಡ್ಡ ಕಲ್ಯಾಣ ಉಂಟಾಗಲಿ. ರಾಜನೇ, ನಿನ್ನ ಮಕ್ಕಳನ್ನು ನಿಗ್ರಹಿಸಿ ನಾನು ಪಾಂಡವರಿಗೆ ಕೊಡುವುದಾದರೆ ದೊಡ್ಡ ಪುಣ್ಯವು ಉಂಟಾದೀತು.

ಇದಂ ತು ನ ಪ್ರವರ್ತೇತ ನಿಂದಿತಂ ಕರ್ಮ ಭಾರತ ।
ಸನ್ನಿಧೌ ತೇ ಮಹಾರಾಜ ಕ್ರೋಧಜಂ ಪಾಪಬುದ್ಧಿಜಮ್ ॥೪೫॥

ಆದರೆ ಎಲೈ ಭಾರತನೇ, ಮಹಾರಾಜನೇ, ಕ್ರೋಧದಿಂದಲೂ ಮತ್ತು ಪಾಪ ಬುದ್ಧಿಯಿಂದಲೂ ಇವರು ಮಾಡಬೇಕೆಂದಿರುವ ನಿಂದಿತವಾದ ಕರ್ಮವು ನಿನ್ನ ಸನ್ನಿಧಿಯಲ್ಲಿ ನಡೆಯುವುದಿಲ್ಲ.

ಏಷ ದುರ್ಯೋಧನೋ ರಾಜನ್ ಯಥೇಚ್ಛತಿ ತಥಾಽಸ್ತು ತತ್ ।
ಅಹಂ ತು ಸರ್ವಾನ್ ಸಮಯಾನ್ ಅನುಜಾನಾಮಿ ತೇ ನೃಪ ॥೪೬॥

ಎಲೈ ರಾಜನೇ, ಈ ದುರ್ಯೋಧನನು ಹೇಗೆ ಇಚ್ಛಿಸುತ್ತಾನೋ ಅದರಂತೆ ಆಗಲಿ. ನಾನು ನಿನಗೆ ಎಲ್ಲ ಮಾರ್ಗಗಳನ್ನೂ ಕೊಡುತ್ತೇನೆ.

ವೈಶಂಪಾಯನಃ

ಏತಚ್ಛ್ರುತ್ವಾ ತು ವಿದುರಂ ಧೃತರಾಷ್ಟ್ರೋಽಭ್ಯಭಾಷತ ॥೪೭॥

ಕ್ಷಿಪ್ರಮಾನಯ ತಂ ಪಾಪಂ ರಾಜ್ಯಲುಬ್ಧಂ ಸುಯೋಧನಮ್ ।
ಸಹಮಿತ್ರಂ ಸಹಾಮಾತ್ಯಂ ಸಸೋದರ್ಯಂ ಸಹಾನುಗಮ್ ॥೪೮॥

ಶಕ್ನುಯಾಂ ಯದಿ ಪಂಥಾನಮವತಾರಯಿತುಂ ಪುನಃ ॥೪೯॥

ವೈಶಂಪಾಯನ– ಇದನ್ನು ಕೇಳಿದ ಧೃತರಾಷ್ಟ್ರನು ವಿದುರನನ್ನು ಕುರಿತು, ರಾಜ್ಯಲೋಭಿಯಾದ ಸುಯೋಧನನನ್ನು, ಅವನ ಮಿತ್ರರು, ಅಮಾತ್ಯರು, ಸೋದರರು ಮತ್ತು ಅನುಯಾಯಿಗಳೊಂದಿಗೆ ಬೇಗ ಕರೆದುಕೊಂಡು ಬಾ. ಅವನನ್ನು ಸನ್ಮಾರ್ಗದಲ್ಲಿ ಸ್ಥಾಪಿಸಲು ಸಾಧ್ಯವಾಗುವುದೇ ಎಂದು ಪ್ರಯತ್ನಪಡುತ್ತೇನೆ ಎಂದು ಹೇಳಿದನು.

ತತೋ ದುರ್ಯೋಧನಂ ಕ್ಷತ್ತಾ ಪುನಃ ಪ್ರಾವೇಶಯತ್ ಸಭಾಮ್ ।
ಅಕಾಮಂ ಭ್ರಾತೃಭಿಃ ಸಾರ್ಧಂ ರಾಜಭಿಃ ಪರಿವಾರಿತಮ್ ॥೫೦॥

ಅನಂತರ ವಿದುರನು ಸಭೆಗೆ ಪ್ರವೇಶಿಸಲು ಇಷ್ಟವಿಲ್ಲದ ದುರ್ಯೋಧನನನ್ನು ಅವನ ತಮ್ಮಂದಿರ ಮತ್ತು ರಾಜರ ಜೊತೆಯಲ್ಲಿ ಪುನಃ ಸಭೆಗೆ ಕರೆತಂದನು.

ಅಥ ದುರ್ಯೋಧನಂ ರಾಜಾ ಧೃತರಾಷ್ಟ್ರೋಽಭ್ಯಭಾಷತ ।
ಕರ್ಣದುಃಶಾಸನಾಭ್ಯಾಂ ಚ ರಾಜಭಿಶ್ಚಾಪಿ ಸಂವೃತಮ್ ॥೫೧॥

ಆಗ ಕರ್ಣ-ದುಃಶಾಸನರಿಂದ ಸಹಿತರಾದ, ಎಲ್ಲ ರಾಜರಿಂದ ಪರಿವೃತನಾದ ದುರ್ಯೋಧನನನ್ನು ಕುರಿತು ರಾಜನಾದ ಧೃತರಾಷ್ಟ್ರನು ಮಾತನಾಡಿದನು.

ನೃಶಂಸ ಹತಭೂಯಿಷ್ಠ ಕ್ಷುದ್ರಕರ್ಮಸಹಾಯವಾನ್ ।
ಪಾಪೈಃ ಸಹಾಯೈಃ ಸಂಗತ್ಯ ನಿಗೃಹೀತುಂ ಕಿಲೇಚ್ಛಸಿ ॥೫೨॥

ಎಲೈ ಕ್ರೂರಿಯೇ, ಪ್ರಾಯಃ ಹತನಾದವನೇ, ಕ್ಷುದ್ರಕರ್ಮವನ್ನು ಮಾಡುವವರ ಸಹಾಯವುಳ್ಳ ನೀನು ಆ ಪಾಪಿಗಳ ಸಹಾಯದಿಂದ ಒಟ್ಟು ಸೇರಿ ಕೃಷ್ಣನನ್ನು ಬಂಧಿಸಲು ಇಚ್ಛಿಸುತ್ತೀಯೆ.

ನಿರ್ಮೋಚನೇ ಷಟ್‌ಸಹಸ್ರಾಃ ಪಾಶೈರ್ಬದ್ಧ್ವಾ ಮಹಾಸುರಾಃ ।
ಗ್ರಹೀತುಂ ನಾಶಕಂಶ್ಚೈನಂ ತಂ ತ್ವಂ ಪ್ರಾರ್ಥಯಸೇ ಬಲಾತ್ ॥೫೩॥

ನಿರ್ಮೋಚನದಲ್ಲಿ ಮಹಾಸುರರು, ಆರು ಸಹಸ್ರ ಪಾಶಗಳಿಂದ ಬಂಧಿಸಿ ಯಾವನನ್ನು ಹಿಡಿಯುವುದಕ್ಕೆ ಸಾಧ್ಯವಾಗಲಿಲ್ಲವೋ ಅವನನ್ನು ನಿನ್ನ ಬಲದಿಂದ ಹಿಡಿಯುವುದಕ್ಕೆ ಆಶಿಸುತ್ತಿದ್ದೀಯೆ.

ಪ್ರಾಗ್‌ಜ್ಯೋತಿಷಗತಂ ಶೌರಿಂ ನರಕಃ ಸಹ ದಾನವೈಃ ।
ಗ್ರಹೀತುಂ ನಾಶಕತ್ ತತ್ರ ತ್ವಂ ತಂ ಪ್ರಾರ್ಥಯಸೇ ಬಲಾತ್ ॥೫೪॥

ಪ್ರಾಗ್‌ಜ್ಯೋತಿಷಪಟ್ಟಣಕ್ಕೆ ಹೋದ ಕೃಷ್ಣನನ್ನು ದಾನವರಿಂದ ಕೂಡಿದ ನರಕಾಸುರನು ಅಲ್ಲಿ ಹಿಡಿಯಲು ಸಾಧ್ಯವಾಗಲಿಲ್ಲ. ಅವನನ್ನು ನೀನು ನಿನ್ನ ಬಲದಿಂದ ಹಿಡಿಯಲು ಯೋಚಿಸುತ್ತಿದ್ದೀಯೆ.

ಅನೇನ ಹಿ ಹತಾ ಬಾಲ್ಯೇ ಪೂತನಾ ಶಿಶುನಾ ತದಾ ।
ಗೋವರ್ಧನೋ ಧಾರಿತಶ್ಚ ಗವಾರ್ಥೇ ಭರತರ್ಷಭ ॥೫೫॥

ಎಲೈ ಭರತರ್ಷಭನೇ, ಇವನು ಬಾಲ್ಯದಲ್ಲಿ ಶಿಶುವಾಗಿದ್ದಾಗಲೇ ಪೂತನಿಯನ್ನು ಕೊಂದನು. ಗೋವುಗಳ ಸಲುವಾಗಿ ಗೋವರ್ಧನ ಪರ್ವತವನ್ನು ಎತ್ತಿ ಹಿಡಿದನು.

ಅರಿಷ್ಟೋ ಧೇನುಕಶ್ಚೈವ ಚಾಣೂರಶ್ಚ ಮಹಾತ್ಮನಾ ।
ಅಶ್ವರಾಜಶ್ಚ ನಿಹತಃ ಕಂಸಶ್ಚಾರಿಷ್ಟಮಾಚರನ್ ॥೫೬॥

ಅರಿಷ್ಟ, ಧೇನುಕ, ಚಾಣೂರ, ಅಶ್ವರಾಜ (ಕೇಶೀ) ಎಲ್ಲರೂ ಈ ಮಹಾತ್ಮನಿಂದ ಹತರಾದರು. ದುಷ್ಟತನದಿಂದ ನಡೆದುಕೊಳ್ಳುವ ಕಂಸನೂ ಹತನಾದನು.

ಜರಾಸಂಧೋ ದಂತವಕ್ರಃ ಶಿಶುಪಾಲಶ್ಚ ವೀರ್ಯವಾನ್ ।
ಬಾಣಶ್ಚ ನಿಹತಃ ಸಂಖ್ಯೇ ರಾಜಾನಶ್ಚ ನಿಷೂದಿತಾಃ ॥೫೭॥

ಜರಾಸಂಧ, ದಂತವಕ್ರ, ಪರಾಕ್ರಮಶಾಲಿಯಾದ ಶಿಶುಪಾಲ, ಬಾಣ ಇವರು ಯುದ್ಧದಲ್ಲಿ ಹತರಾದರು ಮತ್ತು ಇನ್ನೂ ಅನೇಕ ರಾಜರೂ ಹತರಾದರು.

ವರುಣೋ ನಿರ್ಜಿತೋ ರಾಜಾ ಪಾವಕಶ್ಚಾಮಿತೌಜಸಾ ।
ಪಾರಿಜಾತಂ ಚ ಹರತಾ ಜಿತಃ ಸಾಕ್ಷಾಚ್ಛಚೀಪತಿಃ ॥೫೮॥

ಪಾರಿಜಾತ ಅಪಹರಣ ಕಾಲದಲ್ಲಿ ಅಮಿತ ಪರಾಕ್ರಮಿಯಾದ ಇವನಿಂದ ಜಲಾಧಿಪತಿಯಾದ ವರುಣನೂ ಮತ್ತು ಅಗ್ನಿಯೂ ಮತ್ತು ಸಾಕ್ಷಾತ್ ಶಚೀಪತಿಯಾದ ದೇವೇಂದ್ರನೂ ಪರಾಜಿತರಾದರು.

ಏಕಾರ್ಣವೇ ಚ ಸ್ವಪತಾ ನಿಹತೌ ಮಧುಕೈಟಭೌ ।
ಜನ್ಮಾಂತರಮುಪಾಗಮ್ಯ ಹಯಗ್ರೀವಸ್ತಥಾ ಹಯಃ ॥೫೯॥

ಪ್ರಳಯಕಾಲದಲ್ಲಿ ಏಕಾರ್ಣವದಲ್ಲಿ ನಿದ್ರೆಯನ್ನು ಮಾಡುವ ಅವನಿಂದ ಮಧು-ಕೈಟಭರು ಹತರಾದರು. ಇನ್ನೊಂದು ಜನ್ಮದಲ್ಲಿ ಹಯರೂಪವನ್ನು ಧರಿಸಿದ ಹಯಗ್ರೀವಾಸುರನು ಹತನಾದನು.

ಅಯಂ ಚ ಕರ್ತಾ ನ ಕ್ರಿಯತೇ ಕಾರಣಂ ಚಾಪಿ ಪೌರುಷೇ ।
ಯದ್ಯದಿಚ್ಛೇದಯಂ ಶೌರಿಃ ತತ್ತತ್ ಕುರ್ಯಾದಯತ್ನತಃ ॥೬೦॥

ಇವನು ಎಲ್ಲವನ್ನೂ ಮಾಡುವವನು. ಯಾರಿಂದಲೂ ಮಾಡಲ್ಪಡುವುದಿಲ್ಲ. ಎಲ್ಲರ ಪೌರುಷಕ್ಕೆ ಕಾರಣನಾದವನು. ಈ ಕೃಷ್ಣನು ಏನೇನು ಮಾಡಬೇಕೆಂದು ಇಚ್ಛಿಸುತ್ತಾನೆಯೋ ಅದೆಲ್ಲವನ್ನೂ ಅನಾಯಾಸವಾಗಿ ಮಾಡುವನು.

ತಂ ನ ಬುಧ್ಯಸಿ ಗೋವಿಂದಂ ಘೋರವಿಕ್ರಮಮಚ್ಯುತಮ್ ।
ಆಶೀವಿಷಮಿವ ಕ್ರುದ್ಧಂ ತೇಜಸಾಂ ರಾಶಿಮೂರ್ಜಿತಮ್ ॥೬೧॥

ಅಂತಹ ಘೋರಪರಾಕ್ರಮವುಳ್ಳ, ತೇಜೋರಾಶಿಯಾದ, ಕ್ರುದ್ಧನಾದ, ಎಂದೂ ನಾಶವನ್ನು ಹೊಂದದ, ಕೋಪಗೊಂಡ ಸರ್ಪದಂತಿರುವ ಗೋವಿಂದನನ್ನು ನೀನು ತಿಳಿಯುತ್ತಿಲ್ಲ.

ಉದ್ಧರ್ಷಯನ್ ಮಹಾಬಾಹುಂ ಕೃಷ್ಣಮಕ್ಲಿಷ್ಟಕಾರಿಣಮ್ ।
ಪತಂಗೋಽಗ್ನಿಮಿವಾಸಾದ್ಯ ಸಾಮಾತ್ಯೋ ನ ಭವಿಷ್ಯಸಿ ॥೬೨॥

ಅಕ್ಲಿಷ್ಟಕಾರಿಯೂ, ಮಹಾಬಾಹುವೂ ಆದ ಕೃಷ್ಣನನ್ನು ವಿಶೇಷವಾಗಿ ಅವಮಾನ ಮಾಡುವವನಾಗಿ ನೀನು ಪತಂಗವು ಅಗ್ನಿಯನ್ನು ಸಮೀಪಿಸಿದಂತೆ ಅಮಾತ್ಯರ ಜೊತೆಯಲ್ಲಿ ನಾಶವನ್ನು ಹೊಂದುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನತ್ರಿಂಶೋತ್ತಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತನೆಯ ಅಧ್ಯಾಯ

ವಿಶ್ವರೂಪವನ್ನು ತೋರಿಸಿ ಸಭೆಯಿಂದ ಕೃಷ್ಣನ ನಿರ್ಗಮನ.

ವೈಶಂಪಾಯನಃ

ವಿದುರೇಣೈವಮುಕ್ತೇ ತು ಕೇಶವಃ ಪರವೀರಹಾ ।
ದುರ್ಯೋಧನಂ ಧಾರ್ತರಾಷ್ಟ್ರಮಭ್ಯಭಾಷತ ವೀರ್ಯವಾನ್ ॥೧॥

ವೈಶಂಪಾಯನ– ವಿದುರನು ಹೀಗೆ ಹೇಳುತ್ತಿರಲು ಪರವೀರಘಾತಕನೂ, ಪರಾಕ್ರಮಶಾಲಿಯೂ ಆದ ಕೇಶವನು ಧೃತರಾಷ್ಟ್ರಪುತ್ರನಾದ ದುರ್ಯೋಧನನನ್ನು ಕುರಿತು ಮಾತನಾಡಿದನು.

ಏಕೋಽಹಮಿತಿ ಯನ್ಮೋಹಾನ್ಮನ್ಯಸೇ ಮಾಂ ಸುಯೋಧನ ।
ಪರಿಭೂಯ ಸುದುರ್ಬುದ್ಧೇ ಗ್ರಹೀತುಂ ಮಾಂ ಚಿಕೀರ್ಷಸಿ ॥೨॥

ಎಲೈ ಸುಯೋಧನನೇ, ನೀನು ಮೋಹದಿಂದ ಇಲ್ಲಿ ನಾನೊಬ್ಬನೇ ಇದ್ದೇನೆಂದು ಭಾವಿಸುತ್ತಿದ್ದೀಯೆ. ಎಲೈ ದುರ್ಬುದ್ಧಿಯೇ, ನನ್ನನ್ನು ಸೋಲಿಸಿ ಬಂಧಿಸಲು ಯೋಚಿಸುತ್ತಿದ್ದೀಯೆ.

ಇಹೈವ ಪಾಂಡವಾಃ ಸರ್ವೇ ತಥೈವಾಂಧಕವೃಷ್ಣಯಃ ।
ಇಹಾದಿತ್ಯಾಶ್ಚ ರುದ್ರಾಶ್ಚ ವಸವಶ್ಚ ಮಹರ್ಷಿಭಿಃ ॥೩॥

ಏವಮುಕ್ತ್ವಾ ಜಹಾಸೋಚ್ಚೈಃ ಕೇಶವಃ ಪರವೀರಹಾ ॥೪॥

ಇಲ್ಲಿಯೇ ಪಾಂಡವರಿದ್ದಾರೆ, ಹಾಗೆಯೇ ಎಲ್ಲಾ ಅಂಧಕವೃಷ್ಣಿಗಳು ಇಲ್ಲಿಯೇ ಇದ್ದಾರೆ. ಮಹರ್ಷಿ-ರುದ್ರಾದಿಗಳಿಂದ ಸಹಿತರಾದ ವಸು-ರುದ್ರಾದಿತ್ಯರೂ ಇಲ್ಲಿಯೇ ಇದ್ದಾರೆ. ಹೀಗೆ ಹೇಳಿ ಪರವೀರ ಘಾತಕನಾದ ಕೇಶವನು ಗಟ್ಟಿಯಾಗಿ ನಕ್ಕನು.

ತಸ್ಯ ಸಂಸ್ಮಯತಃ ಶೌರೈರ್ವಿದ್ಯುದ್ರೂಪಾ ಮಹಾತ್ಮನಃ ।
ಯುಗಪಚ್ಚ ವಿನಿಷ್ಪೇತುಃ ಸಾಕ್ಷಾತ್ ಸರ್ವಾಶ್ಚ ದೇವತಾಃ ॥೫॥

ಅಂಗುಷ್ಠಮಾತ್ರಾಸ್ತ್ರಿದಶಾ ಮುಮುಚುಃ ಪಾವಕಾರ್ಚಿಷಃ ॥೬॥

ಹೀಗೆ ನಗುತ್ತಿದ್ದ ಮಹಾತ್ಮನಾದ ಶೌರಿಯ ದೇಹದಿಂದ ಎಲ್ಲ ದೇವತೆಗಳೂ ಒಂದೇ ಕಾಲದಲ್ಲಿ ಅವರ ಸಾಕ್ಷಾತ್ ರೂಪದಿಂದ ಹೊರಗೆ ಬಂದರು. ಅಂಗುಷ್ಠ ಮಾತ್ರ ಪರಿಮಾಣ ಉಳ್ಳ ಆ ದೇವತೆಗಳು ಅಗ್ನಿಯ ಜ್ವಾಲೆಯಂತಿರುವ ಪ್ರಕಾಶವನ್ನು ಉಂಟು ಮಾಡಿದರು.

ತಸ್ಯ ಬ್ರಹ್ಮಾ ಲಲಾಟಸ್ಥೋ ರುದ್ರೋ ವಕ್ಷಸಿ ಚಾಭವತ್ ।
ಲೋಕಪಾಲಾ ಭುಜೇಷ್ವಾಸನ್ನಗ್ನಿರಾಸ್ಯಾದಜಾಯತ ॥೭॥

ಅವನ ಲಲಾಟದಲ್ಲಿ ಬ್ರಹ್ಮನೂ, ವಕ್ಷಸ್ಥಲದಲ್ಲಿ ರುದ್ರನೂ ಉಂಟಾದರು. ಲೋಕಪಾಲಕರು ಭುಜಗಳಲ್ಲಿಯೂ, ಅಗ್ನಿಯು ಮುಖದಿಂದಲೂ ಜನಿಸಿದರು.

ಆದಿತ್ಯಾಶ್ಚೈವ ಸಾಧ್ಯಾಶ್ಚ ವಸವೋऽಥಾಶ್ವಿನಾವಪಿ ।
ಮರುತಶ್ಚ ಸಹೇಂದ್ರೇಣ ವಿಶ್ವೇ ದೇವಾಸ್ತಥೈವ ಚ ॥೮॥

ಬಭೂವುಶ್ಚೈವ ಯಕ್ಷಾಶ್ಚ ಗಂಧರ್ವೋರಗರಾಕ್ಷಸಾಃ ॥೯॥

ಆದಿತ್ಯರು, ಸಾಧ್ಯರು, ವಸುಗಳು, ಅಶ್ವಿನೀದೇವತೆಗಳು, ಇಂದ್ರನಿಂದ ಕೂಡಿದ ಮರುತ್ತುಗಳು, ವಿಶ್ವೇದೇವತೆಗಳು, ಯಕ್ಷರು, ಗಂಧರ್ವರು, ಸರ್ಪಗಳು, ರಾಕ್ಷಸರು ಎಲ್ಲರೂ ಅವನ ದೇಹದಿಂದ ಹೊರ ಬಂದರು.

ಪ್ರಾದುರಾಸ್ತಾಂ ತದಾ ದೋರ್ಭ್ಯಾಂ ಸಂಕರ್ಷಣಧನಂಜಯೌ ।
ದಕ್ಷಿಣೇ ಚಾರ್ಜುನೋ ಧನ್ವೀ ಹಲೀ ರಾಮಶ್ಚ ಸವ್ಯತಃ ॥೧೦॥

ಭೀಮೋ ಯುಧಿಷ್ಠಿರಶ್ಚೈವ ಮಾದ್ರೀಪುತ್ರೌ ಚ ಪೃಷ್ಠತಃ ॥೧೧॥

ಅವನ ಎರಡು ಬಾಹುಗಳಿಂದ ಬಲರಾಮ ಮತ್ತು ಅರ್ಜುನರೂ ಪ್ರಾದುರ್ಭವಿಸಿದರು. ದಕ್ಷಿಣ ಬಾಹುವಿನಿಂದ ಧನುಸ್ಸನ್ನು ಹಿಡಿದ ಅರ್ಜುನನು, ಎಡಬಾಹುವಿನಿಂದ ಹಲಾಯುಧವನ್ನು ಹಿಡಿದ ಬಲರಾಮನು ಹೊರಬಂದರು. ಭೀಮ ಯುಧಿಷ್ಠಿರ ಮತ್ತು ನಕುಲ-ಸಹದೇವರು ಅವನ ಬೆನ್ನಿನಿಂದ ಹೊರಬಂದರು.

ಅಂಧಕಾ ವೃಷ್ಣಯಶ್ಚೈವ ಪ್ರದ್ಯುಮ್ನಪ್ರಮುಖಾಸ್ತತಃ ।
ಅರ್ಚಿಷ್ಯಭೂವನ್ ಕೃಷ್ಣಸ್ಯ ಸಮುದ್ಯತಮಹಾಯುಧಾಃ ॥೧೨॥

ಅಂಧಕರೂ, ಪ್ರದ್ಯುಮ್ನ ಮೊದಲಾದ ವೃಷ್ಣಿಗಳೂ ಎಲ್ಲರೂ ಎತ್ತಿದ ದೊಡ್ಡ ಆಯುಧಗಳನ್ನು ಹಿಡಿದು ಕೃಷ್ಣನ ಕಾಂತಿಯ ಜ್ವಾಲೆಗಳಲ್ಲಿ ಕಂಡುಬಂದರು.

ಶಂಖಚಕ್ರಗದಾಶಕ್ತಿಶಾರ್ಙ್ಗಲಾಂಗಲನಂದಕಾಃ ।
ಅದೃಶ್ಯಂತೋದ್ಯತಾನ್ಯೇವ ಸರ್ವಪ್ರಹರಣಾನಿ ಚ ॥೧೩॥

ನಾನಾ ಬಾಹುಷು ಕೃಷ್ಣಸ್ಯ ದೀಪ್ಯಮಾನಾನಿ ಸರ್ವಶಃ ॥೧೪॥

ಶಂಖ, ಚಕ್ರ, ಗದಾ, ಶಕ್ತಿ, ಶಾರ್ಙ್ಗ, ಲಾಂಗಲ, ನಂದಕ ಖಡ್ಗ ಮೊದಲಾದ ಉದ್ಯತವಾದ (ಎತ್ತಿಹಿಡಿದ), ಎಲ್ಲಾ ಪ್ರಕಾಶಮಾನವಾದ ಆಯುಧಗಳೂ ಕೃಷ್ಣನ ನಾನಾ ಬಾಹುಗಳಲ್ಲಿ ಕಾಣಿಸಿಕೊಂಡವು.

ನೇತ್ರಾಭ್ಯಾಂ ನಾಸಿಕಾಭ್ಯಾಂ ಚ ಶ್ರೋತ್ರಾಭ್ಯಾಂ ಚ ಸಮಂತತಃ ।
ಪ್ರಾದುರಾಸನ್ ಮಹಾರೌದ್ರಾಃ ಸಧೂಮಾಃ ಪಾವಕಾರ್ಚಿಷಃ ॥೧೫॥

ರೋಮಕೂಪೇಷು ಚ ತಥಾ ಸೂರ್ಯಸ್ಯೇವ ಮರೀಚಯಃ ॥೧೬॥

ಅವನ ನೇತ್ರಗಳಿಂದಲೂ, ನಾಸಿಕಗಳಿಂದಲೂ, ಶ್ರೋತ್ರಗಳಿಂದಲೂ ಮಹಾಭಯಂಕರವಾದ, ಧೂಮಸಹಿತವಾದ ಅಗ್ನಿಯ ಕಿಡಿಗಳು ಹೊರಬಂದವು.

ರೋಮಕೂಪಗಳಿಂದಲೂ ಸೂರ್ಯನ ಕಿರಣಗಳಂತಿದ್ದ ಅಗ್ನಿಯ ಕಿಡಿಗಳು ಹೊರಬಂದವು.

ತೇ ದೃಷ್ಟ್ವಾ ಪರಮಾತ್ಮಾನಂ ಕೇಶವಸ್ಯ ಮಹಾತ್ಮನಃ ।
ನ್ಯಮೀಲಯಂತ ನೇತ್ರಾಣಿ ರಾಜಾನಸ್ತ್ರಸ್ತಚೇತಸಃ ॥೧೭॥

ಆ ರಾಜರು ಹೆದರಿದ ಮನಸ್ಸುಳ್ಳವರಾಗಿ ಮಹಾತ್ಮನಾದ ಕೇಶವನ ಆ ಶ್ರೇಷ್ಠ ಸ್ವರೂಪವನ್ನು ನೋಡಿ ಕಣ್ಣುಗಳನ್ನು ಮುಚ್ಚಿಕೊಂಡರು.

ಋತೇ ದ್ರೋಣಂ ಚ ಭೀಷ್ಮಂ ಚ ವಿದುರಂ ಚ ಮಹಾಮತಿಮ್ ।
ಸಂಜಯಂ ಚ ಮಹಾಭಾಗಂ ಋಷೀಂಶ್ಚೈವ ತಪೋಧನಾನ್ ॥೧೮॥

ಪ್ರಾದಾತ್ ತೇಷಾಂ ಸ ಭಗವಾನ್ ದಿವ್ಯಂ ಚಕ್ಷುರ್ಜನಾರ್ದನಃ ॥೧೦॥

ದ್ರೋಣರು, ಭೀಷ್ಮರು, ಮಹಾಬುದ್ಧಿಯುಳ್ಳ ವಿದುರ, ಮಹಾನುಭಾವನಾದ ಸಂಜಯ, ತಪೋಧನರಾದ ಋಷಿಗಳು (ಇವರನ್ನು ಬಿಟ್ಟು ಉಳಿದವರೆಲ್ಲರೂ ಕಣ್ಣು ಮುಚ್ಚಿದರು) ಇವರಿಗೆ ಮಾತ್ರ ಭಗವಂತನಾದ ಕೃಷ್ಣನು ದಿವ್ಯದೃಷ್ಟಿಯನ್ನು ಕೊಟ್ಟನು.

ತತ್ರಾಶ್ಚರ್ಯಮಭೂದ್ ರಾಜನ್ ಧೃತರಾಷ್ಟ್ರಃ ಸ್ವಚಕ್ಷುಷೀ ।
ಲಬ್ಧವಾನ್ ವಾಸುದೇವಸ್ಯ ವಿಶ್ವರೂಪದಿದೃಕ್ಷಯಾ ॥೨೦॥

ಎಲೈ ರಾಜನೇ, ಅಲ್ಲಿ ಒಂದು ಆಶ್ಚರ್ಯಕರವಾದ ಘಟನೆಯು ನಡೆಯಿತು. ವಾಸುದೇವನ ವಿಶ್ವರೂಪವನ್ನು ನೋಡಲು ಅಪೇಕ್ಷಿಸಿದ ಧೃತರಾಷ್ಟ್ರನು ತನ್ನ ಎರಡೂ ಕಣ್ಣುಗಳಲ್ಲಿ ದೃಷ್ಟಿಯನ್ನು ಪಡೆದನು.

ಲಬ್ಧಚಕ್ಷುಷಮಾಸೀನಂ ಧೃತರಾಷ್ಟ್ರಂ ನರಾಧಿಪಾಃ ।
ವಿಸ್ಮಿತಾ ಋಷಿಭಿಃ ಸಾರ್ಧಂ ತುಷ್ಟುವುರ್ಮಧುಸೂದನಮ್ ॥೨೧॥

ದೃಷ್ಟಿಯನ್ನು ಪಡೆದ ಧೃತರಾಷ್ಟ್ರನನ್ನು ನೋಡಿ ರಾಜರು ವಿಸ್ಮಿತರಾಗಿ ಋಷಿಗಳ ಜೊತೆಯಲ್ಲಿ ಮಧುಸೂದನನನ್ನು ಸ್ತೋತ್ರ ಮಾಡಿದರು.

ತದ್ ದೃಷ್ಟ್ವಾ ಮಹದಾಶ್ಚರ್ಯಂ ಮಾಧವಸ್ಯ ಸಭಾತಲೇ ।
ದೇವದುಂದುಭಯೋ ನೇದುಃ ಪುಷ್ಪವರ್ಷಂ ಪಪಾತ ಚ ॥೨೨॥

ಕೃಷ್ಣನು ಸಭಾತಳದಲ್ಲಿ ಮಾಡಿದ ಈ ದೊಡ್ಡ ಆಶ್ಚರ್ಯವನ್ನು ನೋಡಿ ದೇವದುಂದುಭಿಗಳು ಮೊಳಗಿದವು. ಪುಷ್ಪವರ್ಷವು ಉಂಟಾಯಿತು.

ಧೃತರಾಷ್ಟ್ರಃ

ತ್ವಮೇವ ಪುಂಡರೀಕಾಕ್ಷ ಸರ್ವಸ್ಯ ಜಗತಃ ಪ್ರಭುಃ ।
ತಸ್ಮಾನ್ಮೇ ಯಾದವಶ್ರೇಷ್ಠ ಪ್ರಸಾದಂ ಕರ್ತುಮರ್ಹಸಿ ॥೨೩॥

ಧೃತರಾಷ್ಟ್ರ– ಪುಂಡರೀಕಾಕ್ಷನೇ, ನೀನೇ ಎಲ್ಲ ಜಗತ್ತಿಗೂ ಒಡೆಯನಾದವನು. ಆದ್ದರಿಂದ ಯಾದವ ಶ್ರೇಷ್ಠನೇ, ನನಗೆ ಅನುಗ್ರಹವನ್ನು ಮಾಡಬೇಕು.

ದೇವದೇವ ಮಹಾಯೋಗಿನ್ ವಾಸುದೇವ ಜನಾರ್ದನ ।
ಭಗವನ್ ಮಮ ನೇತ್ರಾಭ್ಯಾಮಂತರ್ಧಾನಂ ವೃಣೇ ಪುನಃ ॥೨೪॥

ಭವಂತಂ ದೃಷ್ಟವಾನಸ್ಮಿ ನಾನ್ಯಂ ದ್ರಷ್ಟುಮಿಹೋತ್ಸಹೇ ॥೨೫॥

ಎಲೈ ದೇವದೇವನೇ, ಮಹಾಯೋಗಿಯೇ, ವಾಸುದೇವನೇ, ಜನಾರ್ದನನೇ, ಭಗವಂತನೇ, ನನ್ನ ದೃಷ್ಟಿಯನ್ನು ಹಿಂದಕ್ಕೆ ತೆಗೆದುಕೊ ಎಂದು ನಾನು ವರವನ್ನು ಬೇಡುತ್ತೇನೆ. ನಿನ್ನನ್ನು ನೋಡಿದ ಈ ಕಣ್ಣುಗಳಿಂದ ನಾನು ಇನ್ನೊಬ್ಬನನ್ನು ನೋಡಲು ಬಯಸುವುದಿಲ್ಲ.

ವೈಶಂಪಾಯನಃ

ತತೋಽಬ್ರವೀನ್ಮಹಾಬಾಹುರ್ಧೃತರಾಷ್ಟ್ರಂ ಜನಾರ್ದನಃ ॥೨೬॥

ಅದೃಶ್ಯಮಾನೇ ನೇತ್ರೇ ದ್ವೇ ಭವೇತಾಂ ಕುರುನಂದನ ॥೨೭॥

ವೈಶಂಪಾಯನ– ಆಗ ಮಹಾಬಾಹುವಾದ ಜನಾರ್ದನನು ಧೃತರಾಷ್ಟ್ರನನ್ನು ಕುರಿತು ಎಲೈ ಕುರುನಂದನನೇ, ನಿನ್ನ ಎರಡೂ ಕಣ್ಣುಗಳು ಪುನಃ ಕಾಣಿಸದಂತೆ ಆಗುವವು ಎಂದು ಹೇಳಿದನು.

ವೈಶಂಪಾಯನಃ

ಚಚಾಲ ಚ ಮಹೀ ಕೃತ್ಸ್ನಾ ಸಾಗರಶ್ಚಾಪಿ ಚುಕ್ಷುಭೇ ।
ವಿಸ್ಮಯಂ ಪರಮಂ ಜಗ್ಮುಃ ಪಾರ್ಥಿವಾ ಭರತರ್ಷಭ ॥೨೮॥

ವೈಶಂಪಾಯನ– ಆಗ ಭೂಕಂಪವಾಯಿತು. ಸಾಗರಗಳಲ್ಲಿ ಕ್ಷೋಭೆ ಉಂಟಾಯಿತು. ಎಲೈ ಭರತರ್ಷಭನೇ, ಎಲ್ಲ ರಾಜರೂ ಬಹಳ ವಿಸ್ಮಯವನ್ನು ಹೊಂದಿದರು.

ತತಃ ಸ ಪುರುಷವ್ಯಾಘ್ರಃ ಸಂಜಹಾರ ವಪುಃ ಸ್ವಕಮ್ ।
ತಾಂ ದಿವ್ಯಾಮದ್ಭುತಾಂ ಚಿತ್ರಾಮ್ ಋದ್ಧಿಮತ್ತಾಮರಿಂದಮಃ ॥೨೯॥

ಅನಂತರ ಪುರುಷವ್ಯಾಘ್ರನೂ, ಅರಿಂದಮನೂ ಆದ ಅವನು ಆ ತನ್ನ ದಿವ್ಯವೂ, ಅದ್ಭುತವೂ, ವಿಚಿತ್ರವೂ, ಸರ್ವಸಂಪತ್ತಿನಿಂದ ಕೂಡಿದುದೂ ಆದ ಶರೀರವನ್ನು ಹಿಂದಕ್ಕೆ ತೆಗೆದುಕೊಂಡನು (ಅಂತರ್ಧಾನವಾಗುವಂತೆ ಮಾಡಿದನು).

ತತಃ ಸಾತ್ಯಕಿಮಾದಾಯ ಪಾಣೌ ವಿದುರಮೇವ ಚ ।
ಋಷಿಭಿಸ್ತೈರನುಜ್ಞಾತೋ ನಿರ್ಯಯೌ ಮಧುಸೂದನಃ ॥೩೦॥

ಅನಂತರ ಸಾತ್ಯಕಿಯನ್ನು ಕರೆದುಕೊಂಡು ಇನ್ನೊಂದು, ಕೈಯಲ್ಲಿ ವಿದುರನನ್ನು ಹಿಡಿದು ಋಷಿಗಳ ಅಪ್ಪಣೆಯನ್ನು ಪಡೆದು ಮಧುಸೂದನನು ಸಭೆಯಿಂದ ಹೊರಗೆ ಬಂದನು.

ಋಷಯೋಽಂತರ್ಹಿತಾ ಜಗ್ಮುಃ ತತಸ್ತೇ ನಾರದಾದಯಃ ।
ತಸ್ಮಿನ್ ಕೋಲಾಹಲೇ ವೃತ್ತೇ ತದದ್ಭುತಮಿವಾಭವತ್ ॥೩೧॥

ಆ ಕೋಲಾಹಲವು ನಡೆಯುತ್ತಿರುವಾಗ ನಾರದಾದಿ ಋಷಿಗಳು ಅಂತರ್ಧಾನವನ್ನು ಹೊಂದಿ ಹೊರಟು ಹೋದರು. ಅದು ಅದ್ಭುತವಾಗಿದ್ದಿತು.

ತಂ ಪ್ರಸ್ಥಿತಮಭಿಪ್ರೇಕ್ಷ್ಯ ಕೌರವಾಃ ಸಹ ರಾಜಭಿಃ ।
ಅನುಜಗ್ಮುರ್ನರವ್ಯಾಘ್ರಂ ದೇವಾ ಇವ ಶತಕ್ರತುಮ್ ॥೩೨॥

ಸಭೆಯಿಂದ ಹೊರಟ ಕೃಷ್ಣನನ್ನು ನೋಡಿ ರಾಜರಿಂದ ಸಹಿತರಾದ ಕೌರವರು ದೇವತೆಗಳು ಇಂದ್ರನನ್ನು ಹಿಂಬಾಲಿಸುವಂತೆ ನರವ್ಯಾಘ್ರನಾದ ಅವನನ್ನು ಹಿಂಬಾಲಿಸಿದರು.

ಅಚಿಂತಯನ್ನಮೇಯಾತ್ಮಾ ಸರ್ವಂ ತದ್ರಾಜಮಂಡಲಮ್ ।
ನಿಶ್ಚಕ್ರಾಮ ತತಃ ಶೌರಿಃ ಸಧೂಮ ಇವ ಪಾವಕಃ ॥೩೩॥

ಅಮೇಯಾತ್ಮನಾದ ಶೌರಿಯು ಆ ಎಲ್ಲಾ ರಾಜಮಂಡಲವನ್ನೂ ಗಣನೆಗೇ ತೆಗೆದುಕೊಳ್ಳದೆ ಧೂಮಸಹಿತವಾದ ಅಗ್ನಿಯಂತೆ ಸಭೆಯಿಂದ ಹೊರಗೆ ಬಂದನು.

ತತೋ ರಥೇನ ಶುಭ್ರೇಣ ಮಹತಾ ಕಿಂಕಿಣೀಕಿನಾ ।
ಹೇಮಜಾಲವಿಚಿತ್ರೇಣ ಲಘುನಾ ಮೇಘನಾದಿನಾ ॥೩೪॥

ಸೂಪಸ್ಕರೇಣ ಶುಭ್ರೇಣ ವೈಯಾಘ್ರೇಣ ವರೂಥಿನಾ ।
ಸೈನ್ಯಸುಗ್ರೀವಯುಕ್ತೇನ ಪ್ರತ್ಯದೃಶ್ಯತ ದಾರುಕಃ ॥೩೫॥

ಅನಂತರ ಶುಭ್ರವಾದ, ದೊಡ್ಡದಾದ, ಸಣ್ಣಗಂಟೆಗಳ ಮಾಲೆಗಳನ್ನು ಹೊಂದಿದ್ದ, ಸುವರ್ಣಮಯವಾದ ಜಾಲಗಳಿಂದ ಶೋಭಿಸುವ, ಹಗುರವಾದ ಮೇಘದಂತೆ ನಾದವನ್ನು ಮಾಡುವ, ಎಲ್ಲಾ ಸಲಕರಣೆಗಳಿಂದ ಕೂಡಿದ ವ್ಯಾಘ್ರಚರ್ಮ ರೂಪವಾದ ರಕ್ಷಣೆಯನ್ನು ಹೊಂದಿದ, ಸೈನ್ಯಸುಗ್ರೀವಯುಕ್ತವಾದ ರಥದಿಂದ ಸಹಿತನಾಗಿ ದಾರುಕನು ಕಾಣಿಸಿಕೊಂಡನು.

ತಥೈವ ರಥಮಾಸ್ಥಾಯ ಕೃತವರ್ಮಾ ಮಹಾರಥಃ ।
ವೃಷ್ಣೀನಾಂ ಸಮ್ಮತೋ ವೀರೋ ಹಾರ್ದಿಕ್ಯಃ ಸಮದೃಶ್ಯತ ॥೩೬॥

ಹಾಗೆಯೇ ವೃಷ್ಣಿಗಳಿಗೆ ಸಮ್ಮತನಾದ ವೀರನಾದ ಮಹಾರಥನಾದ ಹೃದಿಕನ ಮಗನಾದ ಕೃತವರ್ಮನೂ ಇನ್ನೊಂದು ರಥದಲ್ಲಿ ಕಾಣಿಸಿದನು.

ಉಪಸ್ಥಿತರಥಂ ಶೌರಿಂ ಪ್ರಯಾಸ್ಯಂತಮರಿಂದಮಮ್ ।
ಧೃತರಾಷ್ಟ್ರೋ ಮಹಾರಾಜಃ ಪುನರೇವಾಭ್ಯಭಾಷತ ॥೩೭॥

ರಥವು ಸಮೀಪಕ್ಕೆ ಬಂದ ಮೇಲೆ ಹೊರಟಿರುವ ಅರಿಂದಮನಾದ ಕೃಷ್ಣನನ್ನು ಕುರಿತು ಮಹಾರಾಜನಾದ ಧೃತರಾಷ್ಟ್ರನು ಪುನಃ ಮಾತನಾಡಿದನು.

ಯಾವದ್ಬಲಂ ಮೇ ಪುತ್ರೇಷು ಪಶ್ಯಸ್ಯೇತಜ್ಜನಾರ್ದನ ।
ಪ್ರತ್ಯಕ್ಷಂ ತೇ ನ ತೇ ಕಿಂಚಿತ್ ಪರೋಕ್ಷಂ ಶತ್ರುಸೂದನ ॥೩೮॥

ಕುರೂಣಾಂ ಶಮಮಿಚ್ಛಂತಂ ಯತಮಾನಂ ಚ ಕೇಶವ ।
ವಿದಿತ್ವೈತಾಮವಸ್ಥಾಂ ಮೇ ನಾಭಿಶಂಕಿತುಮರ್ಹಸಿ ॥೩೯॥

ಎಲೈ ಜನಾರ್ದನನೇ, ನನ್ನ ಮಕ್ಕಳಿಗೆ ಹೇಳಿ ಕುರುಗಳಿಗೆ ಶಾಂತಿಯನ್ನುಂಟು ಮಾಡಲು ನನ್ನ ಶಕ್ತಿ ಇದ್ದಷ್ಟು ಪ್ರಯತ್ನ ಪಡುವುದನ್ನು ನೀನು ನೋಡಿದ್ದೀಯೆ. ಎಲೈ ಕೇಶವನೇ, ಶತ್ರುಸೂದನನೇ, ಎಲ್ಲವೂ ನಿನ್ನ ಎದುರಿಗೇ ನಡೆದಿದೆ. ಯಾವುದೂ ಪರೋಕ್ಷವಲ್ಲ. ಈ ನನ್ನ ಅವಸ್ಥೆಯನ್ನು ತಿಳಿದು ನೀನು ನನ್ನನ್ನು ಶಂಕಿಸಬಾರದು.

ನ ಮೇ ಪಾಪೋಽಸ್ಯಭಿಪ್ರಾಯಃ ಪಾಂಡವಾನ್ ಪ್ರತಿ ಕೇಶವ ।
ಜ್ಞಾತಮೇವ ಹಿ ತೇ ವಾಕ್ಯಂ ಯನ್ಮಯೋಕ್ತಃ ಸುಯೋಧನಃ ॥೪೦॥

ಎಲೈ ಕೇಶವನೇ, ಪಾಂಡವರ ವಿಷಯದಲ್ಲಿ ನನಗೆ ಯಾವ ಕೆಟ್ಟ ಅಭಿಪ್ರಾಯವೂ ಇಲ್ಲ. ನಾನು ಸುಯೋಧನನಿಗೆ ಏನು ಮಾತನ್ನಾಡಿದ್ದೇನೆಯೋ ಅವೆಲ್ಲವನ್ನೂ ನೀನು ತಿಳಿದೇ ಇದ್ದೀಯೆ.

ಜಾನಂತಿ ಕುರವಃ ಸರ್ವೇ ರಾಜಾನಶ್ಚೈವ ಪಾರ್ಥಿವಾಃ ।
ಶಮೇ ಪ್ರಯತಮಾನಂ ಮಾಂ ಸರ್ವಯತ್ನೇನ ಮಾಧವ ॥೪೧॥

ಎಲೈ ಮಾಧವನೇ, ನಾನು ಸಂಧಿಗಾಗಿ ಸರ್ವ ಪ್ರಯತ್ನಪಡುತ್ತಿರುವುದನ್ನು ಎಲ್ಲ ರಾಜರು ಮತ್ತು ಕುರುಗಳು ತಿಳಿದಿದ್ದಾರೆ.

ತತೋಽಬ್ರವೀನ್ಮಹಾಬಾಹುರ್ಧೃತರಾಷ್ಟ್ರಂ ಜನೇಶ್ವರಮ್ ।
ದ್ರೋಣಂ ಪಿತಾಮಹಂ ಭೀಷ್ಮಂ ಕ್ಷತ್ತಾರಂ ಬಾಹ್ಲಿಕಂ ಕೃಪಮ್ ॥೪೫॥

ಪ್ರತ್ಯಕ್ಷಮೇತದ್ ಭವತಾಂ ಯದ್ ವೃತ್ತಂ ಕುರುಸಂಸದಿ ।
ಯಥಾ ಚಾಶಿಷ್ಟವನ್ಮಂದೋ ರೋಷಾದಸಕೃದುತ್ಥಿತಃ ॥೪೩॥

ವದತ್ಯನೀಶಮಾತ್ಮಾನಂ ಧೃತರಾಷ್ಟ್ರೋ ಮಹೀಪತಿಃ ।
ಆಪೃಚ್ಛೇ ಭವತಃ ಸರ್ವಾನ್ ಗಮಿಷ್ಯಾಮಿ ಯುಧಿಷ್ಠಿರಮ್ ॥೪೪॥

ಆಗ ಮಹಾಬಾಹುವಾದ ಕೃಷ್ಣನು ರಾಜನಾದ ಧೃತರಾಷ್ಟ್ರನನ್ನೂ, ದ್ರೋಣರನ್ನೂ, ಪಿತಾಮಹರಾದ ಭೀಷ್ಮರನ್ನೂ, ವಿದುರನನ್ನೂ, ಬಾಹ್ಲಿಕರಾಜನನ್ನೂ ಮತ್ತು ಕೃಪರನ್ನೂ ಉದ್ದೇಶಿಸಿ, ಕೌರವರ ಸಭೆಯಲ್ಲಿ ಏನು ನಡೆಯಿತೆಂಬುದನ್ನು ಮತ್ತು ಮಂದನಾದ ದುರ್ಯೋಧನನು ಅಶಿಕ್ಷಿತನಂತೆ ರೋಷದಿಂದ ಅನೇಕ ಬಾರಿ ಎದ್ದು ಹೊರಟುದನ್ನು

ನೀವು ಪ್ರತ್ಯಕ್ಷವಾಗಿ ನೋಡಿದ್ದೀರಿ. ಧೃತರಾಷ್ಟ್ರರಾಜನು ತಾನು ಅಸಮರ್ಥನೆಂದು ಹೇಳುತ್ತಾನೆ. ನಿಮ್ಮೆಲ್ಲರ ಅನುಮತಿಯನ್ನು ಕೇಳುತ್ತೇನೆ. ನಾನು ಯುಧಿಷ್ಠಿರನ ಬಳಿಗೆ ಹೋಗುವೆನು ಎಂದು ಹೇಳಿದನು.

ಆಮಂತ್ರ್ಯ ಪ್ರಸ್ಥಿತಂ ಶೌರಿಂ ರಥಸ್ಥಂ ಪುರುಷರ್ಷಭ ।
ಅನುಜಗ್ಮುರ್ಮಹೇಷ್ವಾಸಾಃ ಪ್ರವೀರಾ ಭರತರ್ಷಭಾಃ ॥೪೫॥

ಎಲೈ ಪುರುಷರ್ಷಭನೇ, ಎಲ್ಲರ ಅನುಮತಿಯನ್ನು ಪಡೆದು ರಥದಲ್ಲಿ ಹೊರಟ ಕೃಷ್ಣನನ್ನು ಮಹಾವೀರರೂ, ಮಹಾಧನುರ್ಧಾರಿಗಳೂ ಆದ ಭರತರ್ಷಭರು ಹಿಂಬಾಲಿಸಿದರು.

ಭೀಷ್ಮೋ ದ್ರೋಣಃ ಕೃಪಃ ಕ್ಷತ್ತಾ ಧೃತರಾಷ್ಟ್ರೋಽಥ ಬಾಹ್ಲಿಕಃ ।
ಅಶ್ವತ್ಥಾಮಾ ವಿಕರ್ಣಶ್ಚ ಯುಯುತ್ಸುಶ್ಚ ಮಹಾರಥಃ ॥೪೬॥

ಭೀಷ್ಮ, ದ್ರೋಣ, ಕೃಪ, ವಿದುರ, ಧೃತರಾಷ್ಟ್ರ, ಬಾಹ್ಲಿಕರಾಜ, ಅಶ್ವತ್ಥಾಮ, ವಿಕರ್ಣ ಮತ್ತು ಮಹಾರಥನಾದ ಯುಯುತ್ಸು - ಇವರೂ ಹಿಂಬಾಲಿಸಿದರು.

ತತೋ ರಥೇನ ಶುಭ್ರೇಣ ಮಹತಾ ಕಿಂಕಿಣೀಕಿನಾ ।
ಕುರೂಣಾಂ ಪಶ್ಯತಾಂ ದ್ರಷ್ಟುಂ ಸ್ವಸಾರಂ ಸ್ವಪಿತುರ್ಯಯೌ ॥೪೭॥

ಅನಂತರ ಶುಭ್ರವಾದ, ದೊಡ್ಡದಾದ ಗಂಟೆಗಳ ಮಾಲೆಯನ್ನು ಹೊಂದಿದ್ದ ರಥದಿಂದ (ರಥದಲ್ಲಿ ಕುಳಿತು) ತನ್ನ ಸೋದರತ್ತೆಯನ್ನು ನೋಡಲು ಕೌರವರು ನೋಡುತ್ತಿರುವಂತೆ ಕೃಷ್ಣನು ಪ್ರಯಾಣ ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಏಕಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಮೂವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೊಂದನೆಯ ಅಧ್ಯಾಯ

ಕುಂತಿಗೆ ಕೃಷ್ಣನಿಂದ ಸಭಾವೃತ್ತಾಂತದ ಕಥನ ಮತ್ತು
ಯುಧಿಷ್ಠಿರನಿಗೆ ಕುಂತಿಯ ಸಂದೇಶ.

ವೈಶಂಪಾಯನಃ

ಪ್ರವಿಶ್ಯಾಥ ಗೃಹಂ ಕುಂತ್ಯಾಃ ಚರಣಾವಭಿವಾದ್ಯ ಚ ।
ಆಚಖ್ಯೌ ತತ್ ಸಮಾಸೇನ ಯದ್ ವೃತ್ತಂ ಕುರುಸಂಸದಿ ॥೧॥

ವೈಶಂಪಾಯನ– ಕೃಷ್ಣನು ಕುಂತಿಯ ಮನೆಗೆ ಹೋಗಿ ಅವಳ ಪಾದಗಳಿಗೆ ನಮಸ್ಕರಿಸಿ, ಕೌರವರ ಸಭೆಯಲ್ಲಿ ನಡೆದ ವೃತ್ತಾಂತವನ್ನು ಸಂಕ್ಷೇಪವಾಗಿ ಹೇಳಿದನು.

ಶ್ರೀವಾಸುದೇವಃ

ಉಕ್ತಂ ಬಹುವಿಧಂ ವಾಕ್ಯಂ ಸ್ಪೃಹಣೀಯಂ ಸಹೇತುಕಮ್ ।
ಋಷಿಭಿಶ್ಚೈವ ಚ ಮಯಾ ನ ಚಾಸೌ ತದ್ ಗೃಹೀತವಾನ್ ॥೨॥

ಶ್ರೀವಾಸುದೇವ– ನಾನೂ ಮತ್ತು ಋಷಿಗಳೂ ಹೇತುಬದ್ಧವಾದ, ಸ್ವೀಕಾರಕ್ಕೆ ಯೋಗ್ಯವಾದ ಬಹುವಿಧ ಮಾತುಗಳನ್ನು ಹೇಳಿದೆವು. ಆದರೆ ಅದನ್ನು ಅವನು ಸ್ವೀಕರಿಸಲಿಲ್ಲ.

ಕಾಲಪಕ್ವಮಿದಂ ಸರ್ವಂ ಸುಯೋಧನವಶಾನುಗಮ್ ।
ಸರ್ವಕ್ಷತ್ರಂ ಕ್ಷಣೇನೈವ ದಹ್ಯತೇ ಪಾರ್ಥವಹ್ನಿನಾ ॥೩॥

ಇದೆಲ್ಲವೂ ಕಾಲಪಕ್ವವಾಗಿದೆ. ದುರ್ಯೋಧನನ ವಶವರ್ತಿಗಳಾದ ಎಲ್ಲಾ ಕ್ಷತ್ರಿಯರೂ ಒಂದು ಕ್ಷಣದಲ್ಲಿ ಪಾರ್ಥವಹ್ನಿಯಿಂದ ಸುಟ್ಟುಹೋಗುತ್ತಾರೆ.

ಆಪೃಚ್ಛೇ ಭವತೀಂ ಶೀಘ್ರಂ ಪ್ರಯಾಸ್ಯೇ ಪಾಂಡವಾನ್ ಪ್ರತಿ ॥೪॥

ಕಿಂ ವಾಚ್ಯಾಃ ಪಾಂಡವೇಯಾಸ್ತೇ ಭವತ್ಯಾ ವಚನಾನ್ಮಯಾ ।
ತದ್ ಬ್ರೂಹಿ ತ್ವಂ ಮಹಾಪ್ರಾಜ್ಞೇ ಶುಶ್ರೂಷೇ ವಚನಂ ತವ ॥೫॥

ನಿನ್ನ ಅನುಮತಿಯನ್ನು ಕೇಳುತ್ತೇನೆ. ನಾನು ಶೀಘ್ರವಾಗಿ ಪಾಂಡವರ ಬಳಿಗೆ ಹೋಗುವೆನು. ಪಾಂಡವರಿಗೆ ನಾನು ನಿನ್ನ ಯಾವ ಸಂದೇಶವನ್ನು ತಲುಪಿಸಬೇಕು? ಮಹಾಪ್ರಾಜ್ಞೆಯೇ, ಅದನ್ನು ನನಗೆ ಹೇಳು. ನಿನ್ನ ಮಾತನ್ನು ಕೇಳಲು ಬಯಸುತ್ತೇನೆ.

ಕುಂತೀ

ಬ್ರೂಯಾಃ ಕೇಶವ ರಾಜಾನಂ ಧರ್ಮಾತ್ಮಾನಂ ಯುಧಿಷ್ಠಿರಮ್ ।
ಭೂಯಾಂಸ್ತೇ ಹೀಯತೇ ಧರ್ಮೋ ಮಾ ಪುತ್ರಕ ವೃಥಾ ಕೃಥಾಃ ॥೬॥

ಕುಂತೀ– ಕೇಶವನೇ, ಧರ್ಮಿಷ್ಠನಾದ ಯುಧಿಷ್ಠಿರನಿಗೆ ಹೀಗೆ ಹೇಳು– 'ಎಲೈ ಪುತ್ರನೇ, ನಿನ್ನ ದೊಡ್ಡ ಧರ್ಮವು ನಾಶವನ್ನು ಹೊಂದುತ್ತಿದೆ. ವ್ಯರ್ಥವಾಗಿ ಅದನ್ನು ಕಳೆಯಬೇಡ.

ಶ್ರೋತ್ರಿಯಸ್ಯೇವ ತೇ ರಾಜನ್ ಮಂದಕಸ್ಯಾವಿಪಶ್ಚಿತಃ ।
ಅನುವಾಕಹತಾ ಬುದ್ಧಿಃ ಧರ್ಮಮೇವೈಕಮೀಕ್ಷತೇ ॥೭॥

ಮಂದನೂ, ಅವಿವೇಕಿಯೂ ಆದ ಶ್ರೋತ್ರಿಯನ ಬುದ್ಧಿಯು ಧರ್ಮಕಾಂಡದ ಕರ್ಮಗಳನ್ನು ಹೇಳುವ ಸೂಕ್ತವಾಕ್ಯಗಳಿಂದ ನಾಶ ಹೊಂದಿದಂತೆ ನಿನ್ನ ಬುದ್ಧಿಯು ಧರ್ಮ ಒಂದನ್ನೇ ನೋಡುತ್ತಿದೆ.

ಅಂಗಾವೇಕ್ಷಸ್ವ ಧರ್ಮಂ ತ್ವಂ ಯಥಾ ಸೃಷ್ಟಃ ಸ್ವಯಂಭುವಾ ॥೮॥

ಬಾಹುಭ್ಯಾಂ ಕ್ಷತ್ರಿಯಾಃ ಸೃಷ್ಟಾ ಬಾಹುವೀರ್ಯೋಪಜೀವಿನಃ ।
ಕ್ರೂರಾಯ ಕರ್ಮಣೇ ನಿತ್ಯಂ ಪ್ರಜಾನಾಂ ಪರಿಪಾಲನೇ ॥೯॥

ಪ್ರೀತಿಪಾತ್ರನೇ, ಬ್ರಹ್ಮದೇವರು ಸೃಷ್ಟಿಮಾಡಿದ ಧರ್ಮಗಳನ್ನು ನೀನು ನೋಡು. ಬಾಹುಗಳಿಂದ ಸೃಷ್ಟರಾದ ಕ್ಷತ್ರಿಯರು ಬಾಹುಪರಾಕ್ರಮದಿಂದ ಜೀವಿಸುವವರು. ಅವರು ಕ್ರೂರಕರ್ಮವನ್ನು ಮಾಡುವುದಕ್ಕೂ ಮತ್ತು ಪ್ರಜೆಗಳನ್ನು ರಕ್ಷಣೆ ಮಾಡುವುದಕ್ಕೂ ಸೃಷ್ಟರಾಗಿದ್ದಾರೆ.

ಶೃಣು ಚಾತ್ರೋಪಮಾಮೇಕಾಂ ಯಾ ವೃದ್ಧೇಭ್ಯಃ ಶ್ರುತಾ ಮಯಾ॥೧೦॥

ಮುಚುಕುಂದಸ್ಯ ರಾಜರ್ಷೇರದದಾತ್ ಪೃಥಿವೀಮಿಮಾಮ್ ।
ಪುರಾ ವೈಶ್ರವಣಃ ಪ್ರೀತೋ ನ ಚಾಸೌ ತದ್ ಗೃಹೀತವಾನ್ ॥೧೧॥

ಬಾಹುವೀರ್ಯಾರ್ಜಿತಂ ರಾಜ್ಯಮಶ್ನೀಯಾಮಿತಿ ಕಾಮಯೇ ।
ತತೋ ವೈಶ್ರವಣಃ ಪ್ರೀತೋ ವಿಸ್ಮಿತಃ ಸಮಪದ್ಯತ ॥೧೨॥

ಈ ವಿಷಯದಲ್ಲಿ ಹಿರಿಯರಿಂದ ನಾನು ಕೇಳಿದ ಒಂದು ದೃಷ್ಟಾಂತವನ್ನು ಕೇಳುವವನಾಗು. ಹಿಂದೆ ಕುಬೇರನು ಸಂತೋಷಗೊಂಡು ರಾಜರ್ಷಿಯಾದ ಮುಚುಕುಂದನಿಗೆ ಈ ಭೂಮಿಯನ್ನು ಕೊಟ್ಟನು. ಮುಚುಕುಂದನು ಅದನ್ನು ಸ್ವೀಕರಿಸಲಿಲ್ಲ. ನಾನು ನನ್ನ ಬಾಹುಬಲದಿಂದ ಸಂಪಾದಿಸಿದ ರಾಜ್ಯವನ್ನು ಭೋಗಿಸಲು ಆಸೆ ಪಡುತ್ತೇನೆ ಎಂದು ಹೇಳಿದನು. ಆಗ ಕುಬೇರನು ಸಂತುಷ್ಟನೂ, ವಿಸ್ಮಿತನೂ ಆದನು.

ಮುಚುಕುಂದಸ್ತತೋ ರಾಜಾ ಸೋಽನ್ವಶಾಸದ್ ವಸುಂಧರಾಮ್ ।
ಬಾಹುವೀರ್ಯಾರ್ಜಿತಾಂ ಸಮ್ಯಕ್ ಕ್ಷತ್ರಧರ್ಮಮನುವ್ರತಃ ॥೧೩॥

ಆನಂತರ ಮುಚುಕುಂದನು ತನ್ನ ಬಾಹುಬಲದಿಂದಲೇ ಭೂಮಿಯನ್ನು ಸಂಪಾದಿಸಿ, ಕ್ಷತ್ರಿಯ ಧರ್ಮವನ್ನು ಚೆನ್ನಾಗಿ ಅನುಸರಿಸುತ್ತಾ ಭೂಮಿಯನ್ನು ಆಳಿದನು.

ಯಂ ಹಿ ಧರ್ಮಂ ಚರಂತೀಹ ಪ್ರಜಾ ರಾಜ್ಞಾ ಸುರಕ್ಷಿತಾಃ ।
ಚತುರ್ಥಂ ತಸ್ಯ ಧರ್ಮಸ್ಯ ರಾಜಾ ವಿಂದೇತ ಭಾರತ ॥೧೪॥

ಎಲೈ ಭಾರತನೇ, ರಾಜರಿಂದ ಚೆನ್ನಾಗಿ ರಕ್ಷಿತರಾದ ಪ್ರಜೆಗಳು ಇಲ್ಲಿ ಯಾವ ಧರ್ಮವನ್ನು ಆಚರಿಸುತ್ತಾರೋ ಆ ಧರ್ಮದ ನಾಲ್ಕನೆಯ ಒಂದು ಭಾಗವು ರಾಜನಿಗೆ ಸೇರುತ್ತದೆ.

ರಾಜಾ ಚರತಿ ಚೇದ್ ಧರ್ಮಂ ದೇವತ್ವಾಯೈವ ಕಲ್ಪತೇ ।
ಸ ಚೇದಧರ್ಮಂ ಚರತಿ ನರಕಾಯೈವ ಗಚ್ಛತಿ ॥೧೫॥

ರಾಜನು ಧರ್ಮವನ್ನು ಆಚರಿಸಿದರೆ ಅವನು ದೇವಸ್ವಭಾವವನ್ನೇ ಹೊಂದುತ್ತಾನೆ. ಇಲ್ಲದೆ ಅಧರ್ಮವನ್ನು ಆಚರಿಸಿದರೆ ನರಕಕ್ಕೇ ಹೋಗುತ್ತಾನೆ.

ದಂಡನೀತಿಃ ಸ್ವಧರ್ಮೇಣ ಚಾತುರ್ವರ್ಣ್ಯಂ ನಿಯಚ್ಛತಿ ।
ಪ್ರಯುಕ್ತಾ ಸ್ವಾಮಿನಾ ಸಮ್ಯಗಧರ್ಮೇಭ್ಯೋ ನಿಯಚ್ಛತಿ ॥೧೬॥

ಸ್ವಾಮಿಯಾದ ರಾಜನಿಂದ ಸರಿಯಾಗಿ ಪ್ರಯೋಗಿಸಲ್ಪಟ್ಟ ದಂಡನೀತಿಯು ಚಾತುರ್ವರ್ಣ್ಯವನ್ನು ಅದರದರ ಧರ್ಮದಲ್ಲಿ ನಿಯಂತ್ರಿಸುತ್ತದೆ ಮತ್ತು ಅಧರ್ಮದಿಂದ ಹಿಂದೆ ಸರಿಯುವಂತೆ ಮಾಡುತ್ತದೆ.

ದಂಡನೀತ್ಯಾಂ ಯದಾ ರಾಜಾ ಸಮ್ಯಕ್ ಕಾರ್ತ್ಸ್ನ್ಯೇನ ವರ್ತತೇ ।
ತದಾ ಕೃತಯುಗಂ ನಾಮ ಕಾಲಃ ಶ್ರೇಷ್ಠಃ ಪ್ರವರ್ತತೇ ॥೧೭॥

ಯಾವಾಗ ರಾಜನು ದಂಡನೀತಿಯನ್ನು ಪೂರ್ಣವಾಗಿ ತಿಳಿದು ಚೆನ್ನಾಗಿ ಪ್ರಯೋಗಿಸುತ್ತಾನೆಯೋ ಆಗ ಕೃತಯುಗವೆಂಬ ಶ್ರೇಷ್ಠ ಕಾಲವು ಉಂಟಾಗುತ್ತದೆ.

ಕಾಲೋ ವಾ ಕಾರಣಂ ರಾಜ್ಞೋ ರಾಜಾ ವಾ ಕಾಲಕಾರಣಮ್ ।
ಇತಿ ತೇ ಸಂಶಯೋ ಮಾ ಭೂದ್ ರಾಜಾ ಕಾಲಸ್ಯ ಕಾರಣಮ್ ॥೧೮॥

ಕಾಲಕ್ಕೆ ರಾಜನು ಕಾರಣನೋ ಅಥವಾ ರಾಜನಿಗೆ ಕಾಲವು ಕಾರಣವೋ ಎಂಬ ಸಂಶಯವು ನಿನಗೆ ಬೇಡ. ರಾಜನೇ ಕಾಲಕ್ಕೆ ಕಾರಣ.

ರಾಜಾ ಕೃತಯುಗಸ್ರಷ್ಟಾ ತ್ರೇತಾಯಾ ದ್ವಾಪರಸ್ಯ ಚ ।
ಯುಗಸ್ಯ ಚ ಚತುರ್ಥಸ್ಯ ರಾಜಾ ಭವತಿ ಕಾರಣಮ್ ॥೧೯॥

ರಾಜನೇ ಕೃತಯುಗವನ್ನು ಸೃಷ್ಟಿಮಾಡುವವನು. ಹಾಗೆಯೇ ತ್ರೇತಾಯುಗದ, ದ್ವಾಪರಯುಗದ ಮತ್ತು ನಾಲ್ಕನೆಯನಾದ ಕಲಿಯುಗದ ಸೃಷ್ಟಿಕರ್ತ. ಕಾಲಕ್ಕೆ ರಾಜನೇ ಕಾರಣನಾಗುತ್ತಾನೆ.

ಕೃತಸ್ಯ ಕರಣಾದ್ ರಾಜಾ ಸ್ವರ್ಗಮತ್ಯಂತಮಶ್ನುತೇ ।
ತ್ರೇತಾಯಾಃ ಕರಣಾದ್ ರಾಜಾ ಸ್ವರ್ಗಂ ನಾತ್ಯಂತಮಶ್ನುತೇ ॥೨೦॥

ರಾಜನು ಕೃತಯುಗವನ್ನು ಸೃಷ್ಟಿಮಾಡಿದರೆ ಶ್ರೇಷ್ಠವಾದ ಸ್ವರ್ಗವನ್ನು ಹೊಂದುತ್ತಾನೆ. ತ್ರೇತಾಯುಗವನ್ನು ಮಾಡಿದರೆ ಅಷ್ಟು ಶ್ರೇಷ್ಠವಾದ ಸ್ವರ್ಗವನ್ನು ಹೊಂದುವುದಿಲ್ಲ.

ಪ್ರವರ್ತನಾದ್ ದ್ವಾಪರಸ್ಯ ಯಥಾಭಾಗಮುಪಾಶ್ನುತೇ ।
ಕಲೇಃ ಪ್ರವರ್ತನಾದ್ ರಾಜಾ ಪಾಪಮತ್ಯಂತಮಶ್ನುತೇ ॥೨೧॥

ದ್ವಾಪರ ಯುಗವನ್ನು ಪ್ರವರ್ತನೆ ಮಾಡಿದರೆ ಸ್ವರ್ಗದ ಒಂದು ಭಾಗವನ್ನು ಮಾತ್ರ ಪಡೆಯುತ್ತಾನೆ. ಕಲಿಯುಗವನ್ನು ಪ್ರವರ್ತನೆ ಮಾಡಿದರೆ ಅತ್ಯಂತ ಪಾಪವನ್ನು ಹೊಂದುತ್ತಾನೆ.

ತತೋ ವಸತಿ ದುಷ್ಕರ್ಮಾ ನರಕೇ ಶಾಶ್ವತೀಃ ಸಮಾಃ ।
ರಾಜದೋಷೇಣ ಹಿ ಜಗತ್ ಸ್ಪೃಶ್ಯತೇ ಜಗತಃ ಸ ಚ ॥೨೨॥

ಮತ್ತು ಅದರಿಂದ ದುಷ್ಕರ್ಮವನ್ನು ಮಾಡಿ, ನರಕದಲ್ಲಿ ಅನೇಕಾನೇಕ ವರ್ಷಗಳವರೆಗೆ ವಾಸ ಮಾಡುತ್ತಾನೆ. ರಾಜನ ದೋಷದಿಂದ ಜಗತ್ತಿಗೂ ಕೇಡಾಗುತ್ತದೆ ಮತ್ತು ಜಗತ್ತಿನ ದೋಷದಿಂದ ರಾಜನಿಗೂ ಕೇಡಾಗುತ್ತದೆ.

ರಾಜಧರ್ಮಾನವೇಕ್ಷಸ್ವ ಪಿತೃಪೈತಾಮಹೋಚಿತಾನ್ ।
ನೈತದ್ ರಾಜರ್ಷಿವೃತ್ತಂ ಹಿ ಯತ್ರ ತ್ವಂ ಸ್ಥಾತುಮಿಚ್ಛಸಿ ॥೨೩॥

ಪಿತೃ-ಪಿತಾಮಹರು ಆಚರಿಸಿದ ರಾಜಧರ್ಮಗಳನ್ನು ನೋಡು. ನೀನು ಏನನ್ನು ಮಾಡಲು ಬಯಸುತ್ತಿದ್ದೀಯೋ ಅದು ರಾಜರ್ಷಿಗಳ ನಡತೆಯಲ್ಲ.

ನ ಹಿ ವೈಕ್ಲಬ್ಯಸಂಸ್ಪೃಷ್ಟ ಆನೃಶಂಸ್ಯೇ ವ್ಯವಸ್ಥಿತಃ ।
ಪ್ರಜಾಪಾಲನಸಂಭೂತಂ ಫಲಂ ಕಿಂಚನ ಲಬ್ಧವಾನ್ ॥೨೪॥

ಮನೋಗ್ಲಾನಿಯನ್ನು ಮತ್ತು ದಯೆಯನ್ನು ಹೊಂದಿದ ಯಾವನೂ ಪ್ರಜೆಗಳನ್ನು ರಕ್ಷಣೆ ಮಾಡುವುದರಿಂದ ಉಂಟಾದ ಫಲಗಳನ್ನು ಪಡೆಯಲಿಲ್ಲ.

ನ ಹ್ಯೇತಾಮಾಶಿಷಂ ಪಾಂಡುರ್ನ ಚಾಹಂ ನ ಪಿತಾಮಹಃ ।
ಪ್ರಯುಕ್ತವಂತಃ ಪೂರ್ವಂ ತೇ ಯಥಾ ಚರಸಿ ಮೇಧಯಾ ॥೨೫॥

ಈಗ ನೀನು ಹೇಗೆ ನಡೆದುಕೊಳ್ಳುತ್ತಿದ್ದೀಯೋ ಅಂತಹ ಆಶೀರ್ವಾದವನ್ನು ಪಾಂಡುವಾಗಲೀ, ನಾನಾಗಲೀ, ಪಿತಾಮಹರಾದ ವ್ಯಾಸರಾಗಲೀ ನಿನಗೆ ಹಿಂದೆ ಮಾಡಲಿಲ್ಲ.

ಯಜ್ಞೋ ದಾನಂ ತಪಃ ಶೌರ್ಯಂ ಪ್ರಜ್ಞಾ ಸಂತಾನಮೇವ ಚ ।
ಮಾಹಾತ್ಮ್ಯಂ ಬಲಮೋಜಶ್ಚ ನಿತ್ಯಮಾಶಂಸಿತಂ ಮಯಾ ॥೨೬॥

ಯಜ್ಞ, ದಾನ, ತಪಸ್ಸು, ಶೌರ್ಯ, ಪ್ರಜ್ಞೆ, ಸಂತತಿ, ಮಹಿಮೆ, ಬಲ, ಸಾಮರ್ಥ್ಯ ಇವುಗಳನ್ನೇ ನಾನು ನಿನಗೆ ನಿತ್ಯವೂ ಬಯಸಿದೆ.

ನಿತ್ಯಂ ಸ್ವಾಹಾ ಸ್ವಧಾ ನಿತ್ಯಂ ದದ್ಯುರ್ಮಾನುಷದೇವತಾಃ ।
ದೀರ್ಘಮಾಯುರ್ಧನಂ ಪುತ್ರಾನ್ ಸಮ್ಯಗಾರಾಧಿತಾಃ ಶುಭಾಃ ॥೨೭॥

ನಿತ್ಯದಲ್ಲಿಯೂ ಸ್ವಾಹಾಕಾರದಿಂದ ದೇವತೆಗಳನ್ನು ಪೂಜಿಸುವುದನ್ನು ಮತ್ತು ಸ್ವಧಾಕಾರದಿಂದ ಪಿತೃಗಳನ್ನು ಪೂಜಿಸುವುದನ್ನು ಭೂಸುರರು ನಿನಗೆ ಕೊಡುವರು. ಚೆನ್ನಾಗಿ ಆರಾಧಿಸಲ್ಪಟ್ಟ ಪಿತೃಗಳು ಮತ್ತು ದೇವತೆಗಳು ನಿನಗೆ ದೀರ್ಘವಾದ ಆಯುಸ್ಸನ್ನೂ, ಧನವನ್ನೂ ಮತ್ತು ಪುತ್ರರನ್ನೂ ಕೊಡುವರು.

ಪುತ್ರೇಷ್ವಾಶಂಸತೇ ನಿತ್ಯಂ ಪಿತರೋ ದೈವತಾನಿ ಚ ।
ದಾನಮಧ್ಯಯನಂ ಯಜ್ಞಃ ಪ್ರಜಾನಾಂ ಪರಿಪಾಲನಮ್ ॥೨೮॥

ಪಿತೃಗಳು ಮತ್ತು ದೇವತೆಗಳು ಮಕ್ಕಳಲ್ಲಿ ಯಾವಾಗಲೂ ದಾನ, ಅಧ್ಯಯನ, ಯಜ್ಞ ಮತ್ತು ಪ್ರಜಾಪಾಲನೆಗಳನ್ನು ಆಶಿಸುತ್ತಾರೆ.

ಏತದ್ ಧರ್ಮಮಧರ್ಮಂ ವಾ ಜನ್ಮನ್ಯೇವಾಭ್ಯಜಾಯಥಾಃ ।
ತೇ ನ ವೈದ್ಯಾಃ ಕುಲೇ ಜಾತಾ ಅವೃತ್ತ್ಯಾ ತಾತ ಪೀಡಿತಾಃ ॥೨೯॥

ಇದು ಧರ್ಮವಾಗಲಿ ಅಥವಾ ಅಧರ್ಮವಾಗಲಿ, ನೀನು ಹುಟ್ಟಿದಾಗಲೇ ಈ ಕರ್ತವ್ಯದ ಜೊತೆಯಲ್ಲಿ ಹುಟ್ಟಿದ್ದೀಯೆ. ಎಲೈ ಪ್ರೀತಿಪಾತ್ರನೇ, ಯಾರು ಒಳ್ಳೆಯ ಕುಲದಲ್ಲಿ ಹುಟ್ಟಿದರೂ ಯೋಗ್ಯವಾದ ವೃತ್ತಿಯನ್ನು ಮಾಡದೆ ಹಿಂಸೆಯನ್ನು ಹೊಂದುತ್ತಾರೋ ಅವರು ವಿದ್ವಾಂಸರಲ್ಲ.

ಯತ್ರ ದಾನಪತಿಂ ಶೂರಂ ಕ್ಷುಧಿತಾಃ ಪೃಥಿವೀಚರಾಃ ।
ಪ್ರಾಪ್ಯ ತುಷ್ಟಾಃ ಪ್ರತಿಷ್ಠಂತೇ ಧರ್ಮಃ ಕೋऽಭ್ಯಧಿಕಸ್ತತಃ ॥೩೦॥

ಎಲ್ಲಿ ಹಸಿದ ಪ್ರಜೆಗಳು ದಾನಪತಿಯೂ, ಶೂರನೂ ಆದ ರಾಜನನ್ನು ಸಮೀಪಿಸಿ ಸಂತೋಷದಿಂದ ಹಿಂದಿರುಗುತ್ತಾರೋ ಅದಕ್ಕಿಂತ ದೊಡ್ಡ ಧರ್ಮವು ಯಾವುದಿದೆ?

ದಾನೇನಾನ್ಯಂ ಬಲೇನಾನ್ಯಂ ತಥಾ ಸೂನೃತಯಾऽಪರಮ್ ।
ಸರ್ವತಃ ಪ್ರತಿಗೃಹ್ಣೀಯಾದ್ ರಾಜ್ಯಂ ಪ್ರಾಪ್ಯೇಹ ಧಾರ್ಮಿಕಃ ॥೩೧॥

ಧಾರ್ಮಿಕನಾದ ವ್ಯಕ್ತಿಯು ರಾಜ್ಯವನ್ನು ಪಡೆದು ದಾನದಿಂದ ಕೆಲವರನ್ನೂ, ಬಲದಿಂದ ಕೆಲವರನ್ನೂ, ಒಳ್ಳೆಯ ಮಾತುಗಳಿಂದ ಕೆಲವರನ್ನೂ ಎಲ್ಲ ಕಡೆಗಳಿಂದಲೂ ಸಂಘಟಿಸಬೇಕು.

ಬ್ರಾಹ್ಮಣಃ ಪ್ರಚರೇದ್ ಭೈಕ್ಷ್ಯಂ ಕ್ಷತ್ರಿಯಃ ಪರಿಪಾಲಯೇತ್ ।
ವೈಶ್ಯೋ ಧನಾರ್ಜನಂ ಕುರ್ಯಾತ್ ಶೂದ್ರಃ ಪರಿಚರೇಚ್ಚ ತಾನ್ ॥೩೨॥

ಬ್ರಾಹ್ಮಣನು ಭಿಕ್ಷೆಯನ್ನು ಬೇಡಬೇಕು. ಕ್ಷತ್ರಿಯನು ಪ್ರಜಾಪಾಲನೆಯನ್ನು ಮಾಡಬೇಕು. ವೈಶ್ಯನು ಧನಾರ್ಜನೆಯನ್ನು ಮಾಡಬೇಕು. ಶೂದ್ರನು ಆ ಮೂವರನ್ನೂ ಪರಿಚರಿಸಬೇಕು.

ಭೈಕ್ಷ್ಯಂ ವಿಪ್ರತಿಷಿದ್ಧಂ ತೇ ಕೃಷಿರ್ನೈವೋಪಪದ್ಯತೇ ।
ಕ್ಷತ್ರಿಯೋಽಸಿ ಕ್ಷತಾನ್(ತ್) ತ್ರಾತಾ ಬಾಹುವೀರ್ಯೋಪಜೀವಿತಾ ॥

ನಿನಗೆ ಭೈಕ್ಷ್ಯವು ನಿಷಿದ್ಧವಾದುದು. ಕೃಷಿಯು ಉಪಪನ್ನವಾಗುವುದಿಲ್ಲ. ನೀನು ಬಾಹುಸಾಮರ್ಥ್ಯದಿಂದ ಬದುಕುವ ಪ್ರಜೆಗಳನ್ನು ಕಂಟಕಗಳಿಂದ ರಕ್ಷಿಸುವ ಕ್ಷತ್ರಿಯನಾಗಿದ್ದೀಯೆ.

ಪಿತ್ರ್ಯಮಂಶಂ ಮಹಾಬಾಹೋ ನಿಮಗ್ನಂ ಪುನರುದ್ಧರ ।
ಸಾಮ್ನಾ ಭೇದೇನ ದಾನೇನ ದಂಡೇನಾಥ ನಯೇನ ವಾ ॥೩೪॥

ಎಲೈ ಮಹಾಬಾಹುವೇ, ಕಳೆದುಹೋದ ತಂದೆಯ ಭಾಗವನ್ನು ಸಾಮದಿಂದಾಗಲೀ, ಭೇದದಿಂದಾಗಲೀ, ದಾನದಿಂದಾಗಲೀ, ದಂಡದಿಂದಾಗಲೀ ಅಥವಾ ಬೇರೆ ನೀತಿಯಿಂದಾಗಲೀ ಪುನಃ ಸಂಪಾದಿಸುವವನಾಗು.

ಇತೋ ದುಃಖತರಂ ಕಿಂ ನು ಯದಹಂ ಹೀನಬಾಂಧವಾ ।
ಪರಪಿಂಡಮುದೀಕ್ಷಾಮಿ ತ್ವಾಂ ಸೂತ್ವಾಽಮಿತ್ರನಂದನಮ್ ॥೩೫॥

ಶತ್ರುಗಳಿಗೆ ಸಂತೋಷವನ್ನು ಕೊಡುವ ನಿನ್ನನ್ನು ಪಡೆದು, ಬಾಂಧವರಿಂದ ರಹಿತಳಾಗಿ, ನಾನು ಇನ್ನೊಬ್ಬರ ಮನೆಯ ಅನ್ನವನ್ನು ನಿರೀಕ್ಷಿಸುವುದಕ್ಕಿಂತ ದುಃಖಕರವಾದುದು ಯಾವುದಿದೆ?

ಯುಧ್ಯಸ್ವ ರಾಜಧರ್ಮೇಣ ಮಾ ನಿಮಜ್ಜೀಃ ಪಿತಾಮಹಾನ್ ।
ಮಾ ಗಮಃ ಕ್ಷೀಣಪುಣ್ಯಸ್ತ್ವಂ ಸಾನುಜಃ ಪಾಪಿಕಾಂ ಗತಿಮ್ ॥೩೬॥

ರಾಜಧರ್ಮಕ್ಕೆ ಅನುಗುಣವಾಗಿ ಯುದ್ಧವನ್ನು ಮಾಡು. ಪಿತಾಮಹರನ್ನು ನರಕದಲ್ಲಿ ಮುಳುಗಿಸಬೇಡ. ನೀನಾದರೂ ಪುಣ್ಯವನ್ನು ಕಳೆದುಕೊಂಡು ತಮ್ಮಂದಿರ ಜೊತೆಯಲ್ಲಿ ಪಾಪಿಷ್ಠವಾದ ಗತಿಯನ್ನು ಹೊಂದಬಾರದು'.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕತ್ರಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ದ್ವಿಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೆರಡನೆಯ ಅಧ್ಯಾಯ

ಯುಧಿಷ್ಠಿರ ಬೋಧನೆಗಾಗಿ ಕುಂತಿಯಿಂದ ವಿದುಲೋಪಾಖ್ಯಾನ ಕಥನ.

ಕುಂತೀ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ವಿದುಲಾಯಾಶ್ಚ ಸಂವಾದಂ ಪುತ್ರಸ್ಯ ಚ ಪರಂತಪ ॥೧॥

ತತ್ರ ಶ್ರೇಯಶ್ಚ ಭೂಯಶ್ಚ ಯಥಾವದ್ ವಕ್ತುಮರ್ಹತಿ ॥೨॥

ಕುಂತೀ– ಎಲೈ ಪರಂತಪನಾದ ಕೃಷ್ಣನೇ, ಈ ವಿಷಯದಲ್ಲಿ ವಿದುಲೆಗೂ, ಅವಳ ಪುತ್ರರಿಗೂ ನಡೆದ ಒಂದು ಪ್ರಾಚೀನವಾದ ಇತಿಹಾಸವನ್ನು ಹೇಳುತ್ತಾರೆ. ಅದನ್ನು ಕೇಳಿ ಧರ್ಮರಾಜನಿಗೆ ಒಳ್ಳೆಯ ಶ್ರೇಯೋಮಾರ್ಗವನ್ನು ಹೇಳಬೇಕು.

ಯಶಸ್ವಿನೀ ಮನ್ಯುಮತೀ ಕುಲಜಾತಾ ವಿಭಾವಿನೀ ।
ಕ್ಷತ್ರಧರ್ಮರತಾ ನಿತ್ಯಂ ವಿದುಲಾ ದೀರ್ಘದರ್ಶಿನೀ ॥೩॥

ವಿಶ್ರುತಾ ರಾಜಸಂಸತ್ಸು ಶ್ರುತವಾಕ್ಯಾ ಬಹುಶ್ರುತಾ ॥೪॥

ಒಳ್ಳೆಯ ಕುಲದಲ್ಲಿ ಜನಿಸಿದವಳೂ, ಕೀರ್ತಿವಂತಳೂ, ಕೆಟ್ಟ ವಿಷಯದಲ್ಲಿ ಕೋಪವುಳ್ಳವಳೂ, ಯಾವಾಗಲೂ ಕ್ಷತ್ರಿಯ ಧರ್ಮರತಳೂ, ದೀರ್ಘದರ್ಶಿನಿಯೂ, ಬಹಳ ವಿದ್ಯಾಸಂಪನ್ನಳೂ ಮತ್ತು ಬಹುಶ್ರುತಳೂ ಮತ್ತು ಬಹಳ ಉಪದೇಶಕಳೂ ಆದ, ರಾಜಸಭೆಗಳಲ್ಲಿ ಪ್ರಖ್ಯಾತಳಾದ ವಿದುಲಾ ಎಂಬ ವನಿತೆ ಇದ್ದಳು.

ವಿದುಲಾ ನಾಮ ಸಾ ಸಾಧ್ವೀ ಜಗಹೇ೯ ಪುತ್ರಮೌರಸಮ್ ।
ನಿರ್ಜಿತಂ ಸಿಂಧುರಾಜೇನ ಶಯಾನಂ ದೀನಚೇತಸಮ್ ॥೫॥

ಅನಂದನಮಧರ್ಮಜ್ಞಂ ದ್ವಿಷತಾಂ ಹರ್ಷವರ್ಧನಮ್ ॥೬॥

ವಿದುಲಾ ಎಂಬ ಆ ಸಾಧ್ವಿಯು, ಸಿಂಧುರಾಜನಿಂದ ಪರಾಜಿತನಾಗಿ ದೈನ್ಯದಿಂದ ಕಾಲವನ್ನು ಕಳೆಯುತ್ತಾ, ಅಧರ್ಮಶೀಲನಾಗಿ, ಸಂತೋಷರಹಿತನಾಗಿ, ಶತ್ರುಗಳಿಗೆ ಸಂತೋಷವನ್ನುಂಟು ಮಾಡುತ್ತಿದ್ದ ತನ್ನ ಔರಸಪುತ್ರನನ್ನು ನಿಂದಿಸಿದಳು.

ವಿದುಲಾ

ಕುನಂದನ ಕ್ವ ವಾ ಜಾತೋ ದ್ವಿಷತಾಂ ಹರ್ಷವರ್ಧನ ।
ನ ಮಯಾ ತ್ವಂ ನ ಪಿತ್ರಾ ಚ ಜಾತಃ ಕಾಭ್ಯಾಗತೋ ಹ್ಯಸಿ ॥೭॥

ವಿದುಲಾ– ಎಲೈ ಕೆಟ್ಟ ಪುತ್ರನೇ, ಶತ್ರುಗಳಿಗೆ ಸಂತೋಷವನ್ನು ಹೆಚ್ಚಿಸುವವನೇ, ನೀನು ಎಲ್ಲಿಂದ ಹುಟ್ಟಿದೆ? ನೀನು ನನ್ನಿಂದಲೂ ಹುಟ್ಟಲಿಲ್ಲ, ತಂದೆಯಿಂದಲೂ ಹುಟ್ಟಲಿಲ್ಲ. ಎಲ್ಲಿಂದ ಬಂದೆ?

ನಿರ್ಮನ್ಯುಶ್ಚಾಪ್ಯಸಂಖ್ಯೇಯಃ ಪುರುಷಃ ಕ್ಲೀಬಸಾಧನಃ ।
ಯಾವಜ್ಜೀವಂ ನಿರಾಶೋಽಸಿ ಕಲ್ಯಾಣಾಯ ಧುರಂ ವಹ ॥೮॥

ಕೋಪವಿಲ್ಲದೆ, ಯಾವ ಗಣನೆಯೂ ಇಲ್ಲದೆ ನಪುಂಸಕನಾದ ಪುರುಷನಂತಿದ್ದೀಯೆ. ಜೀವನದಲ್ಲಿ ಯಾವ ಆಸೆಯೂ ಇಲ್ಲ. ಒಳ್ಳೆಯದನ್ನು ಸಾಧಿಸಲು ಉದ್ಯುಕ್ತನಾಗು.

ಮಾಽಽತ್ಮಾನಮವಮನ್ಯಸ್ವ ಮೈವಮಲ್ಪೇನ ಭೀಭರಃ ।
ಮನಃ ಕೃತ್ವಾ ಸುಕಲ್ಯಾಣಂ ಮಾ ಭೈಸ್ತ್ವಂ ಪ್ರತಿಸಂಹರ ॥೯॥

ನಿನ್ನನ್ನು ನೀನು ಅವಮಾನ ಮಾಡಿಕೊಳ್ಳಬೇಡ. ಅಲ್ಪದರಿಂದ ತೃಪ್ತನಾಗಬೇಡ. ನೀನು ಹೆದರಬೇಡ. ಮನಸ್ಸನ್ನು ಒಳ್ಳೆಯ ವಿಷಯದಲ್ಲಿ ಗಟ್ಟಿ ಮಾಡಿ ಸಂಪಾದಿಸುವವನಾಗು.

ಉತ್ತಿಷ್ಠ ಹೇ ಕಾಪುರುಷ ಮಾ ಶೇಷ್ವೈವಂ ಪರಾಜಿತಃ ।
ಅಮಿತ್ರಾನ್ ನಂದಯನ್ ಸರ್ವಾನ್ ಮಿತ್ರಾಣಾಂ ಚಾಪಿ ಶೋಕದಃ ॥

ಎಲೈ ಕಾಪುರುಷನೇ, ಎದ್ದೇಳು. ಪರಾಜಿತನಾಗಿ ಎಲ್ಲಾ ಶತ್ರುಗಳನ್ನೂ ಸಂತೋಷಪಡಿಸುತ್ತಾ, ಮಿತ್ರರಿಗೆ ಶೋಕವನ್ನು ಕೊಡುತ್ತಾ ಹೀಗೆ ಮಲಗಿರಬೇಡ.

ಸುಪೂರಾ ವೈ ಕುನದಿಕಾ ಸುಪೂರೋ ಮೂಷಿಕಾಂಜಲಿಃ ।
ಸುಸಂತೋಷಃ ಕಾಪುರುಷಃ ಸ್ವಲ್ಪಕೇನೈವ ತುಷ್ಯತಿ ॥೧೧॥

ಒಂದು ಸಣ್ಣ ನದಿಯು ಬೇಗ ತುಂಬಿಹೋಗುತ್ತದೆ. ಒಂದು ಮೂಷಿಕದ ಅಂಜಲಿಯನ್ನು ಬೇಗ ತುಂಬಬಹುದು. ಕೆಟ್ಟ ಪುರುಷನನ್ನು ಬೇಗ ಸಂತೋಷಪಡಿಸಬಹುದು. ಅವನು ಅಲ್ಪದರಿಂದಲೇ ತೃಪ್ತನಾಗುತ್ತಾನೆ.

ಅಪ್ಯಹೇರಾರುಜನ್ ದಂಷ್ಟ್ರಾಂ ಮಾ ಚೈವ ನಿಧನಂ ವ್ರಜ ।
ಅಪಿ ವಾ ಸಂಶಯಂ ಪ್ರಾಪ್ಯ ಜೀವಿತೇಽಪಿ ಪರಾಕ್ರಮೇಃ ॥೧೨॥

ಸರ್ಪದ ಹಲ್ಲನ್ನು ಕೀಳಬೇಕಾದರೂ ಭಯದಿಂದ ನಿಧನ ಹೊಂದಬೇಡ. ಜೀವನದಲ್ಲಿ ಸಂಶಯವಿದ್ದರೂ ಪರಾಕ್ರಮವನ್ನು ಮಾಡಬೇಕು.

ಅಪ್ಯರೇಃ ಶ್ಯೇನವಚ್ಛಿದ್ರಂ ಪಶ್ಯೇಸ್ತ್ವಂ ವಿಪರಿಕ್ರಮಮ್ ।
ವಿನದನ್ ವಾಽಥವಾ ತೂಷ್ಣೀಂ ವ್ಯೋಮ್ನಿ ವಾ ಪರಿಶಂಕಿತಃ ॥೧೩॥

ಹದ್ದು ಆಕಾಶದಲ್ಲಿ ನಾದವನ್ನು ಮಾಡುತ್ತಾ ಅಥವಾ ಮೌನವಾಗಿ ಹುಡುಕುವಂತೆ ನೀನು ಶತ್ರುಗಳನ್ನು ಶಂಕಿಸಿ, ಅವರ ಛಿದ್ರಗಳನ್ನೂ ಮತ್ತು ವಿಪರಿಣಾಮಗಳನ್ನೂ ಗಮನಿಸುವವನಾಗಬೇಕು.

ತ್ವಮೇವಂ ಪ್ರೇತವಚ್ಚೇಷೇ ಕಸ್ಮಾದ್ ವಜ್ರಹತೋ ಯಥಾ ।
ಉತ್ತಿಷ್ಠ ಹೇ ಕಾಪುರುಷ ಮಾ ಸ್ವಾಪ್ಸೀಃ ಶತ್ರುನಿರ್ಜಿತಃ ॥೧೪॥

ನೀನು ಏಕೆ ವಜ್ರಾಯುಧದಿಂದ ಹತನಾದವನಂತೆ, ಶವದಂತೆ ಹೀಗೆ ಮಲಗಿದ್ದೀಯೆ? ಎಲೈ ಕಾಪುರುಷನೇ, ಎದ್ದೇಳು. ಶತ್ರುಗಳಿಂದ ಪರಾಜಿತನಾಗಿ ನಿದ್ರೆಯನ್ನು ಮಾಡಬೇಡ.

ಮಾऽಸ್ತಂ ಗಮಸ್ತ್ವಂ ಕೃಪಣೋ ವಿಶ್ರಾಯಸ್ವ ಸ್ವಕರ್ಮಣಾ ।
ಮಾ ಮಧ್ಯೇ ಮಾ ಜಘನ್ಯೇ ತ್ವಂ ಮಾऽಧೋ ಭೂಸ್ತಿಷ್ಠ ಚೋರ್ಜಿತಃ ॥

ನೀನು ಕೃಪಣನಾಗಿ ಅಸ್ತಂಗತನಾಗಬೇಡ. ನೀನು ಕರ್ಮದಿಂದ ಪ್ರಸಿದ್ಧಿಯನ್ನು ಪಡೆಯುವವನಾಗು. ಮಧ್ಯಮವಾದ, ಅಲ್ಪವಾದ ಅಥವಾ ನೀಚವಾದ ಕಾರ್ಯದಲ್ಲಿ ತೊಡಗಬೇಡ. ಉನ್ನತವಾದ ಕಾರ್ಯಗಳಲ್ಲಿ ತೊಡಗುವವನಾಗು.

ಅಲಾತಂ ತಿಂದುಕಸ್ಯೇವ ಮುಹೂರ್ತಮಪಿ ವಿಜ್ವಲ ।
ಮಾ ತುಷಾಗ್ನಿರಿವಾನರ್ಚಿಃ ಧೂಮಾಯೇತ ನರಶ್ಚಿರಮ್ ॥೧೬॥

ತುಂಬುರು ಮರದ ಕಟ್ಟಿಗೆಯ ಕೊಳ್ಳಿಯಂತೆ ಒಂದು ಮುಹೂರ್ತವಾದರೂ ಉರಿಯುವವನಾಗು. ಹೊಟ್ಟಿನ ಅಗ್ನಿಯಂತೆ ಜ್ವಾಲೆ ಇಲ್ಲದೆ ನಿರಂತರವಾಗಿ ಧೂಮವನ್ನು ಉಗುಳಬೇಡ.

ಮುಹೂರ್ತಂ ಜ್ವಲಿತಂ ಶ್ರೇಯೋ ನ ಚ ಧೂಮಾಯಿತಂ ಚಿರಮ್ ।
ಮಾ ಹ ಸ್ಮ ಕಸ್ಯಚಿದ್ ಗೇಹೇ ಜನಿ ರಾಜ್ಞಃ ಖರೀ ಮೃದುಃ ॥೧೭॥

ಒಂದು ಮುಹೂರ್ತ ಉರಿಯುವುದೂ ಶ್ರೇಷ್ಠವಾದುದು. ಬಹಳ ಕಾಲ ಧೂಮವನ್ನು ಉಗುಳುವುದಲ್ಲ. ಯಾವ ರಾಜನ ಮನೆಯಲ್ಲಿಯೂ ಕೋಪವಿಲ್ಲದ ಒಂದು ಕತ್ತೆಯು ಜನಿಸುವುದು ಬೇಡ.

ಕೃತ್ವಾ ಮಾನುಷ್ಯಕಂ ಕರ್ಮ ಧೃಷ್ಟಾತ್ಮಾ ಯಾವದುತ್ತರಮ್ ।
ಧರ್ಮಸ್ಯಾನೃಣ್ಯಮಾಪ್ನೋತಿ ನ ಚಾತ್ಮಾನಂ ವಿಗರ್ಹಯೇತ್ ॥೧೮॥

ಧೈರ್ಯವನ್ನು ತಂದುಕೊಂಡು, ಎಷ್ಟು ಸಾಧ್ಯವೋ ಅಷ್ಟು ಮನುಷ್ಯಯೋಗ್ಯವಾದ ಕಾರ್ಯವನ್ನು ಮಾಡಿ, ಮನುಷ್ಯನು ಧರ್ಮದ ದೃಷ್ಟಿಯಲ್ಲಿ ಋಣಮುಕ್ತನಾಗುತ್ತಾನೆ. ತನ್ನನ್ನು ತಾನು ನಿಂದಿಸಿಕೊಳ್ಳಬಾರದು.

ಅಲಬ್ಧ್ವಾ ಯದಿ ವಾ ಲಬ್ಧ್ವಾ ನಾನುಶೋಚಂತಿ ಪಂಡಿತಾಃ ।
ಆನಂತರ್ಯಂ ಚಾರಭಂತೇ ನ ಪ್ರಾಣಪರಿರಕ್ಷಣಾಮ್ ॥೧೯॥

ಫಲವು ಸಿಗಲಿ ಅಥವಾ ಸಿಗದಿರಲಿ, ಪಂಡಿತರು ದುಃಖಪಡುವುದಿಲ್ಲ. ಅನಂತರ ಮಾಡಬೇಕಾದ ಕಾರ್ಯದಲ್ಲಿ ತೊಡಗುವರೇ ಹೊರತು ತಮ್ಮ ಪ್ರಾಣವನ್ನು ರಕ್ಷಿಸಿಕೊಳ್ಳುವುದರಲ್ಲಿ ಆಸಕ್ತರಾಗುವುದಿಲ್ಲ.

ಉದ್ಭಾವಯಸ್ವ ವೀರ್ಯಂ ವಾ ತಾಂ ವಾ ಗಚ್ಛ ಧ್ರುವಾಂ ಗತಿಮ್ ।
ಧರ್ಮಂ ಪುರ್ತ್ವಾಗ್ರತಃ ಕೃತ್ವಾ ಕಿನ್ನಿಮಿತ್ತಂ ಹಿ ಜೀವಸಿ ॥೨೦॥

ಎಲೈ ಪುತ್ರನೇ, ನಿನ್ನ ಪರಾಕ್ರಮವನ್ನು ಉತ್ತೇಜನಗೊಳಿಸು. ಧರ್ಮವನ್ನು ಮುಂದೆ ಮಾಡಿಕೊಂಡು ಶ್ರೇಷ್ಠವಾದ ಗತಿಯನ್ನಾದರೂ ಹೊಂದುವವನಾಗು. ಏತಕ್ಕಾಗಿ ಬದುಕಿದ್ದೀಯೆ?

ಇಷ್ಟಾಪೂರ್ತಂ ಚ ತೇ ಕ್ಲೀಬ ಕೀರ್ತಿಶ್ಚ ಸಕಲಾ ಹತಾ ।
ವಿಚ್ಛಿನ್ನಂ ಭೋಗಮೂಲಂ ತೇ ಕಿನ್ನಿಮಿತ್ತಂ ಹಿ ಜೀವಸಿ ॥೨೧॥

ಎಲೈ ನಪುಂಸಕನೇ, ನಿನ್ನ ಇಷ್ಟಾಪೂರ್ತಗಳು ಮತ್ತು ಎಲ್ಲಾ ಕೀರ್ತಿಯೂ ನಾಶವನ್ನು ಹೊಂದಿವೆ. ಭೋಗಕ್ಕೆ ಮೂಲವಾದ ಸಂಪತ್ತು ನಾಶವನ್ನು ಹೊಂದಿದೆ. ಏತಕ್ಕೆ ಬದುಕಿದ್ದೀಯೆ?

ಶತ್ರುರ್ನಿಮಜ್ಜತಾ ಗ್ರಾಹ್ಯೋ ಜಂಘಾಯಾಂ ಪ್ರಪತಿಷ್ಯತಾ ।
ವಿಪರಿಚ್ಛಿನ್ನಮೂಲೇನ ನ ವಿಷೀದೇತ್ ಕಥಂಚನ ॥೨೨॥

ನೀರಿನಲ್ಲಿ ಬಿದ್ದು ಮುಳುಗುವವನು ಶತ್ರುಗಳನ್ನು ಮುಳುಗಿಸಲು ಅವನ ಮಂಡಿಯನ್ನಾದರೂ ಹಿಡಿಯಬೇಕು. ತನ್ನ ಮೂಲವನ್ನು ನಾಶಮಾಡಿದ ಶತ್ರುವಿಗಾಗಿ ವಿಷಾದವನ್ನು ಮಾಡಬಾರದು.

ಉದ್ಯಮ್ಯ ಧುರಮುತ್ಕರ್ಷೇದ್ ಆಜಾನೇಯಕೃತಂ ಸ್ಮರನ್ ।
ಕುರು ಸತ್ವಂ ಚ ಮಾನಂ ಚ ವಿದ್ಧಿ ಪೌರುಷಮಾತ್ಮನಃ ॥೨೩॥

ಉದ್ಭಾವಯ ಕುಲಂ ಮಗ್ನಂ ತ್ವತ್ಕೃತೇ ಸ್ವಯಮೇವ ಚ ॥೨೪॥

ತನ್ನ ಹಿಂದಿನವರು ಮಾಡಿದ ಜ್ಯೇಷ್ಠಕಾರ್ಯಗಳನ್ನು ಸ್ಮರಿಸಿ ಪ್ರಯತ್ನವನ್ನು ಮಾಡಿ ತನ್ನ ಕಾರ್ಯವನ್ನು ಸಾಧಿಸಬೇಕು.. ನಿನ್ನ ಸತ್ವವನ್ನೂ ಮತ್ತು ಮಾನವನ್ನೂ ಸಂಪಾದಿಸುವವನಾಗು. ನಿನ್ನ ಪೌರುಷದಲ್ಲಿ ನೀನು ನಂಬಿಕೆಯನ್ನಿಡು. ನಿನ್ನ ಸಲುವಾಗಿ ಮುಳುಗಿ ಹೋದ ಕುಲವನ್ನು ನೀನಾಗಿಯೇ ಎತ್ತುವವನಾಗು.

ಯಸ್ಯ ವೃತ್ತಂ ನ ಜಲ್ಪಂತಿ ಮಾನವಾ ಮಹದದ್ಭುತಮ್ ।
ರಾಶಿವರ್ಧನಮಾತ್ರಂ ಸ ನೈವ ಸ್ತ್ರೀ ನ ಪುನಃ ಪುಮಾನ್ ॥೨೫॥

ಯಾವನ ನಡತೆಯನ್ನು ಮನುಷ್ಯರು ಅದ್ಭುತವೆಂದು ಹೇಳುವುದಿಲ್ಲವೋ ಅಂತಹವನು ಕೇವಲ ಹೊಟ್ಟೆಯನ್ನು ತುಂಬಿಕೊಳ್ಳುವ ಅನ್ನದ ರಾಶಿಯನ್ನು ಹೆಚ್ಚಿಸುವವನು ಮಾತ್ರ. ಅವನು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ.

ದಾನೇ ತಪಸಿ ಶೌರ್ಯೇ ವಾ ಯಸ್ಯ ನ ಪ್ರಥಿತಂ ಯಶಃ ।
ವಿದ್ಯಾಯಾಮರ್ಥಲಾಭೇ ತು ಮಾತುರುಚ್ಚಾರ ಏವ ಸಃ ॥೨೬॥

ಯಾವನು ದಾನದಲ್ಲಾಗಲೀ, ತಪಸ್ಸಿನಲ್ಲಾಗಲೀ, ಶೌರ್ಯದಲ್ಲಾಗಲೀ, ವಿದ್ಯೆಯಲ್ಲಾಗಲೀ, ಧನಲಾಭದಲ್ಲಾಗಲೀ ಕೀರ್ತಿಯನ್ನು ಸಂಪಾದಿಸುವುದಿಲ್ಲವೋ ಅವನು ತಾಯಿಯ ಮೂತ್ರಕ್ಕೆ ಸಮಾನನಾದವನು.

ಶ್ರುತೇನ ತಪಸಾ ವಾಽಪಿ ಶ್ರಿಯಾ ವಾ ವಿಕ್ರಮೇಣ ವಾ ।
ಜನಾನ್ ಯೋಽಭಿಭವತ್ಯನ್ಯಾನ್ ಕರ್ಮಣಾ ಹಿ ಸ ವೈ ಪುಮಾನ್ ॥

ಯಾವನು ತನ್ನ ವಿದ್ಯೆಯಿಂದ ಅಥವಾ ತಪಸ್ಸಿನಿಂದ ಅಥವಾ ಸಂಪತ್ತಿನಿಂದ ಅಥವಾ ಪರಾಕ್ರಮದಿಂದ ಅಥವಾ ಕರ್ಮದಿಂದ ಉಳಿದವರನ್ನು ಮೀರುತ್ತಾನೆಯೋ ಅವನೇ ಪುರುಷನಾದವನು.

ನ ತ್ವೇವ ಜಾಲ್ಮೀಂ ಕಾಪಾಲೀಂ ವೃತ್ತಿಮೇಷಿತುಮರ್ಹಸಿ ।
ನೃಶಂಸ್ಯಾಮಯಶಸ್ಯಾಂ ಚ ದುಃಖಾಂ ಕಾಪುರುಷೋಚಿತಾಮ್ ॥೨೮॥
ಯದೇನಮಭಿನಂದೇಯುರಮಿತ್ರಾಃ ಪುರುಷಂ ಕೃಶಮ್ ।
ಲೋಕಸ್ಯ ಸಮವಜ್ಞಾತಂ ನಿಹೀನಾಶನವಾಸಸಮ್ ॥೨೯॥

ದುಷ್ಪಪುರುಷರು ಆಶ್ರಯಿಸುವ ಕ್ರೂರವಾದ, ಅಪಕೀರ್ತಿಕರವಾದ, ದುಃಖಕರವಾದ ಕಪಟವೃತ್ತಿಯನ್ನಾಗಲೀ ಅಥವಾ ಭಿಕ್ಷಾವೃತ್ತಿಯನ್ನಾಗಲೀ ಬಯಸಬೇಡ. ಏಕೆಂದರೆ ಲೋಕದಿಂದ ಅವಮಾನಿತನಾದ, ಅಶನ-ವಸನಗಳಿಂದ ರಹಿತನಾದ ಅಂತಹ ಕೃಶನಾದ ಪುರುಷನನ್ನು ನೋಡಿ ಶತ್ರುಗಳು ಸಂತೋಷವನ್ನು ಪಡುತ್ತಾರೆ.

ಅಹೋ ಲೋಭಕರಂ ಹೀನಮ್ ಅಲ್ಪಜೀವನಮಲ್ಪಕಮ್ ।
ನೇದೃಶಂ ಬಂಧುಮಾಸಾದ್ಯ ಬಾಂಧವಃ ಸುಖಮೇಧತೇ ॥೩೦॥

ಲೋಭಿಯಾದ, ಹೀನನಾದ, ಅಲ್ಪಜೀವನನಾದ, ಸ್ವತಃ ಅಲ್ಪನಾದ ಇಂತಹ ಬಂಧುವನ್ನು ಪಡೆದ ಬಾಂಧವನು ಸುಖವನ್ನು ಹೊಂದುವುದಿಲ್ಲ.

ಅವೃತ್ಯೈವ ವಿಪತ್ಸ್ಯಾಮೋ ವಯಂ ರಾಷ್ಟ್ರಾತ್ ಪ್ರವಾಸಿತಾಃ ।
ಸರ್ವಕಾಮರಸೈರ್ಹೀನಾ ಸ್ಥಾನಭ್ರಷ್ಟಾ ಅಕಿಂಚನಾಃ ॥೩೧॥

ನಾವು ಸ್ಥಾನಭ್ರಷ್ಟರಾಗಿ, ಸರ್ವಕಾಮವಿಹೀನರಾಗಿ, ದರಿದ್ರರಾಗಿ, ರಾಷ್ಟ್ರದಿಂದ ದೂರಹೋಗಿ ಜೀವನೋಪಾಯವಿಲ್ಲದೆಯೇ ಮರಣವನ್ನು ಹೊಂದೋಣ.

ಅವರ್ಣಕಾರಿಣಂ ಸತ್ಸು ಕುಲವಂಶಸ್ಯ ನಾಶನಮ್ ।
ಕಲಿಂ ಪುತ್ರಪ್ರವಾದೇನ ಸೃಂಜಯ ತ್ವಾಮಜೀಜನಮ್ ॥೩೨॥

ಎಲೈ ಸೃಂಜಯನೇ, ಅಪಕೀರ್ತಿಕರನಾದ, ವಂಶನಾಶನನಾದ, ಕಲಿಯಾದ ನಿನ್ನನ್ನು ನಾನು ಮಗನೆಂದು ಪಡೆದೆ.

ನಿರಮರ್ಷಂ ನಿರುತ್ಸಾಹಂ ನಿರ್ವೀರ್ಯಮರಿನಂದನಮ್ ॥೩೩॥

ಮಾ ಸ್ಮ ಸೀಮಂತಿನೀ ಕಾಚಿತ್ ಜನಯೇತ್ ಪುತ್ರಮೀದೃಶಮ್ ।
ಮಾ ಧೂಮಾಯ ಜ್ವಲಾತ್ಯಂತಮಾಕ್ರಮ್ಯ ಜಹಿ ಶಾತ್ರವಾನ್ ॥೩೪॥

ಕೋಪವನ್ನು ಹೊಂದದ, ಉತ್ಸಾಹರಹಿತನಾದ, ಪರಾಕ್ರಮರಹಿತನಾದ, ಶತ್ರು ಸಂತೋಷಕರನಾದ ಇಂತಹ ಮಗನನ್ನು ಯಾವ ಸುಮಂಗಲಿಯೂ ಪಡೆಯದಿರಲಿ. ಹೊಗೆಯಾಡಬೇಡ, ಉರಿಯುವವನಾಗು. ಶತ್ರುಗಳನ್ನು ಮೆಟ್ಟಿ ಗೆಲ್ಲುವವನಾಗು.

ಜ್ವಲ ಮೂರ್ಧನ್ಯಮಿತ್ರಾಣಾಂ ಮುಹೂರ್ತಮಪಿ ವಾ ಕ್ಷಣಮ್ ।
ಏತಾವಾನೇವ ಪುರುಷೋ ಯದಮರ್ಷೀ ಯದಕ್ಷಮೀ ॥೩೫॥

ಶತ್ರುಗಳ ತಲೆಯ ಮೇಲೆ ನಿಂತು ಒಂದು ಮುಹೂರ್ತವಾದರೂ ಅಥವಾ ಒಂದು ಕ್ಷಣವಾದರೂ ಉರಿಯುವವನಾಗು. ತಮಗೆ ಅಪಚಾರವನ್ನು ಮಾಡಿದವರ ಮೇಲೆ ಕೋಪವನ್ನು ಹೊಂದಿ ಅವರನ್ನು ಕ್ಷಮಿಸದಿರುವುದೇ ಪುರುಷನ ಲಕ್ಷಣ.

ಕ್ಷಮಾವಾನ್ ನಿರಮರ್ಷಶ್ಚ ನೈವ ಸ್ತ್ರೀ ನ ಪುನಃ ಪುಮಾನ್ ।
ಸಂತೋಷೋ ವೈ ಶ್ರಿಯಂ ಹಂತಿ ತಥಾऽನುಕ್ರೋಶ ಏವ ಚ ॥೩೬॥

ಅನುತ್ಥಾನಭಯೇ ಚೋಭೇ ನಿರೀಹೋ ನಾಶ್ನುತೇ ಮಹತ್ ।
ಏಭ್ಯೋ ನಿಕೃತಿಪಾಶೇಭ್ಯಃ ಪ್ರಮುಂಚಾತ್ಮಾನಮಾತ್ಮನಾ ॥೩೭॥

ಕ್ಷಮೆಯನ್ನು ಹೊಂದದವನೂ, ಕೋಪವಿಲ್ಲದವನೂ ಅವನು ಸ್ತ್ರೀಯೂ ಅಲ್ಲ, ಪುರುಷನೂ ಅಲ್ಲ. ತೃಪ್ತಿಯು ಸಂತೋಷವನ್ನು ನಾಶಮಾಡುತ್ತದೆ. ಅದರಂತೆ ಮಾರ್ದವವೂ ಸಂಪತ್ತನ್ನು ಹಾಳುಮಾಡುತ್ತದೆ. ತೃಪ್ತಿ ಮತ್ತು ಮಾರ್ದವ ಇವೆರಡು ಅಭಿವೃದ್ಧಿಗೆ ವಿರುದ್ಧವಾದವುಗಳು. ಅವೇ ಭಯರೂಪವಾಗಿವೆ. ಕ್ರಿಯಾಶೀಲನಲ್ಲದವನು ಯಾವ ದೊಡ್ಡದನ್ನೂ ಸಾಧಿಸುವುದಿಲ್ಲ. ಅವಮಾನವನ್ನು ತರುವ ತೃಪ್ತಿ, ಮಾರ್ದವ ಮತ್ತು ಕ್ರಿಯಾರಾಹಿತ್ಯ ಈ ಮೂರು ಪಾಶಗಳಿಂದ ನಿನ್ನನ್ನು ನೀನೇ ಬಿಡಿಸಿಕೊ.

ಆಯಸಂ ಹೃದಯಂ ಕೃತ್ವಾ ಮೃಗಯಸ್ವ ಪುರಂ ಸ್ವಕಮ್ ।
ಪುರಂ ವಿಷಹತೇ ಯಸ್ಮಾತ್ ತಸ್ಮಾತ್ ಪುರುಷ ಉಚ್ಯತೇ ॥೩೮॥

ತಮಾಹುರ್ವ್ಯರ್ಥನಾಮಾನಂ ಸ್ತ್ರೀವದ್ ಯ ಇಹ ಜೀವತಿ ॥೩೯॥

ಹೃದಯವನ್ನು ಕಬ್ಬಿಣದಂತೆ ಗಟ್ಟಿಮಾಡಿ ನಿನ್ನ ಪಟ್ಟಣವನ್ನು ನೀನು ಹುಡುಕು. ಪುರವನ್ನು ಸಂಪಾದಿಸುವ ಕಾರಣದಿಂದ ಪುರುಷನೆನಿಸುತ್ತಾನೆ. ಹೆಂಗಸಿನಂತೆ ಜೀವಿಸುವವನನ್ನು ವ್ಯರ್ಥವಾಗಿ ಪುರುಷನಾಮವುಳ್ಳವನು ಎಂದು ಹೇಳುತ್ತಾರೆ.

ಶೂರಸ್ಯೋರ್ಜಿತಸತ್ವಸ್ಯ ಸಿಂಹವಿಕ್ರಾಂತಚಾರಿಣಃ ।
ದಿಷ್ಟಭಾವಂ ಗತಸ್ಯಾಪಿ ವಿಷಯೇ ಮೋದತೇ ಪ್ರಜಾಃ ॥೪೦॥

ಶೂರನೂ, ಊರ್ಜಿತವಾದ ಬಲವುಳ್ಳವನೂ, ಸಿಂಹದಂತೆ ವಿಕ್ರಮಶಾಲಿಯೂ ಆದ ರಾಜನು ಮರಣವನ್ನು ಹೊಂದಿದರೂ ಅವನ ರಾಜ್ಯದಲ್ಲಿ ಪ್ರಜೆಗಳು ಸುಖದಿಂದ ಇರುತ್ತಾರೆ.

ಯ ಆತ್ಮನಃ ಪ್ರಿಯಸುಖೇ ಹಿತ್ವಾ ಮೃಗಯತೇಽಸುಖಮ್ ।
ಅಮಿತ್ರಾಣಾಮಥೋ ಹರ್ಷಮಾದಧಾತ್ಯಚಿರೇಣ ಸಃ ॥೪೧॥

ಯಾವನು ತನ್ನ ಪ್ರಿಯವನ್ನೂ, ಸುಖವನ್ನೂ ಬಿಟ್ಟು ಅಸುಖವನ್ನೇ ಹುಡುಕಿಕೊಂಡು ಹೋಗುತ್ತಾನೆಯೋ ಅವನು ಶೀಘ್ರವಾಗಿ ತನ್ನ ಶತ್ರುಗಳಿಗೆ ಸುಖವನ್ನು ಅನುಗ್ರಹಿಸುವವನಾಗುತ್ತಾನೆ.

ಸೃಂಜಯಃ

ಕಿನ್ನು ತೇ ಮಾಮಪಶ್ಯಂತ್ಯಾಃ ಪೃಥಿವ್ಯಾಽಪಿ ಚ ಸರ್ವಯಾ ।
ಕಿಮಾಭರಣಕೃತ್ಯಂ ತೇ ಕಿಂ ಭೋಗೈರ್ಜೀವಿತೇನ ವಾ ॥೪೨॥

ಸೃಂಜಯ– ನಾನು ಯುದ್ಧದಲ್ಲಿ ಮರಣವನ್ನು ಹೊಂದಿದರೆ ನನ್ನನ್ನು ಕಾಣದಿರುವ ನಿನಗೆ ಎಲ್ಲಾ ಭೂಮಿಯಿಂದಲೂ ಏನು ಪ್ರಯೋಜನ? ನಿನಗೆ ಆಭರಣದಿಂದ ಏನಾಗಬೇಕು? ಭೋಗದಿಂದ ಏನಾಗಬೇಕು? ಅಥವಾ ಜೀವನದಿಂದಲೂ ಏನಾಗಬೇಕು?

ವಿದುಲಾ

ಪರೈರ್ವಿಹನ್ಯಮಾನಸ್ಯ ಜೀವಿತೇನಾಪಿ ಕಿಂ ಫಲಮ್ ।
ನಿರ್ಮನ್ಯುಕಾನಾಂ ಯೇ ಲೋಕಾ ದ್ವಿಷಂತಸ್ತಾನವಾಪ್ನುಯುಃ ॥೪೩॥

ಯೇ ವಾ ಧೃತಾತ್ಮನಾಂ ಲೋಕಾಃ ಸುಹೃದಸ್ತಾನ್ ವ್ರಜಂತು ನಃ ॥೪೪॥

ವಿದುಲಾ– ಶತ್ರುಗಳಿಂದ ಸೋಲುವ ನಿನ್ನ ಜೀವನದಿಂದಲಾದರೂ ಏನು ಪ್ರಯೋಜನ? ರೋಷವಿಲ್ಲದವರಿಗೆ ಯಾವ ಲೋಕಗಳು ಇವೆಯೋ ಅವುಗಳು

ಶತ್ರುಗಳಿಗಾಗಲಿ. ಧೈರ್ಯಶಾಲಿಗಳಿಗೆ ಯಾವ ಲೋಕವಿದೆಯೋ ಅವು ನಮ್ಮ ಸುಹೃಜ್ಜನರಿಗೆ ಉಂಟಾಗಲಿ.

ಭೃತ್ಯೈರ್ವಿಹೀಯಮಾನಾನಾಂ ಪರಪಿಂಡೋಪಜೀವಿನಾಮ್ ।
ಕೃಪಣಾನಾಮನಾಥಾನಾಂ ಮಾ ವೃತ್ತಿಮನುವರ್ತಿಥಾಃ ॥೪೫॥

ಭೃತ್ಯರಿಂದ ರಹಿತರಾದ, ಇನ್ನೊಬ್ಬರ ಅನ್ನವನ್ನು ಉಪಜೀವಿಸುವಂತಹ ಕೃಪಣರ ಮತ್ತು ಅನಾಥರ ಜೀವನ ಕ್ರಮವನ್ನು ನೀನು ಅನುಸರಿಸಬೇಡ.

ಅನು ತ್ವಾಂ ತಾತ ಜೀವಂತು ಬ್ರಾಹ್ಮಣಾಃ ಸುಹೃದಸ್ತಥಾ ।
ಪರ್ಜನ್ಯಮಿವ ಭೂತಾನಿ ದೇವಾ ಇವ ಶತಕ್ರತುಮ್ ॥೪೬॥

ಎಲೈ ಪ್ರೀತಿಪಾತ್ರನೇ, ಎಲ್ಲ ಪ್ರಾಣಿಗಳೂ ಮಳೆಯನ್ನು ಉಪಜೀವಿಸುವಂತೆ, ಎಲ್ಲ ದೇವತೆಗಳೂ ಇಂದ್ರನನ್ನು ಉಪಜೀವಿಸುವಂತೆ, ಬ್ರಾಹ್ಮಣರು ಮತ್ತು ಸುಹೃಜ್ಜನರು ನಿನ್ನನ್ನು ಉಪಜೀವಿಸಿಕೊಂಡು ಬಾಳಲಿ.

ಯಮಾಜೀವಂತಿ ಪುರುಷಂ ಸರ್ವಭೂತಾನಿ ಸೃಂಜಯ ।
ಪಕ್ವಂ ದ್ರುಮಮಿವಾಸಾದ್ಯ ತಸ್ಯ ಜೀವಿತಮರ್ಥವತ್ ॥೪೭॥

ಎಲೈ ಸೃಂಜಯನೇ, ಪಕ್ವವಾದ ಹಣ್ಣಿನಿಂದ ಕೂಡಿದ ಮರದಂತೆ ಇರುವ ಯಾವನನ್ನು ಎಲ್ಲರೂ ಆಶ್ರಯಿಸಿ ಜೀವಿಸುತ್ತಾರೆಯೋ ಅವನ ಜೀವನವು ಸಾರ್ಥಕವಾದುದು.

ಯಸ್ಯ ಶೂರಸ್ಯ ವಿಕ್ರಾಂತೈರ್ವರ್ಧಂತೇ ಬಾಂಧವಾಃ ಸುಖಮ್ ।
ತ್ರಿದಶಾ ಇವ ಶಕ್ರಸ್ಯ ಸಾಧು ತಸ್ಯೇಹ ಜೀವಿತಮ್ ॥೪೮॥

ಇಂದ್ರನ ಪರಾಕ್ರಮದಿಂದ ದೇವತೆಗಳು ಸುಖವನ್ನು ಹೊಂದಿದಂತೆ, ಯಾವ ಶೂರನ ಪರಾಕ್ರಮದಿಂದ ಬಂಧುಗಳ ಸುಖವು ಹೆಚ್ಚಾಗುತ್ತದೆಯೋ ಅಂತಹವನ ಜೀವನವು ಸರಿಯಾದ ಜೀವನ.

ಸ್ವಬಾಹುಬಲಮಾಶ್ರಿತ್ಯ ಯೋ ಹಿ ಜೀವತಿ ಮಾನವಃ ।
ಸ ಲೋಕೇ ಲಭತೇ ಕೀರ್ತಿಂ ಪರತ್ರ ಚ ಶುಭಾಂ ಗತಿಮ್ ॥೪೯॥

ಯಾವ ಮನುಷ್ಯನು ತನ್ನ ಬಾಹುಬಲದಿಂದ ಜೀವಿಸುತ್ತಾನೆಯೋ ಅವನು ಈ ಲೋಕದಲ್ಲಿ ಕೀರ್ತಿಯನ್ನೂ, ಪರಲೋಕದಲ್ಲಿ ಶುಭಗತಿಯನ್ನೂ ಹೊಂದುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಾತ್ರಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ತ್ರಿಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ಮೂರನೆಯ ಅಧ್ಯಾಯ

ಸೃಂಜಯನಿಗೆ ತಾಯಿಯಾದ ವಿದುಲೆಯ ಉಪದೇಶ

ವಿದುಲಾ

ಅಥೈತಸ್ಯಾಮವಸ್ಥಾಯಾಂ ಪೌರುಷಂ ಹಾತುಮಿಚ್ಛಸಿ ।
ನಿಹೀನಸೇವಿತಂ ಮಾರ್ಗಂ ಗಮಿಷ್ಯಸ್ಯಚಿರಾದಿವ ॥೧॥

ವಿದುಲಾ– ಇನ್ನು ಒಂದು ಪಕ್ಷ, ಈ ಪರಿಸ್ಥಿತಿಯಲ್ಲಿ ನೀನು ಪರಾಕ್ರಮವನ್ನು ತ್ಯಜಿಸಿದರೆ ಶೀಘ್ರವಾಗಿ ನೀಚಜನರು ಸೇವಿಸಿದ ಮಾರ್ಗವನ್ನು ಹೊಂದುವಿ.

ಯೋ ಹಿ ತೇಜೋ ಯಥಾಶಕ್ತಿ ನ ದರ್ಶಯತಿ ವಿಕ್ರಮಾತ್ ।
ಕ್ಷತ್ರಿಯೋ ಜೀವಿತಾಕಾಂಕ್ಷೀ ಸ್ತೇನ ಇತ್ಯೇವ ತಂ ವಿದುಃ ॥೨॥

ಬದುಕಲು ಬಯಸುವ ಯಾವ ಕ್ಷತ್ರಿಯನು ಪರಾಕ್ರಮವನ್ನು ಮಾಡಿ, ಸಾಧ್ಯವಾದಷ್ಟು ತನ್ನ ಸಾಮರ್ಥ್ಯವನ್ನು ತೋರಿಸುವುದಿಲ್ಲವೋ ಅವನನ್ನು ಕಳ್ಳನೆಂದೇ ತಿಳಿಯುತ್ತಾರೆ.

ಅರ್ಥವಂತ್ಯುಪಪನ್ನಾನಿ ವಾಕ್ಯಾನಿ ಗುಣವಂತಿ ಚ ।
ನೈವ ಸಂಪ್ರಾಪ್ನುವಂತಿ ತ್ವಾಂ ಮುಮೂರ್ಷುಮಿವ ಭೇಷಜಮ್ ॥೩॥

ಅಂತಹ ಕ್ಷತ್ರಿಯನಿಗೆ ಅರ್ಥಪೂರ್ಣವಾದ, ಯುಕ್ತಿಯುಕ್ತವಾದ ಗುಣದಿಂದ ಕೂಡಿದ ಮಾತುಗಳು ಮರಣವು ಸಮೀಪಿಸಿದ ವ್ಯಕ್ತಿಗೆ ಔಷಧಿಗಳಂತೆ ತಲುಪುವುದೇ ಇಲ್ಲ (ತಮ್ಮ ಕಾರ್ಯವನ್ನು ಮಾಡುವುದಿಲ್ಲ).

ಸಂತಿ ವೈ ಸಿಂಧುರಾಜಸ್ಯ ಸಂತುಷ್ಟಾ ಬಹವೋ ಜನಾಃ ।
ದೌರ್ಬಲ್ಯಾದಾಸತೇ ಗೂಢಾ ವ್ಯಸನೌಘಪ್ರತೀಕ್ಷಿಣಃ ॥೪॥

ಸಿಂಧುರಾಜನ ಬಳಿಯಲ್ಲಿಯೂ ಅನೇಕ ಜನರಿದ್ದಾರೆ. ತಮ್ಮ ದೌರ್ಬಲ್ಯದಿಂದ ರಾಜನ ವ್ಯಸನವನ್ನು ನಿರೀಕ್ಷಿಸುತ್ತಾ ಅವರು ಗೂಢರಾಗಿದ್ದಾರೆ.

ಸಹಾಯೋಪಚಯಂ ದೃಷ್ಟ್ವಾ ಆಗಚ್ಛೇಯುಸ್ತತಸ್ತತಃ ।
ಅನುತುಷ್ಯೇಯುರಪರೇ ಪಶ್ಯಂತಸ್ತವ ಪೌರುಷಮ್ ॥೫॥

ನಿನಗೆ ಸಹಾಯವು ದೊರಕಿದೆ ಎಂದು ತಿಳಿದರೆ ಅವರು ಅಲ್ಲಲ್ಲಿಂದ ನಿನ್ನ ಬಳಿಗೆ ಬಂದಾರು. ಇನ್ನು ಕೆಲವರು ನಿನ್ನ ಪರಾಕ್ರಮವನ್ನು ನೋಡಿ ಸಂತೋಷಪಡುವರು.

ತೈಃ ಕೃತ್ವಾ ಸಹಸಾ ಯಾತ್ರಾಂ ಗಿರಿದುರ್ಗಾಲಯೈಶ್ಚರ ।
ಕಾಲೇ ವ್ಯಸನಮಾಕಾಂಕ್ಷನ್ ನೈವಾಯಮಜರಾಮರಃ ॥೬॥

ಗಿರಿ-ದುರ್ಗಗಳಲ್ಲಿ ಗೂಢವಾಗಿರುವ ಅಂತಹವರ ಜೊತೆಯಲ್ಲಿ ಸೇರಿ ನೀನು ಕಾಲಕ್ರಮದಲ್ಲಿ ಅವನ ದುರವಸ್ಥೆಯನ್ನು ಬಯಸುತ್ತಾ ದಂಡೆತ್ತಿಹೋಗುವವನಾಗು. ಸಿಂಧುರಾಜನು ಅಜರಾಮರನಲ್ಲ.

ಸೃಂಜಯೋ ನಾಮತಶ್ಚ ತ್ವಂ ನ ಚ ಪಶ್ಯಾಮ ತತ್ ತ್ವಯಿ ।
ಅನ್ವರ್ಥನಾಮಾ ಭವ ಮೇ ಪುತ್ರ ಮಾ ವ್ಯರ್ಥನಾಮಕಃ ॥೭॥

ನಿನಗೆ ಸೃಂಜಯ ಎಂಬ ಹೆಸರಿದೆ. ಸೃ ಎಂದರೆ ಶತ್ರುಗಳ ಸಮೀಪಕ್ಕೆ ಹೋಗಿ, ಜಯ ಎಂದರೆ ಜಯಿಸುತ್ತಾನೆ ಎಂದು ಅರ್ಥ. ಆದರೆ ಆ ಹೆಸರಿನ ಅರ್ಥವು ನಿನ್ನಲ್ಲಿ ಕಾಣುತ್ತಿಲ್ಲ. ಎಲೈ ಪುತ್ರನೇ, ಸಾರ್ಥಕವಾದ ಹೆಸರನ್ನು ಹೊಂದುವವನಾಗು. ನಿನ್ನ ಹೆಸರು ವ್ಯರ್ಥವಾಗದಿರಲಿ.

ಸಮ್ಯಗ್‌ದೃಷ್ಟಿರ್ಮಹಾಪ್ರಾಜ್ಞೋ ಬಾಲಂ ತ್ವಾಂ ಬ್ರಾಹ್ಮಣೋಽಬ್ರವೀತ್ ।
ಅಯಂ ಪ್ರಾಪ್ಯ ಮಹತ್ ಕೃಚ್ಛ್ರಂ ಪುನರ್ವೃದ್ಧಿಂ ಗಮಿಷ್ಯತಿ ॥೮॥

ಒಳ್ಳೆಯ ಭವಿಷ್ಯದೃಷ್ಟಿಯುಳ್ಳವನೂ, ಮಹಾಪ್ರಾಜ್ಞನೂ ಆದ ಒಬ್ಬ ಬ್ರಾಹ್ಮಣನು, ನೀನಿನ್ನೂ ಬಾಲಕನಿರುವಾಗ ಇವನು ದೊಡ್ಡ ಕಷ್ಟಕ್ಕೆ ಸಿಲುಕಿ ಪುನಃ ಅಭಿವೃದ್ಧಿಯನ್ನು ಹೊಂದುವನು ಎಂದು ಹೇಳಿದನು.

ತಸ್ಯ ಸ್ಮರಂತೀ ವಚನಮಾಶಂಸೇ ವಿಜಯಂ ತವ ।
ತಸ್ಮಾತ್ ತಾತ ಬ್ರವೀಮಿ ತ್ವಾಂ ವಕ್ಷ್ಯಾಮಿ ಚ ಪುನಃ ಪುನಃ ॥೯॥

ಆ ಮಾತನ್ನು ಸ್ಮರಿಸಿ ನಿನ್ನ ವಿಜಯವನ್ನು ಬಯಸುತ್ತಿದ್ದೇನೆ. ಆದ್ದರಿಂದ ಪ್ರೀತಿಪಾತ್ರನೇ, ನಿನಗೆ ಹೇಳುತ್ತಿದ್ದೇನೆ. ಮುಂದೆಯೂ ಪುನಃ ಪುನಃ ಹೇಳುವೆನು.

ಯಸ್ಯ ಯುದ್ಧಾರ್ಥಮುದ್ಯುಕ್ತಾ ಭವತ್ಯವಹಿತಾ ಮತಿಃ ।
ತಸ್ಯಾರ್ಥಸಿದ್ಧಿರ್ನಿಯತಾ ನಯೇಷ್ವರ್ಥಾನುಸಾರಿಣಃ ॥೧೦॥

ಯಾವನು ಅರ್ಥಾನುಸಾರಿಯಾದ ನೀತಿಯನ್ನು ಅನುಸರಿಸಿ, ಯುದ್ಧವನ್ನು ಮಾಡಲು ಉದ್ಯುಕ್ತವಾದ ಮತ್ತು ಏಕಾಗ್ರವಾದ ಬುದ್ಧಿಯನ್ನು ಹೊಂದಿರುತ್ತಾನೆಯೋ ಅವನಿಗೆ ನಿಶ್ಚಯವಾಗಿ ಅರ್ಥಸಿದ್ಧಿ ಉಂಟಾಗುವುದು.

ಸಮೃದ್ಧಿರಸಮೃದ್ಧಿರ್ವಾ ಪೂರ್ವೇಷಾಂ ಮಮ ಸೃಂಜಯ ।
ಏವಂ ವಿದ್ವಾನ್ ಯುದ್ಧಮನಾ ಭವ ಮಾ ಪ್ರತ್ಯುಪಾಹರ ॥೧೧॥

ಎಲೈ ಸೃಂಜಯನೇ, ನನ್ನ ಪೂರ್ವಜರಿಗೆ ಸಮೃದ್ಧಿ ಇರಲಿ ಅಥವಾ ಇಲ್ಲದಿರಲಿ ಎಂದು ತಿಳಿದು ಯುದ್ಧದಲ್ಲಿ ಉದ್ಯುಕ್ತನಾಗಬೇಕು. ಹಿಂದೆ ಸರಿಯಬೇಡ.

ನಾತಃ ಪಾಪೀಯಸೀಂ ಕಾಂಚಿದವಸ್ಥಾಂ ಶಂಬರೋಽಬ್ರವೀತ್ ।
ಯಸ್ಯ ನೈವೋದ್ಯತಃ ಪ್ರಾತರ್ಭೋಜನಂ ಪ್ರತಿದೃಶ್ಯತೇ ॥೧೨॥

ಯಾವನು ಪ್ರಾತಃಕಾಲದಲ್ಲಿ ಎದ್ದು ಈ ದಿನದ ಭೋಜನವಿಲ್ಲ ಎಂದು ಕಾಣುತ್ತಾನೆಯೋ ಅದಕ್ಕಿಂತ ದುರವಸ್ಥೆಯಿಲ್ಲ ಎಂದು ಶಂಬರನು ಹೇಳಿದ್ದಾನೆ.

ಪತಿಪುತ್ರವಧಾದೇತತ್ ಪರಮಂ ದುಃಖಮಬ್ರವೀತ್ ।
ದಾರಿದ್ರ್ಯಮಿತಿ ಯತ್ ಪ್ರೋಕ್ತಂ ಪರ್ಯಾಯಮರಣಂ ಹಿ ತತ್ ॥೧೩॥

ಪತಿ-ಪುತ್ರರ ವಧೆಗಿಂತಲೂ ಇದು ದೊಡ್ಡ ದುಃಖವೆಂದು ಹೇಳಿದ್ದಾನೆ. ದಾರಿದ್ರ್ಯವೆಂಬುದೇನಿದೆಯೋ ಅದು ಇನ್ನೊಂದು ಮರಣವೇ ಸರಿ.

ಅಹಂ ಮಹಾಕುಲೇ ಜಾತಾ ಹ್ರದಾದ್ ಹ್ರದಮಿವಾಗತಾ ।
ಈಶ್ವರೀ ಸರ್ವಕಲ್ಯಾಣೇ ಭರ್ತ್ರಾ ಪರಮಪೂಜಿತಾ ॥೧೪॥

ದೊಡ್ಡ ಕುಲದಲ್ಲಿ ಜನಿಸಿದ ನಾನು, ಒಂದು ಸರೋವರದಿಂದ ಇನ್ನೊಂದು ಸರೋವರಕ್ಕೆ ಬಂದಂತೆ ನಿನ್ನ ತಂದೆಯ ಮನೆಯನ್ನು ಸೇರಿ, ಪ್ರಭುತ್ವವನ್ನು ಹೊಂದಿ ಎಲ್ಲಾ ಶುಭಪದಾರ್ಥಗಳಿಂದ ಕೂಡಿದವಳಾಗಿ, ಪತಿಯಾದ ನಿನ್ನ ತಂದೆಯಿಂದ ಬಹಳ ಪೂಜಿತಳಾಗಿದ್ದೆ.

ಮಹಾರ್ಹಮಾಲ್ಯಾಭರಣಾಂ ಸುಮೃಷ್ಟಾಂಬರವಾಸಿನೀಮ್ ।
ಪುರಾ ದೃಷ್ಟ್ವಾ ಸುಹೃದ್ವರ್ಗೋ ಮಾಮಪಶ್ಯತ್ ಸುದುಃಖಿತಾಮ್ ॥೧೫॥

ಬಹಳ ಬೆಲೆಬಾಳುವ ಮಾಲ್ಯಾಭರಣಗಳನ್ನು ಧರಿಸಿ, ಶ್ರೇಷ್ಠವಾದ ಶುದ್ಧವಾದ ವಸ್ತ್ರಗಳನ್ನು ಉಡುತ್ತಿರುವ ನನ್ನನ್ನು ಹಿಂದೆ ನೋಡಿದ ಸುಹೃಜ್ಜನರು ಅನಂತರ ದುಃಖದಿಂದ ಕೂಡಿದ ನನ್ನನ್ನು ನೋಡಿದರು.

ಯದಾ ಮಾಂ ಚೈವ ಭಾರ್ಯಾಂ ಚ ದ್ರಷ್ಟಾಸಿ ಭೃಶದುರ್ಬಲೇ ।
ನ ತದಾ ಜೀವಿತೇನಾರ್ಥೋ ಭವಿತಾ ತವ ಸೃಂಜಯ ॥೧೬॥

ಎಲೈ ಸೃಂಜಯನೇ, ನಾನೂ ಮತ್ತು ನಿನ್ನ ಪತ್ನಿಯೂ ಬಹಳ ದುರ್ಬಲರಾಗಿರುವುದನ್ನು ನೋಡಿದರೆ ನೀನು ಬದುಕುವುದರಿಂದ ಯಾವ ಪ್ರಯೋಜನವೂ ಇಲ್ಲ.

ದಾಸಕರ್ಮಕರಾನ್ ಭೃತ್ಯಾನ್ ಆಚಾರ್ಯರ್ತ್ವಿಕ್‌ಪುರೋಹಿತಾನ್ ।
ಅಭೃತ್ಯಾಽಸ್ಮಾನ್ ಪ್ರಜಹತೋ ದೃಷ್ಟ್ವಾ ಕಿಂ ಜೀವಿತೇನ ತೇ ॥೧೭॥

ದಾಸಕರ್ಮವನ್ನು ಮಾಡುವ ಸೇವಕರನ್ನು ಮತ್ತು ಆಚಾರ್ಯ, ಋತ್ವಿಕ್, ಪುರೋಹಿತರನ್ನು ನಾವು ಪೋಷಿಸಿದೆವು. ಅವರು ನಮ್ಮನ್ನು ಬಿಡುವುದನ್ನು ನೋಡುವ ನಿನಗೆ ಜೀವನದಿಂದ ಏನು ಪ್ರಯೋಜನ?

ಯದಿ ಕೃತ್ಯಂ ನ ಪಶ್ಯಾಮಿ ತವಾದ್ಯಾಹಂ ಯಥಾ ಪುರಾ ।
ಶ್ಲಾಘನೀಯಂ ಯಶಸ್ಯಂ ಚ ಕಾ ಶಾಂತಿರ್ಹೃದಯಸ್ಯ ಮೇ ॥೧೮॥

ಹಿಂದೆ ನಿನಗೆ ಶ್ಲಾಘನೀಯವೂ, ಕೀರ್ತಿಕರವೂ ಆದ ಕರ್ತವ್ಯವಿದ್ದಂತೆ ಈ ದಿನ ನಿನಗೆ ಅಂತಹ ಕರ್ತವ್ಯವು ಕಾಣದಿದ್ದರೆ ನನ್ನ ಮನಸ್ಸಿಗೆ ಹೇಗೆ ಶಾಂತಿ ಉಂಟಾಗುತ್ತದೆ?

ನೇತಿ ಚೇದ್ ಬ್ರಾಹ್ಮಣಾನ್ ಬ್ರೂಯಾಂ ದೀರ್ಯೇತ ಹೃದಯಂ ಮಮ।
ನ ಹ್ಯಹಂ ನ ಚ ಮೇ ಭರ್ತಾ ನೇತಿ ಬ್ರಾಹ್ಮಣಮುಕ್ತವಾನ್ ॥೧೯॥

ಬ್ರಾಹ್ಮಣರಿಗೆ ಇಲ್ಲ ಎಂದು ಹೇಳುವುದಾದರೆ ನನ್ನ ಹೃದಯವು ಬಿರಿದು ಹೋಗುತ್ತದೆ. ನಾನಾಗಲೀ, ನನ್ನ ಪತಿಯಾಗಲೀ ಎಂದೂ ಬ್ರಾಹ್ಮಣರಿಗೆ ಇಲ್ಲ ಎಂದು ಹೇಳಲಿಲ್ಲ.

ವಯಮಾಶ್ರಯಣೀಯಾಃ ಸ್ಮ ನಾಶ್ರಿತಾರಃ ಪರಸ್ಯ ಚ ।
ಅನ್ಯಾನಾಶ್ರಿತ್ಯ ಜೀವಂತೀ ಪರಿತ್ಯಕ್ಷ್ಯಾಮಿ ಜೀವಿತಮ್ ॥೨೦॥

ನಮ್ಮನ್ನು ಇನ್ನೊಬ್ಬರು ಆಶ್ರಯಿಸಬೇಕೇ ಹೊರತು ನಾವು ಇನ್ನೊಬ್ಬರನ್ನು ಆಶ್ರಯಿಸಬಾರದು. ಇನ್ನೊಬ್ಬರನ್ನು ಆಶ್ರಯಿಸಿ ಜೀವಿಸುವುದಾದರೆ ನಾನು ಪ್ರಾಣವನ್ನು ಬಿಡುವೆನು.

ಅಪಾರೇ ಭವ ನಃ ಪಾರಮ್ ಅಪ್ಲವೇ ಭವ ನಃ ಪ್ಲವಃ ।
ಕುರುಷ್ವ ಸ್ಥಾನಮಸ್ಥಾನೇ ಮೃತಾನ್ ಸಂಜೀವಯಸ್ವ ನಃ ॥೨೧॥

ಸರ್ವೇ ತೇ ಶತ್ರವಃ ಸಹ್ಯಾ ನೋ ಚೇಜ್ಜೀವಿತುಮಿಚ್ಛಸಿ ॥೨೨॥

ದಡವೇ ಕಾಣದ ಈ ಸಂಕಟದಲ್ಲಿ ನೀನು ನಮಗೆ ದಡವಾಗು. ದೋಣಿ ಇಲ್ಲದ ನಮಗೆ ನೀನು ದೋಣಿಯಾಗು. ಆಶ್ರಯವಿಲ್ಲದಿರುವ ಕಾಲದಲ್ಲಿ ನೀನು

ಆಶ್ರಯನಾಗು. ಮೃತರಾದ ನಮ್ಮನ್ನು ಬದುಕಿಸು. ನೀನು ಹೀಗೆ ಬದುಕುವ ಇಚ್ಛೆಯನ್ನು ತೊರೆದರೆ ಶತ್ರುಗಳು ನಿನಗೆ ಸಹ್ಯರಾಗುತ್ತಾರೆ (ಅಧೀನರಾಗುತ್ತಾರೆ).

ಅಥ ಚೇದೀದೃಶೀಂ ವೃತ್ತಿಂ ಕ್ಲೀಬಮಭ್ಯವಪದ್ಯಸೇ ।
ನಿರ್ವಿಣ್ಣಾತ್ಮಾ ಹತಮನಾ ಮುಂಚೇಮಾಂ ಜೀವಿಕಾಂ ಪುನಃ ॥೨೩॥

ನೀನು ಹೀಗೆ ನಪುಂಸಕರಿಗೆ ಯೋಗ್ಯವಾದ ನಡತೆಯನ್ನು ಅನುಸರಿಸುವುದಾದರೆ ಮನೋಬಲವಿಲ್ಲದೆ ನಿರ್ವಿಣ್ಣನಾಗಿ ಈ ಪ್ರಾಣವನ್ನು ಬಿಡು.

ಏಕಶತ್ರುವಧೇನೈವ ಶೂರೋ ಗಚ್ಛತಿ ವಿಶ್ರುತಿಮ್ ॥೨೪॥

ಇಂದ್ರೋ ವೃತ್ರವಧೇನೈವ ಮಹೇಂದ್ರಃ ಸಮಪದ್ಯತ ।
ಮಾಹೇಂದ್ರಂ ಚ ಗ್ರಹಂ ಲೇಭೇ ಲೋಕಾನಾಂ ಚೇಶ್ವರೋಽಭವತ್ ॥

ಒಬ್ಬ ಶತ್ರುವಿನ ವಧೆಯನ್ನು ಮಾಡಿದರೂ ಶೂರನಾದವನು ಕೀರ್ತಿಯನ್ನು ಪಡೆಯುತ್ತಾನೆ. ಇಂದ್ರನು ವೃತ್ರನೊಬ್ಬನನ್ನು ಕೊಂದುದರಿಂದಲೇ ಮಹೇಂದ್ರನಾದನು ಮತ್ತು ಯಜ್ಞಗಳಲ್ಲಿ ಯಜ್ಞಭಾಗವನ್ನೂ ಲೋಕಗಳಲ್ಲಿ ಪ್ರಭುತ್ವವನ್ನೂ ಪಡೆದನು.

ನಾಮ ವಿಶ್ರಾವ್ಯ ಸಂಖೇ ವೈ ಶತ್ರೂನಾಹೂಯ ದಂಸಿತಾನ್ ।
ಸೇನಾಗ್ರಂ ಚಾಪಿ ವಿದ್ರಾವ್ಯ ಹತ್ವಾ ಶತ್ರುಂ ಪರಂತಪಃ ॥೨೬॥

ಯದೈವ ಲಭತೇ ವೀರಃ ಸುಯುದ್ಧೇನ ಮಹದ್ಯಶಃ ।
ತದೈವ ಪ್ರವ್ಯಥಂತೇಽಸ್ಯ ಶತ್ರವೋ ವಿನಮಂತಿ ಚ ॥೨೭॥

ಯುದ್ಧದಲ್ಲಿ ತನ್ನ ಹೆಸರನ್ನು ಘೋಷಿಸುತ್ತಾ, ಸನ್ನದ್ಧರಾದ ಶತ್ರುಗಳನ್ನು ಆಹ್ವಾನಿಸಿ, ಅವರ ಸೈನ್ಯದ ಮುಂಭಾಗವನ್ನು ಭೇದಿಸಿ, ಪರಂತಪರಾದ ಶತ್ರುಗಳನ್ನು ಸಂಹಾರ ಮಾಡಿ, ವೀರನಾಗಿ ಒಳ್ಳೆಯ ಯುದ್ಧವನ್ನು ಮಾಡಿ, ಯಾವಾಗ ಒಳ್ಳೆಯ ಯಶಸ್ಸನ್ನು ಸಂಪಾದಿಸುತ್ತಾನೆಯೋ ಆಗಲೇ ಅವನ ಶತ್ರುಗಳು ದುಃಖಿತರಾಗಿ ಅವನಿಗೆ ಬಾಗುತ್ತಾರೆ.

ತ್ಯಕ್ತಾತ್ಮಾನಂ ರಣೇ ದಕ್ಷಂ ಶೂರಂ ಪುರುಷಮಾನಿನಮ್ ।
ಅವಶಾಃ ಪೂಜಯಂತಿ ಸ್ಮ ಸರ್ವಕಾಮಸಮೃದ್ಧಿಭಿಃ ॥೨೮॥

ಯಾವನು ತನ್ನ ಪರಾಕ್ರಮದಲ್ಲಿ ನಂಬಿಕೆಯುಳ್ಳವನಾಗಿ, ಪ್ರಾಣದ ಹಂಗನ್ನು ತೊರೆದು, ಯುದ್ಧದಲ್ಲಿ ದಕ್ಷನೂ ಮತ್ತು ಶೂರನೂ ಆಗಿರುತ್ತಾನೆಯೋ ಅಂತಹವನನ್ನು ಅವಶರಾಗಿ ಸರ್ವಕಾಮಗಳಿಂದಲೂ ಮತ್ತು ಸಮೃದ್ಧಿಗಳಿಂದಲೂ ಪೂಜಿಸುತ್ತಾರೆ.

ರಾಜ್ಯಸ್ಯಾಪ್ಯಸ್ಯ ವಿಭ್ರಂಶಃ ಸಂಶಯೋ ಜೀವಿತಸ್ಯ ವಾ ।
ಪ್ರಲಬ್ಧಸ್ಯ ಹಿ ಶತ್ರೋರ್ನಿರ್ವೇಶಂ ಕುರ್ವಂತಿ ಸಾಧವಃ ॥೨೯॥

ರಾಜ್ಯದ ವಿಭ್ರಂಶವೇ ಆಗಿರಲಿ ಅಥವಾ ಜೀವನದ ಸಂಶಯವೇ ಇರಲಿ, ಸಜ್ಜನರಾದವರು ವಂಚಕನಾದ ಶತ್ರುವಿಗೆ ಅಪಕಾರವನ್ನು ಮಾಡುತ್ತಾರೆ.

ಸ್ವರ್ಗದ್ವಾರೋಪಮಂ ರಾಜ್ಯಮಥವಾऽಪ್ಯಮೃತೋಪಮಮ್ ।
ಭುಂಕ್ಷ್ವ ಯುದ್ಧೇನ ತೇ ಶತ್ರೂನ್ ಜಿತ್ವಾ ತು ರಣಮೂರ್ಧನಿ ॥೩೦॥

ಸಂಗ್ರಾಮಶಿರಸ್ಸಿನಲ್ಲಿ ಯುದ್ಧವನ್ನು ಮಾಡಿ ನಿನ್ನ ಶತ್ರುಗಳನ್ನು ಜಯಿಸಿ, ಸ್ವರ್ಗದ್ವಾರದಂತಿರುವ ಅಥವಾ ಮೋಕ್ಷದಂತೆ ಇರುವ ರಾಜ್ಯವನ್ನು ಭೋಗಿಸು.

ನಿಯಚ್ಚನ್ನಿತರಾನ್ ವರ್ಣಾನ್ ವಿನಯನ್ ಸರ್ವದುಷ್ಕೃತಾನ್ ।
ರುದ್ಧಮೇಕಾಯನೇ ಮತ್ವಾ ಪತೋಲ್ಮುಕ ಇವಾರಿಷು ॥೩೧॥

ಇತರ ವರ್ಣಗಳನ್ನು ಅವರ ಧರ್ಮಗಳಲ್ಲಿ ನಿಯಂತ್ರಿಸುತ್ತಾ, ಅನ್ಯಾಯ ಮಾಡಿದವರನ್ನು ಶಿಕ್ಷಿಸುತ್ತಾ, ಒಬ್ಬನೇ ಹೋಗುವ ಕಾಲುದಾರಿಯಲ್ಲಿ ಸಿಕ್ಕಿಕೊಂಡವನಂತೆ ಶತ್ರುಗಳ ಮೇಲೆ ಬೆಂಕಿಯ ಕೊಳ್ಳಿಯಂತೆ ಎರಗುವವನಾಗು.

ಜಹಿ ಶತ್ರೂನ್ ರಣೇ ರಾಜನ್ ಸ್ವಧರ್ಮಮನುಪಾಲಯ ।
ಮಾ ತ್ವಾ ಪಶ್ಯೇತ್ ಸುಕೃಪಣಂ ಶತ್ರುಃ ಶ್ರೀಮಾನ್ ಕದಾಚನ ॥೩೨॥

ಎಲೈ ರಾಜನೇ, ಯುದ್ಧದಲ್ಲಿ ಶತ್ರುಗಳನ್ನು ಗೆದ್ದು ನಿನ್ನ ಸ್ವಧರ್ಮವನ್ನು ಪಾಲಿಸು. ಕಾರ್ಪಣ್ಯದಲ್ಲಿರುವ ನಿನ್ನನ್ನು ಸಂಪತ್ತಿನಿಂದ ಕೂಡಿದ ನಿನ್ನ ಶತ್ರುವು ಎಂದೂ ನೋಡದಿರಲಿ.

ಅಸ್ಮದೀಯೈಶ್ಚ ಶೋಚದ್ಭಿಃ ನಂದದ್ಭಿಶ್ಚ ಪರೈರ್ಭೃಶಮ್ ।
ಅಪಿ ತ್ವಾಂ ನಾನುಪಶ್ಯೇಯಂ ದೀನದೀನಮಿವ ಸ್ಥಿತಮ್ ॥೩೩॥

ನಮ್ಮವರು ಶೋಕಪಡುತ್ತಿರುವಾಗ, ಶತ್ರುಗಳು ಬಹಳವಾಗಿ ಸಂತೋಷಪಡುತ್ತಿರುವಾಗ ದೀನದೀನನಾಗಿರುವ ನಿನ್ನನ್ನು ನಾನು ನೋಡಲಾರೆ.

ಉಷ್ಯ ಸೌವೀರಕನ್ಯಾಭಿಃ ಶ್ಲಾಘ್ಯಃ ಸ್ವಾರ್ಥೈರ್ಯಥಾ ಪುರಾ ।
ಮಾ ಚ ಸೈಂಧವಕನ್ಯಾನಾಮಪಹಾಸವಶಂ ಗಮಃ ॥೩೪॥

ಹಿಂದೆ ತಮ್ಮ ಅಭೀಷ್ಟಗಳನ್ನು ಹೊಂದಿದ ಸೌವೀರಕನ್ಯೆಯರ ಜೊತೆಯಲ್ಲಿ ವಾಸ ಮಾಡಿ, ಅವರಿಂದ ಶ್ಲಾಘನೀಯನಾಗಿ, ಈಗ ಸಿಂಧುದೇಶದ ಕನ್ಯೆಯರ ಅಪಹಾಸಕ್ಕೆ ಗುರಿಯಾಗಬೇಡ.

ಯುವಾ ರೂಪೇಣ ಸಂಪನ್ನೋ ವಿದ್ಯಯಾऽಭಿಜನೇನ ಚ ।
ಕಸ್ತಾ ದ್ವಿಶೋ ವಿಕುರ್ವೀತ ಯಶಸ್ವೀ ಲೋಕವಿಶ್ರುತಃ ॥೩೫॥

ವೋಢವ್ಯೇ ಧುರ್ಯನಡುವನ್ಮನ್ಯೇ ಮರಣಮೇವ ತತ್ ॥೩೬॥

ಯುವಕನೂ, ರೂಪಸಂಪನ್ನನೂ, ವಿದ್ಯೆಯಿಂದಲೂ, ಕುಲದಿಂದಲೂ ಕೂಡಿದವನೂ, ಲೋಕವಿಶ್ರುತನೂ, ಕೀರ್ತಿವಂತನೂ ಆದ ನಿನ್ನಂತಹ ಯಾವನು ಇಂತಹ ಮನೋವಿಕಾರಕ್ಕೆ ಒಳಗಾದಾನು? ಎತ್ತಿನಂತೆ ಭಾರವನ್ನು ಹೊರಬೇಕಾದಾಗ ಅದನ್ನು ಹೊರದಿದ್ದರೆ ಅದು ಮರಣವೇ ಸರಿ.

ಯದಿ ತ್ವಾಮತ್ರ ಪಶ್ಯಾಮಿ ಪರಸ್ಯ ಪ್ರಿಯವಾದಿನಮ್ ।
ಪೃಷ್ಠತೋऽನುವ್ರಜಂತಂ ವಾ ಕಾ ಶಾಂತಿರ್ಹೃದಯಸ್ಯ ಮೇ ॥೩೭॥

ಇನ್ನೊಬ್ಬರಿಗೆ ಹಿತವನ್ನು ನುಡಿಯುತ್ತಾ, ಅವರ ಬೆನ್ನಿನ ಹಿಂದೆ ಅನುಸರಿಸುವ ನಿನ್ನನ್ನು ನೋಡಿದರೆ ನನ್ನ ಮನಸ್ಸಿಗೆ ಯಾವ ಶಾಂತಿ ಉಂಟಾದೀತು?

ನಾಸ್ಮಿನ್ ಜಾತು ಕುಲೇ ಜಾತೋ ಗಚ್ಛೇದ್ ಯೋऽನ್ಯಸ್ಯ ಪೃಷ್ಠತಃ ।
ನ ತ್ವಂ ಪರಸ್ಯಾನುಚರಸ್ತಾತ ಜೀವಿತುಮರ್ಹಸಿ ॥೩೮॥

ಈ ಕುಲದಲ್ಲಿ ಹುಟ್ಟಿದ ಯಾವನೂ ಇನ್ನೊಬ್ಬನ ಹಿಂದೆ ನಡೆದು ಹೋಗಲಿಲ್ಲ. ಪ್ರೀತಿಪಾತ್ರನೇ, ಇನ್ನೊಬ್ಬನ ಅನುಚರನಾಗಿ ನೀನು ಜೀವಿಸಬಾರದು.

ಅಹಂ ಹಿ ಕ್ಷತ್ರಹೃದಯಂ ವೇದ ಯದ್ ಭೂರಿ ಶಾಶ್ವತಮ್ ।
ಪೂರ್ವೈಃ ಪೂರ್ವತರೈಃ ಪ್ರೋಕ್ತಂ ಪರೈಃ ಪರತರೈರಪಿ ॥೩೯॥

ಶಾಶ್ವತಂ ಚಾವ್ಯಯಂ ಚೈವ ಪ್ರಜಾಪತಿವಿನಿರ್ಮಿತಮ್ ॥೪೦॥

ನಾನು ಬ್ರಹ್ಮದೇವರಿಂದ ನಿರ್ಮಿತವಾದ, ಪೂರ್ವಜನರಿಂದಲೂ, ಅವರ ಪೂರ್ವಜರಿಂದಲೂ ಹೇಳಲ್ಪಟ್ಟ, ಮುಂದಿನವರಿಂದಲೂ ಹೇಳಲ್ಪಡುವ ಶಾಶ್ವತವಾದ, ಅವ್ಯಯವಾದ, ಶ್ರೇಷ್ಠವಾದ ಕ್ಷತ್ರಿಯ ಹೃದಯವನ್ನು ತಿಳಿದಿದ್ದೇನೆ.

ಯೋ ವೈ ಕಶ್ಚಿತ್ ಕುಲೇ ಜಾತಃ ಕ್ಷತ್ರಿಯಃ ಕ್ಷತ್ರಧರ್ಮವಿತ್ ।
ಭಯಾದ್ ವೃತ್ತಿಸಮೀಕ್ಷ್ಯೋ ವಾ ನ ನಮೇದಿಹ ಕಸ್ಯಚಿತ್ ॥೪೧॥

ಕ್ಷತ್ರಿಯ ಕುಲದಲ್ಲಿ ಹುಟ್ಟಿ ಕ್ಷತ್ರಿಯ ಧರ್ಮವನ್ನು ತಿಳಿದ ಯಾವನೂ ಸಹ ಜೀವನದ ಸಲುವಾಗಿ ಭಯದಿಂದ ಇನ್ನೊಬ್ಬನಿಗೆ ಬಗ್ಗಬಾರದು.

ಉದ್ಯಚ್ಛೇದೇವ ನ ನಮೇದ್ ಉದ್ಯಮೋ ಹ್ಯೇವ ಪೌರುಷಮ್ ।
ಅಪ್ಯಪರ್ವಣಿ ಭಜ್ಯೇತ ನ ನಮೇದಿಹ ಕಸ್ಯಚಿತ್ ॥೪೨॥

ಪರಾಕ್ರಮವನ್ನು ತೋರಿಸಬೇಕೇ ಹೊರತು ಬಗ್ಗಬಾರದು. ಪರಾಕ್ರಮವೇ ಪೌರುಷದ ಲಕ್ಷಣ. ಗಂಟಿಲ್ಲದ ಕಡೆಯಲ್ಲಾದರೂ ಮುರಿದು ಹೋಗಬೇಕು, ಆದರೆ ಯಾರಿಗೂ ಬಾಗಬಾರದು.

ಮಾತಂಗೋ ಮತ್ತ ಇವ ಚ ಪರೀಯಾತ್ ಸ ಮಹಾಮನಾಃ ।
ಬ್ರಾಹ್ಮಣೇಭ್ಯೋ ನಮೇನ್ನಿತ್ಯಂ ಧರ್ಮಾಯೈವ ಚ ಸೃಂಜಯ ॥೪೩॥

ಮದಿಸಿದ ಗಜದಂತೆ ಧೈರ್ಯಶಾಲಿಯಾಗಿ ಶತ್ರುಗಳ ಮೇಲೆ ಎರಗಬೇಕು. ಸೃಂಜಯನೇ, ಬ್ರಾಹ್ಮಣರಿಗೆ ಮತ್ತು ಧರ್ಮಕ್ಕೆ ಮಾತ್ರ ನಮಸ್ಕಾರವನ್ನು ಮಾಡಬೇಕು.

ನಿಯಚ್ಛನ್ನಿತರಾನ್ ವರ್ಣಾನ್ ವಿಮರ್ಶನ್ ಸರ್ವಮುನ್ನತಃ ।
ಸಸಹಾಯೋऽಸಹಾಯೋ ವಾ ಯಾವಜ್ಜೀವಂ ತಥಾ ಭವೇತ್ ॥೪೪॥

ಎಲ್ಲ ವರ್ಣದವರನ್ನೂ ನಿಯಂತ್ರಿಸುತ್ತಾ, ಎಲ್ಲವನ್ನೂ ಶ್ರೇಷ್ಠವಾಗಿ ವಿಚಾರ ಮಾಡುತ್ತಾ, ಸಹಾಯವಿರಲಿ ಅಥವಾ ಇಲ್ಲದಿರಲಿ, ಬದುಕಿರುವವರೆಗೆ ಹಾಗೆಯೇ ಬದುಕಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಯಸ್ತ್ರಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುಃಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ನಾಲ್ಕನೆಯ ಅಧ್ಯಾಯ

ಕುಂತಿಯಿಂದ ವಿದುಲೋಪಾಖ್ಯಾನದ ಕಥನ.

ಸೃಂಜಯಃ

ಕೃಷ್ಣಾಯಸಸ್ಯ ಬತ ತೇ ಸಂಹತ್ಯಾ ಹೃದಯಂ ಕೃತಮ್ ।
ಮಮ ಮಾತಸ್ತ್ವಕರುಣೇ ವೈರಪ್ರಜ್ಞೇऽತ್ಯಮರ್ಷಣೇ ॥೧॥

ಸೃಂಜಯ– ಎಲೌ ಕರುಣೆ ಇಲ್ಲದವಳೇ, ವೈರದಲ್ಲೇ ಬುದ್ಧಿಯಿದ್ದವಳೇ, ಕ್ರೋಧಶೀಲಳೇ, ತಾಯಿಯೇ, ನಿನ್ನ ಹೃದಯವು ಕಬ್ಬಿಣದ ಗಟ್ಟಿಯಿಂದ ಮಾಡಲ್ಪಟ್ಟಿದೆ.

ಅಹೋ ಕ್ಷತ್ರಸಮಾಚಾರೋ ಯತ್ರ ಮಾಮಿತರಂ ಯಥಾ ।
ನಿಯೋಜಯಸಿ ಯುದ್ಧಾಯ ಪರಮಾತೇವ ಮಾಂ ತಥಾ ॥೨॥

ಈದೃಶಂ ವಚನಂ ಬ್ರೂಯಾದ್ ಭವತೀ ಪುತ್ರಮೇಕಜಮ್ ॥೩॥

ಅಯ್ಯೋ ಕ್ಷತ್ರಿಯರ ನಡವಳಿಕೆಯು ಹೀಗಿರುತ್ತದೆ! ಏಕೆಂದರೆ ನಾನು ಬೇರೆಯವನೋ ಎಂಬಂತೆ ಅಥವಾ ನೀನು ಇನ್ನೊಬ್ಬನ ತಾಯಿಯೋ ಎಂಬಂತೆ

ನನ್ನನ್ನು ಯುದ್ಧದಲ್ಲಿ ನಿಯೋಜಿಸುತ್ತಿದ್ದೀಯೆ. ನಿನ್ನ ಏಕಮಾತ್ರ ಪುತ್ರನಾದ ನನಗೆ ನೀನು ಹೀಗೆ ಮಾತನಾಡಲು ಹೇಗೆ ಸಾಧ್ಯವಾಗುತ್ತದೆ?

ಕಿಂ ನು ತೇ ಮಾಮಪಶ್ಯಂತ್ಯಾಃ ಪೃಥಿವ್ಯಾऽಪಿ ಚ ಸರ್ವಯಾ ।
ಕಿಮಾಭರಣಕೃತ್ಯೇನ ಕಿಂ ಭೋಗೈರ್ಜೀವಿತೇನ ವಾ ॥೪॥

ಮಯಿ ವಾ ಸಂಗರಹತೇ ಪ್ರಿಯಪುತ್ರೇ ವಿಶೇಷತಃ ॥೫॥

ನಿನ್ನ ಪ್ರಿಯಪುತ್ರನಾದ ನಾನು ಯುದ್ಧದಲ್ಲಿ ಮರಣವನ್ನು ಹೊಂದಿದರೆ ನನ್ನನ್ನು ಕಾಣದಿರುವ ನಿನಗೆ ಪೃಥಿವಿಯಿಂದಲಾದರೂ ಏನು ಪ್ರಯೋಜನ? ಆಭರಣಗಳಿಂದ ಏನು ಪ್ರಯೋಜನ? ಭೋಗಗಳಿಂದಾಗಲೀ, ಜೀವನದಿಂದಾಗಲೀ ಏನು ಪ್ರಯೋಜನ?

ವಿದುಲಾ

ಸರ್ವಾರಂಭಾ ಹಿ ವಿದುಷಾಂ ತಾತ ಧರ್ಮಾರ್ಥಕಾರಣಾತ್ ।
ತಾನೇವಾಭಿಸಮೀಕ್ಷ್ಯಾಹಂ ಸೃಂಜಯ ತ್ವಾಮಚೂಚುದಮ್ ॥೬॥

ವಿದುಲಾ– ಎಲೈ ಪ್ರೀತಿಪಾತ್ರನೇ, ವಿವೇಕಿಗಳ ಎಲ್ಲಾ ಪ್ರಯತ್ನಗಳು ಧರ್ಮ ಮತ್ತು ಅರ್ಥಗಳ ಉದ್ದೇಶದಿಂದಾಗಿ ಇರುತ್ತವೆ. ಎಲೈ ಸೃಂಜಯನೇ, ಅವುಗಳನ್ನೇ ಗಮನಿಸಿ ನಾನು ನಿನ್ನನ್ನು ಪ್ರಚೋದಿಸಿದೆ.

ಸುಸಂವೀಕ್ಷ್ಯಃ ಕ್ರಮೋಪೇತೋ ಮುಖ್ಯಃ ಕಾಲೋऽಯಮಾಗತಃ ॥೭॥

ಅಸ್ಮಿಂಶ್ಚೇದಾಗತೇ ಕಾಲೇ ಕಾರ್ಯಂ ನ ಪ್ರತಿಪದ್ಯಸೇ ।
ಅಸಂಭಾವಿತರೂಪಸ್ತ್ವಂ ಸುನೃಶಂಸಂ ಕರಿಷ್ಯಸಿ ॥೮॥

ಕ್ರಮವಾಗಿ ಪ್ರಾಪ್ತವಾಗಿರುವ ಈ ಕಾಲವು ಬಹಳ ಮುಖ್ಯವಾದುದೆಂಬುದನ್ನು ನೀನು ಗಮನಿಸಬೇಕು. ಹೀಗೆ ಪ್ರಾಪ್ತವಾದ ಈ ಕಾಲದಲ್ಲಿ ನೀನು ಸರಿಯಾದ ಕಾರ್ಯವನ್ನು ಮಾಡದಿದ್ದರೆ ಯಾರಿಂದಲೂ ಸತ್ಕರಿಸಲ್ಪಡದೆ, ಎಲ್ಲರಿಂದಲೂ ಅವಮಾನಕ್ಕೆ ಗುರಿಯಾಗುವಿ.

ನಿಯಚ್ಚನ್ನಿತರಾನ್ ವರ್ಣಾನ್ ವಿಮರ್ಶನ್ ಸರ್ವಮುನ್ನತಃ ।
ಸಸಹಾಯೋऽಸಹಾಯೋ ವಾ ಯಾವಜ್ಜೀವಂ ತಥಾ ಭವೇತ್ ॥೪೪॥

ಎಲ್ಲ ವರ್ಣದವರನ್ನೂ ನಿಯಂತ್ರಿಸುತ್ತಾ, ಎಲ್ಲವನ್ನೂ ಶ್ರೇಷ್ಠವಾಗಿ ವಿಚಾರ ಮಾಡುತ್ತಾ, ಸಹಾಯವಿರಲಿ ಅಥವಾ ಇಲ್ಲದಿರಲಿ, ಬದುಕಿರುವವರೆಗೆ ಹಾಗೆಯೇ ಬದುಕಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಯಸ್ತ್ರಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಚತುಃಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ನಾಲ್ಕನೆಯ ಅಧ್ಯಾಯ

ಕುಂತಿಯಿಂದ ವಿದುಲೋಪಾಖ್ಯಾನದ ಕಥನ.

ಸೃಂಜಯಃ

ಕೃಷ್ಣಾಯಸಸ್ಯ ಬತ ತೇ ಸಂಹತ್ಯಾ ಹೃದಯಂ ಕೃತಮ್ ।
ಮಮ ಮಾತಸ್ತ್ವಕರುಣೇ ವೈರಪ್ರಜ್ಞೇऽತ್ಯಮರ್ಷಣೇ ॥೧॥

ಸೃಂಜಯ– ಎಲೌ ಕರುಣೆ ಇಲ್ಲದವಳೇ, ವೈರದಲ್ಲೇ ಬುದ್ಧಿಯಿದ್ದವಳೇ, ಕ್ರೋಧಶೀಲಳೇ, ತಾಯಿಯೇ, ನಿನ್ನ ಹೃದಯವು ಕಬ್ಬಿಣದ ಗಟ್ಟಿಯಿಂದ ಮಾಡಲ್ಪಟ್ಟಿದೆ.

ಅಹೋ ಕ್ಷತ್ರಸಮಾಚಾರೋ ಯತ್ರ ಮಾಮಿತರಂ ಯಥಾ ।
ನಿಯೋಜಯಸಿ ಯುದ್ಧಾಯ ಪರಮಾತೇವ ಮಾಂ ತಥಾ ॥೨॥

ಈದೃಶಂ ವಚನಂ ಬ್ರೂಯಾದ್ ಭವತೀ ಪುತ್ರಮೇಕಜಮ್ ॥೩॥

ಅಯ್ಯೋ ಕ್ಷತ್ರಿಯರ ನಡವಳಿಕೆಯು ಹೀಗಿರುತ್ತದೆ! ಏಕೆಂದರೆ ನಾನು ಬೇರೆಯವನೋ ಎಂಬಂತೆ ಅಥವಾ ನೀನು ಇನ್ನೊಬ್ಬನ ತಾಯಿಯೋ ಎಂಬಂತೆ

ನನ್ನನ್ನು ಯುದ್ಧದಲ್ಲಿ ನಿಯೋಜಿಸುತ್ತಿದ್ದೀಯೆ. ನಿನ್ನ ಏಕಮಾತ್ರ ಪುತ್ರನಾದ ನನಗೆ ನೀನು ಹೀಗೆ ಮಾತನಾಡಲು ಹೇಗೆ ಸಾಧ್ಯವಾಗುತ್ತದೆ?

ಕಿಂ ನು ತೇ ಮಾಮಪಶ್ಯಂತ್ಯಾಃ ಪೃಥಿವ್ಯಾऽಪಿ ಚ ಸರ್ವಯಾ ।
ಕಿಮಾಭರಣಕೃತ್ಯೇನ ಕಿಂ ಭೋಗೈರ್ಜೀವಿತೇನ ವಾ ॥೪॥

ಮಯಿ ವಾ ಸಂಗರಹತೇ ಪ್ರಿಯಪುತ್ರೇ ವಿಶೇಷತಃ ॥೫॥

ನಿನ್ನ ಪ್ರಿಯಪುತ್ರನಾದ ನಾನು ಯುದ್ಧದಲ್ಲಿ ಮರಣವನ್ನು ಹೊಂದಿದರೆ ನನ್ನನ್ನು ಕಾಣದಿರುವ ನಿನಗೆ ಪೃಥಿವಿಯಿಂದಲಾದರೂ ಏನು ಪ್ರಯೋಜನ? ಆಭರಣಗಳಿಂದ ಏನು ಪ್ರಯೋಜನ? ಭೋಗಗಳಿಂದಾಗಲೀ, ಜೀವನದಿಂದಾಗಲೀ ಏನು ಪ್ರಯೋಜನ?

ವಿದುಲಾ

ಸರ್ವಾರಂಭಾ ಹಿ ವಿದುಷಾಂ ತಾತ ಧರ್ಮಾರ್ಥಕಾರಣಾತ್ ।
ತಾನೇವಾಭಿಸಮೀಕ್ಷ್ಯಾಹಂ ಸೃಂಜಯ ತ್ವಾಮಚೂಚುದಮ್ ॥೬॥

ವಿದುಲಾ– ಎಲೈ ಪ್ರೀತಿಪಾತ್ರನೇ, ವಿವೇಕಿಗಳ ಎಲ್ಲಾ ಪ್ರಯತ್ನಗಳು ಧರ್ಮ ಮತ್ತು ಅರ್ಥಗಳ ಉದ್ದೇಶದಿಂದಾಗಿ ಇರುತ್ತವೆ. ಎಲೈ ಸೃಂಜಯನೇ, ಅವುಗಳನ್ನೇ ಗಮನಿಸಿ ನಾನು ನಿನ್ನನ್ನು ಪ್ರಚೋದಿಸಿದೆ.

ಸುಸಂವೀಕ್ಷ್ಯಃ ಕ್ರಮೋಪೇತೋ ಮುಖ್ಯಃ ಕಾಲೋऽಯಮಾಗತಃ ॥೭॥

ಅಸ್ಮಿಂಶ್ಚೇದಾಗತೇ ಕಾಲೇ ಕಾರ್ಯಂ ನ ಪ್ರತಿಪದ್ಯಸೇ ।
ಅಸಂಭಾವಿತರೂಪಸ್ತ್ವಂ ಸುನೃಶಂಸಂ ಕರಿಷ್ಯಸಿ ॥೮॥

ಕ್ರಮವಾಗಿ ಪ್ರಾಪ್ತವಾಗಿರುವ ಈ ಕಾಲವು ಬಹಳ ಮುಖ್ಯವಾದುದೆಂಬುದನ್ನು ನೀನು ಗಮನಿಸಬೇಕು. ಹೀಗೆ ಪ್ರಾಪ್ತವಾದ ಈ ಕಾಲದಲ್ಲಿ ನೀನು ಸರಿಯಾದ ಕಾರ್ಯವನ್ನು ಮಾಡದಿದ್ದರೆ ಯಾರಿಂದಲೂ ಸತ್ಕರಿಸಲ್ಪಡದೆ, ಎಲ್ಲರಿಂದಲೂ ಅವಮಾನಕ್ಕೆ ಗುರಿಯಾಗುವಿ.

ತಂ ತ್ವಾಮಯಶಸಾ ಸ್ಪೃಷ್ಟಂ ನ ಬ್ರೂಯಾಂ ಯದಿ ಸೃಂಜಯ ।
ಪರಿವಾಕ್ ಶಲ್ಯಮಾಹುಸ್ತ್ವಾಂ ನಿಃಸಾಮರ್ಥ್ಯಮಹೇತುಕಮ್ ॥೯॥

ಎಲೈ ಸೃಂಜಯನೇ, ಅಂತಹ ಅಪಕೀರ್ತಿಯಿಂದ ಸ್ಪೃಷ್ಟನಾದ ನಿನಗೆ ನಾನು ಶಲ್ಯದಂತಹ ನನ್ನ ಮಾತುಗಳಿಂದ ಚುಚ್ಚದಿದ್ದರೆ ನಿನ್ನನ್ನು ಜನರು ನಿಷ್ಕಾರಣವಾಗಿ ಅಪ್ರಯೋಜಕನೆಂದು ಹೇಳುತ್ತಾರೆ.

ಸದ್ಭಿರ್ವಿಗರ್ಹಿತಂ ಮಾರ್ಗಂ ತ್ಯಜ ಮೂರ್ಖನಿಷೇವಿತಮ್ ।
ಅವಿದ್ಯಾ ವೈ ಮಹತ್ಯಸ್ತಿ ಯಾಮಿಮಾಂ ಸಂಶ್ರಿತಾಃ ಪ್ರಜಾಃ ॥೧೦॥

ಮೂರ್ಖರು ಅನುಸರಿಸುವ, ಸಜ್ಜನರಿಂದ ನಿಂದಿತವಾದ ಮಾರ್ಗವನ್ನು ಬಿಡು. ಈ ಎಲ್ಲಾ ಪ್ರಜೆಗಳು ಅನುಸರಿಸುವ ಮಾರ್ಗದಲ್ಲಿ ದೊಡ್ಡ ಅಜ್ಞಾನವಿದೆ.

ತವ ಸ್ಯಾದ್ಯದಿ ಸದ್ವೃತ್ತಂ ತೇನ ಮೇ ತ್ವಂ ಪ್ರಿಯೋ ಭವ ॥೧೧॥

ಧರ್ಮಾರ್ಥಗುಣಯುಕ್ತೇನ ನೇತರೇಣ ಕಥಂಚನ ।
ದೈವಮಾನುಷಯುಕ್ತೇನ ಸದ್ಭಿರಾಚರಿತೇನ ಚ ॥೧೨॥

ಧರ್ಮಾರ್ಥಸಾಧಕವಾದ, ಸಜ್ಜನರಿಂದ ಆಚರಿಸಲ್ಪಡುವ, ದುರ್ಜನರಿಂದ ಆಚರಿಸಲ್ಪಡದ, ದೈವಾನುಗ್ರಹ ಮತ್ತು ಮನುಷ್ಯ ಪ್ರಯತ್ನದಿಂದ ಕೂಡಿದ ಒಳ್ಳೆಯ ನಡತೆಯನ್ನು ನೀನು ಹೊಂದಿದರೆ ಅದರಿಂದ ನನಗೆ ಪ್ರಿಯನಾಗು.

ಯೋ ಹ್ಯೇವಮವಿನೀತೇನ ರಮತೇ ಪುತ್ರ ನಪ್ತೃಣಾ ।
ಅನುತ್ಥಾನವತಾ ಚಾಪಿ ದುರ್ವಿನೀತೇನ ದುರ್ಧಿಯಾ ॥೧೩॥

ರಮತೇ ಯಸ್ತು ಪುತ್ರೇಣ ಮೋಘಂ ತಸ್ಯ ಪ್ರಜಾಫಲಮ್ ॥೧೪॥

ಎಲೈ ಪುತ್ರನೇ, ಯಾವನು ಈ ರೀತಿಯಲ್ಲಿ ಪ್ರಯತ್ನವನ್ನು ಪಡದಿರುವ, ದುರ್ವಿನೀತನೂ, ದುರ್ಬುದ್ಧಿಯೂ ಆದ ಮೊಮ್ಮಗನ ಜೊತೆಯಲ್ಲಿ ಅಥವಾ ಮಗನ ಜೊತೆಯಲ್ಲಿ ಸಂತೋಷದಿಂದ ಇರುತ್ತಾನೆಯೋ ಅವನು ಪ್ರಜೆಗಳನ್ನು ಪಡೆದುದು ವ್ಯರ್ಥವಾಗುತ್ತದೆ.

ಅಕುರ್ವಂತೋ ಹಿ ಕರ್ಮಾಣಿ ಕುರ್ವಂತೋ ನಿಂದಿತಾನಿ ಚ ।
ಸುಖಂ ನೈವೇಹ ನಾಮುತ್ರ ಲಭಂತೇ ಪುರುಷಾಧಮಾಃ ॥೧೫॥

ಕರ್ಮವನ್ನೇ ಮಾಡದಿರುವ ಅಥವಾ ನಿಂದಿತಕರ್ಮಗಳನ್ನು ಮಾಡುವ ಪುರುಷಾಧಮರು ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಸುಖವನ್ನು ಹೊಂದುವುದಿಲ್ಲ.

ಯುದ್ಧಾಯ ಕ್ಷತ್ರಿಯಃ ಸೃಷ್ಟಃ ಸೃಂಜಯೇಹ ಜಯಾಯ ಚ ।
ಕ್ರೂರಾಯ ಕರ್ಮಣೇ ನಿತ್ಯಂ ಪ್ರಜಾನಾಂ ಪರಿಪಾಲನೇ ॥೧೬॥

ಜಯನ್ ವಾ ವಧ್ಯಮಾನೋ ವಾ ಪ್ರಾಪ್ನೋತೀಂದ್ರಸಲೋಕತಾಮ್ ॥

ಎಲೈ ಸೃಂಜಯನೇ, ಕ್ಷತ್ರಿಯನು ಯುದ್ಧಮಾಡಿ ಜಯವನ್ನು ಸಂಪಾದಿಸುವುದಕ್ಕೆ ಸೃಷ್ಟನಾಗಿದ್ದಾನೆ. ಕ್ರೂರಕರ್ಮವನ್ನು ಮಾಡಿ ಅವನು ಪ್ರಜೆಗಳ ಪರಿಪಾಲನೆಯನ್ನು ಮಾಡಲು ಸೃಷ್ಟನಾಗಿದ್ದಾನೆ. ಅವನು ಜಯಿಸಿದರೂ ಅಥವಾ ಮರಣವನ್ನು ಹೊಂದಿದರೂ ಇಂದ್ರಲೋಕವನ್ನು ಹೊಂದುತ್ತಾನೆ.

ನ ಶಕ್ರಭವನೇ ಪುಣ್ಯೇ ದಿವಿ ತದ್ ವಿದ್ಯತೇ ಸುಖಮ್ ।
ಯದಮಿತ್ರಾನ್ ವಶೇ ಕೃತ್ವಾ ಕ್ಷತ್ರಿಯಃ ಸುಖಮಶ್ನುತೇ ॥೧೮॥

ಭೂಮಿಯಲ್ಲಿ ಶತ್ರುಗಳನ್ನು ಗೆದ್ದು ವಶಪಡಿಸಿಕೊಂಡು, ಕ್ಷತ್ರಿಯನು ಎಂತಹ ಸುಖವನ್ನು ಪಡುತ್ತಾನೋ ಅಂತಹ ಸುಖವು ಪವಿತ್ರವಾದ ಸ್ವರ್ಗಲೋಕದಲ್ಲಿ ಇಂದ್ರನ ಮನೆಯಲ್ಲಿಯೂ ಇಲ್ಲ.

ಮನ್ಯುನಾ ದಹ್ಯಮಾನೇನ ಪುರುಷೇಣ ತಪಸ್ವಿನಾ ।
ನಿಕೃತೇನೇಹ ಬಹುಶಃ ಶತ್ರೂನ್ ಪ್ರತಿಜಿಗೀಷತಾ ॥೧೯॥

ಆತ್ಮಾನಂ ವಾ ಪರಿತ್ಯಜ್ಯ ಶತ್ರುಂ ವಾ ವಿನಿಪಾತ್ಯ ಚ ।
ಅತೋಽನ್ಯೇನ ಪ್ರಕಾರೇಣ ಶಾಂತಿರಸ್ಯ ಕುತೋ ಭವೇತ್ ॥೨೦॥

ಶತ್ರುಗಳು ತನಗೆ ಅನೇಕ ಬಾರಿ ಮಾಡಿದ ಅವಮಾನದಿಂದ ಉಂಟಾದ ಕೋಪದಿಂದ ಬೆಂದುಹೋಗುವ ಮತ್ತು ಆ ಕಾರಣಗಳಿಂದ ಶತ್ರುಗಳನ್ನು ಜಯಿಸಲು

ಇಚ್ಛಿಸುವ ಪುರುಷನು ದೇಹವನ್ನಾದರೂ ತ್ಯಜಿಸಬೇಕು ಅಥವಾ ಶತ್ರುವನ್ನಾದರೂ ಸಂಹಾರ ಮಾಡಬೇಕು. ಇದನ್ನು ಬಿಟ್ಟು ಬೇರೆ ರೀತಿಯಿಂದ ಅವನಿಗೆ ಶಾಂತಿಯು ದೊರೆಯಲಾರದು.

ಇಹ ಪ್ರಾಜ್ಞೋ ಹಿ ಪುರುಷಃ ಸ್ವಲ್ಪಮಪ್ರಿಯಮಿಚ್ಛತಿ ।
ಯಸ್ಯಾನಲ್ಪಂ ಪ್ರಿಯಂ ಲೋಕೇ ಧ್ರುವಂ ತಸ್ಯಾಲ್ಪಮಪ್ರಿಯಮ್ ॥೨೧॥

ವಿವೇಕಿಯಾದ ಪುರುಷನು ಈ ಲೋಕದಲ್ಲಿ ಸ್ವಲ್ಪ ಅಪ್ರಿಯವನ್ನು ಬಯಸುತ್ತಾನೆ (ಸಹಿಸುತ್ತಾನೆ). ಯಾವನಿಗೆ ಮಹತ್ತಾದ ಪ್ರಿಯದಲ್ಲಿ ದೃಷ್ಟಿ ಇದೆಯೋ ಅವನು ಅಲ್ಪವಾದ ಅಪ್ರಿಯವನ್ನು ಹೊಂದುವುದು ಲೋಕದಲ್ಲಿ ಕಂಡಿದೆ.

ಪ್ರಿಯಾಭಾವಾಚ್ಚ ಪುರುಷೋ ನೈವ ಪ್ರಾಪ್ನೋತಿ ಶೋಭನಮ್ ।
ಧ್ರುವಂ ಚಾಭಾವಮಭ್ಯೇತಿ ಗತ್ವಾ ಗಂಗೇವ ಸಾಗರಮ್ ॥೨೨॥

ಪ್ರಿಯವಾದುದು ಸ್ವಲ್ಪವೂ ಇಲ್ಲದಿದ್ದರೆ ಮನುಷ್ಯನಿಗೆ ಯಾವ ಒಳ್ಳೆಯದೂ ಆಗುವುದಿಲ್ಲ. ಗಂಗೆಯು ಸಾಗರವನ್ನು ಸೇರಿ ನಾಶಹೊಂದಿದಂತೆ ಅವನು ನಿಶ್ಚಿತವಾಗಿ ನಾಶ ಹೊಂದುವನು.

ಪುತ್ರಃ

ನೇಯಂ ಮತಿಸ್ತ್ವಯಾ ವಾಚ್ಯಾ ಮಾತಃ ಪುತ್ರೇ ವಿಶೇಷತಃ ।
ಕಾರುಣ್ಯಮೇವ ಸಂದೃಶ್ಯಂ ಭೂತ್ವೇಹ ಜಡಮೂಕವತ್ ॥೨೩॥

ಪುತ್ರ– ತಾಯಿಯೇ, ಮಗನಿಗೆ ವಿಶೇಷವಾಗಿ ಇಂತಹ ಬುದ್ಧಿಮಾತುಗಳನ್ನು ಹೇಳಬೇಕಾದ ಅಗತ್ಯವಿಲ್ಲ. ಮಾತನಾಡದ ಜಡಮೂಕರಂತೆ ಕೇವಲ ಕರುಣೆಯನ್ನೇ ತೋರಿಸಬೇಕು.

ಮಾತಾ

ಅತೋ ಮೇ ಭೂಯಸೀ ನಂದಿಃ ಯದ್ಯೇವಮನುಪಶ್ಯಸಿ ।
ಚೋದ್ಯಾಂ ಮಾಂ ಚೋದಯಸ್ಯೇತದ್ ಭೃಶಂ ವೈ ಚೋದಯಾಮಿ ತೇ ॥

ಮಾತಾ– ನೀನು ಹೀಗೆ ನಾನು ಅನುಕೂಲಳಾಗಿದ್ದೇನೆಂದು ತಿಳಿಯುವುದಾದರೆ ನನಗೆ ಬಹಳ ಸಂತೋಷವಾಗುತ್ತದೆ. ನನಗೆ ಹೇಳಬೇಕಾದ ಮಾತುಗಳನ್ನು ಹೇಳುವವನಾಗು. ನಾನು ನಿನಗೆ ಪ್ರಚೋದನೆಯನ್ನು ನೀಡುತ್ತೇನೆ.

ಅಥ ತ್ವಾಂ ಪೂಜಯಿಷ್ಯಾಮಿ ಹತ್ವಾ ವೈ ಸರ್ವಸೈಂಧವಾನ್ ।
ಅಹಂ ಪಶ್ಯಾಮಿ ವಿಜಯಂ ಕೃತ್ಸ್ನಂ ಭಾವಿನಮೇವ ತೇ ॥೨೫॥

ಎಲ್ಲಾ ಸೈಂಧವ ಸೈನಿಕರನ್ನು ಕೊಂದ ನಿನ್ನನ್ನು ನಾನು ಪೂಜಿಸುವೆನು. ನಾನು ಮುಂದೆ ಉಂಟಾಗಲಿರುವ ನಿನ್ನ ಸಂಪೂರ್ಣವಾದ ವಿಜಯವನ್ನು ಕಾಣುತ್ತಿದ್ದೇನೆ.

ಪುತ್ರಃ

ಅಕೋಶಸ್ಯಾಸಹಾಯಸ್ಯ ಕುತೋ ವಾ ವಿಜಯೋ ಮಮ ।
ಇತ್ಯವಸ್ಥಾಂ ವಿದಿತ್ವೈನಾಮಾತ್ಮನಾऽऽತ್ಮನಿ ದಾರುಣಾಮ್ ॥೨೬॥

ರಾಜ್ಯಾದ್ ಭಾವೋ ನಿವೃತ್ತೋ ಮೇ ತ್ರಿದಿವಾದಿವ ದುಷ್ಕೃತೇಃ ॥೨೭॥

ಪುತ್ರ– ಕೋಶವಿಲ್ಲದ, ಸಹಾಯವಿಲ್ಲದ ನನಗೆ ವಿಜಯವು ಎಲ್ಲಿಂದ ಉಂಟಾಗುತ್ತದೆ? ಹೀಗೆ ನನ್ನ ದಾರುಣವಾದ ದುರವಸ್ಥೆಯನ್ನು ತಿಳಿದು ಪಾಪಕರ್ಮವನ್ನು ಮಾಡಿದವನಿಗೆ ಸ್ವರ್ಗದ ಆಸೆಯು ನಿವೃತ್ತವಾದಂತೆ ನನಗೆ ರಾಜ್ಯದ ಆಸೆಯು ನಿವೃತ್ತವಾಗಿದೆ.

ಕೀದೃಶಂ ಭವತೀ ಕಂಚಿದ್ ಉಪಾಯಮನುಪಶ್ಯತಿ ।
ತಂ ಮೇ ಪರಿಣತಪ್ರಜ್ಞೇ ಸಮ್ಯಕ್ ಪ್ರಬ್ರೂಹಿ ಪೃಚ್ಛತೇ ॥೨೮॥

ಕರಿಷ್ಯಾಮೀಹ ತತ್ ಸರ್ವಂ ಯಥಾವದನುಶಾಸನಮ್ ॥೨೯॥

ಪೂಜ್ಯಳಾದ ನೀನು ನನಗೆ ಯಾವ ಉಪಾಯವಿದೆ ಎಂದು ತಿಳಿಯುತ್ತಿದ್ದೀಯೆ? ಎಲೌ ಪಕ್ವವಾದ ಜ್ಞಾನವನ್ನು ಹೊಂದಿದವಳೇ, ಈ ಪ್ರಶ್ನೆಯನ್ನು ಕೇಳುತ್ತಿರುವ ನನಗೆ ಸರಿಯಾಗಿ ಉತ್ತರವನ್ನು ಕೊಡು. ನಿನ್ನ ಆದೇಶವನ್ನು ಪೂರ್ಣವಾಗಿ ಸರಿಯಾಗಿ ಮಾಡುವೆನು.

ಮಾತಾ

ಪುತ್ರ ನಾತ್ಮಾऽವಮಂತವ್ಯಃ ಪೂರ್ವಾಭಿರಸಮೃದ್ಧಿಭಿಃ ।
ಅಭೂತ್ವಾ ಹಿ ಭವಂತ್ಯರ್ಥಾ ಭೂತ್ವಾ ನಶ್ಯಂತಿ ಚಾಪರೇ ॥೩೦॥

ಮಾತಾ– ಪುತ್ರನೇ, ಹಿಂದೆ ಉಂಟಾದ ಅಸಮೃದ್ಧಿಗಳಿಂದ ಯಾರೂ ತನ್ನನ್ನು ಅವಮಾನ ಮಾಡಿಕೊಳ್ಳಬಾರದು. ಇಲ್ಲದೇ ಇದ್ದ ಅರ್ಥಗಳು ಉಂಟಾಗುತ್ತವೆ, ಇರುವ ಅರ್ಥಗಳು ನಾಶವನ್ನು ಹೊಂದುತ್ತವೆ.

ಅಮರ್ಷೇಣೈವ ಚಾಪ್ಯರ್ಥಾ ಆರಬ್ಧವ್ಯಾಸ್ತ್ವ ಬಾಲಿಶೈಃ ।
ಸರ್ವೇಷಾಂ ಕರ್ಮಣಾಂ ತಾತ ಫಲೇ ನಿತ್ಯಮನಿತ್ಯತಾ ॥೩೧॥

ಬಾಲಿಶರಲ್ಲದವರು ಕೋಪದಿಂದಲೇ ಕಾರ್ಯಗಳನ್ನು ಪ್ರಾರಂಭಿಸಬೇಕು. ಪ್ರೀತಿಪಾತ್ರನೇ, ಎಲ್ಲ ಕರ್ಮಗಳೂ ಫಲದ ವಿಷಯದಲ್ಲಿ ಯಾವಾಗಲೂ ಅನಿಶ್ಚಿತವಾಗಿವೆ (ಫಲವು ದೊರೆಯಬಹುದು ಅಥವಾ ದೊರೆಯದಿರಬಹುದು).

ಅನಿತ್ಯಮಿತಿ ಜಾನಂತೋ ಭವಂತಿ ನ ಭವಂತಿ ಚ ।
ಅಥ ಯೇ ನೈವ ಕುರ್ವಂತಿ ನೈವ ಜಾತು ಭವಂತಿ ತೇ ॥೩೨॥

ಫಲವು ಅನಿತ್ಯವಾದುದರಿಂದ ಅದು ದೊರೆಯಬಹುದು ಅಥವಾ ದೊರೆಯದಿರಬಹುದು ಎಂದು ತಿಳಿದು ಯಾರು ಕರ್ಮವನ್ನೇ ಮಾಡುವುದಿಲ್ಲವೋ ಅವರು ಎಂದೂ ಅಭ್ಯುದಯವನ್ನು ಹೊಂದುವುದಿಲ್ಲ.

ಏಕಗುಣ್ಯಮನೀಹಾಯಾಮಭಾವಃ ಕರ್ಮಣಾಂ ಫಲಮ್ ।
ಅಥ ದ್ವೈಗುಣ್ಯಮೀಹಾಯಾಂ ಫಲಂ ಭವತಿ ವಾ ನ ವಾ ॥೩೩॥

ಯಾವ ಕ್ರಿಯೆಯನ್ನೂ ಮಾಡದಿದ್ದರೆ ಕರ್ಮದ ಅಭಾವ ಎಂಬುದು ಒಂದೇ ಫಲ. ಕ್ರಿಯಾಶೀಲರಾದವರಿಗೆ ಕಾರ್ಯಸಿದ್ಧಿ ಅಥವಾ ಅಸಿದ್ಧಿ ಎಂಬ ಎರಡು ಫಲವಿರುತ್ತದೆ.

ಯಸ್ಯ ಪ್ರಾಗೇವ ವಿದಿತಾ ಸರ್ವಾರ್ಥಾನಾಮನಿತ್ಯತಾ ।
ವದೇದವೃದ್ಧ್ಯಸಮೃದ್ಧೀ ನ ಪ್ರತಿಕೂಲೇ ನೃಪಾತ್ಮಜ ॥೩೪॥

ಎಲೈ ರಾಜಕುಮಾರನೇ, ಯಾವನಿಗೆ ಎಲ್ಲವೂ ಅನಿತ್ಯವೆಂದು ಮೊದಲೇ ತಿಳಿದಿದೆಯೋ ಅವನಿಗೆ ಅವನ ಪ್ರಯತ್ನಕ್ಕೆ ಪ್ರತಿಕೂಲವಾಗಿ ಅವೃದ್ಧಿಯನ್ನಾಗಲೀ ಅಥವಾ ಅಸಮೃದ್ಧಿಯನ್ನಾಗಲೀ ಹೇಳಬಾರದು. (ಅವೃದ್ಧಿ ಎಂದರೆ ಕಾರ್ಯದಿಂದ ಪ್ರಯೋಜನವೇ ಇಲ್ಲ. ಅಸಮೃದ್ಧಿ ಎಂದರೆ ಕಾರ್ಯದಿಂದ ಅಲ್ಪ ಪ್ರಯೋಜನವಿದೆ ಎಂದು ಅಭಿಪ್ರಾಯ).

ಉತ್ಥಾತವ್ಯಂ ಜಾಗೃತವ್ಯಂ ಯೋಕ್ತವ್ಯಂ ಭೂತಿಕರ್ಮಸು ।
ಭವಿಷ್ಯತೀತ್ಯೇವ ಮನಃ ಕೃತ್ವಾ ಸತತಮವ್ಯಥಃ ॥೩೫॥

ಉದ್ಯಮಶೀಲನಾಗಬೇಕು, ಎಚ್ಚರಿಕೆಯಿಂದಿರಬೇಕು, ಒಳ್ಳೆಯ ಫಲವನ್ನು ಕೊಡುವ ಕರ್ಮಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಫಲವು ಉಂಟಾಗುತ್ತದೆ ಎಂದೇ ತಿಳಿದು ವ್ಯಥೆಯನ್ನು ಪಡದೆ ಸತತವಾಗಿ ಪ್ರಯತ್ನವನ್ನು ಮಾಡಬೇಕು.

ಮಂಗಲಾನಿ ಪುರಸ್ಕೃತ್ಯ ಬ್ರಾಹ್ಮಣಾಂಶ್ಚೇತರೈಃ ಸಹ ।
ಪ್ರಾಜ್ಞಸ್ಯ ನೃಪತೇರಾಶು ವೃದ್ಧಿರ್ಭವತಿ ಪುತ್ರಕ ॥೩೬॥

ಅಭಿವರ್ತತಿ ಲಕ್ಷ್ಮೀಸ್ತಂ ಪ್ರಾಚೀಮಿವ ದಿವಾಕರಃ ॥೩೭॥

ಮಂಗಳವಸ್ತುಗಳು ಮತ್ತು ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು, ಇತರರ ಸಹಾಯದಿಂದ ಪ್ರಯತ್ನವನ್ನು ಪಡುವ ಪ್ರಾಜ್ಞನಾದ ರಾಜನಿಗೆ ವೃದ್ಧಿಯುಂಟಾಗುತ್ತದೆ. ಎಲೈ ಪುತ್ರನೇ, ಸೂರ್ಯನು ಪೂರ್ವದಿಕ್ಕಿಗೆ ಬಂದಂತೆ ಲಕ್ಷ್ಮಿಯು ಅವನ ಬಳಿಗೆ ಬರುತ್ತಾಳೆ.

ನಿದರ್ಶನಾನ್ಯುಪಾಯಾಂಶ್ಚ ಬಹೂನ್ಯುದ್ಧರ್ಷಣಾನಿ ಚ ।
ಅನುದರ್ಶಿತರೂಪೋಽಸಿ ಪಶ್ಯಾಮಿ ಕುಲಪೌರುಷಮ್ ॥೩೮॥

ಪುರುಷಾರ್ಥಮಭಿಪ್ರೇತಂ ಮಮಾಹರ್ತುಮಿಹಾರ್ಹಸಿ ॥೩೯॥

ಅನೇಕ ದೃಷ್ಟಾಂತಗಳನ್ನೂ, ಉಪಾಯಗಳನ್ನೂ, ಉತ್ತೇಜನದ ಮಾತುಗಳನ್ನೂ ನಾನು ನಿನಗೆ ಆಡಿ ತೋರಿಸಿದ್ದೇನೆ. ನಿನ್ನಲ್ಲಿ ಕುಲಪೌರುಷವನ್ನು ಕಾಣುತ್ತೇನೆ. ನನಗೆ ಅಭೀಷ್ಟವಾದ ಪುರುಷಾರ್ಥವನ್ನು ನೀನು ಸಂಪಾದಿಸಿಕೊಡುವವನಾಗು.

ಮಾತಾ

ಪುತ್ರ ನಾತ್ಮಾऽವಮಂತವ್ಯಃ ಪೂರ್ವಾಭಿರಸಮೃದ್ಧಿಭಿಃ ।
ಅಭೂತ್ವಾ ಹಿ ಭವಂತ್ಯರ್ಥಾ ಭೂತ್ವಾ ನಶ್ಯಂತಿ ಚಾಪರೇ ॥೩೦॥

ಮಾತಾ– ಪುತ್ರನೇ, ಹಿಂದೆ ಉಂಟಾದ ಅಸಮೃದ್ಧಿಗಳಿಂದ ಯಾರೂ ತನ್ನನ್ನು ಅವಮಾನ ಮಾಡಿಕೊಳ್ಳಬಾರದು. ಇಲ್ಲದೇ ಇದ್ದ ಅರ್ಥಗಳು ಉಂಟಾಗುತ್ತವೆ, ಇರುವ ಅರ್ಥಗಳು ನಾಶವನ್ನು ಹೊಂದುತ್ತವೆ.

ಅಮರ್ಷೇಣೈವ ಚಾಪ್ಯರ್ಥಾ ಆರಬ್ಧವ್ಯಾಸ್ತ್ವಬಾಲಿಶೈಃ ।
ಸರ್ವೇಷಾಂ ಕರ್ಮಣಾಂ ತಾತ ಫಲೇ ನಿತ್ಯಮನಿತ್ಯತಾ ॥೩೧॥

ಬಾಲಿಶರಲ್ಲದವರು ಕೋಪದಿಂದಲೇ ಕಾರ್ಯಗಳನ್ನು ಪ್ರಾರಂಭಿಸಬೇಕು. ಪ್ರೀತಿಪಾತ್ರನೇ, ಎಲ್ಲ ಕರ್ಮಗಳೂ ಫಲದ ವಿಷಯದಲ್ಲಿ ಯಾವಾಗಲೂ ಅನಿಶ್ಚಿತವಾಗಿವೆ (ಫಲವು ದೊರೆಯಬಹುದು ಅಥವಾ ದೊರೆಯದಿರಬಹುದು).

ಅನಿತ್ಯಮಿತಿ ಜಾನಂತೋ ಭವಂತಿ ನ ಭವಂತಿ ಚ ।
ಅಥ ಯೇ ನೈವ ಕುರ್ವಂತಿ ನೈವ ಜಾತು ಭವಂತಿ ತೇ ॥೩೨॥

ಫಲವು ಅನಿತ್ಯವಾದುದರಿಂದ ಅದು ದೊರೆಯಬಹುದು ಅಥವಾ ದೊರೆಯದಿರಬಹುದು ಎಂದು ತಿಳಿದು ಯಾರು ಕರ್ಮವನ್ನೇ ಮಾಡುವುದಿಲ್ಲವೋ ಅವರು ಎಂದೂ ಅಭ್ಯುದಯವನ್ನು ಹೊಂದುವುದಿಲ್ಲ.

ಏಕಗುಣ್ಯಮನೀಹಾಯಾಮಭಾವಃ ಕರ್ಮಣಾಂ ಫಲಮ್ ।
ಅಥ ದ್ವೈಗುಣ್ಯಮೀಹಾಯಾಂ ಫಲಂ ಭವತಿ ವಾ ನ ವಾ ॥೩೩॥

ಯಾವ ಕ್ರಿಯೆಯನ್ನೂ ಮಾಡದಿದ್ದರೆ ಕರ್ಮದ ಅಭಾವ ಎಂಬುದು ಒಂದೇ ಫಲ. ಕ್ರಿಯಾಶೀಲರಾದವರಿಗೆ ಕಾರ್ಯಸಿದ್ಧಿ ಅಥವಾ ಅಸಿದ್ಧಿ ಎಂಬ ಎರಡು ಫಲವಿರುತ್ತದೆ.

ಯಸ್ಯ ಪ್ರಾಗೇವ ವಿದಿತಾ ಸರ್ವಾರ್ಥಾನಾಮನಿತ್ಯತಾ ।
ವದೇದವೃದ್ಧ್ಯಸಮೃದ್ಧೀ ನ ಪ್ರತಿಕೂಲೇ ನೃಪಾತ್ಮಜ ॥೩೪॥

ಎಲೈ ರಾಜಕುಮಾರನೇ, ಯಾವನಿಗೆ ಎಲ್ಲವೂ ಅನಿತ್ಯವೆಂದು ಮೊದಲೇ ತಿಳಿದಿದೆಯೋ ಅವನಿಗೆ ಅವನ ಪ್ರಯತ್ನಕ್ಕೆ ಪ್ರತಿಕೂಲವಾಗಿ ಅವೃದ್ಧಿಯನ್ನಾಗಲೀ ಅಥವಾ ಅಸಮೃದ್ಧಿಯನ್ನಾಗಲೀ ಹೇಳಬಾರದು. (ಅವೃದ್ಧಿ ಎಂದರೆ ಕಾರ್ಯದಿಂದ ಪ್ರಯೋಜನವೇ ಇಲ್ಲ. ಅಸಮೃದ್ಧಿ ಎಂದರೆ ಕಾರ್ಯದಿಂದ ಅಲ್ಪ ಪ್ರಯೋಜನವಿದೆ ಎಂದು ಅಭಿಪ್ರಾಯ).

ಉತ್ಥಾತವ್ಯಂ ಜಾಗೃತವ್ಯಂ ಯೋಕ್ತವ್ಯಂ ಭೂತಿಕರ್ಮಸು ।
ಭವಿಷ್ಯತೀತ್ಯೇವ ಮನಃ ಕೃತ್ವಾ ಸತತಮವ್ಯಥಃ ॥೩೫॥

ಉದ್ಯಮಶೀಲನಾಗಬೇಕು, ಎಚ್ಚರಿಕೆಯಿಂದಿರಬೇಕು, ಒಳ್ಳೆಯ ಫಲವನ್ನು ಕೊಡುವ ಕರ್ಮಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಫಲವು ಉಂಟಾಗುತ್ತದೆ ಎಂದೇ ತಿಳಿದು ವ್ಯಥೆಯನ್ನು ಪಡದೆ ಸತತವಾಗಿ ಪ್ರಯತ್ನವನ್ನು ಮಾಡಬೇಕು.

ಮಂಗಲಾನಿ ಪುರಸ್ಕೃತ್ಯ ಬ್ರಾಹ್ಮಣಾಂಶ್ಚೇತರೈಃ ಸಹ ।
ಪ್ರಾಜ್ಞಸ್ಯ ನೃಪತೇರಾಶು ವೃದ್ಧಿರ್ಭವತಿ ಪುತ್ರಕ ॥೩೬॥

ಅಭಿವರ್ತತಿ ಲಕ್ಷ್ಮೀಸ್ತಂ ಪ್ರಾಚೀಮಿವ ದಿವಾಕರಃ ॥೩೭॥

ಮಂಗಳವಸ್ತುಗಳು ಮತ್ತು ಬ್ರಾಹ್ಮಣರನ್ನು ಮುಂದೆ ಮಾಡಿಕೊಂಡು, ಇತರರ ಸಹಾಯದಿಂದ ಪ್ರಯತ್ನವನ್ನು ಪಡುವ ಪ್ರಾಜ್ಞನಾದ ರಾಜನಿಗೆ ವೃದ್ಧಿಯುಂಟಾಗುತ್ತದೆ. ಎಲೈ ಪುತ್ರನೇ, ಸೂರ್ಯನು ಪೂರ್ವದಿಕ್ಕಿಗೆ ಬಂದಂತೆ ಲಕ್ಷ್ಮಿಯು ಅವನ ಬಳಿಗೆ ಬರುತ್ತಾಳೆ.

ನಿದರ್ಶನಾನ್ಯುಪಾಯಾಂಶ್ಚ ಬಹೂನ್ಯುದ್ಧರ್ಷಣಾನಿ ಚ ।
ಅನುದರ್ಶಿತರೂಪೋಽಸಿ ಪಶ್ಯಾಮಿ ಕುಲಪೌರುಷಮ್ ॥೩೮॥

ಪುರುಷಾರ್ಥಮಭಿಪ್ರೇತಂ ಮಮಾಹರ್ತುಮಿಹಾರ್ಹಸಿ ॥೩೯॥

ಅನೇಕ ದೃಷ್ಟಾಂತಗಳನ್ನೂ, ಉಪಾಯಗಳನ್ನೂ, ಉತ್ತೇಜನದ ಮಾತುಗಳನ್ನೂ ನಾನು ನಿನಗೆ ಆಡಿ ತೋರಿಸಿದ್ದೇನೆ. ನಿನ್ನಲ್ಲಿ ಕುಲಪೌರುಷವನ್ನು ಕಾಣುತ್ತೇನೆ. ನನಗೆ ಅಭೀಷ್ಟವಾದ ಪುರುಷಾರ್ಥವನ್ನು ನೀನು ಸಂಪಾದಿಸಿಕೊಡುವವನಾಗು.

ಕ್ರುದ್ಧಾನ್ ಲುಬ್ಧಾನ್ ಪರಿಕ್ಷೀಣಾನವಲಿಪ್ತಾನ್ ವಿಮಾನಿತಾನ್ ।
ಸ್ಪರ್ಧಿನಶ್ಚೈವ ಯೇ ಕೇಚಿತ್ ತಾನ್ ಯುಕ್ತ ಉಪಧಾರಯ ॥೪೦॥

(ಶತ್ರುಗಳ ಸಮೂಹದಲ್ಲಿ) ಯಾರು ಕ್ರುದ್ಧರು, ಲೋಭಿಗಳು, ಸಂಪತ್ತನ್ನು ಕಳೆದುಕೊಂಡಿರುವವರು, ಅಹಂಕಾರಿಗಳು, ಅವಮಾನಕ್ಕೆ ಒಳಗಾದವರು, ಸ್ಪರ್ಧಾಳುಗಳು ಎಂಬುದನ್ನು ಸರಿಯಾಗಿ ತಿಳಿದುಕೊ.

ಏತೇನ ತ್ವಂ ಪ್ರಕಾರೇಣ ಮಹತೋ ಭೇತ್ಸ್ಯಸೇ ಗಣಾನ್ ।
ಮಹಾವೇಗ ಇವೋದ್ಧೂತೋ ಮಾತರಿಶ್ವಾ ಬಲಾಹಕಾನ್ ॥೪೧॥

ಈ ರೀತಿಯಾಗಿ ನೀನು, ಮಹಾವೇಗದಿಂದ ಬಿರುಗಾಳಿಯು ಮೋಡಗಳನ್ನು ಭೇದಿಸುವಂತೆ ಶತ್ರುಗಳ ಸಹಾಯಕರಾದ ದೊಡ್ಡ ಸಮೂಹಗಳನ್ನು ಭೇದಿಸುವಿ.

ಯೇಷಾಮಗ್ರಪ್ರದಾಯೀ ಸ್ಯಾಃ ಕಾಲ್ಯೋತ್ಥಾಯೀ ಪ್ರಿಯಂವದಃ ।
ತೇ ತ್ವಾ ಪ್ರಿಯಂ ಕರಿಷ್ಯಂತಿ ಪುರೋ ಧಾಸ್ಯಂತಿ ಚ ಧ್ರುವಮ್ ॥೪೨॥

ಯಾರಿಗೆ ನೀನು ಶ್ರೇಷ್ಠವಾದ ವಸ್ತುಗಳನ್ನು ಕೊಡುವೆಯೋ ಮತ್ತು ಪ್ರಿಯವಾಗಿ ಮಾತನಾಡುವಿಯೋ ಮತ್ತು ಯಾರಿಗಿಂತ ಮೊದಲು ಏಳುವಿಯೋ, ಅಂತಹವರು ನಿನ್ನನ್ನು ಮುಂದೆ ಮಾಡಿಕೊಂಡು ಖಂಡಿತವಾಗಿ ನಿನಗೆ ಪ್ರಿಯವನ್ನು ಉಂಟುಮಾಡುವರು.

ಯದೈವ ಶತ್ರುರ್ಜಾನೀಯಾತ್ ಸಪತ್ನಂ ತ್ಯಕ್ತಜೀವಿತಮ್ ।
ತದೈವಾಸ್ಮಾದುದ್ವಿಜತೇ ಸರ್ಪಾದ್ ವೇಶ್ಮಗತಾದಿವ ॥೪೩॥

ಯಾವಾಗ ಶತ್ರುವು ತನ್ನ ಶತ್ರುವು ಜೀವದ ಹಂಗನ್ನು ತೊರೆದಿದ್ದಾನೆ ಎಂದು ತಿಳಿಯುತ್ತಾನೆಯೋ ಆಗಲೇ ಅವನು ಮನೆಯೊಳಗೆ ಬಂದ ಸರ್ಪಕ್ಕೆ ಹೆದರುವಂತೆ ಅವನಿಗೆ ಹೆದರುತ್ತಾನೆ.

ತಂ ವಿದಿತ್ವಾ ಪರಾಕ್ರಾಂತಂ ವಶೇ ನ ಕುರುತೇ ಯದಿ ।
ನಿರ್ವಾದೈರ್ನಿರ್ವದೇದೇನಮ್ ಅಂತತಸ್ತದ್ ಭವಿಷ್ಯತಿ ॥೪೪॥

ಪರಾಕ್ರಮವನ್ನು ಆರಂಭಿಸುವ ತನ್ನ ಶತ್ರುವನ್ನು ತಿಳಿದು ಅವನನ್ನು ವಶಪಡಿಸಿಕೊಳ್ಳದಿದ್ದರೆ ಅವನು ನಿಂದೆಯ ಮಾತುಗಳಿಂದ ನಿಂದಿಸುತ್ತಾನೆ. ಕೊನೆಗೆ ನಿಂದೆಯ ಮಾತುಗಳೇ ಫಲವಾಗುತ್ತವೆ.

ನಿರ್ವಾದಾದಾಸ್ಪದಂ ಲಬ್ಧ್ವಾ ಧನವೃದ್ಧಿರ್ಭವಿಷ್ಯತಿ ।
ಧನವಂತಂ ಹಿ ಮಿತ್ರಾಣಿ ಭಜಂತೇ ಚಾಶ್ರಯಂತಿ ಚ ॥೪೫॥

ನಿಂದೆಯ ಮಾತುಗಳನ್ನು ಕೇಳಿ ಶತ್ರುಗಳ ಮೇಲೆ ಎರಗಲು ಒಂದು ಅವಕಾಶವನ್ನು ಪಡೆದು ಶತ್ರುಗಳನ್ನು ಸೋಲಿಸಿದರೆ ಸಂಪತ್ತಿನ ವೃದ್ಧಿ ಉಂಟಾಗುವುದು. ಸಂಪತ್ತಿನಿಂದ ಕೂಡಿದವನನ್ನು ಮಿತ್ರರು ಸೇವಿಸುತ್ತಾರೆ ಮತ್ತು ಆಶ್ರಯಿಸುತ್ತಾರೆ.

ಸ್ಖಲಿತಾರ್ಥಂ ಪುನಸ್ತಾತ ಸಂತ್ಯಜಂತಿ ಚ ಬಾಂಧವಾಃ ।
ನ ಹ್ಯಸ್ಮಿನ್ನಾಶ್ರಯಂತೇ ಚ ಜುಗುಪ್ಸಂತೇ ನ ತಾದೃಶಮ್ ॥೪೬॥

ಪ್ರೀತಿಪಾತ್ರನೇ, ಸಂಪತ್ತನ್ನು ಕಳೆದುಕೊಂಡವನನ್ನು ಬಾಂಧವರು ತೊರೆಯುತ್ತಾರೆ. ಅವನನ್ನು ಯಾರೂ ಆಶ್ರಯಿಸುವುದಿಲ್ಲ ಮತ್ತು ಅವನ ರಕ್ಷಣೆಗಾಗಿ ಬರುವುದಿಲ್ಲ.

ಶತ್ರುಂ ಕೃತ್ವಾ ಯಃ ಸಹಾಯಂ ವಿಶ್ವಾಸಮುಪಗಚ್ಛತಿ ।
ಸ ನ ಸಂಭಾವ್ಯಮೇವೈತದ್ ಯದ್ ರಾಜ್ಯಂ ಪ್ರಾಪ್ನುಯಾನ್ಮಹತ್ ॥೪೭॥

ಯಾವನು ಶತ್ರುವನ್ನು ತನ್ನ ಸಹಾಯವನ್ನಾಗಿ ಮಾಡಿಕೊಂಡು ಅವನಲ್ಲಿ ವಿಶ್ವಾಸ ಮಾಡುತ್ತಾನೆಯೋ ಅವನು ದೊಡ್ಡ ರಾಜ್ಯವನ್ನು ಸಂಪಾದಿಸುತ್ತಾನೆ ಎಂಬುದು ಅಸಂಭಾವಿತವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಸ್ತ್ರಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಪಂಚಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರಮೂವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೈದನೆಯ ಅಧ್ಯಾಯ

ವಿದುಲೋಪಾಖ್ಯಾನದ ಉಪಸಂಹಾರ.

ಮಾತಾ

ನೈವ ರಾಜ್ಞಾ ದರಃ ಕಾರ್ಯೋ ಜಾತು ಕಸ್ಯಾಂಚಿದಾಪದಿ ।
ಅಥ ಚೇದಪಿ ದೀರ್ಣಃ ಸ್ಯಾನ್ನೈವ ವರ್ತೇತ ದೀರ್ಣವತ್ ॥೧॥

ಮಾತಾ– ರಾಜನು ಯಾವ ಆಪತ್ತಿನಲ್ಲಿಯೂ ಹೆದರಬಾರದು. ಹೆದರಿಕೆಯನ್ನು ಹೊಂದಿದರೂ ಭಯವನ್ನು ಹೊಂದಿದವನಂತೆ ಇರಬಾರದು.

ದೀರ್ಣಂ ಹಿ ದೃಷ್ಟ್ವಾ ರಾಜಾನಂ ಸರ್ವಮೇವಾನುದೀರ್ಯತೇ ।
ರಾಷ್ಟ್ರಂ ಬಲಮಮಾತ್ಯಾಶ್ಚ ಪೃಥಕ್ ಕುರ್ವಂತಿ ತೇ ಮತಿಮ್ ॥೨॥

ರಾಜನು ಬಹಳ ಭಯವನ್ನು ಹೊಂದಿರುವುದನ್ನು ನೋಡಿದರೆ ಎಲ್ಲವೂ ಭಯವನ್ನು ಹೊಂದುತ್ತದೆ (ರಾಜನು ಸೀಳಾಗಿರುವುದನ್ನು ನೋಡಿದರೆ ಎಲ್ಲವೂ ಸೀಳಾಗಿ ಹೋಗುವುದು). ರಾಷ್ಟ್ರವೂ, ಸೈನ್ಯವೂ ಅಮಾತ್ಯರೂ ಬೇರೆ ರೀತಿಯ ಬುದ್ಧಿಯನ್ನು ಮಾಡುವರು.

ಶತ್ರೂನೇಕೇ ಪ್ರಪದ್ಯಂತೇ ಪ್ರಜಹತ್ಯಪರೇ ಪುನಃ ।
ಅನ್ಯೇ ತು ಪ್ರಜಿಹೀರ್ಷಂತಿ ಯೇ ಪುರಸ್ತಾದ್ ವಿಮಾನಿತಾಃ ॥೩॥

ಯ ಏವಾತ್ಯಂತಸುಹೃದಃ ತ ಏನಂ ಪರ್ಯುಪಾಸತೇ ॥೪॥

ಕೆಲವರು ಶತ್ರುಗಳ ಜೊತೆಯಲ್ಲಿ ಸೇರುವರು. ಇನ್ನು ಕೆಲವರು ರಾಜನನ್ನು ತ್ಯಜಿಸುವರು. ಇನ್ನು ರಾಜನಿಂದ ಮೊದಲು ಅವಮಾನಕ್ಕೆ ಒಳಗಾದ ಕೆಲವರು ರಾಜನ ಸಂಪತ್ತನ್ನು ದೋಚಲು ಬಯಸುವರು. ರಾಜನಿಗೆ ಯಾರು ಅತ್ಯಂತ ಹಿತೈಷಿಗಳೋ ಅವರು ಮಾತ್ರ ಅವನ ಜೊತೆಯಲ್ಲಿ ಇರುವರು.

ಅಶಕ್ತಾ ಯೇ ಸ್ವಸ್ತಿಕಾಮಾ ಬದ್ಧವತ್ಸಾ ಜಲಾ ಇವ ।
ಶೋಚಂತಮನುಶೋಚಂತಿ ಪ್ರಮೀತಾನಿವ ಬಾಂಧವಾನ್ ॥೫॥

ರಾಜನ ಹಿತವನ್ನು ಬಯಸಿದರೂ ಕರುಗಳನ್ನು ಕಟ್ಟಿದ ಗೋವುಗಳಂತೆ ಅಶಕ್ತರಾದವರು, ಬಂಧುವು ಮೃತರಾದಾಗ ಶೋಕಪಡುವವರನ್ನು ನೋಡಿ ಇನ್ನೊಬ್ಬರು ಶೋಕಪಡುವಂತೆ ಶೋಕಪಡುತ್ತಾರೆ.

ಅಪಿ ತೇ ಪೂಜಿತಾಃ ಪೂರ್ವಮಪಿ ತೇ ಸುಹೃದೋ ಮತಾಃ ।
ಯೇ ರಾಷ್ಟ್ರಮಭಿಪದ್ಯಂತೇ ರಾಜ್ಞಿ ವ್ಯಸನಮೀಯುಷಿ ॥೬॥

ಮಾ ದೀದರಸ್ತ್ವಂ ಸುಹೃದೋ ಮಾ ತ್ವಾಂ ದೀರ್ಣಂ ಪ್ರಹಾಸಿಷುಃ ॥೭॥

ಯಾರು ರಾಜನು ಸಂಕಟಕ್ಕೆ ಒಳಗಾದರೂ ರಾಷ್ಟ್ರವನ್ನು ತ್ಯಜಿಸುವುದಿಲ್ಲವೋ ಅಂತಹ ಹಿತೈಷಿಗಳನ್ನು ನೀನು ಹಿಂದೆ ಪೂಜಿಸಿದ್ದೀಯಾ? ನೀನು ಹಿತೈಷಿಗಳಿಗೆ ಭಯವನ್ನು ಉಂಟುಮಾಡಬೇಡ. ಅವರು ಸಂಕಟಕ್ಕೆ ಸಿಲುಕಿದ ನಿನ್ನನ್ನು ತ್ಯಜಿಸದಿರಲಿ.

ಪ್ರಭಾವಂ ಪೌರುಷಂ ಬುದ್ಧಿಂ ಜಿಜ್ಞಾಸಂತ್ಯಾ ಮಯಾ ತವ ।
ವಿದಧತ್ಯಾ ಸಮಾಶ್ವಾಸಮುಕ್ತಂ ತೇಜೋವಿವೃದ್ಧಯೇ ॥೮॥

ನಿನ್ನ ಪ್ರಭಾವವನ್ನೂ, ಸಾಮರ್ಥ್ಯವನ್ನೂ, ಬುದ್ಧಿಯನ್ನೂ ಕೇಳಲು ಅಪೇಕ್ಷಿಸಿದ ನಾನು ನಿನ್ನ ತೇಜೋಭಿವೃದ್ಧಿಗಾಗಿ ಸಮಾಶ್ವಾಸನೆಯ ಮಾತುಗಳನ್ನು ಆಡಿದೆನು.

ಯದ್ಯೇತತ್ ಸಂವಿಜಾನಾಸಿ ಯದಿ ಸಮ್ಯಗ್ ಬ್ರವೀಮ್ಯಹಮ್ ।
ಕೃತ್ವಾ ಸೌಮ್ಯಮಿವಾತ್ಮಾನಂ ಜಯಾಯೋತ್ತಿಷ್ಠ ಸೃಂಜಯ ॥೯॥

ನಾನು ಸರಿಯಾಗಿ ಮಾತನಾಡುತ್ತಿದ್ದೇನೆಂದು ನೀನು ತಿಳಿಯುವುದಾದರೆ ಎಲೈ ಸೃಂಜಯನೇ, ನೀನು ನಿನ್ನನ್ನು ಸೌಮ್ಯವಾಗಿ ತೋರಿಸಿಕೊಳ್ಳುತ್ತಾ, ಜಯದ ಸಲುವಾಗಿ ಎದ್ದೇಳು.

ಅಸ್ತಿ ನಃ ಕೋಶನಿಚಯೋ ಮಹಾನವಿದಿತಸ್ತವ ।
ತದಹಂ ವೇದ ನಾನ್ಯಸ್ತಮುಪಸಂಪಾದಯಾಮಿ ತೇ ॥೧೦॥

ನೀನು ತಿಳಿಯದಿರುವ ದೊಡ್ಡ ಕೋಶಸಂಗ್ರಹವು ನಮಗಿದೆ. ನಾನು ಅದನ್ನು ತಿಳಿದಿದ್ದೇನೆ. ಬೇರೆ ಯಾರೂ ತಿಳಿದಿಲ್ಲ. ಅದನ್ನು ನಿನಗೆ ಒದಗಿಸುತ್ತೇನೆ.

ಸಂತಿ ನೈಕಶತಾ ಭೂಯಃ ಸುಹೃದಸ್ತವ ಸೃಂಜಯ ।
ಸುಖದುಃಖಸಹಾ ವೀರ ಪ್ರಿಯಾರ್ಹಾ ಹ್ಯನಿವರ್ತಿನಃ ॥೧೧॥

ಎಲೈ ಸೃಂಜಯನೇ, ನಿನಗೆ ಇನ್ನೂ ನೂರಾರು ಮಂದಿ ಹಿತೈಷಿಗಳು ಇದ್ದಾರೆ. ಎಲೈ ವೀರನೇ, ಅವರು ಸುಖ-ದುಃಖಗಳನ್ನು ಸಹಿಸುವವರು, ಪ್ರಿಯವಾದ ವಸ್ತುಗಳನ್ನು ಭೋಗಿಸಲು ಅರ್ಹರಾದವರು ಮತ್ತು ಯುದ್ಧದಿಂದ ಹಿಮ್ಮೆಟ್ಟದವರು.

ತಾದೃಶಾ ಹಿ ಸಹಾಯಾಶ್ಚೇತ್ ಪುರುಷಸ್ಯ ಬುಭೂಷತಃ ।
ಇಷ್ಟಂ ನ ದುಷ್ಕರಂ ಕಿಂಚಿತ್ ಸಚಿವೈಃ ಶತ್ರುಕರ್ಶನ ॥೧೨॥

ಎಲೈ ಶತ್ರುಕರ್ಶನನೇ, ಅಭಿವೃದ್ಧಿಯನ್ನು ಹೊಂದಲು ಬಯಸುವ ರಾಜನಿಗೆ ಅಂತಹ ಮಂತ್ರಿಗಳು ಸಹಾಯಕರಾಗಿದ್ದರೆ ಯಾವ ಅಭೀಷ್ಟವನ್ನೂ ಸಂಪಾದಿಸುವುದು ಅಸಾಧ್ಯವಲ್ಲ.

ಪುತ್ರಃ

ಕಸ್ಯ ತ್ವೀದೃಶಕಂ ವಾಕ್ಯಂ ಶ್ರುತ್ವಾಽಪಿ ಸ್ವಲ್ಪಚೇತಸಃ ।
ತಮೋ ನ ವ್ಯಪಹನ್ಯೇತ ವಿಚಿತ್ರಾರ್ಥಪದಾಕ್ಷರಮ್ ॥೧೩॥

ಪುತ್ರ– ಯಾವ ಅಲ್ಪಪರಾಕ್ರಮವನ್ನು ಹೊಂದಿದ ಮನುಷ್ಯನಿಗೆ, ಇಂತಹ ವಿಚಿತ್ರ ಪದಾಕ್ಷರಗಳನ್ನು ಹೊಂದಿರುವ ಮಾತುಗಳನ್ನು ಕೇಳಿದರೆ ಅಜ್ಞಾನವು ನಾಶವಾಗಲಾರದು?

ಉದಕೇ ಧೂರಿಯಂ ಧಾರ್ಯಾ ಸರ್ತವ್ಯಂ ಪ್ರವಣೇ ಮಯಾ ।
ಯಸ್ಯ ಮೇ ಭವತೀ ನೇತ್ರೀ ಭವಿಷ್ಯದ್ಭೂತದರ್ಶನೀ ॥೧೪॥

ಯಾವ ನನಗೆ ನೀನು ಅದ್ಭುತವಾದ ಜ್ಞಾನವನ್ನು ಉಂಟುಮಾಡುತ್ತಿರುವೆಯೋ ಅಂತಹ ನಾನು ನೀರಿನಲ್ಲಿ ಭಾರವನ್ನು ಎತ್ತಿದಂತೆ, ಹಳ್ಳದಲ್ಲಿ ನಡೆದಂತೆ ಸುಲಭವಾಗಿ ನಡೆಯುವೆನು (ನಿನ್ನ ಬುದ್ಧಿಯನ್ನು ಅನುಸರಿಸಿ ಅಸಾಧ್ಯವಾದುದನ್ನೂ ಸಾಧಿಸುವೆನು).

ಅಹಂ ಹಿ ವಚನಂ ತ್ವತ್ತಃ ಶುಶ್ರೂಷುರಪರಾಪರಮ್ ।
ಕಿಂಚಿತ್ ಕಿಂಚಿತ್ ಪ್ರತಿವದನ್ ತೂಷ್ಣೀಮಾಸಂ ಮುಹುರ್ಮುಹುಃ ॥

ಅತೃಪ್ಯನ್ನಮೃತಸ್ಯೇವ ಕೃಚ್ಛ್ರಾಲ್ಲಬ್ಧಸ್ಯ ಬಾಂಧವಾತ್ ।
ಉದ್ಯಚ್ಛಾಮ್ಯೇಷ ಶತ್ರೂಣಾಂ ನಿಯಮಾರ್ಥಂ ಜಯಾಯ ಚ ॥೧೬॥

ನಾನು ಕಷ್ಟದಿಂದ ಪಡೆದ ಅಮೃತದಂತೆ ಇರುವ ನಿನ್ನ ಮಾತುಗಳಿಂದ ತೃಪ್ತಿಯನ್ನು ಪಡೆಯದೆ ಶ್ರೇಷ್ಠವಾದ ಬೇರೆ ಬೇರೆ ಮಾತುಗಳನ್ನು ಕೇಳಲು ಬಯಸಿ ಮಧ್ಯೆ ಮಧ್ಯೆ

ಸ್ವಲ್ಪಮಾತ್ರ ಮಾತನಾಡುತ್ತಾ ಸುಮ್ಮನಿದ್ದೆನು. ಈಗ ಶತ್ರುಗಳನ್ನು ನಿಯಂತ್ರಿಸಿ ಜಯವನ್ನು ಸಂಪಾದಿಸಲು ಪ್ರಯತ್ನವನ್ನು ಮಾಡುತ್ತೇನೆ.

ಕುಂತೀ

ಇತಿ ಶ್ರುತ್ವಾ ವಚೋ ಮಾತುಃ ಸೃಂಜಯಃ ಶತ್ರುಭಿಃ ಸಹ ।
ಕೃತವಾನ್ ಸಂಯುಗಂ ಕೃಷ್ಣ ಜಯಂ ಚ ಪ್ರಾಪ್ತವಾನ್ ಧ್ರುವಮ್ ॥

ಕುಂತೀ– ಎಲೈ ಕೃಷ್ಣನೇ, ಸೃಂಜಯನು ಹೀಗೆ ತಾಯಿಯ ಮಾತನ್ನು ಕೇಳಿ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡಿ, ನಿಶ್ಚಿತವಾಗಿ ಜಯವನ್ನು ಸಂಪಾದಿಸಿದನು.

ಸದಶ್ವ ಇವ ಸ ಕ್ಷಿಪ್ರಂ ಪ್ರಣುನ್ನೋ ವಾಕ್ಯಸಾಯಕೈಃ ।
ತಚ್ಚಕ್ಕಾರ ತಥಾ ಸರ್ವಂ ಯಥಾವದನುಶಾಸನಮ್ ॥೧೮॥

ಒಳ್ಳೆಯ ಅಶ್ವದಂತೆ ಅವನು ಮಾತುಗಳೆಂಬ ಬಾಣಗಳಿಂದ ಪ್ರಚೋದಿಸಲ್ಪಟ್ಟವನಾಗಿ ಶೀಘ್ರವಾಗಿ ತಾಯಿಯ ಅನುಶಾಸನದಂತೆ ಎಲ್ಲವನ್ನೂ ಮಾಡಿದನು.

ವೈಶಂಪಾಯನಃ

ಇದಮುದ್ದರ್ಷಣಂ ಭೀಮಂ ತೇಜೋವರ್ಧನಮುತ್ತಮಮ್ ।
ರಾಜಾನಂ ಶ್ರಾವಯೇನ್ಮಂತ್ರೀ ಸೀದಂತಂ ಶತ್ರುಪೀಡಿತಮ್ ॥೧೯॥

ವೈಶಂಪಾಯನ– ಈ ಆಖ್ಯಾನವು ರಾಜರಿಗೆ ಸಂತೋಷವನ್ನು ಕೊಟ್ಟು ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಶ್ರೇಷ್ಠವಾದ ಮತ್ತು ಶತ್ರುಗಳಿಗೆ ಭಯವನ್ನುಂಟು ಮಾಡುವ ವ್ಯಾಖ್ಯಾನ. ಇದನ್ನು ಶತ್ರುಪೀಡಿತನಾಗಿ ವಿಷಾದಕ್ಕೆ ಒಳಗಾದ ರಾಜನಿಗೆ ಮಂತ್ರಿಯು ಶ್ರವಣ ಮಾಡಿಸಬೇಕು.

ಜಯೋ ನಾಮೇತಿಹಾಸೋಽಯಂ ಶ್ರೋತವ್ಯೋ ವಿಜಿಗೀಷುಣಾ ।
ಮಹೀಂ ವಿಜಯತೇ ಕ್ಷಿಪ್ರಂ ಶ್ರುತ್ವಾ ಶತ್ರೂನ್ ಪ್ರಮರ್ದತಿ ॥೨೦॥

ಈ ಇತಿಹಾಸಕ್ಕೆ ಜಯ ಎಂದು ಹೆಸರು. ಯುದ್ಧದಲ್ಲಿ ಜಯವನ್ನು ಬಯಸುವ ರಾಜನು ಇದನ್ನು ಕೇಳಬೇಕು. ಕೇಳಿದ ಅವನು ಶತ್ರುಗಳನ್ನು ಮರ್ದಿಸಿ ಶೀಘ್ರವಾಗಿ ಭೂಮಿಯನ್ನು ಜಯಿಸುವನು.

ಇದಂ ಪುಂಸವನಂ ಚೈವ ವೀರಸಂಜನನಂ ತಥಾ ।
ಅಭೀಕ್ಷ್ಣಂ ಗರ್ಭಿಣೀ ಶ್ರುತ್ವಾ ಧ್ರುವಂ ವೀರಂ ಪ್ರಜಾಯತೇ ॥೨೧॥

ಈ ಆಖ್ಯಾನವು ಗಂಡುಮಗವನ್ನು ಕೊಡುವಂತಹದು ಮತ್ತು ವೀರನಾದ ಪುತ್ರನನ್ನು ಕೊಡುವಂತಹದು. ಗರ್ಭಿಣಿಯಾದವಳು ಇದನ್ನು ಸತತವಾಗಿ ಕೇಳಿದರೆ ಖಂಡಿತವಾಗಿ ವೀರನಾದ ಪುತ್ರನನ್ನು ಪಡೆಯುವಳು.

ವಿದ್ಯಾಶೂರಂ ತಪಃಶೂರಂ ದಮಶೂರಂ ತಪಸ್ವಿನಮ್ ।
ಬ್ರಾಹ್ಮ್ಯಾ ಶ್ರಿಯಾ ದೀಪ್ಯಮಾನಂ ಸಾಧುವಾದೇನ ಸಮ್ಮತಮ್ ॥೨೨॥

ಗರ್ಭಿಣಿಯಾದ ಬ್ರಾಹ್ಮಣಸ್ತ್ರೀಯು ವಿದ್ಯಾಶೂರನೂ, ತಪಃಶೂರನೂ, ಇಂದ್ರಿಯ ನಿಗ್ರಹವುಳ್ಳವನೂ, ತಪಶ್ಶೀಲನೂ, ಬ್ರಾಹ್ಮೀ ಸಂಪತ್ತಿನಿಂದ ಕೂಡಿದವನೂ, ಎಲ್ಲರಿಂದಲೂ ಸಜ್ಜನನೆಂದು ಕರೆಸಿಕೊಳ್ಳಲ್ಪಡುವನೂ ಆದ ಪುತ್ರನನ್ನು ಪಡೆಯುವಳು.

ಸ್ವರ್ಚಿಷ್ಮಂತಂ ಬಲೋಪೇತಂ ಮಹಾಭಾಗಂ ಮಹಾರಥಮ್ ।
ಧೃತಿಮಂತಮನಾಧೃಷ್ಯಂ ಜೇತಾರಮಪರಾಜಿತಮ್ ॥೨೩॥

ನಿಯಂತಾರಮಸಾಧೂನಾಂ ಗೋಪ್ತಾರಂ ಧರ್ಮಚಾರಿಣಾಮ್ ।
ಈದೃಶಂ ಕ್ಷತ್ರಿಯಾ ಸೂತೇ ವೀರಂ ಸತ್ಯಪರಾಕ್ರಮಮ್ ॥೨೪॥

ಕ್ಷತ್ರಿಯ ಸ್ತ್ರೀಯಾದವಳು ಕಾಂತಿಯುಕ್ತನಾದ, ಬಲದಿಂದ ಯುಕ್ತನಾದ, ಮಹಾನುಭಾವನಾದ, ಮಹಾರಥನಾದ, ಧೈರ್ಯಶಾಲಿಯಾದ, ಯಾರಿಗೂ ಸೋಲದ, ಎಲ್ಲರನ್ನೂ ಜಯಿಸುವ, ದುಷ್ಟರನ್ನು ನಿಗ್ರಹಿಸುವ, ಧರ್ಮಚಾರಿಗಳನ್ನು ರಕ್ಷಿಸುವ , ಸತ್ಯಪರಾಕ್ರಮವುಳ್ಳ ಇಂತಹ ವೀರನನ್ನು ಪ್ರಸವಿಸುವಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚತ್ರಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಷಟ್‌ಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತಾರನೆಯ ಅಧ್ಯಾಯ

ಕೃಷ್ಣನ ಮೂಲಕ ಅರ್ಜುನಾದಿಗಳಿಗೆ ಕುಂತಿಯ ಸಂದೇಶ.
ಕರ್ಣನ ಜೊತೆಯಲ್ಲಿ ಮಾತನಾಡಿ ಕೃಷ್ಣನ ಉಪಪ್ಲಾವ್ಯನಗರ ಗಮನ.

ಕುಂತೀ

ಅರ್ಜುನಂ ಕೇಶವಂ ಬ್ರೂಯಾಃ ತ್ವಯಿ ಜಾತೇ ಸ್ಮ ಸೂತಕೇ ।
ಉಪೋಪವಿಷ್ಟಾ ನಾರೀಭಿರಾಶ್ರಮೇ ಪರಿವಾರಿತಾ ॥೧॥

ಅಥಾಂತರಿಕ್ಷೇ ವಾಗಾಸೀದ್ ದಿವ್ಯರೂಪಾ ಮನೋರಮಾ ॥೨॥

ಕುಂತೀ– ಎಲೈ ಕೇಶವನೇ, ಅರ್ಜುನನನ್ನು ಕುರಿತು ಹೀಗೆ ಹೇಳುವವನಾಗು. ನೀನು ಜನಿಸಿದಾಗ ನಾನು ಸ್ತ್ರೀಯರಿಂದ ಸುತ್ತುವರಿಯಲ್ಪಟ್ಟು ಆಶ್ರಮದಲ್ಲಿ ಕುಳಿತಿದ್ದೆ. ಆಗ ದಿವ್ಯವೂ, ಮನೋಹರವೂ ಆದ ಅಶರೀರವಾಣಿಯಾಯಿತು.

ಸಹಸ್ರಾಕ್ಷಸಮಃ ಕುಂತಿ ಭವಿಷ್ಯತ್ಯೇವ ತೇ ಸುತಃ ॥೩॥

ಏಷ ಜೇಷ್ಯತಿ ಸಂಗ್ರಾಮೇ ಕುರೂನ್ ಸರ್ವಾನ್ ಸಮಾಗತಾನ್ ।
ಭೀಮಸೇನದ್ವಿತೀಯಶ್ಚ ಲೋಕಮುದ್ವರ್ತಯಿಷ್ಯತಿ ॥೪॥

ಪುತ್ರಸ್ತೇ ಪೃಥಿವೀಂ ಜೇತಾ ಯಶಶ್ಚಾಸ್ಯ ದಿವಂ ಸ್ಪೃಶೇತ್ ॥೫॥

ಎಲೌ ಕುಂತಿಯೇ, ನಿನ್ನ ಪುತ್ರನು ಇಂದ್ರನಿಗೆ ಸಮನಾಗುವನು. ಇವನು ಯುದ್ಧದಲ್ಲಿ ಸಮಾಗತರಾದ ಎಲ್ಲ ಕೌರವರನ್ನೂ ಗೆಲ್ಲುವನು. ಭೀಮಸೇನನ ಸಹಾಯವುಳ್ಳ ಅವನು ಶತ್ರುಗಳನ್ನೆಲ್ಲಾ ನಾಶಮಾಡುವನು. ನಿನ್ನ ಮಗನು ಭೂಮಿಯನ್ನು ಜಯಿಸುವನು. ಅವನ ಕೀರ್ತಿಯು ಸ್ವರ್ಗವನ್ನು ಮುಟ್ಟುವುದು.

ಹತ್ವಾ ಕುರೂಂಶ್ಚ ಸಂಗ್ರಾಮೇ ವಾಸುದೇವಸಹಾಯವಾನ್ ।
ಪಿತ್ರ್ಯಮಂಶಂ ಪ್ರನಷ್ಟಂ ಚ ಪುನರಭ್ಯುದ್ಧರಿಷ್ಯತಿ ॥೬॥

ಭ್ರಾತೃಭಿಃ ಸಹಿತಃ ಶ್ರೀಮಾಂಸ್ತ್ರೀನ್ ಮೇಧಾನಾಹರಿಷ್ಯತಿ ॥೭॥

ಯುದ್ಧದಲ್ಲಿ ಕೃಷ್ಣನ ಸಹಾಯದಿಂದ ಕೌರವರನ್ನು ಸಂಹರಿಸಿ ನಷ್ಟವಾಗಿದ್ದ ತಂದೆಯ ಅಂಶವನ್ನು ಪುನಃ ಸಂಪಾದಿಸುವನು. ಕಾಂತಿಯುಕ್ತನಾದ ಇವನು ಸಹೋದರರ

ಜೊತೆಯಲ್ಲಿ ಮೂರು ಅಶ್ವಮೇಧ ಯಾಗಗಳನ್ನು ಮಾಡುವನು (ಎಂದು ಅಶರೀರವಾಣಿಯಾಯಿತು).

ತಥಾ ಚರೇಸ್ತ್ವಂ ಶ್ವೇತಾಶ್ವ ಯಥಾ ವಾಗಭ್ಯಭಾಷತ ।
ಸ ಸತ್ಯಸಂಧೋ ಬೀಭತ್ಸುಃ ಸವ್ಯಸಾಚೀ ಯಥಾऽಚ್ಯುತ ॥೮॥

ತಥಾऽಹಮೇವಂ ಜಾನಾಮಿ ಬಲವಂತಂ ದುರಾಸದಮ್ ॥೯॥

ತಥಾ ವದಸ್ವ ದಾಶಾರ್ಹ ಯಥಾ ವಾಗಭ್ಯಭಾಷತ ॥೧೦॥

ಎಲೈ ಶ್ವೇತಾಶ್ವನೇ, ಅಶರೀರವಾಣಿಯು ನುಡಿದಂತೆ ನೀನು ನಡೆದುಕೊಳ್ಳುವವನಾಗು. ಎಲೈ ಅಚ್ಯುತನೇ, ನಾನು ತಿಳಿದಂತೆ ಬೀಭತ್ಸುವು, ಸತ್ಯಸಂಧನೂ, ಸವ್ಯಸಾಚಿಯೂ, ಬಲಿಷ್ಠನೂ ಮತ್ತು ಸೋಲಿಸಲ್ಪಡದವನೂ ಆಗಿದ್ದಾನೆ. ಎಲೈ ದಾಶಾರ್ಹನೇ, ಅಶರೀರವಾಣಿ ತಿಳಿಸಿದಂತೆ ನೀನು ಅವನಿಗೆ ತಿಳಿಸುವವನಾಗು.

ಧರ್ಮಶ್ಚೇದಸ್ತಿ ವಾರ್ಷ್ಣೇಯ ತಥಾ ಸತ್ಯಂ ಭವಿಷ್ಯತಿ ।
ತ್ವಂ ಚಾಪಿ ತತ್ ತಥಾ ಕೃಷ್ಣ ಸರ್ವಂ ಸಂಪಾದಯಿಷ್ಯಸಿ ॥೧೧॥

ನಮೋ ಧರ್ಮಾಯ ಮಹತೇ ಧರ್ಮೋ ಧಾರಯತೇ ಪ್ರಜಾಃ ।

ಎಲೈ ವಾರ್ಷ್ಣೇಯನೇ, ಧರ್ಮವು ಇರುವುದಾದರೆ ಅಶರೀರವಾಣಿಯು ಸತ್ಯವಾಗುವುದು. ಎಲೈ ಕೃಷ್ಣನೇ, ನೀನೂ ಸಹ ಅವೆಲ್ಲವನ್ನೂ ಸಂಪಾದಿಸುವಿ. ಶ್ರೇಷ್ಠವಾದ ಧರ್ಮಕ್ಕೆ ನಮಸ್ಕಾರ. ಧರ್ಮವು ಪ್ರಜೆಗಳನ್ನು ರಕ್ಷಿಸುತ್ತದೆ.

ಏತದ್ ಧನಂಜಯೋ ವಾಚ್ಯೋ ನಿತ್ಯೋದ್ಯುಕ್ತೋ ವೃಕೋದರಃ ॥೧೨॥

ಯದರ್ಥಂ ಕ್ಷತ್ರಿಯಾ ಸೂತೇ ತಸ್ಯ ಕಾಲೋऽಯಮಾಗತಃ ।
ನ ಹಿ ವೈರಂ ಸಮಾಸಾದ್ಯ ಸೀದಂತಿ ಪುರುಷರ್ಷಭಾಃ ॥೧೩॥

ಇದನ್ನು ಧನಂಜಯನಿಗೂ ಮತ್ತು ನಿತ್ಯ ಉದ್ಯುಕ್ತನಾದ ಭೀಮಸೇನನಿಗೂ ಹೇಳಬೇಕು- 'ಕ್ಷತ್ರಿಯ ವನಿತೆಯು ಏತಕ್ಕಾಗಿ ಮಗನನ್ನು ಪಡೆಯುತ್ತಾಳೆಯೋ ಅದರ ಪ್ರಯೋಜನದ ಕಾಲವು ಈಗ ಪ್ರಾಪ್ತವಾಗಿದೆ. ಪುರುಷಶ್ರೇಷ್ಠರಾದವರು ವೈರವನ್ನು ಸಂಪಾದಿಸಿ ನಾಶವನ್ನು ಹೊಂದುವುದಿಲ್ಲ.

ವಿದಿತಾ ಮೇ ಸದಾ ಬುದ್ಧಿಃ ಭೀಮಸ್ಯ ನ ಹಿ ಶಾಮ್ಯತಿ ॥೧೪॥

ಯಾವದಂತಂ ನ ಕುರುತೇ ಶತ್ರೂಣಾಂ ಶತ್ರುಕರ್ಶನಃ ।
ತಾವದೇವ ಮಹಾಬಾಹುಃ ನಿಶಾಸು ನ ಸುಖಂ ಲಭೇತ್ ॥೧೫॥

ನನಗೆ ಭೀಮಸೇನನ ಬುದ್ಧಿಯು ತಿಳಿದಿದೆ. ಅವನು ಎಂದೂ ಶಾಂತನಾಗುವುದಿಲ್ಲ. ಶತ್ರುನಾಶನನಾದ, ಮಹಾಬಾಹುವಾದ ಅವನು ಶತ್ರುಗಳನ್ನು ಸಂಹಾರ ಮಾಡುವವರೆಗೆ ರಾತ್ರಿಯ ಕಾಲದಲ್ಲಿ ಸುಖವಾಗಿ ಮಲಗುವುದಿಲ್ಲ.

ಸರ್ವಧರ್ಮವಿಶೇಷಜ್ಞಾಂ ಸ್ನುಷಾಂ ಪಾಂಡೋರ್ಮಹಾತ್ಮನಃ ।
ಬ್ರೂಯಾ ಮಾಧವ ಕಲ್ಯಾಣೀಂ ಕೃಷ್ಣ ಕೃಷ್ಣಾಂ ಯಶಸ್ವಿನೀಮ್ ॥೧೬॥

ಯುಕ್ತಮೇತನ್ಮಹಾಭಾಗೇ ಕುಲೇ ಜಾತೇ ಯಶಸ್ವಿನಿ ।
ಯನ್ಮೇ ಪುತ್ರೇಷು ಸರ್ವೇಷು ಯಥಾವತ್ ತ್ವಮವರ್ತಿಥಾಃ ॥೧೭॥

ಎಲೈ ಮಾಧವನೇ, ಸರ್ವಧರ್ಮಗಳನ್ನೂ ವಿಶೇಷವಾಗಿ ತಿಳಿದ, ಮಹಾತ್ಮನಾದ ಪಾಂಡುವಿನ ಸೊಸೆಯಾದ, ಮಂಗಳಸ್ವರೂಪಳಾದ, ಕೀರ್ತಿವಂತಳಾದ ದ್ರೌಪದಿಯನ್ನು ಕುರಿತು- 'ಎಲೌ ಮಹಾನುಭಾವಳೇ, ಒಳ್ಳೆಯ ಕುಲದಲ್ಲಿ ಜನಿಸಿದ ಕೀರ್ತಿವಂತಳೇ, ನೀನು ನನ್ನ ಎಲ್ಲಾ ಮಕ್ಕಳಲ್ಲಿ ನಡೆದುಕೊಂಡ ರೀತಿಯು ಬಹಳ ಶ್ರೇಷ್ಠವಾದುದು' ಎಂದು ಹೇಳು.

ಮಾದ್ರೀಪುತ್ರೌ ಚ ವಕ್ತವ್ಯೌ ಕ್ಷತ್ರಧರ್ಮರತಾವುಭೌ ।
ವಿಕ್ರಮೇಣಾರ್ಜಿತಾನ್ ಭೋಗಾನ್ ವೃಣೀತಂ ಜೀವಿತಾದಪಿ ॥೧೮॥

ಕ್ಷತ್ರಿಯ ಧರ್ಮದಲ್ಲಿ ರತರಾದ ಮಾದ್ರೀಪುತ್ರರಿಬ್ಬರನ್ನೂ ಕುರಿತು ಪರಾಕ್ರಮದಿಂದ ಸಂಪಾದಿಸಿದ ಭೋಗಗಳನ್ನು ಜೀವನಕ್ಕಿಂತಲೂ ಹೆಚ್ಚೆಂದು ಸ್ವೀಕರಿಸಿ ಎಂದು ಹೇಳು.

ವಿಕ್ರಮಾಧಿಗತಾ ಹ್ಯರ್ಥಾಃ ಕ್ಷತ್ರಧರ್ಮೇಣ ಜೀವತಃ ।
ಮನೋ ಮನುಷ್ಯಸ್ಯ ಸದಾ ಪ್ರೀಣಂತಿ ಪುರುಷೋತ್ತಮ ॥೧೯॥

ಎಲೈ ಪುರುಷೋತ್ತಮನೇ, ಕ್ಷತ್ರಿಯಧರ್ಮದಿಂದ ಬದುಕುವವನಿಗೆ ಪರಾಕ್ರಮದಿಂದ ಸಂಪಾದಿಸಿದ ವಸ್ತುಗಳು ಯಾವಾಗಲೂ ಮನಸ್ಸಿಗೆ ಸಂತೋಷವನ್ನು ಕೊಡುತ್ತವೆ.

ಯಚ್ಚ ವಃ ಪ್ರೇಕ್ಷಮಾಣಾನಾಂ ಸರ್ವಧರ್ಮೋಪಚಾಯಿನೀ ।
ಪಾಂಚಾಲೀ ಪರುಷಾಣ್ಯುಕ್ತಾ ಕೋ ನು ತತ್ ಕ್ಷಂತುಮರ್ಹತಿ ॥೨೦॥

ನೀವೆಲ್ಲರೂ ನೋಡುತ್ತಿರುವಂತೆಯೇ ಸರ್ವಧರ್ಮಗಳನ್ನೂ ಸಂಪಾದಿಸುವ ದ್ರೌಪದಿಯು ಉಗ್ರವಾದ ನುಡಿಗಳನ್ನು ಕೇಳಿದಳು. ಅದನ್ನು ಯಾರು ಕ್ಷಮಿಸಲು ಸಾಧ್ಯ ?

ನ ರಾಜ್ಯಹರಣಂ ದುಃಖಂ ದ್ಯೂತೇ ವಾऽಪಿ ಪರಾಜಯಃ ।
ಪ್ರವ್ರಾಜನಂ ಸುತಾನಾಂ ವಾ ನ ಮೇ ತದ್ ದುಃಖಕಾರಣಮ್ ॥೨೧॥

ನನಗೆ ರಾಜ್ಯನಾಶವು ದುಃಖವಲ್ಲ. ದ್ಯೂತದಲ್ಲಿ ಪರಾಜಯವು ದುಃಖವಲ್ಲ. ಮಕ್ಕಳ ವನವಾಸವು ದುಃಖ ಕಾರಣವಲ್ಲ.

ಯತ್ರ ಸಾ ಬೃಹತೀ ಶ್ಯಾಮಾ ಸಭಾಯಾಂ ರುದತೀ ತದಾ ।
ಅಶ್ರೌಷೀತ್ ಪರುಷಾ ವಾಚಸ್ತನ್ಮೇ ದುಃಖತರಂ ಮಹತ್ ॥೨೨॥

ಆದರೆ ಆ ಮಹಾಸ್ವಭಾವದ ಸುಂದರಿಯಾದ ದ್ರೌಪದಿಯು ಸಭೆಯಲ್ಲಿ ಅಳುತ್ತಿರುವಾಗ ಕೇಳಿದ ಕಠೋರವಾದ ಮಾತುಗಳು ನನಗೆ ಬಹಳ ದುಃಖವನ್ನು ಉಂಟುಮಾಡುತ್ತವೆ.

ಸ್ತ್ರೀಧರ್ಮಿಣೀ ವರಾರೋಹಾ ಕ್ಷತ್ರಧರ್ಮರತಾ ಸದಾ ।
ನಾಧ್ಯಗಚ್ಛತ್ ತದಾ ನಾಥಂ ಕೃಷ್ಣಾ ನಾಥವತೀ ಸತೀ ॥೨೩॥

ಯಾವಾಗಲೂ ಕ್ಷತ್ರಿಯಧರ್ಮದಲ್ಲಿ ರತಳಾದ, ರಜಸ್ವಲೆಯಾದ, ಆ ಸುಂದರಿಯಾದ ದ್ರೌಪದಿಯು ಐದುಪತಿಗಳನ್ನು ಹೊಂದಿದ್ದರೂ ಆಗ ರಕ್ಷಣೆ ಮಾಡುವ ಒಬ್ಬ ಪತಿಯನ್ನೂ ಹೊಂದಲಿಲ್ಲ.

ತಂ ವೈ ಬ್ರೂಹಿ ಮಹಾಬಾಹೋ ಸರ್ವಶಸ್ತ್ರಭೃತಾಂ ವರಮ್ ।
ಅರ್ಜುನಂ ಪುರುಷವ್ಯಾಘ್ರಂ ದ್ರೌಪದ್ಯಾಃ ಪದವೀಂ ಚರ ॥೨೪॥

ಎಲೈ ಮಹಾಬಾಹುವೇ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ಪುರುಷವ್ಯಾಘ್ರನಾದ ಅರ್ಜುನನನ್ನು ಕುರಿತು ದ್ರೌಪದಿಯ ಮಾರ್ಗವನ್ನು ಅನುಸರಿಸು ಎಂದು ಹೇಳು.

ವಿದಿತೌ ಹಿ ತವಾತ್ಯಂತಂ ಕ್ರುದ್ಧಾವಿವ ಯಥಾಂತಕೌ ।
ಭೀಮಾರ್ಜುನೌ ನಯೇತಾಂ ಹಿ ದೇವಾನಪಿ ಪರಾಭವಮ್ ॥೨೫॥

ಕೋಪಗೊಂಡ ಭೀಮಾರ್ಜುನರು ಯಮನಂತೆ ದೇವತೆಗಳಿಗೂ ಕೂಡ ಸೋಲನ್ನು ಉಂಟುಮಾಡುವರೆಂದು ನೀನು ತಿಳಿದಿದ್ದೀಯೆ.

ತಯೋಶ್ಚೈತದವಜ್ಞಾನಂ ಯತ್ ಸಾ ಕೃಷ್ಣಾ ಸಭಾಗತಾ ।
ದುಃಶಾಸನಶ್ಚ ಯದ್ ಭೀಮಂ ಕಟುಕಾನ್ಯಭ್ಯಭಾಷತ ॥೨೬॥

ಪಶ್ಯತಾಂ ಕುರುವೀರಾಣಾಂ ತಚ್ಚ ಸಂಸ್ಮಾರಯೇಃ ಪುನಃ ॥೨೭॥

ಕೌರವವೀರರು ನೋಡುತ್ತಿರುವಂತೆಯೇ ಸಭೆಯಲ್ಲಿ ಬಂದ ದ್ರೌಪದಿಯು ದುಶ್ಶಾಸನನಿಂದ ಯಾವ ಉಗ್ರವಾದ ಮಾತುಗಳನ್ನು ಕೇಳಿದಳೋ ಅದು ಭೀಮಾರ್ಜುನರಿಗೇ ಆದ ಅವಮಾನ. ಕೃಷ್ಣನೇ, ಅದನ್ನು ಪುನಃ ಅವರಿಗೆ ಜ್ಞಾಪಿಸುವವನಾಗು.

ಪಾಂಡವಾನ್ ಕುಶಲಂ ಪೃಚ್ಛೇಃ ಸಪುತ್ರಾನ್ ಸಹ ಕೃಷ್ಣಯಾ ।
ಮಾಂ ವೈ ಕುಶಲಿನೀಂ ಬ್ರೂಯಾಃ ತೇಷು ಭೂಯೋ ಜನಾರ್ದನ ॥

ಅರಿಷ್ಟಂ ಗಚ್ಛ ಪಂಥಾನಂ ಪುತ್ರಾನ್ ಮೇ ಪ್ರತಿಪಾಲಯ ॥೨೯॥

ಎಲೈ ಜನಾರ್ದನನೇ, ಕೃಷ್ಣೆಯಿಂದ ಕೂಡಿದ, ಪುತ್ರಸಹಿತರಾದ ಪಾಂಡವರ ಕುಶಲಪ್ರಶ್ನೆಯನ್ನು ಮಾಡು. ನಾನು ಕ್ಷೇಮದಿಂದಿದ್ದೇನೆಂದು ಅವರಿಗೆ ಪುನಃ ಪುನಃ ಹೇಳು. ಸುಖವಾಗಿ ಹೋಗಿ ಬಾ. ನನ್ನ ಮಕ್ಕಳನ್ನು ರಕ್ಷಿಸು.

ವೈಶಂಪಾಯನಃ

ಅಭಿವಾದ್ಯಾಥ ತಾಂ ಕೃಷ್ಣಃ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ನಿಶ್ಚಕ್ರಾಮ ಮಹಾಬಾಹುಃ ಸಿಂಹಖೇಲಗತಿಸ್ತತಃ ॥೩೦॥

ವೈಶಂಪಾಯನ– ಮಹಾಬಾಹುವೂ, ಸಿಂಹವಿಕ್ರಾಂತಗಾಮಿಯೂ ಆದ ಕೃಷ್ಣನು ಕುಂತಿಗೆ ಪ್ರದಕ್ಷಿಣೆಯನ್ನು ಮಾಡಿ, ನಮಸ್ಕಾರವನ್ನು ಮಾಡಿ ಅಲ್ಲಿಂದ ಹೊರಟನು.

ತತೋ ವಿಸರ್ಜಯಾಮಾಸ ಭೀಷ್ಮಾದೀನ್ ಕುರುಪುಂಗವಾನ್ ।
ಆರೋಪ್ಯಾಥ ರಥೇ ಕರ್ಣಂ ಪ್ರಾಯಾತ್ ಸಾತ್ಯಕಿನಾ ಸಹ ॥೩೧॥

ಅನಂತರ ಕುರುಪುಂಗವರಾದ ಭೀಷ್ಮಾದಿಗಳನ್ನು ಕಳುಹಿಸಿ, ರಥದಲ್ಲಿ ಕರ್ಣನನ್ನು ಕುಳ್ಳಿರಿಸಿಕೊಂಡು ಸಾತ್ಯಕಿಯ ಜೊತೆಯಲ್ಲಿ ಹೊರಟನು.

ತತಃ ಪ್ರಯಾತೇ ದಾಶಾರ್ಹೇ ಕುರವಃ ಸಂಗತಾ ಮಿಥಃ ।
ಜಜಲ್ಪುರ್ಮಹದಾಶ್ಚರ್ಯಂ ಕೇಶವೇ ಪರಮಾದ್ಭುತಮ್ ॥೩೨॥

ನಂತರ ಕೃಷ್ಣನು ಹೊರಟು ಹೋದ ಮೇಲೆ ಕೌರವರು ಒಟ್ಟುಗೂಡಿ ಕೃಷ್ಣನ ಮಹದಾಶ್ಚರ್ಯಕರವಾದ ಅದ್ಭುತವಾದ ಮಹಿಮೆಗಳನ್ನು ಮಾತನಾಡಿಕೊಂಡರು.

ಪ್ರಮೂಢಾ ಪೃಥಿವೀ ಸರ್ವಾ ಮೃತ್ಯುಪಾಶವಶೀಕೃತಾ ।
ದುರ್ಯೋಧನಸ್ಯ ಬಾಲಿಶ್ಯಾನ್ನೈತದಸ್ತೀತಿ ಚಾಬ್ರುವನ್ ॥೩೩॥

ಮೃತ್ಯುಪಾಶಕ್ಕೆ ಸಿಲುಕಿದ ಎಲ್ಲಾ ಭೂಮಿಯೂ ಅಜ್ಞಾನದಿಂದ ಕೂಡಿದೆ. ದುರ್ಯೋಧನನ ಬಾಲಿಶಬುದ್ಧಿಯ ನಿಮಿತ್ತದಿಂದ ಈ ರಾಜ್ಯವು ಅವನಿಗೆ ಉಳಿಯುವುದಿಲ್ಲ ಎಂದು ಹೇಳಿದರು.

ತತೋ ನಿರ್ಯಾಯ ನಗರಾತ್ ಪ್ರಯಯೌ ಪುರುಷೋತ್ತಮಃ ।
ಮಂತ್ರಯಾಮಾಸ ಸ ತದಾ ಕರ್ಣೇನ ಸುಚಿರಂ ಸಹ ॥೩೪॥

ಅನಂತರ ನಗರದಿಂದ ಹೊರಗೆ ಬಂದ ಪುರುಷೋತ್ತಮನು ಕರ್ಣನ ಜೊತೆಯಲ್ಲಿ ಬಹಳ ಕಾಲ ಮಂತ್ರಾಲೋಚನೆಯನ್ನು ಮಾಡಿದನು.

ವಿಸರ್ಜಯಿತ್ವಾ ರಾಧೇಯಂ ಸರ್ವಯಾದವನಂದನಃ ॥೩೫॥

ಅಶ್ವತ್ಥಾಮಾನಮಾಹೂಯ ಮಂತ್ರಯಿತ್ವಾ ಪುನಃ ಪುನಃ ।
ತತೋ ಜವೇನ ಮಹತಾ ತೂರ್ಣಮಶ್ವಾನಚೋದಯತ್ ॥೩೬॥

ಸರ್ವಯಾದವನಂದನನಾದ ಕೃಷ್ಣನು ಕರ್ಣನನ್ನು ಬೀಳ್ಕೊಟ್ಟು, ಅಶ್ವತ್ಥಾಮರನ್ನು ಕರೆದು, ಅವರ ಜೊತೆ ಪುನಃ ಪುನಃ ಮಂತ್ರಾಲೋಚನೆಯನ್ನು ಮಾಡಿ, ಅನಂತರ ಶೀಘ್ರವಾಗಿ ತನ್ನ ಅಶ್ವಗಳನ್ನು ಪ್ರಚೋದಿಸಿದನು.

ತೇ ಪಿಬಂತ ಇವಾಕಾಶಂ ದಾರುಕೇಣ ಪ್ರಚೋದಿತಾಃ ।
ಹಯಾ ಜಗ್ಮುರ್ಮಹಾವೇಗಾ ಮನೋಮಾರುತರಂಹಸಃ ॥೩೭॥

ದಾರುಕನಿಂದ ಪ್ರಚೋದಿತವಾದ, ಮನೋಮಾರುತವೇಗವುಳ್ಳ ಆ ಮಹಾವೇಗವುಳ್ಳ ಅಶ್ವಗಳು ಆಕಾಶವನ್ನು ಕುಡಿಯುವಂತೆ ಹೊರಟವು.

ತೇ ವ್ಯತೀತ್ಯ ಮಹಾಧ್ವಾನಂ ಕ್ಷಿಪ್ರಂ ಶ್ಯೇನಾ ಇವಾಶುಗಾಃ ।
ಉಚ್ಚೈರ್ಜಗ್ಮುರುಪಪ್ಲಾವ್ಯಂ ಶಾರ್ಙ್ಗಧನ್ವಾನಮಾವಹನ್ ॥೩೮॥

ಆ ಅಶ್ವಗಳು ಶೀಘ್ರಗಾಮಿಗಳಾದ ಹದ್ದುಗಳಂತೆ ಶೀಘ್ರವಾಗಿ ಆ ದೊಡ್ಡ ಮಾರ್ಗವನ್ನು ದಾಟಿ ಶಾರ್ಙ್ಗಧನುರ್ಧಾರಿಯಾದ ಕೃಷ್ಣನನ್ನು ಕರೆದುಕೊಂಡು ಉಪಪ್ಲಾವ್ಯನಗರಕ್ಕೆ ಬಂದವು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಷಟ್‌ತ್ರಿಂಶೋತ್ತರಶತತಮೋಽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೇಳನೆಯ ಅಧ್ಯಾಯ

ಕುಂತಿಯ ವಾಕ್ಯವನ್ನು ಕೇಳಿ, ಭೀಷ್ಮ-ದ್ರೋಣರಿಂದ ದುರ್ಯೋಧನನಿಗೆ ಸಂಧಿಯನ್ನು ಮಾಡಿಕೊಳ್ಳುವಂತೆ ಒತ್ತಾಯ.

ವೈಶಂಪಾಯನಃ

ಕುಂತ್ಯಾಸ್ತು ಭಾರತೀಂ ಶ್ರುತ್ವಾ ಭೀಷ್ಮದ್ರೋಣೌ ಮಹಾರಥೌ ।
ದುರ್ಯೋಧನಮಿದಂ ವಾಕ್ಯಮೂಚತುಃ ಶಾಸನಾತಿಗಮ್ ॥೧॥

ವೈಶಂಪಾಯನ– ಕುಂತಿಯ ಮಾತನ್ನು ಕೇಳಿದ, ಮಹಾರಥರಾದ ಭೀಷ್ಮ-ದ್ರೋಣರು ದೊಡ್ಡವರ ಮಾತನ್ನು ಕೇಳದ ದುರ್ಯೋಧನನನ್ನು ಕುರಿತು ಈ ಮಾತುಗಳನ್ನು ಆಡಿದರು.

ಶ್ರುತಂ ತೇ ಪುರುಷವ್ಯಾಘ್ರ ಕುಂತ್ಯಾಃ ಕೃಷ್ಣಸ್ಯ ಸನ್ನಿಧೌ ।
ವಾಕ್ಯಮರ್ಥವದತ್ಯುಗ್ರಮುಕ್ತಂ ಧರ್ಮ್ಯಮನುತ್ತಮಮ್ ॥೨॥

ಎಲೈ ಪುರುಷವ್ಯಾಘ್ರನೇ, ಕೃಷ್ಣನ ಸನ್ನಿಧಿಯಲ್ಲಿ ಕುಂತಿಯು ಆಡಿದ ಧರ್ಮಯುಕ್ತವಾದ, ಶ್ರೇಷ್ಠವಾದ, ಸಾರ್ಥಕವಾದ, ಅತ್ಯಂತ ಉಗ್ರವಾದ ಮಾತುಗಳನ್ನು ನೀನು ಕೇಳಿದ್ದೀಯೆ.

ತತ್ ಕರಿಷ್ಯಂತಿ ಕೌಂತೇಯಾ ವಾಸುದೇವಸ್ಯ ಸಮ್ಮತಮ್ ।
ನ ಹಿ ತೇ ಜಾತು ಶಾಮ್ಯೇರನ್ ಋತೇ ರಾಜ್ಯೇನ ಕೌರವ ॥೩॥

ಕೃಷ್ಣನಿಗೆ ಸಮ್ಮತರಾದ ಪಾಂಡವರು ಹಾಗೆಯೇ ಮಾಡುವರು. ಎಲೈ ಕೌರವನೇ, ರಾಜ್ಯವನ್ನು ಪಡೆಯದೆ ಅವರು ಎಂದೂ ಶಾಂತಿಯನ್ನು ಹೊಂದಲಾರರು.

ಕ್ಲೇಶಿತಾ ಹಿ ತ್ವಯಾ ಪಾರ್ಥಾ ಧರ್ಮಪಾಶಸಿತಾಸ್ತದಾ ।
ಸಭಾಯಾಂ ದ್ರೌಪದೀ ಚೈವ ತೈಶ್ಚ ತನ್ಮರ್ಷಿತಂ ತವ ॥೪॥

ನೀನು ಪಾಂಡವರನ್ನೂ ಮತ್ತು ಸಭೆಯಲ್ಲಿ ದ್ರೌಪದಿಯನ್ನೂ ಕ್ಲೇಶಕ್ಕೆ ಗುರಿ ಮಾಡಿದ್ದೀಯೆ. ಧರ್ಮಪಾಶಬದ್ಧರಾದ ಪಾಂಡವರು ನಿನ್ನ ಅಪರಾಧವನ್ನು ಸಹಿಸಿಕೊಂಡಿದ್ದಾರೆ.

ಕೃತಾಸ್ತ್ರಂ ಹ್ಯರ್ಜುನಂ ಪ್ರಾಪ್ಯ ಭೀಮಂ ಚ ಕೃತನಿಶ್ಚಯಮ್ ।
ರೌದ್ರಮಸ್ತ್ರಂ ಚ ಗಾಂಡೀವಂ ರಥಂ ಚ ಧ್ವಜಮೇವ ಚ ॥೫॥

ನಕುಲಂ ಸಹದೇವಂ ಚ ಬಲವೀರ್ಯಸಮನ್ವಿತೌ ।
ಸಹಾಯಂ ವಾಸುದೇವಂ ಚ ನ ಕ್ಷಾಮ್ಯತಿ ಯುಧಿಷ್ಠಿರಃ ॥೬॥

ಯುಧಿಷ್ಠಿರನು ಅಸ್ತ್ರವಿದ್ಯೆಯನ್ನು ಸಂಪಾದಿಸಿದ ಅರ್ಜುನನನ್ನೂ, ಯುದ್ಧವನ್ನು ನಿರ್ಧರಿಸುವ ಭೀಮನನ್ನೂ ಮತ್ತು ಉಗ್ರವಾದ ಗಾಂಡೀವಾಸ್ತ್ರವನ್ನೂ, ರಥ ಮತ್ತು ಧ್ವಜಗಳನ್ನೂ, ಬಲವೀರಸಂಪನ್ನರಾದ ನಕುಲ-ಸಹದೇವರನ್ನೂ ಮತ್ತು ಕೃಷ್ಣನ ಸಹಾಯವನ್ನೂ ಹೊಂದಿದವನಾಗಿ ನಿನ್ನನ್ನು ಕ್ಷಮಿಸುವುದಿಲ್ಲ.

ಪ್ರತ್ಯಕ್ಷಂ ತೇ ಮಹಾಬಾಹೋ ಯಥಾ ಪಾರ್ಥೇನ ಧೀಮತಾ ।
ವಿರಾಟನಗರೇ ಪೂರ್ವಂ ಸರ್ವೇ ಸ್ಮ ಯುಧಿ ನಿರ್ಜಿತಾಃ ॥೭॥

ಎಲೈ ಮಹಾಬಾಹುವೇ, ವಿರಾಟನಗರದಲ್ಲಿ ಮೇಧಾವಿಯಾದ ಅರ್ಜುನನು ಹೇಗೆ ನಮ್ಮೆಲ್ಲರನ್ನೂ ಯುದ್ಧದಲ್ಲಿ ಸೋಲಿಸಿದನು ಎಂಬುದು ನಿನಗೆ ಪ್ರತ್ಯಕ್ಷವಾದ ವಿಷಯ.

ದಾನವಾ ಘೋರಕರ್ಮಾಣೋ ನಿವಾತಕವಚಾ ಯುಧಿ ।
ರೌದ್ರಮಸ್ತ್ರಂ ಸಮಾದಾಯ ದಗ್ಧಾ ವಾನರಕೇತುನಾ ॥೮॥

ಕಪಿಧ್ವಜನಾದ ಅರ್ಜುನನು ಪಾಶುಪತಾಸ್ತ್ರವನ್ನು ತೆಗೆದುಕೊಂಡು ಘೋರಕರ್ಮವನ್ನು ಮಾಡುವ ನಿವಾತಕವಚ ದೈತ್ಯರನ್ನು ಯುದ್ಧದಲ್ಲಿ ಸುಟ್ಟು ಹಾಕಿದನು.

ಕರ್ಣಪ್ರಭೃತಯಶ್ಚೇಮೇ ತ್ವಂ ಚಾಪಿ ಕವಚೀ ರಥೀ ।
ಮೋಕ್ಷಿತೋ ಘೋಷಯಾತ್ರಾಯಾಂ ಪರ್ಯಾಪ್ತಂ ತನ್ನಿದರ್ಶನಮ್॥೯॥

ಈ ಕರ್ಣ ಮೊದಲಾದವರು ಮತ್ತು ಕವಚವನ್ನು ಧರಿಸಿ ರಥದಲ್ಲಿ ಕುಳಿತಿದ್ದ ನೀನೂ ಸಹ ಘೋಷಯಾತ್ರೆಯಲ್ಲಿ ಭೀಮಾರ್ಜುನರಿಂದ ಬಿಡುಗಡೆಯನ್ನು ಹೊಂದಿದೆ. ಇದೊಂದು ದೃಷ್ಟಾಂತವು ಸಾಕು.

ಪ್ರಶಾಮ್ಯ ಭರತಶ್ರೇಷ್ಠ ಭ್ರಾತೃಭಿಃ ಸಹ ಪಾಂಡವೈಃ ।
ರಕ್ಷೇಮಾಂ ಪೃಥಿವೀಂ ಸರ್ವಾಂ ಮೃತ್ಯುದಂಷ್ಟ್ರಾಂತರಸ್ಥಿತಾಮ್ ॥೧೦॥

ಎಲೈ ಭರತಶ್ರೇಷ್ಠನೇ, ಸಹೋದರರಾದ ಪಾಂಡವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊ. ಮೃತ್ಯುವಿನ ದವಡೆಯಲ್ಲಿ ಸಿಕ್ಕಿದ ಈ ಪೃಥ್ವಿಯೊಂದಿಗೆ ಎಲ್ಲವನ್ನೂ ರಕ್ಷಿಸು.

ಜ್ಯೇಷ್ಠೋ ಭ್ರಾತಾ ಧರ್ಮಶೀಲೋ ವತ್ಸಲಃ ಶ್ಲಕ್ಷ್ಣವಾಕ್ ಶುಚಿಃ ।
ತಂ ಗಚ್ಛ ಪುರುಷವ್ಯಾಘ್ರಂ ವ್ಯಪನೀಯೇಹ ಕಿಲ್ಬಿಷಮ್ ॥೧೧॥

ಅಣ್ಣನಾದ ಧರ್ಮರಾಜನು ಧರ್ಮಶೀಲನಾದವನು, ವಾತ್ಸಲವುಳ್ಳವನು, ಮಧುರವಾದ ಮಾತನ್ನುಳ್ಳವನು ಮತ್ತು ಶುಚಿಯಾದವನು. ದೋಷವನ್ನು ಬಿಟ್ಟು ಪುರುಷವ್ಯಾಘ್ರನಾದ ಅವನ ಬಳಿಗೆ ಹೋಗು.

ದೃಷ್ಟಶ್ಚೇತ್ ತ್ವಂ ಪಾಂಡವೇನ ವ್ಯಪನೀತಶರಾಸನಃ ।
ಪ್ರಸನ್ನೋ ಭ್ರಾತೃಭಿಃ ಶೀಘ್ರಂ ಕೃತಾ ಶಾಂತಿಃ ಕುಲಸ್ಯ ಚ ॥೧೨॥

ನೀನು ಧನುರ್ಬಾಣಗಳನ್ನು ಧರಿಸದೆ, ಸಹೋದರರ ಜೊತೆಯಲ್ಲಿ ಪ್ರಸನ್ನನಾಗಿ ಹೋಗುವುದನ್ನು ಧರ್ಮರಾಜನು ನೋಡಿದರೆ ಶೀಘ್ರವಾಗಿ ಕುಲಕ್ಕೆ ಶಾಂತಿಯುಂಟಾಗುತ್ತದೆ.

ತಮಭ್ಯೇತ್ಯ ಸಹಾಮಾತ್ಯಂ ಪರಿಷ್ವಜ್ಯ ನೃಪಾತ್ಮಜಮ್ ।
ಅಭಿವಾದಯ ರಾಜಾನಂ ಯಥಾಪೂರ್ವಮರಿಂದಮ ॥೧೩॥

ಎಲೈ ಅರಿಂದಮನೇ, ಅಮಾತ್ಯರಿಂದ ಸಹಿತನಾದ, ರಾಜಕುಮಾರನಾದ ಅವನನ್ನು ಸಮೀಪಿಸಿ, ರಾಜನಾದ ಅವನಿಗೆ ಮೊದಲಿನಂತೆ ನಮಸ್ಕಾರವನ್ನು ಮಾಡು.

ಅಭಿವಾದಯಮಾನಂ ತ್ವಾಂ ಪಾಣಿಭ್ಯಾಂ ಭೀಮಪೂರ್ವಜಃ ।
ಪ್ರತಿಗೃಹ್ಣಾತು ಸೌಹಾರ್ದಾತ್ ಕುಂತೀಪುತ್ರೋ ಯುಧಿಷ್ಠಿರಃ ॥೧೪॥

ಭೀಮನ ಅಣ್ಣನಾದ, ಕುಂತೀಪುತ್ರನಾದ ಯುಧಿಷ್ಠಿರನು ನಮಸ್ಕಾರ ಮಾಡುವ ನಿನ್ನನ್ನು ತನ್ನ ಹಸ್ತಗಳಿಂದ ಪ್ರೀತಿಯಿಂದ ಎತ್ತಲಿ.

ಸಿಂಹಸ್ಕಂಧೋರುಬಾಹುಭ್ಯಾಂ ವೃತ್ತಾಯತಮಹಾಭುಜಃ ।
ಪರಿಷ್ವಜತು ಬಾಹುಭ್ಯಾಂ ಭೀಮಃ ಪ್ರಹರತಾಂ ವರಃ ॥೧೫॥

ದೀರ್ಘವಾದ ಮತ್ತು ಪುಷ್ಟವಾದ ಮಹಾಭುಜವುಳ್ಳ, ಪ್ರಹಾರ ಮಾಡುವವರಲ್ಲಿ ಶ್ರೇಷ್ಠನಾದ ಭೀಮನು ಸಿಂಹಸ್ಕಂಧದಂತಿರುವ ತನ್ನ ಬಾಹುಗಳಿಂದ ನಿನ್ನನ್ನು ಆಲಿಂಗಿಸಲಿ.

ಕಂಬುಗ್ರೀವೋ ಗುಡಾಕೇಶಃ ತತಸ್ತ್ವಾಂ ಪುಷ್ಕರೇಕ್ಷಣಃ ।
ಅಭಿವಾದಯತಾಂ ಪಾರ್ಥಃ ಕುಂತೀಪುತ್ರೋ ಧನಂಜಯಃ ॥೧೬॥

ಅನಂತರ ಕಂಬುಕಂಠನೂ, ಕಮಲನಯನನೂ, ಗುಡಾಕೇಶನೂ ಆದ ಕುಂತೀಪುತ್ರನಾದ ಧನಂಜಯನು ನಿನಗೆ ನಮಸ್ಕಾರವನ್ನು ಮಾಡಲಿ.

ಆಶ್ವಿನೇಯೌ ನರವ್ಯಾಘ್ರೌ ರೂಪೇಣಾಪ್ರತಿಮೌ ಭುವಿ ।
ತೌ ಚ ತ್ವಾಂ ಗುರುವತ್ ಪ್ರೇಮ್ಣಾ ಪೂಜಯಾ ಪ್ರತ್ಯುದೀಯತಾಮ್ ॥

ನರವ್ಯಾಘ್ರರೂ, ಭೂಮಿಯಲ್ಲಿ, ರೂಪದಲ್ಲಿ ಅಸದೃಶರಾದವರೂ ಆದ ಅಶ್ವಿನೀಕುಮಾರರಾದ ಆ ನಕುಲ-ಸಹದೇವರು ಗುರುವಿನಂತೆ ಪ್ರೀತಿಯಿಂದ ನಿನ್ನನ್ನು ಪೂಜಿಸಲು ಮುಂದೆ ಬರಲಿ.

ಮುಂಚಂತ್ವಾನಂದಜಾಶ್ರೂಣಿ ದಾಶಾರ್ಹಪ್ರಮುಖಾ ನೃಪಾಃ ।
ಸಂಗಚ್ಛ ಭ್ರಾತೃಭಿಃ ಸಾರ್ಧಂ ಮಾನಂ ಸಂತ್ಯಜ್ಯ ಪಾರ್ಥಿವ ॥೧೮॥

ದಾಶಾರ್ಹರೇ ಮೊದಲಾದ ರಾಜರು ಆನಂದಬಾಷ್ಪಗಳನ್ನು ಸುರಿಸಲಿ. ಎಲೈ ರಾಜನೇ, ಅಹಂಕಾರವನ್ನು ಬಿಟ್ಟು, ಸಹೋದರರ ಜೊತೆಯಲ್ಲಿ ಸಮಾಗಮವನ್ನು ಹೊಂದುವವನಾಗು.

ಪ್ರಶಾಧಿ ಪೃಥಿವೀಂ ಕೃತ್ಸ್ನಾಂ ತತಸ್ತ್ವಂ ಭ್ರಾತೃಭಿಃ ಸಹ ।
ಸಮಾಲಿಂಗ್ಯ ಚ ಹರ್ಷೇಣ ನೃಪಾ ಯಾಂತು ಪರಸ್ಪರಮ್ ॥೧೯॥

ಅನಂತರ ಸಹೋದರರಿಂದ ಸಹಿತನಾಗಿ ಸಮಗ್ರವಾದ ಭೂಮಿಯನ್ನು ಆಳುವವನಾಗು. ಇಲ್ಲಿಗೆ ಬಂದಿರುವ ರಾಜರು ಪರಸ್ಪರ ಆಲಿಂಗನವನ್ನು ಮಾಡಿಕೊಂಡು ತಮ್ಮ ತಮ್ಮ ದೇಶಗಳಿಗೆ ಹೋಗಲಿ.

ಅಲಂ ಯುದ್ಧೇನ ರಾಜೇಂದ್ರ ಸುಹೃದಾಂ ಶೃಣು ಭಾರತ ।
ಧ್ರುವೋ ವಿನಾಶೋ ಯುದ್ಧೇ ಹಿ ಕ್ಷತ್ರಿಯಾಣಾಂ ಪ್ರದೃಶ್ಯತೇ ॥೨೦॥

ಎಲೈ ರಾಜೇಂದ್ರನೇ, ಯುದ್ಧವನ್ನು ನಿಲ್ಲಿಸು. ಎಲೈ ಭಾರತನೇ, ಹಿತೈಷಿಗಳ ಮಾತನ್ನು ಕೇಳು. ಯುದ್ಧವನ್ನು ಮಾಡಿದರೆ ಕ್ಷತ್ರಿಯರ ವಿನಾಶವು ಸ್ಪಷ್ಟವಾಗಿ ಕಂಡುಬರುತ್ತಿದೆ.

ಜ್ಯೋತೀಂಷಿ ಪ್ರತಿಕೂಲಾನಿ ದಾರುಣಾ ಮೃಗಪಕ್ಷಿಣಃ ।
ಉತ್ಪಾತಾ ವಿವಿಧಾ ವೀರ ದೃಶ್ಯಂತೇ ಕ್ಷತ್ರನಾಶನಾಃ ॥೨೧॥

ಗ್ರಹಗಳು ಪ್ರತಿಕೂಲವಾಗಿವೆ. ಮೃಗ-ಪಕ್ಷಿಗಳು ದಾರುಣವಾಗಿವೆ. ಎಲೈ ವೀರನೇ, ಕ್ಷತ್ರಿಯರ ನಾಶವನ್ನು ಸೂಚಿಸುವ ಅನೇಕ ಅಪಶಕುನಗಳು ಕಂಡುಬರುತ್ತಿವೆ.

ವಿಶೇಷತ ಇಹಾಸ್ಮಾಕಂ ನಿಮಿತ್ತಾನಿ ನಿವೇಶನೇ ।
ಉಲ್ಕಾಭಿರ್ಹಿ ಪ್ರದೀಪ್ತಾಭಿರ್ವಧ್ಯತೇ ಪೃತನಾ ತವ ॥೨೨॥

ವಿಶೇಷವಾಗಿ ನಮ್ಮ ವಿನಾಶವನ್ನು ಸೂಚಿಸುವ ಶಕುನಗಳು ನಮ್ಮ ನಿವೇಶನಗಳಲ್ಲಿ ಕಂಡುಬರುತ್ತಿವೆ. ನಿನ್ನ ಸೈನ್ಯದ ಮೇಲೆ ಪ್ರದೀಪ್ತವಾದ ಉಲ್ಕೆಗಳು ಬೀಳುತ್ತಿವೆ.

ವಾಹನಾನ್ಯಪ್ರಹೃಷ್ಟಾನಿ ರುದಂತಿ ಚ ವಿಶಾಂಪತೇ ।
ಗೃಧ್ರಾಶ್ಚ ಪರ್ಯುಪಾಸಂತೇ ಸೈನ್ಯಾನಿ ಚ ಸಮಂತತಃ ॥೨೩॥

ಎಲೈ ರಾಜನೇ, ಅಶ್ವ-ಗಜ ಮೊದಲಾದ ವಾಹನಗಳು ಸಂತೋಷರಹಿತವಾಗಿವೆ ಮತ್ತು ಕಣ್ಣೀರನ್ನು ಸುರಿಸುತ್ತಿವೆ. ನಿನ್ನ ಸೈನ್ಯದ ಮೇಲೆ ಎಲ್ಲ ಕಡೆಗಳಿಂದಲೂ ಹದ್ದುಗಳು ಎರಗುತ್ತಿವೆ.

ನಗರಂ ನ ಯಥಾಪೂರ್ವಂ ತಥಾ ರಾಜನಿವೇಶನಮ್ ।
ಶಿವಾಶ್ಚಾಶಿವನಿರ್ಘೋಷಾ ದೀಪ್ತಾಂ ಸೇವಂತಿ ವೈ ದಿಶಮ್ ॥೨೪॥

ನಗರವಾಗಲೀ ಅಥವಾ ಅರಮನೆಯಾಗಲೀ ಮೊದಲಿನಂತೆ ಕಾಣುತ್ತಿಲ್ಲ. ನರಿಗಳು ದಕ್ಷಿಣದಿಕ್ಕನ್ನು ಆಶ್ರಯಿಸಿ, ಅಮಂಗಳವಾದ ರೋದನಧ್ವನಿಯನ್ನು ಮಾಡುತ್ತಿವೆ.

ಕುರು ವಾಕ್ಯಂ ಪಿತುರ್ಮಾತುರಸ್ಮಾಕಂ ಚ ಹಿತೈಷಿಣಾಮ್ ।
ತ್ವಯ್ಯಾಯತ್ತೋ ಮಹಾಬಾಹೋ ಶಮೋ ವ್ಯಾಯಾಮ ಏವ ಚ ॥೨೫॥

ಹಿತೈಷಿಗಳಾದ ತಂದೆಯ, ತಾಯಿಯ ಮತ್ತು ನಮ್ಮ ಮಾತುಗಳನ್ನು ಕೇಳು. ಎಲೈ ಮಹಾಬಾಹುವೇ, ಶಾಂತಿಯಾಗಲೀ ಅಥವಾ ಯುದ್ಧವಾಗಲೀ ನಿನ್ನನ್ನು ಅವಲಂಬಿಸಿದೆ.

ನ ಚೇತ್ ಕರಿಷ್ಯಸಿ ವಚಃ ಸುಹೃದಾಮರಿಸೂದನ ।
ತಪ್ಸ್ಯಸೇ ವಾಹಿನೀಂ ದೃಷ್ಟ್ವಾ ಪಾರ್ಥಬಾಣಪ್ರಪೀಡಿತಾಮ್ ॥೨೬॥

ಎಲೈ ಶತ್ರುಸೂದನನೇ, ನಮ್ಮ ಮಾತನ್ನು ಕೇಳದಿದ್ದರೆ ಅರ್ಜುನನ ಬಾಣಗಳಿಂದ ಪೀಡಿತವಾದ ನಿನ್ನ ಸೈನ್ಯವನ್ನು ನೋಡಿ ಪಶ್ಚಾತ್ತಾಪವನ್ನು ಪಡುವಿ.

ಭೀಮಸ್ಯ ಚ ಮಹಾನಾದಂ ನದತಃ ಶುಷ್ಮಿಣೋ ರಣೇ ।
ನಿರ್ಘಾತಸದೃಶಂ ತಸ್ಯ ಗದಯಾ ಭೀಮವೇಗಯಾ ॥೨೭॥

ಶ್ರುತ್ವಾ ಸ್ಮರ್ತಾಸಿ ಮೇ ವಾಕ್ಯಂ ಗಾಂಡೀವಸ್ಯ ಚ ನಿಸ್ವನಮ್ ॥೨೮॥

ಯದ್ಯೇತದಪಸವ್ಯಂ ತೇ ವಚೋ ಮಮ ಭವಿಷ್ಯತಿ ॥೨೯॥

ಈ ನನ್ನ ಮಾತುಗಳು ನಿನಗೆ ಹಿಡಿಸದಿದ್ದರೆ ನೀನು ಯುದ್ಧದಲ್ಲಿ ವೀರಶಾಲಿಯಾದ ಭೀಮನ ಮಹಾಅಬ್ಬರಗಳನ್ನೂ, ಭಯಂಕರವೇಗವುಳ್ಳ ಅವನ ಗದೆಯಿಂದ ಉಂಟಾಗುವ ಸಿಡಿಲಿನಂತಹ ಶಬ್ದವನ್ನೂ, ಗಾಂಡೀವ ಧನುಸ್ಸಿನ ಶಬ್ದವನ್ನೂ ಕೇಳಿ ನನ್ನ ಮಾತುಗಳನ್ನು ಸ್ಮರಿಸುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತತ್ರಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಸಪ್ತಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರಮೂವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಮೂವತ್ತೆಂಟನೆಯ ಅಧ್ಯಾಯ

ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಬೇಕಾಗಿ
ಬಂದುದಕ್ಕೆ ಭೀಷ್ಮ-ದ್ರೋಣರ ಪರಿತಾಪ. ದುರ್ಯೋಧನನಿಗೆ
ಸಮಾಧಾನವನ್ನು ಮಾಡಲು ಪುನಃ ಪ್ರಯತ್ನ.

ವೈಶಂಪಾಯನಃ

ಏವಮುಕ್ತಸ್ತು ವಿಮನಾಃ ತಿರ್ಯಗ್ ದೃಷ್ಟಿರಧೋಮುಖಃ ।
ಸಂಹತ್ಯ ಚ ಭ್ರುವೋರ್ಮಧ್ಯಂ ನ ಕಿಂಚಿದ್ ವ್ಯಾಜಹಾರ ಹ ॥೧॥

ವೈಶಂಪಾಯನ– ಈ ಮಾತುಗಳನ್ನು ಹೇಳುತ್ತಿರಲು, ದುರ್ಯೋಧನನು ಮುಖವನ್ನು ಕೆಳಗೆ ತಗ್ಗಿಸಿ, ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಿ, ಅನ್ಯಮನಸ್ಕನಾಗಿ ಹುಬ್ಬುಗಳನ್ನು ಗಂಟಿಕ್ಕಿ ಏನನ್ನೂ ಮಾತನಾಡಲಿಲ್ಲ.

ತಂ ವೈ ವಿಮನಸಂ ದೃಷ್ಟ್ವಾ ಸಂಪ್ರೇಕ್ಷ್ಯಾನ್ಯೋನ್ಯಮಂತಿಕಾತ್ ।
ಪುನರೇವೋಚತುರ್ವಾಕ್ಯಮುಕ್ತವಂತೌ ನರರ್ಷಭೌ ॥೨॥

ತಮ್ಮ ವಾಕ್ಯವನ್ನು ಕೇಳುವ ಮನಸ್ಸಿಲ್ಲದ ಅವನನ್ನು ನೋಡಿ, ಶ್ರೇಷ್ಠವಾದ ಮಾತುಗಳನ್ನು ಹೊಂದಿದ ನರಶ್ರೇಷ್ಠರಾದ ಭೀಷ್ಮ-ದ್ರೋಣರು ಸಮೀಪದಲ್ಲಿ ಒಬ್ಬರನ್ನೊಬ್ಬರು ನೋಡಿ ಪುನಃ ಮಾತನಾಡಿದರು.

ಭೀಷ್ಮಃ

ಶುಶ್ರೂಷುಮನಸೂಯುಂ ಚ ಬ್ರಹ್ಮಣ್ಯಂ ಸತ್ಯಸಂಗರಮ್ ।
ಪ್ರತಿಯೋತ್ಸ್ಯಾಮಹೇ ಪಾರ್ಥಮತೋ ದುಃಖತರಂ ನು ಕಿಮ್ ॥೩॥

ಭೀಷ್ಮ– ಹಿರಿಯರ ಸೇವೆಯನ್ನು ಮಾಡುವ, ಅಸೂಯೆ ಇಲ್ಲದ, ಬ್ರಾಹ್ಮಣವತ್ಸಲನಾದ, ಸತ್ಯಸಂಧನಾದ ಯುಧಿಷ್ಠಿರನ ಜೊತೆಯಲ್ಲಿ ಯುದ್ಧವನ್ನು ಮಾಡುವೆವು. ಇದಕ್ಕಿಂತಲೂ ದುಃಖತರವಾದುದು ಏನಿದೆ?

ದ್ರೋಣಃ

ಅಶ್ವತ್ಥಾಮ್ನಿ ಯಥಾ ಪುತ್ರೇ ಭೂಯೋ ಮಮ ಧನಂಜಯೇ ।
ಬಹುಮಾನಃ ಪರೋ ರಾಜನ್ ಸನ್ನತಿಶ್ಚ ಕಪಿಧ್ವಜೇ ॥೪॥

ದ್ರೋಣ– ಎಲೈ ರಾಜನೇ, ನನಗೆ ಮಗನಾದ ಅಶ್ವತ್ಥಾಮರಲ್ಲಿ ಎಂತಹ ಪ್ರೀತಿ ಇದೆಯೋ, ಅದಕ್ಕಿಂತಲೂ ಹೆಚ್ಚಿನ ಪ್ರೀತಿಯೂ, ಬಹುಮಾನವೂ ಮತ್ತು ಮನಃಪ್ರವಣತೆಯೂ ಕಪಿಧ್ವಜನಾದ ಅರ್ಜುನನಲ್ಲಿದೆ.

ತಂ ಚೇತ್ ಪುತ್ರಾತ್ ಪ್ರಿಯತರಂ ಪ್ರತಿಯೋತ್ಸ್ಯೇ ಧನಂಜಯಮ್ ।
ಕ್ಷತ್ರಧರ್ಮಮನುಷ್ಠಾಯ ಧಿಗಸ್ತು ಕ್ಷತ್ರಜೀವಿಕಾಮ್ ॥೫॥

ಕ್ಷತ್ರಿಯಧರ್ಮವನ್ನು ಅನುಸರಿಸಿ ಪುತ್ರರಿಗಿಂತಲೂ ಪ್ರಿಯತರನಾದ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡಬೇಕಾಗಿ ಬಂದರೆ ಕ್ಷತ್ರಿಯ ಜೀವನಕ್ಕೆ ಧಿಕ್ಕಾರವಿರಲಿ.

ಯಸ್ಯ ಲೋಕೇ ಸಮೋ ನಾಸ್ತಿ ಕಶ್ಚಿದನ್ಯೋ ಧನುರ್ಧರಃ ।
ಮತ್ಪ್ರಸಾದಾತ್ ಸ ಬೀಭತ್ಸುಃ ಶ್ರೇಯಾನನ್ಯೈರ್ಧನುರ್ಧರೈಃ ॥೬॥

ನನ್ನ ಅನುಗ್ರಹದಿಂದ ಯಾವನಿಗೆ ಸಮಾನವಾದ ಧನುರ್ಧಾರಿಯು ಲೋಕದಲ್ಲಿ ಇಲ್ಲವೋ ಅಂತಹ ಅರ್ಜುನನು ಉಳಿದ ಧನುರ್ಧಾರಿಗಳಿಗಿಂತ ಶ್ರೇಷ್ಠನಾದವನು.

ಮಿತ್ರಧ್ರುಗ್ ದುಷ್ಟಭಾವಶ್ಚ ನಾಸ್ತಿಕೋऽಥಾನೃಜುಃ ಶಠಃ ।
ನ ಸತ್ಸು ಲಭತೇ ಪೂಜಾಂ ಯಜ್ಞೇ ಮೂರ್ಖ ಇವಾಗತಃ ॥೭॥

ಮಿತ್ರದ್ರೋಹಿಯೂ, ದುಷ್ಟಭಾವವುಳ್ಳವನೂ, ನಾಸ್ತಿಕನೂ, ನೇರವಾದ ನಡತೆ ಇಲ್ಲದವನೂ, ಶಠನೂ ಆದ ವ್ಯಕ್ತಿಯು ಯಜ್ಞಕ್ಕೆ ಬಂದ ಮೂರ್ಖನಂತೆ ಸಜ್ಜನರಿಂದ ಗೌರವವನ್ನು ಪಡೆಯುವುದಿಲ್ಲ.

ವಾರ್ಯಮಾಣೋಽಪಿ ಪಾಪೇಭ್ಯಃ ಪಾಪಾತ್ಮಾ ಪಾಪಮಿಚ್ಛತಿ ।
ಚೋದ್ಯಮಾನೋಽಪಿ ಪಾಪೇನ ಶುಭಾತ್ಮಾ ಶುಭಮಿಚ್ಛತಿ ॥೮॥

ಪಾಪಬುದ್ಧಿಯುಳ್ಳವನು ಪಾಪದಿಂದ ನಿವಾರಿಸಿದರೂ ಸಹ ಪಾಪವನ್ನೇ ಬಯಸುತ್ತಾನೆ. ಒಳ್ಳೆಯ ಮನಸ್ಸುಳ್ಳವನು ಪಾಪವನ್ನು ಮಾಡುವಂತೆ ಪ್ರಚೋದಿಸಿದರೂ ಸಹ ಒಳ್ಳೆಯದನ್ನೇ ಬಯಸುತ್ತಾನೆ.

ಮಿಥ್ಯೋಪಚರಿತಾ ಹ್ಯೇತೇ ವರ್ತಮಾನಾ ಅಪಿ ಪ್ರಿಯೇ ।
ಅಹಿತತ್ವಾಯ ಕಲ್ಪಂತೇ ದೋಷಾದ್ ಭರತಸತ್ತಮ ॥೯॥

ಎಲೈ ಭರತಶ್ರೇಷ್ಠನೇ, ಕಪಟದಿಂದ ನಡೆಸಿಕೊಳ್ಳಲ್ಪಟ್ಟ ಇವರು ಸುಖದಲ್ಲಿದ್ದರೂ ಸಹ (ನಮ್ಮ) ದೋಷದಿಂದ ಅಹಿತರಾಗುತ್ತಾರೆ.

ತ್ವಮುಕ್ತಃ ಕುರುವೃದ್ಧೇನ ಮಯಾ ಚ ವಿದುರೇಣ ಚ ।
ವಾಸುದೇವೇನ ಚ ತಥಾ ಶ್ರೇಯೋ ನೈವಾಭಿಪದ್ಯಸೇ ॥೧೦॥

ಕುರುವೃದ್ಧರಾದ ಭೀಷ್ಮರಿಂದಲೂ, ನನ್ನಿಂದಲೂ, ವಿದುರನಿಂದಲೂ ಮತ್ತು ಕೃಷ್ಣನಿಂದಲೂ ಹೇಳಲ್ಪಟ್ಟರೂ ಸಹ ನೀನು ಶ್ರೇಯೋಮಾರ್ಗವನ್ನು ಹಿಡಿಯುತ್ತಿಲ್ಲ.

ಅಸ್ತಿ ಮೇ ಬಲಮಿತ್ಯೇವಂ ಸಹಸಾ ತ್ವಂ ತಿತೀರ್ಷಸಿ ।
ಸಗ್ರಾಹನಕ್ರಮಕರಂ ಗಂಗಾಜಲಮಿವೋಷ್ಣಗೇ ॥೧೧॥

ನನಗೆ ಬಲವಿದೆ ಎಂದು ತಿಳಿದು ನೀನು ಉಷ್ಣಕಾಲದಲ್ಲಿ ಅನೇಕ ಮೊಸಳೆಗಳಿರುವ ಗಂಗಾಜಲವನ್ನು ದಾಟಲು ಬಯಸುತ್ತಿದ್ದೀಯೆ.

ವಾಸಸೈವ ಯಥಾ ಹಿ ತ್ವಂ ಪ್ರಾವೃಣ್ವಾನೋಽದ್ಯ ಮನ್ಯಸೇ ।
ಸ್ರಜಂ ತ್ಯಕ್ತಾಮಿವ ಪ್ರಾಪ್ಯ ಲೋಭಾದ್ ಯೌಧಿಷ್ಠಿರೀಂ ಶ್ರಿಯಮ್ ॥

ಕೇವಲ ವಸ್ತ್ರದಿಂದ ನಿನ್ನನ್ನು ನೀನು ಮುಚ್ಚಿಕೊಂಡು, ಮುಡಿದು ಬಿಸಾಡಲ್ಪಟ್ಟ ಹೂಮಾಲೆಯಂತಿರುವ ಯುಧಿಷ್ಠಿರನ ಸಂಪತ್ತನ್ನು ಲೋಭದಿಂದ ಪಡೆಯಲು ನೀನು ಬಯಸುತ್ತಿದ್ದೀಯೆ.

ದ್ರೌಪದೀಸಹಿತಂ ಪಾರ್ಥಂ ಸಾಯುಧೈರ್ಭ್ರಾತೃಭಿರ್ವೃತಮ್ ।
ವನಸ್ಥಮಪಿ ರಾಜ್ಯಸ್ಥಃ ಪಾಂಡವಂ ಕೋ ವಿಜೇಷ್ಯತಿ ॥೧೩॥

ಆಯುಧಧಾರಿಗಳಾದ ಸಹೋದರರಿಂದಲೂ ಮತ್ತು ದ್ರೌಪದಿಯಿಂದಲೂ ಸಹಿತನಾದ ಯುಧಿಷ್ಠಿರನನ್ನು ಅವನು ಕಾಡಿನಲ್ಲಿದ್ದರೂ ರಾಜ್ಯದಲ್ಲಿದ್ದ ಯಾವನು ಅವನನ್ನು ಗೆಲ್ಲುವನು?

ನಿದೇಶೇ ಯಸ್ಯ ರಾಜಾನಃ ಸರ್ವೇ ತಿಷ್ಠಂತಿ ಕಿಂಕರಾಃ ।
ತಮೈಲಬಿಲಮಾಸಾದ್ಯ ಧರ್ಮರಾಜೋ ವ್ಯರಾಜತ ॥೧೪॥

ಯಾವನ ಅಧೀನರಾಗಿ ಎಲ್ಲ ರಾಜರೂ ಕಿಂಕರರಾಗಿ (ಸೇವಕರಂತೆ) ವರ್ತಿಸುತ್ತಾರೆಯೋ ಅಂತಹ ಕುಬೇರನನ್ನು ಹೊಂದಿ ಧರ್ಮರಾಜನು ಶೋಭಿಸಿದನು.

ಕುಬೇರಸದನಂ ಪ್ರಾಪ್ಯ ತತೋ ರತ್ನಾನ್ಯವಾಪ್ಯ ಚ ।
ಸ್ಫೀತಮಾಕ್ರಮ್ಯ ತೇ ರಾಷ್ಟ್ರಂ ರಾಜ್ಯಮಿಚ್ಛಂತಿ ಪಾಂಡವಾಃ ॥೧೫॥

ಕುಬೇರನ ಸದನಕ್ಕೆ ಹೋಗಿ, ಅವನಿಂದ ರತ್ನಗಳನ್ನು ಪಡೆದು ಪಾಂಡವರು ನಿನ್ನ ನಿರ್ಮಲವಾದ ರಾಷ್ಟ್ರವನ್ನು ಪಡೆಯಲು ಬಯಸುತ್ತಾರೆ.

ಇಷ್ಟಂ ಹುತಮಧೀತಂ ಚ ಬ್ರಾಹ್ಮಣಾಸ್ತರ್ಪಿತಾ ಧನೈಃ ।
ಆವಯೋರ್ಗತಮಾಯುಶ್ಚ ಕೃತಕೃತ್ಯೌ ಚ ವಿದ್ಧಿ ನೌ ॥೧೬॥

ನಾವಿಬ್ಬರೂ ಯಾಗವನ್ನು ಮಾಡಿದ್ದೇವೆ, ಹೋಮವನ್ನು ಮಾಡಿದ್ದೇವೆ, ಬ್ರಾಹ್ಮಣರನ್ನು ಧನದಿಂದ ಸಂತೋಷಪಡಿಸಿದ್ದೇವೆ. ನಾವು ಕೃತಕೃತ್ಯರಾಗಿದ್ದೇವೆ. ನಮ್ಮ ಆಯುಸ್ಸು ಮುಗಿದಿದೆ ಎಂದು ತಿಳಿಯುವವನಾಗು.

ತ್ವಂ ತು ಹಿತ್ವಾ ಸುಖಂ ರಾಜ್ಯಂ ಮಿತ್ರಾಣಿ ಚ ಧನಾನಿ ಚ ।
ವಿಗ್ರಹಂ ಪಾಂಡವೈಃ ಕೃತ್ವಾ ಮಹದ್ ವ್ಯಸನಮಾಪ್ಸ್ಯಸಿ ॥೧೭॥

ಆದರೆ ನೀನು ಸುಖವನ್ನೂ, ರಾಜ್ಯವನ್ನೂ, ಮಿತ್ರರನ್ನೂ, ಧನವನ್ನೂ ಬಿಟ್ಟು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಿ ದೊಡ್ಡ ಸಂಕಟಕ್ಕೆ ಸಿಲುಕುವಿ.

ದ್ರೌಪದೀ ಯಸ್ಯ ಚಾಶಾಸ್ತೇ ವಿಜಯಂ ಸತ್ಯವಾದಿನೀ ।
ತಪೋಘೋರವ್ರತಾ ದೇವೀ ನ ತ್ವಂ ಜೇಷ್ಯಸಿ ಪಾಂಡವಮ್ ॥೧೮॥

ಸತ್ಯವಾದಿನಿಯೂ, ಘೋರವಾದ ತಪಸ್ಸು ಮತ್ತು ವ್ರತವನ್ನು ಆಚರಿಸುವವಳೂ ಆದ ದ್ರೌಪದೀ ದೇವಿಯು ಯಾರಿಗೆ ಜಯವನ್ನು ಬಯಸುತ್ತಾಳೆಯೋ ಅಂತಹ ಧರ್ಮರಾಜನನ್ನು ನೀನು ಗೆಲ್ಲುವುದಿಲ್ಲ.

ಮಂತ್ರೀ ಜನಾರ್ದನೋ ಯಸ್ಯ ಭ್ರಾತಾ ಯಸ್ಯ ಧನಂಜಯಃ ।
ಸರ್ವಧರ್ಮಭೃತಾಂ ಶ್ರೇಷ್ಠಂ ನ ತ್ವಂ ಜೇಷ್ಯಸಿ ಪಾಂಡವಮ್ ॥೧೯॥

ಯಾವನಿಗೆ ಕೃಷ್ಣನು ಮಂತ್ರಿಯೋ, ಅರ್ಜುನನು ತಮ್ಮನೋ, ಅಂತಹ ಧರ್ಮಾಚರಣೆಯನ್ನು ಮಾಡುವ, ಎಲ್ಲರಲ್ಲಿ ಶ್ರೇಷ್ಠನಾದ ಯುಧಿಷ್ಠಿರನನ್ನು ನೀನು ಗೆಲ್ಲುವುದಿಲ್ಲ.

ಸಹಾಯಾ ಬ್ರಾಹ್ಮಣಾ ಯಸ್ಯ ಧೃತಿಮಂತೋ ಜಿತೇಂದ್ರಿಯಾಃ ।
ತಮುಗ್ರತಪಸಂ ವೀರಂ ಕಥಂ ಜೇಷ್ಯಸಿ ಪಾಂಡವಮ್ ॥೨೦॥

ಧೈರ್ಯಶಾಲಿಗಳೂ, ಜಿತೇಂದ್ರಿಯರೂ ಆದ ಬ್ರಾಹ್ಮಣರು ಯಾರಿಗೆ ಸಹಾಯರಾಗಿದ್ದಾರೆಯೋ ಅಂತಹ ಉಗ್ರತಪಸ್ಸನ್ನು ಆಚರಿಸುವ ವೀರನಾದ ಯುಧಿಷ್ಠಿರನನ್ನು ನೀನು ಹೇಗೆ ಗೆಲ್ಲುವಿ?

ಪುನರುಕ್ತಂ ಚ ವಕ್ಷ್ಯಾಮಿ ಯತ್ ಕಾರ್ಯಂ ಭೂತಿಮಿಚ್ಛತಾ ।
ಸುಹೃದಾ ಮಜ್ಜಮಾನೇಷು ಸುಹೃತ್ಸು ವ್ಯಸನಾರ್ಣವೇ ॥೨೧॥

ಅಲಂ ಯುದ್ಧೇನ ತೈರ್ವೀರೈಃ ಶಾಮ್ಯ ತ್ವಂ ಕುರುವೃದ್ಧಯೇ ।
ಮಾ ಗಮಃ ಸಸುತಾಮಾತ್ಯಃ ಸಮಿತ್ರಶ್ಚ ಯಮಕ್ಷಯಮ್ ॥೨೨॥

ಬಂಧುಜನರಿಂದಲೇ ಬಂಧುಜನರು ವ್ಯಸನಕ್ಕೆ ಈಡಾಗಿ ಮುಳುಗುತ್ತಿರುವಾಗ ಅವರ ಹಿತವನ್ನು ಬಯಸುವವನು ಏನನ್ನು ಹೇಳಬೇಕೋ ಅದನ್ನು ಪುನಃ ಹೇಳುತ್ತೇನೆ–

'ಯುದ್ಧವನ್ನು ನಿಲ್ಲಿಸು. ಆ ವೀರರ ಜೊತೆಯಲ್ಲಿ ಕೌರವರ ವೃದ್ಧಿಗೋಸ್ಕರವಾಗಿ ಸಂಧಿಯನ್ನು ಮಾಡಿಕೊ. ಪುತ್ರ-ಅಮಾತ್ಯಮಿತ್ರರಿಂದೊಡಗೂಡಿ ಯಮಲೋಕಕ್ಕೆ ಹೋಗಬೇಡ'.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟತ್ರಿಂಶೋತ್ತರಶತತಮೋऽಧ್ಯಾಯಃ ॥

॥ ಭಗವದ್ಯಾನಪರ್ವಣಿ ಅಷ್ಟಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಮೂವತ್ತೆಂಟನೆಯ
ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಭಗವದ್ಯಾನಪರ್ವ ॥

★ ★ ★ ★ ★

೭. ವಿವಾದಪರ್ವ

ಮಹಾಭಾರತತಾತ್ಪರ್ಯನಿರ್ಣಯಃ – ಅಧ್ಯಾಯಃ ೨೪

ಪುನಶ್ಚ ಕುಂತೀಗೃಹಮೇತ್ಯ ಕೃಷ್ಣ-
ಸ್ತದ್ಯೋಗಂ ಧರ್ಮಸುತಸ್ಯ ಶಿಷ್ಟವಮ್ ।
ಶ್ರುತ್ವಾ ಯಯೌ ಸೂರ್ಯಜಮಾತ್ಮಯಾನೇ
ನಿಧಾಯ ತಸ್ಯಾವದದಾತ್ಮಜನ್ಮ ।
ಆಯಾಹಿ ಪಾಂಡೂನಿತಿ ತದ್ವಚಃ ಸ
ನೈವಾಕರೋನ್ಮಾನಿತೋ ಧಾರ್ತರಾಷ್ಟ್ರೈಃ ॥೮೫॥

ಶ್ರೀಕೃಷ್ಣಪುನಃ ಕುಂತಿಯ ಮನೆಗೆ ಬಂದು, ಅವಳು ಧರ್ಮರಾಜನಿಗೆ ಯುದ್ಧಕ್ಕೆ ತೊಡಗಲೆಂದು ಉಪದೇಶಿಸಿದುದನ್ನು ಕೇಳಿ, ಕರ್ಣನ ಬಳಿಗೆ ಹೋದ. ಅವನನ್ನು ನಗರದಿಂದ ಹೊರಗೆ ಸ್ವಲ್ಪ ದೂರಕ್ಕೆ ರಥದಲ್ಲಿ ಕರೆದುಕೊಂಡು ಹೋಗಿ ಅವನ ಜನನದ ಬಗ್ಗೆ ತಿಳಿಸಿದ. ಪಾಂಡವರ ಪಕ್ಷಕ್ಕೆ ಬಾ ಎಂದ. ಕೌರವರಿಂದ ಸಮ್ಮಾನಿತನಾಗಿದ್ದ ಆತ ಕೃಷ್ಣನ ಆ ಮಾತನ್ನು ಒಪ್ಪಲಿಲ್ಲ.

ಸಂಸ್ಥಾಪ್ಯ ತಂ ಭಗವಾನ್ ದ್ರೋಣಯೇ ಚ
ರಹೋऽವದನ್ಮಿತ್ರಭಾವಂ ಪೃಥಾಜ್ಞೈಃ ।

ಯಾವತ್ ಪಿತುರ್ಮರಣಂ ಸೋಽಪಿ
ಮೈತ್ರೀಂ ವವ್ರೇ ಪಾರ್ಥೈಸ್ತಂ ಚ ವಿಸೃಜ್ಯ ಕೃಷ್ಣಃ ॥೮೬॥

ಯಯೌ ಕುರೂನ್ ಪೂರ್ವಮೇವೋದ್ವಿಸೃಜ್ಯ
ಪೃಥಾಸುತಾನಾಂ ಸ ಸಕಾಶಮೀಶಃ ॥೮೭॥

ಭಗವಾನ್ ಶ್ರೀಕೃಷ್ಣ ಕರ್ಣನನ್ನು ರಥದಿಂದ ಕೆಳಗೆ ಇಳಿಸಿ, ಅಶ್ವತ್ಥಾಮನಿಗೂ ಪಾಂಡವರೊಡನೆ ಮೈತ್ರಿಯಿಂದ ಇರಲು ಏಕಾಂತದಲ್ಲಿ ಹೇಳಿದ. ಅವನು ತಂದೆಯ ಮರಣಪರ್ಯಂತ ಮೈತ್ರಿಯಿಂದಿರಲು ಒಪ್ಪಿದ. ಕೃಷ್ಣ ಅವನನ್ನೂ ಹಿಂದೆ ಕಳಿಸಿದ. ಕೌರವರನ್ನು ಕರ್ಣನೊಡನೆ ಮಾತನಾಡುವ ಮೊದಲೆ ಹಿಂದಿರುಗಿಸಿದ್ದ. ಬಳಿಕ ಕೃಷ್ಣ ಪಾಂಡವರ ಬಳಿಗೆ ಬಂದ.

★ ★ ★ ★ ★

ನೂರ ಮೂವತ್ತೊಂಬತ್ತನೆಯ ಅಧ್ಯಾಯ

ವೈಶಂಪಾಯನರಿಂದ ಕೃಷ್ಣ-ಕರ್ಣರ ಸಂಭಾಷಣೆಯ ಕಥನ.

ಜನಮೇಜಯಃ

ರಾಜಪುತ್ರೈಃ ಪರಿವೃತಃ ತಥಾಽಮಾತ್ಯೈಶ್ಚ ಸತ್ತಮಃ ।
ಉಪಾರೋಪ್ಯ ರಥೇ ಕರ್ಣಂ ನಿರ್ಯಯೌ ಮಧುಸೂದನಃ ॥೧॥

ಜನಮೇಜಯ– ರಾಜಪುತ್ರರಿಂದಲೂ ಮತ್ತು ಅಮಾತ್ಯರಿಂದಲೂ ಪರಿವೃತನಾದ ಸಜ್ಜನರಲ್ಲಿ ಶ್ರೇಷ್ಠನಾದ ಮಧುಸೂದನನು ಕರ್ಣನನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಹೊರಟನು.

ಕಿಮಬ್ರವೀದ್ ರಥೋಪಸ್ಥೇ ರಾಧೇಯಂ ಪರವೀರಹಾ ।
ಕಾನಿ ಸಾಂತ್ವಾನಿ ಗೋವಿಂದಃ ಸೂತಪುತ್ರೇ ಪ್ರಯುಕ್ತವಾನ್ ॥೨॥

ಪರವೀರಘಾತಕನಾದ ಕೃಷ್ಣನು ರಾಧೇಯನಾದ ಕರ್ಣನನ್ನು ಕುರಿತು ರಥದ ಪೀಠದಲ್ಲಿ ಏನನ್ನು ಹೇಳಿದನು? ಗೋವಿಂದನು ಸೂತಪುತ್ರನಿಗೆ ಯಾವ ಸಮಾಧಾನದ ಮಾತುಗಳನ್ನು ಆಡಿದನು?

ಓಘಮೇಘಸ್ವನಃ ಕಾಲೇ ಯತ್ ಕೃಷ್ಣಃ ಕರ್ಣಮಬ್ರವೀತ್ ।
ಮೃದು ವಾ ಯದಿ ವಾ ತೀಕ್ಷ್ಣಂ ತನ್ಮಮಾಚಕ್ಷ್ವ ಸರ್ವಶಃ ॥೩॥

ಮೇಘಗಂಭೀರ ಧ್ವನಿಯುಳ್ಳ ಕೃಷ್ಣನು ಮೃದುವಾಗಿ ಅಥವಾ ತೀಕ್ಷ್ಣವಾಗಿ ಕರ್ಣನಿಗೆ ಏನು ಹೇಳಿದನೆಂದು ಎಲ್ಲವನ್ನೂ ನನಗೆ ಹೇಳು.

ವೈಶಂಪಾಯನಃ

ಆನುಪೂರ್ವ್ಯೇಣ ವಾಕ್ಯಾನಿ ತೀಕ್ಷ್ಣಾನಿ ಚ ಮೃದೂನಿ ಚ ।
ಪ್ರಿಯಾಣಿ ಧರ್ಮಯುಕ್ತಾನಿ ಸತ್ಯಾನಿ ಚ ಹಿತಾನಿ ಚ ॥೪॥

ಹೃದಯಗ್ರಹಣೀಯಾನಿ ರಾಧೇಯಂ ಮಧುಸೂದನಃ ।
ಯಾನ್ಯಬ್ರವೀದಮೇಯಾತ್ಮಾ ತಾನಿ ಮೇ ಶೃಣು ಭಾರತ ॥೫॥

ವೈಶಂಪಾಯನ– ಎಲೈ ಭಾರತನೇ, ಅಮೇಯಾತ್ಮನಾದ ಮಧುಸೂದನನು ಕರ್ಣನನ್ನು ಕುರಿತು ಒಂದು ಕ್ರಮದಿಂದ ಯಾವ ತೀಕ್ಷ್ಣವಾದ ಮತ್ತು ಮೃದುವಾದ, ಪ್ರಿಯವಾದ, ಧರ್ಮಯುಕ್ತವಾದ, ಸತ್ಯವಾದ, ಹಿತವಾದ, ಹೃದಯಸ್ಪರ್ಶಿಯಾದ ಮಾತುಗಳನ್ನು ಆಡಿದನೋ ಅದನ್ನು ಹೇಳುತ್ತೇನೆ, ಕೇಳು.

ಶ್ರೀವಾಸುದೇವಃ

ಉಪಾಸಿತಾಸ್ತೇ ರಾಧೇಯ ಬ್ರಾಹ್ಮಣಾ ವೇದಪಾರಗಾಃ ।
ತತ್ತಾ ತ್ಪರ್ಥಂ ಪರಿಪೃಷ್ಟಾಶ್ಚ ನಿಯತೇನಾನಸೂಯತಾ ॥೬॥

ಶ್ರೀವಾಸುದೇವ– ಎಲೈ ಕರ್ಣನೇ, ನೀನು ಬ್ರಾಹ್ಮಣ ಸೇವೆಯನ್ನು ಮಾಡಿದ್ದೀಯೆ. ವೇದಪಾರಂಗತನಾಗಿದ್ದೀಯೆ. ನಿಯಮವನ್ನು ಧರಿಸಿ ಅಸೂಯೆ ಇಲ್ಲದೆ ಶಾಸ್ತ್ರಾಧ್ಯಯನವನ್ನು ಮಾಡಿದ್ದೀಯೆ.

ತ್ವಮೇವ ಕರ್ಣ ಜಾನಾಸಿ ವೇದಂ ವೇದಾಂಗಸಂಹಿತಮ್ ।
ತ್ವಮೇವ ಧರ್ಮಶಾಸ್ತ್ರೇಷು ಸೂಕ್ಷ್ಮೇಷು ಪರಿನಿಷ್ಠಿತಃ ॥೭॥

ಕರ್ಣನೇ, ವೇದ-ವೇದಾಂಗಗಳನ್ನು ನೀನೇ ತಿಳಿದಿದ್ದೀಯೆ. ಸೂಕ್ಷ್ಮವಾದ ಧರ್ಮಶಾಸ್ತ್ರಗಳನ್ನೂ ಸಹ ನೀನೇ ತಿಳಿದವನಾಗಿದ್ದೀಯೆ.

ಕಾನೀನಶ್ಚ ಸಹೋಢಶ್ಚ ಕನ್ಯಾಯಾಂ ಯಶ್ಚ ಜಾಯತೇ ।
ವೋಢಾರಂ ಪಿತರಂ ತಸ್ಯ ಪ್ರಾಹುಃ ಶಾಸ್ತ್ರವಿದೋ ಜನಾಃ ॥೮॥

ಕನ್ಯೆಯಲ್ಲಿ ಯಾವನು ಜನಿಸುತ್ತಾನೆಯೋ ಅವನು ಆ ಕನ್ಯೆಯನ್ನು ಮುಂದೆ ವಿವಾಹವನ್ನು ಮಾಡಿಕೊಳ್ಳುವ ಪುರುಷನ ಪುತ್ರನಾಗುತ್ತಾನೆ. ವಿವಾಹವನ್ನು ಮಾಡಿಕೊಳ್ಳುವವನು ಅವನ ತಂದೆಯಾಗುತ್ತಾನೆ ಎಂದು ಶಾಸ್ತ್ರವನ್ನು ತಿಳಿದ ಜನರು ಹೇಳುತ್ತಾರೆ.

ಸೋಽಸಿ ಕರ್ಣ ತಥಾ ಜಾತಃ ಪಾಂಡೋಃ ಪುತ್ರೋಽಸಿ ಧರ್ಮತಃ ।
ನಿಶ್ಚಯಾದ್ ಧರ್ಮಶಾಸ್ತ್ರಾಣಾಮೇಹಿ ರಾಜಾ ಭವಿಷ್ಯಸಿ ॥೯॥

ಎಲೈ ಕರ್ಣನೇ, ಹೀಗೆ ಜನಿಸಿದ ನೀನು ಧರ್ಮಶಾಸ್ತ್ರದ ನಿಶ್ಚಯದ ದೃಷ್ಟಿಯಿಂದ ಧಾರ್ಮಿಕವಾಗಿ ಪಾಂಡುವಿನ ಪುತ್ರನಾಗಿದ್ದೀಯೆ. ಬಾ, ನೀನೇ ರಾಜನಾಗುವಿ.

ಪಿತೃಪಕ್ಷೇ ಚ ತೇ ಪಾರ್ಥಾ ಮಾತೃಪಕ್ಷೇ ಚ ವೃಷ್ಣಯಃ ।
ದ್ವೌ ಪಕ್ಷಾವಭಿಜಾನೀಹಿ ತ್ವಮೇತೌ ಪುರುಷರ್ಷಭ ॥೧೦॥

ನಿನ್ನ ಪಿತೃಪಕ್ಷದಲ್ಲಿ ಪಾಂಡವರೂ, ಮಾತೃಪಕ್ಷದಲ್ಲಿ ವೃಷ್ಣಿಗಳೂ ಇದ್ದಾರೆ. ಎಲೈ ಪುರುಷರ್ಷಭನೇ, ನೀನು ಈ ಎರಡು ಪಕ್ಷಗಳನ್ನೂ ತಿಳಿಯುವವನಾಗು.

ಮಯಾ ಸಾರ್ಧಮಿತೋ ಯಾತಮದ್ಯ ತ್ವಾಂ ತಾತ ಪಾಂಡವಾಃ ।
ಅಭಿಜಾನಂತು ಕೌಂತೇಯಂ ಪೂರ್ವಜಾತಂ ಯುಧಿಷ್ಠಿರಾತ್ ॥೧೧॥

ಎಲೈ ಪ್ರೀತಿಪಾತ್ರನೇ, ನನ್ನ ಜೊತೆಯಲ್ಲಿ ಇಲ್ಲಿಂದ ಹೊರಟು ಬಂದ ನಿನ್ನನ್ನು ಎಲ್ಲ ಪಾಂಡವರೂ ಯುಧಿಷ್ಠಿರನಿಗಿಂತ ಮೊದಲು ಜನಿಸಿದ ಕುಂತೀಪುತ್ರನೆಂದು ಈ ದಿನ ತಿಳಿಯಲಿ.

ಪಾದೌ ತವ ಗ್ರಹೀಷ್ಯಂತಿ ಭ್ರಾತರಃ ಪಂಚ ಪಾಂಡವಾಃ ।
ದ್ರೌಪದೇಯಾಸ್ತಥಾ ಪಂಚ ಸೌಭದ್ರಶ್ಚಾಪರಾಜಿತಃ ॥೧೨॥

ಸಹೋದರರಾದ ಪಂಚಪಾಂಡವರೂ, ದ್ರೌಪದಿಯ ಐವರು ಪುತ್ರರೂ ಅಪರಾಜಿತನಾದ ಅಭಿಮನ್ಯುವೂ ಸಹ ನಿನ್ನ ಪಾದಗಳನ್ನು ಹಿಡಿಯುವರು (ನಮಸ್ಕಾರವನ್ನು ಮಾಡುವರು).

ರಾಜಾನೋ ರಾಜಪುತ್ರಾಶ್ಚ ಪಾಂಡವಾರ್ಥೇ ಸಮಾಗತಾಃ ।
ಪಾದೌ ತವ ಗ್ರಹೀಷ್ಯಂತಿ ಸರ್ವೇ ಚಾಂಧಕವೃಷ್ಣಯಃ ॥೧೩॥

ಪಾಂಡವರ ಸಲುವಾಗಿ ಆಗಮಿಸಿರುವ ರಾಜರೂ, ರಾಜಪುತ್ರರೂ, ವೃಷ್ಣಿಗಳೂ ಮತ್ತು ಅಂಧಕರೂ ಎಲ್ಲರೂ ನಿನ್ನ ಪಾದವನ್ನು ಹಿಡಿಯುವರು.

ಹಿರಣ್ಮಯಾಂಶ್ಚ ತೇ ಕುಂಭಾನ್ ರಾಜತಾನ್ ಪಾರ್ಥಿವಾಂಸ್ತಥಾ ।
ಔಷಧ್ಯಃ ಸರ್ವರತ್ನಾನಿ ಸರ್ವಬೀಜಾನಿ ವೀರುಧಃ ॥೧೪॥

ರಾಜಾನೋ ರಾಜಕನ್ಯಾಶ್ಚ ಹ್ಯಾನಯಂತ್ವಭಿಷೇಚನಮ್ ॥೧೫॥

ಷಷ್ಠೇ ತ್ವಾಂ ಚ ತಥಾ ಕಾಲೇ ದ್ರೌಪದ್ಯುಪಗಮಿಷ್ಯತಿ ॥೧೬॥

ರಾಜರೂ ಮತ್ತು ರಾಜಕನ್ಯೆಯರೂ ಸುವರ್ಣಮಯವಾದ, ರಜತಮಯವಾದ, ಮೃಣ್ಮಯವಾದ ಕುಂಭಗಳನ್ನೂ, ಓಷಧಿಗಳನ್ನೂ, ಸರ್ವಬೀಜಗಳನ್ನೂ, ಲತೆಗಳನ್ನೂ, ಎಲ್ಲ ರತ್ನಗಳನ್ನೂ ನಿನ್ನ ಅಭಿಷೇಕಕ್ಕಾಗಿ ತರುವವರಾಗಲಿ. ದಿವಸದ ಆರನೆಯ ಭಾಗದಲ್ಲಿ ದ್ರೌಪದಿಯು ನಿನ್ನ ಸೇವೆ ಮಾಡಲು ನಿನ್ನ ಸಮೀಪಕ್ಕೆ ಬರುವಳು.

ಅಗ್ನೀನ್ ಜುಹೋತು ವೈ ಧೌಮ್ಯಃ ಸಂಶಿತಾತ್ಮಾ ದ್ವಿಜೋತ್ತಮಃ ।
ಪುರೋಹಿತಃ ಪಾಂಡವಾನಾಂ ಬ್ರಹ್ಮಕರ್ಮಣ್ಯವಸ್ಥಿತಃ ॥೧೭॥

ಪಾಂಡವರ ಪುರೋಹಿತರೂ, ಬ್ರಹ್ಮಕರ್ಮಗಳಲ್ಲಿ ನಿಷ್ಣಾತರೂ, ಮನೋನಿಗ್ರಹ ಉಳ್ಳವರೂ, ದ್ವಿಜಶ್ರೇಷ್ಠರೂ ಆದ ಧೌಮ್ಯರು ಅಗ್ನಿಗಳಲ್ಲಿ ಹೋಮಗಳನ್ನು ಮಾಡಲಿ.

ಅದ್ಯ ತ್ವಾಮಭಿಷಿಂಚಂತು ವಿದ್ವಾಂಸಶ್ಚ ದ್ವಿಜಾತಯಃ ।
ತಥೈವ ಭ್ರಾತರಃ ಪಂಚ ಪಾಂಡವಾಃ ಪುರುಷರ್ಷಭಾಃ ॥೧೮॥

ಈ ದಿನ ವಿದ್ವಾಂಸರಾದ ಬ್ರಾಹ್ಮಣರೂ, ಪುರುಷರ್ಷಭರಾದ ನಿನ್ನ ಸಹೋದರರಾದ ಪಂಚಪಾಂಡವರೂ ನಿನಗೆ ಅಭಿಷೇಕವನ್ನು ಮಾಡಲಿ.

ದ್ರೌಪದೇಯಾಸ್ತಥಾ ಪಂಚ ಪಾಂಚಾಲಾಶ್ಚೇದಯಸ್ತಥಾ ।
ಅಹಂ ಚಾಪ್ಯಭಿಷೇಕ್ಷ್ಯಾಮಿ ರಾಜಾನಂ ಪೃಥಿವೀಪತಿಮ್ ॥೧೯॥

ಯುವರಾಜೋಽಸ್ತು ತೇ ರಾಜಾ ಧರ್ಮಪುತ್ರೋ ಯುಧಿಷ್ಠಿರಃ ॥೨೦॥

ದ್ರೌಪದಿಯ ಐವರು ಮಕ್ಕಳೂ, ಪಾಂಚಾಲರೂ, ಚೇದಿಗಳೂ ಮತ್ತು ನಾನೂ ಸಹ ನಿನಗೆ ಪೃಥಿವೀಪತಿಯಾಗಿ ರಾಜನಾಗಿ ಅಭಿಷೇಕವನ್ನು ಮಾಡುವೆನು. ಧರ್ಮಪುತ್ರನಾದ ಯುಧಿಷ್ಠಿರನು ಯುವರಾಜನಾಗಲಿ.

ಗೃಹೀತ್ವಾ ವ್ಯಜನಂ ಶ್ವೇತಂ ಧರ್ಮಾತ್ಮಾ ಸಂಶಿತವ್ರತಃ ।
ಉಪಾನ್ವಾರೋಹತು ರಥಂ ಕುಂತೀಪುತ್ರೋ ಯುಧಿಷ್ಠಿರಃ ॥೨೧॥

ಕುಂತೀಪುತ್ರನೂ, ಧರ್ಮಾತ್ಮನೂ, ಒಳ್ಳೆಯ ವ್ರತನಿಷ್ಠನೂ ಆದ ಯುಧಿಷ್ಠಿರನು ಶ್ವೇತವ್ಯಜನವನ್ನು ಹಿಡಿದು ನಿನ್ನ ನಂತರ ರಥವನ್ನು ಏರಲಿ.

ಛತ್ರಂ ಚ ತೇ ಮಹಾಶ್ವೇತಂ ಭೀಮಸೇನೋ ಮಹಾಬಲಃ ।
ಅಭಿಷಿಕ್ತಸ್ಯ ಕೌಂತೇಯೋ ಧಾರಯಿಷ್ಯತಿ ಮೂರ್ಧನಿ ॥೨೨॥

ಮಹಾಬಲನಾದ ಭೀಮಸೇನನು ಅಭಿಷಿಕ್ತನಾದ ನಿನ್ನ ಶಿರಸ್ಸಿನ ಮೇಲೆ ಬಹಳ ಶ್ವೇತವಾದ ಛತ್ರವನ್ನು ಹಿಡಿಯುವನು.

ಕಿಂಕಿಣೀಶತನಿರ್ಘೋಷಂ ವೈಯಾಘ್ರಪರಿವಾರಣಮ್ ।
ರಥಂ ಶ್ವೇತಹಯೈರ್ಯುಕ್ತಮರ್ಜುನೋ ವಾಹಯಿಷ್ಯತಿ ॥೨೩॥

ಅಭಿಮನ್ಯುಶ್ಚ ತೇ ನಿತ್ಯಂ ಪ್ರತ್ಯಾಸನ್ನೋ ಭವಿಷ್ಯತಿ ॥೨೪॥

ನೂರಾರು ಕಿಂಕಿಣಿಗಳ ಘೋಷದಿಂದ ಕೂಡಿದ, ವ್ಯಾಘ್ರಚರ್ಮಗಳಿಂದ ಸುತ್ತುವರಿಯಲ್ಪಟ್ಟ, ಶ್ವೇತಹಯಗಳಿಂದ ಕೂಡಿದ ರಥವನ್ನು ಅರ್ಜುನನು ಸಾರಥಿಯಾಗಿ ನಡೆಸುವನು. ಅಭಿಮನ್ಯುವೂ ಸಹ ಯಾವಾಗಲೂ ನಿನ್ನ ಸಮೀಪದಲ್ಲಿರುವನು.

ನಕುಲಃ ಸಹದೇವಶ್ಚ ದ್ರೌಪದೇಯಾಶ್ಚ ಪಂಚ ಯೇ ।
ಪಾಂಚಾಲಾಶ್ಚಾನುಯಾಸ್ಯಂತಿ ಶಿಖಂಡೀ ಚ ಮಹಾರಥಃ ॥೨೫॥

ನಕುಲ, ಸಹದೇವ, ದ್ರೌಪದಿಯ ಐವರು ಮಕ್ಕಳು, ಪಾಂಚಾಲರು, ಮಹಾರಥನಾದ ಶಿಖಂಡೀ ಎಲ್ಲರೂ ನಿನ್ನನ್ನು ಹಿಂಬಾಲಿಸುವರು.

ಅಹಂ ಚ ತ್ವಾಽನುಯಾಸ್ಯಾಮಿ ಸರ್ವೇ ಚಾಂಧಕವೃಷ್ಣಯಃ ।
ದಾಶಾರ್ಹಾಃ ಪರಿವಾರಾಸ್ತೇ ದಾಶಾರ್ಣಾಶ್ಚ ವಿಶಾಂಪತೇ ॥೨೬॥

ನಾನೂ ಮತ್ತು ಎಲ್ಲಾ ಅಂಧಕವೃಷ್ಣಿಗಳೂ ನಿನ್ನನ್ನು ಹಿಂಬಾಲಿಸುವೆವು. ಎಲೈ ರಾಜನೇ, ದಾಶಾರ್ಹರೂ ಮತ್ತು ದಾಶಾರ್ಣರು ನಿನಗೆ ಪರಿವಾರವಾಗುವರು.

ಭುಂಕ್ಷ್ವ ರಾಜ್ಯಂ ಮಹಾಬಾಹೋ ಭ್ರಾತೃಭಿಃ ಸಹ ಪಾಂಡವೈಃ ।
ಜಪೈರ್ಹೋಮೈಶ್ಚ ಸಂಯುಕ್ತೋ ಮಂಗಲೈಶ್ಚ ಪೃಥಗ್ವಿಧೈಃ ॥೨೭॥

ಎಲೈ ಮಹಾಬಾಹುವೇ, ಸಹೋದರರಾದ ಪಾಂಡವರಿಂದ ಸಹಿತನಾಗಿ, ಜಪ ಹೋಮಗಳನ್ನು ಮಾಡುತ್ತಾ ಅನೇಕ ವಿಧವಾದ ಮಂಗಳಗಳಿಂದ ಕೂಡಿ ರಾಜ್ಯವನ್ನು ಭೋಗಿಸು.

ಪುರೋಗಮಾಶ್ಚ ತೇ ಸಂತು ದ್ರಮಿಡಾಃ ಸಹ ಕುಂತಲೈಃ ।
ಆಂಧ್ರಾಸ್ತಾಲವರಾಶ್ಚೈವ ಚುಂಚುಪಾ ವೇಣುಪಾಸ್ತಥಾ ॥೨೮॥

ದ್ರಮಿಡರೂ, ಕುಂತಲರೂ, ಆಂಧ್ರರೂ, ತಾಲವರರೂ, ಚುಂಚುಪರೂ ಮತ್ತು ವೇಣುಪರೂ ನಿನ್ನ ಮುಂದೆ ಹೋಗುವವರಾಗಲಿ.

ಸ್ತುವಂತು ತ್ವಾಂ ಚ ಬಹುಭಿಃ ಸ್ತುತಿಭಿಃ ಸೂತಮಾಗಧಾಃ ।
ವಿಜಯಂ ವಸುಷೇಣಸ್ಯ ಘೋಷಯಂತು ಚ ಪಾಂಡವಾಃ ॥೨೯॥

ಸೂತ-ಮಾಗಧರು ನಿನ್ನನ್ನು ಅನೇಕ ಸ್ತೋತ್ರಗಳಿಂದ ಸ್ತೋತ್ರ ಮಾಡಲಿ. ಪಾಂಡವರು ವಸುಷೇಣನ (ನಿನ್ನ) ವಿಜಯವನ್ನು ಘೋಷಣೆ ಮಾಡಲಿ.

ಸ ತ್ವಂ ಪರಿವೃತಃ ಪಾರ್ಥೈಃ ನಕ್ಷತ್ರೈರಿವ ಚಂದ್ರಮಾಃ ।
ಪ್ರಶಾಧಿ ರಾಜ್ಯಂ ಕೌಂತೇಯ ಕುಂತೀಂ ಚ ಪ್ರತಿನಂದಯ ॥೩೦॥

ಎಲೈ ಕುಂತೀಪುತ್ರನೇ, ನೀನು ನಕ್ಷತ್ರಗಳಿಂದ ಚಂದ್ರನು ಪರಿವೃತನಾದಂತೆ, ಪಾಂಡವರಿಂದ ಪರಿವೃತನಾಗಿ, ರಾಜ್ಯವನ್ನು ಆಳಿ ಕುಂತಿಯನ್ನು ಸಂತೋಷಪಡಿಸು.

ಮಿತ್ರಾಣಿ ತೇ ಪ್ರಹೃಷ್ಯಂತು ವ್ಯಥಂತು ರಿಪವಸ್ತಥಾ ।
ಸೌಭ್ರಾತ್ರಂ ಚೈವ ತೇಽದ್ಯಾಸ್ತು ಭ್ರಾತೃಭಿಃ ಸಹ ಪಾಂಡವೈಃ ॥೩೧॥

ನಿನ್ನ ಮಿತ್ರರು ಸಂತೋಷಪಡಲಿ. ಶತ್ರುಗಳು ವ್ಯಥೆಯನ್ನು ಹೊಂದಲಿ. ಈ ದಿನ ಸಹೋದರರಾದ ಪಾಂಡವರ ಜೊತೆಯಲ್ಲಿ ನಿನಗೆ ಸೌಭ್ರಾತೃತ್ವ ಉಂಟಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕೋನಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

॥ ವಿವಾದಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತನೆಯ ಅಧ್ಯಾಯ

ಕೃಷ್ಣನ ಮಾತುಗಳಿಗೆ ಕರ್ಣನ ಉತ್ತರ ಮತ್ತು ಕೃಷ್ಣನ ಸಲಹೆಯ ನಿರಾಕರಣೆ.

ಕರ್ಣಃ

ಅಸಂಶಯಂ ಸೌಹೃದಾನ್ಮೇ ಪ್ರಣಯಾಚ್ಚಾತ್ಥ ಕೇಶವ ।
ಸಖ್ಯೇನ ಚೈವ ವಾರ್ಷ್ಣೇಯ ಶ್ರೇಯಸ್ಕಾಮತಯೈವ ಚ ॥೧॥

ಕರ್ಣ– ಎಲೈ ಕೇಶವನೇ, ವಾರ್ಷ್ಣೇಯನೇ, ನಿಸ್ಸಂಶಯವಾಗಿ ನನ್ನ ಮೇಲಿನ ಸ್ನೇಹದಿಂದ, ಸಖ್ಯದಿಂದ ನನ್ನ ಶ್ರೇಯಸ್ಸನ್ನು ಬಯಸಿ ನೀನು ಮಾತನಾಡಿದ್ದೀಯೆ.

ಸರ್ವಂ ಚೈವಾಭಿಜಾನಾಮಿ ಪಾಂಡೋಃ ಪುತ್ರೋऽಸ್ಮಿ ಧರ್ಮತಃ ।
ನಿಶ್ಚಯಾದ್ ಧರ್ಮಶಾಸ್ತ್ರಾಣಾಂ ಯಥಾ ತ್ವಂ ಕೃಷ್ಣ ಮನ್ಯಸೇ ॥೨॥

ಎಲೈ ಕೃಷ್ಣನೇ, ನಾನು ಧರ್ಮಶಾಸ್ತ್ರಕ್ಕೆ ಅನುಗುಣವಾಗಿ, ಧಾರ್ಮಿಕವಾಗಿ ಪಾಂಡುವಿನ ಪುತ್ರನಾಗಿದ್ದೇನೆ ಎಂದು ನೀನು ಹೇಳುವಂತೆಯೇ ಅಂಗೀಕರಿಸಿದ್ದೇನೆ.

ಕನ್ಯಾ ಗರ್ಭಂ ಸಮಾಧತ್ತ ಭಾಸ್ಕರಾನ್ಮಾಂ ಜನಾರ್ದನ ।
ಆದಿತ್ಯವಚನಾಚ್ಚೈವ ಜಾತಂ ಮಾಂ ಸಾ ವ್ಯಸರ್ಜಯತ್ ॥೩॥

ಎಲೈ ಜನಾರ್ದನನೇ, ಸೂರ್ಯನ ಮಾತಿನಂತೆ ಸೂರ್ಯನಿಂದ ಕನ್ಯೆಯಾದ ತಾಯಿಯು ಗರ್ಭವನ್ನು ಧರಿಸಿದಳು ಮತ್ತು ನಾನು ಹುಟ್ಟಿದ ಮೇಲೆ ನನ್ನನ್ನು ವಿಸರ್ಜಿಸಿದಳು.

ಸೋಽಸ್ಮಿ ಕೃಷ್ಣ ತಥಾ ಜಾತಃ ಪಾಂಡೋಃ ಪುತ್ರೋಽಸ್ಮಿ ಧರ್ಮತಃ ।
ಕುಂತ್ಯಾ ತ್ವಹಮವಾಕೀರ್ಣೋ ಯಥಾ ನ ಕುಲಜಸ್ತಥಾ ॥೪॥

ಎಲೈ ಕೃಷ್ಣನೇ, ನಾನು ಹಾಗೆ ಹುಟ್ಟಿದವನು. ಧರ್ಮದ ದೃಷ್ಟಿಯಿಂದ ಪಾಂಡುವಿನ ಪುತ್ರನಾಗಿದ್ದೇನೆ. ಕುಂತಿಯು ನಾನು ಕುಲೀನಪುತ್ರನಲ್ಲವೋ ಎಂಬಂತೆ ನನ್ನನ್ನು ನೀರಿನಲ್ಲಿ ತೊರೆದಳು.

ಸೂತೋ ಹಿ ಮಾಮಧಿರಥೋ ದೃಷ್ಟ್ವೋವಾಂಭಸಿ ವಾ ಪ್ಲುತಮ್ ।
ರಾಧಾಯೈ ಸ ಚ ಮಾಂ ಪ್ರಾದಾತ್ ಸೌಹಾರ್ದಾನ್ಮಧುಸೂದನ ॥೫॥

ಎಲೈ ಮಧುಸೂದನನೇ, ನಾನು ನೀರಿನಲ್ಲಿ ತೇಲಿಹೋಗುತ್ತಿದ್ದುದನ್ನು ನೋಡಿದ ಸೂತನಾದ ಅಧಿರಥನು ಪ್ರೀತಿಯಿಂದ ನನ್ನನ್ನು ತೆಗೆದುಕೊಂಡು ರಾಧೆಯ ಕೈಯಲ್ಲಿ ಕೊಟ್ಟನು.

ಮತ್ಸ್ನೇಹಾಚ್ಚೈವ ರಾಧಾಯಾಃ ಸದ್ಯಃ ಕ್ಷೀರಮವಾಪತತ್ ।
ಸಾ ಮೇ ಮೂತ್ರಂ ಪುರೀಷಂ ಚ ಪ್ರತಿಜಗ್ರಾಹ ಕೇಶವ ॥೬॥

ನನ್ನ ಮೇಲಿನ ಸ್ನೇಹದಿಂದ ರಾಧೆಗೆ ತಕ್ಷಣ ಸ್ತನಗಳಲ್ಲಿ ಕ್ಷೀರವು ಉದ್ಭವಿಸಿತು. ಎಲೈ ಕೇಶವನೇ, ಅವಳು ನನ್ನ ಮಲ-ಮೂತ್ರಗಳನ್ನು ತೆಗೆದಿದ್ದಾಳೆ.

ತಸ್ಯಾಃ ಪಿಂಡವ್ಯಪನಯಂ ಕುರ್ಯಾದಸ್ಮದ್ವಿಧಃ ಕಥಮ್ ।
ಧರ್ಮವಿದ್ ಧರ್ಮಶಾಸ್ತ್ರಾಣಾಂ ಶ್ರವಣೇ ಸತತಂ ರತಃ ॥೭॥

ಧರ್ಮಜ್ಞನೂ, ಸತತವಾಗಿ ಧರ್ಮಶಾಸ್ತ್ರದ ಶ್ರವಣದಲ್ಲಿ ಆಸಕ್ತನಾದವನೂ ಆದ ನನ್ನಂತಹವನು ಅವಳ ಋಣವನ್ನು ಹೇಗೆ ತೀರಿಸಬೇಕು?

ತಥಾ ಮಾಮಭಿಜಾನಾತಿ ಸೂತಶ್ಚಾಧಿರಥಃ ಸುತಮ್ ।
ಪಿತರಂ ಚಾಭಿಜಾನಾಮಿ ತಮಹಂ ಸೌಹೃದಾತ್ ಸದಾ ॥೮॥

ಹಾಗೆಯೇ ಸೂತನಾದ ಅಧಿರಥನು ನನ್ನನ್ನು ಮಗನೆಂದೇ ತಿಳಿದಿದ್ದಾನೆ. ಅವನ ಮೇಲಿನ ಪ್ರೀತಿಯಿಂದ ನಾನೂ ಅವನನ್ನು ಯಾವಾಗಲೂ ತಂದೆ ಎಂದೇ ತಿಳಿದಿದ್ದೇನೆ.

ಸ ಹಿ ಮೇ ಜಾತಕರ್ಮಾದಿ ಕಾರಯಾಮಾಸ ಧರ್ಮತಃ ।
ಶಾಸ್ತ್ರದೃಷ್ಟೇನ ವಿಧಿನಾ ಪುತ್ರಪ್ರೀತ್ಯಾ ಜನಾರ್ದನ ॥೯॥

ಎಲೈ ಜನಾರ್ದನನೇ, ಅವನು ಪುತ್ರವಾತ್ಸಲ್ಯದಿಂದ ನನಗೆ ಶಾಸ್ತ್ರವಿಹಿತವಾದ ರೀತಿಯಲ್ಲಿ ಧಾರ್ಮಿಕವಾಗಿ ಜಾತಕರ್ಮಾದಿ ಕ್ರಿಯೆಗಳನ್ನು ಮಾಡಿಸಿದನು.

ನಾಮ ವೈ ವಸುಷೇಣೇತಿ ಕಾರಯಾಮಾಸ ವೈ ದ್ವಿಜೈಃ ।
ಭಾರ್ಯಾಶ್ಚೋಢಾ ಮಮ ಪಾಪ್ತೇ ಯೌವನೇ ತತ್ಪರಿಗ್ರಹಾತ್ ॥೧೦॥

ಬ್ರಾಹ್ಮಣರಿಂದ ನನಗೆ ವಸುಷೇಣನೆಂದು ನಾಮಕರಣ ಮಾಡಿಸಿದನು. ನಾನು ಯೌವನವನ್ನು ಹೊಂದುತ್ತಿರಲು, ಅವನು ನನಗೆ ಕನ್ಯೆಯರನ್ನು ಕೊಟ್ಟು ವಿವಾಹ ಮಾಡಿಸಿದನು.

ತಾಸು ಪುತ್ರಾಶ್ಚ ಪೌತ್ರಾಶ್ಚ ಮಮ ಜಾತಾ ಜನಾರ್ದನ ।
ತಾಸು ಮೇ ಹೃದಯಂ ಕೃಷ್ಣ ಸಂಜಾತಂ ಕಾಮಬಂಧನಮ್ ॥೧೧॥

ಎಲೈ ಜನಾರ್ದನನೇ, ಅವರಲ್ಲಿ ನನಗೆ ಪುತ್ರರೂ, ಪೌತ್ರರೂ ಜನಿಸಿದ್ದಾರೆ. ಎಲೈ ಕೃಷ್ಣನೇ, ನನಗೆ ಅವರಲ್ಲಿ ಕಾಮಬಂಧನವಾದ ಪ್ರೀತಿ ಉಂಟಾಗಿದೆ.

ನ ಪೃಥಿವ್ಯಾ ಸಕಲಯಾ ನ ಸುವರ್ಣಸ್ಯ ರಾಶಿಭಿಃ ।
ಹರ್ಷಾದ್ ಭಯಾದ್ ವಾ ಗೋವಿಂದ ಮಿಥ್ಯಾ ಕರ್ತುಂ ತದುತ್ಸಹೇ ॥

ಗೋವಿಂದನೇ, ಸಮಗ್ರವಾದ ಪೃಥಿವಿಗಾಗಿ ಅಥವಾ ಸುವರ್ಣದ ರಾಶಿಗಾಗಿ ಅಥವಾ ಹರ್ಷದಿಂದ ಅಥವಾ ಭಯದಿಂದ ನಾನು ಅದನ್ನು ತ್ಯಜಿಸಲು (ಸುಳ್ಳಾಗಿಸಲು) ಬಯಸುವುದಿಲ್ಲ.

ಧೃತರಾಷ್ಟ್ರಕುಲೇ ಕೃಷ್ಣ ದುರ್ಯೋಧನಸಮಾಶ್ರಯಾತ್ ।
ಮಯಾ ತ್ರಯೋದಶ ಸಮಾ ಭುಕ್ತಂ ರಾಜ್ಯಮಕಂಟಕಮ್ ॥೧೩॥

ಎಲೈ ಕೃಷ್ಣನೇ, ದುರ್ಯೋಧನನನ್ನು ಆಶ್ರಯಿಸಿ, ನಾನು ಧೃತರಾಷ್ಟ್ರನ ವಂಶದಲ್ಲಿ ಹದಿಮೂರು ವರ್ಷಗಳ ಕಾಲ ನಿಷ್ಕಂಟಕವಾದ ರಾಜ್ಯವನ್ನು ಭೋಗಿಸಿದೆ.

ಇಷ್ಟಂ ಚ ಬಹುಭಿರ್ಯಜ್ಞೈಃ ಸಹ ಪುತ್ರೈರ್ಮಯಾऽಸಕೃತ್ ।
ಆವಾಹಾಶ್ಚ ವಿವಾಹಾಶ್ಚ ಸಹ ಸೂತೈರ್ಮಯಾ ಕೃತಾಃ ॥೧೪॥

ಮಕ್ಕಳ ಜೊತೆಯಲ್ಲಿ ಅನೇಕ ಬಾರಿ ಬಹುವಿಧವಾದ ಯಜ್ಞವನ್ನು ಮಾಡಿದೆ. ಸೂತರ ಮನೆಯಿಂದ ಕನ್ಯೆಯರನ್ನು ತಂದು, ಸೂತರಿಗೆ ಕನ್ಯೆಯರನ್ನು ಕೊಟ್ಟು ಸಂಬಂಧವನ್ನೂ ಬೆಳೆಸಿದೆ.

ಮಾಂ ಚ ಕೃಷ್ಣ ಸಮಾಸಾದ್ಯ ಕೃತಃ ಶಸ್ತ್ರಸಮುದ್ಯಮಃ ।
ದುರ್ಯೋಧನೇನ ವಾರ್ಷ್ಣೇಯ ವಿಗ್ರಹಶ್ಚಾಪಿ ಪಾಂಡವೈಃ ॥೧೫॥

ಎಲೈ ಕೃಷ್ಣನೇ, ಎಲೈ ವಾರ್ಷ್ಣೇಯನೇ, ನನ್ನನ್ನು ಆಶ್ರಯಿಸಿ ದುರ್ಯೋಧನನು ಪಾಂಡವರ ಜೊತೆಯಲ್ಲಿ ವಿರೋಧವನ್ನು ಮಾಡಿ ಶಸ್ತ್ರವ್ಯಾಪಾರದಲ್ಲಿ ಉದ್ಯುಕ್ತನಾಗಿದ್ದಾನೆ.

ತಸ್ಮಾದ್ ರಣೇ ದ್ವೈರಥೇ ಮಾಂ ಪ್ರತ್ಯುದ್ಯಾತಾರಮಚ್ಯುತ ।
ವೃತವಾನ್ ಪರಮಂ ಕೃಷ್ಣ ಪ್ರತಿಘಂ ಸವ್ಯಸಾಚಿನಃ ॥೧೬॥

ಆದ್ದರಿಂದ ಎಲೈ ಕೃಷ್ಣನೇ, ಅಚ್ಯುತನೇ, ದ್ವಂದ್ವಯುದ್ಧದಲ್ಲಿ ನಾನು ಸವ್ಯಸಾಚಿಯಾದ ಅರ್ಜುನನಿಗೆ ಪ್ರತಿರೋಧಕನೆಂದೂ ಅವನಿಗೆ ಎದುರಾಗಿ ಯುದ್ಧವನ್ನು ಮಾಡುವವನೆಂದೂ ಅವನು ನನ್ನನ್ನು ವರಿಸಿದ್ದಾನೆ.

ವಧಾದ್ ಬಂಧಾದ್ ಭಯಾದ್ ವಾऽಪಿ
ಲೋಭಾದ್ ವಾऽಪಿ ಜನಾರ್ದನ ।
ಅನೃತಂ ನೋತ್ಸಹೇ ಕರ್ತುಂ ಧಾರ್ತರಾಷ್ಟ್ರಸ್ಯ ಧೀಮತಃ ॥೧೭॥

ಎಲೈ ಜನಾರ್ದನನೇ, ವಧೆಯಿಂದಾಗಲೀ, ಬಂಧದಿಂದಾಗಲೀ, ಭಯದಿಂದಾಗಲೀ, ಲೋಭದಿಂದಾಗಲೀ ಮೇಧಾವಿಯಾದ ದುರ್ಯೋಧನನಿಗೆ ನಾನು ಅನೃತವನ್ನು ಮಾಡಲಾರೆ (ಅವನ ಜೊತೆಯಲ್ಲಿ ಸುಳ್ಳು ಹೇಳಿ ವರ್ತಿಸಲಾರೆ).

ಯದಿ ಹ್ಯದ್ಯ ನ ಗಚ್ಛೇಯಂ ದ್ವೈರಥಂ ಸವ್ಯಸಾಚಿನಾ ।
ಅಕೀರ್ತಿಃ ಸ್ಯಾದ್ ಹೃಷೀಕೇಶ ಮಮ ಪಾರ್ಥಸ್ಯ ಚೋಭಯೋಃ ॥೧೮॥

ಎಲೈ ಹೃಷೀಕೇಶನೇ, ಈ ದಿನ ನಾನು ದ್ವೈರಥದಲ್ಲಿ ಸವ್ಯಸಾಚಿಯನ್ನು ಎದುರಿಸದಿದ್ದರೆ ನನಗೂ ಮತ್ತು ಅರ್ಜುನ, ಇಬ್ಬರಿಗೂ ಅಕೀರ್ತಿ ಉಂಟಾದೀತು!

ಅಸಂಶಯಂ ಹಿತಾರ್ಥಾಯ ಬ್ರೂಯಾಸ್ತ್ವಂ ಮಧುಸೂದನ ।
ಸರ್ವಂ ಚ ಪಾಂಡವಾಃ ಕುರ್ಯುಃ ತ್ವದ್ವಶಾ ಹ್ಯದ್ಯ ಪಾಂಡವಾಃ ॥೧೯॥

ಎಲೈ ಮಧುಸೂದನನೇ, ನೀನು ನಿಸ್ಸಂಶಯವಾಗಿ ನಮ್ಮ ಹಿತಕ್ಕಾಗಿಯೇ ಮಾತನಾಡಿದ್ದೀಯೆ. ಈ ದಿನ ನಿನ್ನ ವಶದಲ್ಲಿರುವ ಪಾಂಡವರು ನೀನು ಹೇಳಿದಂತೆಯೇ ಎಲ್ಲವನ್ನೂ ಮಾಡಿಯಾರು.

ಮಂತ್ರಸ್ಯ ನಿಯಮಂ ಕುರ್ಯಾಸ್ತ್ವಮತ್ರ ಮಧುಸೂದನ ।
ಏತದತ್ರ ಹಿತಂ ಮನ್ಯೇ ಸರ್ವಯಾದವನಂದನ ॥೨೦॥

ಮಧುಸೂದನನೇ, ನಮ್ಮ ಮಂತ್ರಾಲೋಚನೆಯನ್ನು ನೀನು ಇಲ್ಲಿ ರಹಸ್ಯವಾಗಿ ಇಡಬೇಕು. ಸರ್ವಯಾದವನಂದನನೇ, ಇದು ಹಿತವೆಂದು ನಾನು ಭಾವಿಸುತ್ತೇನೆ.

ಯದಿ ಜಾನಾತಿ ಮಾಂ ರಾಜಾ ಧರ್ಮಾತ್ಮಾ ಸಂಶಿತವ್ರತಃ ।
ಕುಂತ್ಯಾಃ ಪ್ರಥಮಜಂ ಪುತ್ರಂ ನ ಸ ರಾಜ್ಯಂ ಗ್ರಹೀಷ್ಯತಿ ॥೨೧॥

ಧರ್ಮಾತ್ಮನೂ, ಶ್ರೇಷ್ಠವಾದ ವ್ರತಗಳನ್ನು ಆಚರಿಸುವವನೂ ಆದ ಯುಧಿಷ್ಠಿರನು ನನ್ನನ್ನು ಕುಂತಿಯ ಪ್ರಥಮಪುತ್ರನೆಂದು ತಿಳಿದರೆ ಅವನು ರಾಜ್ಯವನ್ನು ಸ್ವೀಕರಿಸುವುದಿಲ್ಲ.

ಪ್ರಾಪ್ಯ ಚಾಪಿ ಮಹದ್ ರಾಜ್ಯಂ ತದಹಂ ಮಧುಸೂದನ ।
ಸ್ಫೀತಂ ದುರ್ಯೋಧನಾಯೈವ ಸಂಪ್ರದದ್ಯಾಮರಿಂದಮ ॥೨೨॥

ಎಲೈ ಮಧುಸೂದನನೇ, ಅಂತಹ ಪರಿಶುದ್ಧವಾದ ದೊಡ್ಡ ರಾಜ್ಯವನ್ನು ನಾನು ಪಡೆದರೂ, ಎಲೈ ಅರಿಂದಮನೇ, ನಾನು ಅದನ್ನು ದುರ್ಯೋಧನನಿಗೇ ಕೊಟ್ಟೇನು.

ಸ ಏವ ರಾಜಾ ಧರ್ಮಾತ್ಮಾ ಶಾಶ್ವತೋಽಸ್ತು ಯುಧಿಷ್ಠಿರಃ ।
ನೇತಾ ಯಸ್ಯ ಹೃಷೀಕೇಶೋ ಯೋದ್ಧಾ ಯಸ್ಯ ಧನಂಜಯಃ ॥೨೩॥

ಯಾವನಿಗೆ ಹೃಷೀಕೇಶನು ನಾಯಕನಾಗಿದ್ದಾನೆಯೋ, ಅರ್ಜುನನು ಯೋಧನಾಗಿದ್ದಾನೆಯೋ ಅಂತಹ ಧರ್ಮಾತ್ಮನಾದ ಯುಧಿಷ್ಠಿರನೇ ಶಾಶ್ವತವಾಗಿ ರಾಜನಾಗಲಿ.

ಪೃಥಿವೀ ತಸ್ಯ ರಾಷ್ಟ್ರಂ ಚ ಯಸ್ಯ ಭೀಮೋ ಮಹಾರಥಃ ।
ನಕುಲಃ ಸಹದೇವಶ್ಚ ದ್ರೌಪದೇಯಾಶ್ಚ ಮಾಧವ ॥೨೪॥

ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಸಾತ್ಯಕಿಶ್ಚ ಮಹಾರಥಃ ।
ಉತ್ತಮೌಜಾ ಯುಧಾಮನ್ಯುಃ ಸತ್ಯಧರ್ಮಾ ಚ ಸೌಮಕಿಃ ॥೨೫॥

ಚೈದ್ಯಶ್ಚ ಚೇಕಿತಾನಶ್ಚ ಶಿಖಂಡೀ ಚಾಪರಾಜಿತಃ ।
ಇಂದ್ರಗೋಪಕವರ್ಣಾಶ್ವಾಃ ಕೇಕಯಾ ಭ್ರಾತರಸ್ತಥಾ ॥೨೬॥

ಇಂದ್ರಾಯುಧಸವರ್ಣಾಶ್ವಃ ಕುಂತಿಭೋಜೋ ಮಹಾಮನಾಃ ॥೨೭॥

ಮಾತುಲೋ ಭೀಮಸೇನಸ್ಯ ಶ್ಯೇನಜಿಚ್ಚ ಮಹಾರಥಃ ।
ಶಂಖಃ ಪುತ್ರೋ ವಿರಾಟಸ್ಯ ನಿಧಿಸ್ತ್ವಂ ಚ ಜನಾರ್ದನ ॥೨೮॥

ಎಲೈ ಮಾಧವನೇ, ಯಾವನಿಗೆ ಭೀಮನು ಮಹಾರಥನೋ, ಯಾವನ ಬಳಿಯಲ್ಲಿ ನಕುಲ-ಸಹದೇವರೂ, ದ್ರೌಪದಿಯ ಪುತ್ರರೂ ಇದ್ದಾರೆಯೋ, ಪಾಂಚಾಲದೇಶದ ಧೃಷ್ಟದ್ಯುಮ್ನ, ಮಹಾರಥನಾದ ಸಾತ್ಯಕಿ, ಉತ್ತಮೌಜಾ, ಯುಧಾಮನ್ಯು, ಸತ್ಯಧರ್ಮಾ, ಸೋಮಕಪುತ್ರನಾದ ದ್ರುಪದ, ಚೈದ್ಯ, ಚೇಕಿತಾನ, ಅಪರಾಜಿತನಾದ ಶಿಖಂಡೀ, ಕೆಂಪಾದ ಅಶ್ವಗಳನ್ನು ಹೊಂದಿದ ಕೇಕಯದೇಶದ ಐದು ಜನ ಸಹೋದರರು, ಕಾಮನ ಬಿಲ್ಲಿನ ಬಣ್ಣದ ಅಶ್ವಗಳನ್ನು ಹೊಂದಿರುವ ಧೈರ್ಯಶಾಲಿಯಾದ ಕುಂತಿಭೋಜ, ಭೀಮಸೇನನ ಸೋದರಮಾವನಾದ ಮಹಾರಥನಾದ ಶ್ಯೇನಜಿತ್, ವಿರಾಟನ ಪುತ್ರನಾದ ಶಂಖ, ಇವರು ಇದ್ದಾರೆಯೋ ಮತ್ತು ಜನಾರ್ದನನೇ, ನೀನು ನಿಧಿಯಾಗಿದ್ದೀಯೋ ಅವನದೇ ಪೃಥಿವಿ, ಅವನದೇ ರಾಷ್ಟ್ರ.

ಮಹಾನಯಂ ಕೃಷ್ಣ ಕೃತಃ ಕ್ಷತ್ರಸ್ಯ ಸಮುದಾಗಮಃ ।
ರಾಜ್ಯಂ ಪ್ರಾಪ್ತಮಿದಂ ದೀಪ್ತಂ ಪ್ರಥಿತಂ ಸರ್ವರಾಜಸು ॥೨೯॥

ಎಲೈ ಕೃಷ್ಣನೇ, ಕ್ಷತ್ರಿಯರ ದೊಡ್ಡ ಉದ್ಯೋಗವನ್ನು ಮಾಡಿ, ಎಲ್ಲ ರಾಜರಲ್ಲಿ ಪ್ರಸಿದ್ಧವಾದ ದೀಪ್ತವಾದ ಈ ರಾಜ್ಯವನ್ನು ಅವನೇ ಹೊಂದುವನು.

ಧಾರ್ತರಾಷ್ಟ್ರಸ್ಯ ವಾರ್ಷ್ಣೇಯ ಶಸ್ತ್ರಯಜ್ಞೋ ಭವಿಷ್ಯತಿ ।
ಅಸ್ಯ ಯಜ್ಞಸ್ಯ ವೇತ್ತಾ ತ್ವಂ ಭವಿಷ್ಯಸಿ ಜನಾರ್ದನ ॥೩೦॥

ಎಲೈ ಜನಾರ್ದನನೇ, ವಾರ್ಷ್ಣೇಯನೇ, ದುರ್ಯೋಧನನ ಶಸ್ತ್ರಯಜ್ಞವು ಉಂಟಾಗುವುದು. ನೀನು ಆ ಯಜ್ಞವನ್ನು ತಿಳಿಯುವವನಾಗುವಿ.

ಆಧ್ವರ್ಯವಂ ಚ ತೇ ಕೃಷ್ಣ ಕ್ರತಾವಸ್ಮಿನ್ ಭವಿಷ್ಯತಿ ।
ಹೋತಾ ಚೈವಾತ್ರ ಬೀಭತ್ಸುಃ ಸನ್ನದ್ಧಃ ಸ ಕಪಿಧ್ವಜಃ ॥೩೧॥

ಗಾಂಡೀವಂ ಸ್ರುಕ್ ತಥಾ ಚಾಜ್ಯಂ ವೀರ್ಯಂ ಪುಂಸಾಂ ಭವಿಷ್ಯತಿ ॥

ಎಲೈ ಕೃಷ್ಣನೇ, ಈ ಯಜ್ಞದಲ್ಲಿ ನೀನೇ ಆಧ್ವರ್ಯುವಾಗುವಿ. ಕಪಿಧ್ವಜನೂ ಯುದ್ಧ ಸನ್ನದ್ಧನೂ ಆದ ಅರ್ಜುನನು ಹೋತೃವಾಗುವನು. ಗಾಂಡೀವವು ಸ್ರುಕ್, ಪುರುಷರ ವೀರ್ಯವೇ ಆಜ್ಯವಾಗುವುದು.

ಐಂದ್ರಂ ಪಾಶುಪತಂ ಬ್ರಾಹ್ಮಂ ಸ್ಥೂಣಾಕರ್ಣಂ ಚ ಮಾಧವ ।
ಮಂತ್ರಾಸ್ತತ್ರ ಭವಿಷ್ಯಂತಿ ಪ್ರಯುಕ್ತಾಃ ಸವ್ಯಸಾಚಿನಾ ॥೩೩॥

ಐಂದ್ರ, ಪಾಶುಪತ, ಬ್ರಾಹ್ಮ, ಸ್ಥೂಣಾಕರ್ಣ ಮೊದಲಾದ ಅಸ್ತ್ರಗಳು ಎಲೈ ಮಾಧವನೇ, ಸವ್ಯಸಾಚಿಯಿಂದ ಪ್ರಯೋಗಿಸಲ್ಪಡುವ ಮಂತ್ರಗಳಾಗುವವು.

ಅನುಜಾತಶ್ಚ ಪಿತರಮಧಿಕೋ ವಾ ಪರಾಕ್ರಮೇ ।
ಗ್ರಾವಸ್ತೋತ್ರಂ ಸ ಸೌಭದ್ರಃ ಸಮ್ಯಕ್ ತತ್ರ ಕರಿಷ್ಯತಿ ॥೩೪॥

ತಂದೆಯನ್ನು ಅನುಸರಿಸಿ ಜನಿಸಿದ ಅಥವಾ ಪರಾಕ್ರಮದಲ್ಲಿ ತಂದೆಗಿಂತಲೂ ಅಧಿಕನಾದ ಅಭಿಮನ್ಯುವು ಅಲ್ಲಿ ಸೋಮರಸವನ್ನು ಹಿಂಡುವ ಶಿಲೆಗಳ ಸ್ತೋತ್ರವನ್ನು ಚೆನ್ನಾಗಿ ಮಾಡುವನು.

ಉದ್ಗಾತಾऽತ್ರ ಪುನರ್ಭೀಮಃ ಪ್ರಸ್ತೋತಾ ಚ ಮಹಾಬಲಃ ।
ವಿನದನ್ ಸ ನರವ್ಯಾಘ್ರೋ ನಾಗಾನೀಕಾಂತಕೃದ್ ರಣೇ ॥೩೫॥

ಮಹಾನಾದವನ್ನು ಮಾಡುತ್ತಾ, ಯುದ್ಧದಲ್ಲಿ ಗಜಗಳ ಸಮೂಹವನ್ನು ನಾಶಮಾಡುವ ಮಹಾಬಲನಾದ, ನರವ್ಯಾಘ್ರನಾದ ಭೀಮನು ಆ ಯಜ್ಞದಲ್ಲಿ ಉದ್ಗಾತೃವೂ ಮತ್ತು ಪ್ರಸ್ತೋತೃವೂ ಆಗುವನು.

ಸ ಚೈವ ತತ್ರ ಧರ್ಮಾತ್ಮಾ ಶಶ್ವದ್ ರಾಜಾ ಯುಧಿಷ್ಠಿರಃ ।
ಜಪ್ಯೈರ್ಹೋಮೈಶ್ಚ ಸಂಯುಕ್ತೋ ಬ್ರಹ್ಮತ್ವಂ ಕಾರಯಿಷ್ಯತಿ ॥೩೬॥

ಶಾಶ್ವತವಾಗಿ ಧರ್ಮಾತ್ಮನಾದ ಆ ಯುಧಿಷ್ಠಿರನೇ, ಜಪ-ಹೋಮಗಳಿಂದ ಕೂಡಿದವನಾಗಿ ಆ ಯಜ್ಞದಲ್ಲಿ ಬ್ರಹ್ಮಋತ್ವಿಜನ ಕಾರ್ಯವನ್ನು ಮಾಡುವನು.

ಶಂಖಶಬ್ದಾಃ ಸಮುರಜಾ ಭೇರ್ಯಶ್ಚ ಮಧುಸೂದನ ।
ಉತ್ಕೃಷ್ಟಃ ಸಿಂಹನಾದಶ್ಚ ಸುಬ್ರಹ್ಮಣ್ಯೋ ಭವಿಷ್ಯತಿ ॥೩೭॥

ಎಲೈ ಮಧುಸೂದನನೇ, ಶಂಖಶಬ್ದಗಳೂ, ಮುರಜ ಮತ್ತು ಭೇರಿಯ ಶಬ್ದಗಳೂ, ಉತ್ಕೃಷ್ಟವಾದ ಸಿಂಹನಾದವೂ ಸುಬ್ರಹ್ಮಣ್ಯ ಸಾಮವಾಗುತ್ತದೆ.

ನಕುಲಃ ಸಹದೇವಶ್ಚ ಮಾದ್ರೀಪುತ್ರೌ ಯಶಸ್ವಿನೌ ।
ಶಾಮಿತ್ರಂ ತೌ ಮಹಾವೀರ್ಯೌ ಸಮ್ಯಕ್ ತತ್ರ ಕರಿಷ್ಯತಃ ॥೩೮॥

ಮಾದ್ರೀಪುತ್ರರಾದ, ಕೀರ್ತಿವಂತರಾದ, ಮಹಾಪರಾಕ್ರಮಶಾಲಿಗಳಾದ ನಕುಲ-ಸಹದೇವರು ಪಶುಹಿಂಸನರೂಪವಾದ ಶಾಮಿತ್ರಕರ್ಮವನ್ನು ಮಾಡುವರು.

ಮೈತ್ರಾವರುಣ ಆಗ್ನೀಧ್ರೌ ಮಹಾವೀರ್ಯೌ ಭವಿಷ್ಯತಃ ॥೩೯॥

ಮೈತ್ರಾವರುಣ ಕರ್ಮದಲ್ಲಿ ಮಹಾವೀರ್ಯರಾದ ಅವರಿಬ್ಬರೂ ಆಗ್ನೀಧ್ರರಾಗುವರು.

ಕಲ್ಮಾಷದಂಡಾ ಗೋವಿಂದ ವಿಮಲಾ ರಥಪಂಕ್ತಯಃ ।
ಯೂಪಾಃ ಸಮುಪಕಲ್ಪಂತಾಮಸ್ಮಿನ್ ಯಜ್ಞೇ ಜನಾರ್ದನ ॥೪೦॥

ಎಲೈ ಗೋವಿಂದನೇ, ಜನಾರ್ದನನೇ, ಕೃಷ್ಣಪಾಂಡರ ವರ್ಣದ ದಂಡಗಳನ್ನು ಹೊಂದಿರುವ ರಥಸಮೂಹಗಳೇ ಈ ಯಜ್ಞದಲ್ಲಿ ಯೂಪಗಳಾಗಲಿ.

ಕರ್ಣೀನಾಲೀಕನಾರಾಚಾ ವತ್ಸದಂತಾಶ್ಚ ಬರ್ಹಿಣಃ ।
ತೋಮರಾಃ ಸೋಮಕಲಶಾಃ ಪವಿತ್ರಾಣಿ ಧನೂಂಷಿ ಚ ॥೪೧॥

ಕರ್ಣಿ, ನಾಲೀಕ, ನಾರಾಚ ಮೊದಲಾದ ನವಿಲುಗರಿಗಳಿಂದ ಕೂಡಿದ ಬಾಣವಿಶೇಷಗಳು ಮತ್ತು ತೋಮರಗಳು ಸೋಮಕಲಶಗಳಾಗುವವು. ಧನುಸ್ಸುಗಳೇ ಪವಿತ್ರಗಳು.

ಅಸಯೋಽತ್ರ ಕಪಾಲಾನಿ ಪುರೋಡಾಶಾಃ ಶಿರಾಂಸಿ ಚ ।
ಹವಿಸ್ತು ರುಧಿರಂ ಕೃಷ್ಣ ತಸ್ಮಿನ್ ಯಜ್ಞೇ ಭವಿಷ್ಯತಿ ॥೪೨॥

ಇಧ್ಮಾಃ ಪರಿಧಯಶ್ಚೈವ ಶಕ್ತಯೋ ವಿಮಲಾ ಗದಾಃ ।
ಸದಸ್ಯಾ ದ್ರೋಣಶಿಷ್ಯಾಶ್ಚ ಕೃಪಸ್ಯ ಚ ಶರದ್ವತಃ ॥೪೩॥

ಕಪಾಲಗಳು ಖಡ್ಗಗಳು, ತಲೆಬುರುಡೆಗಳೇ ಪುರೋಪಾಶಗಳು. ಎಲೈ ಕೃಷ್ಣನೇ, ಆ ಯಜ್ಞದಲ್ಲಿ ರಕ್ತವೇ ಹವಿಸ್ಸಾಗುವುದು. ಶಕ್ತಿ ಮತ್ತು ವಿಮಲವಾದ ಗದೆಗಳು ಅಲ್ಲಿ ಇಧ್ಮಗಳು ಮತ್ತು ಪರಿಧಿಗಳೂ ಆಗುವವು. ದ್ರೋಣರ ಶಿಷ್ಯರೂ ಮತ್ತು ಶರದ್ವತರ, ಕೃಪರ ಶಿಷ್ಯರು ಸದಸ್ಯರಾಗುವರು.

ಇಷವೋಽತ್ರ ಪರಿಸ್ತೋಮಾ ಮುಕ್ತಾ ಗಾಂಡೀವಧನ್ವನಾ ।
ಮಹಾರಥಪ್ರಯುಕ್ತಾಶ್ಚ ದ್ರೋಣದ್ರೌಣಿಪ್ರಚೋದಿತಾಃ ॥೪೪॥

ಗಾಂಡೀವ ಧನುರ್ಧಾರಿಯಾದ ಅರ್ಜುನನಿಂದ ಮತ್ತು ಮಹಾರಥರಾದ ದ್ರೋಣ, ಅಶ್ವತ್ಥಾಮರಿಂದ ಪ್ರಯೋಗಿಸಲ್ಪಟ್ಟ ಬಾಣಗಳೇ ಪರಿಸ್ತೋಮಗಳಾಗುವವು.

ಪ್ರತಿಪ್ರಾಸ್ಥಾನಿಕಂ ಕರ್ಮ ಸಾತ್ಯಕಿಃ ಸ ಕರಿಷ್ಯತಿ ।
ದೀಕ್ಷಿತೋ ಧಾರ್ತರಾಷ್ಟ್ರೋಽತ್ರ ಪತ್ನೀ ಚಾಸ್ಯ ಮಹಾಚಮೂಃ ॥೪೫॥

ಸಾತ್ಯಕಿಯು ಅಲ್ಲಿ ಪ್ರತಿಪ್ರಾಸ್ಥಾನಿಕ ಕರ್ಮವನ್ನು ಮಾಡುವನು. ದುರ್ಯೋಧನನೇ ದೀಕ್ಷೆಯನ್ನು ಹೊಂದಿದ ಯಜಮಾನ, ದೊಡ್ಡ ಸೈನ್ಯವೇ ಅವನ ಪತ್ನಿ.

ಘಟೋತ್ಕಚೋಽತ್ರ ಶಾಮಿತ್ರಂ ಕರಿಷ್ಯತಿ ಮಹಾಬಲಃ ।
ಅತಿರಾತ್ರೇ ಮಹಾಬಾಹೋ ವಿತತೇ ಯಜ್ಞಕರ್ಮಣಿ ॥೪೬॥

ಎಲೈ ಮಹಾಬಾಹುವೇ, ಈ ವಿಸ್ತಾರವಾದ ಯಜ್ಞಕರ್ಮದಲ್ಲಿ ಮಹಾಬಲನಾದ ಘಟೋತ್ಕಚನು ಅತಿರಾತ್ರನಾಮಕ ಯಜ್ಞದಲ್ಲಿ (ರಾತ್ರಿಯುದ್ಧದಲ್ಲಿ ಎಂದು ಧ್ವನಿ) ಪಶುಹಿಂಸನರೂಪವಾದ ಕರ್ಮವನ್ನು ಮಾಡುವನು.

ದಕ್ಷಿಣಾ ತ್ವಸ್ಯ ಯಜ್ಞಸ್ಯ ಧೃಷ್ಟದ್ಯುಮ್ನಃ ಪ್ರತಾಪವಾನ್ ।
ವೈತಾನೇ ಕರ್ಮಣಿ ತತೋ ಜಾತೋ ಯಃ ಕೃಷ್ಣ ಪಾವಕಾತ್ ॥೪೭॥

ಎಲೈ ಕೃಷ್ಣನೇ, ಯಜ್ಞಕರ್ಮದಲ್ಲಿ ಅಗ್ನಿಕುಂಡದಿಂದ ಉದ್ಭವಿಸಿದ ಪ್ರತಾಪಶಾಲಿಯಾದ ಧೃಷ್ಟದ್ಯುಮ್ನನೇ ಈ ಯಜ್ಞದ ದಕ್ಷಿಣೆ.

ಯದಬ್ರುವಮಹಂ ಕೃಷ್ಣ ಕಟುಕಾನಿ ಸ್ಮ ಪಾಂಡವಾನ್ ।
ಪ್ರಿಯಾರ್ಥಂ ಧಾರ್ತರಾಷ್ಟ್ರಸ್ಯ ತೇನ ತಪ್ಸ್ಯೇಽದ್ಯ ಕರ್ಮಣಾ ॥೪೮॥

ಎಲೈ ಕೃಷ್ಣನೇ, ದುರ್ಯೋಧನನನ್ನು ಪ್ರೀತಿಪಡಿಸುವ ಸಲುವಾಗಿ ಪಾಂಡವರಿಗೆ ನಾನು ಏನು ಉಗ್ರವಾದ ಮಾತುಗಳನ್ನು ಆಡಿದೆನೋ ಅದರಿಂದ ಈ ದಿನ ಪಶ್ಚಾತ್ತಾಪ ಪಡುತ್ತಿದ್ದೇನೆ.

ಯದಾ ದ್ರಕ್ಷ್ಯಸಿ ಮಾಂ ಕೃಷ್ಣ ನಿಹತಂ ಸವ್ಯಸಾಚಿನಾ ।
ಪುನಶ್ಚಿತ್ತಿಸ್ತದಾ ಚಾಸ್ಯ ಯಜ್ಞಸ್ಯಾಥ ಭವಿಷ್ಯತಿ ॥೪೯॥

ಕೃಷ್ಣನೇ, ಅರ್ಜುನನಿಂದ ನಿಹತನಾದ ನನ್ನನ್ನು ಯಾವಾಗ ನೀನು ನೋಡುವಿಯೋ ಆಗ ಈ ಯಜ್ಞಕ್ಕೆ ಪುನಶ್ಚಿತ್ತಿ ಎಂಬ ಅಂಗವು ಉಂಟಾಗುವುದು.

ದುಃಶಾಸನಸ್ಯ ರುಧಿರಂ ಯದಾ ಪಾಸ್ಯತಿ ಪಾಂಡವಃ ।
ಆನರ್ದನ್ ನರ್ದತಃ ಸಮ್ಯಕ್ ತದಾ ಸೌತ್ಯಾ ಭವಿಷ್ಯತಿ ॥೫೦॥

ಪಾಂಡವನಾದ ಭೀಮಸೇನನು ನರ್ದಿಸುತ್ತಾ, ನೋವಿನಿಂದ ಹೊರಳಾಡುವ ದುಃಶಾಸನನ ರಕ್ತವನ್ನು ಯಾವಾಗ ಪಾನ ಮಾಡುವನೋ ಆಗ ಆ ಯಜ್ಞದಲ್ಲಿ ಸೋಮಾಭಿಸ್ರವಣವು ಉಂಟಾಗುವುದು.

ಯದಾ ದ್ರೋಣಂ ಚ ಭೀಷ್ಮಂ ಚ ಪಾಂಚಾಲ್ಯೌ ಪಾತಯಿಷ್ಯತಃ ।
ತದಾ ಯಜ್ಞಾವಸಾನಂ ತದ್ ಭವಿಷ್ಯತಿ ಜನಾರ್ದನ ॥೫೧॥

ಎಲೈ ಜನಾರ್ದನನೇ, ಪಾಂಚಾಲದೇಶದ ಶಿಖಂಡೀ ಮತ್ತು ಧೃಷ್ಟದ್ಯುಮ್ನರು ಯಾವಾಗ ಭೀಷ್ಮರನ್ನೂ ಮತ್ತು ದ್ರೋಣರನ್ನೂ ಕೆಡವುವರೋ ಆಗ ಆ ಯಜ್ಞವು ಅವಸಾನವನ್ನು ಹೊಂದುವುದು.

ದುರ್ಯೋಧನಂ ಯದಾ ಹಂತಾ ಭೀಮಸೇನೋ ಮಹಾಬಲಃ ।
ತದಾ ಸಮಾಪ್ಯತೇ ಯಜ್ಞೋ ಧಾರ್ತರಾಷ್ಟ್ರಸ್ಯ ಮಾಧವ ॥೫೨॥

ಎಲೈ ಮಾಧವನೇ, ಮಹಾಬಲನಾದ ಭೀಮಸೇನನು ಯಾವಾಗ ದುರ್ಯೋಧನನನ್ನು ಕೊಲ್ಲುವನೋ ಆಗ ದುರ್ಯೋಧನನ ಯಜ್ಞವು ಸಮಾಪ್ತಿಯನ್ನು ಹೊಂದುವುದು.

ಸ್ನುಷಾಶ್ಚ ಪ್ರಸ್ನುಷಾಶ್ಚೈವ ಧೃತರಾಷ್ಟ್ರಸ್ಯ ಸಂಗತಾಃ ।
ಹತೇಶ್ವರಾ ಹತಸುತಾ ಹತಪೌತ್ರಾಶ್ಚ ಕೇಶವ ॥೫೩॥

ಗಾಂಧಾರ್ಯಾ ಸಹ ರೋದಂತ್ಯಾ ಶ್ವಗೃಧ್ರಶಕುನಾಕುಲೇ ।
ಸ ಯಜ್ಞೋಽಸ್ಮಿನ್ನವಭೃಥೋ ಭವಿಷ್ಯತಿ ಜನಾರ್ದನ ॥೫೪॥

ಧೃತರಾಷ್ಟ್ರನ ಸೊಸೆಯರೂ, ಅವರ ಸೊಸೆಯರೂ ಎಲ್ಲರೂ ಒಟ್ಟಿಗೆ ಸೇರಿ ಮಕ್ಕಳನ್ನೂ, ಮೊಮ್ಮಕ್ಕಳನ್ನೂ ತಮ್ಮ ಪತಿಗಳನ್ನೂ ಕಳೆದುಕೊಂಡು ನಾಯಿ , ನರಿ-ಪಕ್ಷಿಗಳಿಂದ ತುಂಬಿದ ರಣರಂಗದಲ್ಲಿ ಅಳುತ್ತಿರುವ ಗಾಂಧಾರಿಯ ಜೊತೆಯಲ್ಲಿ ಯಾವಾಗ ಅಳುತ್ತಾರೆಯೋ ಆಗ ಎಲೈ ಕೇಶವನೇ, ಜನಾರ್ದನನೇ ಈ ಯಜ್ಞದಲ್ಲಿ ಅವಭೃಥಸ್ನಾನವಾಗುವುದು.

ವಿದ್ಯಾವೃದ್ಧಾ ವಯೋವೃದ್ಧಾ ಕ್ಷತ್ರಿಯಾಃ ಕ್ಷತ್ರಿಯರ್ಷಭ ।
ವೃಥಾ ಮೃತ್ಯುಂ ನ ಕುರ್ವೀರನ್ ತ್ವತ್ಕೃತೇ ಮಧುಸೂದನ ॥೫೫॥

ಎಲೈ ಮಧುಸೂದನನೇ, ಕ್ಷತ್ರಿಯರ್ಷಭನೇ, ನಿನ್ನ ಅನುಗ್ರಹದಿಂದಾಗಿ ವಿದ್ಯಾವೃದ್ಧರೂ, ವಯೋವೃದ್ಧರೂ ಆದ ಕ್ಷತ್ರಿಯರು ವ್ಯರ್ಥವಾಗಿ ಮರಣವನ್ನು ಹೊಂದುವುದು ಬೇಡ.

ಶಸ್ತ್ರೇಣ ನಿಧನಂ ಗಚ್ಛೇತ್ ಸಮಗ್ರಂ ಕ್ಷತ್ರಮಂಡಲಮ್ ।
ಕುರುಕ್ಷೇತ್ರೇ ಪುಣ್ಯತಮೇ ತ್ರೈಲೋಕ್ಯಸ್ಯಾಪಿ ಕೇಶವ ॥೫೬॥

ಎಲೈ ಕೇಶವನೇ, ಮೂರುಲೋಕಗಳಿಗೂ ಅತ್ಯಂತ ಪವಿತ್ರವಾದ ಕುರುಕ್ಷೇತ್ರದಲ್ಲಿ ಸಮಗ್ರವಾದ ಕ್ಷತ್ರಿಯ ಸಮೂಹವು ಶಸ್ತ್ರದಿಂದ ನಿಧನವನ್ನು ಹೊಂದುವುದಾಗಲಿ.

ತದತ್ರ ಪುಂಡರೀಕಾಕ್ಷ ವಿಧತ್ಸ್ವ ಯದನಂತರಮ್ ।
ಯಥಾ ಕಾರ್ತ್ಸ್ನ್ಯೇನ ವಾರ್ಷ್ಣೇಯ ಕ್ಷತ್ರಂ ಸ್ವರ್ಗಮವಾಪ್ನುಯಾತ್ ॥೫೭॥

ಯಾವತ್ ಕೀರ್ತಿಭವಃ ಶಬ್ದಃ ಶಾಶ್ವತೋಽಯಂ ಭವಿಷ್ಯತಿ ॥೫೮॥

ಎಲೈ ಪುಂಡರೀಕಾಕ್ಷನೇ, ಸಮಗ್ರವಾದ ಕ್ಷತ್ರಿಯಸಮೂಹವು ಸ್ವರ್ಗವನ್ನು ಹೊಂದುವಂತೆ ಮತ್ತು ಅವರ ಕೀರ್ತಿಜನ್ಯವಾದ ಸ್ತೋತ್ರರೂಪವಾದ ಶಬ್ದಗಳು ಶಾಶ್ವತವಾಗಿರುವಂತೆ ಮುಂದೆ ಏನನ್ನು ಮಾಡಬೇಕೋ ಅದನ್ನು ಮಾಡುವವನಾಗು.

ಬ್ರಾಹ್ಮಣಾ ಕಥಯಿಷ್ಯಂತಿ ಮಹಾಭಾರತಮಾಹವಮ್ ।
ಸಮಾಗಮೇಷು ವಾರ್ಷ್ಣೇಯ ಕ್ಷತ್ರಿಯಾಣಾಂ ಯಶೋಧನಮ್ ॥೫೯॥

ಎಲೈ ವಾರ್ಷ್ಣೇಯನೇ, ಕ್ಷತ್ರಿಯರ ಯಶೋಧನವಾದ ಮಹಾಭಾರತ ಯುದ್ಧವನ್ನು ಬ್ರಾಹ್ಮಣರು ಉತ್ಸವಗಳಲ್ಲಿ ಕಥನ ಮಾಡುವರು.

ಸಮುಪಾನಯ ಕೌಂತೇಯಂ ಯುದ್ಧಾಯ ಮಮ ಕೇಶವ ।
ಮಂತ್ರಸಂವರಣಂ ಕುರ್ವನ್ ನಿತ್ಯಮೇವ ಪರಂತಪ ॥೬೦॥

ಎಲೈ ಕೇಶವನೇ, ಪರಂತಪನೇ, ನಮ್ಮ ಈ ಸಂಭಾಷಣೆಯನ್ನು ಯಾವಾಗಲೂ ರಹಸ್ಯವಾಗಿಟ್ಟು ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಲು ಯುಧಿಷ್ಠಿರನನ್ನು ಕರೆದುಕೊಂಡು ಬಾ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

॥ ವಿವಾದಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂದನೆಯ ಅಧ್ಯಾಯ

ಕೃಷ್ಣನಿಂದ ಕರ್ಣನನ್ನು ಕುರಿತು ಪಾಂಡವರ, ಜಯನಿರ್ಧಾರವನ್ನು ಹೇಳಿ ಭೀಷ್ಮಾದಿಗಳಿಗೆ ಯುದ್ಧಕ್ಕೆ ಸನ್ನದ್ಧವಾಗಿರುವಂತೆ ಸಂದೇಶವನ್ನು ಕೊಡಲು ಸೂಚನೆ.

ವೈಶಂಪಾಯನಃ

ಕರ್ಣಸ್ಯ ವಚನಂ ಶ್ರುತ್ವಾ ಕೇಶವಃ ಪರವೀರಹಾ ।
ಉವಾಚ ಪ್ರಹಸನ್ ವಾಕ್ಯಂ ಸ್ಮಿತಪೂರ್ವಮಿದಂ ತದಾ ॥೧॥

ವೈಶಂಪಾಯನ– ಶತ್ರುವೀರಘಾತಕನಾದ ಕೇಶವನು ಕರ್ಣನ ಮಾತುಗಳನ್ನು ಕೇಳಿ ನಗುತ್ತಾ ಮಂದಹಾಸಪೂರ್ವಕವಾಗಿ ಈ ಮಾತುಗಳನ್ನು ಆಡಿದನು.

ಅಪಿ ತ್ವಾಂ ನ ತಪೇತ್ ಕರ್ಣ ರಾಜ್ಯಲೋಭೋಪಪಾದನಾ ।
ಮಯಾ ದತ್ತಾಂ ಹಿ ಪೃಥಿವೀಂ ನ ಪ್ರಶಾಸಿತುಮಿಚ್ಛತಿ ॥೨॥

ಎಲೈ ಕರ್ಣನೇ, ರಾಜ್ಯಲೋಭದ ಮಾತುಗಳೂ ಸಹ ನಿನಗೆ ತಾಪವನ್ನು ಉಂಟುಮಾಡಲಾರವು. ನಾನು ಕೊಟ್ಟ ಭೂಮಿಯನ್ನೂ ಸಹ ಆಳಲು ನೀನು ಇಷ್ಟಪಡುವುದಿಲ್ಲ.

ಧ್ರುವಂ ಜಯಃ ಪಾಂಡವಾನಾಮಿತೀದಂ
ನ ಸಂಶಯಃ ಕಶ್ಚನ ವಿದ್ಯತೇಽತ್ರ ।
ಜಯಧ್ವಜೋ ದೃಶ್ಯತೇ ಪಾಂಡವಸ್ಯ
ಸಮುಚ್ಛ್ರಿತೋ ವಾನರರಾಜ ಉಗ್ರಃ ॥೩॥

ಪಾಂಡವರಿಗೆ ಜಯವು ನಿಶ್ಚಿತವಾದುದು. ಇದರಲ್ಲಿ ಯಾವ ಸಂಶಯವೂ ಇಲ್ಲ. ವಾನರನಿಂದ ಕಂಗೊಳಿಸುವ ಪಾಂಡವರ ಜಯಧ್ವಜವು ಉಗ್ರವಾಗಿ ಮತ್ತು ಉನ್ನತವಾಗಿ ಕಂಡುಬರುತ್ತಿದೆ.

ದಿವ್ಯಾ ಮಾಯಾ ವಿಹಿತಾ ಭೌಮನೇನ
ಸಮುಚ್ಛ್ರಿತಾ ಇಂದ್ರಕೇತುಪ್ರಕಾಶಾ ।
ದಿವ್ಯಾನಿ ಭೂತಾನಿ ಜಯಾವಹಾನಿ
ದೃಶ್ಯಂತಿ ಚೈವಾತ್ರ ಭಯಾನಕಾನಿ ॥೪॥

ಇಂದ್ರಧ್ವಜದಂತೆ ಉನ್ನತವಾಗಿ ಶೋಭಿಸುವ ಧ್ವಜದಲ್ಲಿ ವಿಶ್ವಕರ್ಮನು ದಿವ್ಯವಾದ ಮಾಯೆಗಳನ್ನು ಇಟ್ಟಿದ್ದಾನೆ. ಮತ್ತು ಆ ಧ್ವಜದಲ್ಲಿ ಜಯವನ್ನು ಸೂಚಿಸುವ ದಿವ್ಯವಾದ ಭೂತಗಳೂ ಕಂಡುಬರುತ್ತಿವೆ.

ನ ಸಜ್ಜತೇ ಶೈಲವನಸ್ಪತಿಭ್ಯ
ಊರ್ಧ್ವಂ ತಿರ್ಯಗ್ಯೋಜನಮಾತ್ರರೂಪಃ ।
ಶ್ರೀಮಾನ್ ಧ್ವಜಃ ಕರ್ಣ ಧನಂಜಯಸ್ಯ
ಸಮುತ್ಥಿತಃ ಪಾವಕತುಲ್ಯರೂಪಃ ॥೫॥

ಎಲೈ ಕರ್ಣನೇ, ಎತ್ತರವಾದ, ಅಗ್ನಿಯ ಸಮಾನವಾದ ಕಾಂತಿಯುಳ್ಳ ಧನಂಜಯನ ಕಾಂತಿಯುಕ್ತವಾದ ಧ್ವಜವು ಪರ್ವತಗಳಲ್ಲಾಗಲೀ, ವೃಕ್ಷಗಳಲ್ಲಾಗಲೀ, ಮೇಲ್ಭಾಗ ಮತ್ತು ಕೆಳಭಾಗಗಳಲ್ಲಾಗಲೀ ಒಂದು ಯೋಜನದವರೆಗೆ ಎಲ್ಲಿಯೂ ಸಿಲುಕಿಕೊಳ್ಳುವುದಿಲ್ಲ.

ಯದಾ ದ್ರಕ್ಷ್ಯಸಿ ಸಂಗ್ರಾಮೇ ಶ್ವೇತಾಶ್ವಂ ಕೃಷ್ಣಸಾರಥಿಮ್ ।
ಐಂದ್ರಮಸ್ತ್ರಂ ಪ್ರಕುರ್ವಾಣಮುಭೌ ಚಾಪ್ಯಗ್ನಿಮಾರುತೌ ॥೬॥

ಗಾಂಡೀವಸ್ಯ ಚ ನಿರ್ಘೋಷಂ ವಿಸೃಜ್ಯಂತಮಿವಾಶನೇಃ ।
ನ ತದಾ ಭವಿತಾ ತ್ರೇತಾ ನ ಕೃತಂ ದ್ವಾಪರಂ ನ ಚ ॥೭॥

ಕೃಷ್ಣಸಾರಥಿಯಾದ, ಶ್ವೇತಾಶ್ವನಾದ ಅರ್ಜುನನು ಯುದ್ಧದಲ್ಲಿ ಐಂದ್ರಾಸ್ತ್ರವನ್ನೂ, ಆಗ್ನೇಯಾಸ್ತ್ರವನ್ನೂ, ವಾಯವ್ಯಾಸ್ತ್ರವನ್ನೂ ಪ್ರಯೋಗಿಸುವುದನ್ನೂ ಸಿಡಿಲಿನ ಆರ್ಭಟದಂತಿರುವ ಗಾಂಡೀವದ ಘೋಷವನ್ನೂ ನೀನು ನೋಡುವಾಗ ತ್ರೇತಾಯುಗವಾಗಲೀ, ಕೃತಯುಗವಾಗಲೀ, ದ್ವಾಪರಯುಗವಾಗಲೀ ಉಂಟಾಗುವುದಿಲ್ಲ(ಮೂರು ಯುಗಗಳಲ್ಲಿಯೂ ಇಂತಹ ಯುದ್ಧವು ನಡೆದಿರುವುದಿಲ್ಲ ಎಂದು ಅಭಿಪ್ರಾಯ– ವಾದಿರಾಜರು).

ಯದಾ ದ್ರಕ್ಷ್ಯಸಿ ಸಂಗ್ರಾಮೇ ಕುಂತೀಪುತ್ರಂ ಯುಧಿಷ್ಠಿರಮ್ ।
ಜಪಹೋಮಸಮಾಸಕ್ತಂ ರಕ್ಷಂತಂ ಚ ಮಹಾಚಮೂಮ್ ॥೮॥

ಆದಿತ್ಯಮಿವ ದುರ್ಧರ್ಷಂ ತಪಂತಂ ಶತ್ರುವಾಹಿನೀಮ್ ।
ನ ತದಾ ಭವಿತಾ ತ್ರೇತಾ ನ ಕೃತಂ ದ್ವಾಪರಂ ನ ಚ ॥೯॥

ಯುದ್ಧದಲ್ಲಿ ಕುಂತೀಪುತ್ರನಾದ ಯುಧಿಷ್ಠಿರನು ಜಪಹೋಮಸಮಾಯುಕ್ತನಾಗಿ, ತನ್ನ ದೊಡ್ಡ ಸೈನ್ಯವನ್ನು ರಕ್ಷಿಸುತ್ತಾ, ಆದಿತ್ಯನಂತೆ ದುರ್ಧರ್ಷನಾಗಿ, ಶತ್ರುಸೈನ್ಯವನ್ನು ದಹಿಸುವುದನ್ನು ನೋಡುವಾಗ ಕೃತಯುಗವಾಗಲೀ, ತ್ರೇತಾಯುಗವಾಗಲೀ, ದ್ವಾಪರಯುಗವಾಗಲೀ ಉಂಟಾಗುವುದಿಲ್ಲ.

ಯದಾ ದ್ರಕ್ಷ್ಯಸಿ ಸಂಗ್ರಾಮೇ ಭೀಮಸೇನಂ ಮಹಾಬಲಮ್ ।
ದುಃಶಾಸನಸ್ಯ ರುಧಿರಂ ಪೀತ್ವಾ ನೃತ್ಯಂತಮಾಹವೇ ॥೧೦॥

ಪ್ರಭಿನ್ನಮಿವ ಮಾತಂಗಂ ಪ್ರತಿದ್ವಿರದಘಾತಿನಮ್ ।
ನ ತದಾ ಭವಿತಾ ತ್ರೇತಾ ನ ಕೃತಂ ದ್ವಾಪರಂ ನ ಚ ॥೧೧॥

ಯುದ್ಧದಲ್ಲಿ ಮಹಾಬಲನಾದ ಭೀಮಸೇನನು ದುಃಶಾಸನನ ರಕ್ತವನ್ನು ಪಾನಮಾಡಿ, ಪ್ರತಿಗಜವನ್ನು ಸಂಹರಿಸಿದ ಮದಗಜದಂತೆ ಯುದ್ಧದಲ್ಲಿ ನೃತ್ಯವನ್ನು ಮಾಡುವಾಗ ಕೃತಯುಗವಾಗಲೀ, ತ್ರೇತಾಯುಗವಾಗಲೀ, ದ್ವಾಪರಯುಗವಾಗಲೀ ಉಂಟಾಗುವುದಿಲ್ಲ.

ಯದಾ ದ್ರಕ್ಷ್ಯಸಿ ಸಂಗ್ರಾಮೇ ದ್ರೋಣಂ ಶಾಂತನವಂ ಕೃಪಮ್ ।
ಸುಯೋಧನಂ ಚ ರಾಜಾನಂ ಸೈಂಧವಂ ಚ ಜಯದ್ರಥಮ್ ॥೧೨॥

ಯುದ್ಧಾಯಾಪತತಸ್ತೂರ್ಣಂ ವಾರಿತಾನ್ ಸವ್ಯಸಾಚಿನಾ ।
ನ ತದಾ ಭವಿತಾ ತ್ರೇತಾ ನ ಕೃತಂ ದ್ವಾಪರಂ ನ ಚ ॥೧೩॥

ಯುದ್ಧದಲ್ಲಿ ದ್ರೋಣರೂ, ಭೀಷ್ಮರೂ, ಕೃಪರೂ, ರಾಜನಾದ ಸುಯೋಧನ, ಸಿಂಧುದೇಶದ ಜಯದ್ರಥ ಇವರೂ ಶೀಘ್ರವಾಗಿ ಯುದ್ಧದಲ್ಲಿ ಪಾಂಡವರ ಮೇಲೆ ಎರಗುವಾಗ, ಇವರನ್ನು ಅರ್ಜುನನು ತಡೆಯುವುದನ್ನು ನೋಡುವಾಗ ಕೃತಯುಗವಾಗಲೀ, ತ್ರೇತಾಯುಗವಾಗಲೀ, ದ್ವಾಪರಯುಗವಾಗಲೀ ಉಂಟಾಗುವುದಿಲ್ಲ.

ಯದಾ ದ್ರಕ್ಷ್ಯಸಿ ಸಂಗ್ರಾಮೇ ಮಾದ್ರೀಪುತ್ರೌ ಮಹಾಬಲೌ ।
ವಾಹಿನೀಂ ಧಾರ್ತರಾಷ್ಟ್ರಾಣಾಂ ಕ್ಷೋಭಯಂತೌ ಗಜಾವಿವ ॥೧೪॥

ವಿಗಾಢೇ ಶಸ್ತ್ರಸಂಬಾಧೇ ಪರವೀರರಥಾರುಜೌ ।
ನ ತದಾ ಭವಿತಾ ತ್ರೇತಾ ನ ಕೃತಂ ದ್ವಾಪರಂ ನ ಚ ॥೧೫॥

ಶತ್ರುಸೈನ್ಯದ ವೀರರನ್ನೂ ಮತ್ತು ರಥಗಳನ್ನೂ ಮರ್ದಿಸುವ ಮಹಾಬಲರಾದ ಮಾದ್ರೀಪುತ್ರರು ತೀವ್ರವಾದ ಶಸ್ತ್ರಪ್ರಯೋಗಗಳಿರುವ ಯುದ್ಧದಲ್ಲಿ ದುರ್ಯೋಧನನ ಸೈನ್ಯವನ್ನು ಗಜಗಳಂತೆ ಕ್ಷೋಭೆಗೊಳಿಸುವಾಗ ಕೃತಯುಗವಾಗಲೀ, ತ್ರೇತಾಯುಗವಾಗಲೀ, ದ್ವಾಪರಯುಗವಾಗಲೀ ಉಂಟಾಗುವುದಿಲ್ಲ.

ಬ್ರೂಯಾಃ ಕರ್ಣ ಇತೋ ಗತ್ವಾ ದ್ರೋಣಂ ಶಾಂತನವಂ ಕೃಪಮ್ ।
ಸೌಮ್ಯೋಽಯಂ ವರ್ತತೇ ಮಾಸಃ ಸುಪ್ರಾಪಯವಸೇಂಧನಃ ॥೧೬॥

ಪಕ್ವೌಷಧಿವನಸ್ಪೀತಃ ಫಲವಾನಲ್ಪಮಕ್ಷಿಕಃ ।
ತಿಲಕೋ ದ್ರವಸಂಪನ್ನೋ ನಾತ್ಯುಷ್ಣಃ ಶಿಶಿರಃ ಸುಖಃ ॥೧೭॥

ಎಲೈ ಕರ್ಣನೇ, ಇಲ್ಲಿಂದ ಹೋಗಿ ದ್ರೋಣರಿಗೂ, ಭೀಷ್ಮರಿಗೂ ಮತ್ತು ಕೃಪರಿಗೂ ಈ ಮಾಸವು ಸೌಮ್ಯವಾಗಿದೆ. ಪ್ರಾಣಿಗಳಿಗೆ ಮೇವು ಮತ್ತು ಕಟ್ಟಿಗೆಯು ಸುಲಭವಾಗಿ ದೊರೆಯುತ್ತವೆ. ಔಷಧಿ, ವನಸ್ಪತಿಗಳು ಪಕ್ವವಾಗಿ ಶೋಭಿಸುತ್ತಿವೆ. ತಿಲಕವೃಕ್ಷವು ಫಲಭರಿತವಾಗಿ ಅಲ್ಪಮಕ್ಷಿಕಗಳಿಂದ ಕೂಡಿದೆ. ಈ ಶಿಶಿರ ಋತುವು ಜಲಸಮೃದ್ಧಿಯಿಂದ ಕೂಡಿದ್ದು ಬಹಳ ಉಷ್ಣವಾಗದೆ ಸುಖಕರವಾಗಿದೆ ಎಂದು ಹೇಳುವವನಾಗು.

ಸಪ್ತಮಾಚ್ಚಾಪಿ ದಿವಸಾದಮಾವಾಸ್ಯಾ ಭವಿಷ್ಯತಿ ।
ಸಂಗ್ರಾಮೋ ಯುಜ್ಯತಾಂ ತಸ್ಯಾಂ ತಾಮಾಹುಃ ಶಕ್ರದೇವತಾಮ್॥೧೮॥

ಇವತ್ತಿಗೆ ಏಳನೆಯ ದಿವಸದಲ್ಲಿ ಅಮಾವಾಸ್ಯೆಯಾಗುವುದು. ಅದು ಇಂದ್ರದೇವತಾಕವಾದ ತಿಥಿ ಎಂದು ಹೇಳುತ್ತಾರೆ. ಆ ತಿಥಿಯಲ್ಲಿ ಯುದ್ಧವನ್ನು ಹೂಡುವವರಾಗಿ.

ತಥಾ ರಾಜ್ಞೋ ವದೇಃ ಸರ್ವಾನ್ ಯೇ ಯುದ್ಧಾಯಾಭ್ಯುಪಾಗತಾಃ ।
ಯದ್ವೋ ಮನೀಷಿತಂ ತದ್ ವೈ ಸರ್ವಂ ಸಂಪಾದಯಾಮ್ಯಹಮ್ ॥

ಹಾಗೆಯೇ ಯುದ್ಧಕ್ಕಾಗಿ ಬಂದ ಎಲ್ಲಾ ರಾಜರನ್ನೂ ಕುರಿತು ನಿಮ್ಮ ಮನಸ್ಸಿನ ಆಸೆಯು ಏನಿದೆಯೋ ಅವೆಲ್ಲವನ್ನೂ ನಾನು ಸಂಪಾದಿಸುತ್ತೇನೆ ಎಂದು ಹೇಳು.

ರಾಜಾನೋ ರಾಜಪುತ್ರಾಶ್ಚ ದುರ್ಯೋಧನವಶಾನುಗಾಃ ।
ಪ್ರಾಪ್ಯ ಶಸ್ತ್ರೇಣ ನಿಧನಂ ಪ್ರಾಪ್ಸ್ಯಂತಿ ಗತಿಮುತ್ತಮಾಮ್ ॥೨೦॥

ದುರ್ಯೋಧನನ ವಶವರ್ತಿಗಳಾದ ರಾಜರು ಮತ್ತು ರಾಜಪುತ್ರರು ಯುದ್ಧದಲ್ಲಿ ಶಸ್ತ್ರದಿಂದ ನಿಧನವನ್ನು ಹೊಂದಿ ಶ್ರೇಷ್ಠವಾದ ಗತಿಯನ್ನು ಹೊಂದುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

॥ ವಿವಾದಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೆರಡನೆಯ ಅಧ್ಯಾಯ

ಕೃಷ್ಣನಿಗೆ ಪಾಂಡವರ ಜಯದ ಮತ್ತು ಕೌರವರ ಅಪಜಯದ ಸೂಚನೆಗಳನ್ನು ಹೇಳಿ, ಕರ್ಣನ ನಿರ್ಗಮನ.

ವೈಶಂಪಾಯನಃ

ಕೇಶವಸ್ಯ ತು ತದ್ ವಾಕ್ಯಂ ಕರ್ಣಃ ಶ್ರುತ್ವಾ ಹಿತಂ ಶುಭಮ್ ।
ಅಬ್ರವೀದಭಿಸಂಪೂಜ್ಯ ಕೃಷ್ಣಂ ತಂ ಮಧುಸೂದನಮ್ ॥೧॥

ವೈಶಂಪಾಯನ– ಕೇಶವನ ಹಿತವೂ, ಶುಭವೂ ಆದ ಮಾತುಗಳನ್ನು ಕೇಳಿ, ಕರ್ಣನು ಕೃಷ್ಣನನ್ನು ಪೂಜಿಸಿ, ಮಧುಸೂದನನಾದ ಅವನನ್ನು ಕುರಿತು ಮಾತನಾಡಿದನು.

ಜಾನನ್ ಮಾಂ ಕಿಂ ಮಹಾಬಾಹೋ ಸಮ್ಮೋಹಯಿತುಮಿಚ್ಛಸಿ ।
ಯೋಽಯಂ ಪೃಥಿವ್ಯಾಃ ಕಾರ್ತ್ಸ್ನ್ಯೇನ ವಿನಾಶಃ ಸಮುಪಸ್ಥಿತಃ ॥೨॥

ನಿಮಿತ್ತಂ ತತ್ರ ಶಕುನಿರಹಂ ದುಃಶಾಸನಸ್ತಥಾ ।
ದುರ್ಯೋಧನಶ್ಚ ನೃಪತಿಃ ಧೃತರಾಷ್ಟ್ರಸುತೋಽಭವತ್ ॥೩॥

ಎಲೈ ಮಹಾಬಾಹುವೇ, ಎಲ್ಲವನ್ನೂ ತಿಳಿದಿದ್ದರೂ ಸಹ ಏಕೆ ನನಗೆ ಪ್ರಲೋಭಗೊಳಿಸಲು ಬಯಸುತ್ತೀಯೆ? ಸಮಗ್ರವಾದ ಭೂಮಿಗೆ ಈ ವಿನಾಶವು ಏನು ಬಂದೊದಗಿದೆಯೋ ಅದಕ್ಕೆ ನಾನು, ಶಕುನಿ, ದುಶ್ಶಾಸನ ಮತ್ತು ಧೃತರಾಷ್ಟ್ರ ಪುತ್ರನಾದ ದುರ್ಯೋಧನನು ನಿಮಿತ್ತರಾಗಿದ್ದೇವೆ.

ಅಸಂಶಯಮಿದಂ ಕೃಷ್ಣ ಮಹದ್ ಯುದ್ಧಮುಪಸ್ಥಿತಮ್ ।
ಪಾಂಡವಾನಾಂ ಕುರೂಣಾಂ ಚ ಘೋರಂ ರುಧಿರಕರ್ದಮಮ್ ॥೪॥

ಎಲೈ ಕೃಷ್ಣನೇ, ಪಾಂಡವರಿಗೂ ಮತ್ತು ಕೌರವರಿಗೂ ಘೋರವಾದ ರಕ್ತದ ಕೆಸರುಳ್ಳ ದೊಡ್ಡ ಯುದ್ಧವು ಸನ್ನಿಹಿತವಾಗಿದೆ ಎಂಬುದರಲ್ಲಿ ಸಂಶಯವಿಲ್ಲ.

ರಾಜಾನೋ ರಾಜಪುತ್ರಾಶ್ಚ ದುರ್ಯೋಧನವಶಾನುಗಾಃ ।
ರಣೇ ಶಸ್ತ್ರಾಗ್ನಿನಾ ದಗ್ಧಾಃ ಪ್ರಾಪ್ಸ್ಯಂತಿ ಯಮಸಾದನಮ್ ॥೫॥

ದುರ್ಯೋಧನನ ವಶವರ್ತಿಗಳಾದ ರಾಜರು ಮತ್ತು ರಾಜಕುಮಾರರು ಶಸ್ತ್ರಾಗ್ನಿಯಿಂದ ದಗ್ಧರಾಗಿ ಯಮಲೋಕವನ್ನು ಸೇರುವರು.

ಸ್ವಪ್ನಾ ಹಿ ಬಹವೋ ಘೋರಾ ದೃಶ್ಯಂತೇ ಮಧುಸೂದನ ।
ನಿಮಿತ್ತಾನಿ ಚ ಘೋರಾಣಿ ತಥೋತ್ಪಾತಾಃ ಸುದಾರುಣಾಃ ॥೬॥

ಪರಾಜಯಂ ಧಾರ್ತರಾಷ್ಟ್ರೇ ವಿಜಯಂ ಚ ಯುಧಿಷ್ಠಿರೇ ।
ಶಂಸಂತ ಇವ ವಾರ್ಷ್ಣೇಯ ವಿವಿಧಾ ರೋಮಹರ್ಷಣಾಃ ॥೭॥

ಎಲೈ ಮಧುಸೂದನನೇ, ನಾನು ಅನೇಕ ಘೋರ ಸ್ವಪ್ನಗಳನ್ನು ನೋಡುತ್ತಿದ್ದೇನೆ. ಘೋರವಾದ ಶಕುನಗಳು ಮತ್ತು ಭಯಂಕರವಾದ ಉತ್ಪಾತಗಳು ಕಂಡುಬರುತ್ತಿವೆ. ಎಲೈ ವಾರ್ಷ್ಣೇಯನೇ, ಅನೇಕ ವಿಧವಾದ ಮತ್ತು ರೋಮಾಂಚಕಾರಿಯಾದ ಆ ಅಪಶಕುನಗಳು ದುರ್ಯೋಧನನ ಪರಾಜಯವನ್ನೂ, ಯುಧಿಷ್ಠಿರನ ವಿಜಯವನ್ನೂ ಸೂಚಿಸುವಂತಿವೆ.

ಪ್ರಾಜಾಪತ್ಯಂ ಹಿ ನಕ್ಷತ್ರಂ ಗ್ರಹಸ್ತೀಕ್ಷ್ಣೋ ಮಹಾದ್ಯುತಿಃ ।
ಶನೈಶ್ಚರಃ ಪೀಡಯತಿ ಪೀಡಯನ್ ಪ್ರಾಣಿನೋऽಧಿಕಮ್ ॥೮॥

ತೀಕ್ಷ್ಣವಾದ ಮಹಾಕಾಂತಿಯನ್ನು ಹೊಂದಿದ ಶನಿಗ್ರಹವು ಪ್ರಾಜಾಪತ್ಯ ದೇವತಾಕವಾದ ರೋಹಿಣಿನಕ್ಷತ್ರವನ್ನು ಪೀಡಿಸುತ್ತಾ, ಎಲ್ಲ ಪ್ರಾಣಿಗಳನ್ನು ಅತಿಶಯವಾಗಿ ಪೀಡಿಸುತ್ತಿದೆ.

ಕೃತ್ವಾ ಚಾಂಗಾರಕೋ ವಕ್ರಂ ಜ್ಯೇಷ್ಠಾಯಾಂ ಮಧುಸೂದನ ।
ಅನೂ(ನು)ರಾಧಾಂ ಪ್ರಾರ್ಥಯತೇ ಮೈತ್ರಂ ಸಂಶಮಯನ್ನಿವ ॥೯॥

ಎಲೈ ಮಧುಸೂದನನೇ, ಅಂಗಾರಕ ಗ್ರಹವು ಜ್ಯೇಷ್ಠಾನಕ್ಷತ್ರದಲ್ಲಿ ವಕ್ರಗತಿಯನ್ನು ಹೊಂದಿ ಅನುರಾಧಾ ನಕ್ಷತ್ರವನ್ನು ನೋಡುತ್ತಿದೆ. ಇದು ಸ್ನೇಹವನ್ನು ನಾಶಗೊಳಿಸುವ ಸೂಚನೆಯನ್ನು ನೀಡುತ್ತಿದೆ.

ನೂನಂ ಮಹದ್ಭಯಂ ಕೃಷ್ಣ ಕುರೂಣಾಂ ಸಮುಪಸ್ಥಿತಮ್ ।
ವಿಶೇಷೇಣ ಹಿ ವಾರ್ಷ್ಣೇಯ ಚಿತ್ರಾಂ ಪೀಡಯತೇ ಗ್ರಹಃ ॥೧೦॥

ಎಲೈ ಕೃಷ್ಣನೇ, ಕೌರವರಿಗೆ ಖಂಡಿತವಾಗಿ ದೊಡ್ಡ ಭಯವು ಸನ್ನಿಹಿತವಾಗಿದೆ. ಎಲೈ ವಾರ್ಷ್ಣೇಯನೇ, ಚಿತ್ರಾ ನಕ್ಷತ್ರದಲ್ಲಿ ಗ್ರಹಪೀಡೆಯು ವಿಶೇಷವಾಗಿ ಉಂಟಾಗುತ್ತಿದೆ.

ಸೋಮಸ್ಯ ಲಕ್ಷ್ಮ ವ್ಯಾವೃತ್ತಂ ರಾಹುರರ್ಕಮುಪೇಷ್ಯತಿ ।
ದಿವಶ್ಚೋಲ್ಕಾ ಪತಂತ್ಯೇತಾಃ ಸನಿರ್ಘಾತಾಃ ಸಕಂಪನಾಃ ॥೧೧॥

ಚಂದ್ರನ ಕಲೆಯು ನಾಶವನ್ನು ಹೊಂದಿದೆ. ಅಮಾವಾಸ್ಯೆ ಅಲ್ಲದ ದಿನ ರಾಹುವು ಸೂರ್ಯನನ್ನು ಹಿಡಿಯಲು ಹೋಗುತ್ತಿದ್ದಾನೆ. ಆಕಾಶದಿಂದ ಸಿಡಿಲುಗಳು ಮತ್ತು ಉಲ್ಕೆಗಳು ಭೂಕಂಪದ ಜೊತೆಗೆ ಮೇಲಿಂದ ಬೀಳುತ್ತಿವೆ.

ನಿಷ್ಪತಂತಿ ಚ ಮಾತಂಗಾ ಮುಂಚಂತ್ಯಶ್ರೂಣಿ ವಾಜಿನಃ ।
ಪಾನೀಯಂ ಯವಸಂ ಚಾಪಿ ನಾಭಿನಂದಂತಿ ಮಾಧವ ॥೧೨॥

ಎಲೈ ಮಾಧವನೇ, ಆನೆಗಳು ಗುಡುಗುತ್ತಿವೆ. ಕುದುರೆಗಳು ಕಣ್ಣೀರನ್ನು ಸುರಿಸುತ್ತಿವೆ. ಪ್ರಾಣಿಗಳು ಮೇವನ್ನಾಗಲೀ, ನೀರನ್ನಾಗಲೀ ಇಷ್ಟಪಡುತ್ತಿಲ್ಲ.

ಪ್ರಾದುರ್ಭೂತೇಷು ಚೈತೇಷು ಭಯಮಾಹುರುಪಸ್ಥಿತಮ್ ।
ನಿಮಿತ್ತೇಷು ಮಹಾಬಾಹೋ ದಾರುಣಂ ಪ್ರಾಣನಾಶನಮ್ ॥೧೩॥

ಎಲೈ ಮಹಾಬಾಹುವೇ, ಇಂತಹ ಘೋರವಾದ ಸೂಚನೆಗಳು ತೋರಿದಾಗ ಸದ್ಯದಲ್ಲಿಯೇ ಇರುವ ಭಯವನ್ನೂ ಮತ್ತು ಪ್ರಾಣನಾಶವನ್ನೂ ಸೂಚಿಸುತ್ತವೆ.

ಅಲ್ಪೇ ಭುಕ್ತೇ ಪುರೀಷಂ ಚ ಪ್ರಭೂತಮಿಹ ದೃಶ್ಯತೇ ।
ವಾಜಿನಾಂ ವಾರಣಾನಾಂ ಚ ಮನುಷ್ಯಾಣಾಂ ಚ ಕೇಶವ ॥೧೪॥

ಧಾರ್ತರಾಷ್ಟ್ರಸ್ಯ ಸೈನ್ಯೇಷು ಸರ್ವೇಷು ಮಧುಸೂದನ ।
ಪರಾಭವಸ್ಯ ತಲ್ಲಿಂಗಮಿತಿ ಪ್ರಾಹುರ್ಮನೀಷಿಣಃ ॥೧೫॥

ಎಲೈ ಮಧುಸೂದನನೇ, ದುರ್ಯೋಧನನ ಸೈನ್ಯದಲ್ಲಿ ಅಶ್ವಗಳು, ಗಜಗಳು ಮತ್ತು ಮನುಷ್ಯರು ಅಲ್ಪ ಆಹಾರವನ್ನು ಸೇವಿಸಿದರೂ ಬಹಳ ಪ್ರಮಾಣದ ಮಲವನ್ನು ವಿಸರ್ಜನೆ ಮಾಡುತ್ತಿದ್ದಾರೆ. ಎಲೈ ಕೇಶವನೇ, ಇದು ಪರಾಭವದ ಚಿಹ್ನೆ ಎಂದು ಜ್ಞಾನಿಗಳು ಹೇಳುತ್ತಾರೆ.

ಪ್ರಹೃಷ್ಟಂ ವಾಹನಂ ಕೃಷ್ಣ ಪಾಂಡವಾನಾಂ ಪ್ರಚಕ್ಷತೇ ।
ಪ್ರದಕ್ಷಿಣಾ ಮೃಗಾಶ್ಚೈವ ತತ್ ತೇಷಾಂ ಜಯಲಕ್ಷಣಮ್ ॥೧೬॥

ಎಲೈ ಕೃಷ್ಣನೇ, ಪಾಂಡವರ ವಾಹನಗಳು ಸಂತುಷ್ಟವಾಗಿವೆ ಎಂದು ಹೇಳುತ್ತಾರೆ. ಮೃಗಗಳು ಅವರ ಸೈನ್ಯಕ್ಕೆ ಪ್ರದಕ್ಷಿಣಾಕಾರಕ್ಕೆ ಹೋಗುತ್ತವೆ. ಅದು ಅವರ ಜಯದ ಲಕ್ಷಣ.

ಅಪಸವ್ಯಾ ಮೃಗಾಶ್ಚೈವ ಧಾರ್ತರಾಷ್ಟ್ರಸ್ಯ ಕೇಶವ ।
ವಾಚಶ್ಚಾಪ್ಯಶರೀರಿಣ್ಯಃ ತತ್ ಪರಾಭವಲಕ್ಷಣಮ್ ॥೧೭॥

ಎಲೈ ಕೇಶವನೇ, ದುರ್ಯೋಧನನ ಸೈನ್ಯದಲ್ಲಿ ಮೃಗಗಳು ಎಡಭಾಗದಲ್ಲಿ ಹೋಗುತ್ತವೆ. ಕೆಟ್ಟ ಅಶರೀರವಾಣಿಗಳು ಕೇಳಿಬರುತ್ತಿವೆ. ಅದು ದುರ್ಯೋಧನನ ಪರಾಭವದ ಸೂಚನೆ.

ಮಯೂರಾಃ ಪುಣ್ಯಶಕುನಾ ಹಂಸಸಾರಸಚಾತಕಾಃ ।
ಜೀವಂಜೀವಕಸಂಘಾಶ್ಚಾಪ್ಯನುಗಚ್ಛಂತಿ ಪಾಂಡವಾನ್ ॥೧೮॥

ನವಿಲುಗಳು, ಪುಣ್ಯಪಕ್ಷಿಗಳು, ಹಂಸಸಾರಸಚಾತಕಗಳು ಮತ್ತು ಚಕೋರ ಸಮೂಹಗಳು ಪಾಂಡವರನ್ನು ಹಿಂಬಾಲಿಸುತ್ತಿವೆ.

ಗೃಧ್ರಾಃ ಕಂಕಾ ಬಕಾಃ ಶ್ಯೇನಾ ಯಾತುಧಾನಾಸ್ತಥಾ ವೃಕಾಃ ।
ಮಕ್ಷಿಕಾಣಾಂ ಚ ಸಂಘಾತಾ ಅನುಧಾವಂತಿ ಕೌರವಾನ್ ॥೧೯॥

ಹದ್ದುಗಳು, ಗಿಡಗಗಳು, ಬಕಗಳು, ಕಂಕಗಳು, ರಾಕ್ಷಸರು, ತೋಳಗಳು ಮತ್ತು ನೊಣಗಳ ಸಮೂಹವು ಕೌರವರನ್ನು ಹಿಂಬಾಲಿಸುತ್ತಿದೆ.

ಧಾರ್ತರಾಷ್ಟ್ರಸ್ಯ ಸೈನ್ಯೇಷು ಭೇರೀಣಾಂ ನಾಸ್ತಿ ನಿಸ್ವನಃ ।
ಅನಾಹತಾಃ ಪಾಂಡವಾನಾಂ ನದಂತಿ ಪಟಹಾಃ ಕಿಲ ॥೨೦॥

ದುರ್ಯೋಧನನ ಸೈನ್ಯದಲ್ಲಿ ಭೇರಿಯ ನಾದವಿಲ್ಲ. ಪಾಂಡವರ ಸೈನ್ಯದಲ್ಲಿ ಹೊಡೆಯದಿದ್ದರೂ ಭೇರಿಗಳಿಂದ ನಾದವು ಕೇಳಿ ಬರುತ್ತಿದೆ.

ಉದಪಾನಾಶ್ಚ ನರ್ದಂತಿ ತಥಾ ಗೋವೃಷಭಾ ಇವ ।
ಧಾರ್ತರಾಷ್ಟ್ರಸ್ಯ ಸೈನ್ಯೇಷು ತತ್ ಪರಾಭವಲಕ್ಷಣಮ್ ॥೨೧॥

ದುರ್ಯೋಧನನ ಸೈನ್ಯದ ಸಮೀಪದಲ್ಲಿರುವ ಜಲಾಶಯಗಳಲ್ಲಿ ಗೂಳಿಗಳು ಗುಟುರು ಹಾಕುವ ಶಬ್ದವು ಕೇಳಿಬರುತ್ತಿದೆ. ಅದು ಪರಾಭವದ ಸೂಚನೆ.

ಮಾಂಸಶೋಣಿತವರ್ಷಂ ಚ ವೃಷ್ಟಂ ದೇವೇನ ಮಾಧವ ।
ತಥಾ ಗಂಧರ್ವನಗರಂ ಭಾನುಮತ್ ಸಮುಪಸ್ಥಿತಮ್ ॥೨೨॥

ಸಪ್ರಾಕಾರಂ ಸಪರಿಘಂ ಸವಪ್ರಂ ಚಾರುತೋರಣಮ್ ।
ಕೃಷ್ಣಶ್ಚ ಪರಿಧಿಸ್ತತ್ರ ಭಾನುಮಾವೃತ್ಯ ತಿಷ್ಠತಿ ॥೨೩॥

ಉದಯಾಸ್ತಮಯೇ ಸಂಧ್ಯೇ ವೇದಯಾನೇ ಮಹದ್ಭಯಮ್ ॥೨೪॥

ಎಲೈ ಮಾಧವನೇ, ದೇವೇಂದ್ರನಿಂದ ಕೌರವರ ಸೈನ್ಯದ ಮೇಲೆ ಮಾಂಸರಕ್ತಗಳ ಮಳೆಯು ಸುರಿಸಲ್ಪಟ್ಟಿತು. ಆಕಾಶದಲ್ಲಿ ಪ್ರಕಾಶಿಸುವ ಗಂಧರ್ವನಗರವು

ಕಂಡುಬರುತ್ತಿದೆ. ಹಾಗೆಯೇ ಪ್ರಾತಃಕಾಲದ ಮತ್ತು ಸಾಯಂಕಾಲದ ಸಮಯದಲ್ಲಿ ಸೂರ್ಯನ ಸುತ್ತಲೂ ಪ್ರಾಕಾರವೂ, ಕಂದುಕಗಳೂ, ಗೋಡೆಗಳೂ, ಸುಂದರವಾದ ತೋರಣಗಳೂ ಇರುವ ಕಪ್ಪಾದ ಪರಿಧಿಗಳು ಕಂಡುಬರುತ್ತಿವೆ. ಇವು ದೊಡ್ಡ ಭಯವನ್ನು ಸೂಚಿಸುತ್ತವೆ.

ಏಕಪಾದಾಕ್ಷಿಚರಣಾ ನರ್ದಂತೋ ಘೋರದರ್ಶನಾಃ ।
ವಾಶ್ಯಂತೇ ಪಕ್ಷಿಣೋ ಘೋರಂ ತತ್ ಪರಾಭವಲಕ್ಷಣಮ್ ॥೨೫॥

ಶಿವಾ ಚ ವಾಶತೇ ಘೋರಂ ತತ್ ಪರಾಭವಲಕ್ಷಣಮ್ ॥೨೬॥

ಒಂದು ಪಾದ ಮತ್ತು ಒಂದು ಕಣ್ಣು ಇರುವ ಭಯಂಕರವಾದ ಪಕ್ಷಿಗಳು ಕೌರವರ ಸೈನ್ಯದ ಮೇಲೆ ಘೋರವಾಗಿ ಕಿರುಚಾಡುತ್ತಿವೆ. ಅದು ಪರಾಭವದ ಸೂಚನೆ. ನರಿಗಳೂ ಸಹ ಕೌರವರ ಸೈನ್ಯದ ಬಳಿ ರೋದಿಸುತ್ತಿವೆ. ಅದೂ ಪರಾಭವದ ಸೂಚನೆ.

ಕೃಷ್ಣಗ್ರೀವಾಶ್ಚ ಶಕುನಾ ರಕ್ತಪಾದಾ ಭಯಾನಕಾಃ ।
ಸಂಧ್ಯಾಮಭಿಮುಖಾ ಯಾಂತಿ ತತ್ ಪರಾಭವಲಕ್ಷಣಮ್ ॥೨೭॥

ಸಂಧ್ಯಾಕಾಲದಲ್ಲಿ ಕಪ್ಪಾದ ಕಂಠಗಳನ್ನೂ, ಕೆಂಪಾದ ಪಾದಗಳನ್ನೂ ಹೊಂದಿರುವ ಭಯಂಕರವಾದ ಪಕ್ಷಿಗಳು ಸೂರ್ಯನಿಗೆ ಅಭಿಮುಖವಾಗಿ ಹೋಗುತ್ತಿವೆ. ಅದೂ ಪರಾಭವದ ಲಕ್ಷಣ.

ಬ್ರಾಹ್ಮಣಾನ್ ಪ್ರಥಮಂ ದ್ವೇಷ್ಟಿ ಗುರೂಂಶ್ಚ ಮಧುಸೂದನ ।
ಭೃತ್ಯಾನ್ ಭಕ್ತಿಮತಶ್ಚಾಪಿ ತತ್ ಪರಾಭವಲಕ್ಷಣಮ್ ॥೨೮॥

ಬ್ರಾಹ್ಮಣರನ್ನು ಮೊದಲು ದ್ವೇಷ ಮಾಡುತ್ತಾನೆ. ಮಧುಸೂದನನೇ, ಅನಂತರ ಗುರುಗಳನ್ನು ದ್ವೇಷಮಾಡುತ್ತಾನೆ. ಅನಂತರ ನಿಷ್ಠಾವಂತರಾದ ಸೇವಕರನ್ನು ದ್ವೇಷ ಮಾಡುತ್ತಾನೆ. ಅದು ಪರಾಭವದ ಲಕ್ಷಣ.

ಪೂರ್ವಾ ದಿಗ್ ಲೋಹಿತಾಕಾರಾ ಶಸ್ತ್ರವರ್ಣಾ ಚ ದಕ್ಷಿಣಾ ।
ಆಮ್ರಪತ್ರಪ್ರತೀಕಾಶಾ ಪಶ್ಚಿಮಾ ಮಧುಸೂದನ ॥೨೯॥

ಉತ್ತರಾ ಶಂಖವರ್ಣಾಭಾ ದಿಶೋ ವರ್ಣಾ ಉದಾಹೃತಾಃ ॥೩೦॥

ಪೂರ್ವದಿಕ್ಕು ಕೆಂಪುಬಣ್ಣದಿಂದ ಕೂಡಿದೆ. ದಕ್ಷಿಣ ದಿಕ್ಕು ಶಸ್ತ್ರವರ್ಣದಿಂದ ಕೂಡಿದೆ. ಮಧುಸೂದನನೇ, ಪಶ್ಚಿಮ ದಿಕ್ಕು ಮಾವಿನ ಎಲೆಯ ಬಣ್ಣವನ್ನು ಹೊಂದಿದೆ. ಉತ್ತರ ದಿಕ್ಕು ಶಂಖದ ಬಣ್ಣವನ್ನು ಹೊಂದಿದೆ. ದಿಕ್ಕುಗಳ ಬಣ್ಣಗಳನ್ನು ಹೇಳಿದ್ದೇನೆ.

ಪ್ರದೀಪ್ತಾಶ್ಚ ದಿಶಃ ಸರ್ವಾ ಧಾರ್ತರಾಷ್ಟ್ರಸ್ಯ ಮಾಧವ ।
ಮಹದ್ಭಯಂ ವೇದಯಂತಿ ತಸ್ಮಿನ್ನುತ್ಪಾತಲಕ್ಷಣೇ ॥೩೧॥

ಮಾಧವನೇ, ದುರ್ಯೋಧನನ ಸುತ್ತಲೂ ಇರುವ ಎಲ್ಲ ದಿಕ್ಕುಗಳೂ ಪ್ರದೀಪ್ತವಾಗಿ ಈ ಅಪಶಕುನದ ಲಕ್ಷಣದಿಂದ ದೊಡ್ಡ ಭಯವನ್ನು ಸೂಚಿಸುತ್ತಿವೆ.

ಸಹಸ್ರಪಾದಂ ಪ್ರಾಸಾದಂ ಸ್ವಪ್ನಾಂತೇ ತು ಯುಧಿಷ್ಠಿರಃ ।
ಅಧಿರೋಹನ್ ಮಯಾ ದೃಷ್ಟಃ ಸಹ ಭ್ರಾತೃಭಿರಚ್ಯುತ ॥೩೨॥

ಎಲೈ ಅಚ್ಯುತನೇ, ಸ್ವಪ್ನದಲ್ಲಿ ನಾನು, ಯುಧಿಷ್ಠಿರನು ತನ್ನ ತಮ್ಮಂದಿರ ಜೊತೆಯಲ್ಲಿ ಸಹಸ್ರ ಸ್ತಂಭಗಳಿರುವ ಒಂದು ಪ್ರಾಸಾದವನ್ನು ಹತ್ತಿಕುಳಿತಿರುವುದನ್ನು ನೋಡಿದೆನು.

ಶ್ವೇತೋಷ್ಣೀಷಾಶ್ಚ ದೃಶ್ಯಂತೇ ಸರ್ವೇ ಚ ಮಧುಸೂದನ ।
ಆಸನಾನಿ ಚ ಶುಭ್ರಾಣಿ ಸರ್ವೇ ತೇ ಶುಕ್ಲವಾಸಸಃ ॥೩೩॥

ಎಲೈ ಮಧುಸೂದನನೇ, ಪಾಂಡವರೆಲ್ಲರೂ ಬಿಳಿಯ ರುಮಾಲುಗಳನ್ನೂ, ಬಿಳಿಯ ವಸ್ತ್ರಗಳನ್ನೂ ಧರಿಸಿ, ಶುಭ್ರವಾದ ಆಸನಗಳಲ್ಲಿ ಕುಳಿತಿರುವುದನ್ನು ನೋಡಿದೆನು.

ತವ ಚಾಪಿ ಮಯಾ ಕೃಷ್ಣ ಸ್ವಪ್ನಾಂತೇ ರುಧಿರಾವಿಲಾ ।
ಆಂತ್ರೇಣ ಪೃಥಿವೀ ದೃಷ್ಟಾ ಪರಿಕ್ಷಿಪ್ತಾ ಜನಾರ್ದನ ॥೩೪॥

ಎಲೈ ಜನಾರ್ದನನೇ, ನಿನ್ನ ಪ್ರದೇಶವೂ ಕೂಡ ರಕ್ತದ ಕೆಸರಿನಿಂದ ತುಂಬಿ, ಕರುಳಿನ ಮಾಲೆಗಳಿಂದ ಸುತ್ತುವರಿಯಲ್ಪಟ್ಟಿದ್ದನ್ನು ನಾನು ಸ್ವಪ್ನದಲ್ಲಿ ನೋಡಿದೆನು.

ಅಸ್ಥಿಸಂಚಯಮಾರೂಢಃ ಚಾಮಿತೌಜಾ ಯುಧಿಷ್ಠಿರಃ ।
ಸುವರ್ಣಪಾತ್ರ್ಯಾಂ ಸಂಹೃಷ್ಟೋ ಭುಕ್ತವಾನ್ ಘೃತಪಾಯಸಮ್ ॥೩೫॥

ಅಮಿತ ಪರಾಕ್ರಮಿಯಾದ ಯುಧಿಷ್ಠಿರನು ಅಸ್ಥಿಗಳ ರಾಶಿಗಳ ಮೇಲೆ ಕುಳಿತು ಸುವರ್ಣ ಪಾತ್ರೆಯಲ್ಲಿ ಘೃತಪಾಯಸವನ್ನು ಸಂತೋಷದಿಂದ ಸೇವಿಸುತ್ತಿದ್ದನು.

ಯುಧಿಷ್ಠಿರೋ ಮಯಾ ದೃಷ್ಟೋ ಗ್ರಸಮಾನೋ ವಸುಂಧರಾಮ್ ।
ತ್ವಯಾ ದತ್ತಾಮಿಮಾಂ ವ್ಯಕ್ತಂ ಭೋಕ್ಷ್ಯತೇ ಸ ವಸುಂಧರಾಮ್ ॥೩೬॥

ನೀನು ಕೊಟ್ಟ ಭೂಮಿಯನ್ನು ಯುಧಿಷ್ಠಿರನು ನುಂಗುತ್ತಿರುವುದನ್ನು ನಾನು ನೋಡಿದೆನು. ಖಂಡಿತವಾಗಿ ಅವನು ಈ ಭೂಮಿಯನ್ನು ಭೋಗಿಸುವನು.

ಉಚ್ಚಪರ್ವತಮಾರೂಢೋ ಭೀಮಕರ್ಮಾ ವೃಕೋದರಃ ।
ಗದಾಪಾಣಿರ್ನರವ್ಯಾಘ್ರೋ ವೀಕ್ಷನ್ನಿವ ಮಹೀಮಿಮಾಮ್ ॥೩೭॥

ಕ್ಷಪಯಿಷ್ಯತಿ ನಃ ಸರ್ವಾನ್ ಸ ಸುವ್ಯಕ್ತಂ ಮಹಾರಣೇ ॥೩೮॥

ವಿದಿತಂ ಮೇ ಹೃಷೀಕೇಶ ಯತೋ ಧರ್ಮಸ್ತತೋ ಜಯಃ ॥೩೯॥

ಭಯಂಕರ ಕಾರ್ಯವನ್ನು ಮಾಡುವ ವೃಕೋದರನು ಎತ್ತರವಾದ ಪರ್ವತವನ್ನು ಹತ್ತಿ, ನರವ್ಯಾಘ್ರನಾದ ಅವನು ಕೈಯಲ್ಲಿ ಗದೆಯನ್ನು ಹಿಡಿದು ಈ ಭೂಮಿಯನ್ನು ನೋಡುತ್ತಿರುವವನಂತೆ ನಾನು ಸ್ವಪ್ನವನ್ನು ನೋಡಿದೆನು. ಅವನು ದೊಡ್ಡ ಯುದ್ಧದಲ್ಲಿ ನಿಶ್ಚಿತವಾಗಿ ನಮ್ಮನ್ನೆಲ್ಲಾ ನಾಶಗೊಳಿಸುವನು. ಎಲೈ ಹೃಷೀಕೇಶನೇ, ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ ಎಂದು ನಾನು ತಿಳಿದಿದ್ದೇನೆ.

ಪಾಂಡರಂ ಗಜಮಾರೂಢೋ ಗಾಂಡೀವೀ ಸ ಧನಂಜಯಃ ।
ತ್ವಯಾ ಸಾರ್ಧಂ ಹೃಷೀಕೇಶ ಶ್ರಿಯಾ ಪರಮಯಾ ಜ್ವಲನ್ ॥೪೦॥

ಎಲೈ ಹೃಷೀಕೇಶನೇ, ಗಾಂಡೀವ ಧನುರ್ಧಾರಿಯಾದ ಅರ್ಜುನನು ಬಿಳಿಯ ಆನೆಯ ಮೇಲೆ ನಿನ್ನ ಜೊತೆಯಲ್ಲಿ ಕುಳಿತು ಪರಮಕಾಂತಿಯಿಂದ ಕಂಗೊಳಿಸುವುದನ್ನು ನಾನು ನೋಡಿದೆನು.

ಯೂಯಂ ಸರ್ವೇ ವಧಿಷ್ಯಧ್ವಂ ತತ್ರ ಮೇ ನಾಸ್ತಿ ಸಂಶಯಃ ।
ಪಾರ್ಥಿವಾನ್ ಸಮರೇ ಕೃಷ್ಣ ದುರ್ಯೋಧನವಶಾನುಗಾನ್ ॥೪೧॥

ಎಲೈ ಕೃಷ್ಣನೇ, ನೀವೆಲ್ಲರೂ ಯುದ್ಧದಲ್ಲಿ ದುರ್ಯೋಧನನ ವಶವರ್ತಿಗಳಾದ ರಾಜರನ್ನು ಕೊಲ್ಲುವಿರಿ ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ನಕುಲಃ ಸಹದೇವಶ್ಚ ಸಾತ್ಯಕಿಶ್ಚ ಮಹಾರಥಃ ।
ಶುದ್ಧಕೇಯೂರಕಂಠಾಸ್ತು ಶುಕ್ಲಮಾಲ್ಯಾಂಬರಾವೃತಾಃ ॥೪೨॥

ಅಧಿರೂಢಾ ನರವ್ಯಾಘ್ರ ನರವಾಹನಮುತ್ತಮಮ್ ॥೪೩॥

ನಕುಲ, ಸಹದೇವ ಮತ್ತು ಮಹಾರಥನಾದ ಸಾತ್ಯಕಿ ಇವರು ಕಂಠದಲ್ಲಿ ಶುದ್ಧವಾದ ಕೇಯೂರವನ್ನು ಧರಿಸಿ, ಬಿಳಿಯ ವಸ್ತ್ರ ಮತ್ತು ಮಾಲೆಗಳನ್ನು ಧರಿಸಿ, ಎಲೈ ನರವ್ಯಾಘ್ರನೇ, ಶ್ರೇಷ್ಠವಾದ ನರವಾಹನವನ್ನು ಹತ್ತಿದ್ದರು.

ತ್ರಯ ಏತೇ ಮಹಾಮಾತ್ರಾಃ ಪಾಂಡರಶ್ಚತ್ರವಾಸಸಃ ।
ಶ್ವೇತೋಷ್ಣೀಷಾಶ್ಚ ದೃಶ್ಯಂತೇ ಸರ್ವೇ ಮಾಧವ ಪಾಂಡವಾಃ ॥೪೪॥

ಎಲೈ ಮಾಧವನೇ, ಈ ಮೂವರು ಮಹಾಮಾತ್ರರು ಶ್ವೇತಚ್ಛತ್ರವನ್ನು ಮತ್ತು ಶ್ವೇತವಸ್ತ್ರಗಳನ್ನು ಹೊಂದಿದವರಾಗಿದ್ದರು. ಎಲ್ಲ ಪಾಂಡವರೂ ಬಿಳಿಯ ರುಮಾಲುಗಳನ್ನು ಧರಿಸಿರುವುದು ಸ್ವಪ್ನದಲ್ಲಿ ಕಂಡುಬರುತ್ತಿದ್ದಿತು.

ಧಾರ್ತರಾಷ್ಟ್ರೇಷು ಸೈನ್ಯೇಷು ತಾನ್ ವಿಜಾನೀಹಿ ಕೇಶವ ।
ಅಶ್ವತ್ಥಾಮಾ ಕೃಪಶ್ಚೈವ ಕೃತವರ್ಮಾ ಚ ಸಾತ್ವತಃ ॥೪೫॥

ರಕ್ತೋಷ್ಣೀಷಾಶ್ಚ ದೃಶ್ಯಂತೇ ಸರ್ವೇ ಮಾಧವ ಕೌರವಾಃ ॥೪೬॥

ಎಲೈ ಕೇಶವನೇ, ದುರ್ಯೋಧನನ ಸೈನ್ಯದಲ್ಲಿ ಕಂಡುಬರುವುದನ್ನು ಕೇಳು. ಎಲೈ ಮಾಧವನೇ, ಅಶ್ವತ್ಥಾಮ, ಕೃಪ, ಸಾತ್ವತ ಕುಲದ ಕೃತವರ್ಮ ಮತ್ತು ಎಲ್ಲಾ ಕೌರವರೂ ಕೆಂಪುಬಣ್ಣದ ರುಮಾಲುಗಳನ್ನು ಧರಿಸಿರುವುದು ಕಂಡುಬರುತ್ತಿದ್ದಿತು.

ಉಷ್ಟ್ರಪ್ರಯುಕ್ತಮಾರೂಢೌ ಭೀಷ್ಮದ್ರೋಣೌ ಜನಾರ್ದನ ॥೪೭॥

ಮಯಾ ಸಾರ್ಧಂ ಮಹಾಬಾಹೋ ಧಾರ್ತರಾಷ್ಟ್ರೇಣ ವೈ ವಿಭೋ ।
ಅಗಸ್ತ್ಯಕಾಂತಾಂ ಚ ದಿಶಂ ಪ್ರಯಾತಾಃ ಸ್ಮ ಜನಾರ್ದನ ॥೪೮॥

ಎಲೈ ಜನಾರ್ದನನೇ, ಮಹಾಬಾಹುವೇ, ವಿಭುವೇ, ಒಂಟೆಗಳನ್ನು ಹೂಡಿದ ರಥಗಳನ್ನು ಏರಿ, ಭೀಷ್ಮ-ದ್ರೋಣರು ನನ್ನ ಮತ್ತು ದುರ್ಯೋಧನನ ಜೊತೆಯಲ್ಲಿ ಅಗಸ್ತ್ಯರಿಗೆ ಪ್ರಿಯವಾದ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡುತ್ತಿದ್ದರು.

ಅಚಿರೇಣೈವ ಕಾಲೇನ ಪ್ರಾಪ್ಸ್ಯಾಮೋ ಯಮಸಾದನಮ್ ।
ಅಹಂ ಚಾನ್ಯೇ ಚ ರಾಜಾನೋ ಯಚ್ಚ ತತ್ ಕ್ಷತ್ರಮಂಡಲಮ್ ॥೪೯॥

ಗಾಂಡೀವಾಗ್ನಿಂ ಪ್ರವೇಕ್ಷ್ಯಾಮ ಇತಿ ಮೇ ನಾತ್ರ ಸಂಶಯಃ ॥೫೦॥

ನಾನು, ಉಳಿದ ರಾಜರು ಮತ್ತು ಸಮಗ್ರವಾದ ಕ್ಷತ್ರಿಯಸಮೂಹವು ಶೀಘ್ರವಾಗಿ ಯಮಲೋಕವನ್ನು ಸೇರುವೆವು. ನಾವು ಗಾಂಡೀವಾಗ್ನಿಯನ್ನು ಪ್ರವೇಶಿಸುವೆವು ಎಂಬ ವಿಷಯದಲ್ಲಿ ನನಗೆ ಸಂಶಯವಿಲ್ಲ.

ಶ್ರೀಭಗವಾನ್

ಉಪಸ್ಥಿತವಿನಾಶೇಯಂ ನೂನಮದ್ಯ ವಸುಂಧರಾ ।
ಯಥಾ ಹಿ ಮೇ ವಚಃ ಕರ್ಣ ನೋಪೈತಿ ಹೃದಯಂ ತವ ॥೫೧॥

ಶ್ರೀಭಗವಾನ್– ಈ ದಿನ ಭೂಮಿಗೆ ವಿನಾಶವು ಸನ್ನಿಹಿತವಾಗಿದೆ. ಎಲೈ ಕರ್ಣನೇ, ಏಕೆಂದರೆ ನನ್ನ ಹಿತನುಡಿಗಳು ನಿನ್ನ ಮನಸ್ಸನ್ನು ಸೇರುತ್ತಿಲ್ಲ.

ಸರ್ವೇಷಾಂ ತಾತ ಭೂತಾನಾಂ ವಿನಾಶೇ ಸಮುಪಸ್ಥಿತೇ ।
ಅನಯೋ ನಯಸಂಕಾಶೋ ಹೃದಯಾನ್ನಾಪಸರ್ಪತಿ ॥೫೨॥

ಎಲೈ ಪ್ರೀತಿಪಾತ್ರನೇ, ಎಲ್ಲಪ್ರಾಣಿಗಳಿಗೆ ವಿನಾಶವು ಸನ್ನಿಹಿತವಾದಾಗ ಅನೀತಿಯು ನೀತಿಯಂತೆ ತೋರುತ್ತಾ ಮನಸ್ಸನ್ನು ಬಿಟ್ಟುಹೋಗುವುದಿಲ್ಲ.

ಕರ್ಣಃ

ಅಪಿ ತ್ವಾಂ ಕೃಷ್ಣ ಪಶ್ಯಾಮೋ ಜೀವಂತೋಽಸ್ಮಾನ್ಮಹಾರಣಾತ್ ।
ಸಮುತ್ತೀರ್ಣಾ ಮಹಾಬಾಹೋ ವೀರಕ್ಷಯಮಹಾಹ್ರದಾತ್ ॥೫೩॥

ಕರ್ಣ– ಎಲೈ ಕೃಷ್ಣನೇ, ಮಹಾಬಾಹುವೇ, ವೀರಕ್ಷಯವುಳ್ಳ ಮಹಾ ಮಡುವಿನಂತಿರುವ ಈ ದೊಡ್ಡ ಯುದ್ಧವನ್ನು ದಾಟಿ ನಾವು ಬದುಕಿ ಇನ್ನೊಮ್ಮೆ ನಿನ್ನನ್ನು ನೋಡುತ್ತೇವೆಯೇ?

ಅಥವಾ ಸಂಗಮಃ ಕೃಷ್ಣ ಸ್ವರ್ಗೇ ನೋ ಭವಿತಾ ಧ್ರುವಮ್ ।
ತತ್ರೇದಾನೀಂ ಸಮೇಷ್ಯಾಮಃ ಪುನಃ ಸಾರ್ಧಂ ತ್ವಯಾಽನಘ ॥೫೪॥

ಅಥವಾ ಕೃಷ್ಣನೇ, ಸ್ವರ್ಗದಲ್ಲಿ ನಿಶ್ಚಿತವಾಗಿ ನಮ್ಮ ಸಮಾಗಮವು ಉಂಟಾಗುವುದು. ಎಲೈ ಅನಘನೇ, ಅಲ್ಲಿ ಪುನಃ ನಮ್ಮ ಸಮಾಗಮವು ಉಂಟಾಗುವುದು. ಈಗ ಅನುಮತಿಯನ್ನು ಕೊಡು.

ವೈಶಂಪಾಯನಃ

ಇತ್ಯುಕ್ತ್ವಾ ಮಾಧವಂ ಕರ್ಣಃ ಪರಿಷ್ವಜ್ಯ ನಿಪೀಡ್ಯ ತಮ್ ।
ವಿಸರ್ಜಿತಃ ಕೇಶವೇನ ರಥೋಪಸ್ಥಾದವಾತರತ್ ॥೫೫॥

ವೈಶಂಪಾಯನ– ಹೀಗೆ ಹೇಳಿ ಕರ್ಣನು ಮಾಧವನನ್ನು ಬಿಗಿದು ಆಲಿಂಗಿಸಿ ಅವನಿಂದ ಬೀಳ್ಕೊಡಲ್ಪಟ್ಟು ರಥದ ಪೀಠದಿಂದ ಇಳಿದನು.

ತತಃ ಸ್ವರಥಮಾಸ್ಥಾಯ ಜಾಂಬೂನದವಿಭೂಷಿತಮ್ ।
ಮಹಾತ್ಮಾ ವೈ ನಿವವೃತೇ ರಾಧೇಯೋ ದೀನಮಾನಸಃ ॥೫೬॥

ಅನಂತರ ಸುವರ್ಣಾಲಂಕೃತವಾದ ತನ್ನ ರಥವನ್ನು ಏರಿ ಮಹಾತ್ಮನಾದ ಕರ್ಣನು ದೀನಮನಸ್ಸಿನಿಂದ ಹಿಂದಿರುಗಿದನು.

ತತಃ ಶೀಘ್ರತರಂ ಪ್ರಾಯಾತ್ ಕೇಶವಃ ಸಹಸಾತ್ಯಕಿಃ ।
ಪುನರುಚ್ಚಾರಯನ್ ವಾಣೀಂ ಯಾಹಿ ಯಾಹೀತಿ ಸಾತ್ಯಕಿಮ್ ॥೫೭॥

ಅತ್ತ ಕಡೆ ಕೇಶವನು ಸಾತ್ಯಕಿಯನ್ನು ಕುರಿತು ಬೇಗ ಹೋಗು, ಬೇಗ ಹೋಗು ಎಂದು ಹೇಳುತ್ತಾ ಸಾತ್ಯಕಿಯ ಜೊತೆಯಲ್ಲಿ (ಉಪಪ್ಲಾವ್ಯನಗರಕ್ಕೆ) ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಮ್ ಉದ್ಯೋಗಪರ್ವಣಿ
ದ್ವಿಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

॥ ವಿವಾದಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರನಲವತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ಮೂರನೆಯ ಅಧ್ಯಾಯ

ಯುದ್ಧದಲ್ಲಿ ಉಂಟಾಗಲಿರುವ ವಿನಾಶವನ್ನು ಚಿಂತಿಸಿ ವಿದುರನ ಶೋಕ.
ಗಂಗಾತೀರದಲ್ಲಿ ಕುಂತೀ-ಕರ್ಣರ ಸಮಾಗಮ.

ವೈಶಂಪಾಯನಃ

ಅಸಿದ್ಧಾನುನಯೇ ಕೃಷ್ಣೇ ಕುರುಭ್ಯಃ ಪಾಂಡವಾನ್ ಗತೇ ।
ಅಭಿಗಮ್ಯ ಪೃಥಾಂ ಕ್ಷತ್ತಾ ಶನೈಃ ಶೋಚನ್ನಿವಾಬ್ರವೀತ್ ॥೧॥

ವೈಶಂಪಾಯನ– ಕೃಷ್ಣನ ಸಂಧಾನ ಪ್ರಯತ್ನವು ವಿಫಲವಾಗಿ ಅವನು ಕೌರವರನ್ನು ಬಿಟ್ಟು ಪಾಂಡವರ ಸಮೀಪಕ್ಕೆ ಹೊರಟಮೇಲೆ ವಿದುರನು ಕುಂತಿಯನ್ನು ಸಮೀಪಿಸಿ ಶೋಕಪಡುವವನಂತೆ ನಿಧಾನವಾಗಿ ಮಾತನಾಡಿದನು.

ಜಾನಾಸಿ ಮೇ ಜೀವಪುತ್ರಿ ಭಾವಂ ನಿತ್ಯಮವಿಗ್ರಹೇ ।
ಕ್ರೋಶತೋ ನ ಚ ಗೃಹ್ಣಾತಿ ವಚನಂ ಮೇ ಸುಯೋಧನಃ ॥೨॥

ಎಲೌ ಜೀವಪುತ್ರಿಯೇ (ಬದುಕಿರುವ ಗಂಡುಮಕ್ಕಳನ್ನು ಹೊಂದಿದವಳೇ), ಯುದ್ಧವು ನಡೆಯಬಾರದೆಂಬ ಯಾವಾಗಲೂ ಇರುವ ನನ್ನ ಅಭಿಪ್ರಾಯವನ್ನು ನೀನು ತಿಳಿದಿದ್ದೀಯೆ. ನಾನು ಕಿರುಚುತ್ತಿದ್ದರೂ ಸುಯೋಧನನು ನನ್ನ ಮಾತನ್ನು ಸ್ವೀಕರಿಸುತ್ತಿಲ್ಲ.

ಉಪಪನ್ನೋ ಹ್ಯಸೌ ರಾಜಾ ಚೇದಿಪಾಂಚಾಲಕೇಕಯೈಃ ।
ಭೀಮಾರ್ಜುನಾಭ್ಯಾಂ ಕೃಷ್ಣೇನ ಯುಯುಧಾನಯಮೈರಪಿ ॥೩॥

ಈ ಯುಧಿಷ್ಠಿರರಾಜನು ಚೇದಿ-ಪಾಂಚಾಲ-ಕೇಕಯರಿಂದಲೂ, ಭೀಮಾರ್ಜುನರಿಂದಲೂ, ಕೃಷ್ಣನಿಂದಲೂ, ಯುಯುಧಾನನಿಂದಲೂ ಮತ್ತು ನಕುಲ-ಸಹದೇವರಿಂದಲೂ ಕೂಡಿದವನಾಗಿದ್ದಾನೆ.

ಉಪಪ್ಲಾವ್ಯೇ ನಿವಿಷ್ಟೋಽಪಿ ಧರ್ಮರಾಜೋ ಯುಧಿಷ್ಠಿರಃ ।
ಕಾಂಕ್ಷತೇ ಜ್ಞಾತಿಭಿಃ ಸಂಧಿಂ ಬಲವಾನ್ ದುರ್ಬಲೋ ಯಥಾ ॥೪॥

ಧರ್ಮರಾಜನಾದ ಯುಧಿಷ್ಠಿರನು ಉಪಪ್ಲಾವ್ಯನಗರದಲ್ಲಿ ವಾಸಿಸುತ್ತಿದ್ದರೂ ಬಲಿಷ್ಠನಾದ ಅವನು ದುರ್ಬಲನಂತೆ ದಾಯಾದಿಗಳ ಜೊತೆಯಲ್ಲಿ ಸಂಧಿಯನ್ನು ಬಯಸುತ್ತಾನೆ.

ರಾಜಾ ತು ಧೃತರಾಷ್ಟ್ರೋಽಯಂ ವಯೋವೃದ್ಧೋ ನ ಶಾಮ್ಯತಿ ।
ಮತ್ತಃ ಪುತ್ರಮದೇನೈವ ವಿಧರ್ಮೇ ಪಥಿ ವರ್ತತೇ ॥೫॥

ವಯೋವೃದ್ಧನಾದ ಈ ಧೃತರಾಷ್ಟ್ರರಾಜನು ಸಮಾಧಾನವನ್ನು ಹೊಂದುತ್ತಿಲ್ಲ. ಪುತ್ರನ ಮದದಿಂದ ಅವನೂ ಮತ್ತನಾಗಿ ಧರ್ಮವಿರುದ್ಧ ಮಾರ್ಗದಲ್ಲಿ ನಡೆಯುತ್ತಿದ್ದಾನೆ.

ಜಯದ್ರಥಸ್ಯ ಕರ್ಣಸ್ಯ ತಥಾ ದುಃಶಾಸನಸ್ಯ ಚ ।
ಸೌಬಲಸ್ಯ ಚ ದುರ್ಬುದ್ಧ್ಯಾ ಮಿಥೋ ಭೇದಃ ಪ್ರವರ್ತತೇ ॥೬॥

ಜಯದ್ರಥ, ಕರ್ಣ, ದುಶ್ಶಾಸನ, ಶಕುನಿ- ಇವರ ದುರ್ಬುದ್ಧಿಯಿಂದ ಜ್ಞಾತಿಗಳಲ್ಲಿ ವಿರೋಧವುಂಟಾಗುತ್ತಿದೆ.

ಅಧರ್ಮೇಣ ಹಿ ಧರ್ಮಿಷ್ಠಂ ಹ್ರಿಯತೇ ರಾಜ್ಯಮೀದೃಶಮ್ ।
ಯೇಷಾಂ ತೇಷಾಮಯಂ ಧರ್ಮಃ ಸಾನುಬಂಧೋ ಭವಿಷ್ಯತಿ ॥೭॥

ಯಾರ ಇಂತಹ ಧರ್ಮಿಷ್ಠವಾದ ರಾಜ್ಯವು ಅಧರ್ಮದಿಂದ ಅಪಹರಿಸಲ್ಪಡುತ್ತದೆಯೋ ಅವರಿಗೆ ಈ ಧರ್ಮವು ಸಾಂಗವಾಗಿರುತ್ತದೆ.

ಹ್ರಿಯಮಾಣೇ ಬಲಾದ್ ಧರ್ಮೇ ಕುರುಭಿಃ ಕೋ ನ ಸಂಜ್ವರೇತ್ ।
ಅಸಾಮ್ನಾ ಕೇಶವೇ ಯಾತೇ ಸಮುದೇಷ್ಯಂತಿ ಪಾಂಡವಾಃ ॥೮॥

ಬಲಾತ್ಕಾರದಿಂದ ಧರ್ಮವು ನಾಶಮಾಡಲ್ಪಟ್ಟರೆ ಕೌರವರ ಮೇಲೆ ಯಾವನು ಕೋಪವನ್ನು ಹೊಂದುವುದಿಲ್ಲ? ಸಂಧಿಯನ್ನು ಸಾಧಿಸದೆ ಕೃಷ್ಣನು ಹೋದಮೇಲೆ ಪಾಂಡವರು ಮೇಲೇಳುವರು.

ತತಃ ಕುರೂಣಾಮನಯೋ ಭವಿತಾ ವೀರನಾಶನಃ ।
ಚಿಂತಯನ್ ನ ಲಭೇ ನಿದ್ರಾಮಹಸ್ಸು ಚ ನಿಶಾಸು ಚ ॥೯॥

ಅನಂತರ ಕುರುಗಳಿಗೆ ವೀರನಾಶನವಾದ ಅನ್ಯಾಯದ ಯುದ್ಧ ಉಂಟಾಗುವುದು. ಇದನ್ನು ಯೋಚಿಸುತ್ತಾ ನಾನು ಹಗಲೂ, ರಾತ್ರಿಯೂ ನಿದ್ರೆಯನ್ನು ಮಾಡುತ್ತಿಲ್ಲ.

ವೈಶಂಪಾಯನಃ

ಶ್ರುತ್ವಾ ತು ಕುಂತೀ ತದ್ವಾಕ್ಯಮರ್ಥಕಾಮೇನ ಭಾಷಿತಮ್ ।
ಸಾ ನಿಃಶ್ವಸಂತೀ ದುಃಖಾರ್ತಾ ಮನಸಾ ವಿಮಮರ್ಶ ಹ ॥೧೦॥

ವೈಶಂಪಾಯನ– ಅರ್ಥಕಾಮನಾದ ವಿದುರನಿಂದ ಹೇಳಲ್ಪಟ್ಟ ಆ ಮಾತುಗಳನ್ನು ಕೇಳಿ ಕುಂತಿಯು ದುಃಖದಿಂದ ಆರ್ತಳಾಗಿ ನಿಟ್ಟುಸಿರನ್ನು ಬಿಡುತ್ತಾ ಮನಸ್ಸಿನಲ್ಲಿಯೇ (ಹೀಗೆ) ವಿಮರ್ಶೆ ಮಾಡಿದಳು.

ಧಿಗಸ್ತ್ವರ್ಥಂ ಯತ್ಕೃತೇऽಯಂ ಸುಮಹಾನ್ ಜ್ಞಾತಿಸಂಕ್ಷಯಃ ।
ವರ್ತತೇ ಸುಹೃದಾಂ ಚೈವ ಯುದ್ಧೇऽಸ್ಮಿನ್ ವೈ ಪರಾಭವಃ ॥೧೧॥

ಯಾವ ಅರ್ಥದ ಸಲುವಾಗಿ ಈ ದೊಡ್ಡ ಜ್ಞಾತಿಸಮೂಹಕ್ಕೆ ವಿನಾಶವು ಉಂಟಾಗುತ್ತದೆಯೋ ಅಂತಹ ಅರ್ಥಕ್ಕೆ ಧಿಕ್ಕಾರವಿರಲಿ. ಈ ಯುದ್ಧದಲ್ಲಿ ಸುಹೃಜ್ಜನರೂ ಸಹ ಪರಾಭವವನ್ನು ಹೊಂದುತ್ತಾರೆ.

ಪಾಂಡವಾಶ್ಚೇದಿಪಾಂಚಾಲಾ ಯಾದವಾಶ್ಚ ಸಮಾಗತಾಃ ।
ಭಾರತೈಃ ಸಹ ಯೋತ್ಸ್ಯಂತಿ ಕಿಂ ನು ದುಃಖಮತಃ ಪರಮ್ ॥೧೨॥

ಇಲ್ಲಿಗೆ ಸಮಾಗತರಾದ ಪಾಂಡವರೂ, ಚೇದಿ-ಪಾಂಚಾಲರೂ, ಯಾದವರೂ ಭಾರತರ ಜೊತೆಯಲ್ಲಿ ಯುದ್ಧವನ್ನು ಮಾಡುವರು. ಇದಕ್ಕಿಂತ ದೊಡ್ಡ ದುಃಖವು ಯಾವುದು?

ಪಶ್ಯೇ ದೋಷಂ ಧ್ರುವಂ ಯುದ್ಧೇ ತಥಾऽಯುದ್ಧೇ ಪರಾಭವಮ್ ।
ಅಧನಸ್ಯ ಮೃತಂ ಶ್ರೇಯೋ ನ ಹಿ ಜ್ಞಾತಿಕ್ಷಯೋ ಜಯಃ ॥೧೩॥

ಇತಿ ಮೇ ಚಿಂತಯಂತ್ಯಾ ವೈ ಹೃದಿ ದುಃಖಂ ಪ್ರವರ್ತತೇ ॥೧೪॥

ಯುದ್ಧದಲ್ಲಿ ಸ್ಪಷ್ಟವಾಗಿ ದೋಷವನ್ನು ನೋಡುತ್ತಿದ್ದೇನೆ. ಯುದ್ಧವನ್ನು ಮಾಡದಿದ್ದರೆ ಪರಾಭವವನ್ನೂ ನೋಡುತ್ತಿದ್ದೇನೆ. ದರಿದ್ರನಾದವನಿಗೆ ಮರಣವೇ ಶ್ರೇಷ್ಠವಾದುದು. ಜ್ಞಾತಿಗಳ ಕ್ಷಯವು ಜಯವಲ್ಲವಷ್ಟೆ? ಹೀಗೆ ಚಿಂತಿಸುತ್ತಾ ನನ್ನ ಮನಸ್ಸಿನಲ್ಲಿ ದುಃಖವು ಹೆಚ್ಚುತ್ತಿದೆ.

ಪಿತಾಮಹಃ ಶಾಂತನವ ಆಚಾರ್ಯಶ್ಚ ಯುಧಾಂಪತಿಃ ।
ಕರ್ಣಶ್ಚ ಧಾರ್ತರಾಷ್ಟ್ರಾರ್ಥಂ ವರ್ಧಯಂತಿ ಭಯಂ ಮಮ ॥೧೫॥

ಪಿತಾಮಹರಾದ ಭೀಷ್ಮರೂ, ಯುದ್ಧನಾಯಕರಾದ ದ್ರೋಣರೂ ಮತ್ತು ಸುಯೋಧನನ ಸಲುವಾಗಿ ಯುದ್ಧವನ್ನು ಮಾಡುವ ಕರ್ಣನೂ ನನ್ನ ಭಯವನ್ನು ಹೆಚ್ಚಿಸುತ್ತಾರೆ.

ನಾಚಾರ್ಯಃ ಕಾಮವಾನ್ ಶಿಷ್ಯೈಃ
ದ್ರೋಣೋ ಯುದ್ಧ್ಯೇತ ಜಾತುಚಿತ್ ।
ಪಾಂಡವೇಷು ಕಥಂ ಹಾರ್ದಂ ಕುರ್ಯಾನ್ನ ಚ ಪಿತಾಮಹಃ ॥೧೬॥

ಶಿಷ್ಯರಿಂದ ಅಪೇಕ್ಷಿತಫಲವನ್ನು ಪಡೆದ ದ್ರೋಣರು ಅವರ ಜೊತೆಯಲ್ಲಿ ಎಂದೂ ಯುದ್ಧವನ್ನು ಮಾಡಲಾರರು. ಪಿತಾಮಹರಾದ ಭೀಷ್ಮರಾದರೂ ಮೊಮ್ಮಕ್ಕಳಾದ ಬಾಂಧವರಲ್ಲಿ ಹೇಗೆ ಪ್ರೀತಿಯನ್ನು ಮಾಡದೆ ಇರಲು ಸಾಧ್ಯ ?

ಅಥ ತ್ವೇಕೋ ವೃಥಾದೃಷ್ಟಿಃ ಧಾರ್ತರಾಷ್ಟ್ರಸ್ಯ ದುರ್ಮತೇಃ ।
ಮೋಹಾನುವರ್ತೀ ಸತತಂ ಪಾಪೋ ದ್ವೇಷ್ಟಿ ಚ ಪಾಂಡವಾನ್ ॥೧೭॥

ಮಹತ್ಯನರ್ಥೇ ನಿರ್ಬಂಧೀ ಬಲವಾಂಶ್ಚ ವಿಶೇಷತಃ ।
ಕರ್ಣಃ ಸದಾ ಪಾಂಡವದ್ವಿಟ್ ತನ್ಮೇ ದಹತಿ ಸಂಪ್ರತಿ ॥೧೮॥

ಆದರೆ ಇವನೊಬ್ಬನೇ ಮಿಥ್ಯಾದೃಷ್ಟಿಯುಳ್ಳವನಾಗಿ ದುರ್ಬುದ್ಧಿಯುಳ್ಳ ಸುಯೋಧನನ ಮೋಹವನ್ನು ಅನುಸರಿಸಿ ಸತತವಾಗಿ ಪಾಂಡವರನ್ನು ದ್ವೇಷಿಸುತ್ತಾನೆ. ಅವನು ದೊಡ್ಡ ಅನರ್ಥವನ್ನು ಉಂಟುಮಾಡುವುದರಲ್ಲಿ ಹಠವುಳ್ಳವನು ಮತ್ತು ವಿಶೇಷವಾದ ಬಲವುಳ್ಳವನು. ಅವನೆಂದರೆ ಕರ್ಣ. ಅವನು ಯಾವಾಗಲೂ ಪಾಂಡವ ದ್ವೇಷಿ. ಅದು ಈಗ ನನ್ನ ಮನಸ್ಸನ್ನು ಸುಡುತ್ತಿದೆ.

ಆಶಂಸೇ ತದ್ಯ ಕರ್ಣಸ್ಯ ಮನೋऽಹಂ ಪಾಂಡವಾನ್ ಪ್ರತಿ ।
ಪ್ರಸಾದಯಿತುಮಾಸಾದ್ಯ ದರ್ಶಯಂತೀ ಯಥಾತಥಮ್ ॥೧೯॥

ಈ ದಿನ ನಾನು ಕರ್ಣನ ಬಳಿಗೆ ಹೋಗಿ, ಅವನಿಗೆ ಸತ್ಯಸಂಗತಿಗಳನ್ನು ಹೇಳಿ ಅವನ ಮನಸ್ಸನ್ನು ಪಾಂಡವರ ಪರವಾಗಿ ತಿರುಗಿಸಲು ಆಸೆ ಪಡುತ್ತೇನೆ.

ತೋಷಿತೋ ಭಗವಾನ್ ಯತ್ರ ದುರ್ವಾಸಾ ಮೇ ವರಂ ದದೌ ।
ಆಹ್ವಾನಂ ಮಂತ್ರಸಂಯುಕ್ತಂ ವಸಂತ್ಯಾಃ ಪಿತೃವೇಶ್ಮನಿ ॥೨೦॥

ನಾನು ತಂದೆಯ ಮನೆಯಲ್ಲಿ ವಾಸಮಾಡುತ್ತಿದ್ದಾಗ ನನ್ನಿಂದ ಸಂತೋಷಪಡಿಸಲ್ಪಟ್ಟ ದುರ್ವಾಸರು ನನಗೆ ದೇವತೆಗಳನ್ನು ಆಹ್ವಾನ ಮಾಡುವ ಮಂತ್ರಗಳ ಉಪದೇಶವನ್ನು ವರವಾಗಿ ಕೊಟ್ಟರು.

ಸಾऽಹಮಂತಃಪುರೇ ರಾಜ್ಞಃ ಕುಂತಿಭೋಜಪುರಸ್ಕೃತಾ ।
ಚಿಂತಯಂತೀ ಬಹುವಿಧಂ ಹೃದಯೇನ ವಿದೂಯತಾ ॥೨೧॥

ಬಲಾಬಲಂ ಚ ಮಂತ್ರಾಣಾಂ ಬ್ರಾಹ್ಮಣಸ್ಯ ಚ ವಾಗ್ಬಲಮ್ ।
ಸ್ತ್ರೀಭಾವಾದ್ ಬಾಲಭಾವಾಚ್ಚ ಚಿಂತಯಂತೀ ಪುನಃ ಪುನಃ ॥೨೨॥

ಧಾತ್ರ್ಯಾ ವಿಸ್ರಬ್ಧಯಾ ಗುಪ್ತಾ ಸಖೀಜನವೃತಾ ತದಾ ।
ದೋಷಂ ಪರಿಹರಂತೀ ಚ ಪಿತುಶ್ಚಾರಿತ್ರರಕ್ಷಿಣೀ ॥೨೩॥

ಕಥಂ ನು ಸುಕೃತಂ ಮೇ ಸ್ಯಾನ್ನಾಪರಾಧವತೀ ಕಥಮ್ ।
ಭವೇಯಮಿತಿ ಸಂಚಿಂತ್ಯ ಬ್ರಾಹ್ಮಣಂ ತಂ ನಮಸ್ಯ ಚ ॥೨೪॥

ಕೌತೂಹಲಾತ್ ಸುತಂ ಲಬ್ಧ್ವಾ ಬಾಲಿಶ್ಯಾದಾಚರಂ ತದಾ ॥೨೫॥

ನಾನು ಕುಂತಿಭೋಜರಾಜನ ಅರಮನೆಯಲ್ಲಿ ವಾಸಮಾಡುತ್ತಾ, ದುಃಖಪಡುತ್ತಿರುವ ಮನಸ್ಸಿನಿಂದ ಬಹುವಿಧವಾಗಿ ಚಿಂತಿಸುತ್ತಾ, ಚಿಕ್ಕ ಕನ್ಯೆಯಾದುದರಿಂದ ಬಾಲಭಾವದಿಂದ ಮಂತ್ರಗಳ ಬಲಾಬಲವನ್ನೂ, ಬ್ರಾಹ್ಮಣನ ವಾಕ್ಸಿದ್ಧಿಯನ್ನೂ ಸ್ತ್ರೀಭಾವದಿಂದಲೂ, ಬಾಲಭಾವದಿಂದಲೂ ಪುನಃ ಪುನಃ ಚಿಂತಿಸುತ್ತಾ ವಿಶ್ವಾಸಪಾತ್ರರಾದ ದಾದಿಯಿಂದ ರಕ್ಷಿತಳಾಗಿ, ಸಖೀಜನರಿಂದ ಪರಿವೃತಳಾಗಿ, ದೋಷವನ್ನು ಪರಿಹಾರ ಮಾಡಿಕೊಳ್ಳಲು ಬಯಸಿ ಮತ್ತು ತಂದೆಯ ಚಾರಿತ್ರ್ಯವನ್ನು ರಕ್ಷಿಸುವವಳಾಗಿ ನಾನು ಏನು ಮಾಡಿದರೆ ಒಳ್ಳೆಯದಾಗುತ್ತದೆ, ಏನು ಮಾಡಿದರೆ ನನ್ನಿಂದ ಅಪರಾಧವಾಗುವುದಿಲ್ಲ ಎಂದು ಚಿಂತಿಸಿ, ಆ ಬ್ರಾಹ್ಮಣನಿಗೆ ನಮಸ್ಕರಿಸಿ ಕುತೂಹಲದಿಂದ ಮಗನನ್ನು ಪಡೆದು ಬಾಲಿಶಬುದ್ಧಿಯಿಂದ ಅಂತಹ ಕೆಲಸವನ್ನು ಮಾಡಿದೆ.

ಕನ್ಯಾ ಸತೀ ದೇವಮಕರ್ಮಮಾಸಾದಯಮಹಂ ತತಃ ।
ಯೋಽಸೌ ಕಾನೀನಗರ್ಭೋ ಮೇ ಪುತ್ರವತ್ ಪರಿರಕ್ಷಿತಃ ॥೨೬॥

ಕಸ್ಮಾನ್ನ ಕುರ್ಯಾದ್ ವಚನಂ ಪಥ್ಯಂ ಭ್ರಾತೃಹಿತಂ ತಥಾ ॥೨೭॥

ನಾನು ಕನ್ಯೆಯಾಗಿರುವಾಗಲೇ ಆಗ ಸೂರ್ಯದೇವನನ್ನು ಸಮೀಪಿಸಿದೆನು. ಕನ್ಯೆಯಾದ ನನ್ನ ಗರ್ಭದಲ್ಲಿದ್ದ ಈ ಕರ್ಣನನ್ನು ಮಗನಂತೆಯೇ ರಕ್ಷಿಸಿದೆ. ಅವನು ತನ್ನ ಸಹೋದರರ ಹಿತಕ್ಕಾಗಿ (ನಾನು) ಆಡುವ ಪಥ್ಯವಾದ ಮಾತುಗಳನ್ನು ಏಕೆ ನಡೆಸಿಕೊಡಲಾರನು?

ವೈಶಂಪಾಯನಃ

ಇತಿ ಕುಂತೀ ವಿನಿಶ್ಚಿತ್ಯ ಕಾರ್ಯನಿಶ್ಚಯಮುತ್ತಮಮ್ ।
ಕಾರ್ಯಾರ್ಥಮಭಿನಿರ್ಯಾಯ ಯಯೌ ಭಾಗೀರಥೀಂ ಪ್ರತಿ ॥೨೮॥

ವೈಶಂಪಾಯನ– ಹೀಗೆ ಕುಂತಿಯು ತಾನು ಮಾಡಬೇಕಾದ ಶ್ರೇಷ್ಠವಾದ ಕಾರ್ಯವನ್ನು ನಿರ್ಧರಿಸಿ, ಅದನ್ನು ಸಾಧಿಸಲು ಗಂಗಾನದಿಯ ಬಳಿಗೆ ಹೊರಟಳು.

ಆತ್ಮಜಸ್ಯ ತತಸ್ತಸ್ಯ ಘೃಣಿನಃ ಸತ್ಯಸಂಗಿನಃ ।
ಗಂಗಾತೀರೇ ಪೃಥಾಽಶ್ರೌಷೀತ್ ತದಾಽಧ್ಯಯನನಿಸ್ವನಮ್ ॥೨೯॥

ಅವಳು ಗಂಗಾತೀರವನ್ನು ತಲುಪಿ ಅಲ್ಲಿ ಸತ್ಯವಂತನೂ, ದಯಾಳುವೂ ಆದ ತನ್ನ ಪುತ್ರನ ವೇದಾಧ್ಯಯನ ಧ್ವನಿಯನ್ನು ಕೇಳಿದಳು.

ಪ್ರಾಙ್ಮುಖಿನ್ಯೋರ್ಧ್ವಬಾಹೋಃ ಸಾ ಪರ್ಯತಿಷ್ಠತ ಪೃಷ್ಠತಃ ।
ಜಪ್ಯಾವಸಾನೇ ಕಾರ್ಯಾರ್ಥಂ ಪ್ರತೀಕ್ಷಂತೀ ತಪಸ್ವಿನೀ ॥೩೦॥

ಪೂರ್ವಾಭಿಮುಖವಾಗಿ ನಿಂತು, ಎರಡು ಬಾಹುಗಳನ್ನು ಎತ್ತಿ ಸೂರ್ಯನ ಉಪಸ್ಥಾನವನ್ನು ಮಾಡುತ್ತಿದ್ದ ಕರ್ಣನ ಹಿಂದೆ ಅವನ ಜಪವು ಮುಗಿದ ಮೇಲೆ ತನ್ನ ಕಾರ್ಯದ ಸಾಧನೆಯನ್ನು ನಿರೀಕ್ಷಿಸುತ್ತಾ ತಪಸ್ವಿನಿಯಾದ ಕುಂತಿಯು ನಿಂತಳು.

ಅತಿಷ್ಠತ್ ಸೂರ್ಯತಾಪಾರ್ತಾ ಕರ್ಣಸ್ಯೋತ್ತರವಾಸಿನೀ ।
ಕೌರವ್ಯಪತ್ನೀ ವಾರ್ಷ್ಣೇಯೀ ಪದ್ಮಮಾಲೇವ ಶುಷ್ಯತೀ ॥೩೧॥

ಪಾಂಡುಪತ್ನಿಯೂ, ವಾಷ್ರ್ಣೇಯಿಯೂ ಆದ ಅವಳು ಸೂರ್ಯನ ತಾಪಕ್ಕೆ ಬಳಲಿ ಒಣಗುವ ಪದ್ಮಮಾಲೆಯಂತೆ ಕರ್ಣನ ಉತ್ತರಭಾಗದಲ್ಲಿ ನಿಂತಳು.

ಆಪೃಷ್ಠತಾಪಾಜ್ಜಪ್ತ್ವಾ ತ್ವಸೌ ಪರಿವೃತ್ಯ ಯತವ್ರತಃ ।
ದೃಷ್ಟ್ವಾ ಕುಂತೀಮುಪಾತಿಷ್ಠದ್ ಅಭಿವಾದ್ಯ ಕೃತಾಂಜಲಿಃ ॥೩೨॥

ಯಥಾನ್ಯಾಯಂ ಮಹಾತೇಜಾ ಮಾನೀ ಧರ್ಮಭೃತಾಂ ವರಃ ॥೩೩॥

ಸೂರ್ಯನ ತಾಪದಿಂದ ಬೆನ್ನು ಕಾಯುವವರೆಗೆ ದೃಢವ್ರತನಾದ ಕರ್ಣನು ಜಪವನ್ನು ಮಾಡಿ, ಅನಂತರ ಹಿಂದುಗಡೆ ತಿರುಗಿ ಕುಂತಿಯನ್ನು ನೋಡಿ, ಅವಳಿಗೆ ವಿಧಿಪ್ರಕಾರವಾಗಿ ಕೈಗಳನ್ನು ಮುಗಿದು ನಮಸ್ಕಾರವನ್ನು ಮಾಡಿ ಮಹಾತೇಜಸ್ವಿಯೂ, ಮಾನಿಯೂ, ಧರ್ಮಿಷ್ಠರಲ್ಲಿ ಶ್ರೇಷ್ಠನೂ ಆದ ಅವನು ಕುಂತಿಯ ಬಳಿಗೆ ಬಂದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

॥ ವಿವಾದಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರನಲವತ್ಮೂರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ – ಅಧ್ಯಾಯಃ – ೨೪

ಸಂಪ್ರಾರ್ಥಿತಃ ಪೃಥಯಾ ಚೈವ ಕರ್ಣಃ
ಪಾರ್ಥ್ಯೈರ್ಯೋಗಂ ಯಾಹಿ ಸೂನುರ್ಮಮಾಸಿ ।
ತೇನಾಪ್ಯುಕ್ತಾ ವಾಸವಿನಾ ವಿನಾಽಹಂ
ಹನ್ಯಾಂ ಸುತಾಂಸ್ತೇ ನ ಕಥಂಚನೇತಿ ॥೮೮॥

ಕುಂತಿ ಕರ್ಣನನ್ನು ಕೇಳಿಕೊಂಡಳು. 'ನೀನು ನನ್ನ ಮಗನಾಗಿರುವಿ. ಪಾಂಡವರ ಜೊತೆ ಸೇರು' ಎಂದು. ಅವನೆಂದ 'ಅಮ್ಮ! ಅರ್ಜುನನನ್ನು ಹೊರತು ನಿನ್ನ ಬೇರೆ ಯಾವ ಮಕ್ಕಳನ್ನೂ ನಾನು ಸರ್ವಥಾ ಕೊಲ್ಲುವುದಿಲ್ಲ' ಎಂದು.

★ ★ ★ ★ ★

ನೂರ ನಲವತ್ನಾಲ್ಕನೆಯ ಅಧ್ಯಾಯ

ಕರ್ಣನ ಜನ್ಮವೃತ್ತಾಂತವನ್ನು ಹೇಳಿದ ಕುಂತಿಯಿಂದ
ಪಾಂಡವರನ್ನು ಸೇರುವಂತೆ ಅವನಿಗೆ ಪ್ರಚೋದನೆ.

ಕರ್ಣಃ

ರಾಧೇಯೋಽಹಮಾಧಿರಥಃ ಕರ್ಣಸ್ತಾ ತ್ವಮಭಿವಾದಯೇ ।
ಪ್ರಾಪ್ತಾ ಕಿಮರ್ಥಂ ಭವತೀ ಬ್ರೂಹಿ ಕಿಂ ಕರವಾಣಿ ತೇ ॥೧॥

ಕರ್ಣ– ಅಧಿರಥ ಮತ್ತು ರಾಧೆಯ ಪುತ್ರನಾದ ಕರ್ಣನಾದ ನಾನು ನಮಸ್ಕರಿಸುತ್ತಿದ್ದೇನೆ. ಪೂಜ್ಯಳಾದ ನೀನು ಏತಕ್ಕೆ ಬಂದೆ? ನಿನಗೆ ಏನು ಮಾಡಲಿ ಎಂದು ಹೇಳು.

ಕುಂತೀ

ಕೌಂತೇಯಸ್ತ್ವಂ ನ ರಾಧೇಯೋ ನ ತವಾಧಿರಥಃ ಪಿತಾ ।
ನಾಸಿ ಸೂತಕುಲೇ ಜಾತಃ ಕರ್ಣ ತದ್ ವಿದ್ಧಿ ಮೇ ವಚಃ ॥೨॥

ಕುಂತೀ– ಎಲೈ ಕರ್ಣನೇ, ನೀನು ಕುಂತಿಯ ಪುತ್ರ , ರಾಧೆಯ ಪುತ್ರನಲ್ಲ. ಅಧಿರಥನು ನಿನ್ನ ತಂದೆಯಲ್ಲ. ನೀನು ಸೂತಕುಲದಲ್ಲಿ ಜನಿಸಿದವನಲ್ಲ. ನನ್ನ ಮಾತನ್ನು ನಂಬು.

ಕಾನೀನಸ್ತ್ವಂ ಮಯಾ ಜಾತಃ ಪೂರ್ವಜಃ ಕುಕ್ಷಿಣಾ ಧೃತಃ ।
ಕುಂತಿಭೋಜಸ್ಯ ಭವನೇ ಪಾರ್ಥಸ್ತ್ವಮಸಿ ಪುತ್ರಕ ॥೩॥

ನಾನು ಕನ್ಯೆಯಾಗಿದ್ದಾಗ ನೀನು ನನ್ನಲ್ಲಿ ಜನಿಸಿದವನು. ನೀನು ಯುಧಿಷ್ಠಿರಾದಿಗಳಿಗಿಂತ ಮೊದಲು ಕುಂತಿಭೋಜನ ಮನೆಯಲ್ಲಿದ್ದಾಗ ನನ್ನ ಕುಕ್ಷಿಯಲ್ಲಿ ಧರಿಸಲ್ಪಟ್ಟವನು. ಎಲೈ ಪುತ್ರನೇ, ನೀನು ಪೃಥೆಯಾದ ನನ್ನ ಮಗ.

ಪ್ರಕಾಶಕರ್ಮಾ ತಪನೋ ಯೋಽಯಂ ದೇವೋ ವಿರೋಚನಃ ।
ಅಜೀಜನತ್ ತ್ವಾಂ ಮಯ್ಯೇವ ಕರ್ಣ ಶಸ್ತ್ರಭೃತಾಂ ವರಮ್ ॥೪॥

ಪ್ರಕಾಶವನ್ನೂ, ಶಾಖವನ್ನೂ ಕೊಡುವ ಈ ಯಾವ ಸೂರ್ಯದೇವನು ಇದ್ದಾನೆಯೋ ಅವನು ಎಲೈ ಕರ್ಣನೇ, ನನ್ನಲ್ಲಿಯೇ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ನಿನ್ನನ್ನು ಪಡೆದನು.

ಕುಂಡಲೀ ಬದ್ಧಕವಚೋ ದೇವಗರ್ಭಃ ಶ್ರಿಯಾ ವೃತಃ ।
ಜಾತಸ್ತ್ವಮಸಿ ದುರ್ಧರ್ಷ ಮಯಾ ಪುತ್ರ ಪಿತುರ್ಗೃಹೇ ॥೫॥

ಎಲೈ ಪುತ್ರನೇ, ದುರ್ಧರ್ಷನೇ, ನೀನು ದೇವತೆಯ ಮಗನಾಗಿ, ಕವಚ-ಕುಂಡಲಗಳನ್ನು ಧರಿಸಿ, ಕಾಂತಿಯಿಂದ ಕೂಡಿದವನಾಗಿ ನಾನು ತಂದೆಯ ಮನೆಯಲ್ಲಿದ್ದಾಗ ನನ್ನಲ್ಲಿ ಜನಿಸಿದೆ.

ಸ ತ್ವಂ ಭ್ರಾತೄನಸಂಬುದ್ಧ್ವಾ ಮೋಹಾದ್ ಯದುಪಸೇವಸೇ ।
ಧಾರ್ತರಾಷ್ಟ್ರಾನ್ ನ ತದ್ ಯುಕ್ತಂ ತ್ವಯಿ ಪುತ್ರ ವಿಶೇಷತಃ ॥೬॥

ನೀನು ನಿನ್ನ ಸಹೋದರರನ್ನು ತಿಳಿಯದೆ ಮೋಹದಿಂದ ದುರ್ಯೋಧನಾದಿಗಳನ್ನು ಅನುಸರಿಸುವುದು ಸರಿಯಲ್ಲ. ಪುತ್ರನೇ, ವಿಶೇಷವಾಗಿ ನಿನಗೆ ಅದು ಯುಕ್ತವಲ್ಲ.

ಏತದ್ ಧರ್ಮಫಲಂ ಪುತ್ರ ನರಾಣಾಂ ಧರ್ಮನಿಶ್ಚಯೇ ।
ಯತ್ ತುಷ್ಯಂತ್ಯಸ್ಯ ಪಿತರೋ ಮಾತಾ ಚಾಪ್ಯೇಕದರ್ಶಿನೀ ॥೭॥

ಧರ್ಮನಿಶ್ಚಯವುಳ್ಳ ವಿವೇಕಿಗಳು ತಂದೆ-ತಾಯಿಗಳನ್ನು ಸಂತೋಷಪಡಿಸುವುದು ಮತ್ತು ತಾಯಿಯು ಮುಖ್ಯರಾದ ಮಕ್ಕಳನ್ನು ನೋಡಿ ಸಂತೋಷದಿಂದಿರುವುದು ಧರ್ಮದ ಫಲವೆಂದು ಹೇಳುತ್ತಾರೆ.

ಭ್ರಾತೃಭಿರ್ನಿರ್ಜಿತಾಂ ಪೂರ್ವಂ ಭೀಮಾರ್ಜುನಯಮಾದಿಭಿಃ ।
ಆಚ್ಛಿದ್ಯ ಧಾರ್ತರಾಷ್ಟ್ರೇಭ್ಯೋ ಭುಂಕ್ಷ್ವ ಯೌಧಿಷ್ಠಿರೀಂ ಶ್ರಿಯಮ್ ॥೮॥

ಭೀಮಾರ್ಜುನ, ನಕುಲ-ಸಹದೇವಾದಿ ಸಹೋದರರಿಂದ ಮೊದಲು ನಿರ್ಜಿತವಾದ ಭೂಮಿಯನ್ನು ದುರ್ಯೋಧನಾದಿಗಳಿಂದ ಪುನಃ ಸಂಪಾದಿಸಿಕೊಂಡು, ಧರ್ಮರಾಜನ ಸಂಪತ್ತನ್ನು ಅನುಭವಿಸುವವನಾಗು.

ಅದ್ಯ ಪಶ್ಯಂತು ಕುರವಃ ಕರ್ಣಾರ್ಜುನಸಮಾಗಮಮ್ ।
ಸೌಭ್ರಾತ್ರಮೇತದಾಲಕ್ಷ್ಯ ಸನ್ನಮಂತಾಮಸಾಧವಃ ॥೯॥

ಈ ದಿನ ಕೌರವರು ಕರ್ಣಾರ್ಜುನ ಸಮಾಗಮವನ್ನು ನೋಡುವವರಾಗಲಿ. ಈ ಅಣ್ಣ-ತಮ್ಮಂದಿರ ಸೌಹಾರ್ದವನ್ನು ನೋಡಿ ಅಸಜ್ಜನರು ನಮಸ್ಕರಿಸುವಂತಾಗಲಿ.

ಕರ್ಣಾರ್ಜುನೌ ವೈ ಭವತಾಂ ಯಥಾ ರಾಮಜನಾರ್ದನೌ ।
ಅಸಾಧ್ಯಂ ಕಿಂ ನು ಲೋಕೇ ಸ್ಯಾದ್ ಯುವಯೋಃ ಸಂಹತಾತ್ಮಯೋಃ ॥

ಕರ್ಣಾರ್ಜುನರು ಬಲರಾಮ-ಕೃಷ್ಣರಂತಾಗಲಿ. ನೀವಿಬ್ಬರೂ ಸೇರಿದರೆ ಈ ಲೋಕದಲ್ಲಿ ಅಸಾಧ್ಯವಾದುದು ಯಾವುದಿದೆ?

ಕರ್ಣ ಶೋಭಿಷ್ಯಸೇ ನೂನಂ ಪಂಚಭಿರ್ಭ್ರಾತೃಭಿರ್ವೃತಃ ।
ವೇದೈಃ ಪರಿವೃತೋ ಬ್ರಹ್ಮಾ ಯಥಾ ವೇದಾಂಗಪಂಚಮೈಃ ॥೧೧॥

ಎಲೈ ಕರ್ಣನೇ, ಐದುಜನ ಸಹೋದರರಿಂದ ಕೂಡಿದ ನೀನು ಐದು ವೇದಾಂಗಗಳಿಂದ ಸಹಿತವಾದ ವೇದಗಳಿಂದ ಕೂಡಿದ ಬ್ರಹ್ಮನಂತೆ ಶೋಭಿಸುವಿ.

ಉಪಪನ್ನೋ ಗುಣೈಃ ಸರ್ವೈರ್ಜ್ಯೇಷ್ಠಃ ಶ್ರೇಷ್ಠೇಷು ಬಂಧುಷು ।
ಸೂತ್ರಪುತ್ರೇತಿ ಮಾ ಶಬ್ದಃ ಪಾರ್ಥಸ್ತ್ವಮಸಿ ವೀರ್ಯವಾನ್ ॥೧೨॥

ನೀನು ಎಲ್ಲ ಗುಣಗಳಿಂದಲೂ ಕೂಡಿದವನಾಗಿದ್ದು ಬಂಧುಗಳಲ್ಲಿ ಜ್ಯೇಷ್ಠನೂ ಮತ್ತು ಶ್ರೇಷ್ಠನೂ ಆಗಿದ್ದೀಯೆ. ಸೂತಪುತ್ರನೆಂಬ ಶಬ್ದವನ್ನು ಹೇಳಬೇಡ. ನೀನು ಪ್ರತಾಪಶಾಲಿಯಾದ ಕುಂತೀಪುತ್ರನಾಗಿದ್ದೀಯೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಶ್ಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

॥ ವಿವಾದಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರನಲವತ್ನಾಲ್ಕನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೈದನೆಯ ಅಧ್ಯಾಯ

ಕುಂತಿಗೆ ಕರ್ಣನ ಉತ್ತರ. ಅರ್ಜುನನನ್ನು ಬಿಟ್ಟು ಬೇರೆ ಪಾಂಡವರನ್ನು ಕೊಲ್ಲುವುದಿಲ್ಲವೆಂದು ವಾಗ್ದಾನ.

ವೈಶಂಪಾಯನಃ

ತತಃ ಸೂರ್ಯಾನ್ನಿಃಸರಂತೀಂ ಕರ್ಣಃ ಶುಶ್ರಾವ ಭಾರತೀಮ್ ।
ದುರತ್ಯಯಾಂ ಪ್ರಣಯಿನೀಂ ಪಿತೃವದ್ ಗೌರವೇರಿತಾಮ್ ॥೧॥

ವೈಶಂಪಾಯನ– ಅನಂತರ ಸೂರ್ಯನಿಂದ ಹೊರಹೊಮ್ಮಿದ, ಮೀರಲು ಅಸಾಧ್ಯವಾದ, ಸ್ನೇಹಪೂರ್ವಕವಾದ ತಂದೆಯ ಮಾತಿನಂತೆ ಗೌರವಾನ್ವಿತನಾದ ಮಾತನ್ನು ಕರ್ಣನು ಕೇಳಿದನು.

ಸೂರ್ಯಃ

ಸತ್ಯಮಾಹ ಪೃಥಾ ವಾಕ್ಯಂ ಕರ್ಣ ಮಾತೃವಚಃ ಶೃಣು ।
ಶ್ರೇಯಸ್ತೇ ಸ್ಯಾನ್ನರವ್ಯಾಘ್ರ ಸರ್ವಮಾಚರತಸ್ತಥಾ ॥೨॥

ಸೂರ್ಯ– ಕರ್ಣನೇ, ಕುಂತಿಯು ಸತ್ಯವನ್ನು ಹೇಳುತ್ತಿದ್ದಾಳೆ. ತಾಯಿಯ ಮಾತನ್ನು ಕೇಳು. ನರವ್ಯಾಘ್ರನೇ, ಅವಳು ಹೇಳಿದಂತೆ ಎಲ್ಲವನ್ನೂ ಮಾಡಿದರೆ ನಿನಗೆ ಶ್ರೇಯಸ್ಸಾಗುವುದು.

ವೈಶಂಪಾಯನಃ

ಏವಮುಕ್ತಸ್ಯ ಮಾತ್ರಾ ಚ ಸ್ವಯಂ ಪಿತ್ರಾ ಚ ಭಾನುನಾ ।
ಚಚಾಲ ನೈವ ಕರ್ಣಸ್ಯ ಮತಿಃ ಸತ್ಯಧೃತೇಸ್ತದಾ ॥೩॥

ವೈಶಂಪಾಯನ– ಹೀಗೆ ತಾಯಿಯಿಂದಲೂ ಮತ್ತು ತಂದೆಯಾದ ಸೂರ್ಯನಿಂದಲೂ ಹೇಳಲ್ಪಟ್ಟರೂ ಸಹ ಕರ್ಣನ ಬುದ್ಧಿಯು ಸತ್ಯದಿಂದಲೂ ಮತ್ತು ಧೈರ್ಯದಿಂದಲೂ ಅಲುಗಾಡಲಿಲ್ಲ.

ಕರ್ಣಃ

ನ ಚೈತಚ್ಛ್ರದ್ದಧೇ ವಾಕ್ಯಂ ಕ್ಷತ್ರಿಯೇ ಭಾಷಿತಂ ತ್ವಯಾ ।
ಧರ್ಮದ್ವಾರಂ ಮಮೈತತ್ ಸ್ಯಾನ್ನಿಯೋಗಕರಣಂ ತವ ॥೪॥

ಕರ್ಣ– ಎಲೌ ಕ್ಷತ್ರಿಯಳೇ, ನಿನ್ನ ಆದೇಶದಂತೆ ನಡೆದುಕೊಂಡರೆ ನನಗೆ ಧರ್ಮ ಉಂಟಾಗುವುದು ಎಂಬ ನೀನು ಆಡಿದ ಮಾತನ್ನು ನಾನು ನಂಬುವುದಿಲ್ಲ.

ಅಕರೋನ್ಮಯಿ ಯತ್ ಪಾಪಂ ಭವತೀ ಸುಮಹಾತ್ಯಯಮ್ ।
ಅವಕೀರ್ಣೋ೯ಸ್ಮಿ ಯನ್ಮಾತಃ ತದ್ ಯಶಃಕೀರ್ತಿನಾಶನಮ್ ॥೫॥

ನೀನು ನನ್ನ ವಿಷಯದಲ್ಲಿ ಪರಿಹರಿಸಲಾರದ ದೊಡ್ಡ ಪಾಪವನ್ನು ಎಸಗಿದ್ದೀಯೆ. ತಾಯಿಯೇ, ನೀನು ನನ್ನನ್ನು ಅಕಾಲದಲ್ಲಿ ಪಡೆದು ತ್ಯಜಿಸಿರುವುದರಿಂದ ನನ್ನ ಯಶಸ್ಸನ್ನು ಯಾರೂ ಕೀರ್ತಿಸುವುದಿಲ್ಲ.

ಅಹಂ ಚ ಕ್ಷತ್ರಿಯೋ ಜಾತು ನ ಪ್ರಾಪ್ತಃ ಕ್ಷತ್ರಸತ್ಕ್ರಿಯಾಮ್ ।
ತ್ವತ್ಕೃತೇ ಕಿಂ ನು ಪಾಪೀಯಃ ಶತ್ರುಃ ಕುರ್ಯಾನ್ಮಮಾಹಿತಮ್ ॥೬॥

ನಾನು ಕ್ಷತ್ರಿಯನಾಗಿ ಜನಿಸಿ, ನಿನ್ನ ನಿಮಿತ್ತದಿಂದ ಕ್ಷತ್ರಿಯಯೋಗ್ಯ ಸಂಸ್ಕಾರವನ್ನು ಹೊಂದಲಿಲ್ಲ. ಶತ್ರುವೂ ಕೂಡ ಇದಕ್ಕಿಂತ ಹೆಚ್ಚು ಪಾಪಿಷ್ಠವಾದ ಅಹಿತವನ್ನು ಏನು ಮಾಡಿಯಾನು?

ಕ್ರಿಯಾಕಾಲೇ ತ್ವನುಕ್ರೋಶಮಕೃತ್ವಾ ತ್ವಮಿಮಂ ಮಮ ।
ಸುಸಂಗೃಹೀತಸಮಯಮದ್ಯ ಮಾಂ ಸಮಚೂಚುದಃ ॥೭॥

ಮಾಡಬೇಕಾದ ಕಾಲದಲ್ಲಿ ನನ್ನ ಮೇಲೆ ದಯೆಯನ್ನು ತೋರಿಸದೆ ಈಗ ನಾನು ಸ್ಥಿರವಾದ ಪ್ರತಿಜ್ಞೆಯನ್ನು ಮಾಡಿದ ಮೇಲೆ ನನ್ನ ಬಳಿಗೆ ಬಂದು ನನ್ನನ್ನು ಪ್ರಚೋದಿಸುತ್ತಿದ್ದೀಯೆ.

ನ ವೈ ಮಮ ಹಿತಂ ಪೂರ್ವಂ ಮಾತೃವಚ್ಚೇಷ್ಟಿತಂ ತ್ವಯಾ ।
ಸಾ ಮಾಂ ಸಂಬೋಧಯಸ್ಯದ್ಯ ಕೇವಲಾತ್ಮಹಿತೈಷಿಣೀ ॥೮॥

ನೀನು ನನ್ನ ಜೊತೆಯಲ್ಲಿ ಹಿಂದೆ ಎಂದೂ ತಾಯಿಯಂತೆ ನಡೆದುಕೊಳ್ಳಲಿಲ್ಲ. ಈ ದಿನ ಕೇವಲ ಸ್ವಾರ್ಥಿಯಾಗಿ ನನ್ನನ್ನು ಕುರಿತು ಮಾತನಾಡುತ್ತಿದ್ದೀಯೆ.

ಕೃಷ್ಣೇನ ಸಹಿತಾತ್ ಕೋ ವೈ ನ ವ್ಯಥೇತ ಧನಂಜಯಾತ್ ।
ಕೋ೯ದ್ಯ ಭೀತಂ ನ ಮಾಂ ವಿದ್ಯಾತ್ ಪಾರ್ಥಾನಾಂ ಸಮಿತಿಂ ಗತಮ್ ॥

ಕೃಷ್ಣನಿಂದ ಸಹಿತನಾದ ಅರ್ಜುನನಿಗೆ ಯಾವನು ಹೆದರಲಾರನು? ನಾನು ಈ ದಿನ ಪಾಂಡವರ ಸಭೆಯನ್ನು ಸೇರಿದರೆ ನನ್ನನ್ನು ಭೀತನೆಂದು ಯಾವನು ತಿಳಿಯುವುದಿಲ್ಲ?

ಅಭ್ರಾತಾ ವಿದಿತಃ ಪೂರ್ವಂ ಯುದ್ಧಕಾಲೇ ಪ್ರಕಾಶಿತಃ ।
ಪಾಂಡವಾನ್ ಯದಿ ಗಚ್ಛಾಮಿ ಕಿಂ ಮಾಂ ಕ್ಷತ್ರಂ ವದಿಷ್ಯತಿ ॥೧೦॥

ನನಗೆ ಸಹೋದರರಿಲ್ಲ ಎಂದು ತಿಳಿದ ನನಗೆ ಈಗ ಯುದ್ಧಕಾಲದಲ್ಲಿ ಸಹೋದರರನ್ನು ತೋರಿಸುತ್ತಿದ್ದೀಯೆ. ನಾನು ಪಾಂಡವರ ಜೊತೆಯಲ್ಲಿ ಸೇರಿದರೆ ನನ್ನ ವಿಷಯದಲ್ಲಿ ಕ್ಷತ್ರಿಯಸಮೂಹವು ಏನನ್ನು ಹೇಳುವುದು?

ಸರ್ವಕಾಮೈಃ ಸಂವಿಭಕ್ತಃ ಪೂಜಿತಶ್ಚ ಯಥಾಸುಖಮ್ ।
ಅಹಂ ವೈ ಧಾರ್ತರಾಷ್ಟ್ರಾಣಾಂ ಕುರ್ಯಾಂ ತದಫಲಂ ಕಥಮ್ ॥೧೧॥

ನಾನು ಧೃತರಾಷ್ಟ್ರ ಪುತ್ರರಿಂದ ಎಲ್ಲ ಕಾಮಗಳನ್ನೂ ಒದಗಿಸಲ್ಪಟ್ಟು, ಅವರು ಅನುಭವಿಸುವ ಎಲ್ಲಾ ಕಾಮಗಳನ್ನೂ ಅನುಭವಿಸಿ, ಸುಖವಾಗಿ ಪೂಜಿಸಲ್ಪಟ್ಟಿದ್ದೇನೆ. ನಾನು ಅದನ್ನು ಹೇಗೆ ವ್ಯರ್ಥವನ್ನಾಗಿ ಮಾಡಲಿ?

ಉಪನಹ್ಯ ಪರೈರ್ವೈರಂ ಯೇ ಮಾಂ ನಿತ್ಯಮುಪಾಸತೇ ।
ನಮಸ್ಕುರ್ವಂತಿ ಚ ಸದಾ ವಸವೋ ವಾಸವಂ ಯಥಾ ॥೧೨॥

ಅವರು ಶತ್ರುಗಳ ಜೊತೆಯಲ್ಲಿ ವೈರವನ್ನು ಕಟ್ಟಿಕೊಂಡು ನಿತ್ಯವೂ ನನ್ನ ಉಪಾಸನೆಯನ್ನು ಮಾಡುತ್ತಾರೆ. ವಸುಗಳು ಇಂದ್ರನಿಗೆ ನಮಸ್ಕರಿಸಿದಂತೆ ಸದಾ ನನಗೆ ನಮಸ್ಕರಿಸುತ್ತಾರೆ.

ಮಮ ಪ್ರಾಣೇನ ಯೇ ಶತ್ರೂನ್ ಶಕ್ತಾಃ ಪ್ರತಿಸಮಾಸಿತುಮ್ ।
ಮನ್ಯಂತೇ ತೇ ಕಥಂ ತೇಷಾಮಹಂ ಛಿಂದ್ಯಾಂ ಮನೋರಥಮ್॥೧೩॥

ನನ್ನ ಪ್ರಾಣದಿಂದ ಶತ್ರುಗಳ ಎದುರಿಗೆ ನಿಲ್ಲಲು ಸಮರ್ಥರಾಗಿದ್ದೇವೆ ಎಂದು ಅವರು ತಿಳಿದಿದ್ದಾರೆ. ನಾನು ಅವರ ಮನೋರಥವನ್ನು ಹೇಗೆ ಛೇದಿಸಲಿ?

ಮಯಾ ಪ್ಲವೇನ ಸಂಗ್ರಾಮಂ ತಿತೀರ್ಷಂತಿ ದುರತ್ಯಯಮ್ ।
ಅಪಾರೇ ಪಾರಕಾಮಾ ಯೇ ತ್ಯಜೇಯಂ ತಾನಹಂ ಕಥಮ್ ॥೧೪॥

ದಾಟಲು ಅಸಾಧ್ಯವಾದ ಯುದ್ಧಸಾಗರವನ್ನು, ನನ್ನನ್ನು ನಾವೆಯನ್ನಾಗಿ ಮಾಡಿಕೊಂಡು ಅವರು ದಾಟಲು ಬಯಸುತ್ತಾರೆ. ದಡವಿಲ್ಲದ ಸ್ಥಳದಲ್ಲಿ ನನ್ನನ್ನು ದಡವೆಂದು ಭಾವಿಸುವ ಅವರನ್ನು ನಾನು ಹೇಗೆ ತ್ಯಜಿಸಲಿ?

ಅಯಂ ಹಿ ಕಾಲಃ ಸಂಪ್ರಾಪ್ತೋ ಧಾರ್ತರಾಷ್ಟ್ರೋಪಜೀವಿನಾಮ್ ।
ನಿರ್ವೇಷ್ಟವ್ಯಂ ಮಯಾ ತತ್ರ ಪ್ರಾಣಾನಪರಿರಕ್ಷತಾ ॥೧೫॥

ಸುಯೋಧನನನ್ನು ಆಶ್ರಯಿಸಿದವರಿಗೆ ಅವನ ಋಣವನ್ನು ತೀರಿಸುವ ಕಾಲವು ಬಂದೊದಗಿದೆ. ನನ್ನ ಪ್ರಾಣಗಳನ್ನು ರಕ್ಷಣೆ ಮಾಡದೆ ನಾನು ಆ ಕಾರ್ಯವನ್ನು ಮಾಡಬೇಕು.

ಕೃತಾರ್ಥಾಃ ಸುಭೃತಾ ಯೇ ಹಿ ಕೃತ್ಯಕಾಲೇ ಹ್ಯುಪಸ್ಥಿತೇ ।
ಅನವೇಕ್ಷ್ಯ ಕೃತಂ ಪಾಪಾಃ ಕುರ್ವಂತಿ ಪ್ರಿಯಮಾತ್ಮನಃ ॥೧೬॥

ಯಾರು ಸ್ವಾಮಿಯಿಂದ ಚೆನ್ನಾಗಿ ಪೋಷಿಸಲ್ಪಟ್ಟರೂ ಅವನಿಗೆ ಪ್ರಯೋಜನವನ್ನು ಉಂಟುಮಾಡುವ ಕಾಲದಲ್ಲಿ ಹಿಂದೆ ಮಾಡಿದ ಉಪಕಾರವನ್ನು ಮರೆತು, ಯಾವ ಪಾಪಿಗಳು ಸ್ವಾರ್ಥವನ್ನು ಸಾಧಿಸುತ್ತಾರೆಯೋ ಅವರು ಕೃತಾರ್ಥರು!

ರಾಜಕಿಲ್ಬಿಷಿಣಾಂ ತೇಷಾಂ ಭರ್ತೃಪಿಂಡಾಪಹಾರಿಣಾಮ್ ।
ನೈವಾಯಂ ನ ಪರೋ ಲೋಕೋ ವಿದ್ಯತೇ ಪಾಪಕರ್ಮಣಾಮ್॥೧೭॥

ರಾಜನಿಗೆ ಕಿಲ್ಬಿಷವನ್ನು ಮಾಡಿ, ಭರ್ತೃಪಿಂಡವನ್ನು ಅಪಹರಿಸಿದ ಆ ಪಾಪಕರ್ಮಿಗಳಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ.

ಧೃತರಾಷ್ಟ್ರಸ್ಯ ಪುತ್ರಾಣಾಮರ್ಥೇ ಯೋತ್ಸ್ಯಾಮಿ ತೇ ಸುತೈಃ ।
ಬಲಂ ಚ ಶಕ್ತಿಂ ಚಾಸ್ಥಾಯ ನ ವೈ ತ್ವಯ್ಯನೃತಂ ವದೇ ॥೧೮॥

ಧೃತರಾಷ್ಟ್ರನ ಮಕ್ಕಳ ಪರವಾಗಿ, ನಿನ್ನ ಮಕ್ಕಳ ವಿರುದ್ಧವಾಗಿ ನನ್ನ ಬಲ, ಶಕ್ತಿಗಳನ್ನು ಉಪಯೋಗಿಸಿ ಯುದ್ಧವನ್ನು ಮಾಡುವೆನು. ನಿನಗೆ ಸುಳ್ಳನ್ನು ಹೇಳುವುದಿಲ್ಲ.

ಆನೃಶಂಸ್ಯಮಥೋ ವೃತ್ತಂ ರಕ್ಷನ್ ಸತ್ಪುರುಷೋಚಿತಮ್ ।
ಅತೋಽರ್ಥಕರಮಪ್ಯೇತನ್ನ ಕರೋಮ್ಯದ್ಯ ತೇ ವಚಃ ॥೧೯॥

ಸತ್ಪುರುಷರಿಗೆ ಉಚಿತವಾದ ಮಾರ್ದವವನ್ನೂ ಮತ್ತು ನನ್ನ ನಡತೆಯನ್ನೂ ರಕ್ಷಿಸಿಕೊಳ್ಳುವವನಾಗಿ (ಯುದ್ಧವನ್ನು ಮಾಡುವೆನು). ಆದ್ದರಿಂದ ನಿನ್ನ ಮಾತುಗಳು ನನಗೆ ಪ್ರಯೋಜನಕರವಾದರೂ ಅದನ್ನು ನಾನು ನಡೆಸುವುದಿಲ್ಲ.

ನ ಚ ತೇಽಯಂ ಸಮಾರಂಭೋ ಮಯಿ ಮೋಘೋ ಭವಿಷ್ಯತಿ ।
ವಧ್ಯಾನ್ ವಿಷಹ್ಯಾನ್ ಸಂಗ್ರಾಮೇ ನ ಹನಿಷ್ಯಾಮಿ ತೇ ಸುತಾನ್ ॥

ಯುಧಿಷ್ಠಿರಂ ಚ ಭೀಮಂ ಚ ಯಮೌ ತಾವರ್ಜುನಾದೃತೇ ।
ಅರ್ಜುನೇನ ಸಮಂ ಯುದ್ಧಂ ಮಮ ಯೌಧಿಷ್ಠಿರೇ ಬಲೇ ॥೨೧॥

ನೀನು ನನ್ನಲ್ಲಿ ಮಾಡಿದ ಈ ಪ್ರಯತ್ನವು ವ್ಯರ್ಥವಾಗುವುದಿಲ್ಲ. ಅರ್ಜುನನನ್ನು ಬಿಟ್ಟು ನಿನ್ನ ಮಕ್ಕಳಾದ, ನನ್ನಿಂದ ವಧ್ಯರಾದ, ನನ್ನಿಂದ ಎದುರಿಸಲ್ಪಡಬೇಕಾದ ಯುಧಿಷ್ಠಿರನನ್ನಾಗಲೀ, ಭೀಮನನ್ನಾಗಲೀ, ನಕುಲ-ಸಹದೇವರನ್ನಾಗಲೀ ಯುದ್ಧದಲ್ಲಿ ಕೊಲ್ಲುವುದಿಲ್ಲ. ಯುಧಿಷ್ಠಿರನ ಸೈನ್ಯದಲ್ಲಿ ಅರ್ಜುನನ ಜೊತೆಯಲ್ಲಿ ಮಾತ್ರ ಯುದ್ಧವನ್ನು ಮಾಡುವೆನು.

ಅರ್ಜುನಂ ವಿನಿಹತ್ಯಾಜೌ ಸಂಪ್ರಾಪ್ತಂ ಸ್ಯಾತ್ ಫಲಂ ಮಯಾ ।
ಯಶಸಾ ವಾ ನ ಮುಚ್ಯೇಯಂ ನಿಹತಃ ಸವ್ಯಸಾಚಿನಾ ॥೨೨॥

ಯುದ್ಧದಲ್ಲಿ ಅರ್ಜುನನನ್ನು ಕೊಂದು ನನಗೆ ಯೋಗ್ಯವಾದ ಫಲವನ್ನು ಪಡೆದೇನು. ಅಥವಾ ಅರ್ಜುನನಿಂದ ಹತನಾಗಿ ನನ್ನ ಕೀರ್ತಿಯನ್ನಾದರೂ ರಕ್ಷಿಸಿಕೊಂಡೇನು.

ನ ತೇ ಜಾತು ನಶಿಷ್ಯಂತಿ ಪುತ್ರಾಃ ಪಂಚ ಯಶಸ್ವಿನಿ ।
ನಿರರ್ಜುನಾಃ ಸಕರ್ಣಾ ವಾ ಸಾರ್ಜುನಾ ವಾ ಹತೇ ಮಯಿ ॥೨೩॥

ಎಲೌ ಕೀರ್ತಿವಂತಳೇ, ಅರ್ಜುನನಿಲ್ಲದೆ ಕರ್ಣನನ್ನು ಸೇರಿಸಿ ಅಥವಾ ಅರ್ಜುನನಿಂದ ನಾನು ಹತನಾದರೆ ಅರ್ಜುನನನ್ನು ಸೇರಿಸಿ ಕುಂತಿಗೆ ಐದು ಮಕ್ಕಳು ಎಂಬ ಮಾತು ಎಂದೂ ನಾಶವನ್ನು ಹೊಂದುವುದಿಲ್ಲ.

ವೈಶಂಪಾಯನಃ

ಇತಿ ಕರ್ಣವಚಃ ಶ್ರುತ್ವಾ ಕುಂತೀ ದುಃಖಾತ್ ಪ್ರವೇಪತೀ ।
ಉವಾಚ ಪುತ್ರಮಾಶ್ಲಿಷ್ಯ ಕರ್ಣಂ ಧೈರ್ಯಾದಕಂಪನಮ್ ॥೨೪॥

ವೈಶಂಪಾಯನ– ಹೀಗೆ ಕರ್ಣನ ಮಾತುಗಳನ್ನು ಕೇಳಿ ಕುಂತಿಯು ದುಃಖದಿಂದ ನಡುಗುತ್ತಾ, ಧೈರ್ಯದಿಂದ ಅಲುಗಾಡದಿದ್ದ ಪುತ್ರನಾದ ಕರ್ಣನನ್ನು ಆಲಿಂಗಿಸಿ ಮಾತನಾಡಿದಳು.

ಏವಂ ವೈ ಭಾವ್ಯಮೇತೇನ ಕ್ಷಯಂ ಯಾಸ್ಯಂತಿ ಕೌರವಾಃ ।
ಯಥಾ ತ್ವಂ ಭಾಷಸೇ ಕರ್ಣ ದೈವಂ ತು ಬಲವತ್ತರಮ್ ॥೨೫॥

ಎಲೈ ಕರ್ಣನೇ, ನೀನು ಮಾತನಾಡುವಂತೆ ಹೀಗೆಯೇ ಆಗಬೇಕು. ಈ ಯುದ್ಧದಿಂದ ಕೌರವರು ಕ್ಷಯವನ್ನು ಹೊಂದುವರು. ದೈವವು ಪ್ರಬಲವಾದುದು.

ತ್ವಯಾ ಚತುರ್ಣಾಂ ಭ್ರಾತೃಣಾಮಭಯಂ ಶತ್ರುಕರ್ಶನ ।
ದತ್ತಂ ತತ್ ಪ್ರತಿಜಾನೀಹಿ ಸಂಗರಪ್ರತಿಮೋಚನಮ್ ॥೨೬॥

ಅನಾಮಯಂ ಸ್ವಸ್ತಿ ಚೇತಿ ಪೃಥಾऽಥೋ ಕರ್ಣಮಬ್ರವೀತ್ ।
ತಾಂ ಕರ್ಣೋऽಭ್ಯವದತ್ ಪ್ರೀತಃ ತತಸ್ತೌ ಜಗ್ಮತುಃ ಸುಖಮ್ ॥೨೭॥

ಎಲೈ ಶತ್ರುಕರ್ಶನನೇ, ನೀನು ನಿನ್ನ ನಾಲ್ಕುಜನ ತಮ್ಮಂದಿರಿಗೆ ಅಭಯವನ್ನು ಕೊಟ್ಟಿದ್ದೀಯೆ. ಅವರಿಗೆ ಕ್ಷೇಮವನ್ನೂ ಮತ್ತು ಅನಪಾಯವನ್ನೂ ಮತ್ತು ನಿನ್ನ ಜೊತೆಯಲ್ಲಿ ಯುದ್ಧದಿಂದ ಬಿಡುಗಡೆಯನ್ನೂ ಪ್ರತಿಜ್ಞೆಯನ್ನು ಮಾಡು ಎಂದು ಕುಂತಿಯು ಕರ್ಣನಿಗೆ ಹೇಳಿದಳು. ಕರ್ಣನು ಸಂತೋಷದಿಂದ ಹಾಗೆಯೇ ಆಗಲಿ ಎಂದು ಅವಳಿಗೆ ಹೇಳಿದನು. ಅನಂತರ ಅವರಿಬ್ಬರೂ ಸುಖವಾಗಿ ತಮ್ಮ ಸ್ಥಳಗಳಿಗೆ ಹೊರಟರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

॥ ಏವಾದಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ನಲವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತಾರನೆಯ ಅಧ್ಯಾಯ

ಕೃಷ್ಣನಿಂದ ಉಪಪ್ಲಾವ್ಯನಗರದಲ್ಲಿ ಪಾಂಡವರನ್ನು ಕುರಿತು ಕೌರವ ಸಭೆಯಲ್ಲಿ ನಡೆದ ವೃತ್ತಾಂತಗಳ ಕಥನ.

ವೈಶಂಪಾಯನಃ

ಆಗಮ್ಯ ಹಸ್ತಿನಪುರಾದುಪಪ್ಲಾವ್ಯಮರಿಂದಮಃ ।
ಪಾಂಡವಾನಾಂ ಯಥಾವೃತ್ತಂ ಕೇಶವಃ ಪೂರ್ವಮುಕ್ತವಾನ್ ॥೧॥

ವೈಶಂಪಾಯನ– ಅರಿಂದಮನಾದ ಕೇಶವನು ಹಸ್ತಿನಪುರದಿಂದ ಉಪಪ್ಲಾವ್ಯನಗರಕ್ಕೆ ಬಂದು, ಸಭೆಯಲ್ಲಿ ನಡೆದ ವೃತ್ತಾಂತವನ್ನು ಪಾಂಡವರಿಗೆ ಮೊದಲು ಹೇಳಿದನು.

ಸಂಭಾಷ್ಯ ಸುಚಿರಂ ಕಾಲಂ ಮಂತ್ರಯಿತ್ವಾ ಪುನಃ ಪುನಃ ।
ಸ್ವಮೇವ ಭವನಂ ಶೌರಿರ್ವಿಶ್ರಮಾರ್ಥಂ ಜಗಾಮ ಹ ॥೨॥

ಬಹಳ ಸಮಯ ಮಾತನಾಡುತ್ತಿದ್ದು, ಪುನಃ ಪುನಃ ಮಂತ್ರಾಲೋಚನೆಯನ್ನು ಮಾಡಿ, ಕೃಷ್ಣನು ವಿಶ್ರಾಂತಿಗಾಗಿ ತನ್ನ ಭವನಕ್ಕೆ ಹೋದನು.

ವಿಸೃಜ್ಯ ಪಾರ್ಥಾನ್ ನೃಪತೀನ್ ವಿರಾಟಪ್ರಮುಖಾಂಸ್ತದಾ ।
ಪಾಂಡವಾ ಭ್ರಾತರಃ ಪಂಚ ಭಾನಾವಸ್ತಂ ಗತೇ ಸತಿ ॥೩॥

ಸಂಧ್ಯಾಮುಪಾಸ್ಯ ಧ್ಯಾಯನ್ತಸ್ತಮೇವ ಗತಮಾನಸಾಃ ।
ಆನಾಯ್ಯ ಕೃಷ್ಣಂ ದಾಶಾರ್ಹಂ ಪುನರ್ಮಂತ್ರಮಮಂತ್ರಯನ್ ॥೪॥

ಸೂರ್ಯನು ಅಸ್ತಂಗತನಾಗುತ್ತಿರಲು ಸಹೋದರರಾದ ಪಾಂಡವರು ಸಂಧ್ಯಾವಂದನೆಯನ್ನು ಮಾಡಿ, ವಿರಾಟ ಮೊದಲಾದ ರಾಜರನ್ನೆಲ್ಲಾ ಕಳುಹಿಸಿ, ಮನಸ್ಸಿನಲ್ಲಿ ಕೃಷ್ಣನನ್ನೇ ಧ್ಯಾನ ಮಾಡುತ್ತಾ, ಅವನನ್ನು ಪುನಃ ಕರೆಸಿ ಮಂತ್ರಾಲೋಚನೆಯನ್ನು ಮಾಡಿದರು.

ಯುಧಿಷ್ಠಿರಃ

ತ್ವಯಾ ನಾಗಪುರಂ ಗತ್ವಾ ಸಭಾಯಾಂ ಧೃತರಾಷ್ಟ್ರಜಃ ।
ಕಿಮುಕ್ತಃ ಪುಂಡರೀಕಾಕ್ಷ ತಂ ನಃ ಶಂಸಿತುಮರ್ಹಸಿ ॥೫॥

ಯುಧಿಷ್ಠಿರ– ಎಲೈ ಪುಂಡರೀಕಾಕ್ಷನೇ, ನೀನು ಹಸ್ತಿನಪುರಕ್ಕೆ ಹೋಗಿ ಸಭೆಯಲ್ಲಿ ದುರ್ಯೋಧನನಿಗೆ ಏನು ಹೇಳಿದೆ ಎಂಬುದನ್ನು ನಮಗೆ ತಿಳಿಸಬೇಕು.

ಶ್ರೀಭಗವಾನ್

ಮಯಾ ನಾಗಪುರಂ ಗತ್ವಾ ಸಭಾಯಾಂ ಧೃತರಾಷ್ಟ್ರಜಃ ।
ತಥ್ಯಂ ಪಥ್ಯಂ ಹಿತಂ ಚೋಕ್ತೋ ನ ಚ ಗೃಹ್ಣಾತಿ ದುರ್ಮತಿಃ ॥೬॥

ಶ್ರೀಭಗವಾನ್– ನಾನು ಹಸ್ತಿನಪುರಕ್ಕೆ ಹೋಗಿ ಸಭೆಯಲ್ಲಿ ದುರ್ಯೋಧನನನ್ನು ಕುರಿತು ಸತ್ಯವಾದ, ಪಥ್ಯವಾದ, ಹಿತವಾದ ಮಾತುಗಳನ್ನು ಆಡಿದನು. ಆದರೆ ಆ ದುರ್ಮತಿಯು ಅದನ್ನು ಸ್ವೀಕರಿಸಲಿಲ್ಲ.

ಯುಧಿಷ್ಠಿರಃ

ತಸ್ಮಿನ್ನುತ್ಪಥಮಾಪನ್ನೇ ಕುರುವೃದ್ಧಃ ಪಿತಾಮಹಃ ।
ಕಿಮುಕ್ತವಾನ್ ಹೃಷೀಕೇಶ ದುರ್ಯೋಧನಮಮರ್ಷಣಮ್ ॥೭॥

ಯುಧಿಷ್ಠಿರ– ಹೃಷೀಕೇಶನೇ, ಅವನು ಮಾರ್ಗವನ್ನು ಮೀರಿ ನಡೆಯುತ್ತಿರಲು ಕುರುವೃದ್ಧನೂ, ಪಿತಾಮಹನೂ ಆದ ಭೀಷ್ಮನು ರೋಷಶೀಲನಾದ ದುರ್ಯೋಧನನನ್ನು ಕುರಿತು ಏನು ಹೇಳಿದನು?

ಆಚಾರ್ಯೋ ವಾ ಮಹಾಬಾಹೋ ಭಾರದ್ವಾಜಃ ಕಿಮಬ್ರವೀತ್ ।
ಪಿತಾ ವಾ ಧೃತರಾಷ್ಟ್ರಸ್ತಂ ಗಾಂಧಾರೀ ವಾ ಕಿಮಬ್ರವೀತ್ ॥೮॥

ಆಚಾರ್ಯರಾದ ದ್ರೋಣರಾದರೂ ಏನು ಹೇಳಿದರು? ತಂದೆಯಾದ ಧೃತರಾಷ್ಟ್ರನು ಏನು ಹೇಳಿದನು? ಗಾಂಧಾರಿಯಾದರೂ ಏನು ಹೇಳಿದಳು?

ಪಿತಾ ಯವೀಯಾನಸ್ಮಾಕಂ ಕ್ಷತ್ತಾ ಧರ್ಮವಿದಾಂ ವರಃ ।
ಪುತ್ರಶೋಕಾಭಿಸಂತಪ್ತಃ ಕಿಮಾಹ ಧೃತರಾಷ್ಟ್ರಜಮ್ ॥೯॥

ಧರ್ಮಜ್ಞರಲ್ಲಿ ಶ್ರೇಷ್ಠನೂ, ಪುತ್ರಶೋಕದಿಂದ ಸಂತಪ್ತನೂ ಆದ ನಮ್ಮ ಚಿಕ್ಕಪ್ಪನಾದ ವಿದುರನು ದುರ್ಯೋಧನನನ್ನು ಕುರಿತು ಏನು ಹೇಳಿದನು?

ಕಿಂಚ ಸರ್ವೇ ನೃಪತಯಃ ಸಭಾಯಾಂ ಯೇ ಸಮಾಗತಾಃ ।
ಉಕ್ತವಂತೋ ಯಥಾತತ್ತ್ವಂ ತದ್ ಬ್ರೂಹಿ ತ್ವಂ ಜನಾರ್ದನ ॥೧೦॥

ಉಕ್ತವಾನ್ ಹಿ ಭವಾನ್ ಸರ್ವಂ ವಚನಂ ಕುರುಮುಖ್ಯಯೋಃ ॥೧೧॥

ನೀನು ಕುರುಮುಖ್ಯರಾದ ಧೃತರಾಷ್ಟ್ರ-ಭೀಷ್ಮರಿಗೆ ಎಲ್ಲವನ್ನೂ ಹೇಳಿದೆಯಷ್ಟೆ! ಎಲೈ ಜನಾರ್ದನನೇ, ಆಗ ಸಭೆಗೆ ಬಂದಿದ್ದ ಎಲ್ಲಾ ರಾಜರೂ ಏನು ಹೇಳಿದರೆಂಬುದನ್ನು ಸರಿಯಾಗಿ ಹೇಳುವವನಾಗು.

ಧಾರ್ತರಾಷ್ಟ್ರಸ್ಯ ತೇಷಾಂ ಹಿ ವಚನಂ ಕುರುಸಂಸದಿ ।
ಕಾಮಲೋಭಾಭಿಭೂತಸ್ಯ ಮಂದಸ್ಯ ಪ್ರಾಜ್ಞಮಾನಿನಃ ॥೧೨॥

ಅಪ್ರಿಯಂ ಹೃದಯೇ ತಸ್ಯ ಕಿಂ ನು ತಿಷ್ಠತಿ ಕೇಶವ ॥೧೩॥

ಎಲೈ ಕೇಶವನೇ, ಕೌರವರ ಸಭೆಯಲ್ಲಿ ಅವರೆಲ್ಲರೂ ಆಡಿದ ದುರ್ಯೋಧನನಿಗೆ ಅಪ್ರಿಯವಾದ ಮಾತುಗಳು, ಕಾಮ-ಲೋಭಗಳಿಂದ ಕೂಡಿದವನೂ, ಮಂದನೂ, ತನ್ನನ್ನು ಪ್ರಾಜ್ಞನೆಂದು ತಿಳಿದವನೂ ಆದ ದುರ್ಯೋಧನನ ಮನಸ್ಸಿನಲ್ಲಿ ನಿಂತಿವೆಯೇ?

ತೇಷಾಂ ವಾಕ್ಯಾನಿ ಸರ್ವೇಷಾಂ ಶ್ರೋತುಮಿಚ್ಛಾಮ್ಯಹಂ ವಿಭೋ ।
ಯಥಾ ಚ ನಾತಿಪದ್ಯೇತ ಕಾಲಸ್ತಾತ ತಥಾ ಕುರು ॥೧೪॥

ಎಲೈ ವಿಭುವೇ, ಅವರೆಲ್ಲರ ಮಾತುಗಳನ್ನು ಕೇಳಲು ನಾನು ಬಯಸುತ್ತೇನೆ. ನಮಗೆ ಸಮಯವು ಮೀರಿಹೋಗದಂತೆ ನೀನು ಎಲ್ಲವನ್ನೂ ಮಾಡುವವನಾಗು.

ಭವಾನ್ ಹಿ ನೋ ಬಲಂ ಕೃಷ್ಣ ಭವಾನ್ ನಾಥೋ ಭವಾನ್ ಗತಿಃ ॥

ಎಲೈ ಕೃಷ್ಣನೇ, ನೀನೇ ನಮಗೆ ಬಲ, ನಮಗೆ ಸ್ವಾಮಿ ಮತ್ತು ನಮಗೆ ಗತಿ.

ವಾಸುದೇವಃ

ಶೃಣು ರಾಜನ್ ಯಥಾ ವಾಕ್ಯಮುಕ್ತೋ ರಾಜಾ ಸುಯೋಧನಃ ।
ಮಧ್ಯೇ ಕುರೂಣಾಂ ರಾಜೇಂದ್ರ ಸಭಾಯಾಂ ತನ್ನಿಬೋಧ ಮೇ ॥೧೬॥

ವಾಸುದೇವ– ಎಲೈ ರಾಜನೇ, ರಾಜೇಂದ್ರನೇ, ಕೌರವ ಸಭೆಯಲ್ಲಿ ಸುಯೋಧನನನ್ನು ಕುರಿತು ಹೇಗೆ ಮಾತನಾಡಿದೆನೆಂದು ಕೇಳುವವನಾಗು.

ಮಯಾ ವಿಶ್ರಾವಿತೇ ವಾಕ್ಯೇ ಜಹಾಸ ಧೃತರಾಷ್ಟ್ರಜಃ ।
ಅಥ ಭೀಷ್ಮಃ ಸುಸಂಕ್ರುದ್ಧಃ ಇದಂ ವಚನಮಬ್ರವೀತ್ ॥೧೭॥

ನಾನು ಸ್ಪಷ್ಟವಾಗಿ ಮಾತನಾಡಿದ ಮೇಲೆ ದುರ್ಯೋಧನನು ಗಟ್ಟಿಯಾಗಿ ನಕ್ಕನು. ಆಗ ಬಹಳ ಕೋಪಗೊಂಡ ಭೀಷ್ಮನು ಹೀಗೆ ಮಾತನಾಡಿದನು.

ದುರ್ಯೋಧನ ನಿಬೋಧೇದಂ ಕುಲಾರ್ಥೇ ಯದ್ ಬ್ರವೀಮಿ ತೇ ।
ತಚ್ಛ್ರುತ್ವಾ ರಾಜಶಾರ್ದೂಲ ಸ್ವಕುಲಸ್ಯ ಹಿತಂ ಕುರು ॥೧೮॥

ಎಲೈ ದುರ್ಯೋಧನನೇ, ಕುಲದ ಸಲುವಾಗಿ ನಾನು ಹೇಳುವ ಈ ಮಾತನ್ನು ಕೇಳು. ಎಲೈ ರಾಜಶಾರ್ದೂಲನೇ, ಅದನ್ನು ಕೇಳಿ ನಿನ್ನ ಕುಲಕ್ಕೆ ಹಿತವನ್ನು ಮಾಡುವವನಾಗು.

ಮಮ ತಾತ ಪಿತಾ ರಾಜನ್ ಶಂತನುರ್ಲೋಕವಿಶ್ರುತಃ ।
ತಸ್ಯಾಹಮೇಕ ಏವಾಸಂ ಪುತ್ರಃ ಪುತ್ರವತಾಂ ವರ ॥೧೯॥

ಎಲೈ ಪ್ರೀತಿಪಾತ್ರನಾದ ರಾಜನೇ, ಲೋಕವಿಖ್ಯಾತನಾದ ಶಂತನುವು ನನ್ನ ತಂದೆ. ಮಕ್ಕಳನ್ನು ಪಡೆದವರಲ್ಲಿ ಶ್ರೇಷ್ಠನಾದವನೇ, ನಾನು ಅವನಿಗೆ ಒಬ್ಬನೇ ಮಗನಾಗಿದ್ದೆ.

ತಸ್ಯ ಬುದ್ಧಿಃ ಸಮುತ್ಪನ್ನಾ ದ್ವಿತೀಯಃ ಸ್ಯಾತ್ ಕಥಂ ಸುತಃ ।
ಏಕಂ ಪುತ್ರಮಪುತ್ರಂ ವೈ ಪ್ರವದಂತಿ ಮನೀಷಿಣಃ ॥೨೦॥

ನ ಚೋಚ್ಛೇದಂ ಕುಲಂ ಯಾಯಾದ್ ವಿಸ್ತೀರ್ಯೇತ ಕಥಂ ಯಶಃ ॥

ಒಬ್ಬ ಮಗನನ್ನು ಹೊಂದಿದವನನ್ನು ಜ್ಞಾನಿಗಳು ಅಪುತ್ರನೆಂದು ಹೇಳುತ್ತಾರೆ. ನಮ್ಮ ಕುಲವು ನಾಶವನ್ನು ಹೊಂದಬಾರದು. ವಿಸ್ತಾರವನ್ನು ಹೊಂದಬೇಕು ಎಂಬ ಬುದ್ಧಿಯು ಅವನಿಗೆ ಉಂಟಾಯಿತು.

ತಸ್ಯಾಹಮೀಪ್ಸಿತಂ ಬುದ್ಧ್ವಾ ಕಾಳೀಂ ಮಾತರಮಾವಹಮ್ ॥೨೨॥

ಪ್ರತಿಜ್ಞಾಂ ದುಷ್ಕರಾಂ ಕೃತ್ವಾ ಪಿತುರರ್ಥೇ ಕುಲಸ್ಯ ಚ ।
ಅರಾಜಾ ಚೋರ್ಧ್ವರೇತಾಶ್ಚ ಯಥಾ ಸುವಿದಿತಂ ತವ ॥೨೩॥

ಅವನ ಅಭಿಪ್ರಾಯವನ್ನು ತಿಳಿದ ನಾನು ತಾಯಿಯಾದ ಕಾಳಿಯನ್ನು ಕರೆತಂದೆನು. ತಂದೆಯ ಸಲುವಾಗಿ ಮತ್ತು ಕುಲದ ಸಲುವಾಗಿ ನಾನು ರಾಜನಾಗುವುದಿಲ್ಲ, ಊರ್ಧ್ವರೇತಸ್ಕನಾಗಿರುತ್ತೇನೆ ಎಂಬ ದುಷ್ಕರವಾದ ಪ್ರತಿಜ್ಞೆಯನ್ನು ಮಾಡಿ ಅವರನ್ನು ಕರೆತಂದುದು ನಿನಗೆ ಚೆನ್ನಾಗಿ ತಿಳಿದ ವಿಷಯ.

ಪ್ರತೀತೋ ನಿವಸಾಮ್ಯೇಷ ಪ್ರತಿಜ್ಞಾಮನುಪಾಲಯನ್ ॥೨೪॥

ಆ ಪ್ರತಿಜ್ಞೆಯನ್ನು ಪಾಲಿಸುತ್ತಾ ನಾನು ಸಮಾಧಾನದಿಂದ ವಾಸ ಮಾಡುತ್ತಿದ್ದೇನೆ.

ತಸ್ಯಾಂ ಜಜ್ಞೇ ಮಹಾಬಾಹುಃ ಶ್ರೀಮಾನ್ ಕುರುಕುಲೋದ್ವಹಃ ।
ವಿಚಿತ್ರವೀರ್ಯೋ ಧರ್ಮಾತ್ಮಾ ಕನೀಯಾನ್ ಮಮ ಪಾರ್ಥಿವಃ ॥೨೫॥

ಅವಳಲ್ಲಿ ಕುರುಕುಲವನ್ನು ಮುಂದುವರಿಸುವವನೂ, ಧರ್ಮಾತ್ಮನೂ, ಮಹಾಬಾಹುವೂ ಆದ ನನ್ನ ತಮ್ಮನಾದ ವಿಚಿತ್ರವೀರ್ಯನು ಜನಿಸಿದನು.

ಸ್ವರ್ಯಾತೇಽಹಂ ಪಿತರಿ ತಂ ಸ್ವರಾಜ್ಯೇ ಸನ್ನಿವೇಶಯಮ್ ।
ವಿಚಿತ್ರವೀರ್ಯಂ ರಾಜಾನಂ ಭೃತ್ಯೋ ಭೂತ್ವಾ ಹ್ಯಧಶ್ಚರಃ ॥೨೬॥

ನನ್ನ ತಂದೆಯು ಸ್ವರ್ಗಸ್ಥನಾಗುತ್ತಿರಲು ನಾನು ಅವನನ್ನು ನನ್ನ ರಾಜ್ಯದಲ್ಲಿ ಕೂಡಿಸಿದೆನು. ವಿಚಿತ್ರವೀರ್ಯನನ್ನು ರಾಜನನ್ನಾಗಿ ಮಾಡಿ, ನಾನು ಅವನಿಗೆ ಸೇವಕನಾಗಿದ್ದೆನು.

ತಸ್ಯಾಹಂ ಸದೃಶಾನ್ ದಾರಾನ್ ರಾಜೇಂದ್ರ ಸಮುದಾವಹಮ್ ।
ಜಿತ್ವಾ ಪಾರ್ಥಿವಸಂಘಾತಮಪಿ ತೇ ಬಹುಶಃ ಶ್ರುತಮ್ ॥೨೭॥

ಎಲೈ ರಾಜೇಂದ್ರನೇ, ನಾನು ರಾಜರ ಸಮೂಹಗಳನ್ನು ಗೆದ್ದು, ಅವನಿಗೆ ಯೋಗ್ಯವಾದ ಕನ್ಯೆಯರನ್ನು ತಂದು ವಿವಾಹವನ್ನು ಮಾಡಿದೆನು. ಈ ವಿಷಯವನ್ನು ನೀನು ಅನೇಕ ಬಾರಿ ಕೇಳಿದ್ದೀಯೆ.

ತತೋ ರಾಮೇಣ ಸಮರೇ ದ್ವಂದ್ವಯುದ್ಧಮುಪಾಗಮಮ್ ।
ಸ ಹಿ ರಾಮಭಯಾದೇಭಿರ್ನಾಗರೈರ್ವಿಪ್ರವಾಸಿತಃ ॥೨೮॥

ದಾರೇಷ್ವಪ್ಯತಿಸಕ್ತಶ್ಚ ಯಕ್ಷ್ಮಾಣಂ ಸಮಪದ್ಯತ ॥೨೯॥

ಅನಂತರ ನಾನು ಪರಶುರಾಮರ ಜೊತೆಯಲ್ಲಿ ದ್ವಂದ್ವ ಯುದ್ಧವನ್ನು ಮಾಡಬೇಕಾಯಿತು. ಪ್ರಜೆಗಳು ಪರಶುರಾಮರ ಭಯದಿಂದ ವಿಚಿತ್ರವೀರ್ಯನನ್ನು ನಗರದಿಂದ ಹೊರಗೆ ಕಳುಹಿಸಿದರು. ಪತ್ನಿಯರಲ್ಲಿ ಬಹಳ ಆಸಕ್ತನಾಗಿದ್ದ ಅವನು ಕ್ಷಯರೋಗವನ್ನು ಹೊಂದಿ ಮೃತನಾದನು.

ಯದಾ ತ್ವರಾಜಕೇ ರಾಷ್ಟ್ರೇ ನ ವವರ್ಷ ಸುರೇಶ್ವರಃ ।
ತದಾऽಭ್ಯಧಾವನ್ ಮಾಮೇವ ಪ್ರಜಾಃ ಕ್ಷುದ್ಭಯಪೀಡಿತಾಃ ॥೩೦॥

ಅರಾಜಕವಾದ ರಾಷ್ಟ್ರದಲ್ಲಿ ಇಂದ್ರನು ಮಳೆಯನ್ನು ಸುರಿಸದಿರಲು ಹಸಿವಿನ ಭಯದಿಂದ ಪೀಡಿತರಾದ ಪ್ರಜೆಗಳು ನನ್ನ ಬಳಿಗೇ ಓಡಿಬಂದರು.

ಪ್ರಜಾಃ

ಉಪಕ್ಷೀಣಾಃ ಪ್ರಜಾಃ ಸರ್ವಾ ರಾಜಾ ಭವ ಭವಾಯ ನಃ ।
ಈತಯೋ ನುದ ಭದ್ರಂ ತೇ ಶಂತನೋಃ ಕುಲವರ್ಧನ ॥೩೧॥

ಪ್ರಜೆಗಳು– ಎಲ್ಲಾ ಪ್ರಜೆಗಳು ವಿನಾಶವನ್ನು ಹೊಂದುತ್ತಿದ್ದಾರೆ. ನೀನು ರಾಜನಾಗಿ ನಮಗೆ ಸಂಪತ್ತನ್ನು ಉಂಟುಮಾಡುವವನಾಗು. ಎಲೈ ಶಂತನು ಕುಲವರ್ಧನನೇ, ನಿನಗೆ ಮಂಗಳವಾಗಲಿ. ನಮಗೆ ಉಂಟಾಗಿರುವ ಈತಿ-ಬಾಧೆಗಳನ್ನು ಪರಿಹರಿಸು.

ಪೀಡ್ಯಂತೇ ತೇ ಪ್ರಜಾಃ ಸರ್ವಾ ವ್ಯಾಧಿಭಿರ್ಭೃಶದಾರುಣೈಃ ।
ಅಲ್ಪಾವಶಿಷ್ಟಾ ಗಾಂಗೇಯ ತಾಃ ಪರಿತ್ರಾತುಮರ್ಹಸಿ ॥೩೨॥

ಎಲ್ಲಪ್ರಜೆಗಳೂ ದಾರುಣವಾದ ವ್ಯಾಧಿಗಳಿಂದ ಪೀಡಿಸಲ್ಪಡುತ್ತಿದ್ದಾರೆ. ಕೆಲವರು ಮಾತ್ರ ಉಳಿದಿದ್ದಾರೆ. ಎಲೈ ಗಾಂಗೇಯನೇ, ಅವರನ್ನು ನೀನು ರಕ್ಷಿಸಬೇಕು.

ವ್ಯಾಧೀನ್ ಪ್ರಣುದ್ಯ ವೀರ ತ್ವಂ ಪ್ರಜಾ ಧರ್ಮೇಣ ಪಾಲಯ ।
ತ್ವಯಿ ಜೀವತಿ ಮಾ ರಾಷ್ಟ್ರಂ ವಿನಾಶಮುಪಗಚ್ಛತು ॥೩೩॥

ಎಲೈ ವೀರನೇ, ವ್ಯಾಧಿಗಳನ್ನು ಪರಿಹರಿಸಿ, ನೀನು ಪ್ರಜೆಗಳನ್ನು ಧರ್ಮದಿಂದ ಪಾಲಿಸು. ನೀನು ಬದುಕಿರುವಾಗ ರಾಷ್ಟ್ರವು ವಿನಾಶವನ್ನು ಹೊಂದದಿರಲಿ.

ಭೀಷ್ಮಃ

ಪ್ರಜಾನಾಂ ಕ್ರೋಶತೀನಾಂ ವೈ ನೈವಾಕ್ಷುಭ್ಯತ ಮೇ ಮನಃ ।
ಪ್ರತಿಜ್ಞಾಂ ರಕ್ಷಮಾಣಸ್ಯ ಸದ್ವ್ರತಂ ಸ್ಮರತಸ್ತಥಾ ॥೩೪॥

ಭೀಷ್ಮ- ಪ್ರಜೆಗಳು ಹೀಗೆ ಗೋಳಾಡುತ್ತಿದ್ದರೂ ನನ್ನ ಪ್ರತಿಜ್ಞೆಯನ್ನು ರಕ್ಷಣೆ ಮಾಡಲು ಬಯಸಿದ ಮತ್ತು ಸಜ್ಜನರ ನಡವಳಿಕೆಯನ್ನು ಸ್ಮರಿಸುವ ನನ್ನ ಮನಸ್ಸು ಅಲುಗಾಡಲಿಲ್ಲ.

ತತಃ ಪೌರಾ ಮಹಾರಾಜ ಮಾತಾ ಕಾಳೀ ಚ ಮೇ ಶುಭಾ ।
ಭೃತ್ಯಾಃ ಪುರೋಹಿತಾಚಾರ್ಯಾ ಬ್ರಾಹ್ಮಣಾಶ್ಚ ಬಹುಶ್ರುತಾಃ ॥೩೫॥

ಮಾಮೂಚುರ್ಭೃಶಸಂತಪ್ತಾ ಭವ ರಾಜೇತಿ ಸಂತತಮ್ ॥೩೬॥

ಎಲೈ ಮಹಾರಾಜನೇ, ಅನಂತರ ಪೌರರೂ, ನನ್ನ ತಾಯಿಯಾದ ಶುಭಳಾದ ಕಾಳಿಯೂ, ಭೃತ್ಯರೂ, ಪುರೋಹಿತರೂ, ಆಚಾರ್ಯರೂ, ವಿದ್ಯಾಸಂಪನ್ನರಾದ ಬ್ರಾಹ್ಮಣರೂ ಬಹಳ ಸಂತಪ್ತರಾಗಿ ನೀನು ರಾಜನಾಗು ಎಂದು ಸಂತತವಾಗಿ ಹೇಳಿದರು.

ಪ್ರತೀಪರಕ್ಷಿತಂ ರಾಜ್ಯಂ ತ್ವಾಂ ಪ್ರಾಪ್ಯ ವಿನಶಿಷ್ಯತಿ ।
ಸ ತ್ವಮಸ್ಮದ್ಧಿತಾರ್ಥಂ ವೈ ರಾಜಾ ಭವ ಮಹಾಮತೇ ॥೩೭॥

ಪ್ರತೀಪನು ರಕ್ಷಿಸಿದ ರಾಜ್ಯವು ನಿನ್ನನ್ನು ಹೊಂದಿ ನಾಶವನ್ನು ಹೊಂದುವುದು. ಎಲೈ ಮಹಾಮತಿಯೇ, ನಮ್ಮ ಹಿತಕ್ಕಾಗಿ ನೀನು ರಾಜನಾಗು (ಎಂದು ಹೇಳಿದರು).

ಇತ್ಯುಕ್ತಃ ಪ್ರಾಂಜಲಿರ್ಭೂತ್ವಾ ದುಃಖಿತೋ ಭೃಶಮಾತುರಃ ।
ತೇಭ್ಯೋ ನ್ಯವೇದಯಂ ತತ್ರ ಪ್ರತಿಜ್ಞಾಂ ಪಿತೃಗೌರವಾತ್ ॥೩೮॥

ಊರ್ಧ್ವರೇತಾ ಹ್ಯರಾಜಾ ಚ ಕುಲಸ್ಯಾರ್ಥೇ ಪುನಃ ಪುನಃ ॥೩೯॥

ಅವರು ಹೀಗೆ ಹೇಳಿದಾಗ ನಾನು ದುಃಖಿತನಾಗಿ ಬಹಳ ವ್ಯಥೆಯನ್ನು ಪಟ್ಟು ಅವರಿಗೆ ಕೈಗಳನ್ನು ಮುಗಿದು ನಾನು, ತಂದೆಯ ಮೇಲಿನ ಗೌರವದಿಂದ ರಾಜನಾಗುವುದಿಲ್ಲ, ಕುಲವನ್ನು ರಕ್ಷಿಸುವ ಸಲುವಾಗಿ ಊರ್ಧ್ವರೇತಸ್ಕನಾಗಿರುತ್ತೇನೆ ಎಂದು ಮಾಡಿದ ಪ್ರತಿಜ್ಞೆಯನ್ನು ಪುನಃ ಪುನಃ ಅವರಿಗೆ ನಿವೇದಿಸಿದೆನು.

ತತೋಽಹಂ ಪ್ರಾಂಜಲಿರ್ಭೂತ್ವಾ ಮಾತರಂ ಸಂಪ್ರಸಾದಯಮ್ ॥೪೦॥

ನಾಂಬ ಶಂತನುನಾ ಜಾತಃ ಕೌರವಂ ವಂಶಮುದ್ವಹನ್ ।
ಪ್ರತಿಜ್ಞಾಂ ವಿತಥಾಂ ಕುರ್ಯಾಮಿತಿ ರಾಜನ್ ಪುನಃ ಪುನಃ ॥೪೧॥

ಅನಂತರ ತಾಯಿಗೆ ಕೈಗಳನ್ನು ಮುಗಿದು, ತಾಯಿಯೇ, ಶಂತನುವಿನ ಪುತ್ರನಾಗಿ, ಕೌರವ ವಂಶದ ಭಾರವನ್ನು ಧರಿಸಿ, ನನ್ನ ಪ್ರತಿಜ್ಞೆಯನ್ನು ವ್ಯರ್ಥವಾಗಿ ಮಾಡುವುದಿಲ್ಲ ಎಂದು ಪುನಃ ಪುನಃ ಹೇಳಿ ಅವಳನ್ನು ಸಮಾಧಾನಪಡಿಸಿದೆ.

ವಿಶೇಷತಸ್ತದರ್ಥಂ ಚ ಧುರಿ ಮಾ ಮಾಂ ನಿಯೋಜಯ ।
ಅಹಂ ಪ್ರೇಷ್ಯಶ್ಚ ದಾಸಶ್ಚ ತವಾಂಬ ಸುತವತ್ಸಲೇ ॥೪೨॥

ಎಲೈ ಪುತ್ರವತ್ಸಲೆಯಾದ ತಾಯಿಯೇ, ನಾನು ನಿನ್ನ ಸೇವಕ ಮತ್ತು ದಾಸ. ಈ ವಿಷಯದಲ್ಲಿ ಮಾತ್ರ ನನ್ನನ್ನು ನಿಯೋಜಿಸಬೇಡ (ಎಂದು ಹೇಳಿದೆ).

ಏವಂ ತಾಮನುನೀಯಾಹಂ ಮಾತರಂ ಜನಮೇವ ಚ ।
ಅಹಂ ಚ ಭ್ರಾತೃದಾರೇಷು ತದಾ ವ್ಯಾಸಂ ಮಹಾಮುನಿಮ್ ॥೪೩॥

ಸಹ ಮಾತ್ರಾ ಮಹಾರಾಜ ಪ್ರಸಾದ್ಯ ತಮೃಷಿಂ ತದಾ ।
ಅಪತ್ಯಾರ್ಥಮಯಾಚಂ ವೈ ಪ್ರಸಾದಂ ಕೃತವಾಂಶ್ಚ ಸಃ ॥೪೪॥

ಹೀಗೆ ತಾಯಿಯನ್ನು ಮತ್ತು ಪೌರರನ್ನೂ ಸಮಾಧಾನಪಡಿಸಿ, ನಾನು ಆಗ ನನ್ನ ತಮ್ಮನ ಪತ್ನಿಯರಲ್ಲಿ ಮಹಾಮುನಿಗಳಾದ ವ್ಯಾಸರನ್ನು ನಿಯೋಜಿಸಿದೆ. ಎಲೈ ಮಹಾರಾಜನೇ, ತಾಯಿಯ ಜೊತೆಯಲ್ಲಿ ಆಲೋಚನೆಯನ್ನು ಮಾಡಿ, ಆ ಋಷಿಗಳನ್ನು ಪ್ರಸನ್ನೀಕರಿಸಿಕೊಂಡು ಮಕ್ಕಳನ್ನು ಪಡೆಯುವಂತೆ ಅವರನ್ನು ಯಾಚಿಸಿದೆ. ಆ ಋಷಿಗಳು ಅನುಗ್ರಹವನ್ನು ಮಾಡಿದರು.

ತ್ರೀನ್ ಪುತ್ರಾನಜನಯದ್ ವ್ಯಾಸಸ್ತದಾ ಭರತಸತ್ತಮ ॥೪೫॥

ಅಂಧಃ ಕರಣಹೀನತ್ವಾನ್ನ ವೈ ರಾಜಾ ಪಿತಾ ತವ ।
ರಾಜಾ ತು ಪಾಂಡುರಭವನ್ಮಹಾತ್ಮಾ ಲೋಕವಿಶ್ರುತಃ ॥೪೬॥

ಎಲೈ ಭರತಸತ್ತಮನೇ, ವ್ಯಾಸರು ಮೂರುಮಕ್ಕಳನ್ನು ಪಡೆದರು. ನಿನ್ನ ತಂದೆಯು ಅಂಧನಾಗಿ, ಕರಣಹೀನನಾದುದರಿಂದ ರಾಜನಾಗಲಿಲ್ಲ. ಮಹಾತ್ಮನೂ ಮತ್ತು ಲೋಕವಿಖ್ಯಾತನೂ ಆದ ಪಾಂಡುವು ರಾಜನಾದನು.

ಸ ರಾಜಾ ತಸ್ಯ ತೇ ಪುತ್ರಾಃ ಪಿತುರ್ದಾಯಾದ್ಯಹಾರಿಣಃ ।
ಮಾ ತಾತ ಕಲಹಂ ಕಾರ್ಷೀ ರಾಜ್ಯಸ್ಯಾರ್ಧಂ ಪ್ರದೀಯತಾಮ್ ॥೪೭॥

ಪಾಂಡುವು ರಾಜ, ಅವನ ಮಕ್ಕಳು ತಂದೆಯ ಆಸ್ತಿಗೆ ಅರ್ಹರಾದವರು. ಎಲೈ ಪ್ರೀತಿಪಾತ್ರನೇ, ಕಲಹವನ್ನು ಮಾಡಬೇಡ. ಅರ್ಧರಾಜ್ಯವನ್ನು ಕೊಡು.

ಮಯಿ ಜೀವತಿ ರಾಜ್ಯಂ ಕಃ ಸಂಪ್ರಶಾಸೇತ್ ಪುಮಾನಿಹ ।
ಮಾऽವಮಂಸ್ಥಾ ವಚೋ ಮಹ್ಯಂ ಶಮಮಿಚ್ಛಾಮಿ ವಃ ಸದಾ ॥೪೮॥

ನಾನು ಬದುಕಿರುವಾಗ ಬೇರೆ ಯಾವ ಪುರುಷನು ರಾಜ್ಯವನ್ನು ಆಳಿಯಾನು? ನನ್ನ ಮಾತನ್ನು ತಿರಸ್ಕರಿಸಬೇಡ. ನಾನು ನಿಮಗೆ ಯಾವಾಗಲೂ ಶಾಂತಿಯನ್ನು ಬಯಸುತ್ತೇನೆ.

ನ ವಿಶೇಷೋऽಸ್ತಿ ಮೇ ಪುತ್ರ ತ್ವಯಿ ತೇಷು ಚ ಪಾರ್ಥಿವ ।
ಮತಮೇತತ್ ಪಿತುಸ್ತುಭ್ಯಂ ಗಾಂಧಾರ್ಯಾ ವಿದುರಸ್ಯ ಚ ॥೪೯॥

ಎಲೈ ಪುತ್ರನೇ, ರಾಜನೇ, ನನಗೆ ನಿನ್ನಲ್ಲಿಯೂ ಮತ್ತು ಆ ಪಾಂಡವರಲ್ಲಿಯೂ ಯಾವ ವಿಶೇಷವೂ ಇಲ್ಲ. ಇದು ನಿನ್ನ ತಂದೆಯ, ಗಾಂಧಾರಿಯ ಮತ್ತು ವಿದುರನ ಅಭಿಪ್ರಾಯವೂ ಆಗಿದೆ.

ಶ್ರೋತವ್ಯಂ ಖಲು ವೃದ್ಧಾನಾಂ ಮಾ ವಿಶಂಕೀರ್ವಚೋ ಮಮ ।
ನಾಶಯಿಷ್ಯನ್ನಿಮಂ ಸರ್ವಮಾತ್ಮಾನಂ ಪೃಥಿವೀಪತೇ ॥೫೦॥

ಹಿರಿಯರ ಮಾತನ್ನು ಕೇಳಬೇಕು. ಎಲೈ ರಾಜನೇ, ಇವೆಲ್ಲವನ್ನೂ ಮತ್ತು ನಿನ್ನನ್ನೂ ನಾಶಗೊಳಿಸುವವನಾಗಿ ನನ್ನ ಮಾತಿನಲ್ಲಿ ಸಂಶಯಪಡಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

॥ ವಿವಾದಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೇಳನೆಯ ಅಧ್ಯಾಯ

ಕೃಷ್ಣನಿಂದ ದ್ರೋಣರ, ,ವಿದುರನ ಮತ್ತು ಗಾಂಧಾರಿಯ ಮಾತುಗಳ ಅನುವಾದ.

ಶ್ರೀಭಗವಾನ್

ಭೀಷ್ಮೇಣೋಕ್ತೇ ತತೋ ದ್ರೋಣೋ ದುರ್ಯೋಧನಮಭಾಷತ ।
ಮಧ್ಯೇ ನೃಪಾಣಾಂ ಭದ್ರಂ ತೇ ವಚನಂ ವಚನಕ್ಷಮಮ್ ॥೧॥

ಶ್ರೀಭಗವಾನ್– ಯುಧಿಷ್ಠಿರನೇ, ನಿನಗೆ ಮಂಗಳವಾಗಲಿ. ಭೀಷ್ಮರು ಹೀಗೆ ಹೇಳುತ್ತಿರಲು ಅನಂತರ ದ್ರೋಣರು ರಾಜರ ಮಧ್ಯದಲ್ಲಿ ದುರ್ಯೋಧನನನ್ನು ಕುರಿತು ಮಾತನಾಡಲು ಯೋಗ್ಯವಾದ ಮಾತುಗಳನ್ನು ಆಡಿದರು.

ಪ್ರಾತೀಪಃ ಶಂತನುಸ್ತಾತ ಕುಲಸ್ಯಾರ್ಥೇ ಯಥೋತ್ಥಿತಃ ।
ತಥಾ ದೇವವ್ರತೋ ಭೀಷ್ಮಃ ಕುಲಸ್ಯಾರ್ಥೇ ಸ್ಥಿತೋऽಭವತ್ ॥೨॥

ಎಲೈ ಪ್ರೀತಿಪಾತ್ರನೇ, ಪ್ರತೀಪನ ಮಗನಾದ ಶಂತನುವು ಕುಲದ ಅಭಿವೃದ್ಧಿಗಾಗಿ ಹೇಗೆ ಉದಯಿಸಿದನೋ ಅದರಂತೆ ದೇವವ್ರತರಾದ ಭೀಷ್ಮರು ಕುಲದ ಅಭ್ಯುದಯಕ್ಕಾಗಿ ನಿಂತವರಾಗಿದ್ದಾರೆ.

ತಥಾ ಪಾಂಡುರ್ನರಪತಿಃ ಸತ್ಯಸಂಧೋ ಜಿತೇಂದ್ರಿಯಃ ।
ರಾಜಾ ಕುರೂಣಾಂ ಧರ್ಮಾತ್ಮಾ ಸುವ್ರತಃ ಸುಸಮಾಹಿತಃ ॥೩॥

ಜ್ಯೇಷ್ಠಾಯ ರಾಜ್ಯಮದದಾದ್ ಧೃತರಾಷ್ಟ್ರಸ್ಯ ಧೀಮತೇ ।
ಯವೀಯಸಸ್ತಥಾ ಕ್ಷತ್ತುಃ ಕುರುವಂಶವಿವರ್ಧನಃ ॥೪॥

ಅದರಂತೆ ಸತ್ಯಸಂಧನೂ, ಜಿತೇಂದ್ರಿಯನೂ, ಧರ್ಮಾತ್ಮನೂ, ಸಮಾಧಾನಚಿತ್ತನೂ, ಒಳ್ಳೆಯ ವ್ರತಧಾರಿಯೂ ಆದ ಪಾಂಡುರಾಜನು ತನ್ನ ಅಣ್ಣನಾದ ಮೇಧಾವಿಯಾದ ಧೃತರಾಷ್ಟ್ರನಿಗೆ ರಾಜ್ಯವನ್ನು ಕೊಟ್ಟನು. ಹಾಗೆಯೇ ಕುರುವಂಶವಿವರ್ಧನನಾದ ಅವನು ತಮ್ಮನಾದ ವಿದುರನಿಗೂ ರಾಜ್ಯದ ಜವಾಬ್ದಾರಿಯನ್ನು ಕೊಟ್ಟನು.

ತತಃ ಸರ್ವಾಃ ಪ್ರಜಾಸ್ತಾತ ಧೃತರಾಷ್ಟ್ರಂ ಜನಾಧಿಪಮ್ ।
ಅನ್ವಪದ್ಯಂತ ವಿಧಿವದ್ ಯಥಾ ಪಾಂಡುಂ ನರಾಧಿಪಮ್ ॥೫॥

ಎಲೈ ಪ್ರೀತಿಪಾತ್ರನೇ, ಆಗ ಎಲ್ಲಾ ಪ್ರಜೆಗಳೂ ರಾಜನಾದ ಪಾಂಡುವಿನಲ್ಲಿ ನಡೆದುಕೊಳ್ಳುತ್ತಿದ್ದಂತೆ ವಿಧಿಪ್ರಕಾರವಾಗಿ ಧೃತರಾಷ್ಟ್ರನಲ್ಲಿ ನಡೆದುಕೊಂಡರು.

ಸಂಧಿವಿಗ್ರಹತತ್ತ್ವಜ್ಞೋ ರಾಜ್ಞೋ ವೈವಾಹಿಕಕ್ರಿಯಾಮ್ ।
ಅವೈಕ್ಷತ ಮಹಾತೇಜಾ ಭೀಷ್ಮಃ ಕುರುಪಿತಾಮಹಃ ॥೬॥

ಸಂಧಿ-ವಿಗ್ರಹತತ್ವಗಳನ್ನು ತಿಳಿದವರೂ, ಮಹಾತೇಜಸ್ವಿಗಳೂ, ಕುರುಕುಲ ಪಿತಾಮಹರೂ ಆದ ಭೀಷ್ಮರು ಧೃತರಾಷ್ಟ್ರಾದಿಗಳ ವೈವಾಹಿಕ ಕ್ರಿಯೆಗಳನ್ನು ನೋಡಿಕೊಂಡರು.

ಸಿಂಹಾಸನಸ್ಥೋ ನೃಪತಿರ್ಧೃತರಾಷ್ಟ್ರೋ ಮಹಾಮನಾಃ ।
ಅನಾಸ್ಯಮಾನಃ ಸತತಂ ವಿದುರೇಣ ಮಹಾತ್ಮನಾ ॥೭॥

ಸಿಂಹಾಸನದಲ್ಲಿ ಕುಳಿತ ಉದಾರ ಮನಸ್ಸುಳ್ಳ ಧೃತರಾಷ್ಟ್ರರಾಜನು ಮಹಾತ್ಮನಾದ ವಿದುರನಿಂದ ಯಾವಾಗಲೂ ಸೇವಿಸಲ್ಪಟ್ಟನು.

ನೀಚೈಃ ಸ್ಥಿತ್ವಾ ತು ವಿದುರ ಉಪಾಸ್ತೇ ಸ್ಮ ವಿನೀತವತ್ ।
ಪ್ರೇಷ್ಯವತ್ ಪುರುಷವ್ಯಾಘ್ರೋ ಬಾಲವ್ಯಜನಮುತ್ಕ್ಷಿಪನ್ ॥೮॥

ಪುರುಷವ್ಯಾಘ್ರನಾದ ವಿದುರನು ವಿನೀತನಾಗಿ ಸೇವಕನಂತೆ ಕೆಳಗೆ ನಿಂತು ಬಾಲವ್ಯಜನವನ್ನು (ಬೀಸಣಿಗೆ) ಬೀಸುತ್ತಾ ರಾಜನ ಸೇವೆಯನ್ನು ಮಾಡುತ್ತಿದ್ದನು.

ಕೋಶಸಂಯಮನೇ ದಾನೇ ಭೃತ್ಯಾನಾಮನ್ವವೇಕ್ಷಣೇ ।
ಭರಣೇ ಚೈವ ಸರ್ವಸ್ಯ ವಿದುರಃ ಸತ್ಯಸಂಗರಃ ॥೯॥

ಕೋಶವನ್ನು ನಿಯಂತ್ರಿಸುವುದರಲ್ಲಿ, ದಾನ ಮಾಡುವುದರಲ್ಲಿ, ಭೃತ್ಯರ ಮೇಲ್ವಿಚಾರಣೆಗಳಲ್ಲಿ ಮತ್ತು ಎಲ್ಲರ ಪೋಷಣೆಯಲ್ಲಿ ಸತ್ಯಸಂಧನಾದ ವಿದುರನು ನಿರತನಾಗಿದ್ದನು.

ವಿಸೃಜ್ಯ ಧೃತರಾಷ್ಟ್ರಾಯ ರಾಜ್ಯಂ ಸ ವಿದುರಾಯ ಚ ।
ಚಚಾರ ಪೃಥಿವೀಂ ಪಾಂಡುಃ ಸರ್ವಾಂ ಪರಪುರಂಜಯಃ ॥೧೦॥

ಪರಪುರಂಜಯನಾದ ಪಾಂಡುವು ಧೃತರಾಷ್ಟ್ರನಿಗೂ ಮತ್ತು ವಿದುರನಿಗೂ ರಾಜ್ಯವನ್ನು ಒಪ್ಪಿಸಿ ದಿಗ್ವಿಜಯಕ್ಕಾಗಿ ಭೂಮಿಯನ್ನೆಲ್ಲಾ ಸಂಚಾರ ಮಾಡಿದನು.

ತತಃ ಸಿಂಹಾಸನೇ ರಾಜಾ ಸ್ಥಾಪಯಿತ್ವೈನಮಚ್ಯುತಮ್ ।
ವನಂ ಜಗಾಮ ಕೌರವ್ಯೋ ಭಾರ್ಯಾಭ್ಯಾಂ ಸಹಿತೋಽನಘ ॥೧೧॥

ಎಲೈ ಅನಘನೇ, ಅನಂತರ ಕೌರವ್ಯನಾದ ಪಾಂಡುರಾಜನು ತನ್ನ ಗುಣಗಳಿಂದ ಚ್ಯುತನಾಗದ ಧೃತರಾಷ್ಟ್ರನನ್ನು ಸಿಂಹಾಸನದಲ್ಲಿ ಕುಳ್ಳಿರಿಸಿ ಇಬ್ಬರು ಪತ್ನಿಯರ ಸಹಿತನಾಗಿ ಕಾಡಿಗೆ ಹೋದನು.

ಕಥಂ ತಸ್ಯ ಕುಲೇ ಜಾತಃ ಕುಲೇ ಭೇದಂ ಕರಿಷ್ಯತಿ ।
ಸಂಭೂಯ ಭ್ರಾತೃಭಿಃ ಸಾರ್ಧಂ ಭುಂಕ್ಷ್ವ ಭೋಗಾನ್ ಜನಾಧಿಪ ॥೧೨॥

ಅವರ ಕುಲದಲ್ಲಿ ಜನಿಸಿದ ನೀನು ಹೇಗೆ ಕುಲಭೇದವನ್ನು ಮಾಡುವಿ? ಎಲೈ ರಾಜನೇ, ಸಹೋದರರ ಜೊತೆಯಲ್ಲಿ ಒಂದುಗೂಡಿ ಭೋಗಗಳನ್ನು ಭೋಗಿಸುವವನಾಗು.

ಬ್ರವೀಮ್ಯಹಂ ನ ಕಾರ್ಪಣ್ಯಾನ್ನಾರ್ಥಹೇತೋಃ ಕಥಂಚನ ।
ಭೀಷ್ಮೇಣ ದತ್ತಮಶ್ನಾಮಿ ನ ತ್ವಯಾ ರಾಜಸತ್ತಮ ॥೧೩॥

ಎಲೈ ರಾಜಶ್ರೇಷ್ಠನೇ, ನಾನು ಕಾರ್ಪಣ್ಯದಿಂದಾಗಲೀ ಅಥವಾ ಧನಲಾಭದ ಉದ್ದೇಶದಿಂದಾಗಲೀ ಏನನ್ನೂ ಹೇಳುತ್ತಿಲ್ಲ. ಭೀಷ್ಮರು ಕೊಟ್ಟ ಅನ್ನದಿಂದ ನಾನು ಜೀವಿಸಿದ್ದೇನೆ. ನೀನು ಕೊಟ್ಟುದುದರಿಂದಲ್ಲ.

ನಾಹಂ ತ್ವತ್ತೋಽಭಿಕಾಂಕ್ಷಿಷ್ಯೇ ವೃತ್ತ್ಯುಪಾಯಂ ಜನಾಧಿಪ ।
ಯತೋ ಭೀಷ್ಮಸ್ತತೋ ದ್ರೋಣೋ ಯದ್ ಭೀಷ್ಮಸ್ತಾ ಹ ತತ್ ಕುರು॥

ಎಲೈ ರಾಜನೇ, ನಿನ್ನಿಂದ ನಾನು ಜೀವನೋಪಾಯವನ್ನು ಬಯಸುತ್ತಿಲ್ಲ. ಎಲ್ಲಿ ಭೀಷ್ಮರಿದ್ದಾರೋ ಅಲ್ಲಿ ದ್ರೋಣರಿದ್ದಾರೆ. ಆದ್ದರಿಂದ ಭೀಷ್ಮರು ಹೇಳಿದಂತೆ ನಡೆದುಕೋ.

ದೀಯತಾಂ ಪಾಂಡುಪುತ್ರೇಭ್ಯೋ ರಾಜ್ಯಾರ್ಧಮರಿಕರ್ಶನ ।
ಸಮಮಾಚಾರ್ಯಕಂ ತಾತ ತವ ತೇಷಾಂ ಚ ಮೇ ಸದಾ ॥೧೫॥

ಎಲೈ ಶತ್ರುಕರ್ಶನನೇ, ಪಾಂಡುಪುತ್ರರಿಗೆ ಅರ್ಧರಾಜ್ಯವನ್ನು ಕೊಡು. ಪ್ರೀತಿಪಾತ್ರನೇ, ನಾನು ನಿನಗೂ ಮತ್ತು ಅವರಿಗೂ ಸಮಾನವಾಗಿ ಗುರುವಾಗಿದ್ದೇನೆ.

ಅಶ್ವತ್ಥಾಮಾ ಯಥಾ ಮಹ್ಯಂ ತಥಾ ಶ್ವೇತಹಯೋ ಮಮ ।
ಬಹುನಾ ಕಿಂ ಪ್ರಲಾಪೇನ ಯತೋ ಧರ್ಮಸ್ತತೋ ಜಯಃ ॥೧೬॥

ಅಶ್ವತ್ಥಾಮನು ಹೇಗೆ ನನಗೆ ಪ್ರಿಯನೋ ಅದರಂತೆ ಶ್ವೇತವಾಹನನಾದ ಅರ್ಜುನನೂ ಸಹ ಪ್ರಿಯನಾದವನು. ಹೆಚ್ಚು ಮಾತನಾಡಿ ಏನು ಪ್ರಯೋಜನ? ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವುಂಟಾಗುತ್ತದೆ.

ವಾಸುದೇವಃ

ಏವಮುಕ್ತೇ ಮಹಾರಾಜ ದ್ರೋಣೇನಾಮಿತತೇಜಸಾ ।
ವ್ಯಾಜಹಾರ ತತೋ ವಾಕ್ಯಂ ವಿದುರಃ ಸತ್ಯಸಂಗರಃ ॥೧೭॥

ಪಿತುರ್ವಚನಮನ್ವೀಕ್ಷ್ಯ ಪರಿವೃತ್ಯ ಚ ಧರ್ಮವಿತ್ ॥೧೮॥

ವಾಸುದೇವ– ಎಲೈ ಮಹಾರಾಜನೇ, ಅಮಿತಪರಾಕ್ರಮಿಗಳಾದ ದ್ರೋಣರು ಹೀಗೆ ಹೇಳಿದ ಮೇಲೆ ಸತ್ಯಸಂಧನೂ, ಧರ್ಮಜ್ಞನೂ ಆದ ವಿದುರನು, ತಂದೆಯ ಸ್ಥಾನದಲ್ಲಿರುವ ಭೀಷ್ಮರ ಕಡೆಗೆ ತಿರುಗಿ, ಅವರನ್ನು ನೋಡಿಕೊಂಡು ಮಾತುಗಳನ್ನು ಆಡಿದನು.

ದೇವವ್ರತ ನಿಬೋಧೇದಂ ವಚನಂ ಮಮ ಭಾಷತಃ ।
ಪ್ರನಷ್ಟಃ ಕೌರವೋ ವಂಶಸ್ತ್ವಯಾऽಯಂ ಪುನರುದ್ಧೃತಃ ।
ತ್ವಂ ಮೇ ವಿಲಪಮಾನಸ್ಯ ವಚನಂ ಸಮುಪೇಕ್ಷಸೇ ॥೧೯॥

ದೇವವ್ರತನಾದ ಭೀಷ್ಮನೇ, ನನ್ನ ಈ ಮಾತುಗಳನ್ನು ಕೇಳು. ನಾಶವನ್ನು ಹೊಂದಿದ್ದ ಈ ಕೌರವವಂಶವನ್ನು ನೀನು ಪುನಃ ಉದ್ಧರಿಸಿದೆ. ಆದರೂ ವಿಲಾಪವನ್ನು ಮಾಡುತ್ತಿರುವ ನನ್ನ ಮಾತುಗಳನ್ನು ಉಪೇಕ್ಷೆ ಮಾಡುತ್ತಿದ್ದೀಯೆ.

ಕೋಽಯಂ ದುರ್ಯೋಧನೋ ನಾಮ ಕುಲೇಽಸ್ಮಿನ್ ಕುಲಪಾಂಸನಃ ।
ಯಸ್ಯ ಲೋಭಾಭಿಭೂತಸ್ಯ ಮತಿಂ ಸಮನುವರ್ತಸೇ ॥೨೦॥

ಅನಾರ್ಯಸ್ಯಾಕೃತಜ್ಞಸ್ಯ ಲೋಭೇನ ಹೃತಚೇತಸಃ ॥೨೧॥

ಅತಿಕ್ರಾಮತಿ ಯಃ ಶಾಸ್ತ್ರಂ ಪಿತುರ್ಧರ್ಮಾರ್ಥದರ್ಶಿನಃ ॥೨೨॥

ಈ ಕುಲದಲ್ಲಿ ಹುಟ್ಟಿದ ಕುಲನಾಶಕನಾದ ದುರ್ಯೋಧನನೆಂಬವನು ಯಾವನು! ಅನಾರ್ಯನೂ, ಕೃತಜ್ಞತೆ ಇಲ್ಲದವನೂ, ಲೋಭದಿಂದ ಕೂಡಿದ ಮನಸ್ಸುಳ್ಳವನೂ, ಧರ್ಮಾರ್ಥದರ್ಶಿಯಾದ ತಂದೆಯ ಮಾತನ್ನು ಮೀರುವವನೂ ಆದ ಅವನ ಬುದ್ಧಿಯನ್ನು ನೀನು ಅನುಸರಿಸುತ್ತಿದ್ದೀಯೆ.

ಏತೇ ನಶ್ಯಂತಿ ಕುರವೋ ದುರ್ಯೋಧನಕೃತೇನ ವೈ ।
ಯಥಾ ತೇ ನ ಪ್ರಣಶ್ಯೇಯುರ್ಮಹಾರಾಜ ತಥಾ ಕುರು ॥೨೩॥

ಎಲೈ ಮಹಾರಾಜನೇ, ದುರ್ಯೋಧನನು ಮಾಡಿದ ಅಪರಾಧದಿಂದ ಈ ಕೌರವರು ನಾಶವನ್ನು ಹೊಂದುತ್ತಾರೆ. ಅವರು ನಾಶವನ್ನು ಹೊಂದದಂತೆ ನೀನು ಮಾಡುವವನಾಗು.

ಮಾ ಚೈವ ಧೃತರಾಷ್ಟ್ರಂ ಚ ಸರ್ವಾಂಶ್ಚೈವ ಮಹಾದ್ಯುತೇ ।
ಚಿತ್ರಕಾರ ಇವಾಲೇಖ್ಯಂ ಕೃತ್ವಾ ರಾಜನ್ ವಿನಾಶಯ ॥೨೪॥

ಎಲೈ ರಾಜನೇ, ಮಹಾದ್ಯುತಿಯೇ, ಧೃತರಾಷ್ಟ್ರನನ್ನೂ ಮತ್ತು ಎಲ್ಲರನ್ನೂ ಚಿತ್ರಕಾರನು ಚಿತ್ರದಲ್ಲಿ ಬರೆಯುವಂತೆ ಮಾಡಿ ವಿನಾಶವನ್ನು ಮಾಡಬೇಡ (ನಿಧನ ಹೊಂದಿದ ರಾಜರ ಚಿತ್ರಗಳನ್ನು ಅರಮನೆಯ ಚಿತ್ರಶಾಲೆಯಲ್ಲಿ ಬರೆಸುವುದು ಪದ್ಧತಿ).

ಪ್ರಜಾಪತಿಃ ಪ್ರಜಾ ಸೃಷ್ಟ್ವಾ ಯಥಾ ಸಂಹರತೇ ಪ್ರಜಾಃ ॥೨೫॥

ನೋಪೇಕ್ಷಸ್ವ ಮಹಾಬಾಹೋ ಪಶ್ಯಮಾನಃ ಕುಲಕ್ಷಯಮ್ ॥೨೬॥

ಪ್ರಜಾಪತಿಗಳಾದ ಬ್ರಹ್ಮದೇವರು ಪ್ರಜೆಗಳನ್ನು ಸೃಷ್ಟಿಮಾಡಿ ನಿರ್ವಿಕಾರವಾಗಿ ಹೇಗೆ ಪ್ರಜೆಗಳನ್ನು ಸಂಹರಿಸುತ್ತಾರೆಯೋ ಅದರಂತೆ ಮಹಾಬಾಹುವೇ ಕುಲಕ್ಷಯವನ್ನು ನೋಡುತ್ತಾ ಉದಾಸೀನ ಮಾಡಬೇಡ.

ಅಥ ತೇऽದ್ಯ ಮತಿರ್ನಷ್ಟಾ ವಿನಾಶೇ ಪ್ರತ್ಯುಪಸ್ಥಿತೇ ।
ವನಂ ಗಚ್ಛ ಮಯಾ ಸಾರ್ಧಂ ಧೃತರಾಷ್ಟ್ರೇಣ ಚೈವ ಹ ॥೨೭॥

ವಿನಾಶವು ಒದಗಿದ ಈ ಕಾಲದಲ್ಲಿ ನಿನ್ನ ಬುದ್ಧಿಯು ನಷ್ಟವಾಗಿದ್ದರೆ ನನ್ನ ಮತ್ತು ಧೃತರಾಷ್ಟ್ರನ ಜೊತೆಯಲ್ಲಿ ಕಾಡಿಗೆ ಹೋಗುವವನಾಗು.

ಬದ್ಧ್ವಾ ವಾ ನಿಕೃತಿಪ್ರಜ್ಞಂ ಧಾರ್ತರಾಷ್ಟ್ರಂ ಸುದುರ್ಮತಿಮ್ ।
ಶಾಧೀದಂ ರಾಜ್ಯಮದ್ಯಾಶು ಪಾಂಡವೈರಭಿರಕ್ಷಿತಮ್ ॥೨೮॥

ಅಥವಾ ಮೋಸದ ಬುದ್ಧಿಯುಳ್ಳ, ಬಹಳ ದುರ್ಮತಿಯಾದ ಈ ದುರ್ಯೋಧನನನ್ನು ಬಂಧಿಸಿ, ಪಾಂಡವರಿಂದ ರಕ್ಷಿತವಾದ ರಾಜ್ಯವನ್ನು ಈ ದಿನ ಶೀಘ್ರವಾಗಿ ಆಳುವವನಾಗು.

ಪ್ರಸೀದ ರಾಜಶಾರ್ದೂಲ ವಿನಾಶೋ ದೃಶ್ಯತೇ ಮಹಾನ್ ।
ಪಾಂಡವಾನಾಂ ಕುರೂಣಾಂ ಚ ರಾಜ್ಞಾಮಮಿತತೇಜಸಾಮ್ ॥೨೯॥

ಎಲೈ ರಾಜಶಾರ್ದೂಲನೇ, ಅಮಿತವಿಕ್ರಮಿಗಳಾದ ಪಾಂಡವರಿಗೂ ಮತ್ತು ಕೌರವರಿಗೂ ಮಹಾವಿನಾಶವು ಬಂದೊದಗಿರುವುದು ಕಂಡು ಬರುತ್ತಿದೆ. ನೀನು ಪ್ರಸನ್ನನಾಗು.

ವಾಸುದೇವಃ

ವಿರರಾಮೈವಮುಕ್ತ್ವಾ ತು ವಿದುರೋ ದೀನಮಾನಸಃ ।
ಪ್ರಧ್ಯಾಯಮಾನಃ ಸ ತದಾ ನಿಃಶ್ವಸಂಶ್ಚ ಪುನಃ ಪುನಃ ॥೩೦॥

ವಾಸುದೇವ– ವಿದುರನು ಹೀಗೆ ಮಾತನಾಡಿ, ದೀನಮನಸ್ಸಿನಿಂದ ಚಿಂತಿಸುತ್ತಾ ಪುನಃ ಪುನಃ ನಿಟ್ಟುಸಿರನ್ನು ಬಿಡುತ್ತಾ ಸುಮ್ಮನಾದನು.

ತತೋऽಸ್ಯ ರಾಜ್ಞಃ ಸುಬಲಸ್ಯ ಪುತ್ರೀ
ಧರ್ಮಾರ್ಥಯುಕ್ತಂ ಕುಲನಾಶಭೀತಾ ।
ದುರ್ಯೋಧನಂ ಪಾಪಮತಿಂ ನೃಶಂಸಂ
ರಾಜ್ಞಾಂ ಸಮಕ್ಷಂ ಸುತಮಾಹ ಕೋಪಾತ್ ॥೩೧॥

ಅನಂತರ ಸುಬಲರಾಜನ ಪುತ್ರಿಯಾದ ಗಾಂಧಾರಿಯು ಕುಲನಾಶದಿಂದ ಭೀತಳಾಗಿ, ಎಲ್ಲ ರಾಜರ ಎದುರಿನಲ್ಲಿ ಪಾಪಮತಿಯೂ, ಕ್ರೂರಿಯೂ ಆದ ತನ್ನ ಮಗನಾದ ದುರ್ಯೋಧನನನ್ನು ಕುರಿತು ಕೋಪದಿಂದ ಮಾತನಾಡಿದಳು.

ಯೇ ಪಾರ್ಥಿವಾ ರಾಜಸಭಾಂ ಪ್ರವಿಷ್ಟಾ
ಬ್ರಹ್ಮರ್ಷಯೋ ಯೇ ಚ ಸಭಾಸದೋಽನ್ಯೇ ।
ಶೃಣ್ವಂತು ವಕ್ಷ್ಯಾಮಿ ತಥಾಽಪರಾಧಂ
ಪಾಪಸ್ಯ ಸಾಮಾತ್ಯಪರಿಚ್ಛದಸ್ಯ ॥೩॥

ರಾಜಸಭೆಯಲ್ಲಿ ಪ್ರವಿಷ್ಟರಾದ ರಾಜರೂ, ಬ್ರಹ್ಮರ್ಷಿಗಳೂ ಮತ್ತು ಉಳಿದ ಸಭಾಸದರೂ ಕೇಳುವವರಾಗಿ. ಅಮಾತ್ಯಪರಿವಾರದಿಂದ ಕೂಡಿದ ಪಾಪಿಯಾದ ದುರ್ಯೋಧನನ ಅಪರಾಧಗಳನ್ನು ನಾನು ಹೇಳುವೆನು.

ರಾಜ್ಯಂ ಕುರೂಣಾಮನುಭೂತಭೋಗ್ಯಂ
ಕ್ರಮಾಗತೋ ನಃ ಕುಲಧರ್ಮ ಏಷಃ ।
ತ್ವಂ ಪಾಪಬುದ್ಧೇ ಸುನೃಶಂಸಕರ್ಮಾ
ರಾಜ್ಯಂ ಕುರೂಣಾಮನಯಾದ್ಧಿ ಹಂಸಿ ॥೩೩॥

ಅನೇಕ ಭೋಗಗಳನ್ನು ನೀಡಿದ ಈ ಕೌರವರ ರಾಜ್ಯವು ಕ್ರಮದಿಂದ ಒಬ್ಬರಿಂದೊಬ್ಬರಿಗೆ ಬಂದಿದೆ. ಇದು ನಮ್ಮ ಕುಲಧರ್ಮ. ಎಲೈ ಪಾಪಬುದ್ಧಿಯುಳ್ಳ ಮತ್ತು ಕ್ರೂರವಾದ ಕರ್ಮವನ್ನು ಎಸಗುವ ದುರ್ಯೋಧನನೇ, ನೀನು ಅನ್ಯಾಯದಿಂದ ಕೌರವರ ಈ ರಾಜ್ಯವನ್ನು ವಿನಾಶ ಮಾಡುತ್ತಿದ್ದೀಯೆ.

ರಾಜ್ಯೇ ಸ್ಥಿತೋ ಧೃತರಾಷ್ಟ್ರೋ ಮನೀಷೀ
ತಸ್ಯಾನುಜೋ ವಿದುರೋ ಧರ್ಮ(ದೀರ್ಘ)ದರ್ಶೀ ।
ಏತಾವತಿಕ್ರಮ್ಯ ಕಥಂ ನೃಪತ್ವಂ
ದುರ್ಯೋಧನ ಪ್ರಾರ್ಥಯಸೇಽದ್ಯ ಮೋಹಾತ್ ॥೩೪॥

ಮೇಧಾವಿಯಾದ ಧೃತರಾಷ್ಟ್ರನು ರಾಜ್ಯದಲ್ಲಿದ್ದಾನೆ. ಅವನ ತಮ್ಮನಾದ ವಿದುರನು ದೀರ್ಘದರ್ಶಿಯಾಗಿದ್ದಾನೆ. ಎಲೈ ದುರ್ಯೋಧನನೇ, ಅವರಿಬ್ಬರನ್ನೂ ಮೀರಿ ನಾನು ರಾಜನಾಗುತ್ತೇನೆ ಎಂದು ಹೇಗೆ ಮೋಹದಿಂದ ಬಯಸುತ್ತೀಯೆ?

ರಾಜಾ ಚ ಕ್ಷತ್ತಾ ಚ ಮಹಾನುಭಾವೌ
ಭೀಷ್ಮೇ ಸ್ಥಿತೇ ಪರವಂತೌ ಭವೇತಾಮ್ ।
ಅಯಂ ತು ಧರ್ಮಜ್ಞತಯಾ ಮಹಾತ್ಮಾ
ನ ರಾಜ್ಯಕಾಮೋ ನೃವರೋ ನದೀಜಃ ॥೩೫॥

ಮಹಾನುಭಾವರಾದ ಧೃತರಾಷ್ಟ್ರ ಮತ್ತು ವಿದುರರು ಭೀಷ್ಮರು ಇರುವಾಗ ಪರಾಧೀನರೇ ಆಗುವರು. ಈ ಮಹಾತ್ಮನೂ, ನರಶ್ರೇಷ್ಠನೂ ಆದ ನದೀಪುತ್ರನು ಧರ್ಮಜ್ಞನಾದುದರಿಂದ ರಾಜ್ಯವನ್ನು ಬಯಸುವುದಿಲ್ಲ.

ರಾಜ್ಯಂ ತು ಪಾಂಡೋರಿದಮಪ್ರಧೃಷ್ಯಂ
ತಸ್ಯಾದ್ಯ ಪುತ್ರಾಃ ಪ್ರಭವಂತಿ ನಾನ್ಯೇ ।
ರಾಜ್ಯಂ ತದೇತನ್ನಿಖಿಲಂ ಪಾಂಡವಾನಾಂ
ಪೈತಾಮಹಂ ಪುತ್ರಪೌತ್ರಾನುಗಾಮಿ ॥೩೬॥

ಇದು ಪಾಂಡುವಿನ ಅಲುಗಾಡಿಸಲು ಸಾಧ್ಯವಿಲ್ಲದ ರಾಜ್ಯ. ಇದಕ್ಕೆ ಅವನ ಪುತ್ರರೇ ಅಧಿಕಾರಿಗಳಾಗುತ್ತಾರೆ. ಈ ಎಲ್ಲ ರಾಜ್ಯವೂ ಪಾಂಡವರಿಗೇ ಸೇರಿದುದು. ಪಿತಾಮಹನ ಸಂಪತ್ತಾದ ಈ ರಾಜ್ಯವು ಪಾಂಡವರ ಪುತ್ರ-ಪೌತ್ರರಿಗೆ ಹೋಗುವುದಾಗುತ್ತದೆ.

ಯದ್ವೈ ಬ್ರೂತೇ ಕುರುಮುಖ್ಯೋ ಮಹಾತ್ಮಾ
ದೇವವ್ರತಃ ಸತ್ಯಸಂಧೋ ಮನಸ್ವೀ ।
ಸರ್ವಂ ತದಸ್ಮಾಭಿರಧೀತ್ಯ ಧರ್ಮಂ
ಗ್ರಾಹ್ಯಂ ಸ್ವಧರ್ಮಾನ್ ಪರಿಪಾಲಯದ್ಭಿಃ ॥೩೭॥

ಕುರುಶ್ರೇಷ್ಠರೂ, ಮಹಾತ್ಮರೂ, ಸತ್ಯಸಂಧರೂ, ಧೈರ್ಯಶಾಲಿಗಳೂ ಆದ ದೇವವ್ರತರಾದ ಭೀಷ್ಮರು ಏನನ್ನು ಹೇಳುತ್ತಾರೆಯೋ ಅದೆಲ್ಲವನ್ನೂ ನಾವು ಆಲೋಚಿಸಿ, ನಮ್ಮ ಧರ್ಮವನ್ನು ಪರಿಪಾಲಿಸುವ ನಾವು ಧರ್ಮವನ್ನು ಸ್ವೀಕರಿಸಬೇಕು.

ಅನುಜ್ಞಯಾ ಚಾಥ ಮಹಾವ್ರತಸ್ಯ
ಬ್ರೂಯಾನ್ನೃಪೋऽಯಂ ವಿದುರಸ್ತಥೈವ ।
ಕಾರ್ಯಂ ಭವೇತ್ ತತ್ ಸುಹೃದ್ಭಿರ್ನಿಯೋಜ್ಯಂ
ಧರ್ಮಂ ಪುರಸ್ಕೃತ್ಯ ಸುದೀರ್ಘಕಾಲಮ್ ॥೩೮॥

ಮಹಾವ್ರತರಾದ ಭೀಷ್ಮರು ಅನುಮತಿಯಿಂದ ರಾಜನಾದ ಧೃತರಾಷ್ಟ್ರನೂ ಮತ್ತು ವಿದುರನೂ ಏನು ಹೇಳುತ್ತಾನೆಯೋ, ಅಂತಹ ಕುರುಜನರಿಂದ ಅನುಮೋದಿತವಾದ ಕಾರ್ಯವನ್ನು ನಾವು ಧರ್ಮವನ್ನು ಮುಂದೆ ಮಾಡಿಕೊಂಡು ದೀರ್ಘಕಾಲದಲ್ಲಿ ಮಾಡುವವರಾಗಬೇಕು.

ನ್ಯಾಯಾಗತಂ ರಾಜ್ಯಮಿದಂ ಕುರೂಣಾಂ
ಯುಧಿಷ್ಠಿರಃ ಶಾಸ್ತು ವೈ ಧರ್ಮಪುತ್ರಃ ।
ಪ್ರಚೋದಿತೋ ಧೃತರಾಷ್ಟ್ರೇಣ ರಾಜ್ಞಾ
ಪುರಸ್ಕೃತಃ ಶಾಂತನವೇನ ಚೈವ ॥೩೯॥

ನ್ಯಾಯದಿಂದ ಪ್ರಾಪ್ತವಾದ ಕೌರವರ ಈ ರಾಜ್ಯವನ್ನು ಧರ್ಮಪುತ್ರನಾದ ಯುಧಿಷ್ಠಿರನು ಧೃತರಾಷ್ಟ್ರನ ಪ್ರೇರಣೆಯಂತೆ, ಭೀಷ್ಮರನ್ನು ಮುಂದಿಟ್ಟುಕೊಂಡು ಆಳುವವನಾಗಲಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಚತ್ವಾರಿಂಶೋತ್ತರಶತತಮೋऽಧ್ಯಾಯಃ ॥

॥ ವಿವಾದಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೆಂಟನೆಯ ಅಧ್ಯಾಯ

ಕೃಷ್ಣನಿಂದ ಧೃತರಾಷ್ಟ್ರನ ಮಾತುಗಳ ಅನುವಾದ

ವಾಸುದೇವಃ

ಏವಮುಕ್ತೇ ತು ಗಾಂಧಾರ್ಯಾ ಧೃತರಾಷ್ಟ್ರೋ ಜನೇಶ್ವರಃ ।
ದುರ್ಯೋಧನಮುವಾಚೇದಂ ರಾಜಮಧ್ಯೇ ಜನಾಧಿಪ ॥೧॥

ವಾಸುದೇವ– ಎಲೈ ರಾಜನೇ, ಗಾಂಧಾರಿಯ ಮಾತು ಮುಗಿಯುತ್ತಿರಲು ಜನೇಶ್ವರನಾದ ಧೃತರಾಷ್ಟ್ರನು ರಾಜರ ಮಧ್ಯದಲ್ಲಿ ದುರ್ಯೋಧನನನ್ನು ಕುರಿತು ಈ ಮಾತನ್ನು ಆಡಿದನು.

ದುರ್ಯೋಧನ ನಿಬೋಧೇದಂ ಯತ್ ತ್ವಾಂ ವಕ್ಷ್ಯಾಮಿ ಪುತ್ರಕ ।
ತಥಾ ತತ್ ಕುರು ಭದ್ರಂ ತೇ ಯದ್ಯಸ್ತಿ ಪಿತೃಗೌರವಮ್ ॥೨॥

ಪ್ರೀತಿಯ ಪುತ್ರನೇ, ನಾನು ಹೇಳುವ ಮಾತುಗಳನ್ನು ತಿಳಿದುಕೊ. ದುರ್ಯೋಧನನೇ, ನಿನಗೆ ಮಂಗಳವಾಗಲಿ. ತಂದೆಯ ಮೇಲೆ ಗೌರವವಿದ್ದರೆ ನಾನು ಹೇಳಿದಂತೆ ಮಾಡು.

ಸೋಮಃ ಪ್ರಜಾಪತಿಃ ಪೂರ್ವಂ ಕುರೂಣಾಂ ವಂಶವರ್ಧನಃ ।
ಸೋಮಾದ್ ಬಭೂವ ಷಷ್ಠೋಽಯಂ ಯಯಾತಿರ್ನಹುಷಾತ್ಮಜಃ ॥೩॥

ಪ್ರಜಾಪತಿಯಾದ ಚಂದ್ರನು ಕುರುಗಳ ವಂಶವರ್ಧನನಾಗಿದ್ದನು. ನಹುಷನ ಪುತ್ರನಾದ ಯಯಾತಿಯು ಚಂದ್ರನಿಂದ ಆರನೆಯವನಾಗಿ ಜನಿಸಿದನು.

ತಸ್ಯ ಪುತ್ರಾ ಬಭೂವುರ್ಹಿ ಪಂಚ ರಾಜರ್ಷಿಸತ್ತಮಾಃ ।
ತೇಷಾಂ ಯದುರ್ಮಹಾತೇಜಾ ಜ್ಯೇಷ್ಠಃ ಸಮಭವತ್ ಪ್ರಭುಃ ॥೪॥

ಅವನಿಗೆ ರಾಜರ್ಷಿ ಶ್ರೇಷ್ಠರಾದ ಐದುಮಕ್ಕಳು ಜನಿಸಿದರು. ಅವರಲ್ಲಿ ಪ್ರಭುವೂ ಮತ್ತು ಮಹಾತೇಜಸ್ವಿಯೂ ಆದ ಯದುವು ಜ್ಯೇಷ್ಠನಾಗಿದ್ದನು.

ಪೂರುರ್ಯವೀಯಾಂಶ್ಚ ತತೋ ಯೋಽಸ್ಮಾಕಂ ವಂಶವರ್ಧನಃ ।
ಶರ್ಮಿಷ್ಠಯಾ ಸಂಪ್ರಸೂತೋ ದುಹಿತ್ರಾ ವೃಷಪರ್ವಣಃ ॥೫॥

ಕೊನೆಯವನು ನಮ್ಮ ವಂಶವರ್ಧನನಾದ ಪೂರು. ಅವನು ವೃಷಪರ್ವನ ದೌಹಿತ್ರನಾಗಿ ಶರ್ಮಿಷ್ಠೆಯಲ್ಲಿ ಜನಿಸಿದನು.

ಯದುಸ್ತು ಭರತಶ್ರೇಷ್ಠ ದೇವಯಾನ್ಯಾಃ ಸುತೋಽಭವತ್ ।
ದೌಹಿತ್ರಸ್ತಾತ ಶುಕ್ರಸ್ಯ ಕಾವ್ಯಸ್ಯಾಮಿತತೇಜಸಃ ॥೬॥

ಎಲೈ ಭರತಶ್ರೇಷ್ಠನೇ, ಯದುವಾದರೂ ದೇವಯಾನಿಯ ಪುತ್ರನಾಗಿದ್ದನು. ಅವನು ಅಮಿತಪರಾಕ್ರಮಿಗಳಾದ, ಕವಿಯ ಮಕ್ಕಳಾದ ಶುಕ್ರಾಚಾರ್ಯರ ದೌಹಿತ್ರನಾಗಿದ್ದನು.

ಯಾದವಾನಾಂ ಕುಲಕರೋ ಬಲವಾನ್ ವೀರ್ಯಸಮ್ಮತಃ ।
ಅವಮೇನೇ ಸ ತು ಕ್ಷತ್ರಂ ದರ್ಪಪೂರ್ಣಃ ಸುಮಂದಧೀಃ ॥೭॥

ಬಲಿಷ್ಠನೂ, ವೀರ್ಯಸಮ್ಮತನೂ, ಯಾದವರ ವಂಶವರ್ಧನನೂ ಆದ ಅವನು ಮಂದಬುದ್ಧಿಯುಳ್ಳವನಾಗಿ, ದರ್ಪಪೂರ್ಣನಾಗಿ ಕ್ಷತ್ರಿಯರನ್ನು ಅವಮಾನ ಮಾಡಿದನು.

ನ ಚಾತಿಷ್ಠತ್ ಪಿತುಃ ಶಾಸ್ತ್ರೇ ಬಲದರ್ಪವಿಮೋಹಿತಃ ।
ಅವಮೇನೇ ಚ ಪಿತರಂ ಭ್ರಾತೄಂಶ್ಚಾಪ್ಯಪರಾಜಿತಃ ॥೮॥

ತನ್ನ ಬಲ ಮತ್ತು ದರ್ಪಗಳಿಂದ ಮೋಹಿತನಾಗಿ ಅವನು ತಂದೆಯ ಶಾಸನವನ್ನು ನಡೆಸಿಕೊಡಲಿಲ್ಲ. ಅಪರಾಜಿತನಾದ ಅವನು ತಂದೆಯನ್ನೂ ಮತ್ತು ಸಹೋದರರನ್ನೂ ಅವಮಾನ ಮಾಡಿದನು.

ಪೃಥಿವ್ಯಾಂ ಚತುರಂತಾಯಾಂ ಯದುರೇವಾಭವದ್ ಬಲೀ ।
ವಶೇ ಕೃತ್ವಾ ಸ ನೃಪತೀನ್ ನ್ಯವಸನ್ನಾಗಸಾಹ್ವಯೇ ॥೯॥

ನಾಲ್ಕು ಸಮುದ್ರಗಳವರೆಗೆ ಹರಡಿದ ಭೂಮಿಯಲ್ಲಿ ಯದುವೇ ಬಲಿಷ್ಠನಾಗಿದ್ದನು. ಅವನು ರಾಜರನ್ನು ವಶಪಸಿಡಿಕೊಂಡು ಹಸ್ತಿನಪುರದಲ್ಲಿ ವಾಸವಾಗಿದ್ದನು.

ತಂ ಪಿತಾ ಪರಮಕ್ರುದ್ಧೋ ಯಯಾತಿರ್ನಹುಷಾತ್ಮಜಃ ।
ಶಶಾಪ ಪುತ್ರಂ ಗಾಂಧಾರೇ ರಾಜ್ಯಾಚ್ಚ ವ್ಯವರೋಪಯತ್ ॥೧೦॥

ಎಲೈ ಗಾಂಧಾರಿ ಪುತ್ರನೇ, ಅವನ ನಡತೆಯನ್ನು ನೋಡಿ ಪರಮಕೋಪಗೊಂಡ ನಹುಷಪುತ್ರನಾದ ತಂದೆಯಾದ ಯಯಾತಿಯು ಮಗನಾದ ಅವನಿಗೆ ಶಾಪವನ್ನು ಕೊಟ್ಟು ರಾಜ್ಯದಿಂದಲೇ ಚ್ಯುತಿಗೊಳಿಸಿದನು.

ಯೇ ಚೈನಮನ್ವವರ್ತಂತ ಭ್ರಾತರೋ ಬಲದರ್ಪಿತಮ್ ।
ಶಶಾಪ ತಾನಪಿ ಕ್ರುದ್ಧೋ ಯಯಾತಿಸ್ತನಯಾನಥ ॥೧೧॥

ಬಲದರ್ಪಿತವಾದ ಅವನನ್ನು ಅನುಸರಿಸಿದ ಅವನ ತಮ್ಮಂದಿರಿಗೂ ಕೋಪದಿಂದ ಶಾಪವನ್ನು ಕೊಟ್ಟನು.

ಯವೀಯಾಂಸಂ ತತಃ ಪೂರುಂ ಪುತ್ರಂ ತಂ ವಂಶವರ್ಧನಮ್ ।
ರಾಜ್ಯೇ ನಿವೇಶಯಾಮಾಸ ವಿಧೇಯಂ ನೃಪಸತ್ತಮಃ ॥೧೨॥

ನೃಪಶ್ರೇಷ್ಠನಾದ ಅವನು ಎಲ್ಲರಿಗಿಂತ ಚಿಕ್ಕವನೂ ಮತ್ತು ವಿಧೇಯನೂ, ವಂಶವರ್ಧನನೂ ಆದ ಪೂರುವನ್ನು ರಾಜ್ಯದಲ್ಲಿ ಸ್ಥಾಪಿಸಿದನು.

ಏವಂ ಜ್ಯೇಷ್ಠೋಽಪ್ಯಥೋತ್ಸಿಕ್ತೋ ನ ರಾಜ್ಯಮಭಿಪದ್ಯತೇ ।
ಯವೀಯಾಂಸಃ ಪ್ರಪದ್ಯಂತೇ ರಾಜ್ಯಂ ವೃದ್ಧೋಪಸೇವಯಾ ॥೧೩॥

ಹೀಗೆ ಜ್ಯೇಷ್ಠನಾದರೂ ಕೂಡ ಅಹಂಕಾರಿಯಾದವನು ರಾಜ್ಯವನ್ನು ಪಡೆಯುವುದಿಲ್ಲ. ಚಿಕ್ಕವರು ದೊಡ್ಡವರ ಸೇವೆಯನ್ನು ಮಾಡಿ ರಾಜ್ಯವನ್ನು ಪಡೆಯುತ್ತಾರೆ.

ತಥೈವ ಸರ್ವಧರ್ಮಜ್ಞಃ ಪಿತುರ್ಮಮ ಪಿತಾಮಹಃ ।
ಪ್ರತೀಪಃ ಪೃಥಿವೀಪಾಲಃ ತ್ರಿಷು ಲೋಕೇಷು ವಿಶ್ರುತಃ ॥೧೪॥

ಹಾಗೆಯೇ ನನ್ನ ತಂದೆಯ ಪಿತಾಮಹನಾದ ಪ್ರತೀಪನು ಸರ್ವಧರ್ಮವನ್ನು ತಿಳಿದವನಾಗಿ, ಮೂರುಲೋಕಗಳಲ್ಲೂ ವಿಖ್ಯಾತನಾದ ರಾಜನಾಗಿದ್ದನು.

ತಸ್ಯ ಪಾರ್ಥಿವಸಿಂಹಸ್ಯ ರಾಜ್ಯಂ ಧರ್ಮೇಣ ಶಾಸತಃ ।
ತ್ರಯಃ ಪ್ರಜಜ್ಞಿರೇ ಪುತ್ರಾ ದೇವಕಲ್ಪಾ ಯಶಸ್ವಿನಃ ॥೧೫॥

ದೇವಾಪಿರಭವಜ್ಜ್ಯೇಷ್ಠೋ ಬಾಹ್ಲೀಕಸ್ತದನಂತರಮ್ ।
ತೃತೀಯಃ ಶಂತನುಸ್ತಾತ ಧೃತಿಮಾನ್ ಮೇ ಪಿತಾಮಹಃ ॥೧೬॥

ಎಲೈ ಪ್ರೀತಿಪಾತ್ರನೇ, ಧರ್ಮದಿಂದ ರಾಜ್ಯವನ್ನು ಆಳುವ ರಾಜಸಿಂಹನಾದ ಅವನಿಗೆ ದೇವತೆಗಳಿಗೆ ಸಮಾನನಾದ ಕೀರ್ತಿವಂತರಾದ ದೇವಾಪಿ ಎಂಬ ಜ್ಯೇಷ್ಠಪುತ್ರನೂ ಅನಂತರ ಬಾಹ್ಲೀಕನೂ ಮತ್ತು ನನ್ನ ಪಿತಾಮಹನಾದ ಧೈರ್ಯಶಾಲಿಯಾದ ಮೂರನೆಯವನಾದ ಶಂತನುವೂ ಜನಿಸಿದರು.

ದೇವಾಪಿಸ್ತು ಮಹಾತೇಜಾಸ್ತ ಗ್ದೋಷೀ ರಾಜಸತ್ತಮ ।
ಧಾರ್ಮಿಕಃ ಸತ್ಯವಾದೀ ಚ ಪಿತೃಶುಶ್ರೂಷಣೇ ರತಃ ॥೧೭॥

ಎಲೈ ರಾಜಶ್ರೇಷ್ಠನೇ, ಮಹಾತೇಜಸ್ವಿಯಾದ ದೇವಾಪಿಯು ಧಾರ್ಮಿಕನೂ, ಸತ್ಯವಾದಿಯೂ, ತಂದೆಯ ಸೇವೆಯಲ್ಲಿ ನಿರತನೂ ಮತ್ತು ಚರ್ಮದೋಷ ಉಳ್ಳವನೂ ಆಗಿದ್ದನು.

ಪೌರಜಾನಪದಾನಾಂ ಚ ಸಮ್ಮತಃ ಸಾಧುಸತ್ಕೃತಃ ।
ಸರ್ವೇಷಾಂ ಬಾಲವೃದ್ಧಾನಾಂ ದೇವಾಪಿರ್ಹೃದಯಂಗಮಃ ॥೧೮॥

ದೇವಾಪಿಯು ಎಲ್ಲ ಪೌರಜಾನಪದರಿಗೂ ಸಮ್ಮತನಾದವನು. ಸಜ್ಜನರಿಂದ ಗೌರವಿಸಲ್ಪಟ್ಟವನು. ಎಲ್ಲ ಬಾಲಕರಿಗೂ ಮತ್ತು ವೃದ್ಧರಿಗೂ ಹೃದಯಂಗಮನಾದವನೂ ಆಗಿದ್ದನು.

ಪ್ರಾಜ್ಞಶ್ಚ ಸತ್ಯಸಂಧಶ್ಚ ಸರ್ವಭೂತಹಿತೇ ರತಃ ।
ವರ್ತಮಾನಃ ಪಿತುಃ ಶಾಸ್ತ್ರೇ ಬ್ರಾಹ್ಮಣಾನಾಂ ತಥೈವ ಚ ॥೧೯॥

ಅವನು ಪ್ರಾಜ್ಞನೂ, ಸತ್ಯಸಂಧನೂ, ಸರ್ವಪ್ರಾಣಿಗಳಲ್ಲಿ ದಯೆಯುಳ್ಳವನೂ, ತಂದೆಯ ಮತ್ತು ಬ್ರಾಹ್ಮಣರ ಆದೇಶವನ್ನು ಪಾಲಿಸುವವನೂ ಆಗಿದ್ದನು.

ಬಾಹ್ಲೀಕಶ್ಚ ಪ್ರಿಯೋ ಭ್ರಾತಾ ಶಂತನೋಶ್ಚ ಮಹಾತ್ಮನಃ ।
ಸೌಭ್ರಾತ್ರಂ ಚ ಪರಂ ತೇಷಾಂ ಸಹಿತಾನಾಂ ಮಹಾತ್ಮನಾಮ್ ॥೨೦॥

ಅವನು ಬಾಹ್ಲೀಕನಿಗೂ, ಮಹಾತ್ಮನಾದ ಶಂತನುವಿಗೂ ಪ್ರಿಯನಾದ ಅಣ್ಣನಾಗಿದ್ದನು. ಮಹಾತ್ಮರಾದ ಆ ಮೂರುಜನ ಅಣ್ಣ-ತಮ್ಮಂದಿರಿಗೆ ಶ್ರೇಷ್ಠವಾದ ಸೌಭ್ರಾತ್ರವಿದ್ದಿತು.

ಅಥ ಕಾಲಸ್ಯ ಪರ್ಯಾಯೇ ವೃದ್ಧೋ ನೃಪತಿಸತ್ತಮಃ ।
ಸಂಭಾರಾನಭಿಷೇಕಾರ್ಥಂ ಕಾರಯಾಮಾಸ ಚ ಪ್ರಭುಃ ॥೨೧॥

ಮಂಗಲಾನಿ ಚ ಸರ್ವಾಣಿ ಕಾರಯಾಮಾಸ ಚಾಭಿಭೂಃ ॥೨೨॥

ಕಾಲಕ್ರಮದಲ್ಲಿ ವೃದ್ಧನಾದ ರಾಜಶ್ರೇಷ್ಠನೂ, ಶತ್ರುಗಳನ್ನು ಸೋಲಿಸುವವನೂ, ಪ್ರಭುವೂ ಆದ ಪ್ರತೀಪನು ದೇವಾಪಿಗೆ ಅಭಿಷೇಕ ಮಾಡುವ ಸಲುವಾಗಿ ಎಲ್ಲಾ ಮಂಗಳ ಪದಾರ್ಥಗಳನ್ನೂ ಅಣಿ ಮಾಡಿದನು.

ತಂ ಬ್ರಾಹ್ಮಣಾಶ್ಚ ವೃದ್ಧಾಶ್ಚ ಪೌರಜಾನಪದೈಃ ಸಹ ।
ಸರ್ವೇ ನಿವಾರಯಾಮಾಸುರ್ದೇವಾಪೇರಭಿಷೇಚನಮ್ ॥೨೩॥

ಆಗ ಬ್ರಾಹ್ಮಣರೂ, ವೃದ್ಧರೂ ಮತ್ತು ಪೌರಜಾನಪದರೆಲ್ಲರೂ ದೇವಾಪಿಗೆ ಅಭಿಷೇಕ ಮಾಡದಂತೆ ಅವನನ್ನು ತಡೆದರು.

ಸ ತಚ್ಛ್ರುತ್ವಾ ತು ನೃಪತಿರಭಿಷೇಕನಿವಾರಣಮ್ ।
ಶಾಸ್ತ್ರಕೃನ್ನೋಽಭವದ್ ರಾಜಾ ಪರ್ಯಶೋಚತ ಚಾತ್ಮಜಮ್ ॥೨೪॥

ಪ್ರಜೆಗಳ ಈ ಅಭಿಷೇಕ ನಿವಾರಣೆಯನ್ನು ಕೇಳಿದ ರಾಜನು ಚರ್ಮದೋಷ ಉಳ್ಳವನಿಗೆ ರಾಜ್ಯದಲ್ಲಿ ಅಭಿಷೇಕ ಮಾಡಬಾರದು ಎಂಬ ಶಾಸ್ತ್ರದೃಷ್ಟಿಯುಳ್ಳವನಾಗಿ ಮಗನನ್ನು ಚಿಂತಿಸಿ ಶೋಕಪಟ್ಟನು.

ಏವಂ ವದಾನ್ಯೋ ಧರ್ಮಜ್ಞಃ ಸತ್ಯಸಂಧಶ್ಚ ಸೋಽಭಿಭೂಃ ।
ಪ್ರಿಯಃ ಪ್ರಜಾನಾಮಪಿ ಸನ್ ತ್ವಗ್‌ದೋಷೇಣ ಪ್ರದೂಷಿತಃ ॥೨೫॥

ಹೀಗೆ ಉದಾರಿಯೂ, ಧರ್ಮಜ್ಞನೂ, ಸತ್ಯಸಂಧನೂ, ಶತ್ರುಗಳನ್ನು ಸೋಲಿಸುವವನೂ, ಪ್ರಜೆಗಳಿಗೂ ಪ್ರಿಯನಾದವನೂ ಆದರೂ ತ್ವಗ್‌ದೋಷದಿಂದ ಅವನು ದೂಷಿತನಾದನು.

ಹೀನಾಂಗಂ ಪೃಥಿವೀಪಾಲಂ ನಾಭಿನಂದಂತಿ ದೇವತಾಃ ।
ಇತಿ ಕೃತ್ವಾ ನೃಪಶ್ರೇಷ್ಠ ಪ್ರತ್ಯಷೇಧನ್ ದ್ವಿಜರ್ಷಭಾಃ ॥೨೬॥

ಎಲೈ ನೃಪಶ್ರೇಷ್ಠನೇ, ಹೀನಾಂಗನಾದ ರಾಜನನ್ನು ದೇವತೆಗಳು ಅಭಿನಂದಿಸುವುದಿಲ್ಲ ಎಂದು ತಿಳಿದು ಬ್ರಾಹ್ಮಣಶ್ರೇಷ್ಠರು ಪ್ರತಿಷೇಧ ಮಾಡಿದರು.

ತತಃ ಪ್ರವ್ಯಥಿತಾಂಗೋಽಸೌ ಪುತ್ರಶೋಕಸಮನ್ವಿತಃ ।
ಮಮಾರ ತಂ ಮೃತಂ ದೃಷ್ಟ್ವಾ ದೇವಾಪಿಃ ಸಂಶ್ರಿತೋ ವನಮ್ ॥೨೭॥

ಅನಂತರ ಪುತ್ರಶೋಕ ಸಮನ್ವಿತನಾಗಿ ಪ್ರತೀಪನು ದೇಹಶೈಥಿಲ್ಯವನ್ನು ಹೊಂದಿ ಮರಣಹೊಂದಿದನು. ಮೃತನಾದ ತನ್ನ ತಂದೆಯನ್ನು ನೋಡಿ ದೇವಾಪಿಯು ಕಾಡಿಗೆ ಹೋದನು.

ಬಾಹ್ಲೀಕೋ ಮಾತುಲಕುಲೇ ತ್ಯಕ್ತ್ವಾ ರಾಜ್ಯಂ ಸಮಾಶ್ರಿತಃ ।
ಪಿತೄನ್ ಭ್ರಾತೄನ್ ಪರಿತ್ಯಜ್ಯ ಪ್ರಾಪ್ತವಾನ್ ಪರಮಧರ್ಮವಿತ್ ॥೨೮॥

ಪರಮಧರ್ಮಜ್ಞನಾದ ಬಾಹ್ಲೀಕನು ತಂದೆಯನ್ನೂ, ಸಹೋದರರನ್ನೂ ಬಿಟ್ಟು ತನ್ನ ಸೋದರಮಾವನ ಮನೆಯಲ್ಲಿ ನಿವಾಸ ಮಾಡುತ್ತಾ ಅವನ ರಾಜ್ಯವನ್ನು ಪಡೆದನು.

ಬಾಹ್ಲೀಕೇನ ತ್ವನುಜ್ಞಾತಃ ಶಂತನುರ್ಲೋಕವಿಶ್ರುತಃ ।
ಪಿತರ್ಯುಪರತೇ ರಾಜನ್ ರಾಜಾ ರಾಜ್ಯಮಕಾರಯತ್ ॥೨೯॥

ಎಲೈ ರಾಜನೇ, ತಂದೆಯು ಮರಣ ಹೊಂದಿದ ಮೇಲೆ ಲೋಕವಿಖ್ಯಾತನಾದ ಶಂತನುವು ಅಣ್ಣನಾದ ಬಾಹ್ಲೀಕನ ಅನುಮತಿಯನ್ನು ಪಡೆದು ರಾಜನಾಗಿ ರಾಜ್ಯಭಾರವನ್ನು ಮಾಡಿದನು.

ತಥೈವಾಹಂ ಮತಿಮತಾ ಪರಿಚಿಂತ್ಯೇಹ ಪಾಂಡುನಾ ।
ಜ್ಯೇಷ್ಠಃ ಪ್ರಭ್ರಂಶಿತೋ ರಾಜ್ಯಾದ್ಧೀನಾಂಗ ಇತಿ ಭಾರತ ॥೩೦॥

ಪಾಂಡುಸ್ತು ರಾಜ್ಯಂ ಸಂಪ್ರಾಪ್ತಃ ಕನೀಯಾನಪಿ ಸನ್ ನೃಪಃ ॥೩೧॥

ಎಲೈ ಭಾರತನೇ, ಹಾಗೆಯೇ ಮೇಧಾವಿಯಾದ ಪಾಂಡುವು ಇದನ್ನು ಚಿಂತಿಸಿ ನಾನು ಹೀನಾಂಗನಾಗಿರುವುದರಿಂದ ಜ್ಯೇಷ್ಠನಾದರೂ ರಾಜ್ಯಾಧಿಕಾರವಿಲ್ಲದವನು ಎಂದು ತಿಳಿದನು. ಅವನು ನನಗಿಂತ ಚಿಕ್ಕವನಾದರೂ ಪಾಂಡುವು ರಾಜ್ಯವನ್ನು ಪಡೆದನು.

ವಿನಾಶೇ ತಸ್ಯ ಪುತ್ರಾಣಾಮಿದಂ ರಾಜ್ಯಮರಿಂದಮ ।
ಮಯ್ಯಭಾಗಿನಿ ರಾಜ್ಯಾಯ ಕಥಂ ತ್ವಂ ರಾಜ್ಯಮಿಚ್ಛಸಿ ॥೩೨॥

ಅರಾಜಪುತ್ರೋ ಹ್ಯಸ್ವಾಮೀ ಪರಸ್ವಂ ಹರ್ತುಮಿಚ್ಛಸಿ ॥೩೩॥

ಎಲೈ ಅರಿಂದಮನೇ, ನಾನೇ ರಾಜ್ಯಕ್ಕೆ ಭಾಗಿಯಲ್ಲದಿರುವಾಗ ಪಾಂಡುವು ವಿನಾಶವನ್ನು ಹೊಂದಿದರೆ ಈ ರಾಜ್ಯವು ಅವನ ಪುತ್ರರಿಗೆ ಸೇರಿದುದು. ರಾಜಪುತ್ರನಲ್ಲದ, ಸ್ವಾಮಿಯಲ್ಲದ ನೀನು ಹೇಗೆ ರಾಜ್ಯವನ್ನು ಬಯಸುತ್ತೀಯೆ? ನೀನು ಇನ್ನೊಬ್ಬರ ಸ್ವತ್ತನ್ನು ಅಪಹರಿಸಲು ಬಯಸುತ್ತಿದ್ದೀಯೆ ಅಷ್ಟೆ!

ಯುಧಿಷ್ಠಿರೋ ರಾಜಪುತ್ರೋ ಮಹಾತ್ಮಾ
ನ್ಯಾಯಾಗತಂ ರಾಜ್ಯಮಿದಂ ಚ ತಸ್ಯ ।
ಸ ಕೌರವಸ್ಯಾಸ್ಯ ಕುಲಸ್ಯ ಭರ್ತಾ
ಪ್ರಶಾಸಿತಾ ಚೈವ ಮಹಾನುಭಾವಃ ॥೩೪॥

ಮಹಾತ್ಮನಾದ ಯುಧಿಷ್ಠಿರನು ರಾಜಪುತ್ರ. ನ್ಯಾಯದಿಂದ ಪ್ರಾಪ್ತವಾದ ಈ ರಾಜ್ಯವು ಅವನಿಗೇ ಸೇರಿದುದು. ಮಹಾನುಭಾವನಾದ ಅವನು ಈ ಕೌರವ ಕುಲದ ಪೋಷಣೆಯನ್ನು ಮಾಡಿ ರಾಜ್ಯವನ್ನು ಆಳುವನು.

ಸ ಸತ್ಯಸಂಧಃ ಸತತಾಪ್ರಮತ್ತಃ
ಶಾಸ್ತ್ರೇ ಸ್ಥಿತೋ ಬಂಧುಜನಸ್ಯ ಸಾಧುಃ ।
ಪ್ರಿಯಃ ಪ್ರಜಾನಾಂ ಸುಕೃತಾನುಕಂಪೀ
ಜಿತೇಂದ್ರಿಯಃ ಸಾಧುಜನಸ್ಯ ಭರ್ತಾ ॥೩೫॥

ಅವನು ಸತ್ಯಸಂಧ, ಯಾವಾಗಲೂ ಎಚ್ಚರಿಕೆಯಿಂದ ಇರುವವನು, ಶಾಸ್ತ್ರದಲ್ಲಿಯೇ ಇರುವವನು, ಬಂಧುಜನರ ವಿಷಯದಲ್ಲಿ ಸಾಧುವಾಗಿರುವವನು, ಪ್ರಜೆಗಳಿಗೆ ಪ್ರಿಯನಾದವನು, ಒಳ್ಳೆಯ ಕಾರ್ಯ ಮಾಡಿದವರ ಮೇಲೆ ಅನುಕಂಪ ಉಳ್ಳವನು, ಜಿತೇಂದ್ರಿಯನಾದವನು ಮತ್ತು ಸಜ್ಜನರನ್ನು ಪೋಷಿಸುವವನು.

ಕ್ಷಮಾ ತಿತಿಕ್ಷಾ ದಮ ಆರ್ಜವಂ ಚ
ಸತ್ಯವ್ರತತ್ವಂ ಶ್ರುತಮಪ್ರಮಾದಃ ।
ಭೂತಾನುಕಂಪಾ ಹ್ಯನುಶಾಸನಂ ಚ
ಯುಧಿಷ್ಠಿರೇ ರಾಜಗುಣಾಃ ಸಮಸ್ತಾಃ ॥೩೬॥

ಯುಧಿಷ್ಠಿರನಲ್ಲಿ ಕ್ಷಮೆ, ಸಹನೆ, ದಮ, ಆರ್ಜವ, ಸತ್ಯವ್ರತ, ವಿದ್ಯೆ, ಜಾಗರೂಕತೆ, ಪ್ರಾಣಿದಯೆ, ವಿಧೇಯತೆ ಮೊದಲಾದ ಎಲ್ಲ ರಾಜಗುಣಗಳೂ ಇವೆ.

ಸ ರಾಜಪುತ್ರಸ್ತ್ವಮನಾರ್ಯವೃತ್ತೋ
ಲುಬ್ಧಃ ಸದಾ ಬಂಧುಷು ಪಾಪಬುದ್ಧಿಃ ।
ಕ್ರಮಾಗತಂ ರಾಜ್ಯಮಿದಂ ಪರೇಷಾಂ
ಹರ್ತುಂ ಕಥಂ ಶಕ್ಷ್ಯಸಿ ದುರ್ವಿನೀತ ॥೩೭॥

ಅವನು ರಾಜಪುತ್ರ, ನೀನು ಅನಾರ್ಯ ನಡವಳಿಕೆಯುಳ್ಳ ಲೋಭಿ, ಬಂಧುಗಳಿಗೆ ಸದಾ ಪಾಪವನ್ನು ಎಣಿಸುವವನು. ಎಲೈ ದುರ್ವಿನೀತನೇ, ಅವರಿಗೆ ನ್ಯಾಯಪ್ರಾಪ್ತವಾದ ಈ ರಾಜ್ಯವನ್ನು ನೀನು ಹೇಗೆ ಅಪಹರಿಸಲು ಶಕ್ತನಾಗುತ್ತೀಯೆ?

ಪ್ರಯಚ್ಛ ರಾಜ್ಯಾರ್ಧಮಪೇತಮೋಹಃ
ಸವಾಹನಂ ತ್ವಂ ಸಪರಿಚ್ಛದಂ ಚ ।
ತತೋಽವಶೇಷಂ ತವ ಜೀವಿತಸ್ಯ
ಸಹಾನುಜಸ್ಯೈವ ಭವೇನ್ನರೇಂದ್ರ ॥೩೮॥

ಯಾವ ಮೋಹವನ್ನು ಹೊಂದದೆ ವಾಹನ ಮತ್ತು ಸಲಕರಣೆಗಳಿಂದ ಸಹಿತವಾದ ಅರ್ಧರಾಜ್ಯವನ್ನು ಪಾಂಡವರಿಗೆ ಕೊಡು. ಎಲೈ ನರೇಂದ್ರನೇ, ಉಳಿದ ಭಾಗವು ನಿನ್ನ ಮತ್ತು ನಿನ್ನ ತಮ್ಮಂದಿರ ಜೀವನಕ್ಕೆ ಸಾಕಾಗುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಅಷ್ಟಚತ್ವಾರಿಂಶೋತ್ತರಶತತಮೋಽಧ್ಯಾಯಃ ॥

॥ ವಿವಾದಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ನಲವತ್ತೊಂಬತ್ತನೆಯ ಅಧ್ಯಾಯ

ಕೃಷ್ಣನಿಂದ ಸಭಾವೃತ್ತಾಂತ ಕಥನದ ಉಪಸಂಹಾರ.

ವಾಸುದೇವಃ

ಏವಮುಕ್ತೇ ತು ಭೀಷ್ಮೇಣ ದ್ರೋಣೇನ ವಿದುರೇಣ ಚ ।
ಗಾಂಧಾರ್ಯಾ ಧೃತರಾಷ್ಟ್ರೇಣ ನ ವೈ ಮಂದೋಽನ್ವಬುಧ್ಯತ ॥೧॥

ಅವಧೂಯೋತ್ಥಿತೋ ಮಂದಃ ಕ್ರೋಧಸಂರಕ್ತಲೋಚನಃ ॥೨॥

ಅನ್ವದ್ರವಂತ ತಂ ಪಶ್ಚಾದ್ ರಾಜಾನಸ್ಯಕ್ತಜೀವಿತಾಃ ॥೩॥

ವಾಸುದೇವ– ಭೀಷ್ಮರು, ದ್ರೋಣರು, ವಿದುರನು, ಗಾಂಧಾರಿಯು ಮತ್ತು ಧೃತರಾಷ್ಟ್ರನು ಹೀಗೆ ಹೇಳಿದರೂ ಮಂದನಾದ ದುರ್ಯೋಧನನು ಯಾವುದನ್ನೂ ತಿಳಿಯಲಿಲ್ಲ (ಸ್ವೀಕರಿಸಲಿಲ್ಲ). ಅವನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ

ಎಲ್ಲರನ್ನೂ ತಿರಸ್ಕರಿಸಿ ಎದ್ದನು. ಜೀವನವನ್ನು ತೊರೆಯಲು ಸಿದ್ಧರಾದ ರಾಜರು ಅವನನ್ನು ಹಿಂಬಾಲಿಸಿದರು.

ಆಜ್ಞಾಪಯಚ್ಚ ರಾಜ್ಞಸ್ತಾನ್ ಪಾರ್ಥಿವಾನ್ ನಷ್ಟಚೇತನಃ ।
ಪ್ರಯಾಂತು ವೈ ಕುರುಕ್ಷೇತ್ರಮದ್ಯೈವೇತಿ ಪುನಃ ಪುನಃ ॥೪॥

ನಷ್ಟಚೇತನನಾದ ಅವನು ಆ ರಾಜರನ್ನುಕುರಿತು ಈ ದಿನವೇ ಕುರುಕ್ಷೇತ್ರಕ್ಕೆ ಹೊರಡಿ ಎಂದು ಪುನಃ ಪುನಃ ಆಜ್ಞಾಪಿಸಿದನು.

ಅಕ್ಷೌಹಿಣ್ಯೋ ದಶೈಕಾ ಚ ಪಾರ್ಥಿವಾನಾಂ ಸಮಾಗತಾಃ ।
ತಾಸಾಂ ಪ್ರಮುಖತೋ ಭೀಷ್ಮಸ್ತಾಳಕೇತುರ್ವ್ಯರೋಚತ ॥೫॥

ಯದತ್ರ ಯುಕ್ತಂ ಪ್ರಾಪ್ತಂ ಚ ತದ್ ವಿಧತ್ಸ್ವ ವಿಶಾಂಪತೇ ॥೬॥

ಅಲ್ಲಿಗೆ ಪ್ರಾಪ್ತರಾದ ಹನ್ನೊಂದು ಅಕ್ಷೌಹಿಣಿ ರಾಜಸೈನ್ಯದ ಮುಂಭಾಗದಲ್ಲಿ ತಾಳಕೇತುವಾದ ಭೀಷ್ಮರು ಶೋಭಿಸಿದರು. ಎಲೈ ರಾಜನಾದ ಯುಧಿಷ್ಠಿರನೇ, ಈ ಸಮಯದಲ್ಲಿ ಯಾವುದನ್ನು ಮಾಡಲು ಯೋಗ್ಯವಾಗಿದೆಯೋ ಅದನ್ನು ಮಾಡುವವನಾಗು.

ಉಕ್ತಂ ಭೀಷ್ಮೇಣ ಯದ್‌ವಾಕ್ಯಂ ದ್ರೋಣೇನ ವಿದುರೇಣ ಚ ।
ಗಾಂಧಾರ್ಯಾ ಧೃತರಾಷ್ಟ್ರೇಣ ಸಮಕ್ಷಂ ಮಮ ಭಾರತ ॥೭॥

ಏತತ್ ತೇ ಕಥಿತಂ ರಾಜನ್ ಯದ್‌ವೃತ್ತಂ ಕುರುಸಂಸದಿ ॥೮॥

ಎಲೈ ಭಾರತನೇ, ಎಲೈ ರಾಜನೇ, ಭೀಷ್ಮರೂ, ದ್ರೋಣರೂ, ವಿದುರನೂ, ಗಾಂಧಾರಿಯೂ ಮತ್ತು ಧೃತರಾಷ್ಟ್ರನೂ ಸಭೆಯಲ್ಲಿ ನನ್ನ ಎದುರಿಗೆ ಏನು ಹೇಳಿದರೋ ಮತ್ತು ಕೌರವರ ಸಭೆಯಲ್ಲಿ ಯಾವ ವೃತ್ತಾಂತವು ಜರುಗಿತೋ ಅದನ್ನು ನಿನಗೆ ಹೇಳಿದ್ದೇನೆ.

ಸಾಮ ಚಾದೌ ಪ್ರಯುಕ್ತಂ ಮೇ ರಾಜನ್ ಸೌಭ್ರಾತ್ರಮಿಚ್ಛತಾ ।
ಅಭೇದಾತ್ ಕುರುವಂಶಸ್ಯ ಪ್ರಜಾನಾಂ ಚ ವಿವೃದ್ಧಯೇ ॥೯॥

ಎಲೈ ರಾಜನೇ, ನಾನು ಸಹೋದರರ ಒಳ್ಳೆಯ ಸ್ನೇಹವನ್ನು ಬಯಸಿ, ಕುರುವಂಶವು ಒಡೆಯದಿರಲಿ ಎಂದು ಉದ್ದೇಶಿಸಿ, ಪ್ರಜೆಗಳ ಅಭಿವೃದ್ಧಿಗಾಗಿ ನಾನು ಮೊದಲು ಸಾಮೋಪಾಯವನ್ನೇ ಪ್ರಯೋಗಿಸಿದೆ.

ಪುನರ್ಭೇದಶ್ಚ ಮೇ ಯುಕ್ತೋ ಯದಾ ಸಾಮ ನ ಗೃಹ್ಯತೇ ।
ಕರ್ಮಾನುಕೀರ್ತನಂ ಚೈವ ದೇವಮಾನುಷಸಂಹಿತಮ್ ॥೧೦॥

ಅವನು ಸಾಮವನ್ನು ಸ್ವೀಕರಿಸದಿದ್ದಾಗ ದೇವ-ಮಾನುಷಯೋಗ್ಯವಾದ ಕರ್ಮಗಳನ್ನು ಹೇಳಿ ಭೇದೋಪಾಯವನ್ನು ಪ್ರಯೋಗಿಸಿದೆ.

ಯದಾ ನಾದ್ರಿಯತೇ ವಾಕ್ಯಂ ಸಾಮಪೂರ್ವಂ ಸುಯೋಧನಃ ।
ತದಾ ಮಯಾ ಸಮಾನೀಯ ಭೇದಿತಾಃ ಸರ್ವಪಾರ್ಥಿವಾಃ ॥೧೧॥

ಸುಯೋಧನನು ನನ್ನ ಸಾಮಪೂರ್ವಕವಾದ ವಾಕ್ಯಗಳನ್ನು ಸ್ವೀಕರಿಸದಿದ್ದಾಗ, ಎಲ್ಲಾ ರಾಜರುಗಳನ್ನೂ ಒಟ್ಟುಗೂಡಿಸಿ ಭೇದೋಪಾಯವನ್ನು ಮಾಡಿದೆ.

ಅದ್ಭುತಾನಿ ಚ ಘೋರಾಣಿ ದಾರುಣಾನಿ ಚ ಭಾರತ ।
ಅಮಾನುಷಾಣಿ ಕರ್ಮಾಣಿ ದರ್ಶಿತಾನಿ ಮಯಾ ವಿಭೋ ॥೧೨॥

ಎಲೈ ಭಾರತನೇ, ಎಲೈ ವಿಭುವೇ, (ಅರ್ಜುನನು ಮಾಡಿದ) ಅದ್ಭುತವಾದ, ಘೋರವಾದ ಮತ್ತು ಭಯಂಕರವಾದ ಅಮಾನುಷ ಕರ್ಮಗಳನ್ನು ನಾನು ತಿಳಿಸಿದೆ.

ನಿರ್ಭರ್ತ್ಸಯಿತ್ವಾ ರಾಜ್ಞಸ್ತಾನ್ ತೃಣೀಕೃತ್ಯ ಸುಯೋಧನಮ್ ।
ರಾಧೇಯಂ ಭೀಷಯಿತ್ವಾ ಚ ಸೌಬಲಂ ಚ ಪುನಃ ಪುನಃ ॥೧೩॥

ನ್ಯೂನತಾಂ ಧಾರ್ತರಾಷ್ಟ್ರಾಣಾಂ ನಿಂದಾಂ ಕೃತ್ವಾ ಪುನಃ ಪುನಃ ।
ಭೇದಯಿತ್ವಾ ನೃಪಾನ್ ಸರ್ವಾನ್ ವಾಗ್ಭಿರ್ಮಂತ್ರೇಣ ಚಾಸಕೃತ್ ॥೧೪॥

ಪುನಃ ಸಾಮಾಭಿಸಂಯುಕ್ತಂ ಸಂಪ್ರದಾನಮಥಾಬ್ರುವಮ್ ।
ಅಭೇದಾತ್ ಕುರುವಂಶಸ್ಯ ಕಾರ್ಯಯೋಗಾತ್ ತಥೈವ ಚ ॥೧೫॥

ಆ ರಾಜರನ್ನೆಲ್ಲಾ ಗದರಿಸಿ, ದುರ್ಯೋಧನನನ್ನು ತೃಣದಂತೆ ತಾತ್ಸಾರ ಮಾಡಿ, ಕರ್ಣನನ್ನೂ ಮತ್ತು ಶಕುನಿಯನ್ನೂ ಪುನಃ ಪುನಃ ಹೆದರಿಸಿ, ದುರ್ಯೋಧನಾದಿಗಳ

ನ್ಯೂನತೆಯನ್ನು ಹೇಳಿ, ಪುನಃ ಪುನಃ ನಿಂದಿಸಿ, ಮಾತುಗಳಿಂದಲೂ ಮತ್ತು ಮಂತ್ರಾಲೋಚನೆಗಳಿಂದಲೂ ಎಲ್ಲ ರಾಜರನ್ನೂ ಭೇದಿಸಿ, ಪುನಃ ಕುರುವಂಶವು ಒಂದಾಗಿರಲಿ ಎಂಬ ಉದ್ದೇಶದಿಂದಲೂ, ಈಗ ಅವಶ್ಯಕವಾಗಿ ಮಾಡಬೇಕಾದ ಕಾರ್ಯ ಎಂಬ ದೃಷ್ಟಿಯಿಂದಲೂ ನಾನು ಪುನಃ ಸಾಮೋಪಾಯ ಯುಕ್ತವಾದ ಮಾತುಗಳಿಂದ ರಾಜ್ಯವನ್ನು ಕೊಡುವ ವಿಷಯವನ್ನು ಮಾತನಾಡಿದೆನು.

ತೇ ಶೂರಾ ಧೃತರಾಷ್ಟ್ರಸ್ಯ ಭೀಷ್ಮಸ್ಯ ವಿದುರಸ್ಯ ಚ ।
ತಿಷ್ಠೇಯುಃ ಪಾಂಡವಾಃ ಸರ್ವೇ ಹಿತ್ವಾ ಮಾನಮಥಶ್ಚರಾಃ ॥೧೬॥

ಪ್ರಯಚ್ಛಂತು ಚ ತೇ ರಾಜ್ಯಮನೀಶಾಸ್ತೇ ಭವಂತು ಚ ।
ಯಥಾऽऽಹ ರಾಜಾ ಗಾಂಗೇಯೋ ವಿದುರಶ್ಚ ತಥಾऽऽಸ್ತು ತೇ ॥೧೭॥

ಆ ಶೂರರಾದ ಪಾಂಡವರು ಅಹಂಕಾರವನ್ನು ತೊರೆದು ಧೃತರಾಷ್ಟ್ರನಿಗೆ, ಭೀಷ್ಮರಿಗೆ ಮತ್ತು ವಿದುರರಿಗೆ ಭೃತ್ಯರಾಗಿ ಇರುತ್ತಾರೆ. ಅವರಿಗೆ ರಾಜ್ಯವನ್ನು ಕೊಡು. ಭೀಷ್ಮ, ವಿದುರ ಮತ್ತು ಧೃತರಾಷ್ಟ್ರರಾಜನು ಹೇಳಿದಂತೆಯೇ ಆಗಲಿ.

ಸರ್ವಂ ಭವತು ತೇ ರಾಜ್ಯಂ ಪಂಚ ಗ್ರಾಮಾನ್ ವಿಸರ್ಜಯ ।
ಅವಶ್ಯಂ ಭರಣೀಯಾ ಹಿ ಪಿತುಸ್ತೇ ರಾಜಸತ್ತಮ ॥೧೮॥

ಎಲ್ಲ ರಾಜ್ಯವೂ ನಿನಗೆ ಇರಲಿ. ಐದುಗ್ರಾಮಗಳನ್ನು ಮಾತ್ರ ಅವರಿಗೆ ಕೊಡು. ಎಲೈ ರಾಜಶ್ರೇಷ್ಠನೇ, ನಿನ್ನ ತಂದೆಯು ಅವರನ್ನು ಪೋಷಿಸಬೇಕಷ್ಟೆ!

ಏವಮುಕ್ತೋऽಪಿ ದುಷ್ಟಾತ್ಮಾ ನೈವ ಭಾಗಂ ವ್ಯಮುಂಚತ ।
ದಂಡಂ ಚತುರ್ಥಂ ಪಶ್ಯಾಮಿ ತೇಷು ಪಾಪೇಷು ನಾನ್ಯಥಾ ॥೧೯॥

ನಾನು ಹೀಗೆ ಹೇಳಿದರೂ ಆ ದುಷ್ಟಾತ್ಮನು ಯಾವ ಭಾಗವನ್ನೂ ಬಿಟ್ಟುಕೊಡಲಿಲ್ಲ. ಆ ಪಾಪಿಗಳ ವಿಷಯದಲ್ಲಿ ನಾಲ್ಕನೆಯ ಉಪಾಯವಾದ ದಂಡವನ್ನೇ ಪ್ರಯೋಗಿಸಬೇಕೆಂದು ಭಾವಿಸುತ್ತೇನೆ. ಬೇರೆಯ ಮಾರ್ಗವಿಲ್ಲ.

ನಿರ್ಯಾತಾಶ್ಚ ವಿನಾಶಾಯ ಕುರುಕ್ಷೇತ್ರಂ ನರಾಧಿಪಾಃ ।
ಏತತ್ ತೇ ಕಥಿತಂ ರಾಜನ್ ಯದ್‌ವೃತ್ತಂ ಕುರುಸಂಸದಿ ॥೨೦॥

ಎಲ್ಲ ರಾಜರೂ ತಮ್ಮ ವಿನಾಶಕ್ಕಾಗಿ ಕುರುಕ್ಷೇತ್ರಕ್ಕೆ ಹೋಗಿದ್ದಾರೆ. ಎಲೈ ರಾಜನೇ, ಕೌರವರ ಸಭೆಯಲ್ಲಿ ನಡೆದ ಈ ವೃತ್ತಾಂತವನ್ನು ನಿನಗೆ ತಿಳಿಸಿದ್ದೇನೆ.

ನ ತೇ ರಾಜ್ಯಂ ಪ್ರಯಚ್ಛಂತಿ ವಿನಾ ಯುದ್ಧೇನ ಪಾಂಡವ ।
ವಿನಾಶಹೇತವಃ ಸರ್ವೇ ಪ್ರತ್ಯುಪಸ್ಥಿತಮೃತ್ಯವಃ ॥೨೧॥

ಎಲೈ ಪಾಂಡವನೇ, ಅವರು ಯುದ್ಧವಿಲ್ಲದೆ ರಾಜ್ಯವನ್ನು ಕೊಡುವುದಿಲ್ಲ. ಎಲ್ಲ ವಿನಾಶದ ಸೂಚನೆಗಳು ಸಮೀಪದಲ್ಲಿರುವ ಮೃತ್ಯುವನ್ನು ಸೂಚಿಸುತ್ತವೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಪಂಚಾಶೋತ್ತರಶತತಮೋऽಧ್ಯಾಯಃ ॥

॥ ವಿವಾದಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ವಿವಾದ ಪರ್ವ ॥

★ ★ ★ ★ ★

೮. ಸೈನ್ಯನಿರ್ಯಾಣಪರ್ವ

ನೂರ ಐವತ್ತನೆಯ ಅಧ್ಯಾಯ

ಕೃಷ್ಣವಚನದಂತೆ ಧೃಷ್ಟದ್ಯುಮ್ನನನ್ನು ಪಾಂಡವರ ಸೇನಾಪತಿಯಾಗಿ ನಿರ್ಧರಿಸಿ, ಕುರುಕ್ಷೇತ್ರದಲ್ಲಿ ಸೇನಾನಿವೇಶ.

ವೈಶಂಪಾಯನಃ

ಜನಾರ್ದನವಚಃ ಶ್ರುತ್ವಾ ಕುಂತೀಪುತ್ರೋ ಯುಧಿಷ್ಠಿರಃ ।
ಭ್ರಾತೄನುವಾಚ ಧರ್ಮಾತ್ಮಾ ಸಮಕ್ಷಂ ಕೇಶವಸ್ಯ ಹ ॥೧॥

ವೈಶಂಪಾಯನ– ಕೃಷ್ಣನ ಮಾತುಗಳನ್ನು ಕೇಳಿ ಕುಂತೀಪುತ್ರನೂ, ಧರ್ಮಾತ್ಮನೂ ಆದ ಯುಧಿಷ್ಠಿರನು ಕೇಶವನ ಎದುರಿನಲ್ಲಿ ತಮ್ಮಂದಿರನ್ನು ಕುರಿತು ಹೇಳಿದನು.

ಶ್ರುತಂ ಭವದ್ಭಿರ್ಯದ್‌ವೃತ್ತಂ ಸಭಾಯಾಂ ಕುರುಸಂಸದಿ ।
ಕೇಶವಸ್ಯಾಪಿ ಯದ್‌ವಾಕ್ಯಂ ತತ್ ಸರ್ವಮವಧಾರಿತಮ್ ॥೨॥

ತಸ್ಮಾತ್ ಸೇನಾವಿಭಾಗಂ ಮೇ ಕುರುಧ್ವಂ ನರಸತ್ತಮಾಃ ॥೩॥

ಕೌರವರ ಸಭೆಯಲ್ಲಿ ನಡೆದ ವೃತ್ತಾಂತವನ್ನು ನೀವು ಕೇಳಿದ್ದೀರಿ. ಕೃಷ್ಣನು ಸಭೆಯಲ್ಲಿ ಆಡಿದ ಮಾತುಗಳನ್ನೂ ತಿಳಿದಿದ್ದೀರಿ. ಆದ್ದರಿಂದ ನರಶ್ರೇಷ್ಠರಾದ ನೀವು ನಮ್ಮ ಸೈನ್ಯದ ವಿಭಾಗವನ್ನು ಮಾಡಿ.

ಅಕ್ಷೌಹಿಣ್ಯಶ್ಚ ಸಪ್ತೈತಾಃ ಸಮೇತಾ ವಿಜಯಾಯ ವೈ ।
ತಾಸಾಂ ಯೇ ಪತಯಃ ಸಪ್ತ ವಿಖ್ಯಾತಾಸ್ತಾನ್ ನಿಬೋಧತ ॥೪॥

ನಮ್ಮ ವಿಜಯಕ್ಕಾಗಿ ಏಳು ಅಕ್ಷೌಹಿಣಿ ಸೈನ್ಯವು ಒಂದುಗೂಡಿದೆ. ಆ ಸೈನ್ಯಗಳಿಗೆ ಪ್ರಖ್ಯಾತರಾದ ಏಳು ನಾಯಕರನ್ನು ತಿಳಿಯಿರಿ.

ದ್ರುಪದಶ್ಚ ವಿರಾಟಶ್ಚ ಧೃಷ್ಟದ್ಯುಮ್ನಶಿಖಂಡಿನೌ ।
ಸಾತ್ಯಕಿಶ್ಚೇಕಿತಾನಶ್ಚ ಭೀಮಸೇನಶ್ಚ ವೀರ್ಯವಾನ್ ॥೫॥

ಏತೇ ಸೇನಾಪ್ರಣೇತಾರೋ ವೀರಾಃ ಸರ್ವೇ ತನುತ್ಯಜಃ ॥೬॥

ದ್ರುಪದ, ವಿರಾಟ, ಧೃಷ್ಟದ್ಯುಮ್ನ, ಶಿಖಂಡಿ, ಸಾತ್ಯಕಿ, ಚೇಕಿತಾನ, ಪರಾಕ್ರಮಶಾಲಿಯಾದ ಭೀಮಸೇನ, ಇವರೆಲ್ಲರೂ ಪ್ರಾಣವನ್ನು ತ್ಯಾಗ ಮಾಡಲು ಸಿದ್ಧರಿರುವ ಸೇನಾನಾಯಕರು.

ಸರ್ವೇ ವೇದವಿದಃ ಶೂರಾಃ ಸರ್ವೇ ಸುಚರಿತವ್ರತಾಃ ।
ಹ್ರೀಮಂತೋ ನೀತಿಮಂತಶ್ಚ ಸರ್ವೇ ಯುದ್ಧವಿಶಾರದಾಃ ॥೭॥

ಇಷ್ವಸ್ತ್ರಕುಶಲಾಶ್ಚೈವ ತಥಾ ಸರ್ವಾಸ್ತ್ರಯೋಧಿನಃ ॥೮॥

ಎಲ್ಲರೂ ವೇದಜ್ಞರು, ಶೂರರು, ವ್ರತಗಳನ್ನು ಆಚರಿಸಿದವರು, ನಾಚಿಕೆ ಉಳ್ಳವರು, ನೀತಿವಂತರು, ಯುದ್ಧವಿಶಾರದರು, ಶಸ್ತ್ರಗಳಲ್ಲಿಯೂ ಮತ್ತು ಅರ್ಥಗಳಲ್ಲಿಯೂ ಕುಶಲರಾದವರು ಮತ್ತು ಸರ್ವಾಸ್ತ್ರಗಳಿಂದ ಯುದ್ಧವನ್ನು ಮಾಡುವವರು.

ಸಪ್ತಾನಾಮಪಿ ಯೋ ನೇತಾ ಸೇನಾನಾಂ ಪ್ರವಿಭಾಗವಿತ್ ।
ಯಃ ಸಹೇತ ರಣೇ ಭೀಷ್ಮಂ ಶರಾರ್ಚಿಃ ಪಾವಕೋಪಮಮ್ ॥೯॥

ತಂ ತಾವತ್ ಸಹದೇವಾತ್ರ ಪ್ರಬ್ರೂಹಿ ಕುರುನಂದನ ।
ಸ್ವಮತಂ ಪುರುಷವ್ಯಾಘ್ರ ಕೋ ನಃ ಸೇನಾಪತಿಃ ಕ್ಷಮಃ ॥೧೦॥

ಎಲೈ ಕುರುನಂದನನಾದ ಸಹದೇವನೇ, ಈ ಏಳು ನಾಯಕರಿಗೂ ಯಾವನು ನಾಯಕನಾಗಿರುತ್ತಾನೆಯೋ, ಯಾವನು ಸೈನ್ಯದ ವಿಭಾಗವನ್ನು ತಿಳಿದಿರುತ್ತಾನೆಯೋ,

ಯಾವನು ಬಾಣಗಳೆಂಬ ಕಿಡಿಗಳನ್ನು ಉಗುಳುವ ಅಗ್ನಿಯಂತಿರುವ ಭೀಷ್ಮರನ್ನು ಯುದ್ಧದಲ್ಲಿ ಎದುರಿಸಿ ಸಹಿಸುತ್ತಾನೆಯೋ ಅಂತಹವನು ಯಾರೆಂದು ನಿನ್ನ ಅಭಿಪ್ರಾಯವನ್ನು ಹೇಳು. ಎಲೈ ಪುರುಷವ್ಯಾಘ್ರನೇ, ಯಾವನು ನಮಗೆ ಸೇನಾಪತಿಯಾಗಲು ಅರ್ಹನಾಗುತ್ತಾನೆ?

ಸಹದೇವಃ

ಸಂಯುಕ್ತ ಏವ ಪುತ್ರೈಶ್ಚ ಕೋಶವಾಂಶ್ಚ ಮಹೀಪತಿಃ ॥೧೧॥

ಯಂ ಸಮಾಶ್ರಿತ್ಯ ಧರ್ಮಜ್ಞಂ ಸ್ವಮಂಶಮನುಯುಂಜ್ಮಹೇ ।
ಮಾತ್ಸ್ಯೋ ವಿರಾಟೋ ಬಲವಾನ್ ಕೃತಾಸ್ತ್ರೀ ಯುದ್ಧದುರ್ಮದಃ ॥೧೨॥

ಪ್ರಸಹಿಷ್ಯತಿ ಸಂಗ್ರಾಮೇ ಭೀಷ್ಮಂ ತಾಂಶ್ಚ ಮಹಾರಥಾನ್ ॥೧೩॥

ಸಹದೇವ– ಪುತ್ರರಿಂದಲೂ, ಕೋಶಗಳಿಂದಲೂ ಕೂಡಿದ ರಾಜನಾದ ಯಾವ ಧರ್ಮಜ್ಞನಾದ ಅವನನ್ನು ಆಶ್ರಯಿಸಿ, ನಾವು ನಮ್ಮ ರಾಜ್ಯಾಂಶವನ್ನು ಪಡೆಯುತ್ತಿದ್ದೇವೆಯೋ ಅಂತಹ ಬಲಿಷ್ಠನೂ, ಅಸ್ತ್ರಪಾರಂಗತನೂ, ಯುದ್ಧದುರ್ಮದನೂ ಆದ ಮತ್ಸ್ಯರಾಜನಾದ ವಿರಾಟನು ಯುದ್ಧದಲ್ಲಿ ಭೀಷ್ಮನನ್ನೂ ಮತ್ತು ಆ ಮಹಾರಥರನ್ನೂ ಸಹಿಸುವನು.

ವೈಶಂಪಾಯನಃ

ತಥೋಕ್ತೇ ಸಹದೇವೇನ ವಾಕ್ಯೇ ವಾಕ್ಯವಿಶಾರದಃ ।
ನಕುಲೋಽನಂತರಂ ತಸ್ಮಾದಿದಂ ವಚನಮಾದದೇ ॥೧೪॥

ವೈಶಂಪಾಯನ– ಸಹದೇವನು ಹಾಗೆ ಹೇಳುತ್ತಿರಲು ವಾಕ್ಯವಿಶಾರದನಾದ ನಕುಲನು ಅನಂತರ ಹೀಗೆ ಮಾತನಾಡಿದನು.

ವಯಸಾ ಶಾಸ್ತ್ರತೋ ಧೈರ್ಯಾತ್ ಕುಲೇನಾಭಿಜನೇನ ಚ ।
ಹ್ರೀಮಾನ್ ಬಲಾನ್ವಿತಃ ಶ್ರೀಮಾನ್ ಸರ್ವಶಸ್ತ್ರಭೃತಾಂ ವರಃ ॥೧೫॥

ವೇದ ಚಾಸ್ತ್ರಂ ಭರದ್ವಾಜಾದ್ ದುರ್ಧರ್ಷಃ ಸತ್ಯಸಂಗರಃ ॥೧೬॥

ವಯಸ್ಸಿನಿಂದಲೂ, ಶಾಸ್ತ್ರದಿಂದಲೂ, ಧೈರ್ಯದಿಂದಲೂ, ಒಳ್ಳೆಯ ಕುಲದಲ್ಲಿ ಜನ್ಮದಿಂದಲೂ ಕೂಡಿರುವ, ನಾಚಿಕೆಯುಳ್ಳವನೂ, ಬಲಿಷ್ಠನೂ, ಕಾಂತಿಯುಕ್ತನೂ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೂ, ಭರದ್ವಾಜರಿಂದ ಅಸ್ತ್ರವಿದ್ಯೆಯನ್ನು ಸಂಪಾದಿಸಿದವನೂ, ಸತ್ಯಸಂಗರನೂ, ದುರ್ಧರ್ಷನೂ (ಆದ);

ಯೋ ನಿತ್ಯಂ ಸ್ಪರ್ಧತೇ ದ್ರೋಣಂ ಭೀಷ್ಮಂ ಚೈವ ಮಹಾಬಲಃ ।
ಶ್ಲಾಘ್ಯಃ ಪಾರ್ಥಿವಸಂಘಸ್ಯ ಪ್ರಮುಖೋ ವಾಹಿನೀಪತಿಃ ॥೧೭॥

ಪುತ್ರಪೌತ್ರೈಃ ಪರಿವೃತಃ ಶತಶಾಖ ಇವ ದ್ರುಮಃ ।
ಯಸ್ತತಾಪ ತಪೋ ಘೋರಂ ಸದಾರಃ ಪೃಥಿವೀಪತಿಃ ॥೧೮॥

ರೋಷಾದ್ ದ್ರೋಣವಿನಾಶಾಯ ವೀರಃ ಸಮಿತಿಶೋಭನಃ ।
ಪಿತೇವಾಸ್ಮಾನ್ ಸಮಾಧತ್ತ ಯಃ ಸದಾ ಪಾರ್ಥಿವರ್ಷಭಃ ॥೧೯॥

ಯಾವ ಮಹಾಬಲನು ನಿತ್ಯವೂ ದ್ರೋಣರ ಮತ್ತು ಭೀಷ್ಮರ ಜೊತೆಯಲ್ಲಿ ಸ್ಪರ್ಧಿಸುವನೋ, ಯಾವನು ಸೇನಾನಾಯಕನಾಗಿ ರಾಜರ ಮುಂಭಾಗದಲ್ಲಿ ಶ್ಲಾಘನೀಯನೋ, ನೂರು ಕೊಂಬೆಗಳಿರುವ ವೃಕ್ಷದಂತೆ ಪುತ್ರ-ಪೌತ್ರರಿಂದ ಕೂಡಿದವನೋ, ಯಾವನು ರೋಷದಿಂದ ದ್ರೋಣರ ವಿನಾಶಕ್ಕಾಗಿ ಪತ್ನಿಯ ಜೊತೆಯಲ್ಲಿ ಘೋರವಾದ ತಪಸ್ಸನ್ನು ಆಚರಿಸಿದನೋ, ಯಾವನು ವೀರನೋ, ಯುದ್ಧದಲ್ಲಿ ಶೋಭಿಸುವವನೋ, ಯಾವ ರಾಜಶ್ರೇಷ್ಠನು ತಂದೆಯಂತೆ ಯಾವಾಗಲೂ ನಮಗೆ ಸಮಾಧಾನ ಮಾಡುವನೋ;

ಶ್ವಶುರೋ ದ್ರುಪದೋऽಸ್ಮಾಕಂ ಸೇನಾಮಗ್ರೇ ಪ್ರಕರ್ಷತು ।
ಸ ದ್ರೋಣಭೀಷ್ಮಾವಾಯಾತೌ ಸಹೇದಿತಿ ಮತಿರ್ಮಮ ॥೨೦॥

ಸ ಹಿ ದಿವ್ಯಾಸ್ತ್ರವಿದ್ ರಾಜಾ ಸಖಾ ಚಾಂಗಿರಸೋ ನೃಪ ॥೨೧॥

ಅಂತಹ ನಮ್ಮ ಮಾವನಾದ ದ್ರುಪದನು ಸೇನಾನಾಯಕನಾಗಿ ಸೇನೆಯನ್ನು ನಡೆಸಲಿ. ಅವನು ದ್ರೋಣ-ಭೀಷ್ಮರು ಒಟ್ಟಿಗೆ ಬಂದರೂ ಅವರನ್ನು ಸಹಿಸಿಯಾನು ಎಂದು ನನ್ನ ಅಭಿಪ್ರಾಯ. ಎಲೈ ರಾಜನೇ, ಆ ರಾಜನು ದಿವ್ಯಾಸ್ತ್ರವನ್ನು ಬಲ್ಲವನು ಮತ್ತು ಕೃಪರಿಗೆ ಮಿತ್ರನಾದವನು.

ವೈಶಂಪಾಯನಃ

ಮಾದ್ರೀಸುತಾಭ್ಯಾಮುಕ್ತೇ ತು ಸ್ವಮತೇ ಕುರುನಂದನಃ ।
ವಾಸವಿರ್ವಾಸವಸಮಃ ಸವ್ಯಸಾಚ್ಯಬ್ರವೀದಿದಮ್ ॥೨೨॥

ವೈಶಂಪಾಯನ– ಮಾದ್ರೀಪುತ್ರರಾದ ನಕುಲ-ಸಹದೇವರು ತಮ್ಮ ಅಭಿಪ್ರಾಯವನ್ನು ಹೇಳಿದ ಮೇಲೆ ಕುರುನಂದನನೂ, ಇಂದ್ರನ ಪುತ್ರನೂ, ಇಂದ್ರನಿಗೆ ಸಮಾನನಾದವನೂ ಆದ ಸವ್ಯಸಾಚಿಯಾದ ಅರ್ಜುನನು ಈ ಮಾತನ್ನು ಆಡಿದನು.

ಯೋಽಯಂ ತಪಃಪ್ರಭಾವೇಣ ಋಷಿಸಂತೋಷಣೇನ ಚ ।
ದಿವ್ಯಃ ಪುರುಷ ಉತ್ಪನ್ನೋ ಜ್ವಾಲಾವರ್ಣೋ ಮಹಾಬಲಃ ॥೨೩॥

ಧನುಷ್ಮಾನ್ ಕವಚೀ ಖಡ್ಗೀ ರಥಮಾರುಹ್ಯ ದಂಸಿತಃ ।
ದಿವ್ಯೈರ್ಹಯವರೈರ್ಯುಕ್ತಮಗ್ನಿಕುಂಡಾತ್ ಸಮುತ್ಥಿತಃ ॥೨೪॥

ಯಾವನು ದ್ರುಪದನ ತಪಸ್ಸಿನ ಪ್ರಭಾವದಿಂದಲೂ, ಋಷಿಗಳ ಅನುಗ್ರಹದಿಂದಲೂ ಮಹಾಬಲನಾಗಿ, ಅಗ್ನಿಜ್ವಾಲೆಯ ವರ್ಣಗಳಿಂದ ಕೂಡಿದವನಾಗಿ, ಧನುಸ್ಸು-ಕವಚ-ಖಡ್ಗಗಳನ್ನು ಧರಿಸಿ, ದಿವ್ಯವಾದ ಅಶ್ವಗಳಿಂದ ಹೂಡಿದ ರಥದಲ್ಲಿ ಸನ್ನದ್ಧನಾಗಿ ಕುಳಿತು ಅಗ್ನಿಕುಂಡದಿಂದ ಮೇಲೆದ್ದು ಬಂದನೋ;

ಗರ್ಜನ್ನಿವ ಮಹಾಮೇಘೋ ರಥಘೋಷೇಣ ವೀರ್ಯವಾನ್ ।
ಸಿಂಹಸಂಹನನೋ ವೀರಃ ಸಿಂಹವಿಕ್ರಾಂತವಿಕ್ರಮಃ ॥೨೫॥

ಸಿಂಹೋರಸ್ಕೋ ಮಹಾಬಾಹುಃ ಸಿಂಹವಕ್ತ್ರೋ ಮಹಾಬಲಃ ।
ಸಿಂಹವದ್ ಗರ್ಜಿತೋ ವೀರಃ ಸಿಂಹಸ್ಕಂಧೋ ಮಹಾದ್ಯುತಿಃ ॥೨೬॥

ಯಾವ ಪರಾಕ್ರಮಶಾಲಿಯಾದ ಅವನು ರಥಘೋಷದಿಂದ ಮಹಾಮೇಘದಂತೆ ಗರ್ಜಿಸುವನೋ, ಸಿಂಹದ ದೇಹದ ಮಾಟವನ್ನು ಹೊಂದಿರುವನೋ, ವೀರನೋ, ಸಿಂಹದ ಪರಾಕ್ರಮವನ್ನು ಹೊಂದಿರುವವನೋ, ಸಿಂಹದ ಎದೆ, ಸಿಂಹದ ಗರ್ಜನೆ, ಸಿಂಹದ ಭುಜವನ್ನು ಹೊಂದಿರುವ ಮಹಾಬಾಹುವೂ, ಮಹಾಬಲನೂ, ಮಹಾಕಾಂತಿಯುಕ್ತನೂ ಮತ್ತು ವೀರನೂ ಆಗಿದ್ದಾನೆಯೋ;

ಸುಭ್ರೂಃ ಸುದಂಷ್ಟ್ರಃ ಸುತನುಃ ಸುನಸಃ ಸುಮುಖೋಽಕೃಶಃ ।
ಸುಜತ್ರುಃ ಸುವಿಶಾಲಾಕ್ಷಃ ಸುಪಾದಃ ಸುಪ್ರತಿಷ್ಠಿತಃ ॥೨೭॥

ಅಭೇದ್ಯಃ ಸರ್ವಶಸ್ತ್ರಾಣಾಂ ಪ್ರಭಿನ್ನ ಇವ ವಾರಣಃ ।
ಜಜ್ಞೇ ದ್ರೋಣವಿನಾಶಾಯ ಸತ್ಯವಾದೀ ಜಿತೇಂದ್ರಿಯಃ ॥೨೮॥

ಧೃಷ್ಟದ್ಯುಮ್ನಮಹಂ ಮನ್ಯೇ ಸಹೇದ್ ಭೀಷ್ಮಸ್ಯ ಸಾಯಕಾನ್ ॥೨೯॥

ಒಳ್ಳೆಯ ಹುಬ್ಬು, ಒಳ್ಳೆಯ ದಂತಗಳು, ಒಳ್ಳೆಯ ಶರೀರ, ನಾಸಿಕ, ಮುಖ, ಸ್ಥೌಲ್ಯವಿಲ್ಲದ ಶರೀರ, ಒಳ್ಳೆಯ ಪಕ್ಕೆಗಳು, ವಿಶಾಲವಾದ ನಯನಗಳು, ಒಳ್ಳೆಯ ಪಾದಗಳನ್ನು ಹೊಂದಿ ಮದಿಸಿದ ಗಜದಂತೆ ಎಲ್ಲಾ ಶಸ್ತ್ರಗಳಿಂದಲೂ ಅಭೇದ್ಯನಾಗಿ ಪ್ರತಿಷ್ಠಿತನಾಗಿದ್ದಾನೆಯೋ, ಯಾವಾತನು ದ್ರೋಣರ ವಿನಾಶಕ್ಕಾಗಿಯೇ ಅವತರಿಸಿದ್ದಾನೆಯೋ ಅಂತಹ ಸತ್ಯವಾದಿಯೂ, ಜಿತೇಂದ್ರಿಯನೂ ಆದ ಧೃಷ್ಟದ್ಯುಮ್ನನು ಭೀಷ್ಮನ ಬಾಣಗಳನ್ನು ಸಹಿಸುವನು ಎಂದು ನನ್ನ ಅಭಿಪ್ರಾಯ.

ವಜ್ರಾಶನಿಸಮಸ್ಪರ್ಶಾನ್ ದೀಪ್ತಾಸ್ಯಾನುರಗಾನಿವ ।
ಯಮದೂತಸಮಾನ್ ವೇಗೇ ನಿಪಾತೇ ಪಾವಕೋಪಮಾನ್ ॥೩೦॥

ರಾಮೇಣಾಜೌ ವಿಷಹಿತಾನ್ ವಜ್ರನಿಷ್ಪೇಷದಾರುಣಾನ್ ॥೩೧॥

ಪುರುಷಂ ತಂ ನ ಪಶ್ಯಾಮಿ ಯಃ ಸಹೇತ ಮಹಾವ್ರತಮ್ ।
ಧೃಷ್ಟದ್ಯುಮ್ನಮೃತೇ ರಾಜನ್ನಿತಿ ಮೇ ಧೀಯತೇ ಮತಿಃ ॥೩೨॥

ವಜ್ರಾಯುಧ ಮತ್ತು ಸಿಡಿಲುಗಳಿಗೆ ಸಮಾನವಾದ ಸ್ಪರ್ಶವುಳ್ಳ, ಜ್ವಲಿಸುವ ಮುಖವುಳ್ಳ ಸರ್ಪಗಳಂತಿರುವ, ವೇಗದಲ್ಲಿ ಯಮದೂತನಿಗೆ ಸಮಾನನಾದ, ಮೇಲೆ ಎರಗುವುದರಲ್ಲಿ ಅಗ್ನಿಗೆ ಸಮಾನನಾದ, ಪರಶುರಾಮರನ್ನು ಯುದ್ಧದಲ್ಲಿ ಸಹಿಸಿದ, ವಜ್ರಪಾತದಂತೆ ಕಠೋರವಾದ ಭೀಷ್ಮರ ಬಾಣಗಳನ್ನು ಸಹಿಸುವ ಪುರುಷನು ಧೃಷ್ಟದ್ಯುಮ್ನನನ್ನು ಬಿಟ್ಟು ಬೇರೆ ಇನ್ನೊಬ್ಬರನ್ನು ನಾನು ಕಾಣುತ್ತಿಲ್ಲ ಎಂದು ಅಭಿಪ್ರಾಯ.

ಕ್ಷಿಪ್ರಹಸ್ತಃ ಕ್ಷಿಪ್ರಯೋಧೀ ಮತಃ ಸೇನಾಪತಿರ್ಮಮ ।
ಅಭೇದ್ಯಕವಚಃ ಶ್ರೀಮಾನ್ ಮಾತಂಗ ಇವ ಯೂಥಪಃ ॥೩೩॥

ಕ್ಷಿಪ್ರಹಸ್ತನೂ, ಕ್ಷಿಪ್ರವಾಗಿ ಯುದ್ಧವನ್ನು ಮಾಡುವವನೂ, ಅಭೇದ್ಯವಾದ ಕವಚವುಳ್ಳವನೂ, ಕಾಂತಿಯುಕ್ತನಾದ ಗಜದಂತೆ ಯೂಥಪತಿಯೂ ಆದ ಧೃಷ್ಟದ್ಯುಮ್ನನು ಸೇನಾಪತಿಯಾಗಲಿ ಎಂದು ನನ್ನ ಅಭಿಪ್ರಾಯ.

ವೈಶಂಪಾಯನಃ

ಅರ್ಜುನೇನೈವಮುಕ್ತೇ ತು ಭೀಮೋ ವಾಕ್ಯಂ ಸಮಾದದೇ ॥೩೪॥

ವೈಶಂಪಾಯನ– ಅರ್ಜುನನು ಹೀಗೆ ಹೇಳಿದ ಮೇಲೆ ಭೀಮನು ಮಾತನಾಡಿದನು.

ವಧಾರ್ಥಂ ಯಃ ಸಮುತ್ಪನ್ನಃ ಶಿಖಂಡೀ ದ್ರುಪದಾತ್ಮಜಃ ॥೩೫॥

ವದಂತಿ ಸಿದ್ಧಾ ರಾಜೇಂದ್ರ ಋಷಯಶ್ಚ ಸಮಾಗತಾಃ ।
ಯಸ್ಯ ಸಂಗ್ರಾಮಮಧ್ಯೇಷು ದಿವ್ಯಮಸ್ತ್ರಂ ಪ್ರಕುರ್ವತಃ ॥೩೬॥

ರೂಪಂ ದ್ರಕ್ಷ್ಯಂತಿ ಪುರುಷಾ ರಾಮಸ್ಯೇವ ಮಹಾತ್ಮನಃ ॥೩೭॥

ನ ತಂ ಯುದ್ಧೇ ಪ್ರಪಶ್ಯಾಮಿ ಯೋ ಯುದ್ಧ್ಯೇತ್ತು ಶಿಖಂಡಿನಾ ॥೩೮॥

ಯಾವನು ಭೀಷ್ಮರ ವಧೆಗಾಗಿಯೇ ಶಿಖಂಡಿಯಾಗಿ ದ್ರುಪದನಿಗೆ ಜನಿಸಿದ್ದಾನೆಂದು ಸಿದ್ಧರು ಮತ್ತು ಸಮಾಗತ ಋಷಿಗಳು ಹೇಳುತ್ತಾರೆಯೋ, ಯುದ್ಧದ ಮಧ್ಯದಲ್ಲಿ ಯಾವ ಮಹಾತ್ಮನು ಪ್ರಯೋಗಿಸುವ ಅಸ್ತ್ರಗಳನ್ನು ಪ್ರತಿವೀರರು ಪರಶುರಾಮರ ಅಸ್ತ್ರಗಳಂತೆ ಕಾಣುವರೋ ಅಂತಹ ಶಿಖಂಡಿಯ ಜೊತೆಯಲ್ಲಿ ಯುದ್ಧ ಮಾಡುವವರನ್ನು ನಾನು ಬೇರೆ ಯಾರನ್ನೂ ಕಾಣುತ್ತಿಲ್ಲ.

ಶಸ್ತ್ರೇಣ ಸಮರೇ ರಾಜನ್ ಸನ್ನದ್ಧಂ ಸ್ಯಂದನೇ ಸ್ಥಿತಮ್ ।
ದ್ವೈರಥೇ ವಿಷಹೇತಾಸೌ ಭೀಷ್ಮಂ ರಾಜನ್ ಮಹಾವ್ರತಮ್ ॥೩೯॥

ಶಿಖಂಡಿನಮೃತೇ ರಾಜನ್ ನ ಮೇ ಸೇನಾಪತಿರ್ಮತಃ ॥೪೦॥

ಎಲೈ ರಾಜನೇ, ರಥದಲ್ಲಿ ಕುಳಿತು ಶಸ್ತ್ರದಿಂದ ಸನ್ನದ್ಧನಾಗಿ ಅವನು ದ್ವೈರಥ ಯುದ್ಧದಲ್ಲಿ ಮಹಾವ್ರತನಾದ ಭೀಷ್ಮನನ್ನು ಎದುರಿಸುವನು. ಎಲೈ ರಾಜನೇ, ಶಿಖಂಡಿಯನ್ನು ಬಿಟ್ಟು ನನಗೆ ಯಾರೂ ಸೇನಾಪತಿಯಾಗಿ ಸಮ್ಮತರಲ್ಲ.

ಯುಧಿಷ್ಠಿರಃ

ಸರ್ವಸ್ಯ ಜಗತಸ್ತಾತ ಸಾರಾಸಾರಂ ಬಲಾಬಲಮ್ ।
ಸರ್ವಂ ಜಾನಾತಿ ಧರ್ಮಾತ್ಮಾ ಗತಮೇಷ್ಯಚ್ಚ ಕೇಶವಃ ॥೪೧॥

ಯಮಾಹ ಕೃಷ್ಣೋ ದಾಶಾರ್ಹಃ ಸೋಽಸ್ತು ಸೇನಾಪತಿರ್ಮಮ ।
ಕೃತಾಸ್ತ್ರೋಽಪ್ಯಕೃತಾಸ್ತ್ರೋ ವಾ ವೃದ್ಧೋ ವಾ ಯದಿ ವಾ ಯುವಾ ॥೪೨॥

ಯುಧಿಷ್ಠಿರ– ಎಲೈ ಪ್ರೀತಿಪಾತ್ರನೇ, ಧರ್ಮಾತ್ಮನಾದ ಕೇಶವನು ಜಗತ್ತಿನ ಸಾರಾಸಾರಗಳನ್ನೂ, ಬಲಾಬಲಗಳನ್ನೂ, ಭೂತ-ಭವಿಷ್ಯತ್‌ಗಳನ್ನೂ ತಿಳಿದಿದ್ದಾನೆ. ದಾಶಾರ್ಹನಾದ ಕೃಷ್ಣನು ಯಾರನ್ನು ಹೇಳುತ್ತಾನೆಯೋ ಅವನು ಅಸ್ತ್ರಜ್ಞನಾಗಿರಲಿ ಅಥವಾ ಇಲ್ಲದಿರಲಿ, ವೃದ್ಧನಾಗಲಿ ಅಥವಾ ಯುವಕನಾಗಲಿ, ಅವನೇ ಸೇನಾಪತಿ ಆಗಲಿ ಎಂದು ನನ್ನ ಅಭಿಪ್ರಾಯ.

ಏಷ ಮೇ ವಿಜಯೇ ಮೂಲಮೇಷ ತಾತ ವಿಪರ್ಯಯೇ ।
ಅತ್ರ ಪ್ರಾಣಾಶ್ಚ ರಾಜ್ಯಂ ಚ ಲಾಭಾಲಾಭೌ ಸುಖಾಸುಖೇ ॥೪೩॥

ಏಷ ಧಾತಾ ವಿಧಾತಾ ಚ ಸಿದ್ಧಿರತ್ರ ಪ್ರತಿಷ್ಠಿತಾ ॥೪೪॥

ಎಲೈ ಪ್ರೀತಿಪಾತ್ರನೇ. ಈ ಕೇಶವನೇ ನಮ್ಮ ವಿಜಯಕ್ಕೆ ಅಥವಾ ಅದಕ್ಕೆ ವಿರುದ್ಧವಾದ ಸೋಲಿಗೆ ಮೂಲಕಾರಣನಾದವನು. ನಮ್ಮ ಪ್ರಾಣವೂ, ರಾಜ್ಯವೂ, ಲಾಭಾಲಾಭಗಳೂ, ಸುಖ-ದುಃಖಗಳೂ ಎಲ್ಲವೂ ಅವನನ್ನು ಆಶ್ರಯಿಸಿವೆ. ಇವನೇ ನಮಗೆ ಧಾತಾ (ನಾರಾಯಣ), ವಿಧಾತಾ (ಬ್ರಹ್ಮ). ನಮ್ಮ ಸಿದ್ಧಿಯು ಇವನನ್ನೇ ಅವಲಂಬಿಸಿದೆ.

ಯಮಾಹ ಕೃಷ್ಣೋ ದಾಶಾರ್ಹಃ ಸ ನಃ ಸೇನಾಪತಿಃ ಕ್ಷಮಃ ।
ಬ್ರವೀತು ವದತಾಂ ಶ್ರೇಷ್ಠೋ ನಿಶಾ ಸಮಭಿವರ್ತತೇ ॥೪೫॥

ದಾಶಾರ್ಹನಾದ ಕೃಷ್ಣನು ಯಾರನ್ನು ಹೇಳುತ್ತಾನೆಯೋ ಅವನೇ ನಮಗೆ ಸಮರ್ಥನಾದ ಸೇನಾಪತಿ. ಮಾತನಾಡುವವರಲ್ಲಿ ಶ್ರೇಷ್ಠನಾದ ಕೃಷ್ಣನು ತನ್ನ ಅಭಿಪ್ರಾಯವನ್ನು ಹೇಳಲಿ. ರಾತ್ರಿಯು ಬೇಗ ಮುಂದುವರಿಯುತ್ತಿದೆ.

ತತಃ ಸೇನಾಪತಿಂ ಕೃತ್ವಾ ಕೃಷ್ಣಸ್ಯ ವಶವರ್ತಿನಃ ।
ರಾತ್ರಿಶೇಷೇ ವ್ಯತಿಕ್ರಾಂತೇ ಪ್ರಯಾಸ್ಯಾಮೋ ರಣಾಜಿರಮ್ ॥೪೬॥

ಅಧಿವಾಸಿತಶಸ್ತ್ರಾಶ್ಚ ಕೃತಕೌತುಕಮಂಗಲಾಃ ॥೪೭॥

ಅನಂತರ ಕೃಷ್ಣನಿಗೆ ವಶವರ್ತಿಯಾದವನನ್ನು ಸೇನಾಪತಿಯಾಗಿ ಮಾಡಿ, ರಾತ್ರಿಯ ಉಳಿದ ಭಾಗವು ಕಳೆದ ಮೇಲೆ, ಶಸ್ತ್ರಗಳ ಅಧಿವಾಸನವನ್ನು ಮಾಡಿ ಮಂಗಳಕಾರ್ಯಗಳನ್ನು ಆಚರಿಸಿ ನಾವು ರಣರಂಗಕ್ಕೆ ಹೋಗೋಣ.

ವೈಶಂಪಾಯನಃ

ತಸ್ಯ ತದ್ವಚನಂ ಶ್ರುತ್ವಾ ಧರ್ಮರಾಜಸ್ಯ ಧೀಮತಃ ।
ಅಬ್ರವೀತ್ ಪುಂಡರೀಕಾಕ್ಷೋ ಧನಂಜಯಮವೇಕ್ಷ್ಯ ಹ ॥೪೮॥

ವೈಶಂಪಾಯನ– ಮೇಧಾವಿಯಾದ ಧರ್ಮರಾಜನ ಆ ಮಾತುಗಳನ್ನು ಕೇಳಿ ಪುಂಡರೀಕಾಕ್ಷನು ಅರ್ಜುನನನ್ನು ನೋಡುತ್ತಾ ಮಾತನಾಡಿದನು.

ಮಮಾಪ್ಯೇತೇ ಮಹಾರಾಜ ಭವದ್ಬಿರ್ಯ ಉದಾಹೃತಾಃ ।
ನೇತಾರಸ್ತವ ಸೇನಾಯಾಃ ಶೂರಾ ವಿಕ್ರಾಂತಯೋಧಿನಃ ॥೪೯॥

ಸರ್ವ ಏತೇ ಸಮರ್ಥಾ ಹಿ ತವ ಶತ್ರೂನ್ ವಿಮರ್ದಿತುಮ್ ॥೫೦॥

ಎಲೈ ಮಹಾರಾಜನೇ, ನನ್ನ ಅಭಿಪ್ರಾಯದಲ್ಲಿಯೂ ಸಹ ಎಲ್ಲರೂ ಹೇಳಿದ ಪರಾಕ್ರಮಿಗಳಾದ, ಶೂರರಾದ ಯೋಧರೆಲ್ಲರೂ ನಿನ್ನ ಸೇನೆಯ ನಾಯಕರಾಗಲು ಅರ್ಹರಾದವರು. ನಿನ್ನ ಶತ್ರುಗಳನ್ನು ಮರ್ದಿಸಲು ಇವರೆಲ್ಲರೂ ಸಮರ್ಥರಾಗಿದ್ದಾರೆ.

ಇಂದ್ರಸ್ಯಾಪಿ ಭಯಂ ಹ್ಯೇತೇ ಜನಯೇಯುರ್ಮಹಾಹವೇ ।
ಕಿಂ ಪುನರ್ಧಾರ್ತರಾಷ್ಟ್ರಾಣಾಂ ಕ್ಷುದ್ರಾಣಾಂ ಪಾಪಚೇತಸಾಮ್ ॥೫೧॥

ಇವರು ಯುದ್ಧದಲ್ಲಿ ಇಂದ್ರನಿಗೂ ಭಯವನ್ನು ಉಂಟುಮಾಡಿಯಾರು! ಇನ್ನು ಕ್ಷುದ್ರರೂ, ಪಾಪಚೇತನರೂ ಆದ ದುರ್ಯೋಧನಾದಿಗಳ ವಿಷಯದಲ್ಲಿ ಹೇಳುವುದೇನಿದೆ?

ಮಯಾऽಪಿ ಹಿ ಮಹಾಬಾಹೋ ತ್ವತ್ಪ್ರಿಯಾರ್ಥಮರಿಂದಮ ।
ಕೃತೋ ಯತ್ನೋ ಮಹಾಂಸ್ತತ್ರ ಶಮಃ ಸ್ಯಾದಿತಿ ಭಾರತ ॥೫೨॥

ಧರ್ಮಸ್ಯ ಗತಮಾನೃಣ್ಯಂ ನ ಸ್ಮ ವಾಚ್ಯೋ ವಿವಕ್ಷತಾಮ್ ॥೫೩॥

ಎಲೈ ಮಹಾಬಾಹುವೇ, ಎಲೈ ಅರಿಂದಮನೇ, ಭಾರತನೇ, ನಾನೂ ಸಹ ನಿನ್ನ ಹಿತದ ಸಲುವಾಗಿ ಸಂಧಿಗೋಸ್ಕರವಾಗಿ ಕೌರವಸಭೆಯಲ್ಲಿ ಮಹಾಪ್ರಯತ್ನವನ್ನು ಮಾಡಿದೆ. ಧರ್ಮದ ದೃಷ್ಟಿಯಿಂದ ನಾನು ಋಣಮುಕ್ತನಾಗಿದ್ದೇನೆ. ಯಾರೂ ನನ್ನನ್ನು ನಿಂದಿಸಲು ಸಾಧ್ಯವಿಲ್ಲ.

ಕೃತಾರ್ಥಂ ಮನ್ಯತೇ ಬಾಲಃ ಸೋತ್ಮಾನಮವಿಚಕ್ಷಣಃ ।
ಧಾರ್ತರಾಷ್ಟ್ರೋ ಬಲಸ್ಥಂ ಚ ಪಶ್ಯತ್ಯಾತ್ಮಾನಮಾತುರಃ ॥೫೪॥

ಬಾಲನೂ, ಅಕೋವಿದನೂ, ಆತುರನೂ (ರೋಗಗ್ರಸ್ತನೂ) ಆದ ದುರ್ಯೋಧನನು ತನ್ನನ್ನು ಕೃತಾರ್ಥನೆಂದು ಮತ್ತು ಸಬಲನೆಂದು ಭಾವಿಸಿದ್ದಾನೆ.

ಯುಜ್ಯತಾಂ ವಾಹಿನೀ ಸಾಧು ವಧಸಾಧ್ಯಾ ಹಿ ಮೇ ಮತಾಃ ।
ನ ಧಾರ್ತರಾಷ್ಟ್ರಾಃ ಶಕ್ಷ್ಯಂತಿ ಸ್ಥಾತುಂ ದೃಷ್ಟ್ವಾ ಧನಂಜಯಮ್ ॥೫೫॥

ಭೀಮಸೇನಂ ಚ ಸಂಕ್ರುದ್ಧಂ ಯಮೌ ಚಾಪಿ ಯಮೋಪಮೌ ।
ಯುಯುಧಾನದ್ವಿತೀಯಂ ಚ ಧೃಷ್ಟದ್ಯುಮ್ನಮಮರ್ಷಣಮ್ ॥೫೬॥

ಅಭಿಮನ್ಯುಂ ದ್ರೌಪದೇಯಾನ್ ವಿರಾಟದ್ರುಪದಾವಪಿ ।
ಅಕ್ಷೌಹಿಣೀಪತೀಂಶ್ಚಾನ್ಯಾನ್ ನರೇಂದ್ರಾನ್ ದೃಢವಿಕ್ರಮಾನ್ ॥೫೭॥

ನೀವು ಸೈನ್ಯವನ್ನು ಚೆನ್ನಾಗಿ ಹೂಡುವವರಾಗಿ. ಅವರನ್ನು ವಧೆಯಿಂದಲೇ ಬಗ್ಗಿಸಬೇಕಾಗುತ್ತದೆ. ಧನಂಜಯನನ್ನು ನೋಡಿ ಧೃತರಾಷ್ಟ್ರಪುತ್ರರು ಎದುರಿಗೆ ನಿಲ್ಲಲಾರರು. ಬಹಳ ಕೋಪಗೊಂಡ ಭೀಮಸೇನನನ್ನೂ, ಯಮನಂತಿರುವ ನಕುಲ-ಸಹದೇವರನ್ನೂ, ಅದ್ವಿತೀಯನಾದ ಯುಯುಧಾನನನ್ನೂ, ರೋಷದಿಂದಿರುವ ಧೃಷ್ಟದ್ಯುಮ್ನನನ್ನೂ, ಅಭಿಮನ್ಯುವನ್ನೂ, ದ್ರೌಪದಿಯ ಪಂಚಪುತ್ರರನ್ನೂ, ವಿರಾಟ-ದ್ರುಪದರನ್ನೂ, ಅಕ್ಷೌಹಿಣೀ ನಾಯಕರಾದ, ದೃಢಪರಾಕ್ರಮವುಳ್ಳ ಬೇರೆ ರಾಜರನ್ನೂ ನೋಡಿ (ಯುದ್ಧದಲ್ಲಿ ಅವರ ಎದುರಿಗೆ ನಿಲ್ಲಲಾರರು).

ಸಾರವದ್ ಬಲಮಸ್ಮಾಕಂ ದುಷ್ಪ್ರಧರ್ಷಂ ದುರಾಸದಮ್ ।
ಧಾರ್ತರಾಷ್ಟ್ರಬಲಂ ಸಂಖ್ಯೇ ಹನಿಷ್ಯತಿ ನ ಸಂಶಯಃ ॥೫೮॥

ಧೃಷ್ಟದ್ಯುಮ್ನಮಹಂ ಮನ್ಯೇ ಸೇನಾಪತಿಮರಿಂದಮ ॥೫೯॥

ನಮ್ಮ ಸೈನ್ಯವು ಶ್ರೇಷ್ಠವಾದ ಬಲದಿಂದ ಕೂಡಿದೆ, ಸೋಲಿಸಲು ಅಸಾಧ್ಯವಾದುದು ಮತ್ತು ಸಮೀಪಕ್ಕೆ ಬರಲು ಅಸಾಧ್ಯವಾದುದು. ಇಂತಹ ಸೈನ್ಯವು ಯುದ್ಧದಲ್ಲಿ ದುರ್ಯೋಧನನ ಸೈನ್ಯವನ್ನು ನಾಶಮಾಡುವುದು ಎಂಬ ವಿಷಯದಲ್ಲಿ ಸಂಶಯವಿಲ್ಲ. ಎಲೈ ಅರಿಂದಮನೇ, ನಾನು ಧೃಷ್ಟದ್ಯುಮ್ನನನ್ನು ಸೇನಾಪತಿ ಎಂದು ಭಾವಿಸುತ್ತೇನೆ.

ವೈಶಂಪಾಯನಃ

ಏವಮುಕ್ತೇ ತು ಕೃಷ್ಣೇನ ಸಂಪ್ರಾಹೃಷ್ಯನ್ ನರೋತ್ತಮಾಃ ॥೬೦॥

ವೈಶಂಪಾಯನ– ಕೃಷ್ಣನು ಹೀಗೆ ಹೇಳುತ್ತಿರಲು ಎಲ್ಲ ರಾಜರೂ ಸಂತೋಷಗೊಂಡರು.

ತೇಷಾಂ ಪ್ರಹೃಷ್ಟಮನಸಾಂ ನಾದಃ ಸಮಭವನ್ ಮಹಾನ್ ।
ಯೋಜಯಿತ್ವಾಽಥ ಸೈನ್ಯಾನಾಂ ತ್ವರತಾಂ ಸಂಪ್ರಧಾವತಾಮ್ ॥೬೧॥

ಹಯವಾರಣಶಬ್ದಾಶ್ಚ ನೇಮಿಘೋಷಾಶ್ಚ ಸರ್ವಶಃ ।
ಶಂಖದುಂದುಭಿಘೋಷಾಶ್ಚ ತುಮುಲಾಃ ಸರ್ವತೋಽಭವನ್ ॥೬೨॥

ಸಂತುಷ್ಟರಾದ ಅವರಿಂದ ಮಹಾನಾದವು ಹೊರಹೊಮ್ಮಿತು. ಸೈನ್ಯವನ್ನು ಅಣಿಗೊಳಿಸಿ, ತ್ವರೆಯಿಂದ ಓಡಾಡುವ ಅವರಿಂದ ಎಲ್ಲ ಕಡೆಗಳಲ್ಲಿಯೂ ಅಶ್ವಗಳ ಮತ್ತು ಗಜಗಳ ಶಬ್ದಗಳು, ರಥದ ಶಬ್ದಗಳು, ಶಂಖ-ದುಂದುಭಿಘೋಷಗಳು ತೀವ್ರವಾಗಿ ಕೇಳಿಬಂದವು.

ಪ್ರಯಾಸ್ಯತಾಂ ಪಾಂಡವಾನಾಂ ಸಸೈನ್ಯಾನಾಂ ಸಮಂತತಃ ।
ಗಂಗೇವ ಪೂರ್ಣಾ ದುರ್ಧರ್ಷಾ ಸಮದೃಶ್ಯತ ವಾಹಿನೀ ॥೬೩॥

ಸೈನ್ಯದ ಜೊತೆಯಲ್ಲಿ ಯುದ್ಧಕ್ಕೆ ಹೊರಡುವ ಪಾಂಡವರ ಸೈನ್ಯವು ಎಲ್ಲ ಕಡೆಯಲ್ಲಿಯೂ ತುಂಬಿ ಹರಿಯುವ ಗಂಗೆಯಂತೆ ಸೋಲಿಸಲು ಅಸಾಧ್ಯವಾಗಿ ಕಂಡುಬಂದಿತು.

ಅಗ್ರಾನೀಕೇ ಭೀಮಸೇನೋ ಮಾದ್ರೀಪುತ್ರೌ ಚ ದಂಸಿತೌ ।
ಸೌಭದ್ರೋ ದ್ರೌಪದೇಯಾಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೬೪॥

ಪ್ರಭದ್ರಕಾಶ್ಚ ಪಾಂಚಾಲಾ ಭೀಮಸೇನಮುಖಾ ಯಯುಃ ॥೬೫॥

ಸೇನೆಯ ಮುಂಭಾಗದಲ್ಲಿ ಭೀಮಸೇನ, ಕವಚಾದಿಗಳಿಂದ ಸನ್ನದ್ಧರಾದ ಮಾದ್ರೀಪುತ್ರರು, ಅಭಿಮನ್ಯು, ದ್ರೌಪದಿಯ ಪುತ್ರರು, ದ್ರುಪದನ ಮಗನಾದ ಧೃಷ್ಟದ್ಯುಮ್ನ, ಪಾಂಚಾಲದೇಶದ ಪ್ರಭದ್ರಕರು ಎಲ್ಲರೂ ಭೀಮಸೇನನನ್ನು ಮುಂದೆ ಮಾಡಿಕೊಂಡು ನಡೆದರು.

ತತಃ ಶಬ್ದಃ ಸಮಭವತ್ ಸಮುದ್ರಸ್ಯೇವ ಪರ್ವಣಿ ।
ಹೃಷ್ಟಾನಾಂ ಸಂಪ್ರಯಾತಾನಾಂ ಘೋಷೋ ದಿವಮಿವಾಸ್ಪೃಶತ್ ॥೬೬॥

ಸಂತೋಷದಿಂದ ಹೊರಡುವ ಅವರ ಶಬ್ದವು ಪರ್ವಕಾಲದ ಸಮುದ್ರದ ಘೋಷದಂತಿದ್ದಿತು. ಆ ಘೋಷವು ಆಕಾಶವನ್ನು ಮುಟ್ಟಿತು.

ಪ್ರಹೃಷ್ಟಾ ದಂಸಿತಾ ಯೋಧಾಃ ಪರಾನೀಕವಿದಾರಣಾಃ ।
ತೇಷಾಂ ಮಧ್ಯೇ ಯಯೌ ರಾಜಾ ಕುಂತೀಪುತ್ರೋ ಯುಧಿಷ್ಠಿರಃ ॥೬೭॥

ಸಂತೋಷಗೊಂಡವರೂ, ಕವಚಗಳನ್ನು ಧರಿಸಿದವರೂ, ಶತ್ರುಸೈನ್ಯವನ್ನು ಭೇದಿಸುವವರೂ ಆದ ಯೋಧರ ಮಧ್ಯದಲ್ಲಿ ರಾಜನಾದ ಕುಂತೀಪುತ್ರನಾದ ಯುಧಿಷ್ಠಿರನು ನಡೆದನು.

ಶಕಟಾಪಣವೇಶಾಶ್ಚ ಯಾನಯುಗ್ಯಂ ಚ ಸರ್ವಶಃ ।
ಕೋಶಂ ಯಂತ್ರಾಯುಧಂ ಚೈವ ಯೇ ಚ ವೈದ್ಯಾಶ್ಚಿಕಿತ್ಸಕಾಃ ॥೬೮॥

ಫಲ್ಗು ಯಚ್ಚ ಬಲಂ ಕಿಂಚಿತ್ ತಥೈವ ಕೃಶದುರ್ಬಲಮ್ ।
ತತ್ ಸಂಗೃಹ್ಯ ಯಯೌ ರಾಜಾ ಯೇ ಚಾಪಿ ಪರಿಚಾರಕಾಃ ॥೬೯॥

ಶಕಟಗಳೂ, ಅಂಗಡಿಗಳೂ, ವೇಶ್ಯೆಯರೂ, ರಥಕ್ಕೆ ಹೂಡುವ ಕುದುರೆಗಳೂ, ಕೋಶ, ಯಂತ್ರಗಳೂ, ಆಯುಧಗಳೂ, ಚಿಕಿತ್ಸೆಯನ್ನು ಮಾಡುವ ವೈದ್ಯರೂ ಮತ್ತು ಯುದ್ಧಕ್ಕೆ ಬೇಕಾಗುವ ಸಣ್ಣ ಮತ್ತು ದೊಡ್ಡ ವಸ್ತುಗಳು, ಪರಿಚಾರಕರೂ ಎಲ್ಲರನ್ನೂ ಕರೆದುಕೊಂಡು ರಾಜನು ಹೊರಟನು.

ಉಪಪ್ಲಾವ್ಯೇ ತು ಪಾಂಚಾಲೀ ದ್ರೌಪದೀ ಸತ್ಯವಾದಿನೀ ।
ಸಹ ಸ್ತ್ರೀಭಿರ್ನಿವವೃತೇ ದಾಸೀದಾಸಸಮಾವೃತಾ ॥೭೦॥

ಸತ್ಯವಾದಿನಿಯೂ, ಪಾಂಚಾಲರಾಜಕುಮಾರಿಯೂ ಆದ ದ್ರೌಪದಿಯು ದಾಸೀ-ದಾಸಪರಿವೃತಳಾಗಿ ಉಪಪ್ಲಾವ್ಯನಗರದಲ್ಲಿಯೇ ಸ್ತ್ರೀಯರ ಜೊತೆಯಲ್ಲಿ ಉಳಿದಳು.

ಕೃತ್ವಾ ಮೂಲಪ್ರತೀಕಾರಂ ಗುಲ್ಮೈಃ ಸ್ಥಾವರಜಂಗಮೈಃ ।
ಸ್ಕಂಧಾವಾರೇಣ ಮಹತಾ ಪ್ರಯಯುಃ ಪಾಂಡುನಂದನಾಃ ॥೭೧॥

ಪಾಂಡುನಂದನರು ತಮ್ಮ ಮೂಲಸ್ಥಾನವಾದ ಉಪಪ್ಲಾವ್ಯನಗರದ ರಕ್ಷಣೆಯನ್ನು ಮಾಡಿ, ಸ್ಥಾವರ-ಜಂಗಮವಾದ ಗುಲ್ಮಗಳನ್ನು (ಸೈನ್ಯದ ಭಾಗಗಳನ್ನು) ಮತ್ತು ಸೈನ್ಯದ ದೊಡ್ಡ ತುಕುಡಿಗಳನ್ನು ತೆಗೆದುಕೊಂಡು ಮುಂದೆ ನಡೆದರು (ನಲವತ್ತೈದು ಪದಾತಿಗಳು, ಇಪ್ಪತ್ತು ಅಶ್ವಗಳು, ಒಂಬತ್ತು ಗಜಗಳು ಮತ್ತು ಒಂಬತ್ತು ರಥಗಳು ಸೇರಿ ಒಂದು ಗುಲ್ಮವಾಗುತ್ತವೆ. ಸ್ಕಂಧಾವಾರವೆಂದರೆ ಸೈನ್ಯದ ಒಂದು ಸಣ್ಣ ಭಾಗ).

ದದತೋ ಗಾಂ ಹಿರಣ್ಯಂ ಚ ಬ್ರಾಹ್ಮಣೈರಭಿಸಂವೃತಾಃ ।
ಸ್ತೂಯಮಾನಾ ಯಯೂ ರಾಜನ್ ರಥೈರ್ಮಣಿವಿಭೂಷಣೈಃ ॥೭೨॥

ಎಲೈ ರಾಜನೇ, ಬ್ರಾಹ್ಮಣರಿಗೆ ಗೋದಾನವನ್ನು ಮತ್ತು ಹಿರಣ್ಯದಾನವನ್ನು ಮಾಡುತ್ತಾ, ಅಂತಹ ಬ್ರಾಹ್ಮಣರಿಂದ ಪರಿವೃತರಾಗಿ, ಅವರಿಂದ ಸ್ತೋತ್ರ ಮಾಡಲ್ಪಟ್ಟು ಮಣಿಗಳಿಂದ ಅಲಂಕೃತವಾದ ರಥಗಳಲ್ಲಿ ಸಾಗಿದರು.

ಕೇಕಯಾ ಧೃಷ್ಟಕೇತುಶ್ಚ ಪುತ್ರಃ ಕಾಶ್ಯಶ್ಚ ಚಾಭಿಭೂಃ ।
ಶ್ರೇಣಿಮಾನ್ ವಸುದಾನಶ್ಚ ಶಿಖಂಡೀ ಚಾಪರಾಜಿತಃ ॥೭೩॥

ಹೃಷ್ಟಾಸ್ತುಷ್ಟಾಃ ಕವಚಿನಃ ಸಶಸ್ತ್ರಾಃ ಸಮಲಂಕೃತಾಃ ।
ರಾಜಾನಮನ್ವಯುಃ ಸರ್ವೇ ಪರಿವಾರ್ಯ ಯುಧಿಷ್ಠಿರಮ್ ॥೭೪॥

ಕೇಕಯ ಸಹೋದರರು, ಕಾಶಿರಾಜನ ಪುತ್ರನಾದ, ಶತ್ರುಗಳನ್ನು ಸೋಲಿಸುವ ಧೃಷ್ಟಕೇತು, ಶ್ರೇಣಿಮಾನ್, ವಸುದಾನ, ಅಪರಾಜಿತನಾದ ಶಿಖಂಡಿ ಎಲ್ಲರೂ

ಸಂತೋಷದಿಂದ ಮತ್ತು ತೃಪ್ತಿಯಿಂದ ಕೂಡಿದವರಾಗಿ ಕವಚಗಳನ್ನೂ ಮತ್ತು ಶಸ್ತ್ರಗಳನ್ನೂ ಧರಿಸಿ, ಅಲಂಕೃತರಾಗಿ ಯುಧಿಷ್ಠಿರನನ್ನು ಸುತ್ತುವರಿದು ಅವನನ್ನು ಹಿಂಬಾಲಿಸಿದರು.

ಜಘನಾರ್ಧೇ ವಿರಾಟಶ್ಚ ಯಾಜ್ಞಸೇನಶ್ಚ ಸೌಮಕಿಃ ।
ಸುಶರ್ಮಾ ಕುಂತಿಭೋಜಶ್ಚ ಧೃಷ್ಟದ್ಯುಮ್ನಸ್ಯ ಚಾತ್ಮಜಾಃ ॥೭೫॥

ಸೈನ್ಯದ ಮಧ್ಯಭಾಗದಲ್ಲಿ ವಿರಾಟನೂ, ಸೋಮಕಪುತ್ರನಾದ ದ್ರುಪದನೂ, ಸುಶರ್ಮನೂ, ಕುಂತಿಭೋಜನೂ ಮತ್ತು ಧೃಷ್ಟದ್ಯುಮ್ನನ ಪುತ್ರರೂ ಇದ್ದರು.

ರಥಾಯುತಾನಿ ಚತ್ವಾರಿ ಹಯಾಃ ಪಂಚಗುಣಾಸ್ತಥಾ ।
ಪತ್ತಿಸೈನ್ಯಂ ದಶಗುಣಂ ಸಾದಿನಾಮಯುತಾನಿ ಷಟ್ ॥೭೬॥

ನಲವತ್ತು ಸಾವಿರ ರಥಗಳು, ಅದಕ್ಕೆ ಐದುಪಟ್ಟು ಅಶ್ವಗಳು, ಅದರ ಹತ್ತು ಪಟ್ಟು ಪದಾತಿಗಳು ಮತ್ತು ಆರವತ್ತು ಸಾವಿರ ಅಶ್ವಾರೋಹಿಗಳು ಹೊರಟರು.

ಅನಾಧೃಷ್ಟಿಶ್ಚೇಕಿತಾನೋ ಧೃಷ್ಟಕೇತುಶ್ಚ ಸಾತ್ಯಕಿಃ ।
ಪರಿವಾರ್ಯ ಯಯುಃ ಸರ್ವೇ ವಾಸುದೇವಧನಂಜಯೌ ॥೭೭॥

ಅನಾಧೃಷ್ಟಿ, ಚೇಕಿತಾನ, ಧೃಷ್ಟಕೇತು, ಸಾತ್ಯಕಿ, ಕೃಷ್ಣ ಮತ್ತು ಅರ್ಜುನ ಎಲ್ಲರೂ ರಾಜನನ್ನು ಸುತ್ತುವರಿದು ಹೊರಟರು.

ಆಸಾದ್ಯ ತು ಕುರುಕ್ಷೇತ್ರಂ ವ್ಯೂಢಾನೀಕಾಃ ಪ್ರಹಾರಿಣಃ ।
ಪಾಂಡವಾಃ ಸಮದೃಶ್ಯಂತ ನರ್ದಂತೋ ವೃಷಭಾ ಇವ ॥೭೮॥

ಕುರುಕ್ಷೇತ್ರವನ್ನು ತಲುಪಿ ಸೈನ್ಯವನ್ನು ವ್ಯೂಹವಾಗಿ ರಚಿಸಿ, ಪ್ರಹಾರವನ್ನು ಮಾಡುವ ಆ ಪಾಂಡವರು ಗರ್ಜಿಸುವ ವೃಷಭಗಳಂತೆ ಕಂಡುಬಂದರು.

ತೇ ವಿಗಾಹ್ಯ ಕುರುಕ್ಷೇತ್ರಂ ಶಂಖಾನ್ ದಧ್ಮುರರಿಂದಮಾಃ ।
ತಥೈವ ದಧ್ಮತುಃ ಶಂಖೌ ವಾಸುದೇವಧನಂಜಯೌ ॥೭೯॥

ಆ ಅರಿಂದಮರು ಕುರುಕ್ಷೇತ್ರವನ್ನು ತಲುಪಿ ತಮ್ಮ ಶಂಖಗಳನ್ನು ಊದಿದರು. ಕೃಷ್ಣಾರ್ಜುನರೂ ಸಹ ಹಾಗೆಯೇ ಶಂಖಗಳನ್ನು ಊದಿದರು.

ಪಾಂಚಜನ್ಯಸ್ಯ ನಿರ್ಘೋಷಂ ವಿಸೃಷ್ಟಮಿವಾಶನೇಃ ।
ನಿಶಮ್ಯ ಸರ್ವಸೈನ್ಯಾನಿ ಸಮಹೃಷ್ಯಂತ ಸರ್ವಶಃ ॥೮೦॥

ಸಿಡಿಲಿನ ಸ್ಫೋಟದಂತಿರುವ ಪಾಂಚಜನ್ಯ ಶಂಖದ ನಿರ್ಘೋಷವನ್ನು ಕೇಳಿ ಎಲ್ಲ ಕಡೆಯಲ್ಲೂ ಇದ್ದ ಸೈನ್ಯವೆಲ್ಲ ಸಂತೋಷವನ್ನು ಹೊಂದಿತು.

ಶಂಖದುಂದುಭಿಸಂಸೃಷ್ಟಃ ಸಿಂಹನಾದಸ್ತರಸ್ವಿನಾಮ್ ।
ಪೃಥಿವೀಂ ಚಾಂತರಿಕ್ಷಂ ಚ ಸಾಗರಾಂಶ್ಚಾನ್ವನಾದಯತ್ ॥೮೧॥

ಶಂಖ-ದುಂದುಭಿನಾದದಿಂದ ಕೂಡಿದ, ಶೀಘ್ರಗಾಮಿಗಳಾದ ವೀರರ ಸಿಂಹನಾದವು ಭೂಮಿಯನ್ನೂ, ಅಂತರಿಕ್ಷವನ್ನೂ ಮತ್ತು ಸಾಗರಗಳನ್ನೂ ಪ್ರತಿಧ್ವನಿಸಿತು.

ತತೋ ದೇಶೇ ಸಮೇ ಸ್ನಿಗ್ಧೇ ಪ್ರಭೂತಯವಸೇಂಧನೇ ।
ನಿವೇಶಯಾಮಾಸ ತತಃ ಸೇನಾಂ ರಾಜಾ ಯುಧಿಷ್ಠಿರಃ ॥೮೨॥

ಅನಂತರ ಒಂದು ಸಮತಟ್ಟಾದ, ಗಟ್ಟಿಯಾದ, ಬಹಳ ಮೇವು ಮತ್ತು ಕಟ್ಟಿಗೆಗಳಿರುವ ಪ್ರದೇಶದಲ್ಲಿ ರಾಜನಾದ ಯುಧಿಷ್ಠಿರನು ತನ್ನ ಸೈನ್ಯವನ್ನು ನಿಲ್ಲಿಸಿದನು.

ಪರಿಹೃತ್ಯ ಶ್ಮಶಾನಾನಿ ದೇವತಾಯತನಾನಿ ಚ ।
ಆಶ್ರಮಾಂಶ್ಚ ಮಹರ್ಷೀಣಾಂ ತೀರ್ಥಾನ್ಯಾಯತನಾನಿ ಚ ॥೮೩॥

ಮಧುರೇಽನೂಷರೇ ದೇಶೇ ಶಿವೇ ಪುಣ್ಯೇ ಮಹೀಪತಿಃ ।
ನಿವೇಶಂ ಕಾರಯಾಮಾಸ ಕುಂತೀಪುತ್ರೋ ಯುಧಿಷ್ಠಿರಃ ॥೮೪॥

ಸ್ಮಶಾನಗಳನ್ನೂ, ದೇವಾಲಯಗಳನ್ನೂ, ಮಹರ್ಷಿಗಳ ಆಶ್ರಮಗಳನ್ನೂ, ತೀರ್ಥಗಳನ್ನೂ ದೂರದಲ್ಲಿಟ್ಟು, ಮರುಭೂಮಿಯಲ್ಲದ ಮಧುರವಾದ ಒಂದು ಮಂಗಳವಾದ, ಪುಣ್ಯಕರವಾದ ಪ್ರದೇಶದಲ್ಲಿ ಕುಂತೀಪುತ್ರನಾದ ಯುಧಿಷ್ಠಿರ ರಾಜನು ತನ್ನ ಸೈನ್ಯದ ನಿವೇಶವನ್ನು ಮಾಡಿಸಿದನು (ಬೀಡುಬಿಟ್ಟನು).

ತತಶ್ಚ ಪುನರುತ್ಥಾಯ ಸುಖೀ ವಿಶ್ರಾಂತವಾಹನಃ ।
ಪ್ರಯಯೌ ಪೃಥಿವೀಪಾಲೈಃ ವೃತಃ ಶತಸಹಸ್ರಶಃ ॥೮೫॥

ಅನಂತರ ವಾಹನಗಳಿಗೆ ವಿಶ್ರಾಂತಿಯನ್ನು ನೀಡಿ, ತಾನೂ ಸ್ವಲ್ಪ ಮಲಗಿ ಎದ್ದು ಸುಖದಿಂದ ಕೂಡಿದವನಾಗಿ, ನೂರಾರು ಸಾವಿರಾರು ರಾಜರಿಂದ ವೃತನಾಗಿ (ಕ್ಷೇತ್ರವನ್ನು ಪರೀಕ್ಷೆ ಮಾಡುವುದಕ್ಕೆ) ಹೊರಟನು.

ವಿದ್ರಾವ್ಯ ಶತಶೋ ಗುಲ್ಮಾನ್ ಧಾರ್ತರಾಷ್ಟ್ರಸ್ಯ ಸೈನಿಕಾನ್ ।
ಪರ್ಯಕ್ರಾಮತ್ ಸಮಂತಾಚ್ಚ ಪಾರ್ಥೇನ ಸಹ ಕೇಶವಃ ॥೮೬॥

ನೂರಾರು ಪೊದೆಗಳನ್ನು ಧ್ವಂಸ ಮಾಡಿ, ದುರ್ಯೋಧನನ ಸೈನಿಕರನ್ನು ಓಡಿಸಿ, ಅರ್ಜುನ ಮತ್ತು ಕೃಷ್ಣನ ಜೊತೆಯಲ್ಲಿ ಕುರುಕ್ಷೇತ್ರದ ಎಲ್ಲ ಕಡೆಯಲ್ಲಿಯೂ ತಿರುಗಾಡಿದನು.

ಶಿಬಿರಂ ಮಾಪಯಾಮಾಸ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಸಾತ್ಯಕಿಶ್ಚ ರಥೋದಾರೋ ಯುಯುಧಾನಃ ಪ್ರತಾಪವಾನ್ ॥೮೭॥

ದ್ರುಪದನ ಮಗನಾದ ಧೃಷ್ಟದ್ಯುಮ್ನನೂ ಮತ್ತು ಶ್ರೇಷ್ಠರಥನೂ, ಪ್ರತಾಪಶಾಲಿಯೂ, ಸತ್ಯಕನ ಮಗನೂ ಆದ ಯುಯುಧಾನನೂ ಕುರುಕ್ಷೇತ್ರವನ್ನು ಅಳತೆ ಮಾಡಿದರು.

ಆಸಾದ್ಯ ಸರಿತಂ ಪುಣ್ಯಾಂ ಕುರುಕ್ಷೇತ್ರೇ ಹಿರಣ್ವತೀಮ್ ।
ಸೂಪತೀರ್ಥಾಂ ಶುಚಿಜಲಾಂ ಶರ್ಕರಾಪಂಕವರ್ಜಿತಾಮ್ ॥೮೮॥

ಖಾನಯಾಮಾಸ ಪರಿಖಾಂ ಕೇಶವಸ್ತತ್ರ ಭಾರತ ।
ಗುಪ್ತ್ಯರ್ಥಮಪಿ ಚಾದಿಶ್ಯ ಬಲಂ ತತ್ರ ನ್ಯವೇಶಯತ್ ॥೮೯॥

ಕುರುಕ್ಷೇತ್ರದಲ್ಲಿ ಪವಿತ್ರವಾದ ಹತ್ತಿರದಲ್ಲಿ ಅನೇಕ ತೀರ್ಥಗಳಿರುವ, ಶುಚಿಯಾದ ಜಲವನ್ನು ಹೊಂದಿರುವ, ಕೆಸರು ಮತ್ತು ಮರಳುಗಳಿಂದ ವರ್ಜಿತವಾದ ಹಿರಣ್ವತೀ ನದಿಯನ್ನು ಸಮೀಪಿಸಿ, ಅಲ್ಲಿ ಸೈನ್ಯದ ರಕ್ಷಣೆಗಾಗಿ ಕೇಶವನು ಕಂದಕವನ್ನು ತೋಡಿಸಿದನು. ಎಲೈ ಭಾರತನೇ, ಸೈನ್ಯದ ರಕ್ಷಣೆಗಾಗಿ ಅಲ್ಲಿ ಒಂದು ಸೈನ್ಯದ ಭಾಗವನ್ನೂ ಇಟ್ಟನು.

ವಿಧಿರ್ಯಃ ಶಿಬಿರಸ್ಯಾಸೀತ್ ಪಾಂಡವಾನಾಂ ಮಹಾತ್ಮನಾಮ್ ।
ತದ್ವಿಧಾನಂ ನರೇಂದ್ರಾಣಾಂ ಕಾರಯಾಮಾಸ ಕೇಶವಃ ॥೯೦॥

ಮಹಾತ್ಮರಾದ ಪಾಂಡವರ ಶಿಬಿರವನ್ನು ನಿರ್ಮಾಣ ಮಾಡಲು ಯಾವ ವಿಧಾನವನ್ನು ಅನುಸರಿಸಿದನೋ, ಕೃಷ್ಣನು ಅದೇ ವಿಧಾನವನ್ನು ಉಳಿದ ರಾಜರ ಶಿಬಿರಗಳನ್ನು ನಿರ್ಮಿಸುವಾಗಲೂ ಅನುಸರಿಸಿದನು.

ಪ್ರಭೂತಜಲಕಾಷ್ಠಾನಿ ಸುದುರ್ಧರ್ಷತರಾಣಿ ಚ ।
ಭಕ್ಷ್ಯಭೋಜ್ಯಾನ್ನಪಾನಾನಿ ಶತಶೋಽಥ ಸಹಸ್ರಶಃ ॥೯೧॥

ಶಿಬಿರಾಣಿ ಮಹಾರ್ಹಾಣಿ ರಾಜ್ಞಾಂ ತತ್ರ ಪೃಥಕ್ ಪೃಥಕ್ ।
ವಿಮಾನಾನೀವ ರಾಜೇಂದ್ರ ನಿವಿಷ್ಟಾನಿ ಮಹೀತಲೇ ॥೯೨॥

ಎಲೈ ರಾಜೇಂದ್ರನೇ, ಸಮೃದ್ಧವಾದ ಜಲ-ಕಾಷ್ಠಗಳಿಂದ ಕೂಡಿದ, ಭಕ್ಷ್ಯ-ಭೋಜ್ಯ ಅನ್ನ-ಪಾನಾದಿಗಳಿಂದ ಕೂಡಿದ, ಯಾರೂ ನುಗ್ಗಲಾರದ, ಬಹಳ ಬೆಲೆ ಬಾಳುವ, ನೂರಾರು ಸಾವಿರಾರು ರಾಜಶಿಬಿರಗಳು ಅಲ್ಲಲ್ಲಿ ಭೂಮಿಯಲ್ಲಿ ವಿಮಾನಗಳಂತೆ (ಉಪ್ಪರಿಗೆ ಮನೆಗಳಂತೆ) ನಿರ್ಮಿಸಲ್ಪಟ್ಟವು.

ತತ್ರಾಸನ್ ಶಿಲ್ಪಿನಃ ಪ್ರಾಜ್ಞಾ ಬಹುಶೋ ದತ್ತವೇತನಾಃ ।
ಸರ್ವೋಪಕರಣೈರ್ಯುಕ್ತಾ ವೈದ್ಯಾಃ ಶಾಸ್ತ್ರವಿಶಾರದಾಃ ॥೯೩॥

ಅಲ್ಲಿ ಬಹಳ ವೇತನವನ್ನು ಕೊಟ್ಟು ಇಟ್ಟುಕೊಂಡಿದ್ದ ನಿಪುಣರಾದ ಶಿಲ್ಪಿಗಳು, ಸರ್ವೋಪಕರಣ ಯುಕ್ತರಾದ ವೈದ್ಯರು ಮತ್ತು ಶಾಸ್ತ್ರವಿಶಾರದರೂ ಇದ್ದರು.

ಜ್ಯಾಧನುರ್ವರ್ಮಶಸ್ತ್ರಾಣಾಂ ತಥೈವ ಮಧುಸರ್ಪಿಷೋಃ ।
ಸಸರ್ಜರಸಪಾಂಸೂನಾಂ ರಾಶಯಃ ಪರ್ವತೋಪಮಾಃ ॥೯೪॥

ಹೆದೆಗಳು, ಧನುಸ್ಸುಗಳು, ಕವಚಗಳು, ಶಸ್ತ್ರಗಳು, ಹಾಗೆಯೇ ಮಧು, ಘೃತ, ಸರ್ಜರಸ, ಮಣ್ಣು- ಇವುಗಳ ರಾಶಿಯು ಪರ್ವತಕ್ಕೆ ಸದೃಶವಾಗಿದ್ದಿತು.

ಬಹೂದಕಂ ಸುಯವಸಂ ತುಷಾಂಗಾರಸಮನ್ವಿತಮ್ ।
ಶಿಬಿರೇ ಶಿಬಿರೇ ರಾಜಾ ಸಂಚಕಾರ ಯುಧಿಷ್ಠಿರಃ ॥೯೫॥

ರಾಜನಾದ ಯುಧಿಷ್ಠಿರನು ಪ್ರತಿ ಶಿಬಿರದಲ್ಲಿಯೂ ಬಹಳ ನೀರು ಮತ್ತು ಮೇವು ಇರುವಂತೆ, ಹೊಟ್ಟುಗಳು ಮತ್ತು ಅಗ್ನಿ ಇರುವಂತೆ ವ್ಯವಸ್ಥೆ ಮಾಡಿದನು.

ಅನಂತರ ವಾಹನಗಳಿಗೆ ವಿಶ್ರಾಂತಿಯನ್ನು ನೀಡಿ, ತಾನೂ ಸ್ವಲ್ಪ ಮಲಗಿ ಎದ್ದು ಸುಖದಿಂದ ಕೂಡಿದವನಾಗಿ, ನೂರಾರು ಸಾವಿರಾರು ರಾಜರಿಂದ ವೃತನಾಗಿ (ಕ್ಷೇತ್ರವನ್ನು ಪರೀಕ್ಷೆ ಮಾಡುವುದಕ್ಕೆ) ಹೊರಟನು.

ವಿದ್ರಾವ್ಯ ಶತಶೋ ಗುಲ್ಮಾನ್ ಧಾರ್ತರಾಷ್ಟ್ರಸ್ಯ ಸೈನಿಕಾನ್ ।
ಪರ್ಯಕ್ರಾಮತ್ ಸಮಂತಾಚ್ಚ ಪಾರ್ಥೇನ ಸಹ ಕೇಶವಃ ॥೮೬॥

ನೂರಾರು ಪೊದೆಗಳನ್ನು ಧ್ವಂಸ ಮಾಡಿ, ದುರ್ಯೋಧನನ ಸೈನಿಕರನ್ನು ಓಡಿಸಿ, ಅರ್ಜುನ ಮತ್ತು ಕೃಷ್ಣನ ಜೊತೆಯಲ್ಲಿ ಕುರುಕ್ಷೇತ್ರದ ಎಲ್ಲ ಕಡೆಯಲ್ಲಿಯೂ ತಿರುಗಾಡಿದನು.

ಶಿಬಿರಂ ಮಾಪಯಾಮಾಸ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಸಾತ್ಯಕಿಶ್ಚ ರಥೋದಾರೋ ಯುಯುಧಾನಃ ಪ್ರತಾಪವಾನ್ ॥೮೭॥

ದ್ರುಪದನ ಮಗನಾದ ಧೃಷ್ಟದ್ಯುಮ್ನನೂ ಮತ್ತು ಶ್ರೇಷ್ಠರಥನೂ, ಪ್ರತಾಪಶಾಲಿಯೂ, ಸತ್ಯಕನ ಮಗನೂ ಆದ ಯುಯುಧಾನನೂ ಕುರುಕ್ಷೇತ್ರವನ್ನು ಅಳತೆ ಮಾಡಿದರು.

ಆಸಾದ್ಯ ಸರಿತಂ ಪುಣ್ಯಾಂ ಕುರುಕ್ಷೇತ್ರೇ ಹಿರಣ್ವತೀಮ್ ।
ಸೂಪತೀರ್ಥಾಂ ಶುಚಿಜಲಾಂ ಶರ್ಕರಾಪಂಕವರ್ಜಿತಾಮ್ ॥೮೮॥

ಖಾನಯಾಮಾಸ ಪರಿಖಾಂ ಕೇಶವಸ್ತತ್ರ ಭಾರತ ।
ಗುಪ್ತ್ಯರ್ಥಮಪಿ ಚಾದಿಶ್ಯ ಬಲಂ ತತ್ರ ನ್ಯವೇಶಯತ್ ॥೮೯॥

ಕುರುಕ್ಷೇತ್ರದಲ್ಲಿ ಪವಿತ್ರವಾದ ಹತ್ತಿರದಲ್ಲಿ ಅನೇಕ ತೀರ್ಥಗಳಿರುವ, ಶುಚಿಯಾದ ಜಲವನ್ನು ಹೊಂದಿರುವ, ಕೆಸರು ಮತ್ತು ಮರಳುಗಳಿಂದ ವರ್ಜಿತವಾದ ಹಿರಣ್ವತೀ ನದಿಯನ್ನು ಸಮೀಪಿಸಿ, ಅಲ್ಲಿ ಸೈನ್ಯದ ರಕ್ಷಣೆಗಾಗಿ ಕೇಶವನು ಕಂದಕವನ್ನು ತೋಡಿಸಿದನು. ಎಲೈ ಭಾರತನೇ, ಸೈನ್ಯದ ರಕ್ಷಣೆಗಾಗಿ ಅಲ್ಲಿ ಒಂದು ಸೈನ್ಯದ ಭಾಗವನ್ನೂ ಇಟ್ಟನು.

ವಿಧಿರ್ಯಃ ಶಿಬಿರಸ್ಯಾಸೀತ್ ಪಾಂಡವಾನಾಂ ಮಹಾತ್ಮನಾಮ್ ।
ತದ್ವಿಧಾನಂ ನರೇಂದ್ರಾಣಾಂ ಕಾರಯಾಮಾಸ ಕೇಶವಃ ॥೯೦॥

ಮಹಾತ್ಮರಾದ ಪಾಂಡವರ ಶಿಬಿರವನ್ನು ನಿರ್ಮಾಣ ಮಾಡಲು ಯಾವ ವಿಧಾನವನ್ನು ಅನುಸರಿಸಿದನೋ, ಕೃಷ್ಣನು ಅದೇ ವಿಧಾನವನ್ನು ಉಳಿದ ರಾಜರ ಶಿಬಿರಗಳನ್ನು ನಿರ್ಮಿಸುವಾಗಲೂ ಅನುಸರಿಸಿದನು.

ಪ್ರಭೂತಜಲಕಾಷ್ಠಾನಿ ಸುದುರ್ಧರ್ಷತರಾಣಿ ಚ ।
ಭಕ್ಷ್ಯಭೋಜ್ಯಾನ್ನಪಾನಾನಿ ಶತಶೋಽಥ ಸಹಸ್ರಶಃ ॥೯೧॥

ಶಿಬಿರಾಣಿ ಮಹಾರ್ಹಾಣಿ ರಾಜ್ಞಾಂ ತತ್ರ ಪೃಥಕ್ ಪೃಥಕ್ ।
ವಿಮಾನಾನೀವ ರಾಜೇಂದ್ರ ನಿವಿಷ್ಟಾನಿ ಮಹೀತಳೇ ॥೯೨॥

ಎಲೈ ರಾಜೇಂದ್ರನೇ, ಸಮೃದ್ಧವಾದ ಜಲ-ಕಾಷ್ಠಗಳಿಂದ ಕೂಡಿದ, ಭಕ್ಷ್ಯ-ಭೋಜ್ಯ ಅನ್ನ-ಪಾನಾದಿಗಳಿಂದ ಕೂಡಿದ, ಯಾರೂ ನುಗ್ಗಲಾರದ, ಬಹಳ ಬೆಲೆ ಬಾಳುವ, ನೂರಾರು ಸಾವಿರಾರು ರಾಜಶಿಬಿರಗಳು ಅಲ್ಲಲ್ಲಿ ಭೂಮಿಯಲ್ಲಿ ವಿಮಾನಗಳಂತೆ (ಉಪ್ಪರಿಗೆ ಮನೆಗಳಂತೆ) ನಿರ್ಮಿಸಲ್ಪಟ್ಟವು.

ತತ್ರಾಸನ್ ಶಿಲ್ಪಿನಃ ಪ್ರಾಜ್ಞಾ ಬಹುಶೋ ದತ್ತವೇತನಾಃ ।
ಸರ್ವೋಪಕರಣೈರ್ಯುಕ್ತಾ ವೈದ್ಯಾಃ ಶಾಸ್ತ್ರವಿಶಾರದಾಃ ॥೯೩॥

ಅಲ್ಲಿ ಬಹಳ ವೇತನವನ್ನು ಕೊಟ್ಟು ಇಟ್ಟುಕೊಂಡಿದ್ದ ನಿಪುಣರಾದ ಶಿಲ್ಪಿಗಳು, ಸರ್ವೋಪಕರಣ ಯುಕ್ತರಾದ ವೈದ್ಯರು ಮತ್ತು ಶಾಸ್ತ್ರವಿಶಾರದರೂ ಇದ್ದರು.

ಜ್ಯಾಧನುರ್ವರ್ಮಶಸ್ತ್ರಾಣಾಂ ತಥೈವ ಮಧುಸರ್ಪಿಷೋಃ ।
ಸಸರ್ಜರಸಪಾಂಸೂನಾಂ ರಾಶಯಃ ಪರ್ವತೋಪಮಾಃ ॥೯೪॥

ಹೆದೆಗಳು, ಧನುಸ್ಸುಗಳು, ಕವಚಗಳು, ಶಸ್ತ್ರಗಳು, ಹಾಗೆಯೇ ಮಧು, ಘೃತ, ಸರ್ಜರಸ, ಮಣ್ಣು- ಇವುಗಳ ರಾಶಿಯು ಪರ್ವತಕ್ಕೆ ಸದೃಶವಾಗಿದ್ದಿತು.

ಬಹೂದಕಂ ಸುಯವಸಂ ತುಷಾಂಗಾರಸಮನ್ವಿತಮ್ ।
ಶಿಬಿರೇ ಶಿಬಿರೇ ರಾಜಾ ಸಂಚಕಾರ ಯುಧಿಷ್ಠಿರಃ ॥೯೫॥

ರಾಜನಾದ ಯುಧಿಷ್ಠಿರನು ಪ್ರತಿ ಶಿಬಿರದಲ್ಲಿಯೂ ಬಹಳ ನೀರು ಮತ್ತು ಮೇವು ಇರುವಂತೆ, ಹೊಟ್ಟುಗಳು ಮತ್ತು ಅಗ್ನಿ ಇರುವಂತೆ ವ್ಯವಸ್ಥೆ ಮಾಡಿದನು.

ಮಹಾಯಂತ್ರಾಣಿ ನಾರಾಚಾಃ ತೋಮರಾಣಿ ಪರಶ್ವಧಾಃ ।
ಧನೂಂಷಿ ಕವಚಾದೀನಿ ಸಂಬಭೂವುರ್ನೃಣಾಂ ತದಾ ॥೯೬॥

ಮಹಾಯಂತ್ರಗಳೂ, ಬಾಣಗಳೂ, ತೋಮರಗಳೂ, ಪರಶ್ವಧಗಳೂ, ಧನುಸ್ಸುಗಳೂ, ಕವಚಗಳೂ ಆಗ ಎಲ್ಲ ಯೋಧರಿಗೂ ತಲುಪಿದವು.

ಗಜಾಃ ಕಂಟಕಸನ್ನಾಹಾ ಲೋಹವರ್ಮೋತ್ತರಚ್ಛದಾಃ ।
ದೃಶ್ಯಂತೇ ತತ್ರ ಗಿರ್ಯಾಭಾಃ ಶತಶೋಽಥ ಸಹಸ್ರಶಃ ॥೯೭॥

ಕಂಟಕಗಳಿಂದ ಕೂಡಿದ ಹೊದಿಕೆಗಳುಳ್ಳ ಲೋಹಮಯವಾದ ಕವಚರೂಪವಾದ ಹೊದಿಕೆಯನ್ನು ಧರಿಸಿದ ಗಜಗಳು ಪರ್ವತದಂತೆ ನೂರಾರು ಸಹಸ್ರಾರು ಸಂಖ್ಯೆಯಲ್ಲಿ ಅಲ್ಲಿ ಕಂಡುಬಂದವು.

ನಿವಿಷ್ಟಾನ್ ಪಾಂಡವಾಂಸ್ತತ್ರ ಜ್ಞಾತ್ವಾ ಮಿತ್ರಾಣಿ ಭಾರತ ।
ಅಭಿಜಗ್ಮುರ್ಯಥೋದ್ದೇಶಂ ಸಬಲಾಃ ಸಪದಾನುಗಾಃ ॥೯೮॥

ಎಲೈ ಭಾರತನೇ, ಅಲ್ಲಿ ಪಾಂಡವರು ತಲುಪಿದುದನ್ನು ತಿಳಿದ ಮಿತ್ರರು ತಮ್ಮ ಸೈನ್ಯ ಮತ್ತು ಪರಿವಾರದೊಂದಿಗೆ ಅಲ್ಲಿಗೆ ಪ್ರಾಪ್ತರಾದರು.

ಚರಿತಬ್ರಹ್ಮಚರ್ಯಾಸ್ತೇ ಸೋಮಪಾ ಭೂರಿದಕ್ಷಿಣಾಃ ।
ಜಯಾಯ ಪಾಂಡುಪುತ್ರಾಣಾಂ ಸಮಾಜಗ್ಮುರ್ಮಹೀಕ್ಷಿತಃ ॥೯೯॥

ಬ್ರಹ್ಮಚರ್ಯವ್ರತವನ್ನು ಮಾಡಿದ, ಭೂರಿದಕ್ಷಿಣೆಯನ್ನು ಕೊಟ್ಟ, ಯಜ್ಞವನ್ನು ಮಾಡಿ ಸೋಮಪಾನವನ್ನು ಮಾಡಿದ ರಾಜರು ಪಾಂಡುಪುತ್ರರ ಜಯಕ್ಕಾಗಿ ಅಲ್ಲಿ ಬಂದು ಸೇರಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಾಶೋತ್ತರಶತತಮೋಽಧ್ಯಾಯಃ ॥

॥ ಸೈನ್ಯನಿರ್ಯಾಣಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂದನೆಯ ಅಧ್ಯಾಯ

ಕರ್ಣನನ್ನು ಮುಂದೆ ಮಾಡಿಕೊಂಡು ದುರ್ಯೋಧನನಿಂದ ಯುದ್ಧ ಸನ್ನಾಹ.

ಜನಮೇಜಯಃ

ಯುಧಿಷ್ಠಿರಂ ಸಹಾನೀಕಮುಪಾಯಾಂತಂ ಯುಯುತ್ಸಯಾ ।
ಸನ್ನಿವಿಷ್ಟಂ ಕುರುಕ್ಷೇತ್ರೇ ವಾಸುದೇವೇನ ಪಾಲಿತಮ್ ॥೧॥

ವಿರಾಟದ್ರುಪದಾಭ್ಯಾಂ ಚ ಸಪುತ್ರಾಭ್ಯಾಂ ಸಮನ್ವಿತಮ್ ।
ಕೇಕಯೈರ್ವೃಷ್ಣಿಭಿಶ್ಚೈವ ಪಾರ್ಥಿವೈಃ ಶತಶೋ ವೃತಮ್ ॥೨॥

ಮಹೇಂದ್ರಮಿವ ಚಾದಿತ್ಯೈರಭಿಗುಪ್ತಂ ಮಹಾರಥೈಃ ।
ಶ್ರುತ್ವಾ ದುರ್ಯೋಧನೋ ರಾಜಾ ಕಿಂ ಕಾರ್ಯಂ ಪ್ರತ್ಯಪದ್ಯತ ॥೩॥

ಜನಮೇಜಯ– ಯುದ್ಧವನ್ನು ಮಾಡುವ ಇಚ್ಛೆಯಿಂದ ಕುರುಕ್ಷೇತ್ರಕ್ಕೆ ಬಂದು ಬೀಡುಬಿಟ್ಟ, ಕೃಷ್ಣನಿಂದ ರಕ್ಷಿತನಾದ, ಪುತ್ರಸಹಿತರಾದ ವಿರಾಟ-ದ್ರುಪದರಿಂದ ಕೂಡಿದ, ಕೇಕಯರು, ವೃಷ್ಣಿಗಳು ಮೊದಲಾಗ ನೂರಾರು ರಾಜರಿಂದ ಕೂಡಿದ, ಅದಿತಿ ಪುತ್ರರಿಂದ ಮಹೇಂದ್ರನು ರಕ್ಷಿಸಲ್ಪಟ್ಟಂತೆ, ಮಹಾರಥರಿಂದ ರಕ್ಷಿತನಾದ ಯುಧಿಷ್ಠಿರನನ್ನು ತಿಳಿದು ರಾಜನಾದ ದುರ್ಯೋಧನನು ಏನು ಕಾರ್ಯವನ್ನು ಮಾಡಿದನು?

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ಮಹಾಮತೇ ।
ಸಂಭ್ರಮೇ ತುಮುಲೇ ತಸ್ಮಿನ್ ಯದಾಸೀತ್ ಕುರುಜಾಂಗಲೇ ॥೪॥

ಎಲೈ ಮಹಾಮತಿಯೇ, ಆ ತೀವ್ರವಾದ ಸಂಭ್ರಮದ ಸಮಯದಲ್ಲಿ ಕುರುಜಾಂಗಲದಲ್ಲಿ ಏನು ನಡೆಯಿತೆಂದು ವಿಸ್ತಾರವಾಗಿ ಕೇಳಲು ನಾನು ಬಯಸುತ್ತೇನೆ.

ವ್ಯಥಯೇಯುರಿಮೇ ದೇವಾನ್ ಸೇಂದ್ರಾನಪಿ ಸಮಾಗಮೇ ।
ಪಾಂಡವಾ ವಾಸುದೇವಶ್ಚ ವಿರಾಟದ್ರುಪದೌ ತಥಾ ॥೫॥

ಪಾಂಡವರು, ಕೃಷ್ಣ ಮತ್ತು ಹಾಗೆಯೇ ವಿರಾಟ-ದ್ರುಪದರು ಸಮಾಗಮದಲ್ಲಿ ಇಂದ್ರನಿಂದ ಸಹಿತರಾದ ದೇವತೆಗಳಿಗೂ ವ್ಯಥೆಯನ್ನು ಉಂಟುಮಾಡಿಯಾರು!

ಧೃಷ್ಟದ್ಯುಮ್ನಶ್ಚ ಪಾಂಚಾಲ್ಯಃ ಶಿಖಂಡೀ ಚ ಮಹಾರಥಃ ।
ಯುಧಾಮನ್ಯುಶ್ಚ ವಿಕ್ರಾಂತೋ ದೇವೈರಪಿ ದುರಾಸದಃ ॥೬॥

ಪಾಂಚಾಲದೇಶದ ಧೃಷ್ಟದ್ಯುಮ್ನನೂ, ಮಹಾರಥನಾದ ಶಿಖಂಡಿಯೂ, ಪರಾಕ್ರಮಶಾಲಿಯಾದ ಯುಧಾಮನ್ಯುವೂ ಸಹ ದೇವತೆಗಳಿಂದಲೂ ಸಮೀಪಿಸಲ್ಪಡಲು ಸಾಧ್ಯವಿಲ್ಲದವರು.

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ತಪೋಧನ ।
ಕುರೂಣಾಂ ಪಾಂಡವಾನಾಂ ಚ ಯದ್ಯದಾಸೀದ್ ವಿಚೇಷ್ಟಿತಮ್ ॥೭॥

ಎಲೈ ತಪೋಧನರೇ, ಕೌರವರು ಮತ್ತು ಪಾಂಡವರು ಆಗ ಯಾವ ಕ್ರಿಯೆಗಳನ್ನು ಮಾಡಿದರು ಎಂದು ಕೇಳಲು ನಾನು ಇಚ್ಛೆಪಡುತ್ತೇನೆ.

ವೈಶಂಪಾಯನಃ

ಪ್ರತಿಯಾತೇ ತು ದಾಶಾರ್ಹೇ ರಾಜಾ ದುರ್ಯೋಧನಸ್ತದಾ ।
ಕರ್ಣಂ ದುಃಶಾಸನಂ ಚೈವ ಶಕುನಿಂ ಚಾಬ್ರವೀದಿದಮ್ ॥೮॥

ವೈಶಂಪಾಯನ– ದಾಶಾರ್ಹನಾದ ಕೃಷ್ಣನು ಹಿಂದಿರುಗಿದ ಮೇಲೆ ರಾಜನಾದ ದುರ್ಯೋಧನನು ಕರ್ಣನನ್ನೂ, ದುಶ್ಶಾಸನನನ್ನೂ ಮತ್ತು ಶಕುನಿಯನ್ನೂ ಕುರಿತು ಹೀಗೆ ಮಾತನಾಡಿದನು.

ಅಕೃತೇನೈವ ಕಾರ್ಯೇಣ ಗತಃ ಪಾರ್ಥಾನಧೋಕ್ಷಜಃ ।
ಸ ಏನಾನ್ ಮನ್ಯುನಾऽऽವಿಷ್ಟೋ ಧ್ರುವಂ ಧಕ್ಷ್ಯತ್ಯಸಂಶಯಮ್ ॥೯॥

ತನ್ನ ಕಾರ್ಯವು ಸಿದ್ಧಿಸದೇ ಕೃಷ್ಣನು ಪಾಂಡವರ ಬಳಿಗೆ ಹಿಂದಿರುಗಿದ್ದಾನೆ. ಕೋಪದಿಂದ ಕೂಡಿರುವ ಅವನು ನಮ್ಮ ಸಹಾಯಕ್ಕೆ ಬಂದಿರುವ ಈ ರಾಜರನ್ನು ನಿಸ್ಸಂಶಯವಾಗಿ ದಹಿಸುವನು.

ಇಷ್ಟೋ ಹಿ ವಾಸುದೇವಸ್ಯ ಪಾಂಡವೈರ್ಮಮ ವಿಗ್ರಹಃ ।
ಭೀಮಸೇನಾರ್ಜುನೌ ಚೈವ ದಾಶಾರ್ಹಸ್ಯ ಮತೇ ಸ್ಥಿತೌ ॥೧೦॥

ಕೃಷ್ಣನಿಗೆ, ಪಾಂಡವರಿಗೂ ಮತ್ತು ನನಗೂ ಯುದ್ಧವು ನಡೆಯುವುದು ಇಷ್ಟವಾದುದು. ಭೀಮಸೇನಾರ್ಜುನರು ಯಾವಾಗಲೂ ಕೃಷ್ಣನ ಅಭಿಪ್ರಾಯದಂತೆಯೇ ನಡೆದುಕೊಳ್ಳುವವರು.

ಅಜಾತಶತ್ರುರತ್ಯರ್ಥಂ ಭೀಮಾರ್ಜುನವಶಾನುಗಃ ।
ನಿಕೃತಶ್ಚ ಮಯಾ ಪೂರ್ವಂ ಸಹ ಸರ್ವೈಃ ಸಹೋದರೈಃ ॥೧೧॥

ಅಜಾತಶತ್ರುವಾದ ಯುಧಿಷ್ಠಿರನು ಬಹಳವಾಗಿ ಭೀಮಾರ್ಜುನರ ವಶವರ್ತಿಯಾಗಿದ್ದಾನೆ. ಅವನಿಗೂ ಮತ್ತು ಅವನ ಸೋದರರಿಗೂ ನಾನು ಹಿಂದೆ ಅನೇಕ ಅಪಚಾರಗಳನ್ನು ಮಾಡಿದ್ದೇನೆ.

ವಿರಾಟದ್ರುಪದೌ ಚೈವ ಕೃತವೈರೌ ಮಯಾ ಸಹ ।
ತೌ ಚ ಸೇನಾಪ್ರಣೇತಾರೌ ವಾಸುದೇವವಶಾನುಗೌ ॥೧೨॥

ನಾನು ಹಿಂದೆ ವಿರಾಟ-ದ್ರುಪದರ ಜೊತೆಯಲ್ಲಿಯೂ ವೈರವನ್ನು ಮಾಡಿದ್ದೇನೆ. ಕೃಷ್ಣನ ವಶವರ್ತಿಗಳಾದ ಅವರು ಪಾಂಡವರ ಸೇನಾನಾಯಕರಾಗುವರು.

ಭವಿತಾ ವಿಗ್ರಹಃ ಸೋಽಯಂ ತುಮುಲೋ ರೋಮಹರ್ಷಣಃ ।
ತಸ್ಮಾತ್ ಸಾಂಗ್ರಾಮಿಕಂ ಸರ್ವಂ ಕಾರಯಧ್ವಮತಂದ್ರಿತಾಃ ॥೧೩॥

ಆದ್ದರಿಂದ ತೀವ್ರವೂ, ರೋಮಾಂಚಕಾರಿಯೂ ಆದ ಈ ಯುದ್ಧವು ಸಂಭವಿಸುವುದು. ಆದ್ದರಿಂದ ಆಲಸ್ಯವನ್ನು ಮಾಡದೆ ಯುದ್ಧದ ಎಲ್ಲಾ ಸಲಕರಣೆಗಳನ್ನೂ ಸಜ್ಜುಗೊಳಿಸಿ.

ಶಿಬಿರಾಣಿ ಕುರುಕ್ಷೇತ್ರೇ ಕ್ರಿಯಂತಾಂ ವಸುಧಾಧಿಪಾಃ ।
ಸುಪರ್ಯಾಪ್ತಾವಕಾಶಾನಿ ದುರಾದೇಯಾನಿ ಶತ್ರುಭಿಃ ॥೧೪॥

ಆಸನ್ನಜಲಕೋಷ್ಠಾನಿ ಶತಶೋಽಥ ಸಹಸ್ರಶಃ ।
ಅಚ್ಛೇದ್ಯಾಹಾರಮಾರ್ಗಾಣಿ ರತ್ನೋಚ್ಚ್ರಯಚಿತಾನಿ ಚ ॥೧೫॥

ವಿವಿಧಾಯುಧಪೂರ್ಣಾನಿ ಪತಾಕಾಧ್ವಜವಂತಿ ಚ ।

ಎಲೈ ರಾಜರೇ, ಕುರುಕ್ಷೇತ್ರದಲ್ಲಿ ಶತ್ರುಗಳು ಸಮೀಪಿಸಲಾರದ, ಮಧ್ಯೆ ಮಧ್ಯೆ ಒಳ್ಳೆಯ ಅವಕಾಶವಿರುವ, ಜಲಾಶಯದ ಸಮೀಪದಲ್ಲಿರುವಂತೆ ನೂರಾರು ಸಾವಿರಾರು ಶಿಬಿರಗಳನ್ನು ನಿರ್ಮಿಸಿ. ಆಹಾರಮಾರ್ಗಗಳು ಅಚ್ಛೇದ್ಯವಾಗಿರಬೇಕು. ಶಿಬಿರಗಳು ರತ್ನರಾಶಿಗಳಿಂದಲೂ, ಅನೇಕ ವಿಧವಾದ ಆಯುಧಗಳಿಂದಲೂ ಮತ್ತು ಪತಾಕೆ ಧ್ವಜಗಳಿಂದಲೂ ಪೂರ್ಣವಾಗಿರಬೇಕು.

ಸಮಾಶ್ಚ ತೇಷಾಂ ಪಂಥಾನಃ ಕ್ರಿಯಂತಾಂ ನಗರಾದ್ ಬಹಿಃ ॥೧೬॥

ಪ್ರಯಾಣಂ ಘುಷ್ಯತಾಮದ್ಯ ಶ್ವೋಭೂತ ಇತಿ ಮಾಚಿರಮ್ ॥೧೭॥

ಅಲ್ಲಿಗೆ ಹೋಗುವ ನಗರದ ಹೊರಗಿನ ಮಾರ್ಗವನ್ನು ಸಮತಟ್ಟಾಗಿ ಮಾಡಿ. ನಾಳೆ ಪ್ರಯಾಣವೆಂದು ಈ ದಿನವೇ ಘೋಷಣೆ ಮಾಡಿ, ತಡ ಮಾಡಬೇಡಿ.

ವೈಶಂಪಾಯನಃ

ತೇ ತಥೇತಿ ಪ್ರತಿಜ್ಞಾಯ ಶ್ವೋಭೂತೇ ಚಕ್ರಿರೇ ತಥಾ ।
ಹೃಷ್ಟರೂಪಾ ಮಹಾತ್ಮಾನೋ ನಿವಾಸಾಯ ಮಹೀಕ್ಷಿತಾಮ್ ॥೧೮॥

ವೈಶಂಪಾಯನ– ಮಹಾತ್ಮರೂ, ಸಂತೋಷಗೊಂಡವರೂ ಆದ ಅವರು ಹಾಗೆಯೇ ಆಗಲಿ ಎಂದು ಪ್ರತಿಜ್ಞೆಯನ್ನು ಮಾಡಿ, ರಾಜರ ಬಿಡಾರಗಳಿಗಾಗಿ ಶಿಬಿರಗಳನ್ನು ನಿರ್ಮಿಸಿದರು.

ತತಸ್ತೇ ಪಾರ್ಥಿವಾಃ ಸರ್ವೇ ತಚ್ಛ್ರುತ್ವಾ ರಾಜಶಾಸನಮ್ ।
ಆಸನೇಭ್ಯೋ ಮಹಾರ್ಹೇಭ್ಯ ಉದತಿಷ್ಠನ್ನಮರ್ಷಿತಾಃ ॥೧೯॥

ಬಾಹೂನ್ ಪರಿಘಸಂಕಾಶಾನ್ ಸಂಸ್ಪೃಶಂತಃ ಶನೈಸ್ತತಃ ।
ಕಾಂಚನಾಂಗದದೀಪ್ತಾಂಶ್ಚ ಚಂದನಾಗರುರೂಷಿತಾನ್ ॥೨೦॥

ಉಷ್ಣೀಷಾಣಿ ನಿಯಚ್ಛಂತಃ ಪುಂಡರೀಕನಿಭೈಃ ಕರೈಃ ।
ಅಂತರೀಯೋತ್ತರೀಯಾಣಿ ಭೂಷಣಾನಿ ಚ ಸರ್ವಶಃ ॥೨೧॥

ಆಗ ಆ ರಾಜನ ಶಾಸನವನ್ನು ಕೇಳಿದ ಸಮಾಗತರಾದ ರಾಜರೆಲ್ಲರೂ ರೋಷದಿಂದ ಕೂಡಿದವರಾಗಿ ಒನಕೆಯಂತಿದ್ದ, ಸುವರ್ಣಮಯವಾದ ಅಂಗದಗಳಿಂದ

ಅಲಂಕೃತವಾದ, ಚಂದನಾಗರು ಲಿಪ್ತವಾದ ತಮ್ಮ ಬಾಹುಗಳನ್ನು ನಿಧಾನವಾಗಿ ನೇವರಿಸುತ್ತಾ , ಕಮಲದಂತಹ ತಮ್ಮ ಹಸ್ತಗಳಿಂದ ರುಮಾಲುಗಳನ್ನು ಸರಿಮಾಡಿಕೊಳ್ಳುತ್ತಾ, ಒಳಗಿನ ವಸ್ತ್ರವನ್ನೂ, ಉತ್ತರೀಯವನ್ನೂ ಮತ್ತು ಆಭರಣಗಳನ್ನೂ ಸರಿ ಮಾಡಿಕೊಳ್ಳುತ್ತಾ ಬೆಲೆಬಾಳುವ ತಮ್ಮ ಆಸನಗಳಿಂದ ಮೇಲೆದ್ದರು.

ತೇ ರಥಾನ್ ರಥಿನಃ ಶ್ರೇಷ್ಠಾ ಹಯಾಂಶ್ಚ ಹಯಕೋವಿದಾಃ ।
ಸಜ್ಜಯಂತಿ ಸ್ಮ ನಾಗಾಂಶ್ಚ ನಾಗಶಿಕ್ಷಾಸ್ವನುಷ್ಠಿತಾಃ ॥೨೨॥

ರಥಿಕರಲ್ಲಿ ಶ್ರೇಷ್ಠರಾದ ಅವರು ರಥಗಳನ್ನು, ಅಶ್ವಕೋವಿದರಾದವರು ಅಶ್ವಗಳನ್ನು, ಗಜಶಿಕ್ಷೆಯಲ್ಲಿ ವಿಶಾರದರಾದವರು ಗಜಗಳನ್ನು ಸಿದ್ಧಗೊಳಿಸಿದರು.

ಅಥ ವರ್ಮಾಣಿ ಶಸ್ತ್ರಾಣಿ ಕವಚಾನಿ ಬಹೂನಿ ಚ ।
ವಿವಿಧಾನಿ ಚ ತೀಕ್ಷ್ಣಾನಿ ಚಕ್ರುಃ ಸಜ್ಜಾನಿ ಸರ್ವಶಃ ॥೨೩॥

ಅನಂತರ ಅನೇಕ ವಿಧವಾದ ಕವಚಗಳನ್ನೂ, ತೀಕ್ಷ್ಣವಾದ ಶಸ್ತ್ರಗಳನ್ನೂ ಸಹ ಎಲ್ಲ ಕಡೆಗಳಲ್ಲಿಯೂ ಸಿದ್ಧಮಾಡಿದರು.

ಪದಾತಯಶ್ಚ ಪುರುಷಾಃ ಶಸ್ತ್ರಾಣಿ ವಿವಿಧಾನಿ ಚ ।
ಉಪಜಹ್ರುಃ ಶರೀರೇಷು ಹೇಮಚಿತ್ರಾಣ್ಯನೇಕಶಃ ॥೨೪॥

ಪದಾತಿಗಳಾದ ಪುರುಷರು ಸುವರ್ಣದಿಂದ ಅಲಂಕೃತವಾದ ವಿವಿಧವಾದ ಆಯುಧಗಳನ್ನು ಹೊತ್ತು ತಂದರು.

ತದುತ್ಸವ ಇವೋದಗ್ರಂ ಸಂಪ್ರಹೃಷ್ಟನರಾವೃತಮ್ ।
ನಗರಂ ಧಾರ್ತರಾಷ್ಟ್ರಸ್ಯ ಭಾರತಾಸೀತ್ ಸಮಾಕುಲಮ್ ॥೨೫॥

ಎಲೈ ಭಾರತನೇ, ದುರ್ಯೋಧನನ ಆ ಪಟ್ಟಣವು ಸಂತೋಷಗೊಂಡ ಮನುಷ್ಯರಿಂದ ಆವೃತವಾಗಿ ಮನುಷ್ಯರಿಂದಲೂ, ವಾಹನಗಳಿಂದಲೂ ನಿಬಿಡವಾಗಿ ಶ್ರೇಷ್ಠವಾದ ಉತ್ಸವದಂತೆ ಕಂಡುಬರುತ್ತಿದ್ದಿತು.

ಜನೌಘಸಲಿಲಾವರ್ತೋ ರಥನಾಗಾಶ್ವಮೀನವಾನ್ ।
ಶಂಖದುಂದುಭಿನಿರ್ಘೋಷಃ ಕೋಶಸಂಚಯರತ್ನವಾನ್ ॥೨೬॥

ಚಿತ್ರಾಭರಣವರ್ಮೋರ್ಮಿಃ ಶಸ್ತ್ರನಿರ್ಮಲಫೇನವಾನ್ ।
ಪ್ರಾಸಾದಮಾಲಾದ್ರಿವೃತೋ ರಥ್ಯಾಪಣಮಹಾಗ್ರಹಃ ॥೨೭॥

ಯೋಗಚಂದ್ರೋದಯೋದ್ಭೂತಃ ಕುರುರಾಜಬಲಾರ್ಣವಃ ।
ವ್ಯದೃಶ್ಯತ ತದಾ ರಾಜಂಶ್ಚಂದ್ರೋದಯ ಇವಾರ್ಣವಃ ॥೨೮॥

ಎಲೈ ರಾಜನೇ, ಕುರುರಾಜರ ಸೈನ್ಯವೆಂಬ ಸಮುದ್ರವು ಜನಸಮೂಹವೆಂಬ ಸುಳಿಗಳಿಂದಲೂ, ರಥ-ಗಜಾಶ್ವಗಳೆಂಬ ಮೀನುಗಳಿಂದಲೂ, ಶಂಖ-ದುಂದುಭಿಗಳ ಘೋಷದಿಂದಲೂ, ಕೋಶಸಂಚಯವೆಂಬ ರತ್ನಗಳಿಂದಲೂ, ವಿಚಿತ್ರವಾದ ಆಭರಣ ಮತ್ತು ಕವಚಗಳೆಂಬ ಅಲೆಗಳಿಂದಲೂ, ನಿರ್ಮಲಶಸ್ತ್ರವೆಂಬ ನೊರೆಗಳಿಂದಲೂ, ಪ್ರಾಸಾದ ಮಾಲೆಗಳೆಂಬ ಪರ್ವತಗಳಿಂದಲೂ, ರಸ್ತೆಗಳು ಮತ್ತು ಅಂಗಡಿಗಳೆಂಬ ಮಹಾ ಮೊಸಳೆಗಳಿಂದಲೂ, ಉಪಾಯವೆಂಬ ಚಂದ್ರೋದಯದಿಂದಲೂ ಕೂಡಿದುದಾಗಿ ಚಂದ್ರೋದಯ ಕಾಲದ ಸಮುದ್ರದಂತೆ ಆಗ ಕಂಡುಬಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಪಂಚಾಶೋತ್ತರಶತತಮೋಽಧ್ಯಾಯಃ ॥

॥ ಸೈನ್ಯನಿರ್ಯಾಣಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೆರಡನೆಯ ಅಧ್ಯಾಯ

ಕರ್ತವ್ಯಮೌಢ್ಯವನ್ನು ಹೊಂದಿದ ಯುಧಿಷ್ಠಿರನಿಗೆ
ಕೃಷ್ಣಾರ್ಜುನರಿಂದ ಉದ್ಬೋಧನೆ.

ವೈಶಂಪಾಯನಃ

ವಾಸುದೇವಸ್ಯ ತದ್ವಾಕ್ಯಮನುಸ್ಮೃತ್ಯ ಯುಧಿಷ್ಠಿರಃ ।
ಪುನಃ ಪಪ್ರಚ್ಛ ವಾರ್ಷ್ಣೇಯಂ ಕಥಂ ಮಂದೋಽಬ್ರವೀದಿದಮ್ ॥೧॥

ವೈಶಂಪಾಯನ– ಕೃಷ್ಣನ ಆ ವಾಕ್ಯವನ್ನು ಸ್ಮರಿಸಿ ಯುಧಿಷ್ಠಿರನು ಪುನಃ ಅವನನ್ನು ಕುರಿತು, ಮಂದನಾದ ದುರ್ಯೋಧನನು ಹೇಗೆ ಈ ರೀತಿಯಲ್ಲಿ ಮಾತನಾಡಿದನು ಎಂದು ಕೇಳಿದನು.

ಅಸ್ಮಿನ್ನಭ್ಯಾಗತೇ ಕಾಲೇ ಕಿಂಚ ನಃ ಕ್ಷಮಮಚ್ಯುತ ।
ಕಥಂ ಚ ವರ್ತಮಾನಾ ವೈ ಸ್ವಧರ್ಮಾನ್ನ ಚ್ಯವೇಮಹಿ ॥೨॥

ಎಲೈ ಅಚ್ಯುತನೇ, ಒದಗಿ ಬಂದಿರುವ ಈ ಕಾಲದಲ್ಲಿ ನಾವು ಹೇಗೆ ನಡೆದುಕೊಂಡರೆ ನಮ್ಮ ಧರ್ಮದಿಂದ ಚ್ಯುತರಾಗಲಾರೆವು?

ದುರ್ಯೋಧನಸ್ಯ ಕರ್ಣಸ್ಯ ಶಕುನೇಃ ಸೌಬಲಸ್ಯ ಚ ।
ವಾಸುದೇವ ಮತಜ್ಞೋऽಸಿ ಮಮ ಸಭ್ರಾತೃಕಸ್ಯ ಚ ॥೩॥

ಎಲೈ ವಾಸುದೇವನೇ, ನೀನು ದುರ್ಯೋಧನನ, ಕರ್ಣನ, ಶಕುನಿಯ ಮತ್ತು ತಮ್ಮಂದಿರೊಡಗೂಡಿದ ನನ್ನ ಅಭಿಪ್ರಾಯವನ್ನು ತಿಳಿದವನಾಗಿದ್ದೀಯೆ.

ವಿದುರಸ್ಯಾಪಿ ತದ್ವಾಕ್ಯಂ ಶ್ರುತಂ ಭೀಷ್ಮಸ್ಯ ಚೋಭಯೋಃ ।
ಕುಂತ್ಯಾಶ್ಚ ವಿಪುಲಪ್ರಜ್ಞ ಪ್ರಜ್ಞಾ ಕಾರ್ತ್ಸ್ನ್ಯೇನ ತೇ ಶ್ರುತಾ ॥೪॥

ವಿದುರ ಮತ್ತು ಭೀಷ್ಮರಿಬ್ಬರ ಮಾತುಗಳನ್ನೂ ನೀನು ಕೇಳಿದ್ದೀಯೆ. ಎಲೈ ವಿಪುಲಪ್ರಜ್ಞನೇ, ಕುಂತಿಯ ಪ್ರಜ್ಞಾಪೂರ್ವಕವಾದ ಮಾತುಗಳನ್ನೂ ಪೂರ್ಣವಾಗಿ ಕೇಳಿದ್ದೀಯೆ.

ಸರ್ವಮೇತದತಿಕ್ರಮ್ಯ ವಿಚಾರ್ಯ ಚ ಪುನಃ ಪುನಃ ।
ಯನ್ನಃ ಕ್ಷಮಂ ಮಹಾಬಾಹೋ ತದ್ ಬ್ರೂಹ್ಯವಿಚಾರಯನ್ ॥೫॥

ಎಲೈ ಮಹಾಬಾಹುವೇ, ಇವೆಲ್ಲವನ್ನೂ ಮೀರಿ ಪುನಃ ಪುನಃ ವಿಚಾರವನ್ನು ಮಾಡಿ, ನಾವು ಏನು ಮಾಡಿದರೆ ಒಳ್ಳೆಯದೆಂದು ಸಂಕೋಚ ಪಡದೆ ಹೇಳುವವನಾಗು (ಎಂದು ಹೇಳಿದನು).

ಶ್ರುತ್ವೈತದ್ ಧರ್ಮರಾಜಸ್ಯ ಧರ್ಮಾರ್ಥಸಹಿತಂ ವಚಃ ।
ಮೇಘದುಂದುಭಿನಿರ್ಘೋಷಃ ಕೃಷ್ಣೋ ವಾಕ್ಯಮಥಾಬ್ರವೀತ್ ॥೬॥

ಧರ್ಮರಾಜನ ಧರ್ಮಾರ್ಥಯುಕ್ತವಾದ ಈ ಮಾತುಗಳನ್ನು ಕೇಳಿ ಮೇಘದುಂದುಭಿ ಸ್ವರದಂತೆ ಸ್ವರವುಳ್ಳ ಕೃಷ್ಣನು ಅನಂತರ ಉತ್ತರವನ್ನು ಹೇಳಿದನು.

ಉಕ್ತವಾನಸ್ಮಿ ಯದ್ವಾಕ್ಯಂ ಧರ್ಮಾರ್ಥಸಹಿತಂ ಹಿತಮ್ ।
ನ ತು ತನ್ನಿಕೃತಿಪ್ರಜ್ಞೇ ಕೌರವೇ ಪ್ರತಿತಿಷ್ಠತಿ ॥೭॥

ನಾನು ದುರ್ಯೋಧನನಿಗೆ ಧರ್ಮಾರ್ಥಸಹಿತವಾದ, ಹಿತವಾದ ಮಾತುಗಳನ್ನು ಹೇಳಿದೆ. ಆದರೆ ಮೋಸದಲ್ಲೇ ಬುದ್ಧಿ ಇರುವ ಅವನಲ್ಲಿ ಆ ಮಾತುಗಳು ನಾಟಲಿಲ್ಲ.

ನ ಚ ಭೀಷ್ಮಸ್ಯ ದುರ್ಮೇಧಾಃ ಶೃಣೋತಿ ವಿದುರಸ್ಯ ವಾ ।
ಮಮ ವಾ ಭಾಷಿತಂ ಕಿಂಚಿತ್ ಸರ್ವಮೇತನ್ನಿರರ್ಥಕಮ್ ॥೮॥

ದುರ್ಬುದ್ಧಿಯುಳ್ಳ ಅವನು ಭೀಷ್ಮರ ಅಥವಾ ವಿದುರನ ಮಾತುಗಳನ್ನು ಕೇಳುವುದಿಲ್ಲ. ನಾನು ಆಡಿದ ಮಾತೆಲ್ಲವೂ ಅವನಲ್ಲಿ ವ್ಯರ್ಥವೇ ಸರಿ.

ನೈಷ ಕಾಮಯತೇ ಧರ್ಮಂ ನೈಷ ಕಾಮಯತೇ ಯಶಃ ।
ಜಿತಂ ಸ ಮನ್ಯತೇ ಸರ್ವಂ ದುರಾತ್ಮಾ ಕರ್ಣಮಾಶ್ರಿತಃ ॥೯॥

ಅವನಿಗೆ ಧರ್ಮದ ಆಸೆ ಇಲ್ಲ. ಕೀರ್ತಿಯ ಆಸೆಯೂ ಇಲ್ಲ. ದುರಾತ್ಮನಾದ ಅವನು ಕರ್ಣನನ್ನು ಆಶ್ರಯಿಸಿ, ನಾನು ಎಲ್ಲವನ್ನೂ ಗೆದ್ದಿದ್ದೇನೆಂದು ತಿಳಿದಿದ್ದಾನೆ.

ಬಂಧಮಾಜ್ಞಾಪಯಾಮಾಸ ಮಮ ಚಾಪಿ ಸುಯೋಧನಃ ।
ನ ಚ ತಂ ಲಬ್ಧವಾನ್ ಕಾಮಂ ದುರಾತ್ಮಾ ಶಾಸನಾತಿಗಃ ॥೧೦॥

ಸುಯೋಧನನು ನನ್ನ ಬಂಧನಕ್ಕೆ ಆದೇಶವನ್ನು ನೀಡಿದನು. ಆದರೆ ದುರಾತ್ಮನೂ, ಹಿರಿಯರ ಶಾಸನವನ್ನು ಮೀರಿದವನೂ ಆದ ಅವನ ಆ ಆಸೆಯು ಈಡೇರಲಿಲ್ಲ.

ನ ಚ ಭೀಷ್ಮೋ ನ ಚ ದ್ರೋಣೋ ಯುಕ್ತಂ ತತ್ರಾಹತುರ್ವಚಃ ।
ಸರ್ವೇ ತಮನುವರ್ತಂತೇ ಋತೇ ವಿದುರಮಚ್ಯುತ ॥೧೧॥

ಅಲ್ಲಿ ಭೀಷ್ಮರಾಗಲೀ, ದ್ರೋಣರಾಗಲೀ ಯೋಗ್ಯವಾದ ಮಾತುಗಳನ್ನು ಆಡಲಿಲ್ಲ. ಎಲ್ಲೈ ಗುಣಗಳಿಂದ ಚ್ಯುತನಾಗದವನೇ, ವಿದುರನೊಬ್ಬನನ್ನು ಬಿಟ್ಟು ಎಲ್ಲರೂ ಅವನನ್ನು ಅನುಸರಿಸುತ್ತಾರೆ.

ಶಕುನಿಃ ಸೌಬಲಶ್ಚೈವ ಕರ್ಣದುಃಶಾಸನಾವಪಿ ।
ತ್ವಯ್ಯಯುಕ್ತಾನ್ಯಭಾಷಂತ ಮೂಢಾಃ ಪಂಡಿತಮಾನಿನಃ ॥೧೨॥

ಮೂಢರೂ ಮತ್ತು ತಮ್ಮನ್ನು ಪಂಡಿತರೆಂದು ತಿಳಿದವರೂ ಆದ ಶಕುನಿ, ಕರ್ಣ, ದುಶ್ಶಾಸನರು ನಿನ್ನ ವಿಷಯದಲ್ಲಿ ಅನುಚಿತವಾದ ಮಾತುಗಳನ್ನು ಆಡಿದರು.

ಕಿಂಚ್ಚೈತೇನ ಮಯೋಕ್ತೇನ ಯಾನ್ಯಭಾಷತ ಕೌರವಃ ।
ಸಂಕ್ಷೇಪೇಣ ದುರಾತ್ಮಾಽಸೌ ನ ಯುಕ್ತಂ ತ್ವಯಿ ವರ್ತತೇ ॥೧೩॥

ನಾನು ಆಡಿದ ಮಾತುಗಳಿಗೆ ಉತ್ತರವಾಗಿ ದುರಾತ್ಮನಾದ ದುರ್ಯೋಧನನು ಏನು ಮಾತನಾಡಿದನೋ ಅದರ ಸಾರವೆಂದರೆ, ಅವನು ನಿನ್ನಲ್ಲಿ ಸರಿಯಾಗಿ ನಡೆದುಕೊಳ್ಳುವುದಿಲ್ಲ ಎಂಬುದು.

ಪಾರ್ಥಿವೇಷು ಚ ಸರ್ವೇಷು ಯ ಇಮೇ ತವ ಸೈನಿಕಾಃ ।
ಯತ್ಪಾಪಂ ಯನ್ನ ಕಲ್ಯಾಣಂ ಸರ್ವಂ ತಸ್ಮಿನ್ ಪ್ರತಿಷ್ಠಿತಮ್ ॥೧೪॥

ಇಲ್ಲಿನೆರೆದ ಎಲ್ಲಾ ರಾಜರಲ್ಲಿಯೂ ಮತ್ತು ಎಲ್ಲಾ ಸೈನಿಕರಲ್ಲೂ ಯಾವ ಪಾಪವು ಮತ್ತು ಯಾವ ಅಶುಭವು ಇದೆಯೋ ಅವೆಲ್ಲವೂ ಅವನೊಬ್ಬನಲ್ಲಿಯೇ ಪ್ರತಿಷ್ಠಿತವಾಗಿವೆ.

ನ ಚಾಪಿ ವಯಮತ್ಯರ್ಥಂ ಪರಿತ್ಯಾಗೇನ ಕರ್ಹಿಚಿತ್ ।
ಕೌರವೈಃ ಶಮಮಿಚ್ಛಾಮಸ್ತತ್ರ ಯುದ್ಧಮನಂತರಮ್ ॥೧೫॥

ನಾವಾದರೂ ಎಲ್ಲ ಧರ್ಮಗಳನ್ನೂ ಬಿಟ್ಟು ಕೌರವರ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಳ್ಳುವುದಕ್ಕೆ ಬಯಸುವುದಿಲ್ಲ. ಆದ್ದರಿಂದ ಯುದ್ಧವೇ ಈಗ ಮಾಡಬೇಕಾದ ಕಾರ್ಯ.

ವೈಶಂಪಾಯನಃ

ತಚ್ಛ್ರುತ್ವಾ ಪಾರ್ಥಿವಾಃ ಸರ್ವೇ ವಾಸುದೇವೇನ ಭಾಷಿತಮ್ ।
ಅಬ್ರುವಂತೋ ಮುಖಂ ರಾಜ್ಞಃ ಸಮುದೈಕ್ಷಂತ ಭಾರತ ॥೧೬॥

ವೈಶಂಪಾಯನ– ಎಲೈ ಭಾರತನೇ, ಕೃಷ್ಣನು ಆಡಿದ ಆ ಮಾತುಗಳನ್ನು ಕೇಳಿ ಎಲ್ಲ ರಾಜರೂ ಏನನ್ನೂ ಮಾತನಾಡದೆ ರಾಜನಾದ ಯುಧಿಷ್ಠಿರನ ಮುಖವನ್ನು ನೋಡಿದರು.

ಯುಧಿಷ್ಠಿರಸ್ತ್ವಭಿಪ್ರಾಯಮಭಿಲಕ್ಷ್ಯ ಮಹೀಕ್ಷಿತಾಮ್ ।
ಯೋಗಮಾಜ್ಞಾಪಯಾಮಾಸ ಭೀಮಾರ್ಜುನಯಮೈಃ ಸಹ ॥೧೭॥

ಯುಧಿಷ್ಠಿರನಾದರೂ ರಾಜರ ಅಭಿಪ್ರಾಯವನ್ನು ಗಮನಿಸಿ, ಭೀಮಾರ್ಜುನ, ನಕುಲ-ಸಹದೇವರ ಜೊತೆಯಲ್ಲಿ ಸೈನ್ಯದ ಜಮಾವಣೆಗೆ ಆಜ್ಞೆ ಮಾಡಿದನು.

ತತಃ ಕಿಲಕಿಲಾಭೂತಮ್ ಅನೀಕಂ ಪಾಂಡವಸ್ಯ ಹ ।
ಆಜ್ಞಾಪಿತೇ ತದಾ ಯೋಗೇ ಸಮಹೃಷ್ಯಂತ ಸೈನಿಕಾಃ ॥೧೮॥

ಆಗ ಸೈನ್ಯದ ಯುದ್ಧಸಿದ್ಧತೆಯು ಆಜ್ಞಾಪಿಸಲ್ಪಡುತ್ತಿರಲು ಸೈನಿಕರು ಸಂತೋಷಪಟ್ಟರು. ಯುಧಿಷ್ಠಿರನ ಸೈನ್ಯದಲ್ಲಿ ಸಂತೋಷದ ದೊಡ್ಡ ನಾದವು ಉಂಟಾಯಿತು.

ಅವಧ್ಯಾನಾಂ ವಧಂ ಪಶ್ಯನ್ ಧರ್ಮರಾಜೋ ಯುಧಿಷ್ಠಿರಃ ।
ನಿಃಶ್ವಸನ್ ಭೀಮಸೇನಂ ಚ ವಿಜಯಂ ಚೇದಮಬ್ರವೀತ್ ॥೧೯॥

ಧರ್ಮರಾಜನಾದ ಯುಧಿಷ್ಠಿರನು ಅವಧ್ಯರಾದವರ ವಧೆಯನ್ನು ಗಮನಿಸುತ್ತಾ, ನಿಟ್ಟುಸಿರನ್ನು ಬಿಡುತ್ತಾ, ಭೀಮಾರ್ಜುನರನ್ನು ಕುರಿತು ಈ ಮಾತನ್ನಾಡಿದನು.

ಯದರ್ಥಂ ವನವಾಸಶ್ಚ ಪ್ರಾಪ್ತಂ ದುಃಖಂ ಚ ಯನ್ಮಯಾ ।
ಸೋಽಯಮಸ್ಮಾನುಪೈತ್ಯೇವ ಪರೋಽನರ್ಥಃ ಪ್ರಯತ್ನತಃ ॥೨೦॥

ನಾವು ಯಾವುದರ ಸಲುವಾಗಿ ವನವಾಸವನ್ನು ಮಾಡಿ ದುಃಖವನ್ನು ಅನುಭವಿಸಿದೆವೋ ಈಗ ಅದನ್ನು ಬಿಟ್ಟು ಇನ್ನೊಂದು ಅನರ್ಥವು ಪ್ರಯತ್ನ ಪೂರ್ವಕವಾಗಿ ನಮ್ಮ ಬಳಿಗೆ ಬರುತ್ತಿದೆ.

ಯಸ್ಮಿನ್ ಯತ್ನಃ ಕೃತೋಽಸ್ಮಾಭಿಃ ಸ ನೋ ಹೀನಃ ಪ್ರಯತ್ನತಃ ।
ಕೃತೇಽಪಿ ಯತ್ನೇಽಸ್ಮಾನ್ ವೈ ಉಪಾವೃತ್ತಃ ಕಲಿರ್ಮಹಾನ್ ॥೨೧॥

ನಾವು ಯಾವುದಕ್ಕಾಗಿ ಪ್ರಯತ್ನ ಮಾಡಿದೆವೋ ಆ ಪ್ರಯತ್ನ ನಮಗೆ ಸಿದ್ಧಿಸಲಿಲ್ಲ. ನಾವು ಪ್ರಯತ್ನ (ಸಂಧಿಗಾಗಿ) ಮಾಡಿದರೂ ನಮಗೆ ದೊಡ್ಡ ವಿರೋಧವೇ ಪ್ರಾಪ್ತವಾಯಿತು.

ಕಥಂ ಹ್ಯವಧ್ಯೈಃ ಸಂಗ್ರಾಮಃ ಕಾರ್ಯಃ ಸಹ ಭವಿಷ್ಯತಿ ।
ಕಥಂ ಹತ್ವಾ ಗುರೂನ್ ವೃದ್ಧಾನ್ ವಿಜಯೋ ನೋ ಭವಿಷ್ಯತಿ ॥೨೨॥

ಅವಧ್ಯರಾದವರ ಜೊತೆಯಲ್ಲಿ ಹೇಗೆ ಯುದ್ಧವನ್ನು ಮಾಡುವುದು? ಗುರುಗಳನ್ನೂ ಮತ್ತು ಹಿರಿಯರನ್ನೂ ಕೊಂದು ನಮಗೆ ಹೇಗೆ ವಿಜಯ ಉಂಟಾಗುವುದು?

ತಚ್ಛ್ರುತ್ವಾ ಧರ್ಮರಾಜಸ್ಯ ಸವ್ಯಸಾಚೀ ಪರಂತಪಃ ।
ಯದುಕ್ತಂ ವಾಸುದೇವಸ್ಯ ಶ್ರಾವಯಾಮಾಸ ತದ್ವಚಃ ॥೨೩॥

ಅದನ್ನು ಕೇಳಿದ ಪರಂತಪನಾದ ಸವ್ಯಸಾಚಿಯು ಕೃಷ್ಣನು ಹೇಳಿದ ಮಾತುಗಳನ್ನು ಅವನ ಸ್ಮರಣೆಗೆ ತಂದುಕೊಟ್ಟನು.

ಉಕ್ತವಾನ್ ದೇವಕೀಪುತ್ರಃ ಕುಂತ್ಯಾಶ್ಚ ವಿದುರಸ್ಯ ಚ ।
ವಚನಂ ತತ್ ತ್ವಯಾ ರಾಜನ್ ನಿಖಿಲೇನಾವಧಾರಿತಮ್ ॥೨೪॥

ಎಲೈ ರಾಜನೇ, ದೇವಕೀಪುತ್ರನಾದ ಕೃಷ್ಣನು ಕುಂತಿಯೂ ಮತ್ತು ವಿದುರನೂ ಆಡಿದ ಮಾತುಗಳನ್ನು ಹೇಳಿದನು. ಅದನ್ನು ನೀನು ಸಂಪೂರ್ಣವಾಗಿ ಕೇಳಿ ತಿಳಿದಿದ್ದೀಯೆ.

ನ ಚ ತೌ ವಕ್ಷ್ಯತೋಽಧರ್ಮಮಿತಿ ಮೇ ನೈಷ್ಠಿಕೀ ಮತಿಃ ।
ನಾಪಿ ಯುಕ್ತಂ ಚ ಕೌಂತೇಯ ನಿವರ್ತಿತುಮಯುದ್ಧತಃ ॥೨೫॥

ಅವರಿಬ್ಬರೂ ಅಧರ್ಮವನ್ನು ಹೇಳುವುದಿಲ್ಲ ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ. ಕೌಂತೇಯನೇ, ಅದಲ್ಲದೇ ಯುದ್ಧವಿಲ್ಲದೆ ಹಿಂದೆ ಸರಿಯುವುದು ಯುಕ್ತವಾದುದಲ್ಲ.

ವೈಶಂಪಾಯನಃ

ತಚ್ಛ್ರುತ್ವಾ ವಾಸುದೇವೋಽಪಿ ಸವ್ಯಸಾಚಿವಚಸ್ತದಾ ।
ಸ್ಮಯಮಾನೋಽಬ್ರವೀದ್ ವಾಕ್ಯಂ ಪಾರ್ಥಮೇವಮಿತಿ ಬ್ರುವನ್॥೨೬॥

ವೈಶಂಪಾಯನ– ಅರ್ಜುನನ ಆ ಮಾತುಗಳನ್ನು ಕೇಳಿದ ಕೃಷ್ಣನು ನಗುತ್ತಾ ಅರ್ಜುನನನ್ನು ನೋಡಿ ನೀನು ಹೇಳಿದಂತೆಯೇ ಸರಿ ಎಂದು ಹೇಳಿದನು.

ತತಸ್ತೇ ಧೃತಸಂಕಲ್ಪಾ ಯುದ್ಧಾಯ ಸಹ ಸೈನಿಕಾಃ ।
ಪಾಂಡವೇಯಾ ಮಹಾರಾಜ ತಾಂ ರಾತ್ರಿಂ ಸುಖಮಾವಸನ್ ॥೨೭॥

ಎಲೈ ಮಹಾರಾಜನೇ, ಅನಂತರ ಪಾಂಡವರು ಮತ್ತು ಸೈನಿಕರು ಯುದ್ಧಕ್ಕಾಗಿ ನಿಶ್ಚಯವಾದ ಸಂಕಲ್ಪವನ್ನು ಮಾಡಿ, ಆ ರಾತ್ರಿಯನ್ನು ಸುಖವಾಗಿ ಕಳೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿಪಂಚಾಶೋತ್ತರಶತತಮೋऽಧ್ಯಾಯಃ ॥

॥ ಸೈನ್ಯನಿರ್ಯಾಣಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಸೈನ್ಯನಿರ್ಯಾಣಪರ್ವ ॥

★ ★ ★ ★ ★

೯. ಭೀಷ್ಮಾಭಿಷೇಚನಪರ್ವ

ನೂರ ಐವತ್ಮೂರನೆಯ ಅಧ್ಯಾಯ

ದುರ್ಯೋಧನನ ಸೇನಾಸಿದ್ಧತೆ ಮತ್ತು ಸೇನಾನಾಯಕರ ಆಯ್ಕೆ.

ವೈಶಂಪಾಯನಃ

ವ್ಯುಷಿತಾಯಾಂ ರಜನ್ಯಾಂ ತು ರಾಜಾ ದುರ್ಯೋಧನಸ್ತತಃ ।
ವ್ಯಭಜನ್ ತಾನ್ಯನೀಕಾನಿ ದಶ ಚೈಕಂ ಚ ಭಾರತ ॥೧॥

ವೈಶಂಪಾಯನ– ಎಲೈ ಭಾರತನೇ, ರಾತ್ರಿಯು ಕಳೆಯುತ್ತಿರಲು ರಾಜನಾದ ದುರ್ಯೋಧನನು ತನ್ನ ಹನ್ನೊಂದು ಅಕ್ಷೌಹಿಣೀ ಸೈನ್ಯವನ್ನು ವಿಭಾಗ ಮಾಡಿದನು.

ನರಹಸ್ತಿರಥಾಶ್ವಾನಾಂ ಸಾರಂ ಮಧ್ಯಂ ಚ ಫಲ್ಗು ಚ ।
ಸರ್ವೇಷ್ವೇತೇಷ್ವನೀಕೇಷು ಸಂದಿದೇಶ ನರಾಧಿಪಃ ॥೨॥

ಪದಾತಿಗಳು, ಅಶ್ವಾರೋಹಿಗಳು, ಗಜಾರೋಹಿಗಳು ಮತ್ತು ರಥಗಳು, ಈ ಎಲ್ಲದರಲ್ಲಿ ಉತ್ತಮ, ಮಧ್ಯಮ ಮತ್ತು ಅಧಮವಾದುದನ್ನು ತಿಳಿದು ರಾಜನು ಸೂಕ್ತವಾಗಿ ಸಂದೇಶವನ್ನು ನೀಡಿದನು.

ಸಾನುಕರ್ಷಾಃ ಸತೂಣೀರಾಃ ಸವರೂಥಾಃ ಸಹರ್ಷ್ಟಯಃ ।
ಸೋಪಾಸಂಗಾಃ ಸಶಕ್ತೀಕಾಃ ಸನಿಷಂಗಾಃ ಸಸಾಯಕಾಃ ॥೩॥

ಸಧ್ವಜಾಃ ಸಪತಾಕಾಶ್ಚ ಸಶರಾಸನತೋಮರಾಃ ।
ರಜ್ಜುಭಿಶ್ಚ ವಿಚಿತ್ರಾಭಿಃ ಸಪಾಶಾಃ ಸಪರಿಚ್ಛದಾಃ ॥೪॥

ಸಕಚಗ್ರಹವಿಕ್ಷೇಪಾಃ ಸತೈಲಗುಡವಾಲುಕಾಃ ।
ಸಾಶೀವಿಷಘಟಾಃ ಸರ್ವೇ ಸಸರ್ಜರಸಪಾಂಸವಃ ॥೫॥

ಸಘಂಟಫಲಕಾಃ ಸರ್ವೇ ಸಾಯೋಗುಡಬಲೋಪಲಾಃ ।
ಕಂಕಾಲಭಿಂಡಿಪಾಲಾಶ್ಚ ಸಮಧೂಚ್ಛಿಷ್ಟಮುದ್ಗರಾಃ ॥೬॥

ಸಕಾಂಡದಂಡಕಾಃ ಸರ್ವೇ ಸಸೀರವಿಷತೋಮರಾಃ ।
ಸಋಷ್ಟಿಪಿಟಕಾಃ ಸರ್ವೇ ಸದಾತ್ರಾಂಕುಶತೋಮರಾಃ ॥೭॥

ಸಕೀಲಕ್ರಕಚಾಃ ಸರ್ವೇ ವಾಸೀವೃಕ್ಷಾದನಾನ್ವಿತಾಃ ।
ವ್ಯಾಘ್ರಚರ್ಮಪರೀವಾರಾ ವೃತಾ ಗೋದ್ವೀಪಿಚರ್ಮಭಿಃ ॥೮॥

ಸವಸ್ತಯಃ ಸಶೃಂಗಾಶ್ಚ ಸಪ್ರಾಸವಿವಿಧಾಯುಧಾಃ ।
ಸಕುಠಾರಾಃ ಸಕುದ್ದಾಲಾಃ ಸತೈಲಕ್ಷೌದ್ರಸರ್ಪಿಷಃ ॥೯॥

ಆ ಯೋಧರೆಲ್ಲರಿಗೂ ದುರ್ಯೋಧನನು ಎಲ್ಲ ಆಯುಧಗಳನ್ನೂ ಮತ್ತು ಸಲಕರಣೆಗಳನ್ನು ಒದಗಿಸಿದನು. ವಿಧವಿಧವಾದ ಬತ್ತಳಿಕೆಗಳು, ಬಾಣಗಳು, ಋಷ್ಟಿಗಳು, ಧ್ವಜಗಳು, ಪತಾಕೆಗಳು, ಧನುಸ್ಸುಗಳು, ತೋಮರಗಳು, ವಿಚಿತ್ರವಾದ ಸಣ್ಣ ಹಗ್ಗಗಳಿಂದ ಕೂಡಿದ ಪಾಶಗಳು, ತೈಲ-ಗುಡಮಿಶ್ರಿತವಾದ ಮರಳುಗಳು, ಸರ್ಜರಸದಿಂದ ಕೂಡಿದ ಘಟಗಳು, ಸರ್ಜರಸದಿಂದ ಕೂಡಿದ ಧೂಳುಗಳು, ಘಂಟಾಸಹಿತವಾದ ಹಲಗೆಗಳು, ಕಬ್ಬಿಣ ಮತ್ತು ಬೆಲ್ಲದಿಂದ ಮಿಶ್ರಿತವಾದ ಕಲ್ಲುಗಳು, ಭಿಂಡಿಪಾಲಗಳು, ಕಂಕಾಲಗಳು, ಜೇನುಮೇಣದಿಂದ ಸಹಿತವಾದ ಮುದ್ಗರಗಳು, ಕಾಂಡಸಹಿತವಾದ ದಂಡಗಳು, ನೇಗಿಲಿನಿಂದ ಸಹಿತವಾದ ವಿಷಯುಕ್ತವಾದ ತೋಮರಗಳು, ಕುಡುಗೋಲುಗಳು, ಅಂಕುರ ತೋಮರಗಳು, ಹಲ್ಲಿನಿಂದ ಕೂಡಿದ ಗರಗಸಗಳು, ಬಾಚಿ ಮೊದಲಾದ ವೃಕ್ಷವನ್ನು ಕಡಿಯುವ ಸಾಧನಗಳು, ವ್ಯಾಘ್ರ ಚರ್ಮಗಳು, ಗೋಚರ್ಮಗಳು, ವಸ್ತಿಗಳು, ಶೃಂಗಗಳು, ಪ್ರಾಸಗಳು, ವಿವಿಧವಾದ ಆಯುಧಗಳು, ಕೊಡಲಿಗಳು, ಹಾರೆಗಳು, ತೈಲ, ಮಧು ಮತ್ತು ಘೃತ ಎಲ್ಲವನ್ನೂ

ಎಲ್ಲಾ ಯೋಧರಿಗೂ ಒದಗಿಸಿದನು. (ಇಲ್ಲಿ ಎಷ್ಟೋ ಆಯುಧಗಳ ಹೆಸರುಗಳು ತಿಳಿಯುವುದಿಲ್ಲ).

(ಅನುಕರ್ಷ ಎಂದರೆ ರಥದ ಕೆಳಗಿರುವ ಮರ. ರಥದ ರಿಪೇರಿಗೆ ಉಪಯೋಗಿಸುವಂತಹದು. 'ಅನುಕರ್ಷಃ ರಥಾಧಃಸ್ಥದಾರುಣಿ' ಎಂದು ಮೇದಿನೀಕೋಶ. ತೂಣೀರ ಎಂದರೆ ರಥದಲ್ಲಿ ಕಟ್ಟುವ ದೊಡ್ಡ ಬತ್ತಳಿಕೆ. ಅಶ-ಗಜಗಳು ಹೊರುವ ಬತ್ತಳಿಕೆಯು ಉಪಾಸಂಗ. ಪದಾತಿಗಳು ಹೊರುವ ಬತ್ತಳಿಕೆಯು ನಿಷಂಗ ಎನಿಸುತ್ತದೆ. ಕಚಗ್ರಹವಿಕ್ಷೇಪ ಎಂದರೆ ಶತ್ರುವನ್ನು ತಲೆಯ ಕೂದಲುಗಳಲ್ಲಿ ಹಿಡಿದು ಎಳೆಯುವ ಸಾಧನ. ಕಾಯಿಸಿದ ಎಣ್ಣೆ, ನೀರಾದ ಬೆಲ್ಲ, ಮರುಳುಗಳು ಶತ್ರುಗಳ ಮೇಲೆ ಪ್ರಯೋಗಿಸಲು ಇರುವಂತಹವು. ವಿಷಸರ್ಪಗಳುಳ್ಳ ಮಡಕೆಗಳೂ ಸಮಯ ಬಂದಾಗ ಶತ್ರುಗಳ ಮೇಲೆ ಬಿಡಲು ಪ್ರಯೋಗಿಸುವಂತಹವು. ಕಾಲಯವನನ ಜೊತೆಯಲ್ಲಿ ಯುದ್ಧಮಾಡುವ ಮುಂಚೆ ಶ್ರೀಕೃಷ್ಣನು ಇದನ್ನು ಉಪಯೋಗಿಸಿದ್ದಾನೆ. ಸರ್ಜರಸ ಎಂದರೆ ರಾಳ. ಸುಲಭವಾಗಿ ಬೆಂಕಿ ಹಿಡಿಯುವಂತಹದು. ಅರಗಿನ ಮನೆಯ ನಿರ್ಮಾಣದಲ್ಲಿ ಇದರ ಉಲ್ಲೇಖವಿದೆ. ಘಂಟಾಫಲಕವೆಂದರೆ ಘಂಟೆಯಿಂದ ಕೂಡಿದ ಒಂದು ಶಸ್ತ್ರ. ಈಟಿ-ಭರ್ಜಿಗಳಿಗೆ ಘಂಟೆಯನ್ನು ಕಟ್ಟುತ್ತಿದ್ದರು. ಅಯಸ್ ಎಂದರೆ ಕಬ್ಬಿಣದ ಖಡ್ಗ, ಚಾಕು, ಚೂರಿ ಮುಂತಾದವು. ಗುಡ, ಉಪಲಗಳೆಂದರೆ ಕಾಯಿಸಿದ ಬೆಲ್ಲ ಮತ್ತು ಸಣ್ಣಕಲ್ಲುಗಳು - ಕವಣೆಯಿಂದ ಪ್ರಯೋಗಿಸುವಂತಹವು. ಕಂಕಾಲ, ಭಿಂಡಿಪಾಲಗಳು ಶಸ್ತ್ರವಿಶೇಷಗಳು. ಮಧೂಚ್ಚಿಷ್ಟವೆಂದರೆ ಜೇನುಮೇಣ. ಕಾಯಿಸಿದ ಮೇಣವು ಮುದ್ಗರ ಎಂದರೆ ಹಾರೆ, ಒನಕೆ ಇಂತಹ ಶಸ್ತ್ರದ ಜೊತೆಯಲ್ಲಿ ಉಪಯೋಗಿಸುವಂತಹದು. ಕಾಂಡದಂಡ ಎಂದರೆ ಮುಳ್ಳುಗಳಿಂದ ಕೂಡಿದ ದೀರ್ಘವಾದ ದಂಡ. ಸೀರ ಎಂದರೆ ನೇಗಿಲು. ಅಂತಹದು ಬಲರಾಮನ ಆಯುಧವೆಂದು ಪ್ರಸಿದ್ಧ. ಅದರ ಜೊತೆಯಲ್ಲಿ ಸೇರಿರುವ ವಿಷಯುಕ್ತವಾದ ತೋಮರ - ಇದು ಸಸೀರವಿಷತೋಮರ. ಋಷ್ಟಿ ಪಿಟಕಗಳು ಕಾಯಿಸಿದ ದ್ರವದ್ರವ್ಯವನ್ನು ಎರಚುವ ಸಾಧನಗಳು -ದಾತ್ರ ಎಂದರೆ ಕುಡಗೋಲು, ಕಡಿಕತ್ತಿ ಮೊದಲಾದವು. ಇದರ ಉಲ್ಲೇಖ ಯಾಸ್ಕರ ನಿರುಕ್ತದಲ್ಲಿದೆ. ವಾಸಿ ಎಂದರೆ ಬಡಗಿಗಳು ಉಪಯೋಗಿಸುವ ಬಾಚಿ. ವೃಕ್ಷಾದನ ಎಂದರೆ ಮರಗಳನ್ನು ಕತ್ತರಿಸುವ

ಸಾಧನ. ಕ್ರಕಚ ಎಂದರೆ ಗರಗಸ. ಕುಠಾರ ಎಂದರೆ ಕೊಡಲಿ ಕುದ್ದಾಲವು ಹಾರೆ. ಕ್ಷೌದ್ರ ಎಂದರೆ ಜೇನುತುಪ್ಪ ಮತ್ತು ಜೇನುಮೇಣ).

ರುಗ್ಮಜಾಲಪ್ರತಿಚ್ಛನ್ನಾ ನಾನಾಮಣಿವಿಭೂಷಿತಾಃ ।
ಚಿತ್ರಾನೀಕಾ ಸುವಪುಷೋ ಜ್ವಲಿತಾ ಇವ ಪಾವಕಾಃ ॥೧೦॥

ಎಲ್ಲ ಯೋಧರೂ ಅನೇಕ ಮಣಿಗಳಿಂದ ವಿಭೂಷಿತರೂ, ಸುವರ್ಣಮಯವಾದ ಜಾಲಗಳನ್ನು ಹೊಂದಿದವರೂ, ಒಳ್ಳೆಯ ದೇಹವನ್ನು ಹೊಂದಿದವರೂ ಆಗಿ ಉರಿಯುವ ಅಗ್ನಿಗಳಂತಿದ್ದರು.

ತಥಾ ಕವಚಿನಃ ಶೂರಾಃ ಶಸ್ತ್ರೇಷು ಕೃತನಿಶ್ರಮಾಃ ।
ಕುಲೀನಾ ಹಯಯೋನಿಜ್ಞಾಃ ಸಾರಥ್ಯೇ ವಿನಿವೇಶಿತಾಃ ॥೧೧॥

ಅದರಂತೆ ಕವಚಗಳನ್ನು ಧರಿಸಿದ ಶೂರರೂ, ಶಸ್ತ್ರದಲ್ಲಿ ಬಹಳ ಪರಿಶ್ರಮ ಉಳ್ಳವರೂ, ಒಳ್ಳೆಯ ಕುಲದಲ್ಲಿ ಜನಿಸಿದವರೂ, ಅಶ್ವಗಳ ವಿಶೇಷ ಜ್ಞಾನವುಳ್ಳವರೂ ಆದಂತಹವರು ಸಾರಥಿಗಳಾಗಿ ನೇಮಿಸಲ್ಪಟ್ಟರು.

ಬದ್ಧಾರಿಷ್ಟಾ ಬದ್ಧಕಕ್ಷ್ಯಾ ಬದ್ಧಧ್ವಜಪತಾಕಿನಃ ।
ಬದ್ಧಾಭರಣನಿರ್ಯೂಹಾ ಬದ್ಧವರ್ಮಾಸಿಪಟ್ಟಸಾಃ ॥೧೨॥

ಅವರು ಅಭೇದ್ಯವಾದ ಕವಚಗಳನ್ನು ಧರಿಸಿ, ಗಜಾಶ್ವಗಳ ಉದರಬಂಧನ ರಜ್ಜುಗಳನ್ನು ಹೊಂದಿ, ರಥಗಳಿಗೆ ಧ್ವಜಪತಾಕೆಗಳನ್ನು ಕಟ್ಟಿ, ಆಭರಣ ಸಮೂಹಗಳನ್ನೂ ಕಟ್ಟಿ, ಕವಚ ಖಡ್ಗ, ಪಟ್ಟಸ ಮೊದಲಾದ ಆಯುಧಗಳನ್ನು ರಥದಲ್ಲಿ ಆಯಾ ಸ್ಥಳದಲ್ಲಿ ಕಟ್ಟಿದರು.

ಚತುರ್ಯುಜೋ ರಥಾ ಸರ್ವೇ ಸರ್ವೇ ಚೋತ್ತಮವಾಸಸಃ ।
ಸಂಹೃಷ್ಟವಾಹನಾಃ ಸರ್ವೇ ಸರ್ವೇ ಶಸ್ತ್ರಸಮಾಯುತಾಃ ॥೧೩॥

ಎಲ್ಲರೂ ನಾಲ್ಕು ಅಶ್ವಗಳನ್ನು ಹೂಡಿದ ರಥಗಳಲ್ಲಿ ಉತ್ತಮ ವಸ್ತ್ರಗಳನ್ನು ಧರಿಸಿದವರಾಗಿದ್ದರು. ಎಲ್ಲರ ವಾಹನಗಳು ಸಂತೋಷದಿಂದ ಕೂಡಿದ್ದವು. ರಥಗಳು ಶಸ್ತ್ರಗಳಿಂದ ತುಂಬಿದ್ದವು.

ಧುರ್ಯಯೋರ್ಹಯಯೋರೇಕಃ ತಥಾಽನ್ಯೌ ಪಾರ್ಷ್ಣಿಸಾರಥೀ ।
ತೌ ಚಾಪಿ ರಥಿನಾಂ ಶ್ರೇಷ್ಠೌ ರಥೀ ಚ ಹಯವಿತ್ ತಥಾ ॥೧೪॥

ಮುಂದಿನ ಎರಡು ಕುದುರೆಗಳಿಗೆ ಒಬ್ಬ ಸಾರಥಿ, ಎರಡು ಪಾರ್ಶ್ವದ ಒಂದೊಂದು ಕುದುರೆಗೆ ಒಬ್ಬೊಬ್ಬ ಸಾರಥಿ, ಆ ಸಾರಥಿಗಳೂ ಶ್ರೇಷ್ಠರಾದ ರಥಿಕನೂ, ಆ ರಥಿಕನೂ ಶ್ರೇಷ್ಠನಾದ ಸಾರಥಿಯೂ ಆಗಿದ್ದನು.

ನಗರಾಣೀವ ಗುಪ್ತಾನಿ ದುರಾಧರ್ಷಾಣಿ ಶತ್ರುಭಿಃ ।
ಆಸನ್ ರಥಸಹಸ್ರಾಣಿ ಹೇಮಮಾಲೀನಿ ಸರ್ವಶಃ ॥೧೫॥

ಹೇಮಮಾಲೆಗಳನ್ನು ಧರಿಸಿದ ಸಹಸ್ರಾರು ರಥಗಳು ಶತ್ರುಗಳಿಂದ ಸೋಲಿಸಲು ಸಾಧ್ಯವಿಲ್ಲದ ಸುರಕ್ಷಿತವಾದ ನಗರಗಳಂತೆ ಎಲ್ಲ ಕಡೆಗಳಲ್ಲಿಯೂ ಕಂಡುಬಂದವು.

ಯಥಾ ರಥಾಸ್ತಥಾ ನಾಗಾ ಬದ್ಧಕಕ್ಷ್ಯಾಃ ಸ್ವಲಂಕೃತಾಃ ।
ಬಭೂವುಃ ಸಪ್ತಪುರುಷಾ ರತ್ನವಂತ ಇವಾದ್ರಯಃ ॥೧೬॥

ರಥಗಳಂತೆ ಗಜಗಳೂ ಸಹ ಉದರಬಂಧನರಜ್ಜುಗಳಿಂದ ಕೂಡಿ ಅಲಂಕೃತವಾಗಿದ್ದವು. ಒಂದೊಂದು ಗಜವೂ ಏಳು ಪುರುಷರಿಂದ ಕೂಡಿ ರತ್ನಸಹಿತವಾದ ಪರ್ವತಗಳಂತಿದ್ದವು.

ದ್ವಾವಂಕುಶಧರೌ ತತ್ರ ದ್ವಾವುತ್ತಮಧನುರ್ಧರೌ ।
ದ್ವೌ ವರಾಸಿಧರೌ ರಾಜನ್ನೇಕಶ್ಚತ್ರಪತಾಕಧೃತ್ ॥೧೭॥

ಅಂಕುಶವನ್ನು ಧರಿಸಿದವರು ಇಬ್ಬರು, ಧನುರ್ಧಾರಿಗಳು ಇಬ್ಬರು, ಖಡ್ಗಗಳನ್ನು ಧರಿಸಿದವರು ಇಬ್ಬರು ಮತ್ತು ಶಸ್ತ್ರ ಪತಾಕೆಗಳನ್ನು ಧರಿಸಿದವನು ಒಬ್ಬನು. ಹೀಗೆ ಪ್ರತಿಗಜಕ್ಕೂ ಏಳು ಜನರು ಇರುತ್ತಿದ್ದರು.

ಗಜೈರ್ಮತ್ತೈಃ ಸಮಾಕೀರ್ಣಂ ಸರ್ವಮಾಯುಧಕೋಶಕೈಃ ।
ತದ್ ಬಭೂವ ಬಲಂ ರಾಜನ್ ಕೌರವಸ್ಯ ಸಹಸ್ರಶಃ ॥೧೮॥

ಎಲೈ ರಾಜನೇ, ಮದಗಜಗಳಿಂದ ನಿಬಿಡವಾದ ಮತ್ತು ಆಯುಧದ ಕೋಶಗಳಿಂದ ಪೂರ್ಣವಾದ ಆ ದುರ್ಯೋಧನನ ಸೈನ್ಯವು ಸಹಸ್ರ ಸಂಖ್ಯೆಯಲ್ಲಿ ಇದ್ದಿತು.

ವಿಚಿತ್ರಕವಚೈರ್ಯುಕ್ತೈಃ ಸಪಾತಕೈಃ ಸ್ವಲಂಕೃತೈಃ ।
ಸಾದಿಭಿಶ್ಚೋಪಪನ್ನಾಸ್ತು ಅಸನ್ನಯುತಶೋ ಹಯಾಃ ॥೧೯॥

ವಿಚಿತ್ರ ಕವಚಗಳನ್ನು ಧರಿಸಿ, ಚೆನ್ನಾಗಿ ಅಲಂಕೃತರಾಗಿ ಪತಾಕೆಗಳಿಂದ ಕೂಡಿದ ಅಶ್ವಾರೋಹಿಗಳು ಹತ್ತಾರು ಸಾವಿರ ಸಂಖ್ಯೆಯಲ್ಲಿದ್ದರು.

ಸುಸಂಗ್ರಾಹಾಃ ಸುಸಂತೋಷಾ ಹೇಮಭಾಂಡಪರಿಚ್ಛದಾಃ ।
ಅನೇಕಶತಸಾಹಸ್ರಾಃ ಸರ್ವೇ ಸಾದಿವಶೇ ಸ್ಥಿತಾಃ ॥೨೦॥

ಒಳ್ಳೆಯ ಸಂಗ್ರಹದಿಂದ ಕೂಡಿ ಸಂತೋಷಗೊಂಡ' ಸುವರ್ಣಾಲಂಕಾರಗಳಿಂದ ಅಲಂಕೃತರಾದ ನೂರಾರು ಸಹಸ್ರ ಯೋಧರು (ಪದಾತಿಗಳು) ಅಶ್ವಾರೋಹಿಗಳಿಗೆ ಅಧೀನರಾಗಿದ್ದರು.

ನಾನಾರೂಪವಿಕಾರಾಶ್ಚ ನಾನಾಕವಚಶಸ್ತ್ರಿಣಃ ।
ಪದಾತಿನೋ ನರಾಸ್ತತ್ರ ಬಭೂವುರ್ಹೇಮಮಾಲಿನಃ ॥೨೧॥

ಪದಾತಿಗಳು ಅನೇಕ ವಿಶೇಷ ರೂಪವನ್ನು ಧರಿಸಿ ನಾನಾವಿಧವಾದ ಕವಚಗಳನ್ನೂ, ಶಸ್ತ್ರಗಳನ್ನೂ ಧರಿಸಿ ಸುವರ್ಣಮಾಲೆಗಳನ್ನು ಧರಿಸಿದವರಾಗಿದ್ದರು.

ರಥಸ್ಯಾಸನ್ ದಶ ಗಜಾ ಗಜಸ್ಯ ದಶ ವಾಜಿನಃ ।
ನರಾ ದಶ ಹಯಸ್ಯಾಸನ್ ಪಾದರಕ್ಷಾಃ ಸಮಂತತಃ ॥೨೨॥

ಒಂದು ರಥಕ್ಕೆ ಹತ್ತು ಗಜಗಳು, ಒಂದು ಗಜಕ್ಕೆ ಹತ್ತು ಅಶ್ವಗಳು, ಒಂದು ಅಶ್ವಕ್ಕೆ ಹತ್ತು ಪದಾತಿಗಳು ಹೀಗೆ ಅನೇಕ ಕಡೆ ಕಂಡು ಬಂದಿತು.

ರಥಸ್ಯ ನಾಗಾಃ ಪಂಚಾಶನ್ನಾಗಸ್ಯಾಸನ್ ಶತಂ ಹಯಾಃ ।
ಹಯಸ್ಯ ಪುರುಷಾಃ ಸಪ್ತ ಭಿನ್ನಸಂಧಾನಕಾರಿಣಃ ॥೨೩॥

ಒಂದು ರಥಕ್ಕೆ ಐವತ್ತು ಗಜಗಳು, ಒಂದು ಗಜಕ್ಕೆ ನೂರು ಕುದುರೆಗಳು, ಒಂದು ಕುದುರೆಗೆ ಸಪ್ತ ಯೋಧರು ಹೀಗೆ ಭಿನ್ನವಾದ ಆಯುಧ' ಕವಚಗಳನ್ನು ಸರಿ ಮಾಡುವ ಪುರುಷರೂ ಇದ್ದರು.

ಪಂಚಾಶಚ್ಚ ಶತಂಚಾಶ್ವಾ ನರಾಃ ಪಂಚಗುಣಾಸ್ತತಃ ।
ಸೇನಾ ಪಂಚಶತಂ ನಾಗಾ ರಥಾಸ್ತಾವಂತ ಏವ ಚ ॥೨೪॥

ದಶ ಸೇನಾ ಚ ಪೃತನಾ ಪೃತನಾ ದಶ ವಾಹಿನೀ ॥೨೫॥

ನೂರೈವತ್ತು ಅಶ್ವಗಳು, ಅದರ ಐದು ಪಟ್ಟು ಪದಾತಿಗಳು, ಐದು ನೂರು ಗಜಗಳು ಮತ್ತು ಅಷ್ಟೇ ರಥಗಳು ಸೇರಿದರೆ ಒಂದು ಸೇನೆ ಎನಿಸುತ್ತದೆ. ಹತ್ತು ಸೇನೆಗೆ ಒಂದು ಪೃತನಾ. ಹತ್ತು ಪೃತನೆಗಳಿಗೆ ಒಂದು ವಾಹಿನೀ.

ಸೇನಾ ತು ವಾಹಿನೀ ಚೈವ ಪೃತನಾ ಧ್ವಜಿನೀ ಚಮೂಃ ।
ಅಕ್ಷೌಹಿಣೀತಿ ಪರ್ಯಾಯೈರ್ನಿರುಕ್ತಾ ಚ ವರೂಥಿನೀ ॥೨೬॥

ಸೇನಾ, ವಾಹಿನೀ,ಪೃತನಾ, ಧ್ವಜಿನೀ, ಚಮೂ, ಅಕ್ಷೌಹಿಣೀ, ವರೂಥಿನೀ ಈ ಶಬ್ದಗಳು ಪರ್ಯಾಯವಾಗಿಯೂ ಬಳಸಲ್ಪಡುತ್ತವೆ (ಈ ಪರ್ಯಾಯವಾದ ಅಕ್ಷೌಹಿಣಿ ಶಬ್ದವು ಏಳು, ಹನ್ನೊಂದು ಎಂದು ಉಪಯೋಗಿಸುವ ಅಕ್ಷೌಹಿಣಿ ಶಬ್ದವು ಬೇರೆ ಬೇರೆ ಅರ್ಥವುಳ್ಳದ್ದಾಗಿದೆ).

ಏವಂ ವ್ಯೂಢಾನ್ಯನೀಕಾನಿ ಕೌರವೇಯೇಣ ಧೀಮತಾ ॥೨೭॥

ಹೀಗೆ ಮೇಧಾವಿಯಾದ ದುರ್ಯೋಧನನು ತನ್ನ ಸೈನ್ಯವನ್ನು ವ್ಯೂಹಗೊಳಿಸಿದನು.

ಅಕ್ಷೌಹಿಣ್ಯಸ್ತು ಸಪ್ತೈವ ಪಾಂಡವಾನಾಂ ಮಹದ್ ಬಲಮ್ ।
ಅಕ್ಷೌಹಿಣ್ಯೋ ದಶೈಕಾ ಚ ಕೌರವಾಣಾಮಭೂದ್ ಬಲಮ್ ॥೨೮॥

ಪಾಂಡವರ ದೊಡ್ಡ ಸೈನ್ಯವು ಏಳು ಅಕ್ಷೌಹಿಣಿಯಿಂದ ಕೂಡಿದ್ದಿತು. ಕೌರವರ ಸೈನ್ಯವು ಹನ್ನೊಂದು ಅಕ್ಷೌಹಿಣಿಯಿಂದ ಕೂಡಿದ್ದಿತು.

ನರಾಣಾಂ ಪಂಚಪಂಚಾಶದ್ ಏಷಾ ಪತ್ತಿರ್ವಿಧೀಯತೇ ।
ಸೇನಾಮುಖಂ ತು ತಿಸ್ರಸ್ತಾ ಗುಲ್ಮ ಇತ್ಯಭಿಸಂಜ್ಞಿತಾಃ ॥೨೯॥

ದಶ ಗುಲ್ಮಾ ಗಣಸ್ತಾ ಸ್ಸ್ಯೀದ್ ಗಣಾಸ್ತ್ವಯುತಶೋಽಭವನ್ ।
ದುರ್ಯೋಧನಸ್ಯ ಸೇನಾಸು ಯೋತ್ಸ್ಯಮಾನಾಃ ಪ್ರಹಾರಿಣಃ ॥೩೦॥

ಐವತ್ತೈದು ಪದಾತಿಗಳಿಗೆ ಒಂದು ಪತ್ತಿ ಎಂದು ಹೆಸರು, ಮೂರು ಪತ್ತಿಗಳಿಗೆ ಒಂದು ಸೇನಾಮುಖ, ಸೇನಾಮುಖಕ್ಕೆ ಗುಲ್ಮವೆಂದೂ ಹೆಸರು. ಹತ್ತು ಗುಲ್ಮಗಳಿಗೆ ಒಂದು ಗಣ. ದುರ್ಯೋಧನನ ಸೈನ್ಯದಲ್ಲಿ ಯುದ್ಧವನ್ನು ಮಾಡಲು ಬಯಸುವ ಪ್ರಹಾರಶೀಲರಾದ ಅಂತಹ ಗಣಗಳು ಹತ್ತಾರು ಸಂಖ್ಯೆಯಲ್ಲಿ ಇದ್ದವು.

ತತ್ರ ದುರ್ಯೋಧನೋ ರಾಜಾ ಶೂರಾನ್ ಬುದ್ಧಿಮತೋ ನರಾನ್ ।
ಪ್ರಸಮೀಕ್ಷ್ಯ ಮಹಾಬಾಹುಶ್ಚಕ್ರೇ ಸೇನಾಪತೀಂಸ್ತಥಾ ॥೩೧॥

ಅಲ್ಲಿ ರಾಜನಾದ ದುರ್ಯೋಧನನು ಮೇಧಾವಿಗಳೂ ಮತ್ತು ಶೂರರೂ ಆದವರನ್ನು ಗಮನಿಸಿ, ಮಹಾಬಾಹುವಾದ ಅವನು ಅವರನ್ನು ಸೇನಾಪತಿಗಳನ್ನಾಗಿ ಮಾಡಿದನು.

ಪೃಥಗಕ್ಷೌಹಿಣೀನಾಂ ಚ ಪ್ರಣೇತ್಄ನ್ ನರಸತ್ತಮಾನ್ ।
ವಿಧಿವತ್ ಪೂರ್ವಮಾನೀಯ ಪಾರ್ಥಿವಾನಭ್ಯಷೇಚಯತ್ ॥೩೨॥

ಹನ್ನೊಂದು ಅಕ್ಷೌಹಿಣಿಯ ಸೈನ್ಯವನ್ನು ಪ್ರತ್ಯೇಕವಾಗಿ ನಯನಮಾಡುವ (ಮುಂದಕ್ಕೊಯ್ಯುವ) ಶ್ರೇಷ್ಠರಾದ ಪುರುಷರನ್ನು ಮೊದಲು ಕರೆತಂದು ಅವರಿಗೆ ಅಭಿಷೇಕವನ್ನು ಮಾಡಿದನು.

ಕೃಪಂ ದ್ರೋಣಂ ಚ ಶಲ್ಯಂ ಚ ಸೈಂಧವಂ ಚ ಜಯದ್ರಥಮ್ ।
ಸುದಕ್ಷಿಣಂ ಚ ಕಾಂಭೋಜಂ ಕೃತವರ್ಮಾಣಮೇವ ಚ ॥೩೩॥

ದ್ರೋಣಪುತ್ರಂ ಚ ಕರ್ಣಂ ಚ ಭೂರಿಶ್ರವಸಮೇವ ಚ ।
ಶಕುನಿಂ ಸೌಬಲಂ ಚೈವ ಬಾಹ್ಲೀಕಂ ಚ ಮಹಾರಥಮ್ ॥೩೪॥

ಕೃಪ, ದ್ರೋಣ, ಶಲ್ಯ, ಸಿಂಧುರಾಜನಾದ ಜಯದ್ರಥ, ಕಾಂಭೋಜದೇಶದ ಸುದಕ್ಷಿಣ, ಯಾದವರ ಕೃತವರ್ಮ, ಅಶ್ವತ್ಥಾಮ, ಕರ್ಣ, ಭೂರಿಶ್ರವ, ಸೌಬಲನಾದ ಶಕುನಿ ಮತ್ತು ಮಹಾರಥನಾದ ಬಾಹ್ಲೀಕ (ಇವರನ್ನು ಪ್ರತ್ಯೇಕವಾಗಿ ಒಂದೊಂದು ಅಕ್ಷೌಹಿಣಿ ಸೈನ್ಯಕ್ಕೆ ನಾಯಕರನ್ನಾಗಿ ಮಾಡಿದನು).

ದಿವಸೇ ದಿವಸೇ ತೇಷಾಂ ಪ್ರತಿವೇಲಂ ಚ ಭಾರತ ।
ಚಕ್ರೇ ಸ ವಿವಿಧಾಃ ಸಂಜ್ಞಾಃ ಪ್ರತ್ಯಕ್ಷಂ ಚ ಪುನಃ ಪುನಃ ॥೩೫॥

ಎಲೈ ಭಾರತನೇ, ದುರ್ಯೋಧನ ಅವರಿಗೆ ಪ್ರತಿ ದಿವಸವೂ ಮತ್ತು ಒಂದು ದಿವಸದಲ್ಲಿ ಬೇರೆ ಬೇರೆ ವೇಳೆಗಳಲ್ಲಿಯೂ ಪ್ರತ್ಯಕ್ಷವಾಗಿ, ಅವರಿಗೆ ಮತ್ತೆ ಮತ್ತೆ ವಿಧವಿಧವಾದ ಆದೇಶವನ್ನು ಕೊಡುತ್ತಿದ್ದನು.

ತಥೈವ ನಿಯತಾಃ ಸರ್ವೇ ಯೇ ಚ ತೇಷಾಂ ಪದಾನುಗಾಃ ।
ಬಭೂವುಃ ಸೈನಿಕಾಃ ರಾಜ್ಞಃ ಪ್ರಿಯಂ ರಾಜಂಶ್ಚಿಕೀರ್ಷವಃ ॥೩೬॥

ಎಲೈ ರಾಜನೇ, ಅದರಂತೆ ಅವನ ಎಲ್ಲಾ ಸೈನಿಕರೂ ಮತ್ತು ಹಿಂಬಾಲಕರೂ ರಾಜನಿಗೆ ಪ್ರಿಯವನ್ನು ಮಾಡಲು ಬಯಸಿ, ಅವನಿಗೆ ನಿಷ್ಠೆಯನ್ನು ಹೊಂದಿದವರಾಗಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಪಂಚಾಶೋತ್ತರಶತತಮೋऽಧ್ಯಾಯಃ ॥

॥ ಭೀಷ್ಮಾಭಿಷೇಚನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ನಾಲ್ಕನೆಯ ಅಧ್ಯಾಯ

ದುರ್ಯೋಧನನ ಪ್ರಾರ್ಥನೆಯಂತೆ ಭೀಷ್ಮರು ಸೈನ್ಯಾಪತ್ಯವನ್ನು ಸ್ವೀಕರಿಸಿ, ಕುರುಕ್ಷೇತ್ರಕ್ಕೆ ಗಮನ.

ವೈಶಂಪಾಯನಃ

ತತಃ ಶಾಂತನವಂ ಭೀಷ್ಮಂ ಪ್ರಾಂಜಲಿರ್ಧೃತರಾಷ್ಟ್ರಜಃ ।
ಸಹ ಸರ್ವೈರ್ಮಹೀಪಾಲೈರಿದಂ ವಚನಮಬ್ರವೀತ್ ॥೧॥

ವೈಶಂಪಾಯನ– ಅನಂತರ ಧೃತರಾಷ್ಟ್ರಪುತ್ರನಾದ ದುರ್ಯೋಧನನು ಎಲ್ಲ ರಾಜರ ಜೊತೆಯಲ್ಲಿ ಶಂತನು ಪುತ್ರರಾದ ಭೀಷ್ಮರಿಗೆ ಕೈಗಳನ್ನು ಮುಗಿದು ಈ ಮಾತನ್ನಾಡಿದನು.

ಋತೇ ಸೇನಾಪ್ರಣೇತಾರಂ ಪೃತನಾ ಸುಮಹತ್ಯಪಿ ।
ದೀರ್ಯತೇ ಯುದ್ಧಮಾಸಾದ್ಯ ಪಿಪೀಲಿಕಗಣೋ ಯಥಾ ॥೨॥

ಸೇನಾಧಿಪತಿ ಇಲ್ಲದಿದ್ದರೆ ದೊಡ್ಡ ಸೈನ್ಯವೂ ಸಹ ಯುದ್ಧದಲ್ಲಿ ಇರುವೆಗಳ ಸಮೂಹದಂತೆ ಚದುರಿ ಹೋಗುತ್ತದೆ.

ನ ಹಿ ಜಾತು ದ್ವಯೋರ್ಬುದ್ಧಿಃ ಸಮಾ ಭವತಿ ಕರ್ಹಿಚಿತ್ ।
ಶೌರ್ಯಂ ಚ ಜಾಯತೇ ನ್ಯೂನಾಂ ಸ್ಪರ್ಧತೇ ಚ ಪರಸ್ಪರಮ್ ॥೩॥

ಯಾವ ಇಬ್ಬರು ಮನುಷ್ಯರಿಗೂ ಬುದ್ಧಿಯು ಒಂದೇ ರೀತಿ ಇರುವುದಿಲ್ಲ. ಅವರಿಬ್ಬರಲ್ಲಿಯೇ ಪರಸ್ಪರ ಪರಾಕ್ರಮವೂ ಮತ್ತು ಸ್ಪರ್ಧೆಯೂ ಉಂಟಾಗುತ್ತದೆ.

ಶ್ರೂಯತೇ ಚ ಮಹಾಪ್ರಾಜ್ಞ ಹೇಹಯಾನಮಿತೌಜಸಃ ।
ಅಭ್ಯಯುರ್ಬ್ರಾಹ್ಮಣಾಃ ಸರ್ವೇ ಸಮುಚ್ಛ್ರಿತಕುಶಧ್ವಜಾಃ ॥೪॥

ತಾನನ್ವಯುಸ್ತದಾ ವೈಶ್ಯಾಃ ಶೂದ್ರಾಶ್ಚೈವ ಪಿತಾಮಹ ।
ಏಕತಸ್ತು ತ್ರಯೋ ವರ್ಣಾಃ ಏಕತಃ ಕ್ಷತ್ರಿಯರ್ಷಭಾಃ ॥೫॥

ಎಲೈ ಮಹಾಪ್ರಾಜ್ಞನೇ, ಬ್ರಾಹ್ಮಣರು ಕುಶಧ್ವಜಗಳನ್ನು ಎತ್ತಿಕೊಂಡು ಅಮಿತ ಪರಾಕ್ರಮಿಗಳಾದ ಹೈಹಯರನ್ನು ಯುದ್ಧದಲ್ಲಿ ಎದುರಿಸಿದರು. ಎಲೈ ಪಿತಾಮಹನೇ, ಆಗ ವೈಶ್ಯರೂ ಮತ್ತು ಶೂದ್ರರೂ ಸಹ ಬ್ರಾಹ್ಮಣರನ್ನು ಹಿಂಬಾಲಿಸಿದರು. ಒಂದು ಕಡೆ ಮೂರುವರ್ಣಗಳು, ಇನ್ನೊಂದು ಪಕ್ಷದಲ್ಲಿ ಕ್ಷತ್ರಿಯ ಶ್ರೇಷ್ಠರು ಮಾತ್ರ.

ತೇ ಸ್ಮ ಯುದ್ಧೇ ಪ್ರಭಜ್ಯಂತೇ ತ್ರಯೋ ವರ್ಣಾಃ ಪುನಃ ಪುನಃ ।
ಕ್ಷತ್ರಿಯಾಶ್ಚ ಜಯಂತ್ಯೇವ ಬಹುಲಂ ಚೈಕತೋ ಬಲಮ್ ॥೬॥

ಆ ಮೂರು ವರ್ಣದವರು ಪುನಃ ಪುನಃ ಯುದ್ಧದಲ್ಲಿ ಸೋಲನ್ನು ಅನುಭವಿಸುತ್ತಾರೆ. ಇನ್ನೊಂದು ಕಡೆ ಕ್ಷತ್ರಿಯರು ಬಹಳವಾದ ಮೂರು ವರ್ಣದ ಸೈನ್ಯವನ್ನು ಒಬ್ಬರೇ ಗೆಲ್ಲುತ್ತಲೇ ಇರುತ್ತಾರೆ.

ತತಸ್ತೇ ಕ್ಷತ್ರಿಯಾನೇವ ಪಪ್ರಚ್ಛುರ್ದ್ವಿಜಸತ್ತಮಾಃ ।
ತೇಭ್ಯಃ ಶಶಂಸುರ್ಧರ್ಮಜ್ಞಾ ಯಾಥಾತಥ್ಯಂ ಪಿತಾಮಹ ॥೭॥

ಆಗ ಆ ಬ್ರಾಹ್ಮಣ್ಯಶ್ರೇಷ್ಠರು ಕ್ಷತ್ರಿಯರನ್ನೇ ಪ್ರಶ್ನೆ ಮಾಡಿದರು. ಎಲೈ ಪಿತಾಮಹನೇ, ಧರ್ಮಜ್ಞರಾದ ಕ್ಷತ್ರಿಯರು ಆ ಬ್ರಾಹ್ಮಣರಿಗೆ ಸತ್ಯವಾದ ಸಂಗತಿಯನ್ನು ತಿಳಿಸಿದರು.

ವಯಮೇಕಸ್ಯ ಶೃಣುಮೋ ಮಹಾಬುದ್ಧಿಮತೋ ರಣೇ ।
ಭವಂತಸ್ತು ಪೃಥಕ್ ಸರ್ವೇ ಸ್ವಬುದ್ಧಿವಶವರ್ತಿನಃ ॥೮॥

ನಾವು ಯುದ್ಧದಲ್ಲಿ ಮಹಾಬುದ್ಧಿಯುಳ್ಳ ಒಬ್ಬನ ಮಾತನ್ನು ಕೇಳುತ್ತೇವೆ. ನಿಮ್ಮಲ್ಲಿ ಎಲ್ಲರೂ ಬೇರೆ ಬೇರೆಯಾಗಿ ಅವರವರ ಬುದ್ಧಿಗೆ ವಶವಾಗಿ ವರ್ತಿಸುತ್ತೀರಿ.

ತತಸ್ತೇ ಬ್ರಾಹ್ಮಣಾಶ್ಚಕ್ರುರೇಕಂ ಸೇನಾಪತಿಂ ದ್ವಿಜಮ್ ।
ನಯೇಷು ಕುಶಲಂ ಶೂರಮಜಯನ್ ಕ್ಷತ್ರಿಯಾಂಸ್ತತಃ ॥೯॥

ಅನಂತರ ಬ್ರಾಹ್ಮಣರು ನೀತಿಯಲ್ಲಿ ಕುಶಲನಾದ, ಶೂರನಾದ, ತಮ್ಮಲ್ಲಿ ಒಬ್ಬ ದ್ವಿಜನನ್ನು ಸೇನಾಪತಿಯನ್ನಾಗಿ ಮಾಡಿ ಕ್ಷತ್ರಿಯರನ್ನು ಗೆದ್ದರು.

ಏವಂ ಯೇ ಕುಶಲಂ ಶೂರಂ ಹಿತೇ ಸ್ಥಿತಮಕಲ್ಮಷಮ್ ।
ಸೇನಾಪತಿಂ ಪ್ರಕುರ್ವಂತಿ ತೇ ಜಯಂತಿ ರಣೇ ರಿಪೂನ್ ॥೧೦॥

ಹೀಗೆ ಯಾರು ಕುಶಲನೂ, ಶೂರನೂ, ಹಿತನೂ, ನಿಷ್ಕಳಂಕನೂ ಆದ ಪುರುಷನನ್ನು ಸೇನಾಪತಿಯನ್ನಾಗಿ ಮಾಡುತ್ತಾರೋ ಅವರು ಯುದ್ಧದಲ್ಲಿ ಶತ್ರುಗಳನ್ನು ಜಯಿಸುತ್ತಾರೆ.

ಭವಾನುಶನಸಾ ತುಲ್ಯೋ ಹಿತೈಷೀ ಚ ಸದಾ ಮಮ ।
ಅಸಂಹಾರ್ಯಃ ಸ್ಥಿತೋ ಧರ್ಮೇ ಸ ನಃ ಸೇನಾಪತಿರ್ಭವ ॥೧೧॥

ನೀನು ಶುಕ್ರಾಚಾರ್ಯರಿಗೆ ಸಮನಾದವನು ಮತ್ತು ಯಾವಾಗಲೂ ನನ್ನ ಹಿತೈಷಿ. ಧರ್ಮದಲ್ಲಿ ಅಲುಗಾಡದೇ ನಿಂತವನು. ಆದ್ದರಿಂದ ನಮ್ಮ ಸೇನಾಪತಿಯಾಗು.

ರಶ್ಮೀವತಾಮಿವಾದಿತ್ಯೋ ವೀರುಧಾಮಿವ ಚಂದ್ರಮಾಃ ।
ಕುಬೇರ ಇವ ಯಕ್ಷಾಣಾಂ ದೇವಾನಾಮಿವ ವಾಸವಃ ॥೧೨॥

ಪರ್ವತಾನಾಂ ಯಥಾ ಮೇರುಃ ಸುಪರ್ಣಃ ಪತತಾಮಿವ ।
ಕುಮಾರ ಇವ ಭೂತಾನಾಂ ವಸೂನಾಮಿವ ಹವ್ಯವಾಟ್ ॥೧೩॥

ಭವತಾ ಹಿ ವಯಂ ಗುಪ್ತಾಃ ಶಕ್ರೇಣೇವ ದಿವೌಕಸಃ ।
ಅನಾಧೃಷ್ಯಾ ಭವಿಷ್ಯಾಮಃ ತ್ರಿದಶಾನಾಮಪಿ ಧ್ರುವಮ್ ॥೧೪॥

ಗ್ರಹಗಳಿಗೆ ಸೂರ್ಯನಂತೆ, ಲತೆಗಳಿಗೆ ಚಂದ್ರನಂತೆ, ಯಕ್ಷರಿಗೆ ಕುಬೇರನಂತೆ, ದೇವತೆಗಳಿಗೆ ಇಂದ್ರನಂತೆ, ಪರ್ವತಗಳಿಗೆ ಮೇರುವಿನಂತೆ, ಪಕ್ಷಿಗಳಿಗೆ ಗರುಡನಂತೆ, ಭೂತಗಳಿಗೆ ಷಣ್ಮುಖನಂತೆ, ವಸುಗಳಿಗೆ ಅಗ್ನಿಯಂತೆ ನಿನ್ನನ್ನು ಮುಂದೆ ಮಾಡಿಕೊಂಡು ದೇವತೆಗಳು ಇಂದ್ರನಿಂದ ರಕ್ಷಣೆಯನ್ನು ಪಡೆದಂತೆ ರಕ್ಷಣೆಯನ್ನು ಪಡೆದ ನಾವು ಯುದ್ಧದಲ್ಲಿ ದೇವತೆಗಳಿಗೂ ಸೋಲುವವರಾಗುವುದಿಲ್ಲ.

ಪ್ರಯಾತು ನೋ ಭವಾನಗ್ರೇ ದೇವಾನಾಮಿವ ಪಾವಕಿಃ ।
ವಯಂ ತ್ವಾಮನುಯಾಸ್ಯಾಮಃ ಸೌರಭೇಯಾ ಇವರ್ಷಭಮ್ ॥೧೫॥

ದೇವತೆಗಳ ಮುಂದೆ ಷಣ್ಮುಖನು ನಡೆದಂತೆ ನೀನು ಮುಂದೆ ಹೋಗುವವನಾಗು. ವೃಷಭವನ್ನು ಗೋವುಗಳು ಅನುಸರಿಸಿದಂತೆ ನಾವು ನಿನ್ನನ್ನು ಹಿಂಬಾಲಿಸುವೆವು.

ಭೀಷ್ಮಃ

ಏವಮೇತನ್ಮಹಾಬಾಹೋ ಯಥಾ ವದಸಿ ಭಾರತ ।
ಯಥೈವ ಹಿ ಭವಂತೋ ಮೇ ತಥೈವ ಮಮ ಪಾಂಡವಾಃ ॥೧೬॥

ಭೀಷ್ಮ- ಎಲೈ ಭಾರತನೇ, ಮಹಾಬಾಹುವೇ, ನೀನು ಹೇಳುವಂತೆಯೇ ಎಲ್ಲವೂ ಸರಿ. ನನಗೆ ನೀವು ಹೇಗೋ ಪಾಂಡವರೂ ಹಾಗೆಯೇ.

ಅಪಿ ಚೈವ ಮಯಾ ಶ್ರೇಯೋ ವಾಚ್ಯಂ ತೇಷಾಂ ನರಾಧಿಪ ।
ಸುಯೋದ್ಧವ್ಯಂ ತವಾರ್ಥಾಯ ಯಥಾ ಮೇ ಸಮಯಃ ಕೃತಃ ॥೧೭॥

ಎಲೈ ನರಾಧಿಪನೇ, ನಾನು ಅವರಿಗೂ ಸಹ ಶ್ರೇಯಸ್ಸನ್ನು ಹೇಳಬೇಕು ಮತ್ತು ನಾನು ಪ್ರತಿಜ್ಞೆ ಮಾಡಿದಂತೆ ನಿಮ್ಮ ಪರವಾಗಿ ಚೆನ್ನಾಗಿ ಯುದ್ಧವನ್ನು ಮಾಡಬೇಕು.

ನ ತು ಪಶ್ಯಾಮಿ ಯೋದ್ಧಾರಮಾತ್ಮನಃ ಸದೃಶಂ ಭುವಿ ।
ಋತೇ ತಸ್ಮಾನ್ನರವ್ಯಾಘ್ರಾತ್ ಕುಂತೀಪುತ್ರಾದ್ ಧನಂಜಯಾತ್ ॥೧೮॥

ಆದರೆ ಯುದ್ಧದಲ್ಲಿ ಕುಂತೀಪುತ್ರನಾದ, ನರವ್ಯಾಘ್ರನಾದ ಆ ಅರ್ಜುನನನ್ನು ಬಿಟ್ಟು ನನಗೆ ಸದೃಶನಾಗಿ ಪ್ರತಿಯೋಧನಾಗುವ ಯಾವನನ್ನೂ ನಾನು ಭೂಮಿಯಲ್ಲಿ ಕಾಣುತ್ತಿಲ್ಲ.

ಸ ಹಿ ವೇದ ಮಹಾಬುದ್ಧಿರ್ದಿವ್ಯಾನ್ಯಸ್ತ್ರಾಣ್ಯನೇಕಶಃ ।
ನ ತು ಮಾಂ ವಿವೃತೋ ಯುದ್ಧೇ ಜಾತು ಯುಧ್ಯೇತ ಪಾಂಡವಃ॥೧೯॥

ಮಹಾಬುದ್ಧಿಯುಳ್ಳ ಅವನು ಅನೇಕ ದಿವ್ಯಾಸ್ತ್ರಗಳನ್ನು ತಿಳಿದಿದ್ದಾನೆ. ಆದರೆ ಯುದ್ಧದಲ್ಲಿ ಪಾಂಡವನಾದ ಅವನು ಎಲ್ಲವನ್ನೂ ಅಭಿವ್ಯಕ್ತಿಗೊಳಿಸಿ ನನ್ನ ಜೊತೆಯಲ್ಲಿ ನೇರವಾಗಿ ಯುದ್ಧವನ್ನು ಮಾಡಲಾರ.

ಅಹಂ ಸ ಚ ಕ್ಷಣೇನೈವ ನಿರ್ಮನುಷ್ಯಮಿದಂ ಜಗತ್ ।
ಕುರ್ಯಾವಾಸ್ತ್ರಬಲೇನೈವ ಸಸುರಾಸುರರಾಕ್ಷಸಮ್ ॥೨೦॥

ನಾನು ಮತ್ತು ಅವನು ಸೇರಿದರೆ ಒಂದು ಕ್ಷಣದಲ್ಲಿ ಸುರಾಸುರ-ರಾಕ್ಷಸರಿಂದ ಸಹಿತವಾದ ಈ ಪ್ರಪಂಚವನ್ನು ನಮ್ಮ ಅಸ್ತ್ರಗಳ ಬಲದಿಂದ ನಿರ್ಮನುಷ್ಯವಾಗಿ ಮಾಡೇವು!

ನ ತ್ವೇವೋತ್ಸಾದನೀಯಾ ಮೇ ಪಾಂಡೋಃ ಪುತ್ರಾ ಜನಾಧಿಪ ।
ತಸ್ಮಾದ್ ಯೋಧಾನ್ ಹನಿಷ್ಯಾಮಿ ಪ್ರಯೋಗೇಣಾಯುತಂ ಸದಾ ॥

ಆದರೆ ಎಲೈ ರಾಜನೇ, ನನ್ನಿಂದ ಪಾಂಡವರು ಕೊಲ್ಲಲ್ಪಡುವವರಲ್ಲ. ಆದ್ದರಿಂದ ಅಸ್ತ್ರಪ್ರಯೋಗದಿಂದ ಪ್ರತಿದಿನವೂ ಹತ್ತು ಸಾವಿರ ಯೋಧರನ್ನು ಕೊಲ್ಲುವೆನು.

ಏವಮೇಷಾಂ ಕರಿಷ್ಯಾಮಿ ನಿಧನಂ ಕುರುನಂದನ ।
ನ ಚೇತ್ ತೇ ಮಾಂ ಹನಿಷ್ಯಂತಿ ಪೂರ್ವಮೇವ ಸಮಾಗಮೇ ॥೨೨॥

ಆ ಪಾಂಡವರು ಮೊದಲೇ ಯುದ್ಧದಲ್ಲಿ ನನ್ನನ್ನು ಕೊಲ್ಲದಿದ್ದರೆ ಎಲೈ ಕುರುನಂದನನೇ, ಈ ರೀತಿಯಲ್ಲಿ ಅವರ ಸೈನ್ಯಕ್ಕೆ ವಿನಾಶವನ್ನು ಉಂಟುಮಾಡುವೆನು.

ಸೇನಾಪತಿಸ್ತ್ವಹಂ ರಾಜನ್ ಸಮಯೇನಾಪರೇಣ ತೇ ।
ಭವಿಷ್ಯಾಮಿ ಯಥಾಕಾಮಂ ತನ್ಮೇ ಶ್ರೋತುಮಿಹಾರ್ಹಸಿ ॥೨೩॥

ಎಲೈ ರಾಜನೇ, ನಾನು ಇನ್ನೊಂದು ಷರತ್ತಿನ ಮೇಲೆ ನಿನ್ನ ಇಚ್ಛೆಯಂತೆ ಸೇನಾಪತಿಯಾಗುವೆನು. ಅದನ್ನು ನೀನು ಕೇಳಬೇಕು.

ಕರ್ಣೋ ವಾ ಯುಧ್ಯತಾಂ ಪೂರ್ವಮಹಂ ವಾ ಪೃಥಿವೀಪತೇ ।
ಸ್ಪರ್ಧತೇ ಹಿ ಸದಾऽತ್ಯರ್ಥಂ ಸೂತಪುತ್ರೋ ಮಯಾ ರಣೇ ॥೨೪॥

ಎಲೈ ರಾಜನೇ, ಮೊದಲು ಕರ್ಣನು ಯುದ್ಧವನ್ನು ಮಾಡಲಿ ಅಥವಾ ನಾನು ಯುದ್ಧವನ್ನು ಮಾಡಬೇಕು. ಏಕೆಂದರೆ ಸೂತಪುತ್ರನಾದ ಅವನು ಯುದ್ಧದಲ್ಲಿ ಯಾವಾಗಲೂ ನನ್ನ ಜೊತೆಯಲ್ಲಿ ಸ್ಪರ್ಧಿಸುತ್ತಾನೆ.

ಕರ್ಣಃ

ನಾಹಂ ಜೀವತಿ ಗಾಂಗೇಯೇ ರಾಜನ್ ಯೋತ್ಸ್ಯೇ ಕಥಂಚನ ।
ಹತೇ ಭೀಷ್ಮೇ ತು ಯೋತ್ಸ್ಯಾಮಿ ಸಹ ಗಾಂಡೀವಧನ್ವನಾ ॥೨೫॥

ಕರ್ಣ– ಎಲೈ ರಾಜನೇ, ಭೀಷ್ಮರು ಬದುಕಿರುವವರೆಗೆ ನಾನು ಯುದ್ಧವನ್ನು ಮಾಡುವುದಿಲ್ಲ. ಭೀಷ್ಮರ ವಧೆಯ ನಂತರ ನಾನು ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ವೈಶಂಪಾಯನಃ

ತತಃ ಸೇನಾಪತಿಂ ಚಕ್ರೇ ವಿಧಿವದ್ ಭೂರಿದಕ್ಷಿಣಮ್ ।
ಧೃತರಾಷ್ಟ್ರಾತ್ಮಜೋ ಭೀಷ್ಮಂ ಸೋऽಭಿಷಿಕ್ತೋ ವ್ಯರೋಚತ ॥೨೬॥

ವೈಶಂಪಾಯನ– ಅನಂತರ ಧೃತರಾಷ್ಟ್ರಪುತ್ರನಾದ ದುರ್ಯೋಧನನು ಭೂರಿದಕ್ಷಿಣೆಯನ್ನು ಕೊಟ್ಟು ಭೀಷ್ಮರನ್ನು ಶಾಸ್ತ್ರಪ್ರಕಾರದಂತೆ ಸೇನಾಪತಿಯನ್ನಾಗಿ ಮಾಡಿದನು. ಸೇನಾಪತಿಯಾದ ಭೀಷ್ಮರು ಕಂಗೊಳಿಸಿದರು.

ತತೋ ಭೇರೀಂಶ್ಚ ಶಂಖಾಂಶ್ಚ ಶತಶಶ್ಚೈವ ಪುಷ್ಕರಾನ್ ।
ವಾದಯಾಮಾಸುರವ್ಯಗ್ರಾ ವಾದಕಾ ರಾಜಶಾಸನಾತ್ ॥೨೭॥

ಆಗ ವಾದಕರು ರಾಜಶಾಸನದಂತೆ ಭೇರಿಗಳನ್ನೂ, ಶಂಖಗಳನ್ನೂ, ನೂರಾರು ಪುಷ್ಕರಗಳನ್ನೂ ಎಚ್ಚರಿಕೆಯಿಂದ ವಾದಿಸಿದರು.

ಸಿಂಹನಾದಾಶ್ಚ ವಿವಿಧಾ ವಾಹನಾನಾಂ ಚ ನಿಸ್ವನಾಃ ।
ನಿರ್ಘಾತಾಃ ಪೃಥಿವೀಕಂಪೋ ಗಜಬೃಂಹಿತನಿಸ್ವನಾಃ ॥೨೮॥

ಆಸಂಶ್ಚ ಸರ್ವಯೋಧಾನಾಂ ಪೀಡಯಂತೋ ಮನಾಂಸ್ಯುತ ॥೨೯॥

ಅನೇಕ ವಿಧವಾದ ಸಿಂಹನಾದಗಳು ಮತ್ತು ಗಜಾಶ್ವಗಳ ನಾದಗಳೂ ಕೇಳಿಬಂದವು. ಸಿಡಿಲುಗಳು, ಭೂಕಂಪ, ಆನೆಗಳ ಬೃಂಹಣ ನಾದಗಳು ಎಲ್ಲವೂ ಎಲ್ಲಾ ಯೋಧರ ಮನಸ್ಸಿಗೆ ಪೀಡೆಯನ್ನು ಉಂಟು ಮಾಡುತ್ತಾ ಉಂಟಾದವು.

ವಾಚಶ್ಚಾಪ್ಯಶರೀರಿಣ್ಯೋ ದಿವಶ್ಚೋಲ್ಕಾಃ ಪ್ರಪೇದಿರೇ ।
ಪ್ರಾದುರಾಸೀದನಭ್ರೇ ಚ ವರ್ಷಂ ರುಧಿರಕರ್ದಮಮ್ ॥೩೦॥

ಶಿವಾಶ್ಚ ಭಯವೇದಿನ್ಯೋ ನೇದುರ್ದೀಪ್ತತರಾ ಭೃಶಮ್ ॥೩೧॥

ಅಶರೀರವಾಣಿಗಳು ಉಂಟಾದವು. ಆಕಾಶದಿಂದ ಉಲ್ಕೆಗಳು ಬಿದ್ದವು. ಮೋಡವಿಲ್ಲದ ಆಕಾಶದಿಂದ ರಕ್ತದ ಕೆಸರಿನಿಂದ ಕೂಡಿದ ಮಳೆಯು ಬಿದ್ದಿತು. ನರಿಗಳು ಭಯವನ್ನು ಸೂಚಿಸುತ್ತಾ ಘೋರವಾಗಿ ಕಿರುಚಿದವು.

ಸೇನಾಪತ್ಯೇ ಯದಾ ರಾಜಾ ಗಾಂಗೇಯಮಭಿಷಿಕ್ತವಾನ್ ।
ತದೈತಾನ್ಯುಗ್ರರೂಪಾಣಿ ಬಭೂವುಃ ಶತಶೋ ನೃಪ ॥೩೨॥

ಎಲೈ ರಾಜನೇ, ರಾಜನಾದ ದುರ್ಯೋಧನನು ಗಂಗಾಪುತ್ರರಾದ ಭೀಷ್ಮರನ್ನು ಸೇನಾಪತ್ಯದಲ್ಲಿ ಅಭಿಷೇಕ ಮಾಡಿದಾಗ ಈ ಘೋರವಾದ ಅಪಶಕುನಗಳು ನೂರಾರು ಸಂಖ್ಯೆಯಲ್ಲಿ ಉಂಟಾದವು.

ತತಃ ಸೇನಾಪತಿಂ ಕೃತ್ವಾ ಭೀಷ್ಮಂ ಪರಬಲಾರ್ದನಮ್ ।
ವಾಚಯಿತ್ವಾ ದ್ವಿಜಶ್ರೇಷ್ಠಾನ್ ಗೋಭಿರ್ನಿಷ್ಕೈಶ್ಚ ಭೂರಿಶಃ ॥೩೩॥

ಪೂಜ್ಯಮಾನೋ ಜಯಾಶೀರ್ಭಿರ್ನಿರ್ಯಯೌ ಸೈನಿಕೈರ್ವೃತಃ ॥೩೪॥

ಅನಂತರ ಶತ್ರುಸೈನ್ಯವನ್ನು ಅರ್ದಿಸುವ ಭೀಷ್ಮರನ್ನು ಸೇನಾಪತಿಯನ್ನಾಗಿ ಮಾಡಿ ದ್ವಿಜಶ್ರೇಷ್ಠರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು ಅವರನ್ನು ಗೋವುಗಳಿಂದಲೂ, ನಿಷ್ಕಗಳಿಂದಲೂ ಪೂಜಿಸಿ, ಅವರಿಂದ ಜಯಾಶೀರ್ವಾದಗಳನ್ನು ಪಡೆದು ಸೈನಿಕರಿಂದ ಪರಿವೃತನಾಗಿ ಹೊರಟನು.

ಆಪಗೇಯಂ ಪುರಸ್ಕೃತ್ಯ ಭ್ರಾತೃಭಿಃ ಸಹಿತಸ್ತದಾ ।
ಸ್ಕಂಧಾವಾರೇಣ ಮಹತಾ ಕುರುಕ್ಷೇತ್ರಂ ಜಗಾಮ ಹ ॥೩೫॥

ಭೀಷ್ಮರನ್ನು ಮುಂದೆ ಮಾಡಿಕೊಂಡು ಸಹೋದರರಿಂದ ಸಹಿತನಾಗಿ ಸೈನ್ಯದ ದೊಡ್ಡ ಭಾಗವನ್ನು ತೆಗೆದುಕೊಂಡು ಕುರುಕ್ಷೇತ್ರಕ್ಕೆ ಹೋದನು.

ಪರಿಕ್ರಮ್ಯ ಕುರುಕ್ಷೇತ್ರಂ ಕರ್ಣೇನ ಸಹ ಕೌರವಃ ।
ಶಿಬಿರಂ ಮಾಪಯಾಮಾಸ ಸಮೇ ದೇಶೇ ಜನಾಧಿಪಃ ॥೩೬॥

ದುರ್ಯೋಧನನು ಕರ್ಣನ ಜೊತೆಯಲ್ಲಿ ಕುರುಕ್ಷೇತ್ರದಲ್ಲೆಲ್ಲಾ ಸುತ್ತಾಡಿ ಸಮತಟ್ಟಾದ ದೇಶದಲ್ಲಿ ಶಿಬಿರದ ಭೂಮಿಯನ್ನು ಅಳತೆ ಮಾಡಿಸಿದನು.

ಮಧುರಾನೂಪಕೇ ದೇಶೇ ಪ್ರಭೂತಯವಸೇಂಧನೇ ।
ಯಥೈವ ಹಸ್ತಿನಪುರಂ ಶಿಬಿರಂ ತತ್ ತಥಾऽಭವತ್ ॥೩೭॥

ಮಧುರವಾದ, ಮರುಭೂಮಿಯಲ್ಲದ, ಮೇವು-ಕಟ್ಟಿಗೆಗಳು ಬಹಳವಾಗಿರುವ ಒಂದು ಪ್ರದೇಶದಲ್ಲಿ ಹಸ್ತಿನಪುರದಂತೆಯೇ ಇರುವ ಶಿಬಿರವನ್ನು ನಿರ್ಮಾಣ ಮಾಡಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಃಪಂಚಾಶೋऽತ್ತರಶತತಮೋऽಧ್ಯಾಯಃ ॥

॥ ಭೀಷ್ಮಾಭಿಷೇಚನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೈದನೆಯ ಅಧ್ಯಾಯ

ಯುಧಿಷ್ಠಿರನಿಂದ ಧೃಷ್ಟದ್ಯುಮ್ನನನ್ನು ಸೇನಾಪತಿಯಾಗಿ ಶಾಸನ.
ಬಲರಾಮನ ತೀರ್ಥಯಾತ್ರಾಗಮನ.

ಜನಮೇಜಯಃ

ಆಪಗೇಯಂ ಮಹಾತ್ಮಾನಂ ಭೀಷ್ಮಂ ಶಸ್ತ್ರಭೃತಾಂ ವರಮ್ ।
ಪಿತಾಮಹಂ ಭಾರತಾನಾಂ ಧ್ವಜಂ ಸರ್ವಮಹೀಕ್ಷಿತಾಮ್ ॥೧॥

ಬೃಹಸ್ಪತಿಸಮಂ ಬುದ್ಧ್ಯಾ ಕ್ಷಮಯಾ ಪೃಥಿವೀಸಮಮ್ ।
ಸಮುದ್ರಮಿವ ಗಾಂಭೀರ್ಯೇ ಹಿಮವಂತಮಿವಾತುಲಮ್ ॥೨॥

ಪ್ರಜಾಪತಿಮಿವೌದಾರ್ಯೇ ತೇಜಸಾ ಭಾಸ್ಕರೋಪಮಮ್ ।
ಮಹೇಂದ್ರಮಿವ ಶತ್ರೂಣಾಂ ಧ್ವಂಸನೇ ಶರವೃಷ್ಟಿಭಿಃ ॥೩॥

ರಣಯಜ್ಞೇ ಪ್ರವಿತತೇ ಸುಭೀಮೇ ರೋಮಹರ್ಷಣೇ ।
ದೀಕ್ಷಿತಂ ಚಿರರಾತ್ರಾಯ ಶ್ರುತ್ವಾ ರಾಜಾ ಯುಧಿಷ್ಠಿರಃ ॥೪॥

ಕಿಮಬ್ರವೀನ್ಮಹಾಬಾಹುಃ ಸರ್ವಧರ್ಮವಿಶಾರದಃ ।
ಭೀಮಸೇನಾರ್ಜುನೌ ವಾऽಪಿ ಕೃಷ್ಣೋ ವಾ ಪ್ರತ್ಯಪದ್ಯತ ॥೫॥

ಜನಮೇಜಯ– ಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ, ಭಾರತರ ಪಿತಾಮಹರಾದ, ಸರ್ವರಾಜರ ಮಧ್ಯದಲ್ಲಿ ಧ್ವಜದಂತಿರುವ, ಬುದ್ಧಿಯಲ್ಲಿ ಬೃಹಸ್ಪತಿಗೆ ಸಮರಾದ, ಸಹನೆಯಲ್ಲಿ ಭೂಮಿಗೆ ಸಮರಾದ, ಗಾಂಭೀರ್ಯದಲ್ಲಿ ಸಮುದ್ರಕ್ಕೆ ಸಮರಾದ, ಹಿಮವಂತನಂತೆ ಉಪಮಾನವಿಲ್ಲದ, ಔದಾರ್ಯದಲ್ಲಿ ಬ್ರಹ್ಮನಂತಿರುವ, ತೇಜಸ್ಸಿನಲ್ಲಿ ಭಾಸ್ಕರನಂತಿರುವ, ಬಾಣಗಳ ವರ್ಷವನ್ನು ಕರೆದು ಶತ್ರುಗಳನ್ನು ಧ್ವಂಸ ಮಾಡುವುದರಲ್ಲಿ ಮಹೇಂದ್ರನಂತಿರುವ, ಗಂಗಾಪುತ್ರರಾದ ಮಹಾತ್ಮರಾದ ಭೀಷ್ಮರು ರೋಮಹರ್ಷಣವಾದ, ಭಯಂಕರವಾದ, ವಿಸ್ತಾರವಾದ ರಣರಂಗದಲ್ಲಿ ದೀಕ್ಷಿತರಾಗಿದ್ದಾರೆ ಎಂಬ ಸುದ್ದಿಯನ್ನು ಕೇಳಿದ ಮಹಾಬಾಹುವೂ, ಸರ್ವಧರ್ಮ ವಿಶಾರದನೂ ಆದ ಯುಧಿಷ್ಠಿರನು ಏನು ಹೇಳಿದನು? ಭೀಮಸೇನನಾಗಲೀ, ಅರ್ಜುನನಾಗಲೀ ಅಥವಾ ಕೃಷ್ಣನಾಗಲೀ ಏನು ಮಾಡಿದರು?

ವೈಶಂಪಾಯನಃ

ಆಪದ್ಧರ್ಮಾರ್ಥಕುಶಲೋ ಮಹಾಬುದ್ಧಿರ್ಯುಧಿಷ್ಠಿರಃ ।
ಸರ್ವಾನ್ ಭ್ರಾತೄನ್ ಸಮಾನೀಯ ವಾಸುದೇವಂ ಚ ಶಾಶ್ವತಮ್ ॥೬॥

ಉವಾಚ ವದತಾಂ ಶ್ರೇಷ್ಠಃ ಸಾಂತ್ವಪೂರ್ವಮಿದಂ ವಚಃ ॥೭॥

ವೈಶಂಪಾಯನ– ಆಪದ್ಧರ್ಮ ಮತ್ತು ಆಪದರ್ಥಗಳಲ್ಲಿ ಕುಶಲನಾದ, ಮಾತನಾಡುವವರಲ್ಲಿ ಶ್ರೇಷ್ಠನಾದ, ಮಹಾಬುದ್ಧಿಯುಳ್ಳ ಯುಧಿಷ್ಠಿರನು ಎಲ್ಲಾ ಸಹೋದರರನ್ನೂ ಮತ್ತು ಶಾಶ್ವತನಾದ ವಾಸುದೇವನನ್ನೂ ಕರೆದು ಸಮಾಧಾನ ಪೂರ್ವಕವಾಗಿ ಈ ಮಾತನ್ನಾಡಿದನು.

ಪರ್ಯಾಕ್ರಾಮತ ಸೈನ್ಯಾನಿ ಯತ್ತಾಸ್ತಿಷ್ಠತ ದಂಸಿತಾಃ ।
ಪಿತಾಮಹೇನ ವೋ ಯುದ್ಧಂ ಪೂರ್ವಮೇವ ಭವಿಷ್ಯತಿ ॥೮॥

ತಸ್ಮಾತ್ ಸಪ್ತಸು ಸೇನಾಸು ಪ್ರಣೇತ್ಯಾನ್ ಮಮ ಪಶ್ಯತ ॥೯॥

ಸೈನ್ಯದಲ್ಲೆಲ್ಲಾ ಸುತ್ತಾಡಿ ಕವಚವನ್ನು ಧರಿಸಿ ಸಿದ್ಧರಾಗಿರಿ. ಮೊದಲೇ ಪಿತಾಮಹರಾದ ಭೀಷ್ಮರ ಜೊತೆಯಲ್ಲಿ ಯುದ್ಧವು ಉಂಟಾಗುವುದು. ಆದ್ದರಿಂದ ಏಳು ಸೈನ್ಯಗಳಲ್ಲಿಯೂ ನಮ್ಮ ಸೇನಾನಾಯಕರನ್ನು ಆರಿಸಿ.

ವಾಸುದೇವಃ

ಯಥಾऽರ್ಹತಿ ಭವಾನ್ ವಕ್ತುಮಸ್ಮಿನ್ ಕಾಲೇ ಹ್ಯುಪಸ್ಥಿತೇ ।
ತದೇತದರ್ಥವದ್ ವಾಕ್ಯಮುಕ್ತಂ ತೇ ಭರತರ್ಷಭ ॥೧೦॥

ರೋಚತೇ ಮೇ ಮಹಾಬಾಹೋ ಕ್ರಿಯತಾಂ ಯದನಂತರಮ್ ।
ನಾಯಕಾಸ್ತವ ಸೈನ್ಯಾನಾಂ ಕ್ರಿಯಂತಾಮಿವ ಸಪ್ತ ವೈ ॥೧೧॥

ವಾಸುದೇವ– ಎಲೈ ಭರತರ್ಷಭನೇ, ಇಂತಹ ಕಾಲವು ಪ್ರಾಪ್ತವಾದಾಗ ನೀನು ಹೇಗೆ ಮಾತನಾಡಬೇಕೋ ಅದರಂತೆಯೇ ಅರ್ಥಪೂರ್ಣವಾದ ಮಾತನ್ನು ಆಡಿದ್ದೀಯೆ. ನಿನ್ನ ಮಾತುಗಳು ನನಗೆ ಇಷ್ಟವಾಗುತ್ತವೆ. ಎಲೈ ಮಹಾಬಾಹುವೇ, ಮುಂದೆ ಏನು ಮಾಡಬೇಕೋ ಅದನ್ನು ಮಾಡುವವನಾಗು. ನಿನ್ನ ಸೈನ್ಯಗಳಿಗೆ ಏಳು ನಾಯಕರನ್ನು ಮಾಡುವವನಾಗು.

ವೈಶಂಪಾಯನಃ

ತತೋ ದ್ರುಪದಮಾನೀಯ ವಿರಾಟಂ ಶಿನಿಪುಂಗವಮ್ ।
ಧೃಷ್ಟದ್ಯುಮ್ನಂ ಚ ಪಾಂಚಾಲ್ಯಂ ಧೃಷ್ಟಕೇತುಂ ಚ ಪಾರ್ಥಿವಮ್ ॥೧೨॥

ಶಿಖಂಡಿನಂ ಚ ಪಾಂಚಾಲ್ಯಂ ಸಹದೇವಂ ಚ ಮಾಗಧಮ್ ।
ಏತಾನ್ ಸಪ್ತ ಮಹೇಷ್ವಾಸಾನ್ ವೀರಾನ್ ಯುದ್ಧಾಭಿನಂದಿನಃ ॥೧೩॥

ಸೇನಾಪ್ರಣೇತೃನ್ ವಿಧಿವದ್ ಅಭ್ಯಷಿಂಚದ್ ಯುಧಿಷ್ಠಿರಃ ॥೧೪॥

ಅನಂತರ ದ್ರುಪದ, ವಿರಾಟ, ಶೈನೇಯನಾದ ಸಾತ್ಯಕಿ, ಪಾಂಚಾಲದೇಶದ ಧೃಷ್ಟದ್ಯುಮ್ನ, ಸಹದೇವನ ಮಗನಾದ ಧೃಷ್ಟಕೇತು, ಪಾಂಚಾಲ ದೇಶದ ಶಿಖಂಡಿ, ಜರಾಸಂಧನ ಮಗನಾದ ಸಹದೇವ - ಯುದ್ಧವನ್ನು ಆಶಿಸುವ ಮಹಾಧನುರ್ಧಾರಿಗಳಾದ ಈ ಏಳು ವೀರರಿಗೆ ಯುಧಿಷ್ಠಿರನು ಸೇನಾ ನಾಯಕರಾಗಿ ವಿಧಿ ಪೂರ್ವಕವಾಗಿ ಅಭಿಷೇಕ ಮಾಡಿದನು.

ಸರ್ವಸೇನಾಪತಿಂ ಚಾತ್ರ ಧೃಷ್ಟದ್ಯುಮ್ನಮಥಾದಿಶತ್ ।
ದ್ರೋಣಾಂತಹೇತುರುತ್ಪನ್ನೋ ಯ ಇಷ್ಟಾಜ್ಜಾತವೇದಸಃ ॥೧೫॥

ದ್ರೋಣರ ಸಂಹಾರಕ್ಕಾಗಿಯೇ ಯಜ್ಞಕುಂಡದಲ್ಲಿ ಅಗ್ನಿಯಿಂದ ಹೊರಬಂದ ಧೃಷ್ಟದ್ಯುಮ್ನನನ್ನು ಸರ್ವಸೇನಾಪತಿಯನ್ನಾಗಿ ಮಾಡಿದನು.

ಸರ್ವೇಷಾಮೇವ ತೇಷಾಂ ತು ಸಮಸ್ತಾನಾಂ ಮಹಾತ್ಮನಾಮ್ ।
ಸೇನಾಪತಿಪತಿಂ ಚಕ್ರೇ ಗುಡಾಕೇಶಂ ಧನಂಜಯಮ್ ॥೧೬॥

ಆ ಮಹಾತ್ಮರಾದ ಎಲ್ಲಾ ಸೇನಾಪತಿಗಳಿಗೂ ಗುಡಾಕೇಶನಾದ ಧನಂಜಯನನ್ನು ಪತಿಯನ್ನಾಗಿ ಮಾಡಿದನು.

ಅರ್ಜುನಸ್ಯಾಪಿ ನೇತಾ ಚ ಸಂಯಂತಾ ಚೈವ ವಾಜಿನಾಮ್ ।
ಸಂಕರ್ಷಣಾನುಜಃ ಶ್ರೀಮಾನ್ ಮಹಾಬುದ್ಧಿರ್ಜನಾರ್ದನಃ ॥೧೭॥

ಮಹಾಬುದ್ಧಿಯುಳ್ಳ, ಸಂಪದ್ಯುಕ್ತನಾದ, ಬಲರಾಮನ ತಮ್ಮನಾದ ಜನಾರ್ದನನು ಅರ್ಜುನನಿಗೂ ನಾಯಕನಾಗಿಯೂ, ಹಯಸಾರಥಿಯಾಗಿಯೂ ಆದನು.

ತದ್ ದೃಷ್ಟ್ವೋಪಸ್ಥಿತಂ ಯುದ್ಧಂ ಸಮಾಸನ್ನಂ ಮಹಾತ್ಯಯಮ್ ।
ಪ್ರಾವಿಶದ್ ಭವನಂ ರಾಜ್ಞಃ ಪಾಂಡವಸ್ಯ ಹಲಾಯುಧಃ ॥೧೮॥

ಸಹಾಕ್ರೂರಪ್ರಭೃತಿಭಿಃ ಗದಸಾಂಬೋದ್ಧವಾದಿಭಿಃ ।
ರೌಗ್ಮಿಣೇಯಾಹುಕಯುತೈಃ ಚಾರುದೇಷ್ಣಪುರೋಗಮೈಃ ॥೧೯॥

ವೃಷ್ಣಿಮುಖ್ಯೈರುಪಗತೈಃ ವ್ಯಾಘ್ರೈರಿವ ಮದೋತ್ಕಟೈಃ ।
ಅಭಿಗುಪ್ತೋ ಮಹಾಬಾಹುಃ ಮರುದ್ಭಿರಿವ ವಾಸವಃ ॥೨೦॥

ನೀಲಕೌಶೇಯವಸನಃ ಕೈಲಾಸಶಿಖರೋಪಮಃ ।
ಸಿಂಹಖೇಲಗತಿಃ ಶ್ರೀಮಾನ್ ಮದರಕ್ತಾಂತಲೋಚನಃ ॥೨೧॥

ದೊಡ್ಡ ಅಪಚಾರರೂಪವಾದ ಯುದ್ಧವು ಪ್ರಾಪ್ತವಾದುದನ್ನು ನೋಡಿ ಬಲರಾಮನು ಅಕ್ರೂರಾದಿಗಳ ಜೊತೆಯಲ್ಲಿಯೂ, ಗದ, ಸಾಂಬ, ಉದ್ಧವರ ಜೊತೆಯಲ್ಲಿಯೂ ಪ್ರದ್ಯುಮ್ನ, ಆಹುಕನಿಂದ ಕೂಡಿದ ಚಾರುದೇಷ್ಣ ಮೊದಲಾದವರ ಜೊತೆಯಲ್ಲಿಯೂ, ಮದೋತ್ಕಟರಾದ ವ್ಯಾಘ್ರದಂತಿರುವ ವೃಷ್ಣಿಶ್ರೇಷ್ಠರ ಜೊತೆಯಲ್ಲಿಯೂ, ಮರುತ್ತುಗಳಿಂದ ಇಂದ್ರನಂತೆ ರಕ್ಷಿತನಾಗಿ ಮಹಾಬಾಹುವೂ, ಕೈಲಾಸಶಿಖರದಂತೆ ಉನ್ನತನಾದವನೂ, ಸಿಂಹದ ಕ್ರೀಡೆಯ ಗತಿಯುಳ್ಳವನೂ, ಕಾಂತಿಯುಕ್ತನಾದವನೂ, ಮದದಿಂದ ಕೆಂಪಾದ ಕಣ್ಣುಳ್ಳವನೂ ಮತ್ತು ನೀಲಾಂಬರಧಾರಿಯೂ ಆದ ಅವನು ಯುಧಿಷ್ಠಿರನ ಗೃಹವನ್ನು ಪ್ರವೇಶಿಸಿದನು.

ತಂ ದೃಷ್ಟ್ವಾ ಧರ್ಮರಾಜಶ್ಚ ಕೇಶವಶ್ಚ ಮಹಾದ್ಯುತಿಃ ।
ಉದತಿಷ್ಠತ್ ತತಃ ಪಾರ್ಥೋ ಭೀಮಕರ್ಮಾ ವೃಕೋದರಃ ॥೨೨॥

ಅವನನ್ನು ನೋಡಿ ಧರ್ಮರಾಜನೂ, ಮಹಾಕಾಂತಿಯುಕ್ತನಾದ ಕೇಶವನೂ, ಭಯಂಕರ ಕರ್ಮಗಳನ್ನು ಮಾಡುವ ವೃಕೋದರನೂ ಎದ್ದು ನಿಂತರು.

ಗಾಂಡೀವಧನ್ವಾ ಯೇ ಚಾನ್ಯೇ ರಾಜಾನಸ್ತತ್ರ ಕೇಚನ ।
ಪೂಜಯಾಂಚಕ್ರುರಭ್ಯೇತ್ಯ ತೇ ಸ್ಮ ಸರ್ವೇ ಹಲಾಯುಧಮ್ ॥೨೩॥

ಗಾಂಡೀವ ಧನುರ್ಧಾರಿಯಾದ ಅರ್ಜುನ ಮತ್ತು ಅಲ್ಲಿದ್ದ ಇನ್ನು ಕೆಲವು ರಾಜರೆಲ್ಲರೂ ಬಲರಾಮನ ಬಳಿ ಬಂದು ಅವನನ್ನು ಪೂಜಿಸಿದರು.

ತತಸ್ತಂ ಪಾಂಡವೋ ರಾಜಾ ಕರೇ ಪಸ್ಪರ್ಶ ಪಾಣಿನಾ ।
ವಾಸುದೇವಪುರೋಗಾಸ್ತಂ ಸರ್ವ ಏವಾಭ್ಯವಾದಯನ್ ॥೨೪॥

ಅನಂತರ ಪಾಂಡವನಾದ ಯುಧಿಷ್ಠಿರನು ಅವನ ಹಸ್ತವನ್ನು ಹಿಡಿದುಕೊಂಡನು. ಕೃಷ್ಣ ಮೊದಲಾದವರೆಲ್ಲರೂ ಅವನಿಗೆ ನಮಸ್ಕರಿಸಿದರು.

ವಿರಾಟದ್ರುಪದೌ ವೃದ್ಧಾವಭಿವಾದ್ಯ ಹಲಾಯುಧಃ ।
ಯುಧಿಷ್ಠಿರೇಣ ಸಹಿತ ಉಪಾವಿಶದರಿಂದಮಃ ॥೨೫॥

ಅರಿಂದಮನಾದ ಹಲಾಯುಧನು ವೃದ್ಧರಾದ ವಿರಾಟ, ದ್ರುಪದರಿಗೆ ವಂದನೆಯನ್ನು ಸಲ್ಲಿಸಿ, ಯುಧಿಷ್ಠಿರನ ಜೊತೆಯಲ್ಲಿ ಕುಳಿತುಕೊಂಡನು.

ತತಸ್ತೇಷೂಪವಿಷ್ಟೇಷು ಪಾರ್ಥಿವೇಷು ಸಮಂತತಃ ।
ವಾಸುದೇವಮಭಿಪ್ರೇಕ್ಷ್ಯ ರೌಹಿಣೇಯೋಽಭ್ಯಭಾಷತ ॥೨೬॥

ಅನಂತರ ಸುತ್ತಲೂ ಎಲ್ಲ ರಾಜರೂ ಕುಳಿತುಕೊಳ್ಳುತ್ತಿರಲು ಕೃಷ್ಣನನ್ನು ನೋಡುತ್ತಾ ಬಲರಾಮನು ಮಾತನಾಡಿದನು.

ಭವಿತಾಽಯಂ ಮಹಾರೌದ್ರೋ ದಾರುಣಃ ಪುರುಷಕ್ಷಯಃ ।
ದಿಷ್ಟಮೇತದ್ ಧ್ರುವಂ ಮನ್ಯೇ ನ ಶಕ್ಯಮತಿವರ್ತಿತುಮ್ ॥೨೭॥

ಮಹಾಕ್ರೂರವಾದ, ಭಯಂಕರವಾದ ಈ ಪುರುಷ ವಿನಾಶವು ಉಂಟಾಗುವುದು. ಇದು ಖಂಡಿತವಾಗಿ ದೈವ ಸಂಕಲ್ಪವೆಂದು ನಾನು ತಿಳಿಯುತ್ತೇನೆ. ಇದನ್ನು ತಪ್ಪಿಸಲು ಸಾಧ್ಯವಿಲ್ಲ.

ತಸ್ಮಾದ್ ಯುದ್ಧಾತ್ ಸಮುತ್ತೀರ್ಣಾನ್ ಅಪಿ ವಃ ಸಸುಹೃದ್ಗಣಾನ್ ।
ಅರೋಗಾನಕ್ಷತೈರ್ದೇಹೈಃ ದ್ರಷ್ಟಾಸ್ಮೀತಿ ಮತಿರ್ಮಮ ॥೨೮॥

ಆದ್ದರಿಂದ ಯುದ್ಧವನ್ನು ಮುಗಿಸಿ, ರೋಗವಿಲ್ಲದ ಮತ್ತು ಗಾಯವಿಲ್ಲದ ದೇಹವುಳ್ಳ ನಿಮ್ಮನ್ನು ಸುಹೃದ್ವರ್ಗದ ಜೊತೆಯಲ್ಲಿ ನೋಡುವೆನು ಎಂದು ನನ್ನ ಅಭಿಪ್ರಾಯ.

ಸಮೇತಂ ಪಾರ್ಥಿವಂ ಕ್ಷತ್ರಂ ಕಾಲಪಕ್ವಮಸಂಶಯಮ್ ।
ವಿಮರ್ದಃ ಸುಮಹಾನ್ ಭಾವೀ ಮಾಂಸಶೋಣಿತಕರ್ದಮಃ ॥೨೯॥

ಒಂದುಗೂಡಿರುವ ಭೂಮಿಯ ಮೇಲಿರುವ ಕ್ಷತ್ರಿಯರೆಲ್ಲರೂ ನಿಸ್ಸಂಶಯವಾಗಿ ಕಾಲಪಕ್ವರಾಗಿದ್ದಾರೆ. ಮಾಂಸ-ಶೋಣಿತ (ರಕ್ತ) ರೂಪವಾದ ಕೆಸರುಳ್ಳ ದೊಡ್ಡ ಸಂಘರ್ಷವು ಖಂಡಿತವಾಗಿ ನಡೆಯಲಿದೆ.

ಉಕ್ತೋ ಮಯಾ ವಾಸುದೇವಃ ಪುನಃ ಪುನರುಪಹ್ವರೇ ।
ಸಂಬಂಧಿಷು ಸಮಾಂ ವೃತ್ತಿಂ ವರ್ತಸ್ವ ಮಧುಸೂದನ ॥೩೦॥

ನಾನು ಮಧುಸೂದನನಾದ ವಾಸುದೇವನಿಗೆ ಏಕಾಂತದಲ್ಲಿ ಸಂಬಂಧಿಗಳಲ್ಲಿ ಸಮಾನವಾದ ವೃತ್ತಿಯನ್ನು ಹೊಂದುವವನಾಗು ಎಂದು ಪುನಃ ಪುನಃ ಹೇಳಿದೆ.

ಪಾಂಡವಾ ಹಿ ಯಥಾಽಸ್ಮಾಕಂ ತಥಾ ದುರ್ಯೋಧನೋ ನೃಪಃ ।
ತಸ್ಯಾಪಿ ಕ್ರಿಯತಾಂ ಸಾಹ್ಯಂ ಸ ಪರ್ಯೇತಿ ಪುನಃ ಪುನಃ ॥೩೧॥

ನಮಗೆ ಪಾಂಡವರು ಹೇಗೋ ದುರ್ಯೋಧನ ರಾಜನೂ ಹಾಗೆಯೇ. ಅವನಾದರೂ ಮತ್ತೆ ಮತ್ತೆ ಬರುತ್ತಿದ್ದಾನೆ. ಅವನಿಗೂ ಸಹಾಯವನ್ನು ಮಾಡು (ಎಂದು ಹೇಳಿದೆನು).

ತಚ್ಚ ಮೇ ನಾಕರೋದ್ ವಾಕ್ಯಂ ತ್ವದರ್ಥೇ ಮಧುಸೂದನಃ ।
ನಿವಿಷ್ಟಃ ಸರ್ವಭಾವೇನ ಧನಂಜಯಮವೇಕ್ಷ್ಯ ಹ ॥೩೨॥

ಎಲೈ ಯುಧಿಷ್ಠಿರನೇ, ಅವನು ಸರ್ವಾಭಿಪ್ರಾಯದಿಂದ ಅರ್ಜುನನ ಹಿತದಲ್ಲಿ ದೃಷ್ಟಿಯುಳ್ಳವನಾಗಿ ನಿನ್ನ ನಿಮಿತ್ತದಿಂದಾಗಿ ಆ ಮಾತಿನಂತೆ ನಡೆದುಕೊಳ್ಳಲಿಲ್ಲ.

ಧ್ರುವೋ ಜಯಃ ಪಾಂಡವಾನಾಮಿತಿ ಮೇ ನಿಶ್ಚಿತಾ ಮತಿಃ ।
ತಥಾ ಹ್ಯಭಿನಿವೇಶೋಽಯಂ ವಾಸುದೇವಸ್ಯ ಭಾರತ ॥೩೩॥

ಪಾಂಡವರಿಗೆ ಜಯವು ನಿಶ್ಚಿತವಾದುದು ಎಂದು ನನ್ನ ದೃಢವಾದ ಅಭಿಪ್ರಾಯ. ಎಲೈ ಭಾರತನೇ, ಏಕೆಂದರೆ ವಾಸುದೇವನ ಹಠವು ಆ ರೀತಿಯಿದೆ.

ನ ಚಾಹಮುತ್ಸಹೇ ಕೃಷ್ಣಮ್ ಋತೇ ಲೋಕಮುದೀಕ್ಷಿತುಮ್ ।
ತತೋಽಹಮನುವರ್ತಾಮಿ ಕೇಶವಸ್ಯ ಚಿಕೀರ್ಷಿತಮ್ ॥೩೪॥

ನಾನು ಕೃಷ್ಣನಿಲ್ಲದೆ ಲೋಕವನ್ನು ನೋಡುವುದಕ್ಕೂ ಇಷ್ಟಪಡುವುದಿಲ್ಲ. ಆದ್ದರಿಂದ ಕೇಶವನ ಸಂಕಲ್ಪವನ್ನು ನಾನು ಅನುಸರಿಸುತ್ತೇನೆ.

ಉಭೌ ಶಿಷ್ಯೌ ಹಿ ಮೇ ವೀರೌ ಗದಾಯುದ್ಧವಿಶಾರದೌ ।
ತುಲ್ಯಸ್ನೇಹೋಽಸ್ಮ್ಯತೋ ಭೀಮೇ ತಥಾ ದುರ್ಯೋಧನೇ ನೃಪೇ॥೩೫॥

ಗದಾಯುದ್ಧವಿಶಾರದರಾದ ವೀರರಾದ ಭೀಮದುರ್ಯೋಧನರಿಬ್ಬರೂ ನನ್ನ ಶಿಷ್ಯರು. ಆ ಕಾರಣದಿಂದ ನನಗೆ ಭೀಮನಲ್ಲಿಯೂ ಮತ್ತು ರಾಜನಾದ ದುರ್ಯೋಧನನಲ್ಲಿಯೂ ಸಮಾನವಾದ ಸ್ನೇಹವಿದೆ.

ತಸ್ಮಾದ್ ಯಾಸ್ಯಾಮಿ ತೀರ್ಥಾನಿ ಸರಸ್ವತ್ಯಾ ನಿಷೇವಿತುಮ್ ।
ನ ಹಿ ಶಕ್ಷ್ಯಾಮಿ ಕೌರವ್ಯಾನ್ ನಶ್ಯಮಾನಾನವೇಕ್ಷಿತುಮ್ ॥೩೬॥

ಆದ್ದರಿಂದ ಸರಸ್ವತೀನದಿಯ ತೀರ್ಥಗಳನ್ನು ಸೇವಿಸಲು ಹೋಗುತ್ತೇನೆ. ವಿನಾಶವನ್ನು ಹೊಂದುವ ಕೌರವರನ್ನು ನೋಡಲಾರೆ.

ವೈಶಂಪಾಯನಃ

ಏವಮುಕ್ತ್ವಾ ಮಹಾಬಾಹುರನುಜ್ಞಾತಶ್ಚ ಪಾಂಡವೈಃ ।
ತೀರ್ಥಯಾತ್ರಾಂ ಯಯೌ ರಾಮೋ ನಿಮಂತ್ರ್ಯ ಮಧುಸೂದನಮ್ ॥

ವೈಶಂಪಾಯನ– ಮಹಾಬಾಹುವಾದ ಬಲರಾಮನು ಹೀಗೆ ಮಾತನಾಡಿ, ಪಾಂಡವರ ಅನುಜ್ಞೆಯನ್ನು ಪಡೆದು, ಮಧುಸೂದನನಿಗೂ ಹೋಗಿ ಬರುತ್ತೇನೆ ಎಂದು ಹೇಳಿ ತೀರ್ಥಯಾತ್ರೆಗೆ ಹೊರಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಪಂಚಾಶೋಽತ್ತರಶತತಮೋಽಧ್ಯಾಯಃ ॥

॥ ಭೀಷ್ಮಾಭಿಷೇಚನಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತಾರನೆಯ ಅಧ್ಯಾಯ

ಅರ್ಜುನ ಮತ್ತು ದುರ್ಯೋಧನನಿಂದ ದರ್ಪಿಷ್ಠನಾದ
ರುಗ್ಮರಥನ ಸಹಾಯದ ನಿರಾಕರಣೆ.

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ಭೀಷ್ಮಕಸ್ಯ ಮಹಾತ್ಮನಃ ।
ಹಿರಣ್ಯರೋಮ್ಣೋ ನೃಪತೇಃ ಸಾಕ್ಷಾದಿಂದ್ರಸಖಸ್ಯ ವೈ ॥೧॥

ಆಹೃತೀನಾಮಧಿಪತೇಃ ಭೋಜಸ್ಯಾತಿಯಶಸ್ವಿನಃ ।
ದಾಕ್ಷಿಣಾತ್ಯಪತೇಃ ಪುತ್ರೋ ದಿಕ್ಷು ರುಗ್ಮೀತಿ ವಿಶ್ರುತಃ ॥೨॥

ವೈಶಂಪಾಯನ– ಇದೇ ಕಾಲದಲ್ಲಿ ದಾಕ್ಷಿಣಾತ್ಯರಾಜನಾದ, ಸಾಕ್ಷಾತ್ ಇಂದ್ರ ಸ್ನೇಹಿತನಾದ, ಸಮೃದ್ಧನಾದ, ಕೀರ್ತಿವಂತನಾದ, ಮಹಾತ್ಮನಾದ, ಅನೇಕ ಯಜ್ಞಗಳನ್ನು ಮಾಡಿದ, ಹಿರಣ್ಯರೋಮನಾದ (ಹಿರಣ್ಯರೋಮ ಎಂಬ ಹೆಸರನ್ನು ಹೊಂದಿದ) ಭೀಷ್ಮಕನ ಪುತ್ರನಾದ ರುಗ್ಮಿ ಎಂಬುವನು ಪ್ರಖ್ಯಾತನಾಗಿದ್ದನು. (ರುಗ್ಮಿಯು ಮೊದಲೇ ಬಲರಾಮನಿಂದ ಹತನಾಗಿರುವುದರಿಂದ ಇವನು ರುಗ್ಮಿಯಲ್ಲ, ರುಗ್ಮರಥನೆಂಬ ಇನ್ನೊಬ್ಬ ಭೀಷ್ಮಕ ಪುತ್ರ. ರುಗ್ಮಿ ಎಂದರೆ ರುಗ್ಮ ಎಂಬ ಪದವನ್ನು ಹೊಂದಿದ ಹೆಸರನ್ನು ಉಳ್ಳವನು ಎಂದು ಅರ್ಥ – ಲಕ್ಷಾಲಂಕಾರ).

ಯಃ ಕಿಂಪುರುಷಸಿಂಹಸ್ಯ ಗಂಧಮಾದನವಾಸಿನಃ ।
ಕೃತ್ಸ್ನಂ ಶಿಷ್ಯೋ ಧನುರ್ವೇದಂ ಚತುಷ್ಪಾದಮವಾಪ್ತವಾನ್ ॥೩॥

ಅವನು ಗಂಧಮಾದನ ಪರ್ವತವಾಸಿಯಾದ, ಕಿಂಪುರುಷ ಶ್ರೇಷ್ಠನಾದ ದ್ರುಮನ ಶಿಷ್ಯನಾಗಿ, ನಾಲ್ಕು ಪಾದಗಳಿಂದ ಕೂಡಿದ ಸಮಗ್ರವಾದ ಧನುರ್ವೇದವನ್ನು ಪಡೆದನು.

ಯೋ ಮಾಹೇಂದ್ರಂ ಧನುರ್ಲೇಭೇ ತುಲ್ಯಂ ಗಾಂಡೀವತೇಜಸಾ ।
ಶಾರ್ಙ್ಗೇಣ ಚ ಮಹಾಬಾಹುಃ ಸಮ್ಮಿತಂ ದಿವ್ಯಮಕ್ಷಯಮ್ ॥೪॥

ಮಹಾಬಾಹುವಾದ ಅವನು ಗಾಂಡೀವ ಧನುಸ್ಸಿಗೆ ತೇಜಸ್ಸಿನಲ್ಲಿ ಸಮವಾದ, ಶಾರ್ಙ್ಗ ಧನುಸ್ಸಿಗೂ ಸಮಾನವಾದ, ದಿವ್ಯವಾದ, ನಾಶರಹಿತವಾದ ಮಹೇಂದ್ರ ಧನುಸ್ಸನ್ನು ಪಡೆದನು.

ತ್ರೀಣ್ಯೇವೈತಾನಿ ದಿವ್ಯಾನಿ ಧನೂಂಷಿ ದಿವಿಚಾರಿಣಾಮ್ ॥೫॥

ವಾರುಣಂ ಗಾಂಡಿವಂ ತತ್ರ ಮಾಹೇಂದ್ರಂ ವಿಜಯಂ ಧನುಃ ।
ಶಾರ್ಙ್ಗಂ ತು ವೈಷ್ಣವಂ ಪ್ರಾಹುಃ ದಿವ್ಯಂ ತೇಜೋಮಯಂ ಧನುಃ ॥೬॥

ಸ್ವರ್ಗವಾಸಿಗಳಿಗೆ ಈ ಮೂರು ದಿವ್ಯವಾದ ಧನುಸ್ಸುಗಳು ಪ್ರಸಿದ್ಧವಾದವುಗಳು. ವರುಣನ ಗಾಂಡೀವ ಧನುಸ್ಸು, ಮಹೇಂದ್ರನ ವಿಜಯ ಧನುಸ್ಸು ಮತ್ತು ವಿಷ್ಣುವಿನ ದಿವ್ಯವೂ, ತೇಜೋಮಯವೂ ಆದ ಶಾರ್ಙ್ಗ ಧನುಸ್ಸು.

ಧಾರಯಾಮಾಸ ತತ್ ಕೃಷ್ಣಃ ಪರಸೇನಾಭಯಾವಹಮ್ ।
ಗಾಂಡಿವಂ ಪಾವಕಾಲ್ಲೇಭೇ ಖಾಂಡವೇ ಪಾಕಶಾಸನಿಃ ॥೭॥

ದ್ರುಮಾದ್ ರುಗ್ಮೀ ಮಹಾತೇಜಾ ವಿಜಯಂ ಪ್ರತ್ಯಪದ್ಯತ ॥೮॥

ಕೃಷ್ಣನು ಪರಸೈನ್ಯಕ್ಕೆ ಭಯವನ್ನು ಉಂಟುಮಾಡುವ ಆ ಶಾರ್ಙ್ಗಧನುಸ್ಸನ್ನು ಧರಿಸಿದನು. ಇಂದ್ರನ ಮಗನಾದ ಅರ್ಜುನನು ಖಾಂಡವವನ ದಹನ ಕಾಲದಲ್ಲಿ ಅಗ್ನಿಯಿಂದ ಗಾಂಡೀವ ಧನುಸ್ಸನ್ನು ಪಡೆದನು. ಮಹಾತೇಜಸ್ವಿಯಾದ ರುಗ್ಮರಥನು ದ್ರುಮನಿಂದ ವಿಜಯ ಧನುಸ್ಸನ್ನು ಪಡೆದನು.

ಸಂಛಿದ್ಯ ಮೌರವಾನ್ ಪಾಶಾನ್ ನಿಹತ್ಯ ಮುರಮೋಜಸಾ ।
ನಿರ್ಜಿತ್ಯ ನರಕಂ ಭೌಮಮಾಹೃತ್ಯ ಮಣಿಕುಂಡಲೇ ॥೯॥

ಷೋಡಶ ಸ್ತ್ರೀಸಹಸ್ರಾಣಿ ರತ್ನಾನಿ ವಿವಿಧಾನಿ ಚ ।
ಪ್ರತಿಪೇದೇ ಹೃಷೀಕೇಶಃ ಶಾರ್ಙ್ಗಂ ಚ ಧನುರುತ್ತಮಮ್ ॥೧೦॥

ಮೌರವ ಪಾಶವನ್ನು ಕತ್ತರಿಸಿ, ತನ್ನ ಸಾಮರ್ಥ್ಯದಿಂದ ಮುರನನ್ನು ಸಂಹರಿಸಿ, ಭೂಮಿಪುತ್ರನಾದ ನರಕಾಸುರನನ್ನು ಕೊಂದು, ಅತಿಥಿಯ ಮಣಿಕುಂಡಲವನ್ನು ತೆಗೆದುಕೊಂಡು, ಕೃಷ್ಣನು ಷೋಡಶ ಸಹಸ್ರ ಸ್ತ್ರೀಯರನ್ನೂ, ವಿವಿಧ ರತ್ನಗಳನ್ನೂ ಮತ್ತು ಶ್ರೇಷ್ಠವಾದ ಶಾರ್ಙ್ಗ ಧನುಸ್ಸನ್ನೂ ಪಡೆದನು.

ರುಗ್ಮೀ ತು ವಿಜಯಂ ಲಬ್ಧ್ವಾ ಧನುರ್ಮೇಘನಿಭಸ್ವನಮ್ ।
ವಿಭೀಷಯನ್ನಿವ ಜಗತ್ ಪಾಂಡವಾನಭ್ಯವರ್ತತ ॥೧೧॥

ರುಗ್ಮಿಯು ಮೇಘ ಗರ್ಜನೆಯಂತೆ ಗರ್ಜಿಸುವ ವಿಜಯ ಧನುಸ್ಸನ್ನು ಪಡೆದು ಜಗತ್ತನ್ನೇ ಹೆದರಿಸುವವನಂತೆ ಪಾಂಡವರ ಬಳಿಗೆ ಬಂದನು.

ನಾಮೃಷ್ಯತ ಪುರಾ ಯೋಽಸೌ ಸ್ವಬಾಹುಬಲದರ್ಪಿತಃ ।
ರುಗ್ಮಿಣ್ಯಾ ಹರಣಂ ವೀರೋ ವಾಸುದೇವೇನ ಧೀಮತಾ ॥೧೨॥

ಕೃತ್ವಾ ಪ್ರತಿಜ್ಞಾಂ ನಾಹತ್ವಾ ನಿವರ್ತಿಷ್ಯೇ ಜನಾರ್ದನಮ್ ।
ತತೋಽನ್ವಧಾವದ್ ವಾಷ್ಣೇಯಂ ಸರ್ವಶಸ್ತ್ರಭೃತಾಂ ವರಃ ॥೧೩॥

ಮೇಧಾವಿಯಾದ ಕೃಷ್ಣನು ರುಗ್ಮಿಣಿಯನ್ನು ಅಪಹರಿಸಿದುದನ್ನು ಸಹಿಸದಿದ್ದ, ತನ್ನ ಬಾಹುಬಲದಿಂದಾಗಿ ದರ್ಪದಿಂದ ಕೂಡಿದ, ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ವೀರನಾದ ಅವನು ಕೃಷ್ಣನನ್ನು ಕೊಲ್ಲದೆ ಹಿಂದಿರುಗುವುದಿಲ್ಲ ಎಂದು ಪ್ರತಿಜ್ಞೆಯನ್ನು ಮಾಡಿ ಕೃಷ್ಣನ ಮೇಲೆ ದಂಡೆತ್ತಿ ಬಂದನು.

ಸೇನಯಾ ಚತುರಂಗಿಣ್ಯಾ ಮಹತ್ಯಾ ದೂರಪಾತಯಾ ।
ವಿಚಿತ್ರಾಯುಧವರ್ಮಿಣ್ಯಾ ಗಂಗಯೇವ ಪ್ರವೃದ್ಧಯಾ ॥೧೪॥

ಸ ಸಮಾಸಾದ್ಯ ವಾಷ್ಣೇಯಂ ಯೋಗಾನಾಮೀಶ್ವರಂ ಪ್ರಭುಮ್ ।
ವ್ಯಂಸಿತೋ ವ್ರೀಡಿತೋ ರಾಜಾ ನಾಜಗಾಮ ಸ ಕುಂಡಿನಮ್ ॥೧೫॥

ವಿಚಿತ್ರಾಯುಧ, ಕವಚವನ್ನು ಧರಿಸಿದ, ದೂರದಿಂದಲೂ ಪ್ರಹಾರ ಮಾಡುವ ಶಕ್ತಿಯುಳ್ಳ, ಗಂಗಾಪ್ರವಾಹದಂತೆ ಪೂರ್ಣವಾದ, ದೊಡ್ಡ ಚತುರಂಗ ಸೈನ್ಯದ ಜೊತೆಯಲ್ಲಿ ಅವನು ಯೋಗೀಶ್ವರನಾದ, ಪ್ರಭುವಾದ ಕೃಷ್ಣನನ್ನು ಸಮೀಪಿಸಿ ಅವನಿಂದ ಸರ್ವನಾಶವನ್ನು ಹೊಂದಿದವನಾಗಿ, ನಾಚಿಕೆಯನ್ನು ಹೊಂದಿ ಪುನಃ ಅವನು ಕುಂಡಿನ ಪುರಕ್ಕೆ ಹೋಗಲಿಲ್ಲ.

ಯತ್ರೈವ ಕೃಷ್ಣೇನ ರಣೇ ನಿರ್ಜಿತಃ ಪರವೀರಹಾ ।
ತತ್ರ ಭೋಜಕಟಂ ನಾಮ ಕೃತಂ ನಗರಮುತ್ತಮಮ್ ॥೧೬॥

ಪರವೀರಘಾತಕನಾದ ಅವನು ಎಲ್ಲಿ ಯುದ್ಧದಲ್ಲಿ ಕೃಷ್ಣನಿಗೆ ಸೋತನೋ ಅಲ್ಲಿಯೇ ಭೋಜಕಟವೆಂಬ ಉತ್ತಮವಾದ ಪಟ್ಟಣವನ್ನು ನಿರ್ಮಾಣ ಮಾಡಿದನು.

ಸೈನ್ಯೇನ ಮಹತಾ ತೇನ ಪ್ರಭೂತಗಜವಾಜಿನಾ ।
ಪುರಂ ತದ್ ಭುವಿ ವಿಖ್ಯಾತಂ ನಾಮ್ನಾ ಭೋಜಕಟಂ ನೃಪ ॥೧೭॥

ಎಲೈ ರಾಜನೇ, ಅನೇಕ ಗಜಾಶ್ವಗಳಿರುವ, ದೊಡ್ಡದಾದ ಸೈನ್ಯದಿಂದ ಕೂಡಿದ ಆ ಪಟ್ಟಣವು ಭೂಮಿಯಲ್ಲಿ ಭೋಜಕಟವೆಂದು ಪ್ರಖ್ಯಾತವಾಗಿದೆ.

ಸ ಭೋಜರಾಜಃ ಸೈನ್ಯೇನ ಮಹತಾ ಪರಿವಾರಿತಃ ।
ಅಕ್ಷೌಹಿಣ್ಯಾ ಮಹಾವೀರ್ಯಃ ಪಾಂಡವಂ ಕ್ಷಿಪ್ರಮಾಗಮತ್ ॥೧೮॥

ದೊಡ್ಡ ಸೈನ್ಯದಿಂದ ಪರಿವೃತನಾದ ಭೋಜರಾಜನಾದ, ಮಹಾಪರಾಕ್ರಮಿಯಾದ ಆ ರುಗ್ಮರಥನು ಒಂದು ಅಕ್ಷೌಹಿಣಿ ಸೈನ್ಯವನ್ನು ತೆಗೆದುಕೊಂಡು ಕ್ಷಿಪ್ರವಾಗಿ ಯುಧಿಷ್ಠಿರನ ಬಳಿಗೆ ಬಂದನು.

ತತಃ ಸ ಕವಚೀ ಖಡ್ಗೀ ತಳೀ ಧನ್ವೀ ಶರೀ ರಥೀ ।
ರಥೇನಾದಿತ್ಯವರ್ಣೇನ ಪ್ರವಿವೇಶ ಮಹಾಚಮೂಮ್ ॥೧೯॥

ಅನಂತರ ಅವನು ಖಡ್ಗ-ಕವಚಗಳನ್ನೂ, ಕಳತ್ರಾಣಗಳನ್ನೂ, ಧನುಸ್ಸು-ಬಾಣಗಳನ್ನೂ ಧರಿಸಿ, ಸೂರ್ಯನಂತೆ ಹೊಳೆಯುವ ರಥದಲ್ಲಿ ಕುಳಿತು ಯುಧಿಷ್ಠಿರನ ದೊಡ್ಡ ಸೈನ್ಯವನ್ನು ಪ್ರವೇಶಿಸಿದನು.

ವಿದಿತಃ ಪಾಂಡವೇಯಾನಾಂ ವಾಸುದೇವಪ್ರಿಯೇಪ್ಸಯಾ ।
ಯುಧಿಷ್ಠಿರಸ್ತು ತಂ ರಾಜಾ ಪ್ರತ್ಯುದ್ಗಮ್ಯಾಭ್ಯಪೂಜಯತ್ ॥೨೦॥

ಪಾಂಡುಪುತ್ರರಿಗೆ ಅವನು ಪರಿಚಿತನಾದರೂ, ಕೃಷ್ಣನಿಗೆ ಪ್ರಿಯವನ್ನು ಮಾಡುವ ಅಭಿಪ್ರಾಯದಿಂದ ರಾಜನಾದ ಯುಧಿಷ್ಠಿರನು ಎದ್ದು ಅವನ ಕಡೆಗೆ ಹೋಗಿ ಅವನನ್ನು ಪೂಜಿಸಿದನು.

ಸ ಪೂಜಿತಃ ಪಾಂಡುಸುತೈರ್ಯಥಾನ್ಯಾಯಂ ಸುಸತ್ಕೃತಃ ।
ಪ್ರತಿಪೂಜ್ಯ ಚ ತಾನ್ ಸರ್ವಾನ್ ವಿಶ್ರಾಂತಃ ಸಹಸೈನಿಕಃ ॥೨೧॥

ಉವಾಚ ಮಧ್ಯೇ ವೀರಾಣಾಂ ಕುಂತೀಪುತ್ರಂ ಧನಂಜಯಮ್ ॥೨೨॥

ಪಾಂಡುಪುತ್ರರಿಂದ ನ್ಯಾಯರೀತಿಯಲ್ಲಿ ಪೂಜಿಸಲ್ಪಟ್ಟು, ಸತ್ಕರಿಸಲ್ಪಟ್ಟ ಅವನು ಪಾಂಡವರನ್ನೆಲ್ಲಾ ಪ್ರತಿಯಾಗಿ ಪೂಜಿಸಿ, ವಿಶ್ರಾಂತಿಯನ್ನು ಪಡೆದು ತನ್ನ ಸೈನಿಕರ ಜೊತೆಯಲ್ಲಿ ವೀರರ ಮಧ್ಯದಲ್ಲಿ ಕುಂತೀಪುತ್ರನಾದ ಅರ್ಜುನನನ್ನು ಕುರಿತು ಮಾತನಾಡಿದನು.

ಸಾಹಾಯ್ಯೇಽಸ್ಮಿ ಸ್ಥಿತೋ ಯುದ್ಧೇ ಯದಿ ಭೀತೋಽಸಿ ಪಾಂಡವ ।
ಕರಿಷ್ಯಾಮಿ ರಣೇ ಸಾಹ್ಯಮಸಹ್ಯಂ ತವ ಶತ್ರುಭಿಃ ॥೨೩॥

ಎಲೈ ಪಾಂಡವನೇ, ನೀನು ಯುದ್ಧದಲ್ಲಿ ಭೀತನಾಗಿದ್ದರೆ ನಿನ್ನ ಸಹಾಯಕ್ಕಾಗಿ ಬಂದಿದ್ದೇನೆ. ಯುದ್ಧದಲ್ಲಿ ನಿನ್ನ ಶತ್ರುಗಳು ಸಹಿಸಲಾರದಂತಹ ಸಹಾಯವನ್ನು ಮಾಡುವೆನು.

ನ ಹಿ ಮೇ ವಿಕ್ರಮೇ ತುಲ್ಯಃ ಪುಮಾನಸ್ತೀಹ ಕಶ್ಚನ ।
ಹರಿಷ್ಯಾಮಿ ರಣೇ ಭಾಗಂ ಯನ್ಮೇ ದಾಸ್ಯಸಿ ಪಾಂಡವ ॥೨೪॥

ನನಗೆ ಸಮಾನನಾದ ಪರಾಕ್ರಮಿಯಾದ ಪುರುಷನು ಇಲ್ಲಿ ಯಾರೂ ಇಲ್ಲ. ಎಲೈ ಅರ್ಜುನನೇ, ಶತ್ರುಸೈನ್ಯದ ಒಂದು ಭಾಗವನ್ನು ನನಗೆ ಒಪ್ಪಿಸು, ಅದನ್ನು ನಾನು ಸಂಹರಿಸುವೆನು.

ಅಪಿ ದ್ರೋಣಕೃಪೌ ವೀರೌ ಭೀಷ್ಮಕರ್ಣಾವಥೋ ಪುನಃ ।
ಅಥವಾ ಸರ್ವ ಏವೈತೇ ತಿಷ್ಠಂತು ವಸುಧಾಧಿಪಾಃ ॥೨೫॥

ನಿಹತ್ಯ ಸಮರೇ ಶತ್ರೂನ್ ತವ ದಾಸ್ಯಾಮಿ ಫಲ್ಗುನ ॥೨೬॥

ವೀರರಾದ ದ್ರೋಣ-ಕೃಪರಾಗಲೀ ಅಥವಾ ಭೀಷ್ಮ-ಕರ್ಣರಾಗಲೀ ಅಥವಾ ಈ ಎಲ್ಲ ರಾಜರೇ ಆಗಲಿ ಸುಮ್ಮನಿರಲಿ. ಎಲೈ ಅರ್ಜುನನೇ, ನಾನು ಯುದ್ಧದಲ್ಲಿ ನಿನ್ನ ಶತ್ರುಗಳನ್ನು ಗೆದ್ದು ನಿನಗೆ ರಾಜ್ಯವನ್ನು ಒಪ್ಪಿಸುವೆನು.

ಇತ್ಯುಕ್ತೋ ಧರ್ಮರಾಜಸ್ಯ ಕೇಶವಸ್ಯ ಚ ಸನ್ನಿಧೌ ।
ಶೃಣ್ವತಾಂ ಪಾರ್ಥಿವೇಂದ್ರಾಣಾಮನ್ಯೇಷಾಂ ಚೈವ ಸರ್ವತಃ ॥೨೭॥

ವಾಸುದೇವಮಭಿಪ್ರೇಕ್ಷ್ಯ ಧರ್ಮರಾಜಂ ಚ ಪಾಂಡವಮ್ ।
ಉವಾಚ ಧೀಮಾನ್ ಕೌಂತೇಯಃ ಪ್ರಸಹ್ಯ ಸಖಿಪೂರ್ವಕಮ್ ॥೨೮॥

ಯುಧಿಷ್ಠಿರ ಮತ್ತು ಕೇಶವನ ಸನ್ನಿಧಿಯಲ್ಲಿ ಮತ್ತು ಉಳಿದ ರಾಜರು ಎಲ್ಲರೂ ಕೇಳುವಂತೆ ಹೀಗೆ ಹೇಳಲ್ಪಟ್ಟ ಮೇಧಾವಿಯೂ, ಕುಂತೀಪುತ್ರನೂ ಆದ ಅರ್ಜುನನು ವಾಸುದೇವನನ್ನೂ ಮತ್ತು ಪಾಂಡುಪುತ್ರನಾದ ಧರ್ಮರಾಜನನ್ನೂ ನೋಡುತ್ತಾ ನಕ್ಕು ಸ್ನೇಹಪೂರ್ವಕವಾಗಿ ಮಾತನಾಡಿದನು.

ಅರ್ಜುನಃ

ಯುಧ್ಯಮಾನಸ್ಯ ಮೇ ವೀರ ಗಂಧರ್ವೈಃ ಸುಮಹಾಬಲೈಃ ।
ಸಹಾಯೋ ಘೋಷಯಾತ್ರಾಯಾಂ ಕಸ್ತದಾऽऽಸೀತ್ ಸಖಾ ಮಮ ॥

ಅರ್ಜುನ– ಎಲೈ ವೀರನೇ, ಘೋಷಯಾತ್ರೆಯ ಕಾಲದಲ್ಲಿ ಮಹಾಬಲಿಷ್ಠರಾದ ಗಂಧರ್ವರ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ನನಗೆ ಸಹಾಯವನ್ನು ಮಾಡುವ ಯಾವ ಸ್ನೇಹಿತರಿದ್ದರು?

ತದಾ ಪ್ರತಿಭಯೇ ತಸ್ಮಿನ್ ದೇವದಾನವಸಂಕುಲೇ ।
ಖಾಂಡವೇ ಯುಧ್ಯಮಾನಸ್ಯ ಕಃ ಸಹಾಯಸ್ತದಾऽಭವತ್ ॥೩೦॥

ಮಹಾಭಯಂಕರವಾದ ದೇವ-ದಾನವಸಂಘರ್ಷರೂಪವಾದ ಆ ಖಾಂಡವವನದಲ್ಲಿ ಯುದ್ಧವನ್ನು ಮಾಡುವಾಗ ಯಾರು ನನಗೆ ಸಹಾಯಕ್ಕೆ ಇದ್ದರು?

ನಿವಾತಕವಚೈರ್ಯುದ್ಧೇ ಕಾಲಕೇಯೈಶ್ಚ ದಾನವೈಃ ।
ತತ್ರ ಮೇ ಯುಧ್ಯಮಾನಸ್ಯ ಕಃ ಸಹಾಯಸ್ತದಾऽಭವತ್ ॥೩೧॥

ನಿವಾತಕವಚರ ಜೊತೆಯಲ್ಲಿ ಮತ್ತು ಕಾಲಕೇಯ ದಾನವರ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವಾಗ ಯಾರು ನನಗೆ ಸಹಾಯವನ್ನು ಮಾಡಿದರು?

ತಥಾ ವಿರಾಟನಗರೇ ಕುರುಭಿಃ ಸಹ ಸಂಯುಗೇ ।
ಯುಧ್ಯತೋ ಬಹುಭಿಸ್ತತ್ರ ಕಃ ಸಹಾಯಸ್ತದಾऽಭವತ್ ॥೩೨॥

ಹಾಗೆಯೇ ವಿರಾಟ ನಗರದಲ್ಲಿ ಅನೇಕ ಕೌರವರ ಜೊತೆ ಯುದ್ಧವನ್ನು ಮಾಡುವಾಗ ಯಾರು ನನಗೆ ಸಹಾಯವನ್ನು ಮಾಡಿದರು?

ಉಪಜೀವ್ಯ ರಣೇ ರುದ್ರಂ ಶಕ್ರಂ ವೈಶ್ರವಣಂ ಯಮಮ್ ।
ವರುಣಂ ಪಾವಕಂ ಚೈವ ಕೃಪಂ ಕೃಷ್ಣಂ ಚ ಮಾಧವಮ್ ॥೩೩॥

ಧಾರಯನ್ ಗಾಂಡಿವಂ ದಿವ್ಯಂ ಧನುಸ್ತೇಜೋಮಯಂ ದೃಢಮ್ ।
ಅಕ್ಷಯ್ಯಶರಸಂಯುಕ್ತೋ ದಿವ್ಯಾಸ್ತ್ರಪರಿಬೃಂಹಿತಃ ॥೩೪॥

ಕೌರವಾಣಾಂ ಕುಲೇ ಜಾತಃ ಪಾಂಡೋಃ ಪುತ್ರೋ ವಿಶೇಷತಃ ।
ದ್ರೋಣಂ ವ್ಯಪದಿಶನ್ ಶಿಷ್ಯಃ ವಾಸುದೇವಸಹಾಯವಾನ್ ॥೩೫॥

ಕಥಮಸ್ಮದ್ವಿಧೋ ಬ್ರೂಯಾದ್ ಭೀತೋಽಸ್ಮೀತ್ಯಯಶಸ್ಕರಮ್ ।
ವಚನಂ ನರ(ರಾಜ)ಶಾರ್ದೂಲ ವಜ್ರಾಯುಧಮಪಿ ಸ್ವಯಮ್ ॥೩೬॥

ಎಲೈ ರಾಜಶಾರ್ದೂಲನೇ, ಯುದ್ಧದಲ್ಲಿ ರುದ್ರನನ್ನೂ, ಇಂದ್ರನನ್ನೂ, ಕುಬೇರನನ್ನೂ, ಯಮನನ್ನೂ, ವರುಣನನ್ನೂ, ಅಗ್ನಿಯನ್ನೂ ಉಪಜೀವಿಸಿ (ಅವರ ಅಸ್ತ್ರಗಳನ್ನು ಪಡೆದು), ಕೃಪಾಳುವಾದ, ಮಧುವಂಶದಲ್ಲಿ ಜನಿಸಿದ ಕೃಷ್ಣನನ್ನು ಉಪಜೀವಿಸಿ, ತೇಜೋಮಯವೂ ದೃಢವೂ, ದಿವ್ಯವೂ ಆದ ಗಾಂಡೀವ ಧನುಸ್ಸನ್ನು ಧರಿಸಿ, ಅಕ್ಷಯ ಬಾಣಗಳಿಂದಲೂ, ದಿವ್ಯಾಸ್ತ್ರಗಳಿಂದಲೂ ಕೂಡಿದವನಾಗಿ, ಕೌರವರ ಕುಲದಲ್ಲಿ ಜನಿಸಿ, ವಿಶೇಷವಾಗಿ ಪಾಂಡುವಿನ ಪುತ್ರನಾಗಿ, ದ್ರೋಣರನ್ನು ಗುರುವೆಂದು ಕೀರ್ತಿಸಿ, ಅವರ ಶಿಷ್ಯನಾಗಿ, ಕೃಷ್ಣ ಸಹಾಯವನ್ನು ಹೊಂದಿದ ನನ್ನಂತಹವನು ಯಾವನು ತಾನೇ ನಾನು ಹೆದರಿದ್ದೇನೆ ಎಂಬ ಅಕೀರ್ತಿಕರವಾದ ಮಾತನ್ನು, ವಜ್ರಾಯುಧವನ್ನು ಧರಿಸಿದ ಇಂದ್ರನೇ ಎದುರಿಗೆ ಬಂದರೂ ಹೇಗೆ ನುಡಿದಾನು?

ನಾಸ್ಮಿ ಭೀತೋ ಮಹಾಬಾಹೋ ಸಹಾಯಾರ್ಥಂ ಚ ನಾಸ್ತಿ ಮೇ ।
ಯಥಾಕಾಮಂ ಯಥಾಯೋಗಂ ಗಚ್ಛ ವಾಽತ್ರೈವ ತಿಷ್ಠ ವಾ ॥೩೭॥

ಎಲೈ ಮಹಾಬಾಹುವೇ, ನಾನು ಭೀತನಾಗಿಲ್ಲ. ನನಗೆ ಸಹಾಯದ ಅಪೇಕ್ಷೆಯೂ ಇಲ್ಲ. ನಿನ್ನ ಇಷ್ಟ ಬಂದ ಕಡೆಗೆ ಹೋಗು ಅಥವಾ ಇಲ್ಲಿಯೇ ಇರುವವನಾಗು.

ವೈಶಂಪಾಯನಃ

ತಚ್ಛ್ರುತ್ವಾ ವಚನಂ ತಸ್ಯ ವಿಜಯಸ್ಯ ಹಿ ಧೀಮತಃ ॥೩೮॥

ವಿನಿವೃತ್ಯ ತತೋ ರುಗ್ಮೀ ಸೇನಾಂ ಸಾಗರಸನ್ನಿಭಾಮ್ ।
ದುರ್ಯೋಧನಮುಪಾಗಚ್ಛತ್ ತಥೈವ ಭರತರ್ಷಭ ॥೩೯॥

ವೈಶಂಪಾಯನ– ಎಲೈ ಭರತರ್ಷಭನೇ, ಮೇಧಾವಿಯಾದ ಅರ್ಜುನನ ಆ ಮಾತುಗಳನ್ನು ಕೇಳಿ ರುಗ್ಮಿಯು ಸಾಗರದಂತಿದ್ದ ಆ ಸೈನ್ಯದಿಂದ ಹಿಂದಿರುಗಿ ಹಾಗೆಯೇ ದುರ್ಯೋಧನನ ಸಮೀಪಕ್ಕೆ ಹೋದನು.

ತಥೈವ ಚಾಭಿಗಮ್ಯೈನಮುವಾಚ ವಸುಧಾಧಿಪಃ ।
ಪ್ರತ್ಯಾಖ್ಯಾತಶ್ಚ ತೇನಾಪಿ ಸ ತದಾ ಶೂರಮಾನಿನಾ ॥೪೦॥

ವಸುಧಾಧಿಪನಾದ ಅವನು ಹಾಗೆಯೇ ದುರ್ಯೋಧನನನ್ನು ಸಮೀಪಿಸಿ, ಹಾಗೆಯೇ ಮಾತನಾಡಿ, ತಾನೇ ಶೂರನೆಂಬ ಅಹಂಕಾರವುಳ್ಳ ದುರ್ಯೋಧನನಿಂದಲೂ ನಿರಾಕರಿಸಲ್ಪಟ್ಟನು.

ದ್ವಾವೇವ ತು ಮಹಾರಾಜ ತಸ್ಮಾದ್ ಯುದ್ಧಾದಪೇಯತುಃ ।
ರೌಹಿಣೇಯಶ್ಚ ವಾರ್ಷ್ಣೇಯೋ ರುಗ್ಮೀ ಚ ಸ ನರಾಧಿಪಃ ॥೪೧॥

ಎಲೈ ಮಹಾರಾಜನೇ, ವೃಷ್ಣಿಕುಲದಲ್ಲಿ ಜನಿಸಿದ ಬಲರಾಮ ಮತ್ತು ರಾಜನಾದ ರುಗ್ಮಿ (ರುಗ್ಮರಥ) ಇವರಿಬ್ಬರೇ ಯುದ್ಧದಿಂದ ಹಿಂದೆ ಸರಿದವರು.

ಗತೇ ರಾಮೇ ತೀರ್ಥಯಾತ್ರಾಂ ಭೀಷ್ಮಕಸ್ಯ ಸುತೇ ತದಾ ।
ಉಪಾವಿಶನ್ ಪಾಂಡವೇಯಾ ಮಂತ್ರಾಯ ಪುನರೇವ ಚ ॥೪೨॥

ಬಲರಾಮನು ತೀರ್ಥಯಾತ್ರೆಗೆ ಹೊರಟು, ಭೀಷ್ಮಕನ ಪುತ್ರನು ಹಿಂದಿರುಗುತ್ತಿರಲು ಪಾಂಡುಪುತ್ರರು ಪುನಃ ಮಂತ್ರಾಲೋಚನೆಯನ್ನು ಮಾಡಲು ಒಟ್ಟಿಗೆ ಕುಳಿತರು.

ಸಮಿತಿರ್ಧರ್ಮರಾಜಸ್ಯ ಸಾ ಪಾರ್ಥಿವಸಮಾಕುಲಾ ।
ಶುಶುಭೇ ತಾರಕಾಚಿತ್ರಾ ದ್ಯೌಃ ಸಚಂದ್ರೇವ ಭಾರತ ॥೪೩॥

ಎಲೈ ಭಾರತನೇ, ರಾಜರಿಂದ ಕೂಡಿದ ಧರ್ಮರಾಜನ ಆ ಸಭೆಯು ನಕ್ಷತ್ರಗಳಿಂದ ಕೂಡಿದ ಚಂದ್ರನನ್ನು ಹೊಂದಿದ ಆಕಾಶದಂತೆ ಶೋಭಿಸಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಪಂಚಾಶೋತ್ತರಶತತಮೋऽಧ್ಯಾಯಃ ॥

॥ ಭೀಷ್ಮಾಭಿಷೇಚನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೇಳನೆಯ ಅಧ್ಯಾಯ

ಸಂಜಯ-ಧೃತರಾಷ್ಟ್ರ ಸಂವಾದ.

ಜನಮೇಜಯಃ

ತಥಾ ವ್ಯೂಢೇಷ್ವನೀಕೇಷು ಯುದ್ಧಾಯ ಬ್ರಾಹ್ಮಣರ್ಷಭ ।
ಕಿಮಕುರ್ವಂತ ಕೌರವ್ಯಾಃ ಕಾಲೇನಾಭಿಪ್ರಚೋದಿತಾಃ ॥೧॥

ಜನಮೇಜಯ- ಎಲೈ ಬ್ರಾಹ್ಮಣಶ್ರೇಷ್ಠರೇ, ಕುರುಕ್ಷೇತ್ರದಲ್ಲಿ ಸೈನ್ಯವು ಹಾಗೆ ಯುದ್ಧಕ್ಕಾಗಿ ಸಜ್ಜುಗೊಳ್ಳುತ್ತಿರಲು ಮೃತ್ಯುಚೋದಿತರಾದ ಕೌರವರು ಏನು ಮಾಡಿದರು?

ವೈಶಂಪಾಯನಃ

ತಥಾ ವ್ಯೂಢೇಷ್ವನೀಕೇಷು ಯತ್ತೇಷು ಭರತರ್ಷಭ ।
ಧೃತರಾಷ್ಟ್ರೋ ಮಹಾರಾಜ ಸಂಜಯಂ ವಾಕ್ಯಮಬ್ರವೀತ್ ॥೨॥

ವೈಶಂಪಾಯನ- ಎಲೈ ಭರತರ್ಷಭನೇ, ಮಹಾರಾಜನೇ, ಸೈನ್ಯಗಳು ವ್ಯೂಹವನ್ನು ರಚಿಸಿ ಸಜ್ಜುಗೊಳ್ಳುತ್ತಿರಲು ಧೃತರಾಷ್ಟ್ರನು ಸಂಜಯನನ್ನು ಕುರಿತು ಮಾತನಾಡಿದನು.

ಏಹಿ ಸಂಜಯ ಸರ್ವಂ ಮೇ ಆಚಕ್ಷ್ವಾನವಶೇಷತಃ ।
ಸೇನಾನಿವೇಶೇ ಯದ್ ವೃತ್ತಂ ಕುರುಪಾಂಡವಸೇನಯೋಃ ॥೩॥

ಸಂಜಯನೇ, ಇಲ್ಲಿ ಬಾ. ಕುರು-ಪಾಂಡವರು ಸೈನ್ಯವನ್ನು ನಿವೇಶ ಮಾಡುವಾಗ ಏನು ನಡೆಯಿತೆಂಬುದನ್ನು ನನಗೆ ಸಮಗ್ರವಾಗಿ ಹೇಳು.

ದಿಷ್ಟಮೇವ ಪರಂ ಮನ್ಯೇ ಪೌರುಷಂ ಚಾಪ್ಯನರ್ಥಕಮ್ ॥೪॥

ಯದಹಂ ಜಾನಮಾನೋಽಪಿ ಯುದ್ಧದೋಷಾನ್ ಕ್ಷಯೋದಯಾನ್ ॥

ತಥಾಽಪಿ ನಿಕೃತಿಪ್ರಜ್ಞಂ ಪುತ್ರಂ ದುರ್ಯ್ಯೋತದೇವಿನಮ್ ।
ನ ಶಕ್ನೋಮಿ ನಿಯಂತುಂ ವಾ ಕರ್ತುಂ ವಾ ಹಿತಮಾತ್ಮನಃ ॥೬॥

ದೈವವೇ ಪ್ರಬಲವೆಂದು ತಿಳಿಯುತ್ತೇನೆ, ಪುರುಷ ಪ್ರಯತ್ನವು ನಿರರ್ಥಕವಾದುದು. ಏಕೆಂದರೆ ವಿನಾಶವನ್ನು ಉಂಟುಮಾಡುವ ಯುದ್ಧದೋಷಗಳನ್ನು ತಿಳಿದರೂ ನಾನು ಮೋಸದ ಬುದ್ಧಿಯುಳ್ಳವನೂ ಮತ್ತು ಕೆಟ್ಟ ಜೂಜನ್ನು ಆಡಿದವನೂ ಆದ ದುರ್ಯೋಧನನನ್ನು ನಿಯಂತ್ರಿಸುವುದಕ್ಕಾಗಲೀ ಅಥವಾ ನನಗೆ ಹಿತವನ್ನು ಮಾಡಿಕೊಳ್ಳುವುದಕ್ಕಾಗಲೀ ಸಮರ್ಥನಾಗುತ್ತಿಲ್ಲ.

ಭವತ್ಯೇವ ಹಿ ಮೇ ಸೂತ ಬುದ್ಧಿರ್ದೋಷಾನುದರ್ಶಿನೀ ।
ದುರ್ಯೋಧನಂ ಸಮಾಸಾದ್ಯ ಪುನಃ ಸಾ ಪರಿವರ್ತತೇ ॥೭॥

ಎಲೈ ಸೂತನೇ, ನನ್ನ ಬುದ್ಧಿಯು ದೋಷಗಳನ್ನು ಗಮನಿಸುತ್ತಿದೆ. ಆದರೆ ದುರ್ಯೋಧನನನ್ನು ನೋಡಿದ ತಕ್ಷಣ ಆ ಬುದ್ಧಿಯು ಬದಲಾಗುತ್ತದೆ.

ಏವಂ ಗತೇ ವೈ ಯದ್ ಭಾವಿ ತದ್ ಭವಿಷ್ಯತಿ ಸಂಜಯ ।
ಕ್ಷತ್ರಧರ್ಮಃ ಕಿಲ ರಣೇ ತನುತ್ಯಾಗೋ ಹಿ ಪೂಜಿತಃ ॥೮॥

ಎಲೈ ಸಂಜಯನೇ, ಪರಿಸ್ಥಿತಿ ಹೀಗಿರುವಾಗ ಏನು ಆಗಬೇಕಾಗಿದೆಯೋ ಅದು ಆಗುವುದು. ಯುದ್ಧದಲ್ಲಿ ದೇಹತ್ಯಾಗವನ್ನು ಮಾಡುವುದು ಪೂಜಿತವಾದ ಕ್ಷತ್ರಧರ್ಮವಷ್ಟೆ!

ಸಂಜಯಃ

ತ್ವದ್ಯುಕ್ತೋಽಯಮನುಪ್ರಶ್ನೋ ಮಹಾರಾಜ ಯಥೇಚ್ಛಸಿ ।
ನ ತು ದುರ್ಯೋಧನೇ ದೋಷಮಿಮಮಾಸಕ್ತುಮರ್ಹಸಿ ॥೯॥

ಶೃಣುಷ್ವಾನವಶೇಷೇಣ ವದತಃ ಪಾರ್ಥಿವರ್ಷಭ ॥೧೦॥

ಸಂಜಯ– ಎಲೈ ಮಹಾರಾಜನೇ, ನೀನು ಬಯಸಿದಂತೆ ಪ್ರಶ್ನೆಯನ್ನು ಕೇಳುತ್ತಿದ್ದೀಯೆ. ಆದರೆ ಎಲ್ಲ ದೋಷಗಳಿಗೂ ದುರ್ಯೋಧನನನ್ನೇ ಗುರಿ ಮಾಡುವುದು ನಿನಗೆ ಸರಿಯಲ್ಲ. ಎಲೈ ರಾಜಶ್ರೇಷ್ಠನೇ, ಎಲ್ಲವನ್ನೂ ಸಮಗ್ರವಾಗಿ ಕೇಳು.

ಯ ಆತ್ಮನೋ ದುಶ್ಚರಿತಾದಶುಭಂ ಪ್ರಾಪ್ನುಯಾನ್ನರಃ ।
ಏನಸಾ ನ ಸ ದೈವಂ ವಾ ಕಾಲಂ ವಾ ಗಂತುಮರ್ಹತಿ ॥೧೧॥

ಯಾವ ಮನುಷ್ಯನು ತನ್ನ ದುರ್ನಡತೆಯಿಂದ ಅಶುಭವನ್ನು ಹೊಂದುತ್ತಾನೆಯೋ ಅವನು ಆ ದೋಷವನ್ನು ದೈವಕ್ಕಾಗಲೀ, ಕಾಲಕ್ಕಾಗಲೀ ಸಂಬಂಧಿಸಬಾರದು.

ಮಹಾರಾಜ ಮನುಷ್ಯೇಷು ನಿಂದ್ಯಂ ಯಃ ಸರ್ವಮಾಚರೇತ್ ।
ಸ ವಧ್ಯಃ ಸರ್ವಲೋಕಸ್ಯ ನಿಂದಿತಾನಿ ಸಮಾಚರನ್ ॥೧೨॥

ಎಲೈ ಮಹಾರಾಜನೇ, ಮನುಷ್ಯರಲ್ಲಿ ಯಾವನು ಎಲ್ಲಾ ನಿಂದಿತವಾದ ಕರ್ಮಗಳನ್ನೇ ಮಾಡುವನೋ ಅಂತಹ ನಿಂದಿತ ಕರ್ಮವನ್ನು ಆಚರಿಸುವ ಮನುಷ್ಯನು ಸರ್ವಲೋಕಕ್ಕೂ ವಧ್ಯನಾಗುತ್ತಾನೆ.

ನ್ಯಕ್ಕಾರಾ ಮನು...ಶ್ರೇಷ್ಠ ಪಾಂಡವೈಸ್ತ ತ್ತತ್ತೀಕ್ಷ್ಣಯಾ ।
ಅನುಭೂತಾ ಮಹಾರಾಜ ನಿಕೃತೈಃ ಸಹದೈವತೈಃ ॥೧೩॥

ಎಲೈ ಮನುಜಶ್ರೇಷ್ಠನೇ, ಮಹಾರಾಜನೇ, ನಿನ್ನನ್ನು ಗಮನಿಸಿ ಪಾಂಡವರು ದೇವತೆಗಳ ಜೊತೆಯಲ್ಲಿ ತಮಗೆ ಮಾಡಿದ ಅನೇಕ ಅಪಚಾರಗಳನ್ನೂ, ಅವಮಾನಗಳನ್ನೂ ಅನುಭವಿಸಿದರು (ಆದ್ದರಿಂದ ಈ ದೋಷಕ್ಕೆ ನೀನೂ ಭಾಗಿಯಾಗುವಿ).

ಹಯಾನಾಂ ಚ ಗಜಾನಾಂ ಚ ರಾಜ್ಞಾಂ ಚಾಮಿತತೇಜಸಾಮ್ ।
ವೈಶಸಂ ಸಮರೇ ವೃತ್ತಂ ಯತ್ತನ್ಮೇ ಶೃಣು ಸರ್ವಶಃ ॥೧೪॥

ಹಯಗಳಿಗೆ, ಗಜಗಳಿಗೆ ಮತ್ತು ಅಮಿತತೇಜಸ್ಸುಗಳುಳ್ಳ ರಾಜರಿಗೆ ಯುದ್ಧದಲ್ಲಿ ಎಂತಹ ಹಿಂಸೆ ಉಂಟಾಯಿತೋ ಅದೆಲ್ಲವನ್ನೂ ನಾನು ಹೇಳುತ್ತೇನೆ, ಕೇಳು.

ಸ್ಥಿರೋ ಭೂತ್ವಾ ಮಹಾಪ್ರಾಜ್ಞ ಸರ್ವಲೋಕಕ್ಷಯೋದಯಮ್ ।
ಯಥಾಭೂತಂ ಮಹಾಯುದ್ಧೇ ಶ್ರುತ್ವಾ ಮಾ ವಿಮನಾ ಭವ ॥೧೫॥

ಎಲೈ ಮಹಾಪ್ರಾಜ್ಞನೇ, ಸರ್ವಲೋಕಕ್ಷಯವನ್ನು ಉಂಟುಮಾಡುವ ಮಹಾಯುದ್ಧದಲ್ಲಿ ಏನು ನಡೆಯಿತೆಂದು ನಾನು ಹೇಳುತ್ತೇನೆ, ಅದನ್ನು ಸ್ಥಿರವಾಗಿ ಕೇಳು ಮತ್ತು ಕೇಳಿ ವಿಷಾದವನ್ನು ಪಡಬೇಡ.

ನ ಹ್ಯೇವ ಕರ್ತಾ ಪುರುಷಃ ಕರ್ಮಣೋಃ ಶುಭಪಾಪಯೋಃ ।
ಅಸ್ವತಂತ್ರೋ ಹಿ ಪುರುಷಃ ಕಾರ್ಯತೇ ದಾರುಯಂತ್ರವತ್ ॥೧೬॥

ಜೀವನೊಬ್ಬನೇ ಶುಭಾಶುಭಕರ್ಮಗಳಿಗೆ ಕರ್ತೃವಲ್ಲ. ಅಸ್ವತಂತ್ರನಾದ ಅವನು ಸೂತ್ರದ ಬೊಂಬೆಯಂತೆ ಕರ್ಮಗಳನ್ನು ಮಾಡಿಸಲ್ಪಡುತ್ತಾನೆ.

ಕೇಚಿದೀಶ್ವರನಿರ್ದಿಷ್ಟಾಃ ಕೇಚಿದೇವ ಯದೃಚ್ಛಯಾ ।
ಪೂರ್ವಕರ್ಮಭಿರಪ್ಯನ್ಯೇ ತ್ರೈಧಮೇತದ್ಧಿ ಭಾಷ್ಯತೇ ॥೧೭॥

ಕೆಲವು ಕರ್ಮಗಳು ಈಶ್ವರ ಸಂಕಲ್ಪಕ್ಕೆ ಅನುಗುಣವಾದವು. ಕೆಲವು ಆಕಸ್ಮಿಕವಾಗಿ ನಡೆಯುತ್ತವೆ. ಇನ್ನು ಕೆಲವು ಪೂರ್ವಕರ್ಮಗಳಿಗೆ ಅನುಸಾರವಾಗಿ ನಡೆಯುತ್ತವೆ. ಹೀಗೆ ಕರ್ಮಗಳಲ್ಲಿ ಮೂರುವಿಧ ಇದೆ ಎಂದು ತಿಳಿದವರಿಂದ ಹೇಳಲ್ಪಡುತ್ತದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಪಂಚಾಶೋತ್ತರಶತತಮೋऽಧ್ಯಾಯಃ ॥

॥ ಭೀಷ್ಮಾಭಿಷೇಚನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತೇಳನೆಯ
ಅಧ್ಯಾಯ ಮುಗಿಯಿತು.

॥ ಸಮಾಪ್ತಂ ಭೀಷ್ಮಾಭಿಷೇಚನಪರ್ವ ॥

★ ★ ★ ★ ★

೧೦. ಉಲೂಕದೂತಾಗಮನಪರ್ವ

ನೂರ ಐವತ್ತೆಂಟನೆಯ ಅಧ್ಯಾಯ

ದುರ್ಯೋಧನನಿಂದ ಉಲೂಕನ ಮೂಲಕ
ಯುಧಿಷ್ಠಿರಾದಿಗಳಿಗೆ ಯುದ್ಧಸಂದೇಶ.

ಸಂಜಯಃ

ಹಿರಣ್ವತ್ಯಾಂ ನಿವಿಷ್ಟೇಷು ಪಾಂಡವೇಷು ಮಹಾತ್ಮಸು ॥೧॥

ನ್ಯವಿಶಂತ ಮಹಾರಾಜ ಕೌರವೇಯಾ ಯಥಾವಿಧಿ ॥೨॥

ಸಂಜಯ– ಎಲೈ ಮಹಾರಾಜನೇ, ಮಹಾತ್ಮರಾದ ಪಾಂಡವರು ಹಿರಣ್ವತಿ ನದಿಯ ತೀರದಲ್ಲಿ ಬೀಡುಬಿಡುತ್ತಿರಲು ಕೌರವರು ವಿಧಿಗೆ ಅನುಗುಣವಾಗಿ ಕುರುಕ್ಷೇತ್ರಕ್ಕೆ ಬಂದರು.

ತತ್ರ ದುರ್ಯೋಧನೋ ರಾಜಾ ನಿವೇಶ್ಯ ಬಲಮೋಜಸಾ ।
ಸಮ್ಮಾನಯಿತ್ವಾ ನೃಪತೀನ್ ನ್ಯಸ್ಯ ಗುಲ್ಮಾಂಸ್ತಥೈವ ಚ ॥೩॥

ಆರಕ್ಷಸ್ಯ ವಿಧಿಂ ಕೃತ್ವಾ ಯೋಧಾನಾಂ ತತ್ರ ಭಾರತ ।
ಕರ್ಣಂ ದುಃಶಾಸನಂ ಚೈವ ಶಕುನಿಂ ಚಾಪಿ ಸೌಬಲಮ್ ॥೪॥

ಆನಾಯ್ಯ ನೃಪತೀಂಸ್ತತ್ರ ಮಂತ್ರಯಾಮಾಸ ಭಾರತ ॥೫॥

ಎಲೈ ಭಾರತನೇ, ಅಲ್ಲಿ ರಾಜನಾದ ದುರ್ಯೋಧನನು ತನ್ನ ಸಾಮರ್ಥ್ಯದಿಂದ ಸೈನ್ಯವನ್ನು ನಿವೇಶ ಮಾಡಿ, ರಾಜರನ್ನು ಸನ್ಮಾನಿಸಿ, ಸೈನ್ಯದ ಗುಲ್ಮಗಳನ್ನು ಅಲ್ಲಲ್ಲಿ ನಿಲ್ಲಿಸಿ ಯೋಧರ ರಕ್ಷಣೆಯ ವಿಧಾನಗಳನ್ನು ಮಾಡಿ, ಕರ್ಣ-ದುಶ್ಶಾಸನ ಮತ್ತು ಶಕುನಿಯನ್ನೂ ಮತ್ತು ಬೇರೆ ರಾಜರನ್ನೂ ಕರೆಸಿ ಮಂತ್ರಾಲೋಚನೆಯನ್ನು ಮಾಡಿದನು.

ದುರ್ಯೋಧನೋ ಮಹಾರಾಜ ಕರ್ಣೇನ ಸಹ ಭಾರತ ॥೬॥

ಸಂಭಾಷಿತ್ವಾ ಚ ಕರ್ಣೇನ ಭ್ರಾತ್ರಾ ದುಃಶಾಸನೇನ ಚ ।
ಸೌಬಲೇನ ಚ ರಾಜೇಂದ್ರ ಮಂತ್ರಯಿತ್ವಾ ನರರ್ಷಭ ॥೭॥

ಆಹೂಯೋಪಹ್ವರೇ ರಾಜನ್ನುಲೂಕಮಿದಮಬ್ರವೀತ್ ॥೮॥

ಎಲೈ ಮಹಾರಾಜನೇ, ಭಾರತನೇ, ರಾಜೇಂದ್ರನೇ, ದುರ್ಯೋಧನನು ಕರ್ಣನ ಜೊತೆಯಲ್ಲಿ ಮತ್ತು ತಮ್ಮನಾದ ದುಶ್ಶಾಸನನ ಜೊತೆಯಲ್ಲಿ ಮತ್ತು ಶಕುನಿಯ ಜೊತೆಯಲ್ಲಿ ಸಂಭಾಷಣೆಯನ್ನು ಮಾಡಿ, ಮಂತ್ರಾಲೋಚನೆಯನ್ನು ನಡೆಸಿ, ಏಕಾಂತದಲ್ಲಿ ಉಲೂಕನನ್ನು ಕರೆದು ಹೀಗೆ ಮಾತನಾಡಿದನು.

ಉಲೂಕ ಗಚ್ಛ ಕೈತವ್ಯ ಪಾಂಡವಾನ್ ಸಹಸೋಮಕಾನ್ ।
ಗತ್ವಾ ಮಮ ವಚೋ ಬ್ರೂಹಿ ವಾಸುದೇವಸ್ಯ ಶೃಣ್ವತಃ ॥೯॥

ಎಲೈ ಉಲೂಕನೇ, ಕೈತವ್ಯನೇ, ಸೋಮಕರಿಂದ ಕೂಡಿದ ಪಾಂಡವರ ಬಳಿಗೆ ಹೋಗಿ ಕೃಷ್ಣನು ಕೇಳುವಂತೆ ನನ್ನ ಮಾತುಗಳನ್ನು ಹೇಳುವವನಾಗು.

ಇದಂ ತತ್ ಸಮನುಪ್ರಾಪ್ತಂ ವರ್ಷಪೂಗಾಭಿಚಿಂತಿತಮ್ ।
ಪಾಂಡವಾನಾಂ ಕುರೂಣಾಂ ಚ ಯುದ್ಧಂ ಲೋಕಭಯಂಕರಮ್॥೧೦॥

ಅನೇಕ ವಷಗಳಿಂದ ಚಿಂತಿಸುತ್ತಿದ್ದ ಲೋಕಭಯಂಕರವಾದ ಕುರು-ಪಾಂಡವರ ಈ ಯುದ್ಧವು ಪ್ರಾಪ್ತವಾಗಿದೆ.

ಯದೇತತ್ ಕಥ್ಯತೇ ವಾಕ್ಯಂ ಸಂಜಯೋ ಮಾಂ ಯದಬ್ರವೀತ್ ॥೧೧॥

ಮಧ್ಯೇ ಕುರೂಣಾಂ ಕೌಂತೇಯ ತಸ್ಯ ಕಾಲಃ ಸಮಾಗತಃ ।
ಯಥಾ ವಃ ಸಂಪ್ರತಿಜ್ಞಾತಂ ತತ್ಸರ್ವಂ ಕ್ರಿಯತಾಮಿತಿ ॥೧೨॥

೧೦. ಉಲೂಕದೂತಾಗಮನಪರ್ವ

ನೂರ ಐವತ್ತೆಂಟನೆಯ ಅಧ್ಯಾಯ

ದುರ್ಯೋಧನನಿಂದ ಉಲೂಕನ ಮೂಲಕ
ಯುಧಿಷ್ಠಿರಾದಿಗಳಿಗೆ ಯುದ್ಧಸಂದೇಶ.

ಸಂಜಯಃ

ಹಿರಣ್ವತ್ಯಾಂ ನಿವಿಷ್ಟೇಷು ಪಾಂಡವೇಷು ಮಹಾತ್ಮಸು ॥೧॥

ನ್ಯವಿಶಂತ ಮಹಾರಾಜ ಕೌರವೇಯಾ ಯಥಾವಿಧಿ ॥೨॥

ಸಂಜಯ– ಎಲೈ ಮಹಾರಾಜನೇ, ಮಹಾತ್ಮರಾದ ಪಾಂಡವರು ಹಿರಣ್ವತಿ ನದಿಯ ತೀರದಲ್ಲಿ ಬೀಡುಬಿಡುತ್ತಿರಲು ಕೌರವರು ವಿಧಿಗೆ ಅನುಗುಣವಾಗಿ ಕುರುಕ್ಷೇತ್ರಕ್ಕೆ ಬಂದರು.

ತತ್ರ ದುರ್ಯೋಧನೋ ರಾಜಾ ನಿವೇಶ್ಯ ಬಲಮೋಜಸಾ ।
ಸಮ್ಮಾನಯಿತ್ವಾ ನೃಪತೀನ್ ನ್ಯಸ್ಯ ಗುಲ್ಮಾಂಸ್ತಥೈವ ಚ ॥೩॥

ಆರಕ್ಷಸ್ಯ ವಿಧಿಂ ಕೃತ್ವಾ ಯೋಧಾನಾಂ ತತ್ರ ಭಾರತ ।
ಕರ್ಣಂ ದುಃಶಾಸನಂ ಚೈವ ಶಕುನಿಂ ಚಾಪಿ ಸೌಬಲಮ್ ॥೪॥

ಆನಾಯ್ಯ ನೃಪತೀಂಸ್ತತ್ರ ಮಂತ್ರಯಾಮಾಸ ಭಾರತ ॥೫॥

ಎಲೈ ಭಾರತನೇ, ಅಲ್ಲಿ ರಾಜನಾದ ದುರ್ಯೋಧನನು ತನ್ನ ಸಾಮರ್ಥ್ಯದಿಂದ ಸೈನ್ಯವನ್ನು ನಿವೇಶ ಮಾಡಿ, ರಾಜರನ್ನು ಸನ್ಮಾನಿಸಿ, ಸೈನ್ಯದ ಗುಲ್ಮಗಳನ್ನು ಅಲ್ಲಲ್ಲಿ ನಿಲ್ಲಿಸಿ ಯೋಧರ ರಕ್ಷಣೆಯ ವಿಧಾನಗಳನ್ನು ಮಾಡಿ, ಕರ್ಣ-ದುಶ್ಶಾಸನ ಮತ್ತು ಶಕುನಿಯನ್ನೂ ಮತ್ತು ಬೇರೆ ರಾಜರನ್ನೂ ಕರೆಸಿ ಮಂತ್ರಾಲೋಚನೆಯನ್ನು ಮಾಡಿದನು.

ದುರ್ಯೋಧನೋ ಮಹಾರಾಜ ಕರ್ಣೇನ ಸಹ ಭಾರತ ॥೬॥

ಸಂಭಾಷಿತ್ವಾ ಚ ಕರ್ಣೇನ ಭ್ರಾತ್ರಾ ದುಃಶಾಸನೇನ ಚ ।
ಸೌಬಲೇನ ಚ ರಾಜೇಂದ್ರ ಮಂತ್ರಯಿತ್ವಾ ನರರ್ಷಭ ॥೭॥

ಆಹೂಯೋಪಹ್ವರೇ ರಾಜನ್ನುಲೂಕಮಿದಮಬ್ರವೀತ್ ॥೮॥

ಎಲೈ ಮಹಾರಾಜನೇ, ಭಾರತನೇ, ರಾಜೇಂದ್ರನೇ, ದುರ್ಯೋಧನನು ಕರ್ಣನ ಜೊತೆಯಲ್ಲಿ ಮತ್ತು ತಮ್ಮನಾದ ದುಶ್ಶಾಸನನ ಜೊತೆಯಲ್ಲಿ ಮತ್ತು ಶಕುನಿಯ ಜೊತೆಯಲ್ಲಿ ಸಂಭಾಷಣೆಯನ್ನು ಮಾಡಿ, ಮಂತ್ರಾಲೋಚನೆಯನ್ನು ನಡೆಸಿ, ಏಕಾಂತದಲ್ಲಿ ಉಲೂಕನನ್ನು ಕರೆದು ಹೀಗೆ ಮಾತನಾಡಿದನು.

ಉಲೂಕ ಗಚ್ಛ ಕೈತವ್ಯ ಪಾಂಡವಾನ್ ಸಹಸೋಮಕಾನ್ ।
ಗತ್ವಾ ಮಮ ವಚೋ ಬ್ರೂಹಿ ವಾಸುದೇವಸ್ಯ ಶೃಣ್ವತಃ ॥೯॥

ಎಲೈ ಉಲೂಕನೇ, ಕೈತವ್ಯನೇ, ಸೋಮಕರಿಂದ ಕೂಡಿದ ಪಾಂಡವರ ಬಳಿಗೆ ಹೋಗಿ ಕೃಷ್ಣನು ಕೇಳುವಂತೆ ನನ್ನ ಮಾತುಗಳನ್ನು ಹೇಳುವವನಾಗು.

ಇದಂ ತತ್ ಸಮನುಪ್ರಾಪ್ತಂ ವರ್ಷಪೂಗಾಭಿಚಿಂತಿತಮ್ ।
ಪಾಂಡವಾನಾಂ ಕುರೂಣಾಂ ಚ ಯುದ್ಧಂ ಲೋಕಭಯಂಕರಮ್॥೧೦॥

ಅನೇಕ ವಷಗಳಿಂದ ಚಿಂತಿಸುತ್ತಿದ್ದ ಲೋಕಭಯಂಕರವಾದ ಕುರು-ಪಾಂಡವರ ಈ ಯುದ್ಧವು ಪ್ರಾಪ್ತವಾಗಿದೆ.

ಯದೇತತ್ ಕಥ್ಯತೇ ವಾಕ್ಯಂ ಸಂಜಯೋ ಮಾಂ ಯದಬ್ರವೀತ್ ॥೧೧॥

ಮಧ್ಯೇ ಕುರೂಣಾಂ ಕೌಂತೇಯ ತಸ್ಯ ಕಾಲಃ ಸಮಾಗತಃ ।
ಯಥಾ ವಃ ಸಂಪ್ರತಿಜ್ಞಾತಂ ತತ್ಸರ್ವಂ ಕ್ರಿಯತಾಮಿತಿ ॥೧೨॥

ಸಂಜಯನು ಕುರುಗಳ ಮಧ್ಯೆ ಯಾವ ನಿನ್ನ ಮಾತುಗಳನ್ನು ಹೇಳಿದನೋ ಎಲೈ ಕೌಂತೇಯನೇ, ಅದನ್ನು ಕ್ರಿಯೆಯಿಂದ ತೋರಿಸುವ ಕಾಲವು ಈಗ ಒದಗಿದೆ. ನೀನು ಪ್ರತಿಜ್ಞೆ ಮಾಡಿದಂತೆ ಎಲ್ಲವನ್ನೂ ನೆರವೇರಿಸು (ಎಂದು ಹೇಳು).

ಜ್ಯೇಷ್ಠಂ ತಥೈವ ಕೌಂತೇಯಂ ಬ್ರೂಯಾಸ್ತ್ವಂ ವಚನಾನ್ಮಮ ।
ಭ್ರಾತೃಭಿಃ ಸಹಿತಂ ಸರ್ವೈಃ ಸೋಮಕೈಶ್ಚ ಸಕೇಕಯೈಃ ॥೧೩॥

ತನ್ನ ಎಲ್ಲಾ ಸಹೋದರರಿಂದಲೂ ಮತ್ತು ಸೋಮಕರಿಂದಲೂ ಕೇಕಯರಿಂದಲೂ ಕೂಡಿದ ಕುಂತೀಪುತ್ರರಲ್ಲಿ ಜ್ಯೇಷ್ಠನಾದ ಧರ್ಮರಾಜನನ್ನು ಕುರಿತು ನನ್ನ ಮಾತಿನಂತೆ ಹೀಗೆ ಹೇಳುವವನಾಗು.

ಕಥಂ ವಾ ಧಾರ್ಮಿಕೋ ಭೂತ್ವಾ ತ್ವಮಧರ್ಮೇ ಮನಃ ಕೃಥಾಃ ॥೧೪॥

ಯದಿಚ್ಛಸಿ ಜಗತ್ಸರ್ವಂ ನಶ್ಯಮಾನಂ ನೃಶಂಸವತ್ ।
ಅಭಯಂ ಸರ್ವಭೂತೇಭ್ಯೋ ದಾತಾ ತ್ವಮಿತಿ ಮೇ ಮತಿಃ ॥೧೫॥

ಧಾರ್ಮಿಕನಾದ ನೀನು ಅಧರ್ಮದಲ್ಲಿ ಹೇಗೆ ಮನಸ್ಸನ್ನು ಮಾಡಿದೆ? ಏಕೆಂದರೆ ಕ್ರೂರಿಯಂತೆ ಸರ್ವಜಗತ್ತಿನ ನಾಶವನ್ನು ಬಯಸುತ್ತಿದ್ದೀಯೆ. ನೀನು ಎಲ್ಲಾ ಪ್ರಾಣಿಗಳಿಗೂ ಅಭಯವನ್ನು ಕೊಡುವವನು ಎಂದು ನನ್ನ ಅಭಿಪ್ರಾಯವಿದ್ದಿತು!

ಶ್ರೂಯತೇ ಹಿ ಪುರಾ ಗೀತಃ ಶ್ಲೋಕೋಽಯಂ ಭರತರ್ಷಭ ।
ಪ್ರಹ್ಲಾದೇನಾಥ ಭದ್ರಂ ತೇ ಹೃತೇ ರಾಜ್ಯೇ ತು ದೈವತೈಃ ॥೧೬॥

ಎಲೈ ಭರತರ್ಷಭನೇ, ನಿನಗೆ ಮಂಗಳವಾಗಲಿ. ಪ್ರಹ್ಲಾದನ ರಾಜ್ಯವು ಹಿಂದೆ ದೇವತೆಗಳಿಂದ ಅಪಹೃತವಾದಾಗ ಪ್ರಹ್ಲಾದನಿಂದ ಹಾಡಲ್ಪಟ್ಟ ಒಂದು ಶ್ಲೋಕವು ಕೇಳಿಬರುತ್ತದೆ.

ಯಸ್ಯ ಧರ್ಮಧ್ವಜೋ ನಿತ್ಯಂ ಸುರಧ್ವಜ ಇವೋಚ್ಛ್ರಿತಃ ।
ಪ್ರಚ್ಛನ್ನಾನಿ ಚ ಪಾಪಾನಿ ಬೈಡಾಲಂ ನಾಮ ತದ್ ವ್ರತಮ್ ॥೧೭॥

ಯಾವನ ಧರ್ಮಧ್ವಜವು ದೇವಧ್ವಜದಂತೆ ನಿತ್ಯವೂ ಉನ್ನತವಾಗಿದ್ದು ಪಾಪಗಳು ಪ್ರಚ್ಛನ್ನವಾಗಿರುತ್ತವೆಯೋ ಅವನ ವ್ರತವನ್ನು ಬಿಡಾಲವ್ರತವೆಂದು ಕರೆಯುತ್ತಾರೆ (ಬಿಡಾಲ= ಬೆಕ್ಕು).

ಅತ್ರ ತೇ ವರ್ತಯಿಷ್ಯಾಮಿ ಆಖ್ಯಾನಮಿದಮುತ್ತಮಮ್ ।
ಕಥಿತಂ ನಾರದೇನೇಹ ಪಿತುರ್ಮಮ ನರಾಧಿಪ ॥೧೮॥

ಎಲೈ ರಾಜನೇ, ಈ ವಿಷಯದಲ್ಲಿ ನಾರದರು ನನ್ನ ತಂದೆಗೆ ಹೇಳಿದ ಶ್ರೇಷ್ಠವಾದ ಒಂದು ಕಥೆಯನ್ನು ಹೇಳುವೆನು.

ಮಾರ್ಜಾರಃ ಕಿಲ ದುಷ್ಟಾತ್ಮಾ ನಿಶ್ಚೇಷ್ಟಃ ಸರ್ವಕರ್ಮಸು ।
ಊರ್ಧ್ವಬಾಹುಃ ಸ್ಥಿತೋ ರಾಜನ್ ಗಂಗಾತೀರೇ ಕದಾಚನ ॥೧೯॥

ಎಲೈ ರಾಜನೇ, ಒಂದು ದುಷ್ಟವಾದ ಬೆಕ್ಕು ಯಾವ ಕೆಲಸವನ್ನು ಮಾಡಲೂ ಸಾಮರ್ಥ್ಯವಿಲ್ಲದೆ ಒಮ್ಮೆ ಗಂಗಾತೀರದಲ್ಲಿ ಕೈಗಳನ್ನು ಎತ್ತಿ ನಿಂತುಕೊಂಡಿತು.

ಸ ವೈ ಕೃತ್ವಾ ಮನಃಶುದ್ಧಿಂ ಪ್ರತ್ಯಯಾರ್ಥಂ ಶರೀರಿಣಾಮ್ ।
ಕರೋಮಿ ಧರ್ಮಮಿತ್ಯಾಹ ಸರ್ವಾನೇವ ಶರೀರಿಣಃ ॥೨೦॥

ಅದು ಎಲ್ಲರನ್ನೂ ನಂಬಿಸುವುದಕ್ಕಾಗಿ ಸಮೀಪಕ್ಕೆ ಬಂದ ಎಲ್ಲಾ ದೇಹಿಗಳನ್ನು ಕುರಿತು, ನಾನು ಮನಃಶುದ್ಧಿಯನ್ನು ಮಾಡಿಕೊಂಡು ಇಲ್ಲಿ ಧರ್ಮವನ್ನು ಆಚರಿಸುತ್ತೇನೆ ಎಂದು ಹೇಳಿತು.

ತಸ್ಯ ಕಾಲೇನ ಮಹತಾ ವಿಸ್ರಂಭಂ ಜಗ್ಮುರಂಡಜಾಃ ।
ಸಮೇತ್ಯ ಚ ಪ್ರಶಂಸಂತಿ ಮಾರ್ಜಾರಂ ತಂ ವಿಶಾಂಪತೇ ॥೨೧॥

ಬಹಳ ಕಾಲವು ಕಳೆದ ಮೇಲೆ ಪಕ್ಷಿಗಳು ಆ ಬೆಕ್ಕನ್ನು ನಂಬಿದವು. ಎಲೈ ರಾಜನೇ, ಆ ಪಕ್ಷಿಗಳೆಲ್ಲವೂ ಸೇರಿ ಆ ಮಾರ್ಜಾಲವನ್ನು ಪ್ರಶಂಸಿಸಿದವು.

ಪೂಜ್ಯಮಾನಸ್ತು ತೈಃ ಸರ್ವೈಃ ಪಕ್ಷಿಭಿಃ ಪಕ್ಷಿಭೋಜನಃ ।
ಆತ್ಮಕಾರ್ಯಂ ಕೃತಂ ಮೇನೇ ಚರ್ಯಾಯಾಶ್ಚ ಕೃತಂ ಫಲಮ್ ॥೨೨॥

ಎಲ್ಲ ಪಕ್ಷಿಗಳಿಂದಲೂ ಪೂಜಿತವಾದ, ಪಕ್ಷಿಭೋಜನನಾದ ಆ ಮಾರ್ಜಾಲವು (ಬೆಕ್ಕು) ತನ್ನ ಉದ್ದೇಶವು ಫಲಿಸಿತೆಂದೂ, ತಾನು ಮಾಡಿದ ವ್ರತಕ್ಕೆ ಫಲವು ದೊರೆಯಿತೆಂದೂ ತಿಳಿಯಿತು.

ಅಥ ದೀರ್ಘಸ್ಯ ಕಾಲಸ್ಯ ತಂ ದೇಶಂ ಮೂಷಿಕಾ ಯಯುಃ ।
ದದೃಶುಸ್ತಂ ಚ ತೇ ತತ್ರ ಧಾರ್ಮಿಕಂ ವ್ರತಚಾರಿಣಮ್ ॥೨೩॥

ಅನಂತರ ಎಷ್ಟೋ ಕಾಲವು ಕಳೆದ ಮೇಲೆ ಆ ಪ್ರದೇಶಕ್ಕೆ ಇಲಿಗಳು ಬಂದವು. ಅವು ಧಾರ್ಮಿಕನಾಗಿ ವ್ರತವನ್ನು ಆಚರಿಸುತ್ತಿದ್ದ ಆ ಮಾರ್ಜಾಲವನ್ನು ನೋಡಿದವು.

ಕಾರ್ಯೇಣ ಮಹತಾ ಯುಕ್ತಂ ಡಂಭಯುಕ್ತೇನ ಭಾರತ ।
ತೇಷಾಂ ಮತಿರಿಯಂ ರಾಜನ್ನಾಸೀತ್ ತತ್ರ ವಿನಿಶ್ಚಯೇ ॥೨೪॥

ಎಲೈ ಭಾರತನೇ, ಧರ್ಮಯುಕ್ತವಾದ ದೊಡ್ಡ ಉದ್ದೇಶದಿಂದ ಕೂಡಿದ ಆ ಮಾರ್ಜಾಲವನ್ನು ನೋಡಿದವು. ಎಲೈ ರಾಜನೇ, ಆ ಇಲಿಗಳಿಗೆ ಈ ನಿಶ್ಚಿತ ಬುದ್ಧಿ ಉಂಟಾಯಿತು.

ಬಹ್ವಮಿತ್ರಾ ವಯಂ ಸರ್ವೇ ತೇಷಾಂ ನೋ ಮಾತುಲೋ ಹ್ಯಯಮ್ ।
ರಕ್ಷಾಂ ಕರೋತು ಸತತಂ ವೃದ್ಧಬಾಲಸ್ಯ ಸರ್ವತಃ ॥೨೫॥

ನಮಗೆ ಅನೇಕ ಶತ್ರುಗಳಿದ್ದಾರೆ. ಈ ಮಾರ್ಜಾಲವು ನಮಗೆ ಸೋದರಮಾವ. ಇದು ವೃದ್ಧರೂ, ಬಾಲರೂ ಆದ ಎಲ್ಲಾ ಇಲಿಗಳನ್ನು ಸತತವಾಗಿ ರಕ್ಷಿಸಲಿ.

ಉಪಗಮ್ಯ ತು ತೇ ಸರ್ವೇ ಬಿಡಾಲಮಿದಮಬ್ರುವನ್ ॥೨೬॥

ಭವತ್ಪ್ರಸಾದಾದಿಚ್ಛಾಮಃ ಚರ್ತುಂ ಚೈವ ಯಥಾಸುಖಮ್ ।
ಭವಾನ್ ನೋ ಗತಿರವ್ಯಗ್ರಾ ಭವಾನ್ ನಃ ಪರಮಃ ಸುಹೃತ್ ॥೨೭॥

ಅವೆಲ್ಲವೂ ಮಾರ್ಜಾಲವನ್ನು ಕುರಿತು ಹೀಗೆ ಹೇಳಿದವು– 'ನಿನ್ನ ಅನುಗ್ರಹದಿಂದ ನಾವು ಸುಖವಾಗಿ ಸಂಚರಿಸಲು ಬಯಸುತ್ತೇವೆ. ನೀನು ನಮಗೆ ಸ್ಥಿರವಾದ ಗತಿ ಮತ್ತು ಪರಮಸ್ನೇಹಿತನಾದವನು.

ತೇ ವಯಂ ಸಹಿತಾಃ ಸರ್ವೇ ಭವಂತಂ ಶರಣಂ ಗತಾಃ ।
ಭವಾನ್ ಧರ್ಮಪರೋ ನಿತ್ಯಂ ಭವಾನ್ ಧರ್ಮೇ ವ್ಯವಸ್ಥಿತಃ ॥೨೮॥

ತದ್ ರಕ್ಷ ನೋ ಮಹಾಪ್ರಾಜ್ಞ ತ್ರಿದಶಾನಿವ ವಜ್ರಭೃತ್ ॥೨೯॥

ನಾವೆಲ್ಲರೂ ಸೇರಿ ನಿನಗೆ ಶರಣಾಗತರಾಗಿದ್ದೇವೆ. ನೀನು ಧರ್ಮದಲ್ಲಿ ನಿಶ್ಚಿತನಾಗಿದ್ದು, ಯಾವಾಗಲೂ ಧರ್ಮಪರನಾಗಿದ್ದೀಯೆ. ಆದ್ದರಿಂದ ಎಲೈ ಮಹಾಪ್ರಾಜ್ಞನೇ, ದೇವೇಂದ್ರನು ದೇವತೆಗಳನ್ನು ರಕ್ಷಿಸಿದಂತೆ ನಮ್ಮನ್ನು ರಕ್ಷಿಸು' (ಎಂದು ಹೇಳಿದವು).

ಏವಮುಕ್ತಸ್ತು ತೈಃ ಸರ್ವೈರ್ಮೂಷಿಕೈಃ ಸ ವಿಶಾಂಪತೇ ।
ಪ್ರತ್ಯುವಾಚ ತತಃ ಸರ್ವಾನ್ ಮೂಷಿಕಾನ್ ಮೂಷಿಕಾಂತಕೃತ್ ॥೩೦॥

ಎಲೈ ರಾಜನೇ, ಹೀಗೆ ಆ ಇಲಿಗಳಿಂದ ಹೇಳಲ್ಪಟ್ಟ, ಮೂಷಿಕಭಕ್ಷಕವಾದ ಮಾರ್ಜಾಲವು ಆ ಎಲ್ಲಾ ಇಲಿಗಳನ್ನು ಕುರಿತು ಮಾತನಾಡಿತು.

ದ್ವಯೋರ್ಯೋಗಂ ನ ಪಶ್ಯಾಮಿ ತಪಸೋ ರಕ್ಷಣಸ್ಯ ಚ ।
ಅವಶ್ಯಂ ತು ಮಯಾ ಕಾರ್ಯಂ ವಚನಂ ಭವತಾಂ ಹಿತಮ್ ॥೩೧॥

ನನ್ನ ತಪಸ್ಸು ಮತ್ತು ನಿಮ್ಮ ರಕ್ಷಣೆ ಇವೆರಡನ್ನೂ ಜೊತೆಯಲ್ಲಿ ಮಾಡುವ ಉಪಾಯವನ್ನು ಕಾಣುತ್ತಿಲ್ಲ. ಆದರೆ ನಿಮಗೆ ಹಿತವಾದ ಕಾರ್ಯವನ್ನು ನಿಮ್ಮ ವಚನದಂತೆ ನಾನು ಮಾಡಲೇಬೇಕು.

ಯುಷ್ಮಾಭಿರಪಿ ಕರ್ತವ್ಯಂ ವಚನಂ ಮಮ ನಿತ್ಯಶಃ ।
ತಪಸಾऽಸ್ಮಿ ಪರಿಶ್ರಾಂತೋ ದೃಢಂ ನಿಯಮಮಾಸ್ಥಿತಃ ॥೩೨॥

ನೀವೂ ಸಹ ಯಾವಾಗಲೂ ನನ್ನ ಮಾತನ್ನು ನಡೆಸಬೇಕು. ನಾನು ಬಹಳ ನಿಯಮಗಳನ್ನು ಅನುಸರಿಸಿ ತಪಸ್ಸನ್ನು ಮಾಡಿ ಬಳಲಿದ್ದೇನೆ.

ನ ಚಾಪಿ ಗಮನೇ ಶಕ್ತಿಂ ಕಾಂಚಿತ್ ಪಶ್ಯಾಮಿ ಚಿಂತಯನ್ ।
ಸೋऽಸ್ಮಿ ನೇಯಃ ಸದಾ ತ್ರಾತಾ ನದೀಕೂಲಮಿತಃ ಸುಖಮ್ ॥೩೩॥

ನನಗೆ ಎಷ್ಟು ಯೋಚನೆ ಮಾಡಿದರೂ ಇಲ್ಲಿಂದ ನದೀತೀರಕ್ಕೆ ಹೋಗುವಷ್ಟು ಶಕ್ತಿಯೂ ಕಾಣಿಸುತ್ತಿಲ್ಲ. ಆದ್ದರಿಂದ ನಿಮ್ಮನ್ನು ರಕ್ಷಿಸುವ ನಾನು ಇಲ್ಲಿಂದ ನದೀತೀರದವರೆಗೆ ನಿಮ್ಮಿಂದ ಯಾವಾಗಲೂ ಒಯ್ಯಲ್ಪಡಬೇಕು.

ತಥೇತಿ ತತ್ ಪ್ರತಿಜ್ಞಾಯ ಮೂಷಿಕಾ ಭರತರ್ಷಭ ।
ವೃದ್ಧಬಾಲಮಥೋ ಸರ್ವೇ ಮಾರ್ಜಾರಾಯ ನ್ಯವೇದಯನ್ ॥೩೪॥

ಎಲೈ ಭರತರ್ಷಭನೇ, ಆ ಇಲಿಗಳು ಹಾಗೆಯೇ ಆಗಲಿ ಎಂದು ಪ್ರತಿಜ್ಞೆ ಮಾಡಿ ವೃದ್ಧಬಾಲರಾದಿಯಾದ ಎಲ್ಲಾ ಇಲಿಗಳನ್ನೂ ಆ ಬೆಕ್ಕಿಗೆ ನಿವೇದಿಸಿದವು.

ತತಃ ಸ ಪಾಪೋ ದುಷ್ಟಾತ್ಮಾ ಮೂಷಿಕಾನಥ ಭಕ್ಷಯನ್ ।
ಪೀವರಶ್ಚ ಸುವರ್ಣಶ್ಚ ದೃಢಬಂಧೋ ವ್ಯಜಾಯತ ॥೩೫॥

ಅನಂತರ ಆ ದುಷ್ಟಾತ್ಮನಾದ, ಪಾಪಿಯಾದ ಬೆಕ್ಕು ಇಲಿಗಳನ್ನು ತಿನ್ನುತ್ತಾ ಪುಷ್ಟವೂ, ಒಳ್ಳೆಯ ವರ್ಣದಿಂದ ಕೂಡಿದುದೂ ಮತ್ತು ದೃಢವಾದ ದೇಹವುಳ್ಳದ್ದೂ ಆಯಿತು.

ಮೂಷಿಕಾಣಾಂ ಗಣಶ್ಚಾತ್ರ ಭೃಶಂ ಸಂಕ್ಷೀಯತೇಽಥ ಸಃ ।
ಮಾರ್ಜಾರೋ ವರ್ಧತೇ ಚಾಪಿ ತೇಜೋಬಲಸಮನ್ವಿತಃ ॥೩೬॥

ಇಲಿಗಳ ಸಮೂಹವು ಬಹಳವಾಗಿ ಕ್ಷೀಣಿಸುತ್ತದೆ ಮತ್ತು ಬೆಕ್ಕು ತೇಜೋಬಲದಿಂದ ಕೂಡಿ ಬೆಳೆಯುತ್ತದೆ.

ತತಸ್ತೇ ಮೂಷಿಕಾಃ ಸರ್ವೇ ಸಮೇತ್ಯಾನ್ಯೋನ್ಯಮಬ್ರುವನ್ ।
ಮಾತುಲೋ ವರ್ಧತೇ ನಿತ್ಯಂ ವಯಂ ಕ್ಷೀಯಾಮಹೇ ಭೃಶಮ್ ॥೩೭॥

ಆಗ ಆ ಇಲಿಗಳೆಲ್ಲವೂ ಸೇರಿ ಮಾವನು ನಿತ್ಯವೂ ಅಭಿವೃದ್ಧಿಯನ್ನು ಹೊಂದುತ್ತಿದ್ದಾನೆ. ನಾವು ಕ್ಷಯವನ್ನು ಹೊಂದುತ್ತಿದ್ದೇವೆ ಎಂದು ಪರಸ್ಪರವಾಗಿ ಮಾತನಾಡಿಕೊಂಡವು.

ತತಃ ಪ್ರಾಜ್ಞತಮಃ ಕಶ್ಚಿತ್ ಡಿಂಡಿಕೋ ನಾಮ ಮೂಷಿಕಃ ।
ಅಬ್ರವೀದ್ ವಚನಂ ರಾಜನ್ ಮೂಷಿಕಾಣಾಂ ಮಹಾಗಣಮ್ ॥೩೮॥

ಅಲ್ಲಿ ಡಿಂಡಿಕನೆಂಬ ಬಹಳ ಬುದ್ಧಿವಂತನಾದ ಒಂದು ಇಲಿಯು ಎಲ್ಲಾ ಇಲಿಗಳ ಸಮೂಹವನ್ನು ಕುರಿತು ಮಾತನಾಡಿತು.

ಗಚ್ಛತಾಂ ವೋ ನದೀತೀರಂ ಸಹಿತಾನಾಂ ವಿಶೇಷತಃ ।
ಪೃಷ್ಠತೋಽಹಂ ಗಮಿಷ್ಯಾಮಿ ಮಾತುಲೇನ ಸಹೈವ ತು ॥೩೯॥

ನೀವೆಲ್ಲರೂ ಒಟ್ಟಿಗೆ ನದೀತೀರಕ್ಕೆ ಹೋಗುವಾಗ ನಾನು ಹಿಂದೆ ಈ ಮಾವನ ಜೊತೆಯಲ್ಲಿ ಬರುವೆನು (ಎಂದು ಹೇಳಿತು).

ಸಾಧು ಸಾಧ್ವಿತಿ ತೇ ಸರ್ವೇ ಪೂಜಯಾಂಚಕ್ರಿರೇ ತದಾ ।
ಚಕ್ರುಶ್ಚೈವ ಯಥಾನ್ಯಾಯಂ ಡಿಂಡಿಕಸ್ಯ ವಚೋಽರ್ಥವತ್ ॥೪೦॥

ಎಲ್ಲ ಇಲಿಗಳೂ ಸರಿ ಸರಿ ಎಂದು ಹೇಳಿ ಡಿಂಡಿಕನನ್ನು ಪೂಜಿಸಿದವು ಮತ್ತು ಡಿಂಡಿಕನು ಹೇಳಿದ ಅರ್ಥವತ್ತಾದ ಮಾತನ್ನು ಹಾಗೆಯೇ ನಡೆಸಿದವು.

ಅವಿಜ್ಞಾನಾತ್ ತತಃ ಸೋಽಥ ಡಿಂಡಿಕಂ ಹ್ಯುಪಭುಕ್ತವಾನ್ ।
ತತಸ್ತೇ ಸಹಿತಾಃ ಸರ್ವೇ ಮಂತ್ರಯಾಮಾಸುರಂಜಸಾ ॥೪೧॥

ಇದನ್ನು ತಿಳಿಯದ ಆ ಮಾರ್ಜಾಲವು ಡಿಂಡಿಕನನ್ನು ತಿಂದಿತು. ಆಗ ಎಲ್ಲಾ ಇಲಿಗಳು ಸೇರಿ ಚೆನ್ನಾಗಿ ಮಂತ್ರಾಲೋಚನೆಯನ್ನು ಮಾಡಿದವು.

ತತಃ ವೃದ್ಧತಮಃ ಕಶ್ಚಿತ್ ಕೋಲಿಕೋ ನಾಮ ಮೂಷಿಕಃ ।
ಅಬ್ರವೀದ್ ವಚನಂ ರಾಜನ್ ಜ್ಞಾತಿಮಧ್ಯೇ ಯಥಾತಥಮ್ ॥೪೨॥

ಎಲೈ ರಾಜನೇ, ಆಗ ಬಂಧುಗಳಾದ ಇಲಿಗಳ ಮಧ್ಯದಲ್ಲಿ ಕೋಲಿಕನೆಂಬ ಬಹಳ ವಯಸ್ಸಾದ ಇಲಿಯು ಸ್ಪಷ್ಟವಾಗಿ ಸತ್ಯವನ್ನು ಮಾತನಾಡಿತು.

ನ ಮಾತುಲೋ ಧರ್ಮಕಾಮಃ ಧದ್ಮಮಾತ್ರಂ ಕೃತಾ ಶಿಖಾ ।
ನ ಮೂಲಫಲಭಕ್ಷಸ್ಯ ವಿಷ್ಠಾ ಭವತಿ ಲೋಮಶಾ ॥೪೩॥

ಈ ಮಾವನು ಧರ್ಮಕಾಮಿಯಲ್ಲ. ಕೇವಲ ಮೋಸವನ್ನು ಮಾಡಲು ಶಿಖೆಯನ್ನು ಧರಿಸಿದ್ದಾನೆ. ಮೂಲ-ಫಲಗಳನ್ನು ಭಕ್ಷಿಸುವ ಪ್ರಾಣಿಯ ಮಲವು ಎಂದೂ ರೋಮಗಳಿಂದ ಕೂಡಿರುವುದಿಲ್ಲ.

ಅಸ್ಯ ಗಾತ್ರಾಣಿ ವರ್ಧಂತೇ ಗಣಶ್ಚ ಪರಿಹೀಯತೇ ।
ಅದ್ಯ ಸಪ್ತಾಷ್ಟದಿವಸಾತ್ ಡಿಂಡಿಕೋಽಪಿ ನ ದೃಶ್ಯತೇ ॥೪೪॥

ಇದರ ದೇಹವು ಬೆಳೆಯುತ್ತಿದೆ. ಇಲಿಗಳ ಸಮೂಹವು ಕ್ಷೀಣಿಸುತ್ತಿದೆ. ಈಗ ಏಳೆಂಟು ದಿವಸಗಳಿಂದ ಡಿಂಡಿಕನೂ ಕಾಣುತ್ತಿಲ್ಲ.

ಏತಚ್ಛ್ರುತ್ವಾ ವಚಃ ಸರ್ವೇ ಮೂಷಿಕಾ ವಿಪ್ರದುದ್ರುವುಃ ।
ಬಿಡಾಲೋಽಪಿ ಸ ದುಷ್ಟಾತ್ಮಾ ಜಗಾಮೈವ ಯಥಾಗತಮ್ ॥೪೫॥

ಈ ಮಾತನ್ನು ಕೇಳಿ ಎಲ್ಲಾ ಇಲಿಗಳೂ ಓಡಿಹೋದವು. ದುಷ್ಟವಾದ ಆ ಬೆಕ್ಕೂ ಸಹ ತಾನು ಬಂದಂತೆಯೇ ಹೊರಟು ಹೋಯಿತು.

ತಥಾ ತ್ವಮಪಿ ದುಷ್ಪಾತ್ಮನ್ ಬೈಡಾಲವ್ರತಮಾಸ್ಥಿತಃ ।
ಚರಸಿ ಜ್ಞಾತಿಷು ಸದಾ ಬಿಡಾಲೋ ಮೂಷಿಕೇಷ್ವಿವ ॥೪೬॥

ಎಲೈ ದುಷ್ಪಾತ್ಮನೇ, ನೀನೂ ಸಹ ಹಾಗೆಯೇ ಬೈಡಾಲವ್ರತವನ್ನು ಧರಿಸಿದ್ದೀಯೆ. ಬಂಧುಗಳ ವಿಷಯದಲ್ಲಿ ಆ ಬೆಕ್ಕು ಇಲಿಗಳ ವಿಷಯದಲ್ಲಿ ನಡೆದುಕೊಂಡಂತೆ ನಡೆದುಕೊಳ್ಳುತ್ತಿದ್ದೀಯೆ.

ಅನ್ಯಥಾ ಕಿಲ ತೇ ವಾಕ್ಯಮನ್ಯಥಾ ಕರ್ಮ ದೃಶ್ಯತೇ ।
ಡಂಭನಾರ್ಥಾಯ ಲೋಕಸ್ಯ ವೇದಾಶ್ಚೋಪಶಮಶ್ಚ ತೇ ॥೪೭॥

ನಿನ್ನ ಮಾತು ಒಂದು ರೀತಿಯಲ್ಲಿ, ನಿನ್ನ ಕರ್ಮವು ಬೇರೆ ರೀತಿಯದಾಗಿ ಕಾಣುತ್ತಿದೆ. ಜನರಿಗೆ ಮೋಸವನ್ನು ಮಾಡಲು ನೀನು ವೇದಾಧ್ಯಯನವನ್ನು ಮತ್ತು ಉಪಶಮವನ್ನು ಮಾಡುತ್ತಿದ್ದೀಯೆ.

ತ್ಯಕ್ತ್ವಾ ಚ್ಛದ್ಮ ತ್ವಿದಂ ರಾಜನ್ ಕ್ಷತ್ರಧರ್ಮಂ ಸಮಾಸ್ಥಿತಃ ।
ಕುರು ಕಾರ್ಯಾಣಿ ಸರ್ವಾಣಿ ಧರ್ಮಿಷ್ಠೋಽಸಿ ನರರ್ಷಭ ॥೪೮॥

ಎಲೈ ರಾಜನೇ, ನರರ್ಷಭನೇ, ಈ ಮೋಸವನ್ನು ಬಿಟ್ಟು, ಕ್ಷತ್ರಿಯಧರ್ಮವನ್ನು ಆಶ್ರಯಿಸಿ ಎಲ್ಲಾ ಕಾರ್ಯಗಳನ್ನೂ ಮಾಡು. ನೀನು ಧರ್ಮಿಷ್ಠನಾಗಿದ್ದೀಯಷ್ಟೆ?

ಬಾಹುವೀರ್ಯೇಣ ಪೃಥಿವೀಂ ಲಬ್ಧ್ವಾ ಭರತಸತ್ತಮ ।
ದೇಹಿ ದಾನಂ ದ್ವಿಜಾತಿಭ್ಯಃ ಪಿತೃಭ್ಯಶ್ಚ ಯಥೋಚಿತಮ್ ॥೪೯॥

ಎಲೈ ಭರತಶ್ರೇಷ್ಠನೇ, ನಿನ್ನ ಬಾಹುವೀರ್ಯದಿಂದ ಭೂಮಿಯನ್ನು ಗೆದ್ದು ಅದನ್ನು ಬ್ರಾಹ್ಮಣರಿಗೂ ಮತ್ತು ಪಿತೃಗಳಿಗೂ ಯಥೋಚಿತವಾಗಿ ದಾನವನ್ನು ಮಾಡು.

ಕ್ಲಿಷ್ಟಾಯಾ ವರ್ಷಪೂಗಾಂಶ್ಚ ಮಾತುರ್ಮಾತೃಹಿತೇ ಸ್ಥಿತಃ ।
ಪ್ರಮೃಜ್ಯಾಶ್ರು ರಣೇ ಜಿತ್ವಾ ಸಮ್ಮಾನಂ ಪರಮಾವಹ ॥೫೦॥

ತಾಯಿಯ ಹಿತದಲ್ಲಿ ರತನಾದ ನೀನು, ಅನೇಕ ವರ್ಷಗಳ ಕಾಲ ಕ್ಲೇಶಗಳನ್ನು ಅನುಭವಿಸಿದ ಅವಳ ಕಣ್ಣೀರನ್ನು ಒರೆಸಿ, ಅವಳಿಗೆ ಸುಖವನ್ನು ಉಂಟುಮಾಡುವವನಾಗು.

ಪಂಚಗ್ರಾಮಾ ವೃತಾ ಯತ್ತಾನ್ನಾಸ್ಮಾಭಿರಪವರ್ಜಿತಾಃ ।
ಯುಧ್ಯಾಮಹೇ ಕಥಂ ಸಂಖೇ ಕೋಪಯೇಮ ಚ ಪಾಂಡವಾನ್॥೫೧॥

ನೀನು ಐದು ಗ್ರಾಮಗಳನ್ನು ಕೇಳಿದಿ. ನಾವು ಪ್ರಯತ್ನ ಪೂರ್ವಕವಾಗಿ ಅದನ್ನು ಕೊಡಲಿಲ್ಲ. ನಾವು ಪಾಂಡವರನ್ನು ಕೋಪಗೊಳಿಸಿ ಅವರ ಜೊತೆಯಲ್ಲಿ ಯುದ್ಧವನ್ನು ಮಾಡುವೆವು ಎಂದು ನಮ್ಮ ಅಭಿಪ್ರಾಯ.

ತತ್ಪತೇ ದುಷ್ಟಭಾವಸ್ಯ ಸಂತ್ಯಾಗೋ ವಿದುರಸ್ಯ ಚ ।
ಜಾತುಷೇ ಚ ಗೃಹೇ ದಾಹಂ ಸ್ಮರ ತಂ ಪುರುಷೋ ಭವ ॥೫೨॥

ನಿನ್ನ ಸಲುವಾಗಿ ದುಷ್ಟ ಅಭಿಪ್ರಾಯವನ್ನು ಹೊಂದಿದ್ದ ವಿದುರನನ್ನು ತ್ಯಾಗ ಮಾಡಿದೆವು. ಅರಗಿನ ದಾಹವನ್ನು ಸ್ಮರಿಸು, ಪುರುಷನಾಗು.

ಯಚ್ಚ ಕೃಷ್ಣಮವೋಚಸ್ತ್ವಮಾಯಾಂತಂ ಕುರುಸಂಸದಿ ।
ಅಯಮಸ್ಮಿ ಸ್ಥಿತೋ ರಾಜನ್ ಶಮಾಯ ಸಮರಾಯ ಚ ॥೫೩॥

ತಸ್ಯಾಯಮಾಗತಃ ಕಾಲಃ ಸಮರಸ್ಯ ನರಾಧಿಪ ॥೫೪॥

ಕೌರವ ಸಭೆಗೆ ಬರುವ ಕೃಷ್ಣನನ್ನು ಕುರಿತು ನೀನು, ನಾನು ಸಂಧಿಗೂ ಮತ್ತು ಯುದ್ಧಕ್ಕೂ ಸಿದ್ಧನಾಗಿದ್ದೇನೆಂದು ಹೇಳಿದೆಯಷ್ಟೆ? ಎಲೈ ರಾಜನೇ, ಆ ಯುದ್ಧದ ಕಾಲವು ಈಗ ಪ್ರಾಪ್ತವಾಗಿದೆ.

ಏತದರ್ಥಂ ಮಯಾ ಸಾರ್ಧಂ ಕೃತಮೇತದ್ ಯುಧಿಷ್ಠಿರ ।
ಕಿಂ ನು ಯುದ್ಧಾತ್ ಪರಂ ಲಾಭಂ ಕ್ಷತ್ರಿಯೋ ಬಹು ಮನ್ಯತೇ ॥೫೫॥

ಎಲೈ ಯುಧಿಷ್ಠಿರನೇ, ಇದಕ್ಕಾಗಿ ನಾನು ತಮ್ಮಂದಿರ ಜೊತೆಯಲ್ಲಿ ಈ ಕಾರ್ಯವನ್ನು ಮಾಡಿದೆ. ಯುದ್ಧಕ್ಕಿಂತ ಕ್ಷತ್ರಿಯನು ಗೌರವಿಸುವ ದೊಡ್ಡ ಲಾಭವು ಯಾವುದು?

ಕಿಂಚ ತ್ವಂ ಕ್ಷತ್ರಿಯಕುಲೇ ಜಾತಃ ಸಂಪ್ರಥಿತೋ ಭುವಿ ।
ದ್ರೋಣಾದಸ್ತ್ರಾಣಿ ಸಂಪ್ರಾಪ್ಯ ಕೃಪಾಚ್ಚ ಭರತರ್ಷಭ ॥೫೬॥

ತುಲ್ಯಯೋನೌ ಸಮಬಲೇ ವಾಸುದೇವಂ ಸಮಾಶ್ರಿತಃ ॥೫೭॥

ಮತ್ತು ನೀನು ಕ್ಷತ್ರಿಯ ಕುಲದಲ್ಲಿ ಜನಿಸಿ ಭೂಮಿಯಲ್ಲಿ ಪ್ರಖ್ಯಾತನಾಗಿದ್ದೀಯೆ. ಎಲೈ ಪುರುಷರ್ಷಭನೇ, ದ್ರೋಣರಿಂದಲೂ ಮತ್ತು ಕೃಪರಿಂದಲೂ ಅಸ್ತ್ರಗಳನ್ನು ಸಂಪಾದಿಸಿದ್ದೀಯೆ. ಆದರೆ ಸಮಾನ ಯೋನಿಯನ್ನು ಹೊಂದಿದ, ಸಮಾನವಾದ ಬಲವನ್ನು ಹೊಂದಿದ ಕೃಷ್ಣನನ್ನು ಆಶ್ರಯಿಸಿದ್ದೀಯೆ.

ಬ್ರೂಯಾಸ್ತ್ವಂ ವಾಸುದೇವಂ ಚ ಪಾಂಡವಾನಾಂ ಸಮೀಪತಃ ।
ಆತ್ಮಾರ್ಥೇ ಪಾಂಡವಾರ್ಥಂ ಚ ಯತ್ತೋ ಮಾಂ ಪ್ರತಿಯೋಧಯ ॥

ಎಲೈ ಉಲೂಕನೇ, ನೀನು ಪಾಂಡವರ ಸಮೀಪದಲ್ಲಿರುವ ಕೃಷ್ಣನನ್ನು ಕುರಿತು, ನಿನ್ನ ಸಲುವಾಗಿ ಮತ್ತು ಪಾಂಡವರ ಸಲುವಾಗಿ ಎಚ್ಚರಿಕೆಯಿಂದ ನನ್ನ ಜೊತೆಯಲ್ಲಿ ಯುದ್ಧಮಾಡು ಎಂದು ಹೇಳುವವನಾಗು.

ಸಭಾಮಧ್ಯೇ ಚ ಯದ್ರೂಪಂ ಮಾಯಯಾ ಕೃತವಾನಸಿ ।
ತತ್ ತಥೈವ ಪುನಃ ಕೃತ್ವಾ ಸಾರ್ಜುನೋ ಮಾಮಭಿದ್ರವ ॥೫೯॥

ಸಭೆಯ ಮಧ್ಯದಲ್ಲಿ ಕಪಟದಿಂದ ಯಾವ ರೂಪವನ್ನು ತೋರಿಸಿದೆಯೋ ಅದೇ ರೂಪವನ್ನು ಧರಿಸಿ, ಅರ್ಜುನನ ಜೊತೆಯಲ್ಲಿ ನನ್ನ ಮೇಲೆ ಯುದ್ಧಕ್ಕೆ ಬರುವವನಾಗು.

ಇಂದ್ರಜಾಲಂ ನ ಮಾಯಾ ವೈ ಕುಹಕಾ ವಾ ವಿಭೀಷಣಾ ।
ಆತ್ತಶಸ್ತ್ರಸ್ಯ ಸಂಗ್ರಾಮೇ ವಹಂತಿ ಪ್ರತಿಗರ್ಜನಾಃ ॥೬೦॥

ಇಂದ್ರಜಾಲವಾಗಲೀ, ಮಾಯೆಯಾಗಲೀ, ಕಪಟಗಳಾಗಲೀ, ಬೆದರಿಕೆಯ ಮಾತುಗಳಾಗಲೀ, ಶಸ್ತ್ರವನ್ನು ಧರಿಸಿದ ಶತ್ರುವಿನ ಗರ್ಜನೆಗೆ ಪ್ರತಿಗರ್ಜನೆಯನ್ನು ಮಾಡಲಾರವು.

ವಯಮಪ್ಯುತ್ಸಹೇಮ ದ್ಯಾಂ ಖಂ ಚ ಗಚ್ಛೇಮ ಮಾಯಯಾ ।
ರಸಾತಳಂ ವಿಶಾಮೋಽಪಿ ಐಂದ್ರಂ ವಾ ಪುರಮೇವ ತು ॥೬೧॥

ದರ್ಶಯೇಮ ಚ ರೂಪಾಣಿ ಸ್ವಶರೀರೇ ಬಹೂನ್ಯಪಿ ।
ನ ತು ಪರ್ಯಾಯತಃ ಸಿದ್ಧಿರ್ಬುದ್ಧಿಮಾಪ್ನೋತಿ ಮಾನುಷೀಮ್ ॥೬೨॥

ನಾವೂ ಉತ್ಸಾಹಶಾಲಿಗಳೇ ಆಗಿದ್ದೇವೆ. ಮಾಯೆಯಿಂದ ಆಕಾಶಕ್ಕೂ ಮತ್ತು ಸ್ವರ್ಗಕ್ಕೂ ಹೋಗುತ್ತೇವೆ. ರಸಾತಳಲೋಕಕ್ಕಾಗಲೀ, ಇಂದ್ರನ ಪಟ್ಟಣಕ್ಕಾಗಲೀ ನಾವೂ ಹೋದೇವು. ನಾವೂ ನಿನ್ನಂತೆ ನಮ್ಮ ಶರೀರದಲ್ಲಿ ಅನೇಕ ರೂಪಗಳನ್ನು ತೋರಿಸಲು ಸಮರ್ಥರಾಗಿದ್ದೇವೆ. ಬೇರೆ ಬೇರೆ ರೂಪಗಳನ್ನು ತೋರಿಸುವ ಮಾತ್ರದಿಂದ ಶತ್ರುವು ಮನುಷ್ಯಸಹಜವಾದ ಭಯವನ್ನು ಹೊಂದುವುದಿಲ್ಲ.

ಮನಸೈವ ಹಿ ಭೂತಾನಿ ಧಾತೈವ ಕುರುತೇ ವಶೇ ॥೬೩॥

ಬ್ರಹ್ಮದೇವರು ಎಲ್ಲಾ ಜೀವರನ್ನು ತಮ್ಮ ಮನಸ್ಸಿನಿಂದಲೇ ವಶಪಡಿಸಿಕೊಳ್ಳುತ್ತಾರೆ.

ಯದರ್ಥಂ ಕ್ಷತ್ರಿಯಾ ಸೂತೇ ಸರ್ವಂ ತದಿದಮಾಗತಮ್ ॥೬೪॥

ಬಲಂ ವೀರ್ಯಂ ಚ ಶೌರ್ಯಂ ಚ ಪರಂ ಚಾಪ್ಯಸ್ತ್ರಲಾಘವಮ್ ।
ಪೌರುಷಂ ದರ್ಶಯನ್ ಯುದ್ಧೇ ಕೋಪಸ್ಯ ಕುರು ನಿಷ್ಕೃತಿಮ್ ॥೬೫॥

ಒಬ್ಬ ಕ್ಷತ್ರಿಯ ವನಿತೆಯು ಯಾವುದಕ್ಕಾಗಿ ಪುತ್ರನನ್ನು ಪಡೆಯುತ್ತಾಳೆಯೋ ಅದರ ಪ್ರಯೋಜನದ ಕಾಲವು ಈಗ ಒದಗಿದೆ. ನೀನು ಯುದ್ಧದಲ್ಲಿ ನಿನ್ನ ಬಲವನ್ನೂ, ವೀರ್ಯವನ್ನೂ, ಪರಾಕ್ರಮವನ್ನೂ, ಶ್ರೇಷ್ಠವಾದ ಅಸ್ತ್ರಲಾಘವವನ್ನೂ, ಪೌರುಷವನ್ನೂ ತೋರಿಸುವವನಾಗಿ ನಿನಗೆ ಉಂಟಾದ ಕೋಪಕ್ಕೆ ಪ್ರತೀಕಾರವನ್ನು ಮಾಡು.

ಯದ್ ಬ್ರವೀಷಿ ಚ ವಾರ್ಷ್ಣೇಯ ಧಾರ್ತರಾಷ್ಟ್ರಾನಹಂ ರಣೇ ।
ಘಾತಯಿತ್ವಾ ಪ್ರದಾಸ್ಯಾಮಿ ಪಾರ್ಥೇಭ್ಯೋ ರಾಜ್ಯಮುತ್ತಮಮ್ ॥೬೬॥

ಆಚಚಕ್ಷೇ ಚ ಮೇ ಸರ್ವಂ ಸಂಜಯಸ್ತವ ಭಾಷಿತಮ್ ।
ಮದ್ದ್ವಿತೀಯೇನ ಪಾರ್ಥೇನ ಕೌರವ್ಯೋ ದ್ವೇಷ್ಯತೇ ಧ್ರುವಮ್ ॥೬೭॥

ಸ ಸತ್ಯಸಂಗರೋ ಭೂತ್ವಾ ಪಾಂಡವಾರ್ಥೇ ಪರಾಕ್ರಮೀ ।
ಯುಧ್ಯಸ್ವಾದ್ಯ ರಣೇ ಯತ್ತಃ ಪಶ್ಯಾಮಃ ಪುರುಷೋ ಭವ ॥೬೮॥

ಎಲೈ ಕೃಷ್ಣನೇ, ದುರ್ಯೋಧನಾದಿಗಳನ್ನು ನಾನು ಯುದ್ಧದಲ್ಲಿ ಕೊಂದು ಪಾಂಡವರಿಗೆ ಶ್ರೇಷ್ಠವಾದ ರಾಜ್ಯವನ್ನು ಕೊಡುವೆನು ಎಂದು ಏನು ಹೇಳುತ್ತೀಯೋ– ನನ್ನ ಸಹಾಯವುಳ್ಳ ಅರ್ಜುನನು ದುರ್ಯೋಧನನು ದ್ವೇಷಿಸಲ್ಪಡುತ್ತಾನೆ ಎಂಬ ಈ ನಿನ್ನ ಮಾತುಗಳನ್ನೆಲ್ಲಾ ಸಂಜಯನು ನನಗೆ ಹೇಳಿದ್ದಾನೆ– ಅಂತಹ ನೀನು ಸತ್ಯವಚನನಾಗಿ ಪಾಂಡವರ ಸಲುವಾಗಿ ನಿನ್ನ ಪರಾಕ್ರಮವನ್ನು ತೋರಿಸಿ ಈ ದಿನ ಜಾಗರೂಕನಾಗಿ ಯುದ್ಧವನ್ನು ಮಾಡು, ನೋಡೋಣ. ನೀನು ಪುರುಷನಾಗು.

ಯಸ್ತು ಶತ್ರುಮಭಿಜ್ಞಾಯ ಶುದ್ಧಂ ಪೌರುಷಮಾಶ್ರಿತಃ ।
ಕರೋತಿ ದ್ವಿಷತಾಂ ಶೋಕಂ ಸ ಜೀವತಿ ಸುಜೀವಿತಮ್ ॥೬೯॥

ಯಾವನು ಶತ್ರುವನ್ನು ಗಮನಿಸಿ, ಯುದ್ಧಪೌರುಷವನ್ನು ಹೊಂದಿದವನಾಗಿ ಶತ್ರುಗಳಿಗೆ ಶೋಕವನ್ನು ಉಂಟುಮಾಡುತ್ತಾನೆಯೋ ಅವನು ಒಳ್ಳೆಯ ರೀತಿಯಲ್ಲಿ ಜೀವಿಸುತ್ತಾನೆ.

ಅಕಸ್ಮಾಚ್ಚೈವ ತೇ ಕೃಷ್ಣ ಖ್ಯಾತಂ ಲೋಕೇ ಮಹದ್ ಯಶಃ ।
ಅದ್ಯೇದಾನೀಂ ವಿಜಾನೀಮಃ ಸಂತಿ ಷಂಡಾಃ ಸಶೃಂಗಕಾಃ ॥೭೦॥

ಎಲೈ ಕೃಷ್ಣನೇ, ನಿಷ್ಕಾರಣವಾಗಿ ನಿನಗೆ ಲೋಕದಲ್ಲಿ ಕೀರ್ತಿ ಉಂಟಾಗಿದೆ. ಈ ದಿನ ನಾವು ನಪುಂಸಕರಿಗೂ ಕೊಂಬುಗಳಿರುತ್ತವೆ ಎಂದು ಈಗ ತಿಳಿಯುತ್ತೇವೆ.

ಮದ್ವಿಧೋ ನಾಪಿ ನೃಪತಿಃ ತ್ವಯಿ ಯುಕ್ತಃ ಕಥಂಚನ ।
ಸನ್ನಾಹಂ ಸಂಯುಗೇ ಕರ್ತುಂ ಕಂಸಭೃತ್ಯೇ ವಿಶೇಷತಃ ॥೭೧॥

ನನ್ನಂತಹ ಯಾವ ರಾಜನೂ ಕಂಸಭೃತ್ಯನಾದ ನಿನ್ನ ಜೊತೆಯಲ್ಲಿ ವಿಶೇಷವಾಗಿ ಯುದ್ಧಸನ್ನಾಹವನ್ನು ಮಾಡಲು ಇದುವರೆಗೆ ಪ್ರಯತ್ನಿಸಲಿಲ್ಲ.

ತ್ವಂ ಚ ತೂಬರಕಂ ಬಾಲಂ ಬಹ್ವಾಶಿನಮವಿದ್ಯಕಮ್ ।
ಉಲೂಕ ಮದ್ವಚೋ ಬ್ರೂಹಿ ಅಸಕೃದ್ ಭೀಮಸೇನಕಮ್ ॥೭೨॥

ಎಲೈ ಉಲೂಕನೇ, ಹೋತದಂತೆ ಗಡ್ಡವನ್ನು ಹೊಂದಿದ, ಬುದ್ಧಿ ಇಲ್ಲದ, ಬಹುಭೋಜಿಯಾದ, ಅವಿದ್ಯಾಮಯನಾದ ಆ ಕೆಟ್ಟ ಭೀಮಸೇನನಿಗೆ ನಾನು ಹೇಳಿದೆನೆಂದು ಅನೇಕ ಬಾರಿ ಹೇಳುವವನಾಗು.

ವಿರಾಟನಗರೇ ಪಾರ್ಥ ತ್ವಂ ಸೂದೋ ಹ್ಯಭವಃ ಪುರಾ ।
ವಲಲೋ ನಾಮ ವಿಖ್ಯಾತಃ ತನ್ಮಮೈವ ಹಿ ಪೌರುಷಮ್ ॥೭೩॥

ಎಲೈ ಕುಂತೀಪುತ್ರನೇ, ನೀನು ವಿರಾಟನಗರದಲ್ಲಿ ವಲಲನೆಂಬ ಹೆಸರಿನಿಂದ ಖ್ಯಾತನಾಗಿ ಹಿಂದೆ ಪಾಚಕನಾಗಿದ್ದೆ. ಅದು ನನ್ನದೇ ಪರಾಕ್ರಮ.

ಪ್ರತಿಜ್ಞಾತಂ ಸಭಾಮಧ್ಯೇ ನ ತನ್ಮಿಥ್ಯಾ ತ್ವಯಾ ಪುರಾ ॥೭೪॥

ಅಶಕ್ತೇನೈವ ಯಚ್ಚೋಕ್ತಂ ಸಭಾಮಧ್ಯೇ ವೃಕೋದರ ॥೭೫॥

ದುಃಶಾಸನಸ್ಯ ರುಧಿರಂ ಪೀಯತಾಂ ಯದಿ ಶಕ್ಯತೇ ॥೭೬॥

ಯದರ್ಥಂ ಕ್ಷತ್ರಿಯಾ ಸೂತೇ ಸರ್ವಂ ತದಿದಮಾಗತಮ್ ॥೭೭॥

ನೀನು ಸಭೆಯ ಮಧ್ಯದಲ್ಲಿ ಹಿಂದೆ ಏನು ಪ್ರತಿಜ್ಞೆ ಮಾಡಿದೆಯೋ ಅದು ಸುಳ್ಳಲ್ಲವೇ? ವೃಕೋದರನೇ, ಅಶಕ್ತನಾದ ನೀನು ಸಭೆಯ ಮಧ್ಯದಲ್ಲಿ ದುಶ್ಶಾಸನನ ರಕ್ತವನ್ನು ಪಾನಮಾಡುವೆನೆಂದು ಹೇಳಿದೆಯಷ್ಟೆ? ನಿನಗೆ ಸಾಮರ್ಥ್ಯವಿದ್ದರೆ ಪಾನವನ್ನು ಮಾಡು. ಕ್ಷತ್ರಿಯ ವನಿತೆಯು ಯಾವ ಪ್ರಯೋಜನಕ್ಕಾಗಿ ಪುತ್ರನನ್ನು ಪಡೆಯುತ್ತಾಳೋ ಆ ಪ್ರಯೋಜನದ ಕಾಲವು ಈಗ ಬಂದೊದಗಿದೆ.

ಬಲಂ ವೀರ್ಯಂ ಚ ಶೌರ್ಯಂ ಚ ಪರಂ ಚಾಪ್ಯಸ್ತ್ರಲಾಘವಮ್ ।
ಪೌರುಷಂ ದರ್ಶಯನ್ ಯುದ್ಧೇ ಕೋಪಸ್ಯ ಕುರು ನಿಷ್ಕೃತಿಮ್ ॥೭೮॥

ನಿನ್ನ ಬಲವನ್ನೂ, ವೀರ್ಯವನ್ನೂ, ಪರಾಕ್ರಮವನ್ನೂ, ಶ್ರೇಷ್ಠವಾದ ಅಸ್ತ್ರಲಾಘವವನ್ನೂ ಮತ್ತು ಪೌರುಷವನ್ನೂ ಯುದ್ಧದಲ್ಲಿ ತೋರಿಸುವವನಾಗಿ ಉಂಟಾದ ಕೋಪಕ್ಕೆ ಪ್ರತೀಕಾರವನ್ನು ಮಾಡು.

ಯದ್ ಬ್ರವೀಷಿ ಚ ಕೌಂತೇಯ ಧಾರ್ತರಾಷ್ಟ್ರಾನಹಂ ರಣೇ ।
ನಿಹನಿಷ್ಯಾಮಿ ತರಸಾ ತಸ್ಯ ಕಾಲೋಽಯಮಾಗತಃ ॥೭೯॥

ಎಲೈ ಕೌಂತೇಯನೇ, ಧೃತರಾಷ್ಟ್ರಪುತ್ರರನ್ನು ಯುದ್ಧದಲ್ಲಿ ನಾನು ನನ್ನ ಸಾಮರ್ಥ್ಯದಿಂದ ಕೊಲ್ಲುವೆನು ಎಂದು ನೀನು ಏನು ಹೇಳುತ್ತೀಯೋ ಅದರ ಪರೀಕ್ಷೆಯ ಕಾಲವು ಈಗ ಬಂದೊದಗಿದೆ.

ತ್ವಂ ಹಿ ಭೋಜ್ಯೇ ಪುರಸ್ಕಾರ್ಯೋ ಭಕ್ಷ್ಯೇ ಪೇಯೇ ಚ ಭಾರತ ।
ಕ್ವ ಯುದ್ಧಂ ಕ್ವ ಚ ಭೋಕ್ತವ್ಯಂ ಯುಧ್ಯಸ್ವ ಪುರುಷೋ ಭವ ॥೮೦॥

ಎಲೈ ಭಾರತನೇ, ನೀನು ಭಕ್ಷ್ಯ-ಭೋಜ್ಯ, ಪಾನಗಳಲ್ಲಿ ಮುಂದೆ ಇರುವವನು. ಯುದ್ಧವೆಲ್ಲಿ, ನಿನ್ನ ಭಕ್ಷ್ಯಾದಿಗಳೆಲ್ಲಿ? ಯುದ್ಧವನ್ನು ಮಾಡಿ ಪುರುಷನಾಗು.

ಶಯಿಷ್ಯಸೇ ಹತೋ ಭೂಮೌ ಗದಾಮಾಲಿಂಗ್ಯ ಭಾರತ ।
ತತ್ ತಥಾ ಚ ಸಭಾಮಧ್ಯೇ ವಲ್ಗಿತಂ ತೇ ವೃಕೋದರ ॥೮೧॥

ಎಲೈ ಭಾರತನೇ, ನೀನು ನಿನ್ನ ಗದೆಯನ್ನು ಆಲಿಂಗಿಸಿ ಭೂಮಿಯ ಮೇಲೆ ಹತನಾಗಿ ಮಲಗುವಿ. ಎಲೈ ವೃಕೋದರನೇ, ಸಭಾಮಧ್ಯದಲ್ಲಿ ಅಂತಹ ಜಂಭದ ಮಾತುಗಳನ್ನು ಆಡಿದೆ.

ಉಲೂಕ ನಕುಲಂ ಬ್ರೂಹಿ ವಚನಾನ್ಮಮ ಭಾರತಮ್ ।
ಯುಧ್ಯಸ್ವಾದ್ಯ ಸ್ಥಿರೋ ಭೂತ್ವಾ ಪಶ್ಯಾಮಸ್ತವ ಪೌರುಷಮ್ ॥೮೨॥

ಎಲೈ ಉಲೂಕನೇ, ನನ್ನ ಮಾತಿನಂತೆ ಭಾರತನಾದ ನಕುಲನನ್ನು ಕುರಿತು, ಈ ದಿನ ಸ್ಥಿರವಾಗಿ ಯುದ್ಧವನ್ನು ಮಾಡು, ನಿನ್ನ ಪೌರುಷವನ್ನು ನೋಡೋಣ ಎಂದು ಹೇಳು.

ಯುಧಿಷ್ಠಿರಾನುರಾಗಂ ಚ ದ್ವೇಷಂ ಚ ಮಯಿ ಭಾರತ ।
ಕೃಷ್ಣಾಯಾಶ್ಚ ಪರಿಕ್ಲೇಶಂ ಸ್ಮರೇದಾನೀಂ ಯಥಾತಥಮ್ ॥೮೩॥

ಎಲೈ ಭಾರತನೇ, ಯುಧಿಷ್ಠಿರನಲ್ಲಿ ನಿನಗಿರುವ ಪ್ರೀತಿಯನ್ನು ಮತ್ತು ನನ್ನ ಮೇಲಿರುವ ದ್ವೇಷವನ್ನು ಮತ್ತು ದ್ರೌಪದಿಯ ಪರಿಕ್ಲೇಶವನ್ನು ಈ ದಿನ ಸರಿಯಾಗಿ ಸ್ಮರಣೆ ಮಾಡುವವನಾಗು.

ವಿರಾಟದ್ರುಪದೌ ಚೋಭೌ ಬ್ರೂಯಾಸ್ತ್ವಂ ವಚನಾನ್ಮಮ ॥೮೪॥

ವಿರಾಟ ಮತ್ತು ದ್ರುಪದ ಇಬ್ಬರನ್ನೂ ಕುರಿತು ನನ್ನ ಮಾತುಗಳನ್ನು ಹೇಳುವವನಾಗು.

ನ ದೃಷ್ಟಪೂರ್ವಾ ಭರ್ತಾರೋ ಭೃತ್ಯೈರಪಿ ಮಹಾಗುಣೈಃ ।
ತಥಾऽರ್ಥಪತಿಭಿರ್ಭರ್ತ್ಯಾ ಯತಃ ಸೃಷ್ಟಾಃ ಪ್ರಜಾಸ್ತತಃ ॥೮೫॥

ನಿಮ್ಮ ಮಹಾಗುಣಗಳನ್ನು ನಿಮ್ಮ ಭೃತ್ಯರೂ ಸಹ ಹಿಂದೆ ಎಂದೂ ನೋಡಲಿಲ್ಲ. ಹಾಗೆಯೇ ಸೃಷ್ಟಿಯಾದ ಕಾಲದಿಂದಲೂ ಅರ್ಥಪತಿಗಳಾದ ರಾಜರು ಅಂತಹ ಭೃತ್ಯರನ್ನು ನೋಡಲಿಲ್ಲ (ವಿರಾಟ-ದ್ರುಪದರಾದ ನೀವು ಧರ್ಮರಾಜನಿಗೆ ಭೃತ್ಯರಾಗಿದ್ದೀರಿ ಎಂದು ಉಪಹಾಸ).

ಅಶ್ಲಾಘ್ಯೋಽಯಂ ನರಪತಿಃ ಯುವಯೋರಿತಿ ಚಾಗತಮ್ ॥೮೬॥

ನಿಮ್ಮಿಬ್ಬರಿಂದ ಈ ನರಪತಿಯಾದ ಯುಧಿಷ್ಠಿರನು ಶ್ಲಾಘನೀಯನಲ್ಲವೆಂದು ಸಿದ್ಧವಾಯಿತು.

ತೇ ಯೂಯಂ ಸಹಿತಾ ಭೂತ್ವಾ ತದ್ ವಧಾರ್ಥಂ ಮಮಾಪಿ ಚ ।
ಆತ್ಮಾರ್ಥಂ ಪಾಂಡವಾರ್ಥಂ ಚ ಪ್ರಯುಧ್ಯಧ್ವಂ ಮಯಾ ಸಹ ॥೮೭॥

ಆದ್ದರಿಂದ ನೀವಿಬ್ಬರೂ ಸಹಿತರಾಗಿ ನಿಮ್ಮ ಸಲುವಾಗಿ ಮತ್ತು ಪಾಂಡವರ ಸಲುವಾಗಿ ನನ್ನ ವಧೆಯನ್ನು ಮಾಡಲು ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಿ.

ಧೃಷ್ಟದ್ಯುಮ್ನಂ ಚ ಪಾಂಚಾಲ್ಯಂ ಬ್ರೂಯಾಸ್ತ್ವಂ ವಚನಾನ್ಮಮ ।
ಏಷ ತೇ ಸಮಯೋ ಲಬ್ಧೋ ಲಬ್ಧವ್ಯಶ್ಚ ತ್ವಯಾಽಪಿ ಸಃ ॥೮೮॥

ಪಾಂಚಾಲದೇಶದ ಧೃಷ್ಟದ್ಯುಮ್ನನನ್ನು ಕುರಿತು ನನ್ನ ಮಾತಿನಂತೆ, ನಿನಗೆ ಒದಗಬೇಕಾಗಿದ್ದ ಸಮಯವು ಈಗ ಒದಗಿದೆ ಎಂದು ಹೇಳು.

ದ್ರೋಣಮಾಸಾದ್ಯ ಸಮರೇ ಜ್ಞಾಸ್ಯಸೇ ಹಿತಮುತ್ತಮಮ್ ।
ಯುಧ್ಯಸ್ವ ಸಸುಹೃದ್ವರ್ಗಃ ಕುರು ಕರ್ಮ ಸುದುಷ್ಕರಮ್ ॥೮೯॥

ಯುದ್ಧದಲ್ಲಿ ದ್ರೋಣರನ್ನು ಸಮೀಪಿಸಿ ನಿನಗೆ ಶ್ರೇಷ್ಠವಾದ ಹಿತವು ಯಾವುದು ಎಂದು ತಿಳಿಯುವಿ. ನಿನ್ನ ಹಿತೈಷಿಗಳೊಡನೆ ದುಷ್ಕರವಾದ ಯುದ್ಧಕರ್ಮವನ್ನು ಮಾಡುವವನಾಗು.

ಶಿಖಂಡಿನಮಥೋ ಬ್ರೂಹಿ ಉಲೂಕ ವಚನಾನ್ಮಮ ।
ಸ್ತ್ರೀತಿ ಮತ್ವಾ ಮಹಾಬಾಹುರ್ನ ಹನಿಷ್ಯತಿ ಕೌರವಃ ॥೯೦॥

ಎಲೈ ಉಲೂಕನೇ, ನನ್ನ ಮಾತಿನಂತೆ ಆ ಶಿಖಂಡಿಯನ್ನು ಕುರಿತು ನೀನು ಸ್ತ್ರೀ ಎಂದು ತಿಳಿದು ಮಹಾಬಾಹುವಾದ ದುರ್ಯೋಧನನು ನಿನ್ನನ್ನು ಕೊಲ್ಲುವುದಿಲ್ಲ ಎಂದು ಹೇಳು.

ಗಾಂಗೇಯಂ ಯುದ್ಧ್ಯತಾಂ ಶ್ರೇಷ್ಠಂ ಯುಧ್ಯಸ್ವೇಹ ಸುನಿರ್ಭಯಃ ।
ಕುರು ಕರ್ಮ ರಣೇ ಯತ್ತಃ ಪಶ್ಯಾಮಃ ಪೌರುಷಂ ತವ ॥೯೧॥

ಯುದ್ಧವನ್ನು ಮಾಡುವವರಲ್ಲಿ ಶ್ರೇಷ್ಠರಾದ ಭೀಷ್ಮರ ಜೊತೆಯಲ್ಲಿ ಈಗ ನಿರ್ಭಯವಾಗಿ ಯುದ್ಧವನ್ನು ಮಾಡುವವನಾಗು. ಯುದ್ಧದಲ್ಲಿ ಅವಧಾನದಿಂದ ನೀನು ನಿನ್ನ ಕರ್ಮವನ್ನು ಮಾಡುವವನಾಗು. ನಿನ್ನ ಪೌರುಷವನ್ನು ನೋಡುತ್ತೇವೆ (ಎಂದು ಹೇಳು).

ವೈಶಂಪಾಯನಃ

ಏವಮುಕ್ತ್ವಾ ತತೋ ರಾಜಾ ಪ್ರಹಸ್ಯೋಲೂಕಮಬ್ರವೀತ್ ॥೯೨॥

ಧನಂಜಯಂ ಪುನರ್ಬ್ರೂಹಿ ವಾಸುದೇವಸ್ಯ ಶೃಣ್ವತಃ ॥೯೩॥

ಅಸ್ಮಾನ್ ವಾऽಪಿ ಪರಾಜಿತ್ಯ ಪ್ರಶಾಧಿ ಪೃಥಿವೀಮಿಮಾಮ್ ।
ಅಥವಾ ನಿರ್ಜಿತೋऽಸ್ಮಾಭೀ ರಣೇ ವೀರ ಶಯಿಷ್ಯಸಿ ॥೯೪॥

ವೈಶಂಪಾಯನ– ಹೀಗೆ ಹೇಳಿ ರಾಜನಾದ ದುರ್ಯೋಧನನು ನಕ್ಕು ಉಲೂಕನನ್ನು ಕುರಿತು ಹೇಳಿದನು– ಕೃಷ್ಣನು ಕೇಳುವಂತೆ ಅರ್ಜುನನಿಗೆ ಪುನಃ ಹೇಳು. ನಮ್ಮನ್ನಾದರೂ ಸೋಲಿಸಿ ಈ ಭೂಮಿಯನ್ನು ಆಳು ಅಥವಾ ನಮಗೆ ಸೋತು ಯುದ್ಧಭೂಮಿಯಲ್ಲಿ ಮೃತನಾಗಿ ಮಲಗುವವನಾಗು (ಎಂದು ಹೇಳು).

ಅಮರ್ಷಂ ರಾಜ್ಯಹರಣಂ ವನವಾಸಂ ಚ ಪಾಂಡವ ।
ಕೃಷ್ಣಾಯಾಶ್ಚ ಪರಿಕ್ಲೇಶಂ ಸಂಸ್ಮರನ್ ಪುರುಷೋ ಭವ ॥೯೫॥

ಎಲೈ ಪಾಂಡವನೇ, ನಿನ್ನ ಕೋಪ, ನಮ್ಮಿಂದ ನಿನ್ನ ರಾಜ್ಯಹರಣ, ವನವಾಸ, ದ್ರೌಪದಿಯ ಕ್ಲೇಶ ಎಲ್ಲವನ್ನೂ ಸ್ಮರಿಸಿ ಈ ದಿನ ಗಂಡಸಾಗು.

ಪರಿಕ್ಲಿಷ್ಟಸ್ಯ ದೀನಸ್ಯ ದೀರ್ಘಕಾಲೋಷಿತಸ್ಯ ಚ ।
ಹೃದಯಂ ನ ಸ್ಫುಟೇತ್ ಕಸ್ಯ ಐಶ್ವರ್ಯಾದ್ ಭ್ರಂಶಿತಸ್ಯ ಚ ॥೯೬॥

ಪರಿಕ್ಲಿಷ್ಟನೂ, ದೀನನೂ, ಬಹುಕಾಲದವರೆಗೆ ವನವಾಸವನ್ನು ಅನುಭವಿಸಿದವನೂ, ಐಶ್ವರ್ಯಭ್ರಷ್ಟನೂ ಆದ ಯಾವನ ಹೃದಯವು ಬಿರಿದುಹೋಗುವುದಿಲ್ಲ!

ಕುಲೇ ಜಾತಸ್ಯ ಶೂರಸ್ಯ ಪರವಿತ್ತೇಷು ಗೃಧ್ಯತಃ ।
ಅಚ್ಛಿನ್ನಂ ರಾಜ್ಯಮಾಕ್ರಮ್ಯ ಕೋಪಂ ಕಸ್ಯ ನ ದೀಪಯೇತ್ ॥೯೭॥

ಒಳ್ಳೆಯ ಕುಲದಲ್ಲಿ ಜನ್ಮವನ್ನು ಹೊಂದಿ, ಅಖಂಡವಾದ ರಾಜ್ಯವನ್ನು ಆಕ್ರಮಿಸಿ, ಇನ್ನೊಬ್ಬರ ದ್ರವ್ಯವನ್ನು ಆಶಿಸುವ ಯಾವನಿಗೆ ಕೋಪವು ಉಂಟಾಗುವುದಿಲ್ಲ?

ಯತ್ತದುಕ್ತಂ ಮಹದಾಕ್ಯಂ ಕರ್ಮಣಾ ತದ್ ವಿಧೀಯತಾಮ್ ।
ಅಕರ್ಮಣಾ ಕತ್ಥಿತೇನ ಸಂತಃ ಕುಪುರುಷಂ ವಿದುಃ ॥೯೮॥

ನೀನು ಯಾವ ದೊಡ್ಡ ಮಾತನ್ನಾಡಿದೆಯೋ ಅದನ್ನು ಕಾರ್ಯರೂಪಕ್ಕೆ ತಂದು ತೋರಿಸು. ಕಾರ್ಯವನ್ನು ಮಾಡದೆ ತನ್ನನ್ನು ತಾನು ಹೊಗಳಿಕೊಳ್ಳುವವನನ್ನು ಸಜ್ಜನರು ಕೆಟ್ಟ ಮನುಷ್ಯನೆಂದು ಹೇಳುತ್ತಾರೆ.

ಅಮಿತ್ರಾಣಾಂ ವಶೇ ಸ್ಥಾನಂ ರಾಜ್ಯಂ ಚ ಪುನರುದ್ಧರ ।
ದ್ವಾವರ್ಥೌ ಯುದ್ಧಕಾಮಸ್ಯ ತಸ್ಮಾತ್ ಕುರುತ ಪೌರುಷಮ್ ॥೯೯॥

ಶತ್ರುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವುದು ಮತ್ತು ಕಳೆದುಹೋದ ರಾಜ್ಯವನ್ನು ಸಂಪಾದಿಸುವುದು, ಇವೆರಡು ಯುದ್ಧವನ್ನು ಮಾಡಲು ಬಯಸುವವನ ಉದ್ದೇಶಗಳು. ಆದ್ದರಿಂದ ಪೌರುಷವನ್ನು ಮಾಡುವವನಾಗು.

ಅಸ್ಮಾನ್ ವಾ ತ್ವಮಥೋ ಜಿತ್ವಾ ಪ್ರಶಾಧಿ ಪೃಥಿವೀಮಿಮಾಮ್ ।
ಅಥವಾ ನಿಹತೋಽಸ್ಮಾಭಿರ್ದೇವಲೋಕಂ ಗಮಿಷ್ಯಸಿ ॥೧೦೦॥

ನಮ್ಮನ್ನಾದರೂ ನೀನು ಜಯಿಸಿ ಈ ಭೂಮಿಯನ್ನು ಆಳು ಅಥವಾ ನಮ್ಮಿಂದ ಕೊಲ್ಲಲ್ಪಟ್ಟು ದೇವಲೋಕಕ್ಕೆ ಹೋಗುವವನಾಗು.

ಪರಾಜಿತೋಽಸಿ ದ್ಯೂತೇನ ಕೃಷ್ಣಾ ಚಾನಾಯಿತಾ ಸಭಾಮ್ ।
ಶಕ್ಯೋಽಮರ್ಷೋ ಮನುಷ್ಯೇಣ ಕರ್ತುಂ ಪುರುಷಮಾನಿನಾ ॥೧೦೧॥

ದ್ಯೂತದಲ್ಲಿ ಪರಾಜಯವನ್ನು ಹೊಂದಿದೆ. ದ್ರೌಪದಿಯನ್ನು ಸಭೆಗೆ ಎಳೆತಂದಾಯಿತು. ತನ್ನನ್ನು ಪುರುಷನೆಂದು ತಿಳಿದುಕೊಳ್ಳುವ ಮನುಷ್ಯನು ಕೋಪವನ್ನು

ಮಾಡಲು ಇವೆರಡರಿಂದ ಸಾಧ್ಯವಾಗುತ್ತದೆ (ಅಂತಹ ಕೋಪವನ್ನು ತಂದುಕೊಂಡು ಯುದ್ಧವನ್ನು ಮಾಡು).

ದ್ವಾದಶೈವ ತು ವರ್ಷಾಣಿ ವನೇ ಧಿಷ್ಣ್ಯಾದ್ ವಿವಾಸಿತಃ ।
ಸಂವತ್ಸರಂ ವಿರಾಟಸ್ಯ ದಾಸ್ಯಮಾಸ್ಥಾಯ ಚೋಷಿತಃ ॥೧೦೨॥

ಹನ್ನೆರಡು ವರ್ಷಗಳ ಕಾಲ ರಾಜ್ಯಭ್ರಷ್ಟನಾಗಿ ವನವಾಸವನ್ನು ಮಾಡಿದೆ. ಒಂದು ವರ್ಷದ ಕಾಲ ವಿರಾಟನ ದಾಸನಾಗಿ ಅವನ ಮನೆಯಲ್ಲಿ ವಾಸ ಮಾಡಿದೆ.

ಅಪ್ರಿಯಾಣಾಂ ತು ವಚನಂ ಸಂಸ್ಮರಂಶ್ಚ ಪುನಃ ಪುನಃ ।
ಅಮರ್ಷಂ ದರ್ಶಯಸ್ವ ತ್ವಮಮರ್ಷೋ ಹ್ಯೇವ ಪೌರುಷಮ್ ॥೧೦೩॥

ಪಣವನ್ನು ಇಡುವಾಗ ರಾಜ್ಯತ್ಯಾಗ ವಿಷಯದಲ್ಲಿ ನಾವು ಆಡಿದ ಅಪ್ರಿಯವಾದ ಮಾತುಗಳನ್ನು ಪುನಃ ಪುನಃ ಸ್ಮರಣೆ ಮಾಡಿ ನಿನ್ನ ಕೋಪವನ್ನು ತೋರಿಸು. ಕೋಪವೇ ಪೌರುಷವಷ್ಟೆ! (ಪೌರುಷಕ್ಕೆ ಕಾರಣವಷ್ಟೆ!)

ಕ್ರೋಧೋ ಬಲಂ ತಥಾ ವೀರ್ಯಂ ಜ್ಞಾನಯೋಗೋಽಸ್ತ್ರಲಾಘವಮ್ ।
ಇಹ ತೇ ದರ್ಶ್ಯತಾಂ ಪಾರ್ಥ ಯುಧ್ಯಸ್ವ ಪುರುಷೋ ಭವ ॥೧೦೪॥

ಎಲೈ ಪಾರ್ಥನೇ, ನಿನ್ನ ಕ್ರೋಧ, ಬಲ, ಪರಾಕ್ರಮ, ಜ್ಞಾನಯೋಗ, ಅಸ್ತ್ರಲಾಘವ ಇವುಗಳನ್ನು ತೋರಿಸಿ ಯುದ್ಧವನ್ನು ಮಾಡು. ಪುರುಷನಾಗು.

ಇತ್ಯುಕ್ತೋ ಧಾರ್ತರಾಷ್ಟ್ರೇಣ ಉಲೂಕೋ ದುಷ್ಟಚೇತನಃ ।
ಅಭಿನಿರ್ಯಾಯ ನಗರಾತ್ ಪಾಂಡವಾನ್ ಪ್ರತಿ ಸೋಽಭ್ಯಗಾತ್ ॥

ಹೀಗೆ ದುರ್ಯೋಧನನಿಂದ ಸಂದೇಶವನ್ನು ಸ್ವೀಕರಿಸಿ, ದುಷ್ಟಚೇತನನಾದ ಉಲೂಕನು ನಗರದಿಂದ ಹೊರಟು, ಪಾಂಡವರನ್ನು ಹೋಗಿ ಸೇರಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಪಂಚಾಶೋತ್ತರಶತತಮೋಽಧ್ಯಾಯಃ ॥

॥ ಉಲೂಕದೂತಾಗಮನಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐವತ್ತೊಂಬತ್ತನೆಯ ಅಧ್ಯಾಯ

ಪಾಂಡವರನ್ನು ಸಮೀಪಿಸಿ ಉಲೂಕನಿಂದ ಯುಧಿಷ್ಠಿರಾದಿಗಳಿಗೆ
ದುರ್ಯೋಧನನ ಸಂದೇಶಹರಣ.

ಸಂಜಯಃ

ಸೇನಾನಿವೇಶಂ ಸಂಪ್ರಾಪ್ಯ ಕೈತವ್ಯಃ ಪಾರ್ಥಿವೈಃ ಸಹ ।
ಸಮಾಗತಃ ಪಾಂಡವೈಶ್ಚ ಯುಧಿಷ್ಠಿರಮಭಾಷತ ॥೧॥

ಅಭಿಜ್ಞೋ ದೂತವಾಕ್ಯಾನಾಂ ಯಥೋಕ್ತಂ ಬ್ರುವತೋ ಮಮ ।
ದುರ್ಯೋಧನಸಮಾದೇಶಂ ಶ್ರುತ್ವಾ ನ ಕ್ರೋದ್ಧುಮರ್ಹಸಿ ॥೨॥

ಸಂಜಯ– ಉಲೂಕನು ರಾಜರ ಜೊತೆಯಲ್ಲಿ ಪಾಂಡವರು ಬೀಡುಬಿಟ್ಟಿದ್ದ ಸ್ಥಳಕ್ಕೆ ಬಂದು, ಯುಧಿಷ್ಠಿರನನ್ನು ಕುರಿತು, ನೀನು ಸ್ವಾಮಿಯು ಹೇಳುವಂತೆ ಹೇಳುವ ದೂತವಾಕ್ಯಗಳ ಪರಿಸ್ಥಿತಿಯನ್ನು ತಿಳಿದಿದ್ದೀಯೆ. ದುರ್ಯೋಧನನ ಸಂದೇಶವನ್ನು ಕೇಳಿ ನನ್ನ ಮೇಲೆ ಕೋಪವನ್ನು ಮಾಡಬೇಡ ಎಂದು ಹೇಳಿದನು.

ಯುಧಿಷ್ಠಿರಃ

ಉಲೂಕ ನ ಭಯಂ ತೇಽಸ್ತಿ ಬ್ರೂಹಿ ತ್ವಂ ವಿಗತಜ್ವರಃ ।
ಯನ್ಮತಂ ಧಾರ್ತರಾಷ್ಟ್ರಸ್ಯ ಲುಬ್ಧಸ್ಯಾದೀರ್ಘದರ್ಶಿನಃ ॥೩॥

ಯುಧಿಷ್ಠಿರ– ಉಲೂಕನೇ, ನಿನಗೆ ಯಾವ ಭಯವೂ ಇಲ್ಲ. ಲೋಭಿಯೂ, ದೀರ್ಘದರ್ಶಿಯಲ್ಲದವನೂ ಆದ ಆ ದುರ್ಯೋಧನನ ಅಭಿಪ್ರಾಯವನ್ನು ನಿಶ್ಶಂಕೆಯಿಂದ ಹೇಳುವವನಾಗು.

ಸಂಜಯಃ

ತತೋ ದ್ಯುತಿಮತಾಂ ಮಧ್ಯೇ ಪಾಂಡವಾನಾಂ ಮಹಾತ್ಮನಾಮ್ ।
ಸೃಂಜಯಾನಾಂ ಚ ಸರ್ವೇಷಾಂ ಕೃಷ್ಣಸ್ಯ ಚ ಯಶಸ್ವಿನಃ ॥೪॥

ದ್ರುಪದಸ್ಯ ಸಪುತ್ರಸ್ಯ ವಿರಾಟಸ್ಯ ಚ ಸನ್ನಿಧೌ ।
ಭೂಮಿಪಾನಾಂ ಚ ಸರ್ವೇಷಾಂ ಮಧ್ಯೇ ವಾಕ್ಯಂ ಜಗಾದ ಹ ॥೫॥

ಸಂಜಯ– ಅನಂತರ ಮಹಾತ್ಮರಾದ, ತೇಜಸ್ವಿಗಳಾದ ಪಾಂಡವರ ಮಧ್ಯದಲ್ಲಿ ಕೀರ್ತಿವಂತನಾದ ಕೃಷ್ಣನೂ ಮತ್ತು ಸೃಂಜಯರೂ ಮತ್ತು ಎಲ್ಲರೂ ಕೇಳುವಂತೆ, ಪುತ್ರಸಹಿತನಾದ ದ್ರುಪದನ ಮತ್ತು ವಿರಾಟನ ಸನ್ನಿಧಿಯಲ್ಲಿ, ಎಲ್ಲಾ ರಾಜರ ಮಧ್ಯದಲ್ಲಿ ಉಲೂಕನು ಮಾತನಾಡಿದನು.

ಉಲೂಕಃ

ಇದಂ ತ್ವಾಮಬ್ರವೀದ್ ರಾಜಾ ಧಾರ್ತರಾಷ್ಟ್ರೋ ಮಹಾಬಲಃ ।
ಶೃಣ್ವತಾಂ ಕುರುವೀರಾಣಾಂ ತನ್ನಿಬೋಧ ನರಾಧಿಪ ॥೬॥

ಉಲೂಕ– ಎಲೈ ರಾಜನೇ, ಮಹಾಬಲನಾದ ದುರ್ಯೋಧನರಾಜನು ಕುರುವೀರರು ಕೇಳುತ್ತಿರುವಂತೆ ನಿನಗೆ ಈ ಸಂದೇಶವನ್ನು ಕಳುಹಿಸಿದ್ದಾನೆ. ಅದನ್ನು ಕೇಳಿ ತಿಳಿದುಕೊ.

ಪರಾಜಿತೋಽಸಿ ದ್ಯೂತೇನ ಕೃಷ್ಣಾ ಚಾನಾಯಿತಾ ಸಭಾಮ್ ।
ಶಕ್ಯೋಽಮರ್ಷೋ ಮನುಷ್ಯೇಣ ಕರ್ತುಂ ಪುರುಷಮಾನಿನಾ ॥೭॥

ದ್ಯೂತದಲ್ಲಿ ಪರಾಜಿತನಾದೆ. ದ್ರೌಪದಿಯನ್ನು ಸಭೆಗೆ ಎಳೆದು ತಂದದ್ದಾಯಿತು. ತನ್ನನ್ನು ಪುರುಷನೆಂದು ತಿಳಿಯುವ ಮನುಷ್ಯನು ಇದರಿಂದ ಕೋಪವನ್ನು ಹೊಂದಲು ಸಾಧ್ಯ.

ದ್ವಾದಶೈವ ಚ ವರ್ಷಾಣಿ ವನೇ ಧಿಷ್ಣ್ಯಾದ್ ನಿವಾಸಿತಾಃ ।
ಸಂವತ್ಸರಂ ವಿರಾಟಸ್ಯ ದಾಸ್ಯಮಾಸ್ಥಾಯ ಚೋಷಿತಾಃ ॥೮॥

ಹನ್ನೆರಡು ವರ್ಷಗಳ ಕಾಲ ರಾಜ್ಯಚ್ಯುತರಾಗಿ ವನವಾಸವನ್ನು ಮಾಡಿದಿರಿ. ಒಂದು ವರ್ಷದ ಕಾಲ ವಿರಾಟನ ದಾಸರಾಗಿ ವಾಸವನ್ನು ಮಾಡಿದಿರಿ.

ಬಹೂನಿ ತತ್ರ ಕ್ಲೇಶಾನಿ ವನವಾಸಂ ಚ ಪಾಂಡವ ।
ದ್ರೌಪದ್ಯಾಶ್ಚ ಪರಿಕ್ಲೇಶಂ ಸಂಸ್ಮರನ್ ಪುರುಷೋ ಭವ ॥೯॥

ಎಲೈ ಪಾಂಡವನೇ, ಮೊದಲು ಅನುಭವಿಸಿದ ಅನೇಕ ಕ್ಲೇಶಗಳನ್ನೂ, ವನವಾಸವನ್ನೂ ಮತ್ತು ದ್ರೌಪದಿಯ ಪರಿಕ್ಲೇಶವನ್ನೂ ಸ್ಮರಿಸಿ ಪುರುಷನಾಗು.

ಅಶಕ್ತೇನ ಚ ಯಚ್ಚಪ್ತಂ ಭೀಮಸೇನೇನ ಪಾಂಡವ ।
ದುಃಶಾಸನಸ್ಯ ರುಧಿರಂ ಪೀಯತಾಂ ಯದಿ ಶಕ್ಯತೇ ॥೧೦॥

ಎಲೈ ಪಾಂಡವನೇ, ಅಶಕ್ತನಾದ ಭೀಮಸೇನನು ಪ್ರತಿಜ್ಞೆಯನ್ನು ಮಾಡಿದನಷ್ಟೆ? ಸಾಧ್ಯವಿದ್ದರೆ ದುಶ್ಶಾಸನನ ರಕ್ತವನ್ನು ಪಾನ ಮಾಡಲಿ.

ಬಲಾಭಿಹಾರೋ ನಿರ್ವೃತ್ತಃ ಕುರುಕ್ಷೇತ್ರಮಕರ್ದಮಮ್ ।
ಪುಷ್ಟಾಸ್ತೇऽಶ್ವಾ ಭೃತಾ ಯೋಧಾಃ ಶ್ವೋ ಯುಧ್ಯಸ್ವ ಸಕೇಶವಃ ॥೧೧॥

ಕೆಸರಿಲ್ಲದ ಕುರುಕ್ಷೇತ್ರಕ್ಕೆ ಸೈನ್ಯವನ್ನು ತಂದಿದ್ದಾಗಿದೆ. ನಿನ್ನ ಅಶ್ವಗಳು ಪುಷ್ಟವಾಗಿವೆ. ಯೋಧರನ್ನು ಸಾಕಿದ್ದಾಗಿದೆ. ನಾಳೆ ಕೇಶವನನ್ನು ಕೂಡಿಕೊಂಡು ಯುದ್ಧವನ್ನು ಮಾಡುವವನಾಗು.

ಅಸಮಾಗಮ್ಯ ಭೀಷ್ಮೇಣ ಸಂಯುಗೇ ಕಿಂ ವಿಕತ್ಥಸೇ ।
ಆರುರುಕ್ಷುರ್ಯಥಾ ಮಂದಃ ಪರ್ವತಂ ಗಂಧಮಾದನಮ್ ॥೧೨॥

ಏವಂ ಕತ್ಥಸಿ ಕೌಂತೇಯ ನಕತ್ಥನ್ ಕುರು ಪೌರುಷಮ್ ॥೧೩॥

ಯುದ್ಧದಲ್ಲಿ ಭೀಷ್ಮರ ಸಮಾಗಮವನ್ನು ಹೊಂದದೆ ಗಂಧಮಾದನ ಪರ್ವತವನ್ನು ಹತ್ತಲು ಬಯಸುವ ಮಂದನಂತೆ ಏಕೆ ನಿನ್ನನ್ನು ನೀನು ಹೊಗಳಿಕೊಳ್ಳುತ್ತಿದ್ದೀಯೆ? ಎಲೈ ಕೌಂತೇಯನೇ, ನೀನು ಹೀಗೆ ಕತ್ಥನವನ್ನು (ಆತ್ಮಶ್ಲಾಘನೆಯನ್ನು) ಮಾಡುತ್ತಿದ್ದೀಯೆ. ಬಾಯಿಮುಚ್ಚಿ ಪೌರುಷವನ್ನು ತೋರಿಸು.

ಸೂತಪುತ್ರಂ ಸುದುರ್ಧರ್ಷಂ ಶಲ್ಯಂ ಚ ಬಲಿನಾಂ ವರಮ್ ।
ಅಜಿತ್ವಾ ಸಂಯುಗೇ ಪಾರ್ಥ ರಾಜ್ಯಂ ಕಥಮಿಹೇಚ್ಛಸಿ ॥೧೪॥

ಎಲೈ ಪಾರ್ಥನೇ, ಯುದ್ಧದಲ್ಲಿ ಸೋಲಿಸಲು ಅಸಾಧ್ಯನಾದ ಕರ್ಣನನ್ನಾಗಲೀ ಅಥವಾ ಬಲಿಷ್ಠರಲ್ಲಿ ಶ್ರೇಷ್ಠನಾದ ಶಲ್ಯನನ್ನಾಗಲೀ ಜಯಿಸದೆ ಹೇಗೆ ರಾಜ್ಯವನ್ನು ಬಯಸುತ್ತೀಯೆ?

ದ್ರೋಣಂ ಚ ಯುಧ್ಯತಾಂ ಶ್ರೇಷ್ಠಂ ಶಚೀಪತಿಸಮಂ ಯುಧಿ ॥೧೫॥

ಬ್ರಾಹ್ಮೇ ಧನುಷಿ ಚಾಚಾರ್ಯಂ ವೇದಯೋರಂತಗಂ ದ್ವಯೋಃ ।
ಯುಧಿ ಧುರ್ಯಮಸಂಕ್ಷೋಭ್ಯಮ್ ಅನೀಕಧರಮಚ್ಯುತಮ್ ॥೧೬॥

ದ್ರೋಣಂ ಮಹಾದ್ಯುತಿಂ ಪಾರ್ಥ ಯಜ್ಜಿಗೀಷಸಿ ತನ್ಪೃಷಾ ॥೧೭॥

ನ ಹಿ ಶುಶ್ರುಮ ವಾತೇನ ಮೇರುಮುನ್ಮಥಿತಂ ಗಿರಿಮ್ ॥೧೮॥

ಯುದ್ಧಮಾಡುವವರಲ್ಲಿ ಶ್ರೇಷ್ಠರಾದ, ಪರಾಕ್ರಮದಲ್ಲಿ ಇಂದ್ರನಿಗೆ ಸಮಾನರಾದ, ಬ್ರಹ್ಮವಿದ್ಯೆಯಲ್ಲೂ ಧನುರ್ವಿದ್ಯೆಯಲ್ಲೂ ಗುರುಗಳಾದ, ವೇದ ಮತ್ತು ಧನುರ್ವೇದದಲ್ಲಿ ಪಾರಂಗತರಾದ, ಯುದ್ಧದಲ್ಲಿ ಅಲುಗಾಡಿಸಲು ಸಾಧ್ಯವಿಲ್ಲದ ಮತ್ತು ಯುದ್ಧದ ಮುಂಭಾಗದಲ್ಲಿರುವ ಸೇನೆಯನ್ನು ನಿಯಂತ್ರಿಸುವ, ತಮ್ಮ ಗುಣಗಳಿಂದ ಚ್ಯುತರಾಗದ, ಮಹಾಕಾಂತಿಯುಳ್ಳ ದ್ರೋಣರನ್ನು ಜಯಿಸಲು ಏನು ಇಚ್ಛಿಸುತ್ತೀಯೋ ಎಲೈ ಪಾರ್ಥನೇ, ಅದು ಸುಳ್ಳು. ಬಿರುಗಾಳಿಯಿಂದ ಮೇರುಪರ್ವತವು ಉರುಳಿತು ಎಂಬ ವಾರ್ತೆಯನ್ನು ನಾವು ಹಿಂದೆ ಕೇಳಿಲ್ಲ, ಮುಂದೆ ಕೇಳುವುದಿಲ್ಲ.

ಅನಿಲೋ ವಾ ವಹೇನ್ಮೇರುಂ ದ್ಯೌರ್ವಾऽಪಿ ನಿಪತೇನ್ಮಹೀಮ್ ।
ಯುಗಂ ವಾ ಪರಿವರ್ತೇತ ಯದ್ಯೇವಂ ಸ್ಯಾದ್ ಯದಾತ್ಥ ಮಾಮ್ ॥

ನೀನು ನನಗೆ ಹೇಳಿದಂತೆ ಆಗುವುದಾದರೆ ವಾಯುವು ಮೇರುಪರ್ವತವನ್ನು ಹಾರಿಸಿಕೊಂಡು ಹೋದೀತು. ಆಕಾಶವು ಭೂಮಿಯ ಮೇಲೆ ಬಿದ್ದೀತು. ಅಥವಾ ಯುಗವು ಪರಿವರ್ತನೆಯನ್ನು ಹೊಂದೀತು (ದ್ವಾಪರಯುಗವು ಕೃತಯುಗವಾದೀತು)

ಕೋ ಹ್ಯಸ್ತ್ರಜೇವಿತಾಕಾಂಕ್ಷೀ ತೀವ್ರಾಸ್ತ್ರಮರಿಕರ್ಶನಮ್ ।
ಗಜೋ ವಾಜೀ ನರೋ ವಾऽಪಿ ಪುನಃ ಸ್ವಸ್ಥೋ ಗೃಹಾನ್ ವ್ರಜೇತ್ ॥

ಅಸ್ತ್ರದಿಂದ ಜೀವಿಸಲು ಬಯಸುವ ಯಾವ ಯೋಧನಾಗಲೀ ಅಥವಾ ಗಜವಾಗಲೀ ಅಥವಾ ಅಶ್ವವಾಗಲೀ ತೀವ್ರಾಸ್ತ್ರವನ್ನು ಹೊಂದಿದ, ಶತ್ರುಕರ್ಶನರಾದ ದ್ರೋಣರನ್ನು ಯುದ್ಧದಲ್ಲಿ ಸಮೀಪಿಸಿ, ಏನೂ ಹಾನಿ ಇಲ್ಲದೆ ಪುನಃ ಮನೆಗೆ ಹೇಗೆ ಹಿಂದಿರುಗಬಹುದು?

ಕಥಮಾಭ್ಯಾಮವಧ್ಯಾತಃ ಸಂಸೃಷ್ಟೋ ದಾರುಣೇನ ಚ ।
ರಣೇ ಜೀವನ್ ವಿಮುಚ್ಯೇತ ಪದಾ ಭೂಮಿಮುಪಸ್ಪೃಶನ್ ॥೨೧॥

ತನ್ನ ಹೆಜ್ಜೆಯಿಂದ ಭೂಮಿಯ ಮೇಲೆ ನಿಂತ ಯಾವನು ನಮ್ಮಿಬ್ಬರಿಂದ (ತಾನು ಮತ್ತು ದ್ರೋಣರಿಂದ) ಅವಧ್ಯಾತನಾಗಿ, ದಾರುಣವಾದ ಯುದ್ಧದಲ್ಲಿ ನಮ್ಮನ್ನು ಎದುರಿಸುವವನಾಗಿ ಯುದ್ಧದಿಂದ ಬಿಡುಗಡೆಯನ್ನು ಹೊಂದಿಯಾನು?

ಕಿಂ ದರ್ದುರಃ ಕೂಪಶಯೋ ಯಥೇಮಾಂ
ನ ಬುಧ್ಯಸೇ ರಾಜಚಮೂಂ ಸಮೇತಾಮ್ ।
ದುರಾಧರ್ಷಾಂ ದೇವಚಮೂಪ್ರಕಾಶಾಂ
ಗುಪ್ತಾಂ ನರೇಂದ್ರೈಸ್ತ್ರಿದಶೈರಿವ ದ್ಯಾಮ್ ॥೨೨॥

ಕೂಪಮಂಡೂಕದಂತಿರುವ ನೀನು, ಒಂದುಗೂಡಿದ ಈ ನನ್ನ ರಾಜಸೇನೆಯು ಸೋಲಿಸಲು ಅಸಾಧ್ಯವಾದುದು, ದೇವತೆಗಳ ಸೈನ್ಯವು ಶೋಭಿಸುವಂತೆ ಹೂಡಿದಂತಹುದು, ದೇವತೆಗಳಿಂದ ಸ್ವರ್ಗಲೋಕವು ರಕ್ಷಿಸಲ್ಪಟ್ಟಂತೆ ರಾಜನಿಂದ ರಕ್ಷಿಸಲ್ಪಟ್ಟಿರುವುದು ಎಂದು ತಿಳಿಯುತ್ತಿಲ್ಲ.

ಪ್ರಾಚ್ಯೈಃ ಪ್ರತೀಚ್ಯೈರಥ ದಾಕ್ಷಿಣಾತ್ಯೈಃ
ಉದೀಚ್ಯಕಾಂಭೋಜಶಕೈಃ ಖಶೈಶ್ಚ ।
ಸಾಲ್ವೈಃ ಸಮತ್ಸ್ಯೈಃ ಕುರುಮಧ್ಯದೇಶ್ಯೈಃ
ಮ್ಲೇಚ್ಛೈಃ ಪುಳಿಂದೈರ್ದ್ರವಿಡಾಂಧ್ರಕಾಶ್ಯೈಃ ॥೨೩॥

ಪೂರ್ವದಿಕ್ಕಿನವರು, ಪಶ್ಚಿಮದಿಕ್ಕಿನವರು ಆದ ರಾಜರಿಂದಲೂ, ಕಾಂಭೋಜ-ಶಕರಿಂದಲೂ, ಖಶರಿಂದಲೂ, ಸಾಲ್ವರಿಂದಲೂ, ಕುರುಮಧ್ಯದೇಶದವರಿಂದಲೂ, ಮ್ಲೇಚ್ಛರಿಂದಲೂ, ಪುಳಿಂದರಿಂದಲೂ, ದ್ರಾವಿಡರಿಂದಲೂ, ಆಂಧ್ರರಿಂದಲೂ, ಕಾಶ್ಯರಿಂದಲೂ ರಕ್ಷಿಸಲ್ಪಟ್ಟಿದೆ ಎಂಬುದನ್ನು ತಿಳಿಯುತ್ತಿಲ್ಲ.

ನಾನಾಜನೌಘಂ ಯುಧಿ ಸಂಪ್ರವೃತ್ತಂ
ಗಾಂಗಂ ಯಥಾ ವೇಗಮವಾರಣೀಯಮ್ ।
ಮಾಂ ಚ ಸ್ಥಿತಂ ನಾಗಬಲಸ್ಯ ಮಧ್ಯೇ
ಯುಯುತ್ಸಸೇ ಮಂದ ಕಿಮಲ್ಪಬುದ್ಧೇ ॥೨೪॥

ಎಲೈ ಮಂದನೇ, ಅಲ್ಪಬುದ್ಧಿಯೇ, ಯುದ್ಧವನ್ನು ಮಾಡುವುದರಲ್ಲಿ ಉದ್ಯುಕ್ತರಾದ, ನಾನಾ ಜನರಿಂದ ಕೂಡಿದ, ಗಂಗೆಯ ವೇಗದಂತೆ ತಡೆಯಲು ಸಾಧ್ಯವಿಲ್ಲದ ಗಜಬಲದ ಮಧ್ಯೆ ನಿಂತಿರುವ ನನ್ನ ಜೊತೆಯಲ್ಲಿಯೂ ಸಹ ಯುದ್ಧವನ್ನು ಮಾಡಲು ಏಕೆ ಬಯಸುತ್ತೀಯೆ?

ಸಂಜಯಃ

ಇತ್ಯೇವಮುಕ್ತ್ವಾ ರಾಜಾನಂ ಧರ್ಮಪುತ್ರಂ ಯುಧಿಷ್ಠಿರಮ್ ।
ಅಭ್ಯಾವೃತ್ಯ ಪುನರ್ಜಿಷ್ಣುಮುಲೂಕಃ ಪ್ರತ್ಯಭಾಷತ ॥೨೫॥

ಸಂಜಯ– ರಾಜನಾದ ಧರ್ಮಪುತ್ರನಾದ ಯುಧಿಷ್ಠಿರನನ್ನು ಕುರಿತು ಹೀಗೆ ಮಾತನಾಡಿ, ಪುನಃ ಅರ್ಜುನನ ಕಡೆಗೆ ತಿರುಗಿ ಉಲೂಕನು ಅವನನ್ನು ಕುರಿತು ಮಾತನಾಡಿದನು.

ಅಕತ್ಥಮಾನೋ ಯುಧ್ಯಸ್ವ ಕತ್ಥಸೇಽರ್ಜುನ ಕಿಂ ಬಹು ।
ಪರ್ಯಯಾತ್ ಸಿದ್ಧಿರೇತಸ್ಯ ನೈತತ್ ಸಿದ್ಧ್ಯತಿ ಕತ್ಥನಾತ್ ॥೨೬॥

ಎಲೈ ಅರ್ಜುನನೇ, ಬಾಯಿಂದ ಮಾತನಾಡದೆ ಯುದ್ಧವನ್ನು ಮಾಡು, ಏತಕ್ಕೆ ಬಡಬಡಿಸುತ್ತಿದ್ದೀಯೆ? ಯುದ್ಧಭೂಮಿಯಲ್ಲಿ ಮಂಡಲಗಳಲ್ಲಿ (ಸೇನಾವ್ಯೂಹಗಳಲ್ಲಿ) ಸಂಚರಿಸುವುದರಿಂದ ಸಿದ್ಧಿ ಉಂಟಾಗುತ್ತದೆ. ನಿನ್ನನ್ನು ನೀನು ಹೊಗಳಿಕೊಳ್ಳುವುದರಿಂದಲ್ಲ.

ಯದೀದಂ ಕತ್ಥನಾಲ್ಲೋಕೇ ಸಿದ್ಧ್ಯೇತ್ ಕರ್ಮ ಧನಂಜಯ ।
ಸರ್ವೇ ಭವೇಯುಃ ಸಿದ್ಧಾರ್ಥಾಃ ಕತ್ಥನೇ ಕೋ ಹಿ ದುರ್ಗತಃ ॥೨೭॥

ಎಲೈ ಧನಂಜಯನೇ, ಈ ಕತ್ಥನದಿಂದ (ಆತ್ಮಶ್ಲಾಘನೆಯಿಂದ) ಲೋಕದಲ್ಲಿ ಕಾರ್ಯವು ಸಿದ್ಧಿಸುವುದಾದರೆ ಎಲ್ಲರೂ ಕಾರ್ಯಸಿದ್ಧಿಯನ್ನು ಪಡೆದಾರು. ಆತ್ಮಶ್ಲಾಘನೆ ಮಾಡಿಕೊಳ್ಳುವುದರಲ್ಲಿ ಯಾರಿಗೆ ದಾರಿದ್ರ್ಯವಿದೆ?

ಜಾನಾಮಿ ತೇ ವಾಸುದೇವಂ ಸಹಾಯಂ
ಜಾನಾಮಿ ತೇ ಗಾಂಡಿವಂ ತಾಳಮಾತ್ರಮ್ ।
ಜಾನಾಮ್ಯೇತತ್ ತ್ವಾದೃಶೋ ನಾಸ್ತಿ ಯೋದ್ಧಾ
ರಾಜ್ಯಂ ಚ ತೇ ಜಾನಮಾನೋ ಹರಾಮಿ ॥೨೮॥

ನಿನಗೆ ಕೃಷ್ಣನು ಸಹಾಯನಾಗಿದ್ದಾನೆ ಎಂದು ತಿಳಿದಿದ್ದೇನೆ. ನಿನ್ನ ಗಾಂಡೀವ ಧನುಸ್ಸು ತಾಳವೃಕ್ಷದಂತೆ ಎತ್ತರವಾಗಿದೆ ಎಂದು ತಿಳಿದಿದ್ದೇನೆ. ನಿನ್ನಂತಹ ಯೋಧರಿಲ್ಲವೆಂದೂ ತಿಳಿದಿದ್ದೇನೆ. ಇಷ್ಟನ್ನು ತಿಳಿದರೂ ನಿನ್ನ ರಾಜ್ಯವನ್ನು ಅಪಹರಿಸುತ್ತೇನೆ.

ನ ತು ಪರ್ಯಾಯಧರ್ಮೇಣ ಸಿದ್ಧಿಂ ಪ್ರಾಪ್ನೋತಿ ಭೂಯಸೀಮ್ ।
ಮನಸೈವ ಹಿ ಭೂತಾನಿ ವಿಧಾತಾ ಕುರುತೇ ವಶೇ ॥೨೯॥

ಬೇರೆ ಬೇರೆ ರೂಪಗಳನ್ನು ಧರಿಸುವುದರಿಂದ ಯಾವನೂ ದೊಡ್ಡ ಸಿದ್ಧಿಯನ್ನು ಪಡೆಯುವುದಿಲ್ಲ. ಬ್ರಹ್ಮನು ಮನಸ್ಸಿನಿಂದಲೇ ಎಲ್ಲರನ್ನೂ ವಶಪಡಿಸಿಕೊಳ್ಳುತ್ತಾನೆ.

ತ್ರಯೋದಶ ಸಮಾ ಭುಕ್ತಂ ರಾಜ್ಯಂ ವಿಲಪತಸ್ತವ ।
ಭೂಯಶ್ಚೈವ ಪ್ರಶಾಸಿಷ್ಯೇ ತ್ವಾಂ ನಿಹತ್ಯ ಸಬಾಂಧವಮ್ ॥೩೦॥

ಹದಿಮೂರು ವರ್ಷಗಳ ಕಾಲ ನೀನು ಗೋಳಾಡುತ್ತಿದ್ದರೂ ನಾನು ರಾಜ್ಯ ಭೋಗಿಸಿದೆ. ನಿನ್ನನ್ನು ಬಾಂಧವರ ಜೊತೆಯಲ್ಲಿ ಕೊಂದು ಪುನಃ ಭೋಗಿಸುವೆನು.

ಕ್ವ ತದಾ ಗಾಂಡಿವಂ ತೇऽಭೂದ್ ಯತ್ ತ್ವಂ ದಾಸಪಣೈರ್ಜಿತಃ ।
ಕ್ವ ತದಾ ಭೀಮಸೇನಸ್ಯ ಬಲಮಾಸೀಚ್ಚ ಫಲ್ಗುನ ॥೩೧॥

ಎಲೈ ಅರ್ಜುನನೇ, ನೀನು ದ್ಯೂತದಲ್ಲಿ ದಾಸ್ಯಪಣದಿಂದ ಸೋತಾಗ ನಿನ್ನ ಗಾಂಡೀವ ಧನುಸ್ಸು ಎಲ್ಲಿಗೆ ಹೋಗಿದ್ದಿತು? ಭೀಮಸೇನನ ಬಲವು ಎಲ್ಲಿದ್ದಿತು?

ಸಗದಾದ್ ಭೀಮಸೇನಾಚ್ಚ ಪಾರ್ಥಾಚ್ಚಾಪಿ ಸಗಾಂಡಿವಾತ್ ।
ನ ವೈ ಮೋಕ್ಷ್ಯತದಾ ವೋऽಭೂದ್ ಏನಾ ಕೃಷ್ಣಾಮನಿಂದಿತಾಮ್ ॥೩೨॥

ಅನಿಂದಿತಳಾದ ದ್ರೌಪದಿ ಒಬ್ಬಳನ್ನು ಬಿಟ್ಟು ನಿಮಗೆ ಗದೆಯನ್ನು ಧರಿಸಿದ ಭೀಮಸೇನನಿಂದಾಗಲಿ, ಗಾಂಡೀವವನ್ನು ಧರಿಸಿದ ಅರ್ಜುನನಿಂದಾಗಲೀ ಆಗ ದಾಸ್ಯದಿಂದ ಬಿಡುಗಡೆಯಾಗಲಿಲ್ಲ.

ಸಾ ವೋ ದಾಸ್ಯೇ ಸಮಾಪನ್ನಾನ್ ಮೋಕ್ಷಯಾಮಾಸ ಭಾಮಿನೀ ।
ಅಮಾನುಷ್ಯಸಮಾಯುಕ್ತಾನ್ ದಾಸಕರ್ಮಣ್ಯವಸ್ಥಿತಾನ್ ॥೩೩॥

ಆ ಕೋಪಗೊಂಡ ದ್ರೌಪದಿಯು ಮನುಷ್ಯರಿಗೆ ಅಯೋಗ್ಯವಾದ ದಾಸಕರ್ಮದಲ್ಲಿ ಬಿದ್ದ ನಿಮ್ಮನ್ನು ದಾಸ್ಯಕರ್ಮದಿಂದ ವಿಮೋಚನೆ ಮಾಡಿದಳು.

ಅವೋಚಂ ಯತ್ ಷಂಡತಿಲಾನಹಂ ವಸ್ತಥ್ಯಮೇವ ತತ್ ।
ಧೃತಾ ಹಿ ವೇಣೀ ಪಾರ್ಥೇನ ವಿರಾಟನಗರೇ ತದಾ ॥೩೪॥

ನಾನು ನೀವು ಹುಳಿತುಹೋದ ಎಳ್ಳುಕಾಳುಗಳು ಎಂದು ಏನು ಹೇಳಿದೆನೋ ಅದು ಸತ್ಯವಾದ ಮಾತು. ಏಕೆಂದರೆ ವಿರಾಟನಗರದಲ್ಲಿ ಅರ್ಜುನನು ಜಡೆಯನ್ನು ಹಾಕಿಕೊಂಡು ಕಾಲ ಕಳೆದನು.

ಸೂದಕರ್ಮಣಿ ಚ ಶ್ರಾಂತಂ ವಿರಾಟಸ್ಯ ಮಹಾನಸೇ ।
ಭೀಮಸೇನೇನ ಕೌಂತೇಯ ಯಚ್ಚ ತನ್ಮಮ ಪೌರುಷಮ್ ॥೩೫॥

ಎಲೈ ಕೌಂತೇಯನೇ, ಭೀಮಸೇನನು ವಿರಾಟನ ಅಡುಗೆಮನೆಯಲ್ಲಿ ಪಾಚಕನಾಗಿ ಏನು ಶ್ರಮವನ್ನು ಅನುಭವಿಸಿದನೋ ಅದು ನನ್ನ ಪೌರುಷ.

ಏವಮೇವ ಸದಾ ದಂಡಂ ಕ್ಷತ್ರಿಯಾಃ ಕ್ಷತ್ರಿಯೇ ದಧುಃ ।
ವೇಣೀಂ ಕೃತ್ವಾ ಷಂಡವೇಷಃ ಕನ್ಯಾಂ ನರ್ತಿತವಾನಸಿ ॥೩೬॥

ಕ್ಷತ್ರಿಯರು ಹೀಗೆಯೇ ಕ್ಷತ್ರಿಯರಲ್ಲಿ ಯಾವಾಗಲೂ ದಂಡವನ್ನು ವಿಧಿಸುತ್ತಾರೆ. ನೀನು ನಪುಂಸಕ ವೇಷವನ್ನು ಹೊಂದಿ, ಜಡೆಯನ್ನು ಹಾಕಿಕೊಂಡು ಕನ್ಯೆಯರಿಗೆ ನರ್ತನವನ್ನು ಕಲಿಸಿದೆ.

ನ ಭಯಾದ್ ವಾಸುದೇವಸ್ಯ ನ ಚಾಪಿ ತವ ಫಲ್ಗುನ ।
ರಾಜ್ಯಂ ಪ್ರತಿ ನ ದಾಸ್ಯಾಮಿ ಯುದ್ಧ್ಯಸ್ವ ಸಹಕೇಶವಃ ॥೩೭॥

ಎಲೈ ಫಲ್ಗುನನೇ, ಕೃಷ್ಣನ ಭಯದಿಂದಾಗಲೀ ಅಥವಾ ನಿನ್ನ ಭಯದಿಂದಾಗಲೀ ನಿಮಗೆ ರಾಜ್ಯವನ್ನು ಹಿಂದೆ ಕೊಡುವುದಿಲ್ಲ. ಕೇಶವನ ಸಹಾಯದಿಂದ ಯುದ್ಧವನ್ನು ಮಾಡುವವನಾಗು.

ನ ಮಾಯಾ ಹೀಂದ್ರಜಾಲಂ ವಾ ಕುಹಕಾ ವಾ ವಿಭೀಷಣಾ ।
ಆತ್ತಶಸ್ತ್ರಸ್ಯ ಮೇ ಯುದ್ಧೇ ಭವಂತಿ ಪ್ರತಿಗರ್ಜನಾಃ ॥೩೮॥

ಮಾಯೆಯಾಗಲಿ, ಇಂದ್ರಜಾಲವಾಗಲೀ, ಕಪಟವಾಗಲೀ, ಬೆದರಿಕೆಯ ಮಾತುಗಳಾಗಲೀ ಯುದ್ಧದಲ್ಲಿ ಶಸ್ತ್ರವನ್ನು ಹಿಡಿದು ನಿಂತ ನನಗೆ ಪ್ರತಿಗರ್ಜನೆಯನ್ನು ಮಾಡುವುದಿಲ್ಲ.

ವಾಸುದೇವಸಹಸ್ರಂ ವಾ ಫಲ್ಗುನಾನಾಂ ಶತಾನಿ ವಾ ।
ಆಸಾದ್ಯ ಮಾಮಮೋಘೇಷುಂ ದ್ರವಿಷ್ಯಂತಿ ದಿಶೋ ದಶ ॥೩೯॥

ಸಹಸ್ರಕೃಷ್ಣರು ಮತ್ತು ನೂರುಜನ ಅರ್ಜುನರು ಅಮೋಘವಾದ ಬಾಣಪ್ರಯೋಗವುಳ್ಳ ನನ್ನನ್ನು ಸಮೀಪಿಸಿದರೂ ಅವರು ಹತ್ತುದಿಕ್ಕುಗಳಿಗೆ ಓಡಿ ಹೋಗುವರು.

ಸಂಯುಗಂ ಗಚ್ಛ ಭೀಷ್ಮೇಣ ಭಿಂಧಿ ವಾ ಶಿರಸಾ ಗಿರಿಮ್ ।
ಪ್ರತರೇಮಂ ಮಹಾಗಾಧಂ ಬಾಹುಭ್ಯಾಂ ಪುರುಷೋದಧಿಮ್ ॥೪೦॥

ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡು ಅಥವಾ ತಲೆಯಿಂದ ಪರ್ವತವನ್ನು ಒಡೆಯುವವನಾಗು ಅಥವಾ ಎಲೈ ಪುರುಷನೇ, ಬಾಹುಗಳಿಂದ ಅಗಾಧವಾದ ಈ ಸೇನಾಸಮುದ್ರವನ್ನು ದಾಟುವವನಾಗು.

ಶಾರದ್ವತಮಹಾಮೀನಂ ವಿವಿಂಶತಿರ್ಝಷಾಕುಲಮ್ ।
ಬೃಹದ್ಬಲಮಹಾವೇಲಂ ಸೌಮದತ್ತಿತಿಮಿಂಗಿಲಮ್ ॥೪೧॥

ದುಃಶಾಸನೌಘಂ ಶಲಶಲ್ಯಮತ್ಸ್ಯಂ
ಸುಷೇಣಚಿತ್ರಾಯುಧನಾಗನಕ್ರಮ್ ।
ಜಯದ್ರಥಾದ್ರಿಂ ಪುರುಮಿತ್ರಗಾಧಂ
ದುರ್ಮರ್ಷಣೋದಂ ಶಕುನಿಪ್ರಪಾತಮ್ ॥೪೨॥

ಶಸ್ತ್ರೌಘಮಕ್ಷಯ್ಯಮತಿಪ್ರವೃದ್ಧಂ
ಯದಾऽವಗಾಹ್ಯ ಶ್ರಮನಷ್ಟಚೇತಾಃ ।
ಭವಿಷ್ಯಸಿ ತ್ವಂ ಹತಸರ್ವಬಾಂಧವಃ
ತದಾ ಮನಸ್ತೇ ಪರಿತಾಪಮೇಷ್ಯತಿ ॥೪೩॥

ಕೃಪಾಚಾರ್ಯರೆಂಬ ಮಹಾ ಮೀನವುಳ್ಳ, ವಿವಿಂಶತಿ ಎಂಬ ಮೊಸಳೆಯನ್ನು ಹೊಂದಿದ, ದೊಡ್ಡ ಸೈನ್ಯವೆಂಬ ಮಹಾತೀರವನ್ನು ಹೊಂದಿದ, ಸೋಮದತ್ತನ ಮಗನಾದ ಭೂರಿಶ್ರವನೆಂಬ ತಿಮಿಂಗಲವನ್ನು ಹೊಂದಿದ, ದುಶ್ಶಾಸನನೆಂಬ ಪ್ರವಾಹವನ್ನು ಹೊಂದಿದ, ಶಲ-ಶಲ್ಯರೆಂಬ ಮೀನುಗಳನ್ನು ಹೊಂದಿದ, ಸುಷೇಣ-ಚಿತ್ರಾಯುಧರೆಂಬ ಸರ್ಪ ಮತ್ತು ನಕ್ರಗಳನ್ನು ಹೊಂದಿದ, ಜಯದ್ರಥನೆಂಬ ಪರ್ವತವನ್ನು ಹೊಂದಿರುವ, ಪುರುಮಿತ್ರನೆಂಬ ಮಡುವನ್ನು ಹೊಂದಿರುವ, ದುರ್ಮರ್ಶನೆಂಬ ಉದಕನನ್ನು ಹೊಂದಿರುವ, ಶಕುನಿ ಎಂಬ ಪ್ರಪಾತವನ್ನು ಹೊಂದಿರುವ, ಶಸ್ತ್ರಗಳಿಂದ ಕೂಡಿರುವ, ಅಕ್ಷಯವಾದ, ಅತ್ಯಂತ ಪ್ರವೃದ್ಧವಾದ ನನ್ನ ಸೈನ್ಯವನ್ನು ಪ್ರವೇಶಿಸು. ಯಾವಾಗ ಎಲ್ಲ ಬಾಂಧವರನ್ನೂ ಕಳೆದುಕೊಂಡು ಶ್ರಮದಿಂದ ಪ್ರಜ್ಞೆಯನ್ನು ಕಳೆದುಕೊಳ್ಳುವಿಯೋ ಆಗ ನಿನ್ನ ಮನಸ್ಸಿಗೆ ಪಶ್ಚಾತ್ತಾಪ ಉಂಟಾಗುವುದು.

ತದಾ ಮನಸ್ತೇ ತ್ರಿದಿವಾದಿವಾಶುಚೇಃ
ನಿವರ್ತ್ಯತಾಂ ಪಾರ್ಥ ಮಹೀಪ್ರಶಾಸನಾತ್ ।
ರಾಜ್ಯಂ ಪ್ರಶಾಸ್ತುಂ ಹಿ ಸುದುರ್ಲಭಂ ತ್ವಯಾ
ಬುಭೂಷತಾ ಸ್ವರ್ಗ ಇವಾಪತಸ್ವಿನಾ ॥೪೪॥

ಆಗ ಅಶುಚಿಯಾದವನಿಗೆ ಸ್ವರ್ಗದ ಆಸೆಯು ನಿವೃತ್ತವಾಗುವಂತೆ ನಿನ್ನ ಮನಸ್ಸು ಭೂಮಿಯನ್ನು ಆಳುವ ಆಸೆಯಿಂದ ಹಿಂದಿರುಗುವುದು. ಎಲೈ ಪಾರ್ಥನೇ, ತಪಸ್ವಿಯಲ್ಲದವನು ಸ್ವರ್ಗವನ್ನು ಪಡೆಯುವುದು ಹೇಗೆ ದುರ್ಲಭವೋ ಅದರಂತೆ ರಾಜ್ಯವನ್ನು ಆಳುವುದು ನಿನಗೆ ಅತ್ಯಂತ ದುರ್ಲಭವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ಉಲೂಕದೂತಾಗಮನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಐರವತ್ತನೆಯ ಅಧ್ಯಾಯ

ಕೃಷ್ಣ ಮತ್ತು ಪಾಂಡವರಿಂದ ದುರ್ಯೋಧನನಿಗೆ
ಉಲೂಕನ ಮೂಲಕ ಪ್ರತಿಸಂದೇಶ.

ಸಂಜಯಃ

ಉಲೂಕಸ್ತ್ವರ್ಜುನಂ ಭೂಯೋ ಯಥೋಕ್ತಂ ವಾಕ್ಯಮಬ್ರವೀತ್ ।
ಆಶೀವಿಷಮಿವ ಕ್ರುದ್ಧಂ ತುದನ್ ವಾಕ್ಯಶಲಾಕಯಾ ॥೧॥

ಸಂಜಯ– ವಿಷಸರ್ಪದಂತೆ ಕ್ರುದ್ಧನಾದ ಅರ್ಜುನನನ್ನು ತನ್ನ ಮಾತುಗಳೆಂಬ ಸಲಾಕೆಯಿಂದ ತಿವಿಯುತ್ತಾ, ಉಲೂಕನು ಪುನಃ ಅರ್ಜುನನನ್ನು ಕುರಿತು ಮಾತನಾಡಿದನು.

ತಸ್ಯ ತದ್ವಚನಂ ಶ್ರುತ್ವಾ ರುಷಿತಾಃ ಪಾಂಡವಾ ಭೃಶಮ್ ।
ಪ್ರಾಗೇವ ಭೃಶಸಂಕ್ರುದ್ಧಾಃ ಕೈತವ್ಯೇನಾಪಿ ಧರ್ಷಿತಾಃ ॥೨॥

ಮೊದಲೇ ಕೋಪಗೊಂಡಿದ್ದ ಪಾಂಡವರು ಅವನ ಮಾತುಗಳನ್ನು ಕೇಳಿ ಉಲೂಕನಿಂದಲೂ ಅವಮಾನಿತರಾಗಿ ಇನ್ನೂ ಹೆಚ್ಚು ರೋಷವನ್ನು ಹೊಂದಿದರು.

ಆಸನೇಷೂದತಿಷ್ಠಂತ ಬಾಹೂಂಶ್ಚೈವ ಪ್ರಚಿಕ್ಷಿಪುಃ ।
ಆಶೀವಿಷಾ ಇವ ಕ್ರುದ್ಧಾ ವೀಕ್ಷಾಂಚಕ್ರುಃ ಪರಸ್ಪರಮ್ ॥೩॥

ತಮ್ಮ ಆಸನಗಳಿಂದ ಎದ್ದುನಿಂತು ಬಾಹುಗಳನ್ನು ಕೊಡವಿದರು. ಕೋಪಗೊಂಡ ವಿಷಸರ್ಪಗಳಂತೆ ಪರಸ್ಪರವಾಗಿ ನೋಡಿದರು.

ಅವಾಕ್ಷಿರಾ ಭೀಮಸೇನಃ ಸಮುದೈಕ್ಷತ ಕೈತವಮ್ ।
ನೇತ್ರಾಭ್ಯಾಂ ಲೋಹಿತಾಂತಾಭ್ಯಾಮಾಶೀವಿಷ ಇವ ಶ್ವಸನ್ ॥೪॥

ದಂತಾನ್ ದಂತೇಷು ನಿಷ್ಪಿಷ್ಯ ಸೃಕ್ಕಿಣೀಃ ಪರಿಲೇಲಿಹನ್ ।
ತೇಷಾಮಾಕಾರಭಾವಜ್ಞಃ ಕುಂತೀಪುತ್ರೋ ವೃಕೋದರಃ ।
ಉದತಿಷ್ಠತ್ ಸವೇಗೇನ ಕ್ರೋಧೇನ ಪ್ರಜ್ವಲನ್ನಿವ ॥೫॥

ಭೀಮಸೇನನು ಸರ್ಪದಂತೆ ಉಸಿರಾಡುತ್ತಾ ಕೆಂಪಾದ ಅಂಚುಳ್ಳ ತನ್ನ ಕಣ್ಣುಗಳಿಂದ ಉಲೂಕನನ್ನು ನೋಡಿದನು. ಉಲೂಕನ ಮಾತುಗಳ ಅಭಿಪ್ರಾಯವನ್ನು ತಿಳಿದ ಕುಂತೀಪುತ್ರನಾದ ವೃಕೋದರನು ಹಲ್ಲುಗಳನ್ನು ಹಲ್ಲುಗಳಿಂದ ಕಡಿಯುತ್ತಾ, ಕಟಬಾಯಿಯನ್ನು ನಾಲಿಗೆಯಿಂದ ಸವರಿಕೊಳ್ಳುತ್ತಾ, ಕ್ರೋಧದಿಂದ ಉರಿಯುವವನಂತೆ ಶೀಘ್ರವಾಗಿ ಎದ್ದನು.

ಉದ್ಧೃತ್ಯ ಸಹಸಾ ನೇತ್ರೇ ದಂತಾನ್ ಕಟಕಟಾಪ್ಯ ಚ ।
ಹಸ್ತಾನ್ ಹಸ್ತೇಷು ನಿಷ್ಪಿಷ್ಯ ಉಲೂಕಂ ವಾಕ್ಯಮಬ್ರವೀತ್ ॥೬॥

ಶೀಘ್ರವಾಗಿ ಕಣ್ಣುಗಳನ್ನು ಅರಳಿಸಿ, ಹಲ್ಲುಗಳನ್ನು ಕಡಿದು, ಕೈಯಿಂದ ಕೈಯನ್ನು ಹೊಸಕಿ ಉಲೂಕನನ್ನು ಕುರಿತು ಮಾತನಾಡಿದನು.

ಅಶಕ್ತಾನಾಮಿವಾಸ್ಮಾಕಂ ಪ್ರೋತ್ಸಾಹನನಿಮಿತ್ತಜಮ್ ।
ಶ್ರುತಂ ತೇ ವಚನಂ ಮೂರ್ಖ ಯತ್ ತ್ವಾಂ
ದುರ್ಯೋಧನೋಽಬ್ರವೀತ್ ॥೭॥

ಎಲೈ ಮೂರ್ಖನೇ, ಅಶಕ್ತರಾದ ನಮ್ಮನ್ನು ಪ್ರೋತ್ಸಾಹನಗೊಳಿಸುವಂತಿರುವ ನಿನಗೆ ದುರ್ಯೋಧನನು ಹೇಳಿದ ನಿನ್ನ ಮಾತುಗಳನ್ನು ಕೇಳಿದೆನು.

ತನ್ಮೇ ಕಥಯತೋ ಮಂದ ಶೃಣು ವಾಕ್ಯಂ ದುರಾಸದಮ್ ।
ಸರ್ವಕ್ಷತ್ರಸ್ಯ ಮಧ್ಯೇ ತ್ವಂ ಯದ್ ವಕ್ಷ್ಯಸಿ ಸುಯೋಧನಮ್ ॥೮॥

ಶೃಣ್ವತಃ ಸೂತಪುತ್ರಸ್ಯ ಶಕುನೇಸ್ತ್ವಂ ದುರಾತ್ಮನಃ ॥೯॥

ಎಲೈ ಮಂದನೇ, ಸರ್ವಕ್ಷತ್ರಿಯರ ಮಧ್ಯೆ ಸೂತಪುತ್ರನಾದ ಕರ್ಣನು ಮತ್ತು ದುರಾತ್ಮನಾದ ಶಕುನಿಯು ಕೇಳುವಂತೆ ಹೇಳಬೇಕಾದ ನನ್ನ ಅಸಾಧ್ಯವಾದ ಮಾತುಗಳನ್ನು ಕೇಳು.

ಅಸ್ಮಾಭಿಃ ಪ್ರೀತಿಕಾಮೈಸ್ತು ಭ್ರಾತುರ್ಜ್ಯೇಷ್ಠಸ್ಯ ಶಾಸನಾತ್ ।
ಮರ್ಷಿತಂ ತೇ ದುರಾಚಾರ ಸ ತ್ವಂ ನ ಬಹುಮನ್ಯಸೇ ॥೧೦॥

ಎಲೈ ದುರಾಚಾರನೇ, ಅಣ್ಣನ ಶಾಸನದಂತೆ ನಿನ್ನ ಜೊತೆಯಲ್ಲಿ ಪ್ರೀತಿಯನ್ನು ಬಯಸಿದ ನಾವು ನಿನ್ನ ದೋಷಗಳನ್ನು ಮನ್ನಿಸಿದೆವು. ಅದನ್ನು ನೀನು ಗೌರವಿಸುತ್ತಿಲ್ಲ.

ಪ್ರೇಷಿತಶ್ಚ ಹೃಷೀಕೇಶಃ ಶಮಾಕಾಂಕ್ಷೀ ಕುರೂನ್ ಪ್ರತಿ ।
ಕುಲಸ್ಯ ಹಿತಕಾಮೇನ ಧರ್ಮರಾಜೇನ ಧೀಮತಾ ॥೧೧॥

ಮೇಧಾವಿಯಾದ ಧರ್ಮರಾಜನು ಕುಲದ ಹಿತವನ್ನು ಬಯಸಿ, ಸಂಧಿಯನ್ನು ಆಕಾಂಕ್ಷಿಸುತ್ತಾ ಕೌರವರ ಬಳಿಗೆ ಹೃಷೀಕೇಶನನ್ನು ಕಳುಹಿಸಿದನು.

ತ್ವಂ ಕಾಲಚೋದಿತೋ ನೂನಂ ಗಂತುಕಾಮೋ ಯಮಕ್ಷಯಮ್ ।
ಗಚ್ಛಸ್ವಾಹವಮಸ್ಮಾಭಿಸ್ತಚ್ಚ ಶ್ವೋ ಭವಿತಾ ಧ್ರುವಮ್ ॥೧೨॥

ನೀನು ಮೃತ್ಯುಚೋದಿತನಾಗಿ ಯಮಪಟ್ಟಣಕ್ಕೆ ಹೊರಡುವವನಾಗಿದ್ದೀಯೆ. ನಮ್ಮ ಜೊತೆಯಲ್ಲಿ ಯುದ್ಧಕ್ಕೆ ಬಾ. ನಾಳೆ ನಿಶ್ಚಯವಾಗಿ ನಿನ್ನ ಆಸೆಯು ಪೂರ್ಣಗೊಳ್ಳುತ್ತದೆ.

ಮಯಾऽಪಿ ಚ ಪ್ರತಿಜ್ಞಾತೋ ವಧಃ ಸಭ್ರಾತೃಕಸ್ಯ ತೇ ।
ಸ ತಥಾ ಭವಿತಾ ಪಾಪ ನಾತ್ರ ಕಾರ್ಯಾ ವಿಚಾರಣಾ ॥೧೩॥

ನಾನೂ ಸಹ ತಮ್ಮಂದಿರಿಂದ ಕೂಡಿದ ನಿನ್ನ ವಧೆಯನ್ನು ಪ್ರತಿಜ್ಞೆ ಮಾಡಿದ್ದೇನೆ. ಎಲೈ ಪಾಪನೇ, ಅದು ಹಾಗೆಯೇ ಆಗುವುದು. ಇದರಲ್ಲಿ ಸಂಶಯವಿಲ್ಲ.

ವೇಲಾಮತಿಕ್ರಮೇತ್ ಸದ್ಯಃ ಸಾಗರೋ ವರುಣಾಲಯಃ ।
ಪರ್ವತಾಶ್ಚ ವಿಶೀರ್ಯೇಯುರ್ಮಯೋಕ್ತಂ ನ ಮೃಷಾ ಭವೇತ್ ॥೧೪॥

ವರುಣಾಲಯವಾದ ಸಾಗರವು ದಡವನ್ನು ಮೀರಿಹೋದೀತು! ಪರ್ವತಗಳು ಬಿರಿದಾವು! ಆದರೆ ನನ್ನ ಮಾತು ಸುಳ್ಳಾಗಲಾರದು.

ಸಹಾಯಸ್ತೇ ಯದಿ ಯಮಃ ಕುಬೇರೋ ರುದ್ರ ಏವ ವಾ ।
ಯಥಾಪ್ರತಿಜ್ಞಂ ದುರ್ಬುದ್ಧೇ ಪ್ರಕರಿಷ್ಯಂತಿ ಪಾಂಡವಾಃ ॥೧೫॥

ದುಃಶಾಸನಸ್ಯ ರುಧಿರಂ ಪಾತಾ ಚಾಸ್ಮಿ ಯಥೇಪ್ಸಿತಮ್ ॥೧೬॥

ಎಲೈ ದುರ್ಬುದ್ಧಿಯೇ, ನಿನ್ನ ಸಹಾಯಕ್ಕೆ ಯಮನಾಗಲೀ, ಕುಬೇರನಾಗಲೀ, ರುದ್ರನೇ ಆಗಲೀ ಬಂದರೂ ಪಾಂಡವರು ತಮ್ಮ ಪ್ರತಿಜ್ಞೆಗೆ ಅನುಗುಣವಾಗಿ ಕಾರ್ಯವನ್ನು ನೆರವೇರಿಸುವರು. ನನಗೆ ಇಷ್ಟಬಂದಂತೆ ನಾನು ದುಶ್ಶಾಸನನ ರಕ್ತವನ್ನು ಕುಡಿಯುವೆನು.

ಯಶ್ಚೇಹ ಪ್ರತಿಸಂರೋದ್ಧುಂ ಕ್ಷತ್ರಿಯೋ ಮಾಽಭಿಯಾಸ್ಯತಿ ।
ಅಪಿ ಭೀಷ್ಮಂ ಪುರಸ್ಕೃತ್ಯ ತಂ ನೇಷ್ಯಾಮಿ ಯಮಕ್ಷಯಮ್ ॥೧೭॥

ನನ್ನನ್ನು ಪ್ರತಿರೋಧಿಸಲು ಯಾರಾದರೂ ಕ್ಷತ್ರಿಯರು ಎದುರಾದರೆ ಅವರು ಭೀಷ್ಮರನ್ನೂ ಮುಂದೆ ಮಾಡಿಕೊಂಡು ಬಂದರೂ ಸಹ ಅವರನ್ನು ಯಮಲೋಕಕ್ಕೆ ಕಳುಹಿಸುವೆನು.

ಯಚ್ಚೈತದುಕ್ತಂ ವಚನಂ ಮಯಾ ಕ್ಷತ್ರಸ್ಯ ಸಂಸದಿ ।
ಯಥೈತದ್ ಭವಿತಾ ಸತ್ಯಂ ತಥೈವಾತ್ಮಾನಮಾಲಭೇ ॥೧೮॥

ನಾನು ಕ್ಷತ್ರಿಯರ ಸಮೂಹದಲ್ಲಿ ಏನು ಮಾತನಾಡಿದ್ದೇನೋ ಅದು ಹಾಗೆಯೇ ಸತ್ಯವಾಗುತ್ತದೆ ಎಂದು ನನ್ನ ಮೇಲೆ ಆಣೆ ಮಾಡಿ ಹೇಳುತ್ತಿದ್ದೇನೆ.

ಸಂಜಯಃ

ಭೀಮಸೇನವಚಃ ಶ್ರುತ್ವಾ ಸಹದೇವೋಽತ್ಯಮರ್ಷಣಃ ।
ಕ್ರೋಧಸಂರಕ್ತನಯನಸ್ತತೋ ವಾಕ್ಯಮುವಾಚ ಹ ॥೧೯॥

ಸಂಜಯ– ಭೀಮಸೇನನ ಮಾತುಗಳನ್ನು ಕೇಳಿ ಬಹಳ ಕೋಪಗೊಂಡಿದ್ದ ಸಹದೇವನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಆಗ ಮಾತನಾಡಿದನು.

ಶೃಣು ಪಾಪ ವಚೋ ಮಹ್ಯಂ ಯದ್ವಾಚೋ ಹಿ ಪಿತಾ ತ್ವಯಾ ।
ನಾಸ್ಮಾಕಂ ಭವಿತಾ ಭೇದಃ ಕದಾಚಿತ್ ಕುರುಭಿಃ ಸಹ ॥೨೦॥

ಧೃತರಾಷ್ಟ್ರಸ್ಯ ಸಂಬಂಧೋ ಯದಿ ನ ಸ್ಯಾತ್ ತ್ವಯಾ ಸಹ ॥೨೧॥

ತ್ವಂ ತು ಲೋಕವಿನಾಶಾಯ ಧೃತರಾಷ್ಟ್ರಕುಲಸ್ಯ ಚ ।
ಉತ್ಪನ್ನೋ ವೈರಪುರುಷಃ ಸ್ವಕುಲಘ್ನಶ್ಚ ಪಾಪಕೃತ್ ॥೨೨॥

ಎಲೈ ಪಾಪಿಯೇ, ನೀನು ದುರ್ಯೋಧನನಿಗೆ ಹೇಳಬೇಕಾದ ನನ್ನ ಮಾತುಗಳನ್ನು ಕೇಳು. ನಿನಗೆ ಧೃತರಾಷ್ಟ್ರನ ಸಂಬಂಧವಿಲ್ಲದಿದ್ದರೆ ಕುರುಗಳಿಗೂ ಮತ್ತು ನಮಗೂ ವಿರೋಧವುಂಟಾಗುತ್ತಿರಲಿಲ್ಲ. ನೀನಾದರೂ ಧೃತರಾಷ್ಟ್ರನ ಕುಲಕ್ಕೂ ಮತ್ತು ಲೋಕಕ್ಕೂ ವಿನಾಶ ಮಾಡುವುದಕ್ಕಾಗಿ ಸ್ವಕುಲಘ್ನನಾಗಿ, ಪಾಪಕಾರಿಯಾಗಿ, ವೈರಪುರುಷನಾಗಿ ಜನಿಸಿದ್ದೀಯೆ.

ಜನ್ಮಪ್ರಭೃತಿ ಚಾಸ್ಮಾಕಂ ಪಿತಾ ತೇ ಪಾಪಪೂರುಷ ।
ಅಹಿತಾನಿ ನೃಶಂಸಾನಿ ನಿತ್ಯಶಃ ಕರ್ತುಮಿಚ್ಛತಿ ॥೨೩॥

ತಸ್ಯ ವೈರಾನುಷಂಗಸ್ಯ ಗಂತಾಸ್ಮ್ಯಂತಂ ಸುದುರ್ಗಮಮ್ ॥೨೪॥

ಎಲೈ ಪಾಪಪುರುಷನೇ, ನಾವು ಹುಟ್ಟಿದಾಗಿನಿಂದಲೂ ನಿನ್ನ ತಂದೆಯು ನಮಗೆ ಅಹಿತವಾದ ಮತ್ತು ಕ್ರೂರವಾದ ಕಾರ್ಯಗಳನ್ನು ಎಸಗಿದ್ದಾನೆ. ಈ ದಿನ ದುರ್ಗಮವಾದ ಆ ವೈರದ ಪಾರವನ್ನು (ದಡವನ್ನು) ನಾನು ತಲುಪುವೆನು.

ಅಹಮಾದೌ ನಿಹತ್ಯ ತ್ವಾಂ ಶಕುನೇಃ ಸಂಪ್ರಪಶ್ಯತಃ ।
ತತೋಽಸ್ಮಿ ಶಕುನಿಂ ಹಂತಾ ಮಿಷತಾಂ ಸರ್ವಧನ್ವಿನಾಮ್ ॥೨೫॥

ಮೊದಲು ಶಕುನಿಯ ಕಣ್ಣೆದುರಿಗೆ ನಿನ್ನನ್ನು ಕೊಂದು ಮತ್ತು ಎಲ್ಲ ಧನುರ್ಧಾರಿಗಳು ನೋಡುವಂತೆ ಶಕುನಿಯನ್ನು ಕೊಲ್ಲುವೆನು.

ಸಂಜಯಃ

ಭೀಮಸ್ಯ ವಚನಂ ಶ್ರುತ್ವಾ ಸಹದೇವಸ್ಯ ಚೋಭಯೋಃ ।
ಉವಾಚ ಫಲ್ಗುನೋ ವಾಕ್ಯಂ ಭೀಮಸೇನಂ ಸ್ಮಯನ್ನಿವ ॥೨೬॥

ಸಂಜಯ– ಅರ್ಜುನನು ಭೀಮಸೇನ ಮತ್ತು ಸಹದೇವರಿಬ್ಬರ ಮಾತುಗಳನ್ನು ಕೇಳಿ ನಗುವವನಂತೆ ಭೀಮಸೇನನನ್ನು ಕುರಿತು ಮಾತನಾಡಿದನು.

ಭೀಮಸೇನ ನ ತೇ ಸಂತಿ ಯೇಷಾಂ ವೈರಂ ತ್ವಯಾ ಸಹ ।
ಮಂದಾ ಗೃಹೇಷು ಸುಖಿನೋ ಮೃತ್ಯುಪಾಶವಶಂ ಗತಾಃ ॥೨೭॥

ಎಲೈ ಭೀಮಸೇನನೇ, ನೀನು ಯಾರ ಜೊತೆಯಲ್ಲಿ ವೈರವನ್ನು ಮಾಡುತ್ತೀಯೋ ಅವರು ಭೂಮಿಯಲ್ಲಿ ಇರುವುದಿಲ್ಲ. ಮೃತ್ಯುಪಾಶವಶರಾದ ಮಂದರು ಮನೆಗಳಲ್ಲಿ ಸುಖವಾಗಿರುತ್ತಾರೆ.

ಉಲೂಕಶ್ಚ ನ ತೇ ವಾಚ್ಯಃ ಪರುಷಂ ಪುರುಷೋತ್ತಮ ।
ದೂತಾಃ ಕಿಮಪರಾಧ್ಯಂತೇ ಯಥೋಕ್ತಸ್ಯಾನುಭಾಷಿಣಃ ॥೨೮॥

ಎಲೈ ಪುರುಷಶ್ರೇಷ್ಠನೇ, ಉಲೂಕನನ್ನು ಕುರಿತು ನೀನು ಒರಟಾಗಿ ಮಾತನಾಡಬೇಡ. ದೂತರು ಸ್ವಾಮಿಯು ಹೇಳಿದಂತೆ ಮಾತನಾಡುವವರು. ದೂತರಲ್ಲಿ ಯಾವ ಅಪರಾಧವಿದೆ?

ಸಂಜಯಃ

ಆರ್ತಂ ವಾತಾತ್ಮಜಂ ದೃಷ್ಟ್ವಾ ಕ್ರೋಧೇನಾಭಿಹತಂ ಭೃಶಮ್ ।
ಉತ್ಸ್ಮಯನ್ನಿವ ದಾಶಾರ್ಹಃ ಕೈತವಂ ಪ್ರತ್ಯಭಾಷತ ॥೨೯॥

ಸಂಜಯ– ವಾಯುಪುತ್ರನಾದ ಭೀಮಸೇನನು ಬಹಳ ಕ್ರೋಧದಿಂದ ಕೂಡಿ ಆರ್ತನಾಗಿರುವುದನ್ನು ನೋಡಿದ ದಾಶಾರ್ಹನಾದ ಕೃಷ್ಣನು ಮುಗುಳ್ನಗೆಯನ್ನು ಹೊಂದಿದವನಂತೆ ಮಾತನಾಡಿದನು.

ಪ್ರಯಾಹಿ ಶೀಘ್ರಂ ಕೈತವ್ಯ ಬ್ರೂಯಾಶ್ಚೈವ ಸುಯೋಧನಮ್ ।
ಶ್ರುತಂ ವಾಕ್ಯಂ ಗೃಹೀತೋಽರ್ಥೋ ಮತಂ ಯತ್ ತೇ ತಥಾಽಸ್ತು ತತ್ ॥

ಎಲೈ ಕೈತವ್ಯನೇ, ಬೇಗ ಹೋಗಿ ಸುಯೋಧನನಿಗೆ ನಿನ್ನ ವಾಕ್ಯವನ್ನು ಕೇಳಿದೆವು, ಅರ್ಥವು ತಿಳಿಯಿತು, ನಿನ್ನ ಅಭಿಪ್ರಾಯದಂತೆ ಆಗಲಿ ಎಂದು ಹೇಳು.

ಮದ್ವಚಶ್ಚಾಪಿ ಭೂಯಸ್ತೇ ವಕ್ತವ್ಯಃ ಸ ಸುಯೋಧನಃ ।
ಶ್ವ ಇದಾನೀಂ ಪ್ರಪಶ್ಯೇಥಾಃ ಪುರುಷೋ ಭವ ದುರ್ಮತೇ ॥೩೧॥

ಮತ್ತು ನನ್ನ ಮಾತನ್ನೂ ಸಹ ನೀನು ಸುಯೋಧನನಿಗೆ ತಿಳಿಸಬೇಕು– ನಾಳೆ ಏನಾಗುವುದೆಂದು ನೀನು ನೋಡುವಿಯಂತೆ. ಎಲೈ ದುರ್ಮತಿಯೇ, ಪುರುಷನಾಗು.

ಮನ್ಯಸೇ ಯಚ್ಚ ಮೂಢ ತ್ವಂ ನ ಯೋತ್ಸ್ಯತಿ ಜನಾರ್ದನಃ ।
ಸಾರಥ್ಯೇನ ವೃತಃ ಪಾರ್ಥೈರಿತಿ ತ್ವಂ ನ ಬಿಭೇಷಿ ಚ ॥೩೨॥

ಎಲೈ ಮೂಢನೇ, ಜನಾರ್ದನನು ಯುದ್ಧವನ್ನು ಮಾಡುವುದಿಲ್ಲ. ಏಕೆಂದರೆ ಅವನು ಅರ್ಜುನನ ಸಾರಥ್ಯವನ್ನು ವಹಿಸಿದ್ದಾನೆ ಎಂದು ತಿಳಿದು ನೀನು ಹೆದರುತ್ತಿಲ್ಲ.

ಜಘನ್ಯಕಾಲಮಪ್ಯೇತನ್ನ ಭವೇತ್ ಸರ್ವಪಾರ್ಥಿವಾನ್ ।
ನಿರ್ದಹೇಯಮಹಂ ಕ್ರೋಧಾತ್ ತೃಣಾನೀವ ಹುತಾಶನಃ ॥೩೩॥

ಆದರೆ ಅದು ಯಾವ ಕಾಲದಲ್ಲಿಯೂ ಸಾಧ್ಯವಾಗುವುದಿಲ್ಲ. ನಾನು ನನ್ನ ಕ್ರೋಧದಿಂದಲೇ ಅಗ್ನಿಯು ಹುಲ್ಲುಕಡ್ಡಿಗಳನ್ನು ಸುಡುವಂತೆ ಎಲ್ಲಾ ರಾಜರನ್ನೂ ಸುಟ್ಟೇನು.

ಯುಧಿಷ್ಠಿರನಿಯೋಗಾಚ್ಚ ಫಲ್ಗುನಸ್ಯ ಮಹಾತ್ಮನಃ ।
ಕರಿಷ್ಯೇ ಯುದ್ಧ್ಯಮಾನಸ್ಯ ಸಾರಥ್ಯಂ ವಿಜಿತಾತ್ಮನಃ ॥೩೪॥

ಯುಧಿಷ್ಠಿರನ ಆದೇಶದಂತೆ ಯುದ್ಧಮಾಡುವ ಜಿತೇಂದ್ರಿಯನಾದ ಅರ್ಜುನನ ಸಾರಥ್ಯವನ್ನು ಮಾಡುವೆನು.

ಯದ್ಯುತ್ಪತಸಿ ಲೋಕಾಂಸ್ತ್ರೀನ್ ಯದ್ಯಾವಿಶಸಿ ಭೂತಳಮ್ ।
ತತ್ರ ತತ್ರಾರ್ಜುನರಥಂ ಪ್ರಭಾತೇ ದ್ರಕ್ಷ್ಯಸೇಽಗ್ರತಃ ॥೩೫॥

ನೀನು ಹಾರಿ ಮೂರುಲೋಕಗಳಿಗಿಂತ ಮೇಲೆ ಹೋದರೂ ಅಥವಾ ಭೂಮಿಯ ಒಳಗೆ ಪ್ರವೇಶಿಸಿದರೂ ಅಲ್ಲಲ್ಲಿ ನಾಳೆಯ ಪ್ರಾತಃಕಾಲದಲ್ಲಿ ನಿನ್ನ ಮುಂದೆ ಅರ್ಜುನನ ರಥವನ್ನು ನೋಡುವಿ.

ಯಚ್ಚಾಪಿ ಭೀಮಸೇನಸ್ಯ ಮನ್ಯಸೇ ಮೋಘಗರ್ಜಿತಮ್ ।
ದುಃಶಾಸನಸ್ಯ ರುಧಿರಂ ಪೀತಮಿತ್ಯವಧಾರ್ಯತಾಮ್ ॥೩೬॥

ಭೀಮಸೇನನ ಗರ್ಜನೆಯು ವ್ಯರ್ಥವೆಂದು ತಿಳಿದಿರುವಿಯಷ್ಟೆ? ದುಶ್ಶಾಸನನ ರಕ್ತವನ್ನು ಭೀಮಸೇನನು ಕುಡಿದಿದ್ದಾನೆಂದು ತಿಳಿ.

ನ ತ್ವಾಂ ಸಮೀಕ್ಷತೇ ಪಾರ್ಥೋ ನಾಪಿ ರಾಜಾ ಯುಧಿಷ್ಠಿರಃ ।
ನ ಭೀಮಸೇನೋ ನ ಯಮೌ ಪ್ರತಿಕೂಲಪ್ರಭಾಷಿಣಮ್ ॥೩೭॥

ಪ್ರತಿಕೂಲವಾಗಿ ಮಾತನಾಡುವ ನಿನ್ನನ್ನು ಅರ್ಜುನನಾಗಲೀ, ಯುಧಿಷ್ಠಿರನಾಗಲೀ, ಭೀಮಸೇನನಾಗಲೀ, ನಕುಲ-ಸಹದೇವರಾಗಲೀ ಗಣನೆಗೇ ತಂದುಕೊಳ್ಳುವುದಿಲ್ಲ.

ಏವಮುಕ್ತ್ವಾ ಮಹಾಬಾಹುಃ ಕೇಶವೋ ರಾಜಸತ್ತಮ ।
ಪುನರೇವ ಮಹಾಪ್ರಾಜ್ಞಂ ಯುಧಿಷ್ಠಿರಮುದೈಕ್ಷತ ॥೩೮॥

ಎಲೈ ರಾಜಶ್ರೇಷ್ಠನೇ, ಮಹಾಬಾಹುವಾದ ಕೇಶವನು ಹೀಗೆ ಮಾತನಾಡಿ ಪುನಃ ಯುಧಿಷ್ಠಿರನನ್ನು ನೋಡಿದನು.

ಸೃಂಜಯಾನಾಂ ಚ ಸರ್ವೇಷಾಂ ಕೃಷ್ಣಸ್ಯ ಚ ಯಶಸ್ವಿನಃ ।
ದ್ರುಪದಸ್ಯ ಸಪುತ್ರಸ್ಯ ವಿರಾಟಸ್ಯ ಚ ಸನ್ನಿಧೌ ॥೩೯॥

ಭೂಮಿಪಾನಾಂ ಚ ಸರ್ವೇಷಾಂ ಮಧ್ಯೇ ವಾಕ್ಯಂ ಜಗಾದ ಹ ॥೪೦॥

ಎಲ್ಲಸೃಂಜಯರ ಮತ್ತು ಕೀರ್ತಿಶಾಲಿಯಾದ ಕೃಷ್ಣನ, ಪುತ್ರಸಹಿತನಾದ ದ್ರುಪದ ಮತ್ತು ವಿರಾಟನ ಮತ್ತು ಎಲ್ಲಾ ರಾಜರ ಸನ್ನಿಧಿಯಲ್ಲಿ ಉಲೂಕನು ಪುನಃ ಮಾತನಾಡಿದನು.

ಉಲೂಕೋಽಪ್ಯರ್ಜುನಂ ಭೂಯೋ ಯಥೋಕ್ತಂ ವಾಕ್ಯಮಬ್ರವೀತ್ ।
ಆಶೀವಿಷಮಿವ ಕ್ರುದ್ಧಂ ತುದನ್ ವಾಕ್ಯಶಲಾಕಯಾ ॥೪೧॥

ಉಲೂಕನು ಮೊದಲೇ ಕ್ರುದ್ಧನಾಗಿದ್ದ ಅರ್ಜುನನನ್ನು ಮಾತುಗಳೆಂಬ ಸಲಾಕೆಯಿಂದ ಚುಚ್ಚುತ್ತಾ ಪುನಃ ಮಾತನಾಡಿದನು.

ಕೃಷ್ಣಾದೀಂಶ್ಚೈವ ತಾನ್ ಸರ್ವಾನ್ ಯಥೋಕ್ತಂ ವಾಕ್ಯಮಬ್ರವೀತ್ ॥

ಕೃಷ್ಣ ಮೊದಲಾದ ಇವರೆಲ್ಲರನ್ನೂ ಕುರಿತು ದುರ್ಯೋಧನನು ಹೇಳಿದಂತೆ ಮಾತನಾಡಿದನು.

ಉಲೂಕಸ್ಯ ತು ತದ್ವಾಕ್ಯಂ ಪಾಪಂ ದಾರುಣಮೀರಿತಮ್ ।
ಶ್ರುತ್ವಾ ವಿಚುಕ್ರುಭೇ ಪಾರ್ಥೋ ಲಲಾಟಂ ಚಾಪ್ಯಮಾರ್ಜಯತ್ ॥

ಉಲೂಕನು ಹೇಳಿದ ಆ ದಾರುಣವಾದ ಮಾತುಗಳನ್ನು ಕೇಳಿ ಅರ್ಜುನನು ಕೋಪಗೊಂಡು ಹಣೆಯನ್ನು ಒರೆಸಿಕೊಂಡನು.

ತದವಸ್ಥಂ ತದಾ ದೃಷ್ಟ್ವಾ ಪಾರ್ಥಂ ಸಾ ಸಮಿತಿರ್ನೃಪ ।
ನಾಮೃಷ್ಯಂತ ಮಹಾರಾಜ ಪಾಂಡವಾನಾಂ ಮಹಾರಥಾಃ ॥೪೪॥

ಎಲೈ ನೃಪನೇ, ಎಲೈ ರಾಜನೇ, ಆ ಅವಸ್ಥೆಯಲ್ಲಿದ್ದ ಅರ್ಜುನನನ್ನು ನೋಡಿದ ಆ ಸಭೆಯಲ್ಲಿದ್ದ ಪಾಂಡವರ ಮಹಾರಥರು ಅದನ್ನು ಸಹಿಸಲಿಲ್ಲ.

ಅಧಿಕ್ಷೇಪೇಣ ಕೃಷ್ಣಸ್ಯ ಪಾರ್ಥಸ್ಯ ಚ ಮಹಾತ್ಮನಃ ।
ಶ್ರುತ್ವಾ ತೇ ಪುರುಷವ್ಯಾಘ್ರಾಃ ಕ್ರೋಧಾಜ್ಜಜ್ವಲುರಚ್ಯುತಾಃ ॥೪೫॥

ಮಹಾತ್ಮನಾದ ಕೃಷ್ಣನ ಮತ್ತು ಅರ್ಜುನನ ನಿಂದಾವಚನವನ್ನು ಕೇಳಿ, ತಮ್ಮ ಗುಣಗಳಿಂದ ಚ್ಯುತರಾಗದಿದ್ದ ಆ ಪುರುಷವ್ಯಾಘ್ರರು ಕ್ರೋಧದಿಂದ ಪ್ರಜ್ವಲಿಸಿದರು.

ಧೃಷ್ಟದ್ಯುಮ್ನಃ ಶಿಖಂಡೀ ಚ ಸಾತ್ಯಕಿಶ್ಚ ಮಹಾರಥಃ ।
ಕೇಕಯಾ ಭ್ರಾತರಃ ಪಂಚ ರಾಕ್ಷಸಶ್ಚ ಘಟೋತ್ಕಚಃ ॥೪೬॥

ದ್ರೌಪದೇಯಾಭಿಮನ್ಯುಶ್ಚ ಧೃಷ್ಟಕೇತುಶ್ಚ ಪಾರ್ಥಿವಃ ।
ಭೀಮಸೇನಶ್ಚ ವಿಕ್ರಾಂತೋ ಯಮಜೌ ಚ ಮಹಾರಥೌ ॥೪೭॥

ಉತ್ಪೇತುರ್ಹಾರ್ತರಾಷ್ಟ್ರಸ್ಯ ಶ್ರುತ್ವಾ ಪಾಪಸ್ಯ ಭಾಷಿತಮ್ ॥೪೮॥

ಧೃಷ್ಟದ್ಯುಮ್ನ, ಶಿಖಂಡೀ, ಮಹಾರಥನಾದ ಸಾತ್ಯಕಿ, ಐವರು ಕೇಕಯ ಸಹೋದರರು, ರಾಕ್ಷಸನಾದ ಘಟೋತ್ಕಚ, ದ್ರೌಪದಿಯ ಐವರು ಮಕ್ಕಳು, ಅಭಿಮನ್ಯು, ಧೃಷ್ಟಕೇತು, ಪರಾಕ್ರಮಶಾಲಿಯಾದ ಭೀಮ ಮತ್ತು ಮಹಾರಥರಾದ ನಕುಲ-ಸಹದೇವರು ಪಾಪಿಯಾದ ದುರ್ಯೋಧನನ ಮಾತುಗಳನ್ನು ಕೇಳಿ ಆಸನಗಳಿಂದ ಮೇಲೆದ್ದರು.

ಅರ್ಜುನಃ

ಕೃತ್ಸ್ನಾಂ ವಾಸುದೇವಸ್ಯ ಮಮ ಚೈವ ವಿಶೇಷತಃ ।
ಶ್ರುತ್ವಾ ಭವಂತಃ ಸಂರಬ್ಧಾ ಅಸ್ಮಾಕಂ ಹಿತಕಾಮ್ಯಯಾ ॥೪೯॥

ನ ತ್ವಾಂ ಸಮೀಕ್ಷತೇ ಪಾರ್ಥೋ ನಾಪಿ ರಾಜಾ ಯುಧಿಷ್ಠಿರಃ ।
ನ ಭೀಮಸೇನೋ ನ ಯಮೌ ಪ್ರತಿಕೂಲಪ್ರಭಾಷಿಣಮ್ ॥೩೭॥

ಪ್ರತಿಕೂಲವಾಗಿ ಮಾತನಾಡುವ ನಿನ್ನನ್ನು ಅರ್ಜುನನಾಗಲೀ, ಯುಧಿಷ್ಠಿರನಾಗಲೀ, ಭೀಮಸೇನನಾಗಲೀ, ನಕುಲ-ಸಹದೇವರಾಗಲೀ ಗಣನೆಗೇ ತಂದುಕೊಳ್ಳುವುದಿಲ್ಲ.

ಏವಮುಕ್ತ್ವಾ ಮಹಾಬಾಹುಃ ಕೇಶವೋ ರಾಜಸತ್ತಮ ।
ಪುನರೇವ ಮಹಾಪ್ರಾಜ್ಞಂ ಯುಧಿಷ್ಠಿರಮುದೈಕ್ಷತ ॥೩೮॥

ಎಲೈ ರಾಜಶ್ರೇಷ್ಠನೇ, ಮಹಾಬಾಹುವಾದ ಕೇಶವನು ಹೀಗೆ ಮಾತನಾಡಿ ಪುನಃ ಯುಧಿಷ್ಠಿರನನ್ನು ನೋಡಿದನು.

ಸೃಂಜಯಾನಾಂ ಚ ಸರ್ವೇಷಾಂ ಕೃಷ್ಣಸ್ಯ ಚ ಯಶಸ್ವಿನಃ ।
ದ್ರುಪದಸ್ಯ ಸಪುತ್ರಸ್ಯ ವಿರಾಟಸ್ಯ ಚ ಸನ್ನಿಧೌ ॥೩೯॥

ಭೂಮಿಪಾನಾಂ ಚ ಸರ್ವೇಷಾಂ ಮಧ್ಯೇ ವಾಕ್ಯಂ ಜಗಾದ ಹ ॥೪೦॥

ಎಲ್ಲ ಸೃಂಜಯರ ಮತ್ತು ಕೀರ್ತಿಶಾಲಿಯಾದ ಕೃಷ್ಣನ, ಪುತ್ರಸಹಿತನಾದ ದ್ರುಪದ ಮತ್ತು ವಿರಾಟನ ಮತ್ತು ಎಲ್ಲಾ ರಾಜರ ಸನ್ನಿಧಿಯಲ್ಲಿ ಉಲೂಕನು ಪುನಃ ಮಾತನಾಡಿದನು.

ಉಲೂಕೋಽಪ್ಯರ್ಜುನಂ ಭೂಯೋ ಯಥೋಕ್ತಂ ವಾಕ್ಯಮಬ್ರವೀತ್ ।
ಆಶೀವಿಷಮಿವ ಕ್ರುದ್ಧಂ ತುದನ್ ವಾಕ್ಯಶಲಾಕಯಾ ॥೪೧॥

ಉಲೂಕನು ಮೊದಲೇ ಕ್ರುದ್ಧನಾಗಿದ್ದ ಅರ್ಜುನನನ್ನು ಮಾತುಗಳೆಂಬ ಸಲಾಕೆಯಿಂದ ಚುಚ್ಚುತ್ತಾ ಪುನಃ ಮಾತನಾಡಿದನು.

ಕೃಷ್ಣಾದೀಂಶ್ಚೈವ ತಾನ್ ಸರ್ವಾನ್ ಯಥೋಕ್ತಂ ವಾಕ್ಯಮಬ್ರವೀತ್ ॥

ಕೃಷ್ಣ ಮೊದಲಾದ ಇವರೆಲ್ಲರನ್ನೂ ಕುರಿತು ದುರ್ಯೋಧನನು ಹೇಳಿದಂತೆ ಮಾತನಾಡಿದನು.

ಉಲೂಕಸ್ಯ ತು ತದ್ವಾಕ್ಯಂ ಪಾಪಂ ದಾರುಣಮೀರಿತಮ್ ।
ಶ್ರುತ್ವಾ ವಿಚುಕ್ಷುಭೇ ಪಾರ್ಥೋ ಲಲಾಟಂ ಚಾಪ್ಯಮಾರ್ಜಯತ್ ॥

ಉಲೂಕನು ಹೇಳಿದ ಆ ದಾರುಣವಾದ ಮಾತುಗಳನ್ನು ಕೇಳಿ ಅರ್ಜುನನು ಕೋಪಗೊಂಡು ಹಣೆಯನ್ನು ಒರೆಸಿಕೊಂಡನು.

ತದವಸ್ಥಂ ತದಾ ದೃಷ್ಟ್ವಾ ಪಾರ್ಥಂ ಸಾ ಸಮಿತಿರ್ನೃಪ ।
ನಾಮೃಷ್ಯಂತ ಮಹಾರಾಜ ಪಾಂಡವಾನಾಂ ಮಹಾರಥಾಃ ॥೪೪॥

ಎಲೈ ನೃಪನೇ, ಎಲೈ ರಾಜನೇ, ಆ ಅವಸ್ಥೆಯಲ್ಲಿದ್ದ ಅರ್ಜುನನನ್ನು ನೋಡಿದ ಆ ಸಭೆಯಲ್ಲಿದ್ದ ಪಾಂಡವರ ಮಹಾರಥರು ಅದನ್ನು ಸಹಿಸಲಿಲ್ಲ.

ಅಧಿಕ್ಷೇಪೇಣ ಕೃಷ್ಣಸ್ಯ ಪಾರ್ಥಸ್ಯ ಚ ಮಹಾತ್ಮನಃ ।
ಶ್ರುತ್ವಾ ತೇ ಪುರುಷವ್ಯಾಘ್ರಾಃ ಕ್ರೋಧಾಜ್ಜಜ್ವಲುರಚ್ಯುತಾಃ ॥೪೫॥

ಮಹಾತ್ಮನಾದ ಕೃಷ್ಣನ ಮತ್ತು ಅರ್ಜುನನ ನಿಂದಾವಚನವನ್ನು ಕೇಳಿ, ತಮ್ಮ ಗುಣಗಳಿಂದ ಚ್ಯುತರಾಗದಿದ್ದ ಆ ಪುರುಷವ್ಯಾಘ್ರರು ಕ್ರೋಧದಿಂದ ಪ್ರಜ್ವಲಿಸಿದರು.

ಧೃಷ್ಟದ್ಯುಮ್ನಃ ಶಿಖಂಡೀ ಚ ಸಾತ್ಯಕಿಶ್ಚ ಮಹಾರಥಃ ।
ಕೇಕಯಾ ಭ್ರಾತರಃ ಪಂಚ ರಾಕ್ಷಸಶ್ಚ ಘಟೋತ್ಕಚಃ ॥೪೬॥

ದ್ರೌಪದೇಯಾಭಿಮನ್ಯುಶ್ಚ ಧೃಷ್ಟಕೇತುಶ್ಚ ಪಾರ್ಥಿವಃ ।
ಭೀಮಸೇನಶ್ಚ ವಿಕ್ರಾಂತೋ ಯಮಜೌ ಚ ಮಹಾರಥೌ ॥೪೭॥

ಉತ್ಪೇತುರ್ಧಾರ್ತರಾಷ್ಟ್ರಸ್ಯ ಶ್ರುತ್ವಾ ಪಾಪಸ್ಯ ಭಾಷಿತಮ್ ॥೪೮॥

ಧೃಷ್ಟದ್ಯುಮ್ನ, ಶಿಖಂಡೀ, ಮಹಾರಥನಾದ ಸಾತ್ಯಕಿ, ಐವರು ಕೇಕಯ ಸಹೋದರರು, ರಾಕ್ಷಸನಾದ ಘಟೋತ್ಕಚ, ದ್ರೌಪದಿಯ ಐವರು ಮಕ್ಕಳು, ಅಭಿಮನ್ಯು, ಧೃಷ್ಟಕೇತು, ಪರಾಕ್ರಮಶಾಲಿಯಾದ ಭೀಮ ಮತ್ತು ಮಹಾರಥರಾದ ನಕುಲ-ಸಹದೇವರು ಪಾಪಿಯಾದ ದುರ್ಯೋಧನನ ಮಾತುಗಳನ್ನು ಕೇಳಿ ಆಸನಗಳಿಂದ ಮೇಲೆದ್ದರು.

ಅರ್ಜುನಃ

ಕುತ್ಸನಾಂ ವಾಸುದೇವಸ್ಯ ಮಮ ಚೈವ ವಿಶೇಷತಃ ।
ಶ್ರುತ್ವಾ ಭವಂತಃ ಸಂರಬ್ಧಾ ಅಸ್ಮಾಕಂ ಹಿತಕಾಮ್ಯಯಾ ॥೪೯॥

ಅರ್ಜುನ– ಕೃಷ್ಣನ ಮತ್ತು ನನ್ನ ನಿಂದಾವಚನಗಳನ್ನು ಕೇಳಿ, ನಮ್ಮ ಹಿತವನ್ನು ಬಯಸಿ ನೀವೆಲ್ಲರೂ ಕೋಪಗೊಂಡಿದ್ದೀರಿ.

ಪ್ರಭಾವಾದ್ ವಾಸುದೇವಸ್ಯ ಭವತಾಂ ಚ ಪ್ರಯತ್ನತಃ ।
ಸಮಸ್ತಂ ಪಾರ್ಥಿವಂ ಕ್ಷತ್ರಂ ಸರ್ವಂ ನ ಗಣಯಾಮ್ಯಹಮ್ ॥೫೦॥

ಕೃಷ್ಣನ ಅನುಗ್ರಹದಿಂದ ಮತ್ತು ನಿಮ್ಮೆಲ್ಲರ ಸಹಾಯದಿಂದ ನಾನು ಸಮಸ್ತವಾದ ಕ್ಷತ್ರಿಯ ಸಮೂಹವನ್ನು ಗಣನೆಗೇ ತಂದುಕೊಳ್ಳುವುದಿಲ್ಲ.

ಭವದ್ಭಿಃ ಸಮನುಜ್ಞಾತೋ ವಾಕ್ಯಮಸ್ಯ ಯದುತ್ತರಮ್ ।
ಉಲೂಕೇ ಪ್ರಾಪಯಿಷ್ಯಾಮಿ ಯದ್ ವಕ್ಷ್ಯಾಮಿ ಸುಯೋಧನಮ್ ॥

ನಿಮ್ಮ ಅನುಮತಿಯನ್ನು ಪಡೆದು, ಅವನ ಮಾತಿಗೆ ಉತ್ತರವಾಗಿ ಸುಯೋಧನನಿಗೆ ಹೇಳಬೇಕಾದ ಮಾತುಗಳನ್ನು ಉಲೂಕನ ಮೂಲಕ ಕಳುಹಿಸುವೆನು.

ಶ್ವೋ ಭೂತೇ ಕಥಿತಸ್ಯಾಸ್ಯ ಪ್ರತಿವಾಕ್ಯಂ ಚಮೂಮುಖೇ ।
ಗಾಂಡೀವೇನಾಭಿಧಾಸ್ಯಾಮಿ ಕ್ಲೀಬಾ ಹಿ ವಚನೋತ್ತರಾಃ ॥೫೨॥

ನಾಳೆಯ ದಿವಸ ಸೈನ್ಯಮುಖದಲ್ಲಿ ಗಾಂಡೀವ ಧನುಸ್ಸಿನಿಂದ ನಿನ್ನ ಮಾತುಗಳಿಗೆ ಪ್ರತ್ಯುತ್ತರವನ್ನು ಕೊಡುವೆನು. ಕೇವಲ ಮಾತನಾಡುವವರು ನಪುಂಸಕರು.

ಸಂಜಯಃ

ತತಸ್ತೇ ಪಾರ್ಥಿವಾಃ ಸರ್ವೇ ಪ್ರಶಶಂಸುರ್ಧನಂಜಯಮ್ ।
ತೇನ ವಾಕ್ಯೋಪಚಾರೇಣ ವಿಸ್ಮಿತಾ ರಾಜಸತ್ತಮಾಃ ॥೫೩॥

ಸಂಜಯ– ಆಗ ಅರ್ಜುನನ ಆ ವಾಕ್ಯಗಳಿಂದ ವಿಸ್ಮಿತರಾದ ಆ ರಾಜಶ್ರೇಷ್ಠರೆಲ್ಲರೂ ಅವನನ್ನು ಪ್ರಶಂಸಿಸಿದರು.

ಅನುನೀಯ ಚ ತಾನ್ ಸರ್ವಾನ್ ಯಥಾಯೋಗ್ಯಂ ಯಥಾವಯಃ ।
ಧರ್ಮರಾಜಂ ತದಾ ವಾಕ್ಯಂ ತತ್ ಪ್ರಾಪ್ತಂ ಪ್ರತ್ಯಭಾಷತ ॥೫೪॥

ಅರ್ಜುನನು ಅವರ ಯೋಗ್ಯತೆ ಮತ್ತು ವಯಸ್ಸಿಗೆ ತಕ್ಕಂತೆ ಎಲ್ಲರನ್ನೂ ಸಮಾಧಾನಗೊಳಿಸಿ, ಧರ್ಮರಾಜನನ್ನು ಕುರಿತು ಆ ಸಮಯಕ್ಕೆ ಉಚಿತವಾದ ಮಾತನ್ನು ಆಡಿದನು.

ಅರ್ಜುನಃ

ಆತ್ಮಾನಮವಮನ್ವಾನೋ ನಹಿ ಸ್ಯಾತ್ ಪಾರ್ಥಿವೋತ್ತಮಃ ।
ತತ್ರೋತ್ತರಂ ಪ್ರವಕ್ಷ್ಯಾಮಿ ತವ ಶುಶ್ರೂಷಣೇ ರತಃ ॥೫೫॥

ಅರ್ಜುನ– ತನ್ನನ್ನು ಅವಮಾನಕ್ಕೆ ಗುರಿಯಾಗಿಸಿಕೊಂಡವನು ಶ್ರೇಷ್ಠನಾದ ರಾಜನಾಗಲಾರನು. ನಿನ್ನಸೇವೆಯಲ್ಲಿರತನಾಗಿ ದುರ್ಯೋಧನನ ಮಾತುಗಳಿಗೆ ನಾನು ನಾಳೆ ಉತ್ತರವನ್ನು ಕೊಡುವೆನು.

ಸಂಜಯಃ

ದುರ್ಯೋಧನಸ್ಯ ತದ್ವಾಕ್ಯಂ ನಿಶಮ್ಯ ಭರತರ್ಷಭಃ ।
ಅತಿಲೋಹಿತನೇತ್ರಾಭ್ಯಾಮ್ ಆಶೀವಿಷ ಇವ ಶ್ವಸನ್ ॥೫೬॥

ಸ್ಮಯಮಾನ ಇವ ಕ್ರೋಧಾತ್ ಸೃಕ್ಕಿಣೇ ಪರಿಲೇಲಿಹನ್ ।
ಜನಾರ್ದನಮಭಿಪ್ರೇಕ್ಷ್ಯ ಗುಡಾಕೇಶೋ ಮಹಾಯಶಾಃ ॥೫೭॥

ಅಭ್ಯಭಾಷತ ಕೈತವ್ಯಂ ಪ್ರಗೃಹ್ಯ ವಿಪುಲೌ ಭುಜೌ ।
ಉಲೂಕಂ ಭರತಶ್ರೇಷ್ಠ ಸಾಮಪೂರ್ವಮಥೋರ್ಜಿತಮ್ ॥೫೮॥

ಸಂಜಯ– ಎಲೈ ಭರತಶ್ರೇಷ್ಠನೇ, ದುರ್ಯೋಧನನ ಆ ಮಾತುಗಳನ್ನು ಕೇಳಿ ಭರತರ್ಷಭನಾದ ಅರ್ಜುನನು ಬಹಳ ಕೆಂಪಾದ ಕಣ್ಣುಗಳನ್ನು ಹೊಂದಿ, ಸರ್ಪದಂತೆ ಉಸಿರನ್ನು ಬಿಡುತ್ತಾ, ಕ್ರೋಧದಿಂದ ನಗುತ್ತಾ, ಕಟಬಾಯಿಯನ್ನು ಸವರಿಕೊಳ್ಳುತ್ತಾ, ಕೃಷ್ಣನನ್ನು ನೋಡಿ, ತನ್ನ ಎರಡು ವಿಪುಲವಾದ ಭುಜಗಳನ್ನು ಎತ್ತಿ ಮಹಾಕೀರ್ತಿವಂತನೂ, ಗುಡಾಕೇಶನೂ ಆದ ಅವನು ಉಲೂಕನನ್ನು ಕುರಿತು ಮೊದಲು ಮೃದುವಾಗಿಯೂ ಅನಂತರ ಉಗ್ರವಾಗಿಯೂ ಮಾತನಾಡಿದನು.

ಉಲೂಕ ಗಚ್ಛ ಕೈತವ್ಯ ಬ್ರೂಹಿ ತಾತ ಸುಯೋಧನಮ್ ।
ಕೃತಘ್ನಂ ವೈರಪುರುಷಂ ದುರ್ಮತಿಂ ಕುಲಪಾಂಸನಮ್ ॥೫೯॥

ಎಲೈ ಕೈತವ್ಯನಾದ ಉಲೂಕನೇ, ಪ್ರೀತಿಪಾತ್ರನೇ, ಕೃತಘ್ನನೂ, ವೈರಪುರುಷನೂ, ದುರ್ಮತಿಯೂ, ಕುಲಪಾಂಸನನೂ ಆದ ಸುಯೋಧನನ ಬಳಿಗೆ ಹೋಗಿ (ಇಲ್ಲಿ ನಡೆದುದನ್ನು ಹೇಳುವವನಾಗು).

ಪಾಂಡವೇಷು ಯಥಾ ಪಾಪ ನಿತ್ಯಂ ಜಿಹ್ಮಂ ಪ್ರವರ್ತಸೇ ॥೬೦॥

ಸ್ವವೀರ್ಯಂ ಸಮ್ಯಗಾಶ್ರಿತ್ಯ ಯಃ ಸಮಾಹ್ವಯತೇ ಪರಾನ್ ।
ಅಭೀತಃ ಪೂರಯನ್ ವಾಕ್ಯಮೇಷ ವೈ ಕ್ಷತ್ರಿಯಃ ಪುಮಾನ್ ॥೬೧॥

ಎಲೈ ಪಾಪಿಯೇ, ನೀನು ಪಾಂಡವರ ವಿಷಯದಲ್ಲಿ ಯಾವಾಗಲೂ ಕಪಟದಿಂದ ವರ್ತಿಸುತ್ತಿದ್ದೀಯೆ. ಯಾವನು ತನ್ನ ಸಾಮರ್ಥ್ಯವನ್ನು ಆಶ್ರಯಿಸಿ, ಶತ್ರುಗಳನ್ನು ಯುದ್ಧಕ್ಕೆ ಆಹ್ವಾನಿಸಿ, ಭಯವಿಲ್ಲದೆ ತನ್ನ ಪ್ರತಿಜ್ಞೆಯನ್ನು ನೆರವೇರಿಸುತ್ತಾನೆಯೋ ಅವನು ಕ್ಷತ್ರಿಯನಾದ ಪುರುಷ.

ಪರವೀರ್ಯಂ ಸಮಾಶ್ರಿತ್ಯ ಯಃ ಸಮಾಹ್ವಯತೇ ಪರಾನ್ ।
ಕ್ಷತ್ರಬಂಧುರಶಕ್ತತ್ವಾತ್ ಲೋಕೇ ಸ ಪುರುಷಾಧಮಃ ॥೬೨॥

ಯಾವನು ತಾನು ಅಶಕ್ತನಾದುದರಿಂದ ಇನ್ನೊಬ್ಬರ ಸಾಮರ್ಥ್ಯವನ್ನು ಆಶ್ರಯಿಸಿ ಶತ್ರುಗಳನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆಯೋ ಅಂತಹ ಕ್ಷತ್ರಬಂಧುವು ಲೋಕದಲ್ಲಿ ಪುರುಷಾಧಮನೆನಿಸುತ್ತಾನೆ.

ಸ ಪಾಪಃ ಕ್ಷತ್ರಿಯೋ ಭೂತ್ವಾ ಅಸ್ಮಾನಾಹೂಯ ಸಂಯುಗೇ ।
ಮಾನ್ಯಾಮಾನ್ಯಾನ್ ಪುರಸ್ಕೃತ್ಯ ಯುದ್ಧಂ ಮಾऽಗಾಃ ಕುಲಾಧಮ ॥೬೩॥

ಅಂತಹ ಪಾಪಿಕ್ಷತ್ರಿಯನಾದ ನೀನು ಯುದ್ಧಕ್ಕೆ ನಮ್ಮನ್ನು ಆಹ್ವಾನಿಸಿ, ಎಲೈ ಕುಲಾಧಮನೇ, ಮಾನ್ಯರನ್ನೂ, ಅಮಾನ್ಯರನ್ನೂ ಮುಂದೆ ಮಾಡಿಕೊಂಡು ಯುದ್ಧಕ್ಕೆ ಬರಬೇಡ.

ಆತ್ಮವೀರ್ಯಂ ಸಮಾಶ್ರಿತ್ಯ ಭೃತ್ಯವೀರ್ಯಂ ಚ ಕೌರವ ।
ಆಹ್ವಯಸ್ವ ರಣೇ ಪಾರ್ಥಾನ್ ಸರ್ವಥಾ ಕ್ಷತ್ರಿಯೋ ಭವ ॥೬೪॥

ಎಲೈ ಕೌರವನೇ, ನಿನ್ನ ಸಾಮರ್ಥ್ಯವನ್ನು, ನಿನ್ನ ಭೃತ್ಯರ ಸಾಮರ್ಥ್ಯವನ್ನು ಆಶ್ರಯಿಸಿ ಯುದ್ಧಕ್ಕೆ ಪಾಂಡವರನ್ನು ಆಹ್ವಾನಿಸು. ಸರ್ವಥಾ ಕ್ಷತ್ರಿಯನಾಗು.

ಪರವೀರ್ಯಂ ಸಮಾಶ್ರಿತ್ಯ ಯಃ ಸಮಾಹ್ವಯತೇ ಪರಾನ್ ।
ಅಶಕ್ತಃ ಸ್ವಯಮಾದಾತುಮೇತದೇವ ನಪುಂಸಕಮ್ ॥೬೫॥

ತಾನು ಸ್ವತಃ ಶತ್ರುಗಳನ್ನು ಎದುರಿಸಲು ಅಶಕ್ತನಾಗಿ, ಇನ್ನೊಬ್ಬರ ಸಾಮರ್ಥ್ಯವನ್ನು ಆಶ್ರಯಿಸಿ ಯಾವನು ಶತ್ರುಗಳನ್ನು ಆಹ್ವಾನಿಸುತ್ತಾನೋ ಅದನ್ನೇ ನಪುಂಸಕತ್ವವೆಂದು ಹೇಳುತ್ತಾರೆ.

ಯಸ್ತ್ವಂ ಪರೇಷಾಂ ವೀರ್ಯೇಣ ಆತ್ಮಾನಂ ಬಹುಮನ್ಯಸೇ ।
ಕಥಮೇವಮಶಕ್ತಸ್ತ್ವಮಸ್ಮಾನ್ ಸಮಭಿಗರ್ಜಸಿ ॥೬೬॥

ನೀನು ಇನ್ನೊಬ್ಬರ ಸಾಮರ್ಥ್ಯವನ್ನು ಅವಲಂಬಿಸಿ ನಿನ್ನನ್ನು ದೊಡ್ಡವನೆಂದು ತಿಳಿಯುತ್ತಿದ್ದೀಯೆ. ಹೀಗೆ ಅಶಕ್ತನಾದ ನೀನು ನಮ್ಮನ್ನು ಕುರಿತು ಏಕೆ ಗರ್ಜಿಸುತ್ತಿದ್ದೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ಉಲೂಕದೂತಾಗಮನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂದನೆಯ ಅಧ್ಯಾಯ

ಅರ್ಜುನನಿಂದ ಉಲೂಕನ ಮೂಲಕ ದುರ್ಯೋಧನನಿಗೆ ಪ್ರತಿಸಂದೇಶ.
ಕರ್ಣನಿಂದ ಯುದ್ಧಸನ್ನಾಹದ ಉದ್ಘೋಷಣೆ.

ಸಂಜಯಃ

ದುರ್ಯೋಧನಸ್ಯ ತದ್ವಾಕ್ಯಂ ನಿಶಮ್ಯ ಭರತರ್ಷಭಃ ।
ನೇತ್ರಾಭ್ಯಾಮತಿತಾಮ್ರಾಭ್ಯಾಂ ಕೈತವ್ಯಂ ಸಮದೃಶ್ಯತ ॥೧॥

ಸಂಜಯ– ದುರ್ಯೋಧನನ ಆ ಮಾತುಗಳನ್ನು ಕೇಳಿದ ಭರತಶ್ರೇಷ್ಠನಾದ ಅರ್ಜುನನು ಬಹಳ ಕೆಂಪಾದ ಕಣ್ಣುಗಳಿಂದ ಉಲೂಕನನ್ನು ನೋಡಿದನು.

ಸ ಕೇಶವಮಭಿಪ್ರೇಕ್ಷ್ಯ ಗುಡಾಕೇಶೋ ಮಹಾಯಶಾಃ ।
ಅಭ್ಯಭಾಷತ ಕೈತವ್ಯಂ ಪ್ರಗೃಹ್ಯ ವಿಪುಲಂ ಭುಜಮ್ ॥೨॥

ಮಹಾಕೀರ್ತಿವಂತನಾದ ಗುಡಾಕೇಶನು ಕೃಷ್ಣನನ್ನು ನೋಡುತ್ತಾ ಉಲೂಕನನ್ನು ಕುರಿತು ತನ್ನ ಎರಡು ವಿಪುಲವಾದ ಭುಜಗಳನ್ನು ಎತ್ತಿ ಮಾತನಾಡಿದನು.

ಸ್ವವೀರ್ಯಂ ಯಃ ಸಮಾಶ್ರಿತ್ಯ ಸಮಾಹ್ವಯತಿ ವೈ ಪರಾನ್ ।
ಅಭೀತೋ ಯುದ್ಧ್ಯತೇ ಶತ್ರೂನ್ ಸ ವೈ ಪುರುಷ ಉಚ್ಯತೇ ॥೩॥

ತನ್ನ ಸಾಮರ್ಥ್ಯವನ್ನು ಅವಲಂಬಿಸಿ ಯಾರು ಅಭೀತನಾಗಿ ಶತ್ರುಗಳನ್ನು ಯುದ್ಧಕ್ಕೆ ಕರೆಯುತ್ತಾನೆಯೋ ಅವನು ಪುರುಷನೆನಿಸುತ್ತಾನೆ.

ಪರವೀರ್ಯಂ ಸಮಾಶ್ರಿತ್ಯ ಯಃ ಸಮಾಹ್ವಯತೇ ಪರಾನ್ ।
ಕ್ಷತ್ರಬಂಧುರಶಕ್ತತ್ವಾಲ್ಲೋಕೇ ಸ ಪುರುಷಾಧಮಃ ॥೪॥

ತಾನು ಅಶಕ್ತನಾದುದರಿಂದ ಇನ್ನೊಬ್ಬರ ಸಾಮರ್ಥ್ಯವನ್ನು ಅವಲಂಬಿಸಿ ಯಾವನು ಶತ್ರುಗಳನ್ನು ಯುದ್ಧಕ್ಕೆ ಕರೆಯುತ್ತಾನೆಯೋ ಅಂತಹ ಕ್ಷತ್ರಬಂಧುವು ಪುರುಷಾಧಮನೆನಿಸುತ್ತಾನೆ.

ಅರ್ಜುನಃ

ಸ ತ್ವಂ ಪರೇಷಾಂ ವೀರ್ಯೇಣ ಮನ್ಯಸೇ ವೀರ್ಯಮಾತ್ಮನಃ ।
ಸ್ವಯಂ ಕಾಪುರುಷೋ ಮೂಢ ಪರಾಂಶ್ಚ ಕ್ಷೇಪ್ತುಮಿಚ್ಛಸಿ ॥೫॥

ಅರ್ಜುನ– ಅಂತಹ ನೀನು ಇನ್ನೊಬ್ಬರ ಸಾಮರ್ಥ್ಯದಿಂದ ನೀನು ಸಮರ್ಥನೆಂದು ತಿಳಿದಿದ್ದೀಯೆ. ಎಲೈ ಮೂಢನೇ, ನೀನು ಸ್ವತಃ ತುಚ್ಛಪುರುಷ. ಇನ್ನೊಬ್ಬರನ್ನು ನಿಂದಿಸಲು ಬಯಸುತ್ತೀಯೆ.

ಯಸ್ತ್ವಂ ವೃದ್ಧಂ ಸರ್ವರಾಜ್ಞಾಂ ಹಿತಬುದ್ಧಿಂ ಜಿತೇಂದ್ರಿಯಮ್ ।
ಮರಣಾಯ ಮಹಾಪ್ರಾಜ್ಞಂ ದೀಕ್ಷಯಿತ್ವಾ ವಿಕತ್ಥಸೇ ॥೬॥

ಭಾವಸ್ತೇ ವಿದಿತೋಽಸ್ಮಾಭಿರ್ದುರ್ಬುದ್ಧೇ ಕುಲಪಾಂಸನ ।
ನ ಹನಿಷ್ಯಂತಿ ಗಾಂಗೇಯಂ ಪಾಂಡವಾ ಘೃಣಯೇತಿ ಹ ॥೭॥

ಎಲೈ ದುರ್ಬುದ್ಧಿಯೇ, ಎಲೈ ಕುಲನಾಶನನೇ, ಯಾವ ನೀನು ಎಲ್ಲ ರಾಜರಿಗಿಂತಲೂ ವೃದ್ಧನೂ, ಹಿತಬುದ್ಧಿಯುಳ್ಳವನೂ, ಜಿತೇಂದ್ರಿಯನೂ, ಮಹಾಪ್ರಾಜ್ಞನೂ ಆದ ಭೀಷ್ಮರನ್ನು ಸೇನಾಪತಿಯಾಗಿ ಮರಣಕ್ಕಾಗಿ ದೀಕ್ಷೆಗೊಳಿಸಿ ಗರ್ವದ ಮಾತುಗಳನ್ನು ಆಡುತ್ತಿದ್ದೀಯಷ್ಟೆ? ಪಾಂಡವರು ಕರುಣೆಯಿಂದ ಕೂಡಿದವರಾಗಿ ಭೀಷ್ಮರನ್ನು ಕೊಲ್ಲುವುದಿಲ್ಲ ಎಂಬ ನಿನ್ನ ಅಭಿಪ್ರಾಯವು ನಮಗೆ ತಿಳಿದಿದೆ.

ಯಸ್ಯ ವೀರ್ಯಂ ಸಮಾಶ್ರಿತ್ಯ ಧಾರ್ತರಾಷ್ಟ್ರ ವಿಕತ್ಥಸೇ ।
ಹಂತಾಸ್ಮಿ ಪ್ರಥಮಂ ಭೀಷ್ಮಂ ಮಿಷತಾಂ ಸರ್ವಧನ್ವಿನಾಮ್ ॥೮॥

ಎಲೈ ಧೃತರಾಷ್ಟ್ರಪುತ್ರನೇ, ಯಾವ ಭೀಷ್ಮರ ಸಾಮರ್ಥ್ಯವನ್ನು ಅವಲಂಬಿಸಿ ಪ್ರತಾಪದ ಮಾತುಗಳನ್ನು ಆಡುತ್ತಿದ್ದೀಯೋ ಅಂತಹ ಭೀಷ್ಮರನ್ನು ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆಯೇ ನಾನು ಮೊದಲು ಕೊಲ್ಲುವೆನು.

ಕೈತವ್ಯ ಗತ್ವಾ ಭರತಾನ್ ಸಮೇತ್ಯ
ಸುಯೋಧನಂ ಧಾರ್ತರಾಷ್ಟ್ರಂ ಬ್ರವೀಹಿ ।
ತಥೇತ್ಯುವಾಚಾರ್ಜುನಃ ಸವ್ಯಸಾಚೀ
ನಿಶಾವ್ಯಪಾಯೇ ಭವಿತಾ ವಿಮರ್ದಃ ॥೯॥

ಎಲೈ ಕೈತವ್ಯನೇ, ಭರತರ ಸಮೀಪಕ್ಕೆ ಹೋಗಿ ಧೃತರಾಷ್ಟ್ರಪುತ್ರನಾದ ದುರ್ಯೋಧನನನ್ನು ಕುರಿತು ರಾತ್ರಿಯು ಕಳೆದ ಮೇಲೆ ಸಂಘರ್ಷ ಉಂಟಾಗುವುದು ಎಂದು ಹೇಳುವವನಾಗು ಎಂದು ಸವ್ಯಸಾಚಿಯಾದ ಅರ್ಜುನನು ಹೇಳಿದನು.

ಯತ್ ತ್ವಾಽಬ್ರವೀದ್ ವಾಕ್ಯಮದೀನಸತ್ವೋ
ಮಧ್ಯೇ ಕುರೂನ್ ಹರ್ಷಯನ್ ಸತ್ಯಸಂಧಃ ।
ಅಹಂ ಹಂತಾ ಸೃಂಜಯಾನಾಮನೀಕಂ
ಸಾಲ್ವೇಯಕಾಂಶ್ಚೇತಿ ಮಮೈಷ ಭಾರಃ ॥೧೦॥

ಸಂಜಯ– ದುರ್ಯೋಧನನ ಆ ಮಾತುಗಳನ್ನು ಕೇಳಿದ ಭರತಶ್ರೇಷ್ಠನಾದ ಅರ್ಜುನನು ಬಹಳ ಕೆಂಪಾದ ಕಣ್ಣುಗಳಿಂದ ಉಲೂಕನನ್ನು ನೋಡಿದನು.

ಸ ಕೇಶವಮಭಿಪ್ರೇಕ್ಷ್ಯ ಗುಡಾಕೇಶೋ ಮಹಾಯಶಾಃ ।
ಅಭ್ಯಭಾಷತ ಕೈತವ್ಯಂ ಪ್ರಗೃಹ್ಯ ವಿಪುಲಂ ಭುಜಮ್ ॥೨॥

ಮಹಾಕೀರ್ತಿವಂತನಾದ ಗುಡಾಕೇಶನು ಕೃಷ್ಣನನ್ನು ನೋಡುತ್ತಾ ಉಲೂಕನನ್ನು ಕುರಿತು ತನ್ನ ಎರಡು ವಿಪುಲವಾದ ಭುಜಗಳನ್ನು ಎತ್ತಿ ಮಾತನಾಡಿದನು.

ಸ್ವವೀರ್ಯಂ ಯಃ ಸಮಾಶ್ರಿತ್ಯ ಸಮಾಹ್ವಯತಿ ವೈ ಪರಾನ್ ।
ಅಭೀತೋ ಯುದ್ಧ್ಯತೇ ಶತ್ರೂನ್ ಸ ವೈ ಪುರುಷ ಉಚ್ಯತೇ ॥೩॥

ತನ್ನ ಸಾಮರ್ಥ್ಯವನ್ನು ಅವಲಂಬಿಸಿ ಯಾರು ಅಭೀತನಾಗಿ ಶತ್ರುಗಳನ್ನು ಯುದ್ಧಕ್ಕೆ ಕರೆಯುತ್ತಾನೆಯೋ ಅವನು ಪುರುಷನೆನಿಸುತ್ತಾನೆ.

ಪರವೀರ್ಯಂ ಸಮಾಶ್ರಿತ್ಯ ಯಃ ಸಮಾಹ್ವಯತೇ ಪರಾನ್ ।
ಕ್ಷತ್ರಬಂಧುರಶಕ್ತತ್ವಾಲ್ಲೋಕೇ ಸ ಪುರುಷಾಧಮಃ ॥೪॥

ತಾನು ಅಶಕ್ತನಾದುದರಿಂದ ಇನ್ನೊಬ್ಬರ ಸಾಮರ್ಥ್ಯವನ್ನು ಅವಲಂಬಿಸಿ ಯಾವನು ಶತ್ರುಗಳನ್ನು ಯುದ್ಧಕ್ಕೆ ಕರೆಯುತ್ತಾನೆಯೋ ಅಂತಹ ಕ್ಷತ್ರಬಂಧುವು ಪುರುಷಾಧಮನೆನಿಸುತ್ತಾನೆ.

ಅರ್ಜುನಃ

ಸ ತ್ವಂ ಪರೇಷಾಂ ವೀರ್ಯೇಣ ಮನ್ಯಸೇ ವೀರ್ಯಮಾತ್ಮನಃ ।
ಸ್ವಯಂ ಕಾಪುರುಷೋ ಮೂಢ ಪರಾಂಶ್ಚ ಕ್ಷೇಪ್ತುಮಿಚ್ಛಸಿ ॥೫॥

ಅರ್ಜುನ– ಅಂತಹ ನೀನು ಇನ್ನೊಬ್ಬರ ಸಾಮರ್ಥ್ಯದಿಂದ ನೀನು ಸಮರ್ಥನೆಂದು ತಿಳಿದಿದ್ದೀಯೆ. ಎಲೈ ಮೂಢನೇ, ನೀನು ಸ್ವತಃ ತುಚ್ಛಪುರುಷ. ಇನ್ನೊಬ್ಬರನ್ನು ನಿಂದಿಸಲು ಬಯಸುತ್ತೀಯೆ.

ಯಸ್ತ್ವಂ ವೃದ್ಧಂ ಸರ್ವರಾಜ್ಞಾಂ ಹಿತಬುದ್ಧಿಂ ಜಿತೇಂದ್ರಿಯಮ್ ।
ಮರಣಾಯ ಮಹಾಪ್ರಾಜ್ಞಂ ದೀಕ್ಷಯಿತ್ವಾ ವಿಕತ್ಥಸೇ ॥೬॥

ಭಾವಸ್ತೇ ವಿದಿತೋಽಸ್ಮಾಭಿರ್ದುರ್ಬುದ್ಧೇ ಕುಲಪಾಂಸನ ।
ನ ಹನಿಷ್ಯಂತಿ ಗಾಂಗೇಯಂ ಪಾಂಡವಾ ಘೃಣಯೇತಿ ಹ ॥೭॥

ಎಲೈ ದುರ್ಬುದ್ಧಿಯೇ, ಎಲೈ ಕುಲನಾಶನನೇ, ಯಾವ ನೀನು ಎಲ್ಲ ರಾಜರಿಗಿಂತಲೂ ವೃದ್ಧನೂ, ಹಿತಬುದ್ಧಿಯುಳ್ಳವನೂ, ಜಿತೇಂದ್ರಿಯನೂ, ಮಹಾಪ್ರಾಜ್ಞನೂ ಆದ ಭೀಷ್ಮರನ್ನು ಸೇನಾಪತಿಯಾಗಿ ಮರಣಕ್ಕಾಗಿ ದೀಕ್ಷೆಗೊಳಿಸಿ ಗರ್ವದ ಮಾತುಗಳನ್ನು ಆಡುತ್ತಿದ್ದೀಯಷ್ಟೆ? ಪಾಂಡವರು ಕರುಣೆಯಿಂದ ಕೂಡಿದವರಾಗಿ ಭೀಷ್ಮರನ್ನು ಕೊಲ್ಲುವುದಿಲ್ಲ ಎಂಬ ನಿನ್ನ ಅಭಿಪ್ರಾಯವು ನಮಗೆ ತಿಳಿದಿದೆ.

ಯಸ್ಯ ವೀರ್ಯಂ ಸಮಾಶ್ರಿತ್ಯ ಧಾರ್ತರಾಷ್ಟ್ರ ವಿಕತ್ಥಸೇ ।
ಹಂತಾಸ್ಮಿ ಪ್ರಥಮಂ ಭೀಷ್ಮಂ ಮಿಷತಾಂ ಸರ್ವಧನ್ವಿನಾಮ್ ॥೮॥

ಎಲೈ ಧೃತರಾಷ್ಟ್ರಪುತ್ರನೇ, ಯಾವ ಭೀಷ್ಮರ ಸಾಮರ್ಥ್ಯವನ್ನು ಅವಲಂಬಿಸಿ ಪ್ರತಾಪದ ಮಾತುಗಳನ್ನು ಆಡುತ್ತಿದ್ದೀಯೋ ಅಂತಹ ಭೀಷ್ಮರನ್ನು ಎಲ್ಲ ಧನುರ್ಧಾರಿಗಳು ನೋಡುತ್ತಿರುವಂತೆಯೇ ನಾನು ಮೊದಲು ಕೊಲ್ಲುವೆನು.

ಕೈತವ್ಯ ಗತ್ವಾ ಭರತಾನ್ ಸಮೇತ್ಯ
ಸುಯೋಧನಂ ಧಾರ್ತರಾಷ್ಟ್ರಂ ಬ್ರವೀಹಿ ।
ತಥೇತ್ಯುವಾಚಾರ್ಜುನಃ ಸವ್ಯಸಾಚೀ
ನಿಶಾವ್ಯಪಾಯೇ ಭವಿತಾ ವಿಮರ್ದಃ ॥೯॥

ಎಲೈ ಕೈತವ್ಯನೇ, ಭರತರ ಸಮೀಪಕ್ಕೆ ಹೋಗಿ ಧೃತರಾಷ್ಟ್ರಪುತ್ರನಾದ ದುರ್ಯೋಧನನನ್ನು ಕುರಿತು ರಾತ್ರಿಯು ಕಳೆದ ಮೇಲೆ ಸಂಘರ್ಷ ಉಂಟಾಗುವುದು ಎಂದು ಹೇಳುವವನಾಗು ಎಂದು ಸವ್ಯಸಾಚಿಯಾದ ಅರ್ಜುನನು ಹೇಳಿದನು.

ಯತ್ ತ್ವಾಽಬ್ರವೀದ್ ವಾಕ್ಯಮದೀನಸತ್ವೋ
ಮಧ್ಯೇ ಕುರೂನ್ ಹರ್ಷಯನ್ ಸತ್ಯಸಂಧಃ ।
ಅಹಂ ಹಂತಾ ಸೃಂಜಯಾನಾಮನೀಕಂ
ಸಾಲ್ವೇಯಕಾಂಶ್ಚೇತಿ ಮಮೈಷ ಭಾರಃ ॥೧೦॥

ಹನ್ಯಾಮ್ಯಹಂ ದ್ರೋಣಮೃತೇಽಪಿ ಲೋಕಂ
ನ ಮೇ ಭಯಂ ವಿದ್ಯತೇ ಪಾಂಡವೇಭ್ಯಃ ।
ತತೋ ಹಿ ಮೇ ಲಬ್ಧಮದಶ್ಚ ರಾಜ್ಯಮ್
ಆಪದ್ಗತಾಃ ಪಾಂಡವಾಶ್ಚೇತಿ ಭಾವಃ ॥೧೧॥

ಸತ್ಯಸಂಧರೂ, ದೈನ್ಯವಿಲ್ಲದ ಬಲವುಳ್ಳವರೂ ಆದ ಭೀಷ್ಮರು ಕೌರವರನ್ನು ಸಂತೋಷಪಡಿಸುತ್ತಾ ಸಭಾಮಧ್ಯದಲ್ಲಿ ನಿನಗೆ– 'ನಾನು ಸೃಂಜಯರ ಮತ್ತು ಸಾಲ್ವೇಯರ ಯೋಧರನ್ನು ಕೊಲ್ಲುವೆನು. ಇದು ನನ್ನ ಜವಾಬ್ದಾರಿ. ದ್ರೋಣರಿಲ್ಲದಿದ್ದರೂ ನಾನು ಎಲ್ಲರನ್ನೂ ಕೊಲ್ಲುವೆನು. ನನಗೆ ಪಾಂಡವರಿಂದ ಭಯವಿಲ್ಲ' ಎಂದು ಹೇಳಿದರಷ್ಟೆ? ಆದ್ದರಿಂದ ನೀನು ನಾನು ಈ ರಾಜ್ಯವನ್ನು ಪಡೆದಿದ್ದೇನೆ. ಪಾಂಡವರು ಆಪತ್ತಿನಲ್ಲಿ ಸಿಲುಕಿದ್ದಾರೆ ಎಂಬ ಅಭಿಪ್ರಾಯವನ್ನು ಹೊಂದಿದ್ದೀಯೆ.

ಸ ದರ್ಪಪೂರ್ಣೋ ನ ಸಮೀಕ್ಷಸೇ ತ್ವಂ
ಅನರ್ಥಮಾತ್ಮನ್ಯಪಿ ವರ್ತಮಾನಮ್ ॥೧೨॥

ದರ್ಪಪೂರ್ಣನಾದ ನೀನು ನಿನಗೆ ಒದಗಲಿರುವ ಅನರ್ಥವನ್ನು ಗಮನಿಸುತ್ತಿಲ್ಲ.

ತಸ್ಮಾದಹಂ ತೇ ಪ್ರಥಮಂ ಸಮೂಹೇ
ಹಂತಾ ಸಮಕ್ಷಂ ಕುರುವೃದ್ಧಮೇವ ।
ಸೂರ್ಯೋದಯೇ ಯುಕ್ತಸೇನಃ ಪ್ರತೀಕ್ಷ
ಧ್ವಜೀ ರಥೀ ರಕ್ಷ ಚ ಸತ್ಯಸಂಧಮ್ ॥೧೩॥

ಆದ್ದರಿಂದ ನಾನು ನಿನ್ನ ಸೈನ್ಯಸಮುದಾಯದಲ್ಲಿ ನಿನ್ನ ಎದುರಿಗೇ ಮೊದಲು ಕುರುವೃದ್ಧರಾದ ಭೀಷ್ಮರನ್ನು ಕೊಲ್ಲುವೆನು. ಸೂರ್ಯೋದಯದ ವೇಳೆಗೆ ಸೈನ್ಯವನ್ನು ಹೂಡಿ, ಧ್ವಜಯುಕ್ತವಾದ ರಥವನ್ನು ಏರಿ, ಸತ್ಯಸಂಧರಾದ ಭೀಷ್ಮರನ್ನು ರಕ್ಷಿಸು.

ಅಹಂ ಹಿ ವಃ ಪಶ್ಯತಾಂ ವೈ ಸಮಕ್ಷಂ
ಭೀಷ್ಮಂ ರಥಾತ್ ಪಾತಯಿಷ್ಯಾಮಿ ಬಾಣೈಃ ॥೧೪॥

ನಾನಾದರೂ ನೀವೆಲ್ಲರೂ ನೋಡುವಂತೆಯೇ ಬಾಣಗಳಿಂದ ಭೀಷ್ಮರನ್ನು ರಥದಿಂದ ಕೆಡವುವೆನು.

ಶ್ವೋಭೂತೇ ಕತ್ಥನಾವಾಕ್ಯಂ ವಿಜ್ಞಾಸ್ಯಸಿ ಸುಯೋಧನ ।
ಆಚಿತಂ ಶರಜಾಲೇನ ಮಯಾ ದೃಷ್ಟ್ವಾ ಪಿತಾಮಹಮ್ ॥೧೫॥

ಎಲೈ ಸುಯೋಧನನೇ, ನಾಳೆ ದಿವಸ ನಾನು ಪ್ರಯೋಗಿಸಿದ ಶರಜಾಲಗಳಿಂದ ತುಂಬಿಹೋದ ಪಿತಾಮಹರನ್ನು ನೋಡಿ, ನಿನ್ನ ಹೊಗಳಿಕೆಯ ವಾಕ್ಯಗಳ ಬೆಲೆಯನ್ನು ನೀನು ತಿಳಿಯುವಿ.

ಯದುಕ್ತಶ್ಚ ಸಭಾಮಧ್ಯೇ ಪುರುಷೋ ಹ್ರಸ್ವದರ್ಶನಃ ।
ಕ್ರುದ್ಧೇನ ಭೀಮಸೇನೇನ ಭ್ರಾತಾ ದುಃಶಾಸನಸ್ತವ ॥೧೬॥

ಅಧರ್ಮಜ್ಞೋ ನಿತ್ಯವೈರೀ ಪಾಪಬುದ್ಧಿರ್ನೃಶಂಸಕೃತ್ ।
ಸ ತಾಂ ಪ್ರತಿಜ್ಞಾಮಚಿರಾದ್ ದ್ರಕ್ಷ್ಯಸೇ ತ್ವಂ ಸುಯೋಧನ ॥೧೭॥

ಸಭಾ ಮಧ್ಯದಲ್ಲಿ ಕ್ರುದ್ಧನಾದ ಭೀಮಸೇನನು ಅಧರ್ಮಜ್ಞನೂ, ನಿತ್ಯವೈರಿಯೂ, ಪಾಪಬುದ್ಧಿಯೂ, ಕ್ರೂರಕರ್ಮಿಯೂ, ದೀರ್ಘದರ್ಶಿಯಲ್ಲದವನೂ ಆದ ನಿನ್ನ ತಮ್ಮನಾದ ದುಶ್ಶಾಸನನನ್ನು ಕುರಿತು ಏನು ಹೇಳಿದನೋ ಎಲೈ ಸುಯೋಧನನೇ, ಅವನು ಆ ಪ್ರತಿಜ್ಞೆಯನ್ನು ನೆರವೇರಿಸುವುದನ್ನು ನೀನು ಶೀಘ್ರವಾಗಿ ನೋಡುವಿ.

ಅಭಿಮಾನಸ್ಯ ದರ್ಪಸ್ಯ ಕ್ರೋಧಪಾರುಷ್ಯಯೋಸ್ತಥಾ ।
ನೈಷ್ಠುರ್ಯಸ್ಯಾವಲೇಪಸ್ಯ ಆತ್ಮಸಂಭಾವನಸ್ಯ ಚ ॥೧೮॥

ನೃಶಂಸತಾಯಾಸ್ತೈಕ್ಷ್ಣ್ಯಸ್ಯ ಧರ್ಮವಿದ್ವೇಷಣಸ್ಯ ಚ ।
ಅಧರ್ಮಸ್ಯಾಪವಾದಸ್ಯ ವೃದ್ಧಾತಿಕ್ರಮಣಸ್ಯ ಚ ॥೧೯॥

ದರ್ಶನಸ್ಯ ಚ ವಕ್ರಸ್ಯ ಕೃತ್ಸ್ನಸ್ಯಾಪನಯಸ್ಯ ಚ ।
ದ್ರಕ್ಷ್ಯಸಿ ತ್ವಂ ಫಲಂ ತೀವ್ರಮಚಿರೇಣ ಸುಯೋಧನ ॥೨೦॥

ಎಲೈ ಸುಯೋಧನನೇ, ಅಭಿಮಾನದ, ದರ್ಪದ, ಕ್ರೋಧ-ಪಾರುಷ್ಯಗಳ, ನಿಷ್ಠುರ ಮಾತುಗಳ, ಅಹಂಕಾರದ, ಆತ್ಮಸಂಭಾವನೆಯ, ಕ್ರೌರ್ಯದ, ತೀಕ್ಷ್ಣತೆಯ, ಧರ್ಮವಿದ್ವೇಷದ, ಅಧರ್ಮದ, ನಿಂದೆಯ, ವೃದ್ಧರ ಶಾಸನಲಂಘನದ, ವಕ್ರದೃಷ್ಟಿಯ ಮತ್ತು ಸಮಗ್ರವಾದ ಅಪಚಾರಗಳ ತೀವ್ರವಾದ ಫಲವನ್ನು ನೀನು ಶೀಘ್ರದಲ್ಲಿಯೇ ನೋಡುವಿ.

ವಾಸುದೇವದ್ವಿತೀಯೇ ಹಿ ಮಯಿ ಕ್ರುದ್ಧೇ ನರಾಧಮ ।
ಆಶಾ ತೇ ಜೀವಿತೇ ಮೂಢ ರಾಜ್ಯೇ ವಾ ಕೇನ ಹೇತುನಾ ॥೨೧॥

ಎಲೈ ನರಾಧಮನೇ, ಕೃಷ್ಣನ ಸಹಾಯವುಳ್ಳ ನಾನು ಕ್ರುದ್ಧನಾಗಿರುವಾಗ ಎಲೈ ಮೂಢನೇ, ನಿನಗೆ ರಾಜ್ಯದ ಆಸೆಯಾಗಲೀ, ಜೀವನದ ಆಸೆಯಾಗಲೀ ಯಾವ ಕಾರಣದಿಂದ ಉಂಟಾಗುತ್ತವೆ?

ಶಾಂತೇ ಭೀಷ್ಮೇ ತಥಾ ದ್ರೋಣೇ ಸೂತಪುತ್ರೇ ಚ ಪಾತಿತೇ ।
ನಿರಾಶೋ ಜೀವಿತೇ ರಾಜ್ಯೇ ಪುತ್ರೇಷು ಚ ಭವಿಷ್ಯಸಿ ॥೨೨॥

ಭೀಷ್ಮರು ಶಾಂತರಾದ ಮೇಲೆ, ದ್ರೋಣರು ಮತ್ತು ಕರ್ಣನು ಹತರಾದ ಮೇಲೆ, ನೀನು ನಿನ್ನ ಜೀವನದಲ್ಲಿಯೂ, ರಾಜ್ಯದಲ್ಲಿಯೂ ಮತ್ತು ಪುತ್ರರಲ್ಲಿಯೂ ಆಸೆಯನ್ನು ತೊರೆಯುವಿ.

ಭ್ರಾತೄಣಾಂ ನಿಧನಂ ದೃಷ್ಟ್ವಾ ಪುತ್ರಾಣಾಂ ಚ ಸುಯೋಧನ ।
ಭೀಮಸೇನೇನ ನಿಹತೋ ದುಷ್ಕೃತಾನಿ ಸ್ಮರಿಷ್ಯಸಿ ॥೨೩॥

ಎಲೈ ಸುಯೋಧನನೇ, ತಮ್ಮಂದಿರ ಮತ್ತು ಮಕ್ಕಳ ವಧೆಯನ್ನು ನೋಡಿ, ಭೀಮಸೇನನಿಂದ ಹತನಾಗಿ ನೀನು ಮಾಡಿದ ಪಾಪಕರ್ಮಗಳನ್ನು ಸ್ಮರಿಸುವಿ.

ನ ದ್ವಿತೀಯಾಂ ಪ್ರತಿಜ್ಞಾಂ ಹಿ ಪ್ರತಿಜಾನಾಮಿ ಕೈತವ ।
ಸತ್ಯಂ ಬ್ರವೀಮ್ಯಹಂ ಹ್ಯೇತತ್ ಸರ್ವಂ ಸತ್ಯಂ ಭವಿಷ್ಯತಿ ॥೨೪॥

ಎಲೈ ಮೋಸಗಾರನೇ, ನಾನು ಎರಡನೆಯ ಬಾರಿಗೆ ಪ್ರತಿಜ್ಞೆಯನ್ನು ಮಾಡುವುದಿಲ್ಲ. ನಾನು ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ. ನನ್ನ ಮಾತೆಲ್ಲವೂ ಸತ್ಯವಾಗುವುದು (ಎಂದು ಹೇಳಿದನು).

ಯುಧಿಷ್ಠಿರೋಽಪಿ ಕೈತವ್ಯಮುಲೂಕಮಿದಮಬ್ರವೀತ್ ॥೨೫॥

ಉಲೂಕ ಮದ್ವಚೋ ಬ್ರೂಹಿ ಗತ್ವಾ ತಾತ ಸುಯೋಧನಮ್ ।
ಸ್ವೇನ ವೃತ್ತೇನ ಮೇ ವೃತ್ತಂ ನಾಧಿಗಂತುಂ ತ್ವಮರ್ಹಸಿ ॥೨೬॥

ಧರ್ಮರಾಜನೂ ಸಹ ಕೈತವ್ಯನಾದ ಉಲೂಕನನ್ನು ಕುರಿತು ಈ ಮಾತನ್ನು ಆಡಿದನು– 'ಪ್ರೀತಿಪಾತ್ರನಾದ ಉಲೂಕನೇ, ನಿನ್ನ ನಡತೆಯಿಂದ ನನ್ನ ನಡತೆಯನ್ನು ಅಳೆಯಬೇಡ ಎಂದು ಸುಯೋಧನನಿಗೆ ಹೋಗಿ ಹೇಳು.

ಉಭಯೋರಂತರಂ ವೇದ ಸೂನೃತಾನೃತಾಯೋರಪಿ ।
ನ ಚಾಹಂ ಕಾಮಯೇ ಪಾಪಮಪಿ ಕೀಟಪಿಪೀಲಯೋಃ ॥೨೭॥

ಕಿಂ ಪುನರ್ಜ್ಞಾತಿಷು ವಧಂ ಕಾಮಯೇಯಂ ಕಥಂಚನ ॥೨೮॥

ಸತ್ಯ ಮತ್ತು ಅನೃತ ಇವೆರಡರ ಅಂತರವನ್ನು ನಾನು ತಿಳಿದಿದ್ದೇನೆ. ನಾನು ಇರುವೆಗಳಿಗೂ ಅಥವಾ ಕೀಟಗಳಿಗೂ ಕೇಡನ್ನು ಬಯಸುವವನಲ್ಲ. ಇನ್ನು ದಾಯಾದಿಗಳ ವಧೆಯನ್ನು ಹೇಗೆ ಬಯಸಿಯೇನು?

ಏತದರ್ಥಂ ಮಯಾ ತಾತ ಪಂಚ ಗ್ರಾಮಾ ವೃತಾಃ ಪುರಾ ।
ಕಥಂ ತವ ಸುದುರ್ಬುದ್ಧೇ ನ ಪ್ರೇಕ್ಷೇ ವ್ಯಸನಂ ಮಹತ್ ॥೨೯॥

ಎಲೈ ಪ್ರೀತಿಪಾತ್ರನೇ, ಇದಕ್ಕೋಸ್ಕರವಾಗಿ ನಾನು ಹಿಂದೆ ಐದುಗ್ರಾಮಗಳನ್ನು ಬೇಡಿದೆನು. ಎಲೈ ದುರ್ಬುದ್ಧಿಯೇ, ನಿನಗೆ ಒದಗುವ ದೊಡ್ಡ ವ್ಯಸನವನ್ನು ನಾನು ಹೇಗೆ ನೋಡದೇ ಇದ್ದೇನು?

ಸ ತ್ವಂ ಕಾಮಪರೀತಾತ್ಮಾ ಮೂಢಭಾವಾಚ್ಚ ಕತ್ಥಸೇ ।
ತಥೈವ ವಾಸುದೇವಸ್ಯ ನ ಗೃಹ್ಣಾಸಿ ಹಿತಂ ವಚಃ ॥೩೦॥

ಕಿಮಿದಾನೀಂ ಬಹೂಕ್ತೇನ ಯುಧ್ಯಸ್ವ ಸಹಬಾಂಧವಃ ॥೩೧॥

ನೀನು ಆಸೆಯಿಂದ ಕೂಡಿದ ಮನಸ್ಸುಳ್ಳವನಾಗಿ, ಮೌಢ್ಯದಿಂದ ಕೂಡಿ, ಆತ್ಮಶ್ಲಾಘನೆಯ ಮಾತುಗಳನ್ನು ಆಡುತ್ತಿದ್ದೀಯೆ ಮತ್ತು ಹಾಗೆಯೇ ಕೃಷ್ಣನ ವಚನಗಳನ್ನೂ ಸ್ವೀಕರಿಸುತ್ತಿಲ್ಲ. ಈಗ ಹೆಚ್ಚು ಮಾತನಾಡಿ ಏನು ಪ್ರಯೋಜನ? ಬಾಂಧವರನ್ನು ಸೇರಿಸಿಕೊಂಡು ಯುದ್ಧವನ್ನು ಮಾಡುವವನಾಗು.

ಮಮ ವಿಪ್ರಿಯಕರ್ತಾರಂ ಕೈತವ್ಯ ಬ್ರೂಹಿ ಕೌರವಮ್ ।
ಶ್ರುತಂ ವಾಕ್ಯಂ ಗೃಹೀತೋಽರ್ಥೋ ಮತಂ ಯತ್ ತೇ ತಥಾಽಸ್ತು ತತ್ ॥

ಎಲೈ ಉಲೂಕನೇ, ನನಗೆ ಅಪ್ರಿಯವನ್ನು ಉಂಟುಮಾಡುವ ದುರ್ಯೋಧನನನ್ನು ಕುರಿತು– 'ನಿನ್ನ ಮಾತನ್ನು ಕೇಳಿದೆ, ಅರ್ಥವು ಗೃಹೀತವಾಯಿತು. ನಿನ್ನ ಅಭಿಪ್ರಾಯದಂತೆಯೇ ಆಗಲಿ' ಎಂದು ಹೇಳು (ಎಂದು ಹೇಳಿದನು).

ಸಂಜಯಃ

ಭೀಮಸೇನಸ್ತತೋ ವಾಕ್ಯಂ ಭೂಯ ಆಹ ನೃಪಾತ್ಮಜಮ್ ॥೩೩॥

ಸಂಜಯ– ಭೀಮಸೇನನು ಅನಂತರ ಪುನಃ ದುರ್ಯೋಧನನಿಗೆ ತಿಳಿಸಬೇಕಾದ ಮಾತನ್ನು ಆಡಿದನು.

ಉಲೂಕ ಮದ್ವಚೋ ಬ್ರೂಹಿ ದುರ್ಮತಿಂ ಪಾಪಪೂರುಷಮ್ ।
ಶಠಂ ನೈಕೃತಿಕಂ ಪಾಪಂ ದುರಾಚಾರಂ ಸುಯೋಧನಮ್ ॥೩೪॥

ಪ್ರತಿಜ್ಞಾತಂ ಮಯಾ ಯಚ್ಚ ಸಭಾಮಧ್ಯೇ ನರಾಧಮ ।
ಕರ್ತಾऽಹಂ ತದ್ವಚಃ ಸತ್ಯಂ ಸತ್ಯೇನೈವ ಶಪಾಮಿ ತೇ ॥೩೫॥

ಎಲೈ ಉಲೂಕನೇ, ದುರ್ಮತಿಯೂ, ಪಾಪಪುರುಷನೂ, ಶಠನೂ, ಮೋಸಗಾರನೂ, ಪಾಪಿಯೂ, ದುರಾಚಾರನೂ ಆದ ಸುಯೋಧನನಿಗೆ ನನ್ನ ಮಾತಿನಂತೆ ಹೀಗೆ ಹೇಳುವವನಾಗು– ಎಲೈ ನರಾಧಮನೇ, ನಾನು ಸಭಾಮಧ್ಯದಲ್ಲಿ ಏನನ್ನು ಪ್ರತಿಜ್ಞೆ ಮಾಡಿದ್ದೇನೆಯೋ ಆ ಮಾತನ್ನು ಸತ್ಯವಾಗಿ ನಡೆಸುವೆನು. ನಾನು ಪ್ರಮಾಣವನ್ನು ಮಾಡಿ ಹೇಳುತ್ತಿದ್ದೇನೆ.

ದುಃಶಾಸನಸ್ಯ ರುಧಿರಂ ಹತ್ವಾ ಪಾಸ್ಯಾಮ್ಯಹಂ ಮೃಧೇ ।
ಸಕ್ಥಿನೀ ತವ ಭಂಕ್ತ್ವೈವ ಹತ್ವಾ ಹಿ ತವ ಸೋದರಾನ್ ॥೩೬॥

ನಿನ್ನ ತೊಡೆಯನ್ನು ಮುರಿದು, ನಿನ್ನ ಸಹೋದರರನ್ನು ಕೊಂದು, ಯುದ್ಧದಲ್ಲಿ ದುಶ್ಶಾಸನನ ರಕ್ತವನ್ನು ನಾನು ಕುಡಿಯುವೆನು.

ಸರ್ವೇಷಾಂ ಧಾರ್ತರಾಷ್ಟ್ರಾಣಾಮಹಂ ಮೃತ್ಯುಃ ಸುಯೋಧನ ।
ಸರ್ವೇಷಾಂ ರಾಜಪುತ್ರಾಣಾಮಭಿಮನ್ಯುರಸಂಶಯಮ್ ॥೩೭॥

ಎಲೈ ಸುಯೋಧನನೇ, ಧೃತರಾಷ್ಟ್ರನ ಎಲ್ಲಾ ಮಕ್ಕಳಿಗೂ ನಾನು ಮೃತ್ಯು ಮತ್ತು ನಿಮ್ಮೆಲ್ಲರ ರಾಜಕುಮಾರರಿಗೂ ಅಭಿಮನ್ಯುವು ಮೃತ್ಯು. ಇದರಲ್ಲಿ ಸಂಶಯವಿಲ್ಲ.

ಕರ್ಮಣಾ ತೋಷಯಿಷ್ಯಾಮಿ ಭೂಯಶ್ಚೈವ ವಚಃ ಶೃಣು ॥೩೮॥

ಹತ್ವಾ ಸುಯೋಧನಂ ತ್ವಾಂ ವೈ ಸಹಿತಂ ಸರ್ವಸೋದರೈಃ ।
ಆಕ್ರಮಿಷ್ಯೇ ಪದಾ ಮೂರ್ಧ್ನಿ ಧರ್ಮರಾಜಸ್ಯ ಪಶ್ಯತಃ ॥೩೯॥

ನನ್ನ ಕ್ರಿಯೆಯಿಂದ ಪಾಂಡವರೆಲ್ಲರನ್ನೂ ಸಂತೋಷಪಡಿಸುತ್ತೇನೆ. ಇನ್ನೂ ನನ್ನ ಮಾತನ್ನು ಕೇಳು. ಸುಯೋಧನನಾದ ನಿನ್ನನ್ನು ಎಲ್ಲ ತಮ್ಮಂದಿರ ಜೊತೆಯಲ್ಲಿ ಕೊಂದು, ಧರ್ಮರಾಜನು ನೋಡುತ್ತಿರುವಂತೆಯೇ ನಿನ್ನ ತಲೆಯನ್ನು ನನ್ನ ಕಾಲಿನಿಂದ ತುಳಿಯುವೆನು (ಎಂದು ಹೇಳಿದನು).

ಸಂಜಯಃ

ನಕುಲಸ್ತು ತತೋ ವಾಕ್ಯಮಿದಮಾಹ ಮಹೀಪತೇ ॥೪೦॥

ಉಲೂಕ ಬ್ರೂಹಿ ಕೈತವ್ಯ ಧಾರ್ತರಾಷ್ಟ್ರಂ ಸುಯೋಧನಮ್ ॥೪೧॥

ಶ್ರುತಂ ತೇ ಗದತೋ ವಾಕ್ಯಂ ಸರ್ವಮೇವ ಯಥಾತಥಮ್ ।
ತಥಾ ಕರ್ತಾಸ್ಮಿ ಕೌರವ್ಯ ಯಥಾ ತ್ವಮನುಶಾಸ್ಸಿ ಮಾಮ್ ॥೪೨॥

ಸಂಜಯ– ಎಲೈ ರಾಜನೇ, ಅನಂತರ ನಕುಲನು ಈ ಮಾತನ್ನು ಆಡಿದನು. ಎಲೈ ಉಲೂಕನೇ, ಕೈತವ್ಯನೇ, ಧೃತರಾಷ್ಟ್ರಪುತ್ರನಾದ ಸುಯೋಧನನಿಗೆ, ನಾನು ನಿನ್ನ ಎಲ್ಲಾ ಮಾತನ್ನು ಸರಿಯಾಗಿ ಕೇಳಿದೆನು. ನೀನು ಅನುಶಾಸನ ಮಾಡಿದಂತೆಯೇ ನಾನು ಮಾಡುವೆನು ಎಂದು ಹೇಳುವವನಾಗು (ಎಂದು ಹೇಳಿದನು).

ಸಂಜಯಃ

ಸಹದೇವೋಽಪಿ ನೃಪತೇ ಇದಮಾಹ ವಚೋಽರ್ಥವತ್ ॥೪೩॥

ಸುಯೋಧನ ಮತಿರ್ಯಾ ತೇ ವೃಥೈವೈಷಾ ಭವಿಷ್ಯತಿ ।
ಶೋಚಿಷ್ಯಸೇ ಮಹಾರಾಜ ಸಪುತ್ರಜ್ಞಾತಿಬಾಂಧವಃ ॥೪೪॥

ಇಮಂ ಚ ಕ್ಲೇಶಮಸ್ಮಾಕಂ ಹೃಷ್ಟೋ ಯತ್ ತ್ವಂ ವಿಕತ್ಥಸೇ ॥೪೫॥

ಸಂಜಯ– ಎಲೈ ರಾಜನೇ, ಸಹದೇವನೂ ಕೂಡ ಈ ಮಾತುಗಳನ್ನು ಆಡಿದನು– 'ಎಲೈ ಸುಯೋಧನನೇ, ನಿನ್ನ ಬುದ್ಧಿಯು ವ್ಯರ್ಥವಾದುದು. ಎಲೈ ಮಹಾರಾಜನೇ, ಪುತ್ರಜ್ಞಾತಿಬಾಂಧವರ ಸಹಿತನಾಗಿ ನೀನು ಶೋಕವನ್ನು ಪಡುವಿ. ಏಕೆಂದರೆ ನಾವು ಪಡುತ್ತಿರುವ ಕ್ಲೇಶವನ್ನು ನೋಡಿ, ಸಂತೋಷದಿಂದ ನಿನ್ನನ್ನು ನೀನು ಹೊಗಳಿಕೊಳ್ಳುತ್ತಿದ್ದೀಯೆ, (ಎಂದು ಹೇಳಿದನು).

ಸಂಜಯಃ

ವಿರಾಟದ್ರುಪದೌ ವೃದ್ಧಾವುಲೂಕಮಿದಮೂಚತುಃ ॥೪೬॥

ದಾಸಭಾವಂ ನಿಯಚ್ಛೇವ ಸಾಧೋರಿತಿ ಮತಿಃ ಸದಾ ।
ತೌ ಚ ದಾಸಾವದಾಸೌ ವಾ ಪೌರುಷಂ ಯಸ್ಯ ಯಾದೃಶಮ್ ॥೪೭॥

ಸಂಜಯ– ವೃದ್ಧರಾದ ವಿರಾಟ-ದ್ರುಪದರಿಬ್ಬರೂ ನಾವು ಸಜ್ಜನನಾದ ಧರ್ಮರಾಜನ ದಾಸಭಾವವನ್ನು ನಿವಾರಿಸುತ್ತೇವೆ ಎಂಬ ಅಭಿಪ್ರಾಯವನ್ನು ಸದಾ ಹೊಂದಿದ್ದೇವೆ. ಅವರು ದಾಸರೋ, ಅದಾಸರೋ ಆಗಿರಲಿ, ಅವರ ಪೌರುಷವು ಹೇಗಿದೆ ಎಂದು ನೋಡುವವನಾಗು (ಎಂದು ಹೇಳಿದರು).

ಸಂಜಯಃ

ಶಿಖಂಡೀ ತು ತತೋ ವಾಕ್ಯಮುಲೂಕಮಿದಮಬ್ರವೀತ್ ॥೪೮॥

ವಕ್ತವ್ಯೋ ಭವತಾ ರಾಜಾ ಪಾಪೇಷ್ವಭಿರತಃ ಸದಾ ।
ಪಶ್ಯ ತ್ವಂ ಮಾಂ ರಣೇ ರಾಜನ್ ಕುರ್ವಾಣಂ ಕರ್ಮ ದಾರುಣಮ್ ॥

ಸಂಜಯ– ಅನಂತರ ಶಿಖಂಡಿಯು ಉಲೂಕನನ್ನು ಕುರಿತು ಹೀಗೆ ಮಾತನಾಡಿದನು– 'ನೀನು ಹೋಗಿ ಯಾವಾಗಲೂ ಪಾಪದಲ್ಲಿಯೇ ರತನಾದ ದುರ್ಯೋಧನನಿಗೆ ಎಲೈ ರಾಜನೇ, ನಾಳೆಯ ದಿನ ಯುದ್ಧದಲ್ಲಿ ದಾರುಣವಾದ ಕರ್ಮವನ್ನು ಎಸಗುವ ನನ್ನನ್ನು ನೋಡು'.

ಯಸ್ಯ ವೀರ್ಯಂ ಸಮಾಸಾದ್ಯ ಮನ್ಯಸೇ ವಿಜಯಂ ಯುಧಿ ।
ತಮಹಂ ಪಾತಯಿಷ್ಯಾಮಿ ರಥಾತ್ ತವ ಪಿತಾಮಹಮ್ ॥೫೦॥

ಯಾವ ಭೀಷ್ಮರ ಪರಾಕ್ರಮವನ್ನು ಆಶ್ರಯಿಸಿ ನೀನು ಯುದ್ಧದಲ್ಲಿ ವಿಜಯವನ್ನು ಹೊಂದುತ್ತೇನೆ ಎಂದು ಭಾವಿಸಿದ್ದೀಯೋ ಅಂತಹ ಪಿತಾಮಹರಾದ ಭೀಷ್ಮರನ್ನು ನಾನು ರಥದಿಂದ ಉರುಳಿಸುವೆನು.

ಅಹಂ ಭೀಷ್ಮವಧೇ ಸೃಷ್ಟೋ ನೂನಂ ಧಾತ್ರಾ ಮಹಾತ್ಮನಾ ।
ಸೋಽಹಂ ಭೀಷ್ಮಂ ಹನಿಷ್ಯಾಮಿ ಮಿಷತಾಂ ಸರ್ವಧನ್ವಿನಾಮ್ ॥೫೧॥

ಮಹಾತ್ಮರಾದ ಬ್ರಹ್ಮದೇವರು ನನ್ನನ್ನು ಭೀಷ್ಮ ವಧೆಗಾಗಿ ಸೃಷ್ಟಿಸಿದ್ದಾರೆ. ಅಂತಹ ನಾನು ಎಲ್ಲಾ ಧನುರ್ಧಾರಿಗಳು ನೋಡುತ್ತಿರುವಂತೆ ಭೀಷ್ಮರನ್ನು ಕೊಲ್ಲುವೆನು'.

ಸಂಜಯಃ

ಧೃಷ್ಟದ್ಯುಮ್ನೋಽಪಿ ಕೈತವ್ಯಮುಲೂಕಮಿದಮಬ್ರವೀತ್ ॥೫೨॥

ಸುಯೋಧನೋ ಮಮ ವಚೋ ವಕ್ತವ್ಯೋ ನೃಪತೇಃ ಸುತಃ ।
ಅಹಂ ದ್ರೋಣಂ ಹನಿಷ್ಯಾಮಿ ಸಗಣಂ ಸಹಬಾಂಧವಮ್ ॥೫೩॥

ಕರ್ತಾ ಚಾಹಂ ತಥಾ ಕರ್ಮ ಯಥಾ ನಾನ್ಯಃ ಕರಿಷ್ಯತಿ ॥೫೪॥

ಸಂಜಯ– ಧೃಷ್ಟದ್ಯುಮ್ನನೂ ಸಹ ಉಲೂಕನನ್ನು ಕುರಿತು, ರಾಜಪುತ್ರನಾದ ಸುಯೋಧನನಿಗೆ ನನ್ನ ಮಾತಿನಂತೆ ಹೀಗೆ ಹೇಳುವವನಾಗು– 'ನಾನು ದ್ರೋಣರನ್ನು, ಅವರ ಪರಿವಾರ ಮತ್ತು ಬಾಂಧವರೊಡನೆ ಕೊಲ್ಲುವೆನು. ಇನ್ನೊಬ್ಬರು ಮಾಡಲು ಸಾಧ್ಯವಿಲ್ಲದಂತಹ ಕರ್ಮವನ್ನು ನಾನು ಮಾಡುವೆನು' (ಎಂದು ಹೇಳಿದನು).

ಸಂಜಯಃ

ತಮಬ್ರವೀದ್ ಧರ್ಮರಾಜಃ ಕಾರುಣ್ಯಾರ್ಥಂ ವಚೋ ಮಹತ್ ॥೫೫॥

ನಾಹಂ ಜ್ಞಾತಿವಧಂ ರಾಜನ್ ಕಾಮಯೇಯಂ ಕಥಂಚನ ।
ತವೈವ ದೋಷಾದ್ ದುರ್ಬುದ್ಧೇಃ ಸರ್ವಮೇತದನಾವೃತಮ್ ॥೫೬॥

ಸಂಜಯ– ಧರ್ಮರಾಜನು ಕರುಣೆಯಿಂದ ದೊಡ್ಡ ಮಾತನ್ನು ಆಡಿದನು– 'ಎಲೈ ರಾಜನೇ, ನಾನು ಯಾವ ಕಾರಣದಿಂದಲೂ ಬಂಧುಗಳ ವಧೆಯನ್ನು ಬಯಸುವುದಿಲ್ಲ. ದುರ್ಬುದ್ಧಿಯಾದ ನಿನ್ನ ದೋಷದಿಂದಲೇ ಇವೆಲ್ಲವೂ ಸಂಭವಿಸಿದೆ.

ಅವಶ್ಯಂ ಚ ಮಯಾ ಕಾರ್ಯಂ ಸರ್ವೇಷಾಂ ರಕ್ಷಣಂ ಮಹತ್ ॥೫೭॥

ಸ ಗಚ್ಛ ಮಾ ಚಿರಂ ತಾತ ಉಲೂಕ ಯದಿ ಮನ್ಯಸೇ ।
ಇಹ ವಾ ತಿಷ್ಠ ಭದ್ರಂ ತೇ ವಯಂ ಹಿ ತವ ಬಾಂಧವಾಃ ॥೫೮॥

ನಾನು ಅವಶ್ಯವಾಗಿ ಎಲ್ಲರ ದೊಡ್ಡ ರಕ್ಷಣೆಯನ್ನೂ ಮಾಡಬೇಕಾಗಿದೆ. ಎಲೈ ಉಲೂಕನೇ, ಪ್ರೀತಿಪಾತ್ರನೇ, ನೀನು ಬೇಕಾದರೆ ಹೋಗು, ಇಲ್ಲದಿದ್ದರೆ ಇಲ್ಲಿಯೇ ಇರು. ನಿನಗೆ ಮಂಗಳವಾಗಲಿ, ನಾವು ನಿನ್ನ ಬಂಧುಗಳಷ್ಟೆ' ಎಂದು ಹೇಳಿದನು.

ವೈಶಂಪಾಯನಃ

ಇತ್ಯುಕ್ತಃ ಕೈತವೋ ವಾಕ್ಯಂ ತದಾವ್ಯಮುಪಧಾರ್ಯ ಚ ।
ಅನುಜ್ಞಾತೋ ನಿವವೃತೇ ಪುನರೇವ ಯಥಾಗತಮ್ ॥೫೯॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಉಲೂಕನು ಆ ಮಾತುಗಳನ್ನು ಮನಸ್ಸಿನಲ್ಲಿ ಧರಿಸಿ, ಪಾಂಡವರ ಅನುಮತಿಯನ್ನು ಪಡೆದು, ಪುನಃ ಬಂದ ದಾರಿಯಲ್ಲಿಯೇ ಹಿಂದಿರುಗಿದನು.

ಉಪಾವೃತ್ಯ ತು ಕೈತವ್ಯಃ ಪಾಂಡುಭ್ಯೋ ಧೃತರಾಷ್ಟ್ರಜಮ್ ।
ಗತ್ವಾ ಯಥೋಕ್ತಂ ತತ್ ಸರ್ವಮುವಾಚ ಕುರುಸಂಸದಿ ॥೬೦॥

ಕೈತವ್ಯನು ಪಾಂಡವರ ಕಡೆಯಿಂದ ಹಿಂದಿರುಗಿ ದುರ್ಯೋಧನನ ಸಮೀಪಕ್ಕೆ ಹೋಗಿ ಪಾಂಡವರು ಹೇಳಿದುದೆಲ್ಲವನ್ನೂ ಕೌರವರ ಸಭೆಯಲ್ಲಿ ಹೇಳಿದನು.

ಕೈತವಸ್ಯ ತು ತದಾವ್ಯಂ ನಿಶಮ್ಯ ಭರತರ್ಷಭಃ ।
ದುಃಶಾಸನಂ ಚ ಕರ್ಣಂ ಚ ಶಕುನಿಂ ಚಾಭ್ಯಭಾಷತ ॥೬೧॥

ಕೈತವ್ಯನ ಆ ಮಾತನ್ನು ಕೇಳಿ ಭರತರ್ಷಭನಾದ ದುರ್ಯೋಧನನು ದುಶ್ಶಾಸನನನ್ನೂ, ಕರ್ಣನನ್ನೂ ಮತ್ತು ಶಕುನಿಯನ್ನೂ ಕುರಿತು ಮಾತನಾಡಿದನು.

ಆಜ್ಞಾಪಯತ ರಾಜ್ಞಶ್ಚ ಬಲಂ ಮಿತ್ರಬಲಂ ತಥಾ ।
ಯಥಾ ಪ್ರಾಗುದಯಾತ್ ಸರ್ವಾ ಯುಕ್ತಾ ತಿಷ್ಠತ್ಯನೀಕಿನೀ ॥೬೨॥

ಎಲ್ಲ ರಾಜರಿಗೂ, ನಮ್ಮ ಸೈನ್ಯಕ್ಕೂ ಮತ್ತು ಮಿತ್ರರ ಸೈನ್ಯಕ್ಕೂ ನಾಳೆ ಸೂರ್ಯೋದಯಕ್ಕಿಂತ ಮೊದಲೇ ಸೈನ್ಯವು ಸನ್ನದ್ಧವಾಗಿ ನಿಂತಿರಲಿ ಎಂದು ಆಜ್ಞೆಯನ್ನು ಮಾಡಿ (ಎಂದು ಹೇಳಿದನು).

ತತಃ ಕರ್ಣಸಮಾದಿಷ್ಟಾ ದೂತಾಃ ಸಂತ್ವರಿತಾ ರಥೈಃ ।
ಉಷ್ಟ್ರವಾಮೀಭಿರಪ್ಯನ್ಯೇ ಸದಶ್ವೈಶ್ಚ ಮಹಾಜವೈಃ ॥೬೩॥

ತೂರ್ಣಂ ಪರಿಯಯುಃ ಸೇನಾಂ ಪೂರ್ಣಾಂ ಕರ್ಣಸ್ಯ ಶಾಸನಾತ್ ।
ಆಜ್ಞಾಪಯಂತ ರಾಜ್ಞಸ್ತಾನ್ ಯೋಗಃ ಪ್ರಾಗುದಯಾದಿತಿ ॥ ೬೪॥

ಅನಂತರ ಕರ್ಣನಿಂದ ಆಜ್ಞಪ್ತರಾದ ದೂತರು ಕೆಲವರು ರಥಗಳಲ್ಲಿಯೂ, ಕೆಲವರು ಒಂಟೆಗಳಲ್ಲಿಯೂ, ಕೆಲವರು ಹೇಸರಗತ್ತೆಗಳಲ್ಲಿಯೂ, ಕೆಲವರು ಒಳ್ಳೆಯ ವೇಗವುಳ್ಳ ಅಶ್ವಗಳಲ್ಲಿಯೂ ಶೀಘ್ರವಾಗಿ, ಪೂರ್ಣವಾಗಿ ಸೈನ್ಯವನ್ನು ಸುತ್ತುವರಿದು ಕರ್ಣನ ಶಾಸನದಂತೆ ಆ ರಾಜರಿಗೆ ನಾಳೆಯ ಪ್ರಾತಃಕಾಲದಲ್ಲಿ ಸೂರ್ಯೋದಯಕ್ಕಿಂತ ಮೊದಲೇ ಸೈನ್ಯದ ವ್ಯೂಹವನ್ನು ಮಾಡಿ ಎಂದು ತಿಳಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ಉಲೂಕದ್ಯೂತಾಗಮನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೆರಡನೆಯ ಅಧ್ಯಾಯ

ಸೇನಾ ಪ್ರಸ್ಥಾನ. ಧೃಷ್ಟದ್ಯುಮ್ನನಿಂದ ದ್ವಂದ್ವಯುದ್ಧದ ಸಮಾಯೋಜನೆ.

ಸಂಜಯಃ

ಉಲೂಕಸ್ಯ ವಚಃ ಶ್ರುತ್ವಾ ಕುಂತೀಪುತ್ರೋ ಯುಧಿಷ್ಠಿರಃ ।
ಸೇನಾಂ ನಿರ್ಯಾಪಯಾಮಾಸ ಧೃಷ್ಟದ್ಯುಮ್ನಪುರೋಗಮಾಮ್ ॥೧॥

ಪದಾತಿನೀಂ ನಾಗವತೀಂ ರಥಿನೀಮಶ್ವವಂದಿನೀಮ್ ।
ಚತುರ್ವಿಧಬಲಾಂ ಭೀಮಾಮಕಂಪ್ಯಾಂ ಪೃಥಿವೀಮಿವ ॥೨॥

ಭೀಮಸೇನಾದಿಭಿರ್ಗುಪ್ತಾಂ ಸಾರ್ಜುನೈಶ್ಚ ಮಹಾರಥೈಃ ।
ಧೃಷ್ಟದ್ಯುಮ್ನವಶಾಂ ದುರ್ಗಾಂ ಸಾಗರಸ್ತಿಮಿತೋಪಮಾಮ್ ॥೩॥

ಸಂಜಯ– ಕುಂತೀಪುತ್ರನಾದ ಯುಧಿಷ್ಠಿರನು ಉಲೂಕನ ಮಾತುಗಳನ್ನು ಕೇಳಿ ಧೃಷ್ಟದ್ಯುಮ್ನನನ್ನು ಮುಂಭಾಗದಲ್ಲಿ ಹೊಂದಿದ ಪದಾತಿಗಳು, ಗಜಗಳು, ಮಹಾರಥರು ಮತ್ತು ಅಶ್ವವಂದರೂಪವಾದ ಚತುರ್ವಿಧ ಬಲದಿಂದ ಕೂಡಿದ, ಭಯಂಕರವಾದ, ಭೂಮಿಯಂತೆ ಅಲುಗಾಡಿಸಲು ಅಸಾಧ್ಯವಾದ, ಭೀಮಸೇನ- ಅರ್ಜುನ ಮೊದಲಾದ ಮಹಾಸೇನರಿಂದ ರಕ್ಷಿತವಾದ, ಧೃಷ್ಟದ್ಯುಮ್ನನ ವಶವಾಗಿದ್ದ, ಸಮೀಪಿಸಲು ಅಸಾಧ್ಯವಾದ ಸ್ತಂಭಿತವಾದ ಸಾಗರದಂತಿದ್ದ ತನ್ನ ಸೈನ್ಯವನ್ನು ಹೊರಡಿಸಿದನು.

ತಸ್ಯಾಸ್ತ ಗ್ರೇ ಮಹೇಷ್ವಾಸಃ ಪಾಂಚಾಲ್ಯೋ ಯುದ್ಧದುರ್ಮದಃ ।
ದ್ರೋಣಪ್ರೇಪ್ಸುರನೀಕಾನಿ ಧೃಷ್ಟದ್ಯುಮ್ನೋ ವ್ಯಕರ್ಷತ ॥೪॥

ಯಥಾಬಲಂ ಯಥೋತ್ಸಾಹಂ ರಥಿನಃ ಸಮುಪಾದಿಶತ್ ॥೫॥

ಆ ಸೇನೆಯ ಮುಂಭಾಗದಲ್ಲಿ ಧನುರ್ಧಾರಿಯಾದ, ಯುದ್ಧದುರ್ಮದನಾದ, ಪಾಂಚಾಲರಾಜಕುಮಾರನಾದ ಧೃಷ್ಟದ್ಯುಮ್ನನು ದ್ರೋಣರ ವಧೆಯನ್ನು ಬಯಸಿ ಸೈನ್ಯಗಳನ್ನು ಮುಂದೆ ಸಾಗಿಸಿದನು. ಅವನು ಆ ಮಹಾರಥರ ಬಲಕ್ಕೆ ಮತ್ತು ಉತ್ಸಾಹಕ್ಕೆ ಅನುಗುಣವಾಗಿ ಶತ್ರುಗಳನ್ನು ನಿರ್ದೇಶಿಸಿದನು.

ಅರ್ಜುನಂ ಸೂತಪುತ್ರಾಯ ಭೀಮಂ ದುರ್ಯೋಧನಾಯ ಚ ।
ಧೃಷ್ಟಕೇತುಂ ಚ ಶಲ್ಯಾಯ ಗೌತಮಾಯೋತ್ತಮೌಜಸಮ್ ॥೬॥

ಅಶ್ವತ್ಥಾಮ್ನೇ ಚ ನಕುಲಂ ಶೈಬ್ಯಂ ಚ ಕೃತವರ್ಮಣೇ ।
ಸೈಂಧವಾಯ ಚ ವಾರ್ಷ್ಣೇಯಂ ಯುಯುಧಾನಂ ಸಮಾದಿಶತ್ ॥೭॥

ಅರ್ಜುನನನ್ನು ಕರ್ಣನಿಗೂ, ಭೀಮನನ್ನು ದುರ್ಯೋಧನನಿಗೂ, ಧೃಷ್ಟಕೇತುವನ್ನು ಶಲ್ಯನಿಗೂ, ಉತ್ತಮೌಜನನ್ನು ಕೃಪರಿಗೂ, ನಕುಲನನ್ನು ಅಶ್ವತ್ಥಾಮರಿಗೂ, ಶೈಬ್ಯನನ್ನು

ಕೃತವರ್ಮನಿಗೂ, ವೃಷ್ಣಿಕುಲೋತ್ಪನ್ನನಾದ ಯುಯುಧಾನನನ್ನು ಸೈಂಧವನಿಗೂ ಸಂಯೋಜನೆಯನ್ನು ಮಾಡಿದನು.

ಶಿಖಂಡಿನಂ ಚ ಭೀಷ್ಮಾಯ ಪ್ರಮುಖೇ ತಮಕಲ್ಪಯತ್ ॥೮॥

ಸಹದೇವಂ ಶಕುನಯೇ ಚೇಕಿತಾನಂ ಶಲಾಯ ಚ ।
ದ್ರೌಪದೇಯಾಂಸ್ತಥಾ ಪಂಚ ತ್ರಿಗರ್ತೇಭ್ಯಃ ಸಮಾದಿಶತ್ ॥೯॥

ಭೀಷ್ಮರಿಗೆ ಎದುರಾಗಿ ಸಂಕಲ್ಪಿಸಿದ್ದ ಶಿಖಂಡಿಯನ್ನು ಸೈನ್ಯದ ಮುಂಭಾಗದಲ್ಲಿ ಇರಿಸಿದನು. ಸಹದೇವನನ್ನು ಶಕುನಿಗೂ, ಚೇಕಿತಾನನನ್ನು ಶಲನಿಗೂ, ದ್ರೌಪದಿಯ ಐವರು ಮಕ್ಕಳನ್ನು ತ್ರಿಗರ್ತರಿಗೂ ಯೋಜಿಸಿದನು.

ವೃಷಸೇನಾಯ ಸೌಭದ್ರಂ ಶೇಷಾಣಾಂ ಚ ಮಹೀಕ್ಷಿತಾಮ್ ।
ಸಮರ್ಥಂ ತಂ ಚ ಮೇನೇ ವೈ ಪಾರ್ಥಾದಭ್ಯಧಿಕಂ ರಣೇ ॥೧೦॥

ವೃಷಸೇನ ಮತ್ತು ಉಳಿದ ರಾಜರಿಗೆ ಅಭಿಮನ್ಯುವು ಸಮರ್ಥನಾಗಿದ್ದಾನೆಂದು, ಅವನು ಅರ್ಜುನನಿಗಿಂತಲೂ ಶ್ರೇಷ್ಠನಾಗಿದ್ದಾನೆಂದು ತಿಳಿದು ಅಭಿಮನ್ಯುವನ್ನು ಯೋಜಿಸಿದನು.

ಏವಂ ವಿಭಜ್ಯ ಯೋಧಾಂಸ್ತಾನ್ ಪೃಥಕ್ ಚ ಸಹ ಚೈವ ಹ ।
ಜ್ವಾಲಾವರ್ಣೋ ಮಹೇಷ್ವಾಸೋ ದ್ರೋಣಮಂಶಮಕಲ್ಪಯತ್ ॥೧೧॥

ಹೀಗೆ ಯೋಧರನ್ನು ಪ್ರತ್ಯೇಕವಾಗಿ ಮತ್ತು ಸಾಮೂಹಿಕವಾಗಿ ವಿಭಾಗಿಸಿ ಜ್ವಾಲಾವರ್ಣನೂ, ಮಹಾಧನುರ್ಧಾರಿಯೂ ಆದ ಅವನು ದ್ರೋಣರನ್ನು ತನ್ನ ಭಾಗವೆಂದು ಸಂಕಲ್ಪಿಸಿದನು.

ಧೃಷ್ಟದ್ಯುಮ್ನೋ ಮಹೇಶ್ವಾಸಃ ಸೇನಾಪತಿಪತಿಸ್ತತಃ ।
ವಿಧಿವದ್ ವ್ಯೂಹ್ಯ ಮೇಧಾವೀ ಯುದ್ಧಾಯ ಧೃತಮಾನಸಃ ॥೧೨॥

ಯಥೋದ್ದಿಷ್ಟಾನಿ ಸೈನ್ಯಾನಿ ಪಾಂಡವಾನಾಮಯೋಜಯತ್ ।
ಜಯಾಯ ಪಾಂಡುಪುತ್ರಾಣಾಂ ಯತ್ತಸ್ತಸ್ಥೌ ರಣಾಜಿರೇ ॥೧೩॥

ಮಹಾಧನುರ್ಧಾರಿಯೂ, ಸೇನಾಪತಿಪತಿಯೂ, ಮೇಧಾವಿಯೂ ಆದ ಧೃಷ್ಟದ್ಯುಮ್ನನು ಯುದ್ಧದಲ್ಲಿ ನೆಟ್ಟ ಮನಸ್ಸುಳ್ಳವನಾಗಿ, ಪಾಂಡವರ ಸೈನ್ಯವನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಶಾಸ್ತ್ರಸಮ್ಮತವಾದ ರೀತಿಯಲ್ಲಿ, ಪಾಂಡವರ ಜಯಕ್ಕಾಗಿ ವ್ಯೂಹವನ್ನು ರಚನೆ ಮಾಡಿ ರಣರಂಗದಲ್ಲಿ ಜಾಗರೂಕನಾಗಿ ನಿಂತನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಉದ್ಯೋಗಪರ್ವಣಿ ದ್ವಿಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ಉಲೂಕದೂತಾಗಮನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

॥ ಸಮಾಪ್ತಮ್ ಉಲೂಕದೂತಾಗಮನಪರ್ವ ॥

★ ★ ★ ★ ★

೧೧. ರಥಾತಿರಥಸಂಖ್ಯಾನಪರ್ವ

ನೂರ ಅರವತ್ಮೂರನೆಯ ಅಧ್ಯಾಯ

ಭೀಷ್ಮರಿಂದ ದುರ್ಯೋಧನನ ಸಾಂತ್ವನ ಮತ್ತು ರಥಾತಿರಥರ ಗಣನೆ.

ಧೃತರಾಷ್ಟ್ರ:

ಪ್ರತಿಜ್ಞಾತೇ ಫಲ್ಗುನೇನ ವಧೇ ಭೀಷ್ಮಸ್ಯ ಸಂಜಯ ।
ಕಿಮಕುರ್ವತ ಮೇ ಪುತ್ರಾ ಮಂದಾ ದುರ್ಯೋಧನಾದಯಃ ॥೧॥

ಧೃತರಾಷ್ಟ್ರ– ಎಲೈ ಸಂಜಯನೇ, ಅರ್ಜುನನು ಭೀಷ್ಮರ ವಧೆಯನ್ನು ಪ್ರತಿಜ್ಞೆ ಮಾಡಿದ ಮೇಲೆ ಮಂದರಾದ, ನನ್ನ ಪುತ್ರರಾದ ದುರ್ಯೋಧನಾದಿಗಳು ಏನು ಮಾಡಿದರು?

ಹತಮೇವ ಹಿ ಪಶ್ಯಾಮಿ ಗಾಂಗೇಯಂ ಪಿತರಂ ರಣೇ ।
ವಾಸುದೇವಸಹಾಯೇನ ಪಾರ್ಥೇನ ದೃಢಧನ್ವಿನಾ ॥೨॥

ಕೃಷ್ಣನ ಸಹಾಯವುಳ್ಳ, ದೃಢಧನುಸ್ಸನ್ನು ಹೊಂದಿದ ಅರ್ಜುನನಿಂದ ತಂದೆಯಾದ ಗಾಂಗೇಯರು ಯುದ್ಧದಲ್ಲಿ ಹತನಾಗಿದ್ದಾರೆ ಎಂದೇ ಕಾಣುತ್ತಿದ್ದೇನೆ.

ಸ ಚಾಪರಿಮಿತಪ್ರಜ್ಞಃ ತಚ್ಛ್ರುತ್ವಾ ಪಾರ್ಥಭಾಷಿತಮ್ ।
ಕಿಮುಕ್ತವಾನ್ ಮಹೇಷ್ವಾಸೋ ಭೀಷ್ಮಃ ಪ್ರಹರತಾಂ ವರಃ ॥೩॥

ಅಪರಿಮಿತ ಪ್ರಜ್ಞೆಯುಳ್ಳವರೂ, ಮಹಾ ಧನುರ್ಧಾರಿಗಳೂ, ಪ್ರಹಾರ ಮಾಡುವವರಲ್ಲಿ ಶ್ರೇಷ್ಠರೂ ಆದ ಭೀಷ್ಮರು ಅರ್ಜುನನ ಮಾತುಗಳನ್ನು ಕೇಳಿ ಏನು ಹೇಳಿದರು?

ಸೈನಾಪತ್ಯಂ ಚ ಸಂಪ್ರಾಪ್ಯ ಕೌರವಾಣಾಂ ಧುರಂಧರಃ ।
ಕಿಮಚೇಷ್ಟತ ಗಾಂಗೇಯೋ ಮಹಾಬುದ್ಧಿಪರಾಕ್ರಮಃ ॥೪॥

ಮಹಾಬುದ್ಧಿ ಮತ್ತು ಪರಾಕ್ರಮವನ್ನು ಹೊಂದಿದ, ಕೌರವರ ಧುರಂಧರನಾದ ಭೀಷ್ಮರು ಸೇನಾಧಿಪತ್ಯವನ್ನು ವಹಿಸಿ ಏನು ಮಾಡಿದರು?

ವೈಶಂಪಾಯನಃ

ತತಸ್ತತ್ ಸಂಜಯಸ್ತಸ್ಮೈ ಸರ್ವಮೇವ ನ್ಯವೇದಯತ್ ।
ಯಥೋಕ್ತಂ ಕುರುವೃದ್ಧೇನ ಭೀಷ್ಮೇಣಾಮಿತತೇಜಸಾ ॥೫॥

ವೈಶಂಪಾಯನ– ಅಮಿತ ತೇಜಸ್ವಿಗಳಾದ, ಕುರುವೃದ್ಧರಾದ ಭೀಷ್ಮರು ಹೇಳಿದುದೆಲ್ಲವನ್ನೂ ಸಂಜಯನು ಆಗ ಧೃತರಾಷ್ಟ್ರನಿಗೆ ನಿವೇದಿಸಿದನು.

ಸೈನಾಪತ್ಯಮನುಪ್ರಾಪ್ಯ ಭೀಷ್ಮಃ ಶಾಂತನವೋ ನೃಪ ।
ದುರ್ಯೋಧನಮುವಾಚೇದಂ ವಚನಂ ಹರ್ಷಯನ್ನಿವ ॥೬॥

ಎಲೈ ರಾಜನೇ, ಶಂತನುಪುತ್ರರಾದ ಭೀಷ್ಮರು ಸೇನಾಧಿಪತ್ಯವನ್ನು ಹೊಂದಿ, ದುರ್ಯೋಧನನನ್ನು ಸಂತೋಷಪಡಿಸುವವರಂತೆ ಅವನನ್ನು ಕುರಿತು ಈ ಮಾತನ್ನು ಆಡಿದರು.

ನಮಸ್ಕೃತ್ಯ ಕುಮಾರಾಯ ಸೇನಾನ್ಯೇ ಶಕ್ತಿಪಾಣಯೇ ॥೭॥
ಅಹಂ ಸೇನಾಪತಿಸ್ತೇऽದ್ಯ ಭವಿಷ್ಯಾಮಿ ನ ಸಂಶಯಃ ॥೮॥

ನಾನು ಶಕ್ತಿಪಾಣಿಯಾದ, ದೇವಸೇನಾಧಿಪತಿಯಾದ ಷಣ್ಮುಖನಿಗೆ ನಮಸ್ಕಾರವನ್ನು ಮಾಡಿ ಈ ದಿನ ನಿಸ್ಸಂಶಯವಾಗಿ ನಿನಗೆ ಸೇನಾಪತಿಯಾಗುವೆನು.

ಸೇನಾಕರ್ಮಣ್ಯಭಿಜ್ಞೋऽಸ್ಮಿ ವ್ಯೂಹೇಷು ವಿವಿಧೇಷು ಚ ।
ಕರ್ಮ ಕಾರಯಿತುಂ ಚೈವ ಭೃತಾನಪ್ಯಭೃತಾಂಸ್ತಥಾ ॥೯॥

ನಾನು ಸೇನಾಕರ್ಮಗಳಲ್ಲಿ ಅಭಿಜ್ಞನಾಗಿದ್ದೇನೆ. ವಿವಿಧ ವ್ಯೂಹಗಳನ್ನು ರಚಿಸಲು ಮತ್ತು ವೇತನವನ್ನು ಪಡೆಯುವ ನಮ್ಮವರಿಂದ ಮತ್ತು ಪಡೆಯದ ಇತರ ಸೈನಿಕರಿಂದ ಕಾರ್ಯವನ್ನು ಮಾಡಿಸಲು ತಿಳಿದಿದ್ದೇನೆ.

ಯಾತ್ರಾಯಾನೇ ಚ ಯುದ್ಧೇ ಚ ಲಬ್ಧಪ್ರಶಮನೇಷು ಚ ।
ಶೃಂಗಂ ವೇದ ಮಹಾರಾಜ ಯಥಾ ವೇದ ಬೃಹಸ್ಪತಿಃ ॥೧೦॥

ವ್ಯೂಹಾನಾಂ ಚ ಸಮಾರಂಭಾನ್ ದೇವಗಾಂಧರ್ವಮಾನುಷಾನ್ ।
ತೈರಹಂ ಮೋಹಯಿಷ್ಯಾಮಿ ಪಾಂಡವಾನ್ ವ್ಯೇತು ತೇ ಜ್ವರಃ ॥೧೧॥

ಎಲೈ ಮಹಾರಾಜನೇ, ಸೇನೆಯನ್ನು ಮುಂದೆ ತೆಗೆದುಕೊಂಡು ಹೋಗುವುದರಲ್ಲಿ ಮತ್ತು ಯುದ್ಧದಲ್ಲಿ ಮತ್ತು ಶತ್ರುಸೈನಿಕರನ್ನು ಶಾಂತಗೊಳಿಸುವುದರಲ್ಲಿ ಯಾವುದು ಪ್ರಧಾನವಾದುದು ಎಂದು ಬೃಹಸ್ಪತಿಯಂತೆ ತಿಳಿದಿದ್ದೇನೆ. ದೇವ-ಗಂಧರ್ವ ಮತ್ತು ಮನುಷ್ಯರಿಗೆ ಸಂಬಂಧಿಸಿದ ವ್ಯೂಹಗಳನ್ನು ರಚಿಸುವುದನ್ನು ತಿಳಿದಿದ್ದೇನೆ. ಅಂತಹ ವ್ಯೂಹಗಳಿಂದ ಪಾಂಡವರಿಗೆ ಮೋಹವನ್ನು ಉಂಟುಮಾಡುವೆನು. ನಿನ್ನ ಮನಸ್ಸಿನ ಆತಂಕವು ನಿವಾರಣೆಯನ್ನು ಹೊಂದಲಿ.

ಸೋಽಯಂ ಯೋತ್ಸ್ಯಾಮಿ ತತ್ತ್ವೇನ ಪಾಲಯಂಸ್ತವ ವಾಹಿನೀಮ್ ।
ಯಥಾವಚ್ಚಾಸ್ತ್ರತೋ ರಾಜನ್ ವ್ಯೇತು ತೇ ಮಾನಸೋ ಜ್ವರಃ ॥೧೨॥

ಎಲೈ ರಾಜನೇ, ನಿನ್ನ ಸೈನ್ಯವನ್ನು ರಕ್ಷಣೆ ಮಾಡುತ್ತಾ, ಶಾಸ್ತ್ರಕ್ಕೆ ಅನುಗುಣವಾಗಿ ನಾನು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ನಿನ್ನ ಮನಸ್ಸಿನ ಆತಂಕವು ದೂರವಾಗಲಿ.

ದುರ್ಯೋಧನಃ

ವಿದ್ಯತೇ ಮೇ ನ ಗಾಂಗೇಯ ಭಯಂ ದೇವಾಸುರೇಷ್ವಪಿ ।
ಸಮಸ್ತೇಷು ಮಹಾಬಾಹೋ ಸತ್ಯಮೇತದ್ ಬ್ರವೀಮಿ ತೇ ॥೧೩॥

ಎಲೈ ಭೀಷ್ಮರೇ, ಮಹಾಬಾಹುಗಳೇ, ನನಗೆ ದೇವಾಸುರರು ಸಹಿತರಾಗಿ ಸಮಸ್ತವಾಗಿ ಬಂದರೂ ಭಯವಿಲ್ಲ. ಇದನ್ನು ಸತ್ಯವಾಗಿ ಹೇಳುತ್ತಿದ್ದೇನೆ.

ಕಿಂ ಪುನಸ್ತ್ವಯಿ ದುರ್ಧರ್ಷೇ ಸೈನಾಪತ್ಯೇ ವ್ಯವಸ್ಥಿತೇ ।
ದ್ರೋಣೇ ಚ ಪುರುಷವ್ಯಾಘ್ರೇ ಸ್ಥಿತೇ ಯುದ್ಧಾಭಿನಂದಿನಿ ॥೧೪॥

ಹೀಗಿರುವಾಗ ನೀವು ಸೇನಾಪತಿಯಾಗಿ ಮತ್ತು ಯುದ್ಧವನ್ನು ಬಯಸುವ ಪುರುಷವ್ಯಾಘ್ರರಾದ ದ್ರೋಣರು ಸೇನೆಯಲ್ಲಿ ಇರುವಾಗ ಹೆದರಿಕೆಯ ಮಾತೇನು?

ಭವದ್ಭ್ಯಾಂ ಪುರುಷಾಗ್ರ್ಯಾಭ್ಯಾಂ ಸ್ಥಿತಾಭ್ಯಾಂ ವಿಜಯೋ ಮಮ ।
ನ ದುರ್ಲಭಂ ಕುರುಶ್ರೇಷ್ಠ ದೇವರಾಜ್ಯಮಪಿ ಧ್ರುವಮ್ ॥೧೫॥

ಪುರುಷವ್ಯಾಘ್ರರಾದ ನೀವಿಬ್ಬರೂ ಇರುವಾಗ ನನಗೆ ವಿಜಯವು ನಿಶ್ಚಿತವಾಗಿದೆ. ಎಲೈ ಕುರುಶ್ರೇಷ್ಠನೇ, ದೇವರಾಜ್ಯವೂ ಸಹ ನನಗೆ ದುರ್ಲಭವಾದುದಲ್ಲ.

ರಥಸಂಖ್ಯಾಂ ತು ಕಾರ್ತ್ಸ್ನ್ಯೇನ ಪರೇಷಾಮಾತ್ಮನಸ್ತಥಾ ।
ತಥೈವಾತಿರಥಾನಾಂ ಚ ವೇತ್ತುಮಿಚ್ಛಾಮಿ ಕೌರವ ॥೧೬॥

ಎಲೈ ಕೌರವನೇ, ನಾನು ನಮ್ಮ ಮತ್ತು ಶತ್ರುಗಳ ರಥರ ಮತ್ತು ಅತಿರಥರ ಸಂಖ್ಯೆಯನ್ನು ತಿಳಿಯಲು ಬಯಸುತ್ತೇನೆ.

ಪಿತಾಮಹೋ ಹಿ ಕುಶಲಃ ಪರೇಷಾಮಾತ್ಮನಸ್ತಥಾ ।
ಶ್ರೋತುಮಿಚ್ಛಾಮ್ಯಹಂ ಸರ್ವೈಃ ಸಹೈಭಿರ್ವಸುಧಾಧಿಪೈಃ ॥೧೭॥

ಪಿತಾಮಹರಾದ ನೀವು ನಮ್ಮ ಮತ್ತು ಶತ್ರುಗಳ ಬಲದ ಜ್ಞಾನದ ವಿಷಯದಲ್ಲಿ ಕುಶಲರಾಗಿದ್ದೀರಿ. ಈ ಎಲ್ಲ ರಾಜರ ಜೊತೆಯಲ್ಲಿ ನಾನು ರಥಾತಿರಥರ ಸಂಖ್ಯೆಯನ್ನು ಕೇಳಲು ಬಯಸುತ್ತೇನೆ.

ಭೀಷ್ಮಃ

ಗಾಂಧಾರೇ ಶೃಣು ರಾಜೇಂದ್ರ ರಥಸಂಖ್ಯಾಂ ಸ್ವಕೇ ಬಲೇ ।
ಯೇ ರಥಾಃ ಪೃಥಿವೀಪಾಲ ತಥೈವಾತಿರಥಾಶ್ಚ ಯೇ ॥೧೮॥

ಭೀಷ್ಮ– ಎಲೈ ಗಾಂಧಾರಿಪುತ್ರನೇ, ರಾಜೇಂದ್ರನೇ, ನಿನ್ನ ಸೈನ್ಯದಲ್ಲಿರುವ ರಥರ ಮತ್ತು ಅತಿರಥರ ಸಂಖ್ಯೆಯನ್ನು ಕೇಳುವವನಾಗು.

ಪತ್ತೀನಾಂ ತವ ಸೇನಾಯಾಂ ಪ್ರಯುತಾನ್ಯರ್ಬುದಾನಿ ಚ ।
ರಥಾನಾಂ ತವ ಸೇನಾಯಾಂ ಯಥಾಮುಖ್ಯಂ ತು ಮೇ ಶೃಣು ॥೧೯॥

ನಿನ್ನ ಸೈನ್ಯದಲ್ಲಿ ಬಹುಸಂಖ್ಯಾತರಾದ ಪದಾತಿಗಳು ಮತ್ತು ರಥರೂ ಇದ್ದಾರೆ. ಆ ರಥರಲ್ಲಿ ಮುಖ್ಯರಾದವರನ್ನು ಮಾತ್ರ ಕೇಳು.

ಭವಾನಗ್ರೇ ರಥೋದಾರಃ ಸಹ ಸರ್ವೈಃ ಸಹೋದರೈಃ ।
ದುಃಶಾಸನಪ್ರಭೃತಿಭಿಃ ಭ್ರಾತೃಭಿಃ ಶತಸಮ್ಮಿತೈಃ ॥೨೦॥

ದುಶ್ಶಾಸನ ಮೊದಲಾದ ನೂರು ಸಹೋದರರಿಂದ ಕೂಡಿದ ನೀನು ಮೊದಲನೆಯ ಶ್ರೇಷ್ಠರಥನಾದವನು.

ಸರ್ವೇ ಕೃತಪ್ರಹರಣಾಃ ಛೇದ್ಯಭೇದ್ಯವಿಶಾರದಾಃ ।
ರಥೋಪಸ್ಥೇ ಗಜಸ್ಕಂಧೇ ಗದಾಯುದ್ಧೇऽಸಿಚರ್ಮಣಿ ॥೨೧॥

ನೀನು ಮತ್ತು ಆ ಸಹೋದರರು ಎಲ್ಲಾ ಶಸ್ತ್ರಗಳನ್ನು ಬಲ್ಲವರು. ಛೇದನ-ಭೇದನಗಳಲ್ಲಿ ವಿಶಾರದರು. ರಥದಲ್ಲಿ, ಗಜಸ್ಕಂಧದಲ್ಲಿ, ಗದಾಯುದ್ಧದಲ್ಲಿ ಮತ್ತು ಖಡ್ಗಚರ್ಮಯುದ್ಧದಲ್ಲಿ ವಿಶಾರದರಾದವರು.

ಸಂಯಾತಾರಃ ಪ್ರಹರ್ತಾರಃ ಕೃತಾಸ್ತ್ರಾ ಭಾರಸಾಧನಾಃ ।
ಇಷ್ವಸ್ತ್ರೇ ದ್ರೋಣಶಿಷ್ಯಾಶ್ಚ ಕೃಪಸ್ಯ ಚ ಶರದ್ವತಃ ॥೨೨॥

ಮುಂದೆ ನುಗ್ಗುವವರು, ಹೊಡೆಯುವವರು, ಅಸ್ತ್ರವಿದ್ಯೆಯನ್ನು ಬಲ್ಲವರು, ಭಾರವನ್ನು ಸಹಿಸುವವರು, ಶಸ್ತ್ರವಿದ್ಯೆಯಲ್ಲಿ ಮತ್ತು ಅಸ್ತ್ರವಿದ್ಯೆಯಲ್ಲಿ ದ್ರೋಣಾಚಾರ್ಯರ ಮತ್ತು ಕೃಪಾಚಾರ್ಯರ ಶಿಷ್ಯರಾದವರು.

ಏತೇ ಹನಿಷ್ಯಂತಿ ರಣೇ ಪಾಂಚಾಲಾನ್ ಯುದ್ಧದುರ್ಮದಾನ್ ।
ಕೃತಕಿಲ್ಬಿಷಾಃ ಪಾಂಡವೇಯೈರ್ಧಾರ್ತರಾಷ್ಟ್ರಾ ಮನಸ್ವಿನಃ ॥೨೩॥

ಪಾಂಡುಪುತ್ರರಿಂದ ಪೀಡಿಸಲ್ಪಟ್ಟ, ಧೈರ್ಯಶಾಲಿಗಳಾದ ಇವರು ಯುದ್ಧದಲ್ಲಿ ಯುದ್ಧದುರ್ಮದರಾದ ಪಾಂಚಾಲರನ್ನು ಕೊಲ್ಲುವರು.

ಯಥಾಽಹಂ ಭರತಶ್ರೇಷ್ಠ ಸರ್ವಸೇನಾಪತಿಸ್ತವ ।
ಶತ್ರೂನ್ ವಿಧ್ವಂಸಯಿಷ್ಯಾಮಿ ಕದರ್ಥೀಕೃತ್ಯ ಪಾಂಡವಾನ್ ॥೨೪॥

ನ ತ್ವಾತ್ಮನೋ ಗುಣಾನ್ ವಕ್ತುಮರ್ಹಾಮಿ ವಿದಿತೋಽಸ್ಮಿ ತೇ ॥೨೫॥

ಎಲೈ ಭರತಶ್ರೇಷ್ಠನೇ, ನಿನ್ನ ಸೇನಾಪತಿಯಾದ ನಾನೂ ಒಬ್ಬ ರಥ. ಪಾಂಡವರನ್ನು ತುಚ್ಛೀಕರಿಸಿ ಶತ್ರುಗಳನ್ನು ಧ್ವಂಸಗೊಳಿಸುವೆನು. ನನ್ನ ಗುಣಗಳನ್ನು ನಾನೇ ಹೇಳುವುದು ಉಚಿತವಲ್ಲ. ನಾನು ನಿನಗೆ ತಿಳಿದವನು.

ಕೃತವರ್ಮಾ ತ್ವತಿರಥೋ ಭೋಜಃ ಶಸ್ತ್ರಭೃತಾಂ ವರಃ ।
ಅರ್ಥಸಿದ್ಧಿಂ ತವ ರಣೇ ಕರಿಷ್ಯತಿ ನ ಸಂಶಯಃ ॥೨೬॥

ಭೋಜವಂಶಕ್ಕೆ ಸೇರಿದ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಕೃತವರ್ಮನು ಒಬ್ಬ ಅತಿರಥ. ಅವನು ಯುದ್ಧದಲ್ಲಿ ನಿನ್ನ ಅರ್ಥಸಿದ್ಧಿಯನ್ನು ಮಾಡುವುದರಲ್ಲಿ ಸಂಶಯವಿಲ್ಲ.

ಶಸ್ತ್ರವದ್ಭಿರನಾಧೃಷ್ಯೋ ದೂರಪಾತೀ ದೃಢಾಯುಧಃ ।
ಹನಿಷ್ಯತಿ ಚಮೂಂ ತೇಷಾಂ ಮಹೇಂದ್ರೋ ದಾನವಾನಿವ ॥೨೭॥

ಶಸ್ತ್ರಜ್ಞರಿಂದ ಸೋಲಿಸಲು ಸಾಧ್ಯವಿಲ್ಲದ, ದೂರದವರೆಗೂ ಪ್ರಹಾರ ಮಾಡುವ, ದೃಢವಾದ ಆಯುಧವುಳ್ಳ ಅವನು, ಮಹೇಂದ್ರನು ದಾನವರನ್ನು ಸಂಹರಿಸಿದಂತೆ ಪಾಂಡವರ ಸೇನೆಯನ್ನು ಸಂಹರಿಸುವನು.

ಮದ್ರರಾಜೋ ಮಹೇಷ್ವಾಸಃ ಶಲ್ಯೋ ಮೇಽತಿರಥೋ ಮತಃ ।
ಸ್ಪರ್ಧತೇ ವಾಸುದೇವೇನ ನಿತ್ಯಂ ಯೋ ವೈ ರಣೇ ರಣೇ ॥೨೮॥

ಭಾಗಿನೇಯಾನ್ ನಿಜಾಂಸ್ಯಕ್ತ್ವಾ ಶಲ್ಯಸ್ತೇಽತಿರಥೋ ಮತಃ ॥೨೯॥

ಮದ್ರರಾಜನಾದ, ಮಹೇಷ್ವಾಸನಾದ ಶಲ್ಯನು ಒಬ್ಬ ಅತಿರಥನೆಂದು ನನ್ನ ಅಭಿಪ್ರಾಯ. ಅವನು ಪ್ರತಿಯುದ್ಧದಲ್ಲಿಯೂ ಕೃಷ್ಣನ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡುತ್ತಾನೆ. ತನ್ನ ತಂಗಿಯ ಮಕ್ಕಳನ್ನು ಬಿಟ್ಟು ನಿನ್ನ ಕಡೆ ಬಂದಿರುವ ಶಲ್ಯನು ಅತಿರಥನೆಂದು ನನ್ನ ಅಭಿಪ್ರಾಯ.

ಏಷ ಯೋತ್ಸ್ಯತಿ ಸಂಗ್ರಾಮೇ ಕೃಷ್ಣಂ ಚಕ್ರಗದಾಧರಮ್ ।
ಸಾಗರೋರ್ಮಿಸಮೈರ್ಬಾಣೈಃ ಪ್ಲಾವಯನ್ನಿವ ಶಾತ್ರವಾನ್ ॥೩೦॥

ಇವನು ಯುದ್ಧದಲ್ಲಿ ಸಮುದ್ರದ ಅಲೆಗಳಂತಿರುವ ತನ್ನ ಬಾಣಗಳಿಂದ ಶತ್ರುಗಳನ್ನು ಕೊಚ್ಚುತ್ತಾ, ಚಕ್ರಗದಾಧರನಾದ ಕೃಷ್ಣನ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಭೂರಿಶ್ರವಾಃ ಕೃತಾಸ್ತ್ರಶ್ಚ ತವ ಚಾಪಿ ಹಿತಃ ಸುಹೃತ್ ।
ಸೌಮದತ್ತಿರ್ಮಹೇಷ್ವಾಸೋ ರಥಯೂಥಪಯೂಥಪಃ ॥೩೧॥

ಬಲಕ್ಷಯಮಮಿತ್ರಾಣಾಂ ಸುಮಹಾಂತಂ ಕರಿಷ್ಯತಿ ॥೩೨॥

ನಿನಗೆ ಹಿತನಾದ, ಸ್ನೇಹಿತನಾದ, ಸೋಮದತ್ತನ ಮಗನಾದ ಭೂರಿಶ್ರವನು ಮಹಾಧನುರ್ಧಾರಿ, ಅಸ್ತ್ರವಿದ್ಯೆಯನ್ನು ಬಲ್ಲವನು. ಅವನು ರಥಯೂಥಪಯೂಥಪ (ರಥದ ಸಮೂಹವನ್ನು ರಕ್ಷಿಸುವ ಸಮೂಹವನ್ನು ರಕ್ಷಿಸುವವನು). ಅವನು ಶತ್ರುಗಳ ಸೈನ್ಯಕ್ಕೆ ದೊಡ್ಡ ವಿನಾಶವನ್ನು ಉಂಟು ಮಾಡುವನು.

ಸಿಂಧುರಾಜೋ ಮಹಾರಾಜ ಮತೋ ಮೇ ದ್ವಿಗುಣೋ ರಥಃ ।
ಯೋತ್ಸ್ಯತೇ ಸಮರೇ ರಾಜನ್ ವಿಕ್ರಾಂತೋ ರಥಸತ್ತಮಃ ॥೩೩॥

ಎಲೈ ಮಹಾರಾಜನೇ, ಸಿಂಧುರಾಜನಾದ ಜಯದ್ರಥನು ಎರಡು ರಥರಿಗೆ ಸಮಾನನಾದವನೆಂದು ನನ್ನ ಅಭಿಪ್ರಾಯ. ಎಲೈ ರಾಜನೇ, ಪರಾಕ್ರಮಿಯಾದ ಆ ರಥಶ್ರೇಷ್ಠನು ಯುದ್ಧವನ್ನು ಮಾಡುವನು.

ದ್ರೌಪದೀಹರಣೇ ಪೂರ್ವಂ ಪರಿಕ್ಲಿಷ್ಟಶ್ಚ ಪಾಂಡವೈಃ ।
ಸಂಸ್ಮರಂಸ್ತಂ ಪರಿಕ್ಲೇಶಂ ಯೋತ್ಸ್ಯತೇ ಪರವೀರಹಾ ॥೩೪॥

ಹಿಂದೆ ದ್ರೌಪದೀಹರಣ ಕಾಲದಲ್ಲಿ ಪಾಂಡವರಿಂದ ಕ್ಲೇಶಕ್ಕೆ ಒಳಗಾದ, ಶತ್ರುವೀರ ಘಾತಕನಾದ ಅವನು ಆ ಪರಿಕ್ಲೇಶವನ್ನು ಸ್ಮರಿಸುತ್ತಾ ಯುದ್ಧವನ್ನು ಮಾಡುವನು.

ಏತೇನ ಹಿ ತದಾ ರಾಜನ್ ತಪ ಆಸ್ಥಾಯ ದಾರುಣಮ್ ।
ಸುದುರ್ಲಭೋ ವರೋ ಲಬ್ಧಃ ಪಾಂಡವಾನ್ ಯೋದ್ಧುಮಾಹವೇ ॥

ಎಲೈ ರಾಜನೇ, ಆಗ ಇವನು ದಾರುಣವಾದ ತಪಸ್ಸನ್ನು ಮಾಡಿ, ಪಾಂಡವರ ಜೊತೆ ಯುದ್ಧವನ್ನು ಮಾಡಲು ರುದ್ರನಿಂದ ಸುದುರ್ಲಭವಾದ ವರವನ್ನು ಪಡೆದಿದ್ದಾನೆ.

ಸ ಏಷ ರಥಶಾರ್ದೂಲಃ ತದ್ವೈರಂ ಸಂಸ್ಮರನ್ ರಣೇ ।
ಯೋತ್ಸ್ಯತೇ ಪಾಂಡವೈಸ್ತಾತ ಪ್ರಾಣಾಂಸ್ಯಕ್ತ್ವಾ ಸುದುಸ್ತ್ಯಜಾನ್ ॥೫೬॥

ಎಲೈ ಪ್ರೀತಿಪಾತ್ರನೇ, ಈ ರಥಶಾರ್ದೂಲನು ಆ ವೈರವನ್ನು ಸ್ಮರಿಸಿಕೊಂಡು, ದುಸ್ತ್ಯಜವಾದ ತನ್ನ ಪ್ರಾಣವನ್ನು ತೊರೆದು, ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ರಥಾತಿರಥಸಂಖ್ಯಾನಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ನಾಲ್ಕನೆಯ ಅಧ್ಯಾಯ

ಭೀಷ್ಮರಿಂದ ದುರ್ಯೋಧನನ ಸೈನ್ಯದಲ್ಲಿ ಮುಂದುವರಿದ ರಥಾತಿರಥರ ಗಣನೆ.

ಭೀಷ್ಮಃ

ಸುದಕ್ಷಿಣಸ್ತು ಕಾಂಭೋಜೋ ರಥ ಏಕಗುಣೋ ಮತಃ ।
ತವಾರ್ಥಸಿದ್ಧಿಮಾಕಾಂಕ್ಷನ್ ಯೋತ್ಸ್ಯತೇ ಸಮರೇ ಪರೈಃ ॥೧॥

ಭೀಷ್ಮ– ಕಾಂಭೋಜದೇಶದ ರಾಜನಾದ ಸುದಕ್ಷಿಣನು ಒಬ್ಬ ರಥನೆಂದು ನನ್ನ ಅಭಿಪ್ರಾಯ. ನಿನ್ನ ಅರ್ಥಸಿದ್ಧಿಯನ್ನು ಬಯಸಿ ಅವನು ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಏತಸ್ಯ ರಥಸಿಂಹಸ್ಯ ತವಾರ್ಥೇ ರಾಜಸತ್ತಮ ।
ಪರಾಕ್ರಮಂ ಯಥೇಂದ್ರಸ್ಯ ದ್ರಕ್ಷ್ಯಂತಿ ಕುರವೋ ಯುಧಿ ॥೨॥

ಎಲೈ ರಾಜಶ್ರೇಷ್ಠನೇ, ನಿನ್ನ ಸಲುವಾಗಿ ಯುದ್ಧವನ್ನು ಮಾಡುವ, ರಥಸಿಂಹನಾದ ಇವನ ಇಂದ್ರನ ಪರಾಕ್ರಮದಂತಿರುವ ಪರಾಕ್ರಮವನ್ನು ಕೌರವರು ಯುದ್ಧದಲ್ಲಿ ನೋಡುವರು.

ಏತಸ್ಯ ರಥವಂಶೇ ಹಿ ತಿಗ್ಮವೇಗಪ್ರಹಾರಿಣಃ ।
ಕಾಂಭೋಜಾನಾಂ ಮಹಾರಾಜ ಶಲಭಾನಾಮಿವಾತತಿಃ ॥೩॥

ಎಲೈ ಮಹಾರಾಜನೇ, ಇವನ ರಥವಂಶದಲ್ಲಿ ಶೀಘ್ರವಾದ ವೇಗ ಮತ್ತು ಪ್ರಹಾರವನ್ನುಳ್ಳ ಕಾಂಭೋಜರು ಪತಂಗಗಳ ಸಮೂಹದಂತೆ ಇದ್ದಾರೆ.

ನೀಲೋ ಮಾಹಿಷ್ಮತೀವಾಸೀ ನೀಲವರ್ಮಾ ರಥಸ್ತವ ।
ರಥವಂಶೇನ ಕದನಂ ಶತ್ರೂಣಾಂ ವೈ ಕರಿಷ್ಯತಿ ॥೪॥

ಮಾಹಿಷ್ಮತೀ ಪತಿಯಾದ, ನೀಲಕವಚವನ್ನು ಧರಿಸಿದ ನೀಲನು ನಿನ್ನ ಪರವಾಗಿ ಯುದ್ಧವನ್ನು ಮಾಡುವ ಇನ್ನೊಬ್ಬ ರಥ. ಅವನು ತನ್ನ ರಥಸಮೂಹದಿಂದ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಕೃತವೈರಃ ಸದಾ ಚೈವ ಸಹದೇವೇನ ಪಾರ್ಥಿವ ।
ಯೋತ್ಸ್ಯತೇ ಸತತಂ ರಾಜನ್ ತವಾರ್ಥೇ ಕುರುನಂದನ ॥೫॥

ಎಲೈ ಕುರುನಂದನನೇ, ರಾಜನೇ, ಹಿಂದೆ ಸಹದೇವನ ಜೊತೆಯಲ್ಲಿ ವೈರವನ್ನು ಸಂಪಾದಿಸಿದ ಅವನು ನಿನ್ನ ಸಲುವಾಗಿ ಸತತವಾಗಿ ಯುದ್ಧವನ್ನು ಮಾಡುವನು.

ವಿಂದಾನುವಿಂದಾವಾವಂತ್ಯೌ ಸಮೇತೌ ರಥಸತ್ತಮೌ ।
ಕೃತಿನೌ ಸಮರೇ ತಾತ ದೃಢವೀರ್ಯಪರಾಕ್ರಮೌ ॥೬॥

ಏತೌ ತೌ ಪುರುಷವ್ಯಾಘ್ರೌ ರಿಪುಸೈನ್ಯಂ ಪ್ರಧಕ್ಷ್ಯತಃ ।
ಗದಾಪ್ರಾಸಾಸಿನಾರಾಚೈಃ ತೋಮರೈಶ್ಚ ಕರಚ್ಯುತೈಃ ॥೭॥

ಯುದ್ಧಾಭಿಕಾಮೌ ಸಮರೇ ಕ್ರೀಡಂತಾವಿವ ಯೂಥಪೌ ।
ಯೂಥಮಧ್ಯೇ ಮಹಾರಾಜ ವಿಚರಂತೌ ಕೃತಾಂತವತ್ ॥೮॥

ಅವಂತಿದೇಶದ, ಯಾವಾಗಲೂ ಜೊತೆಯಲ್ಲಿರುವ ವಿಂದಾನುವಿಂದರು ರಥಶ್ರೇಷ್ಠರಾದವರು. ಎಲೈ ಪ್ರೀತಿಪಾತ್ರನೇ, ಅವರು ದೃಢವಾದ ಸಾಮರ್ಥ್ಯ ಮತ್ತು ಪರಾಕ್ರಮವುಳ್ಳವರು ಮತ್ತು ಯುದ್ಧದಲ್ಲಿ ಪಳಗಿದವರು. ಈ ಇಬ್ಬರು ಪುರುಷವ್ಯಾಘ್ರರು ತಮ್ಮ ಕೈಯಿಂದ ಪ್ರಯೋಗಿಸಲ್ಪಟ್ಟ ಗದೆ, ಪ್ರಾಸ, ಖಡ್ಗ, ನಾರಾಚ, ತೋಮರಗಳಿಂದ ಶತ್ರುಸೈನ್ಯವನ್ನು ದಹಿಸುವರು. ಎಲೈ ಮಹಾರಾಜನೇ, ಯುದ್ಧವನ್ನು ಬಯಸುವ ಅವರು ಆಟವಾಡುವ ಎರಡು ಸಲಗಗಳಂತೆ ಶತ್ರುಸೈನ್ಯದ ಮಧ್ಯದಲ್ಲಿ ಯಮನಂತೆ ಸಂಚರಿಸುವವರು.

ತ್ರಿಗರ್ತಾ ಭ್ರಾತರಃ ಪಂಚ ರಥೋದಾರಾ ಮತಾ ಮಮ ।
ಕೃತವೈರಾಶ್ಚ ಪಾರ್ಥೇನ ವಿರಾಟನಗರೇ ತದಾ ॥೯॥

ತ್ರಿಗರ್ತ ದೇಶದ ಐದುಜನ ಸಹೋದರರು ಶ್ರೇಷ್ಠರಾದ ರಥರು ಎಂದು ನನ್ನ ಅಭಿಪ್ರಾಯ. ಹಿಂದೆ ಗೋಗ್ರಹಣ ಕಾಲದಲ್ಲಿ ವಿರಾಟನಗರದಲ್ಲಿ ಅರ್ಜುನನ ಜೊತೆಯಲ್ಲಿ ಅವರು ವೈರವನ್ನು ಮಾಡಿಕೊಂಡಿದ್ದಾರೆ.

ಮಕರಾ ಇವ ರಾಜೇಂದ್ರ ಸಮುದ್ಭೂತತರಂಗಿಣೀಮ್ ।
ಗಂಗಾಮಿವ ಕ್ಷೋಭಯಂತಿ ಪಾರ್ಥಾನಾಂ ಯುಧಿ ವಾಹಿನೀಮ್॥೧೦॥

ಎಲೈ ರಾಜೇಂದ್ರನೇ, ಎತ್ತರದ ಅಲೆಗಳುಳ್ಳ ಗಂಗೆಯನ್ನು ಮಕರಗಳು ಕ್ಷೋಭಿಸಿದಂತೆ ಪಾರ್ಥರ ಸೈನ್ಯಕ್ಕೆ ಯುದ್ಧದಲ್ಲಿ ಅವರು ಕ್ಷೋಭೆಯನ್ನು ಉಂಟುಮಾಡುವರು.

ತೇ ರಥಾಃ ಪಂಚ ರಾಜೇಂದ್ರ ತೇಷಾಂ ಸತ್ಯರಥೋ ಮುಖಮ್ ।
ಏತೇ ಯೋತ್ಸ್ಯಂತಿ ಸಂಗ್ರಾಮೇ ಸಂಸ್ಮರಂತಃ ಪುರಾಕೃತಮ್ ॥೧೧॥

ವ್ಯಲೀಕಂ ಪಾಂಡವೇಯೇನ ಭೀಮಸೇನಾನುಜೇನ ಹ ॥೧೨॥

ದಿಶೋ ವಿಜಯತಾ ರಾಜನ್ ಶ್ವೇತವಾಹೇನ ಭಾರತ ॥೧೩॥

ಎಲೈ ರಾಜೇಂದ್ರನೇ, ಆ ಐದು ಜನರಲ್ಲಿ ಸತ್ಯರಥನು ಶ್ರೇಷ್ಠನಾದವನು. ಈ ಐವರು ದಿಗ್ವಿಜಯ ಕಾಲದಲ್ಲಿ ಭೀಮಸೇನನ ತಮ್ಮನಾದ, ಪಾಂಡುಪುತ್ರನಾದ ಅರ್ಜುನನಿಂದ ಹಿಂದೆ ಮಾಡಲ್ಪಟ್ಟ ಅಪಚಾರವನ್ನು ಸ್ಮರಿಸುತ್ತಾ ಯುದ್ಧವನ್ನು ಮಾಡುವರು.

ತೇ ಹನಿಷ್ಯಂತಿ ಸೇನಾಂ ತಾಂ ಸಮಾಸಾದ್ಯ ಮಹಾರಥಾನ್ ।
ಪರಾನ್ ವರಾನ್ ಮಹೇಷ್ವಾಸಾನ್ ಕ್ಷತ್ರಿಯಾಣಾಂ ಧುರಂಧರಾನ್ ॥

ಅವರು ಪಾಂಡವರ ಸೇನೆಯನ್ನು ಪ್ರವೇಶಿಸಿ, ಮಹಾರಥರೂ, ಶ್ರೇಷ್ಠರೂ, ಮಹೇಷ್ವಾಸರೂ, ಕ್ಷತ್ರಿಯ ಧುರಂಧರರೂ ಆದ ಶತ್ರುಗಳನ್ನು ಕೊಲ್ಲುವರು.

ಲಕ್ಷ್ಮಣಸ್ತವ ಪುತ್ರಸ್ತು ತಥಾ ದುಃಶಾಸನಸ್ಯ ಚ ।
ಉಭೌ ತೌ ಪುರುಷವ್ಯಾಘ್ರೌ ಸಮರೇಷ್ವನಿವರ್ತಿನೌ ॥೧೫॥

ನಿನ್ನ ಪುತ್ರನಾದ ಲಕ್ಷ್ಮಣ ಮತ್ತು ದುಶ್ಶಾಸನನ ಪುತ್ರ ಇವರಿಬ್ಬರೂ ಯುದ್ಧದಲ್ಲಿ ಹಿಮ್ಮೆಟ್ಟದ ಪುರುಷವ್ಯಾಘ್ರರು.

ತರುಣೌ ಸುಕುಮಾರೌ ಚ ರಾಜಪುತ್ರೌ ಯಶಸ್ವಿನೌ ।
ಯುದ್ಧಾನಾಂ ಚ ವಿಶೇಷಜ್ಞೌ ಪ್ರಣೇತಾರೌ ಚ ಸರ್ವಶಃ ॥೧೬॥

ಅವರು ತರುಣರೂ, ಸುಕುಮಾರರೂ, ಕೀರ್ತಿವಂತರಾದ ರಾಜಪುತ್ರರೂ, ಯುದ್ಧದ ವಿಶೇಷವನ್ನು ತಿಳಿದವರೂ ಮತ್ತು ಎಲ್ಲ ರೀತಿಯಿಂದಲೂ ಸೈನ್ಯವನ್ನು ನಡೆಸುವವರು.

ರಥಿನೌ ರಥಶಾರ್ದೂಲ ಮತೌ ಮೇ ರಥಸತ್ತಮೌ ।
ಕ್ಷತ್ರಧರ್ಮರತೌ ವೀರೌ ಮಹತ್ ಕರ್ಮ ಕರಿಷ್ಯತಃ ॥೧೭॥

ಎಲೈ ರಥಶಾರ್ದೂಲನೇ, ರಥಿಕರಾದ ಅವರಿಬ್ಬರೂ ಶ್ರೇಷ್ಠರಥರೆಂದು ನನ್ನ ಅಭಿಪ್ರಾಯ. ಕ್ಷತ್ರಧರ್ಮದಲ್ಲಿ ಆಸಕ್ತರಾದ ಆ ವೀರರು ಯುದ್ಧದಲ್ಲಿ ಮಹತ್ತಾದ ಕಾರ್ಯವನ್ನು ಮಾಡುವರು.

ದಂಡಧಾರೋ ಮಹಾರಾಜ ರಥ ಏಕೋ ನರರ್ಷಭಃ ।
ಯೋತ್ಸ್ಯತೇ ತವ ಸಂಗ್ರಾಮೇ ಸ್ವೇನ ಸೈನ್ಯೇನ ಪಾಲಿತಃ ॥೧೮॥

ಎಲೈ ಮಹಾರಾಜನೇ, ನರಶ್ರೇಷ್ಠನಾದ ದಂಡಧಾರನೂ ಇನ್ನೊಬ್ಬ ರಥ. ಅವನು ನಿನ್ನ ಪರವಾಗಿ ತನ್ನ ಸೈನ್ಯದಿಂದ ರಕ್ಷಿತನಾಗಿ ಯುದ್ಧವನ್ನು ಮಾಡುವನು.

ಬೃಹದ್ಬಲಸ್ತಥಾ ರಾಜಾ ಕೌಸಲ್ಯೋ ರಥಸತ್ತಮಃ ।
ರಥೋ ಮಮ ಮತಸ್ತಾತ ಮಹಾವೇಗಪರಾಕ್ರಮಃ ॥೧೯॥

ಹಾಗೆಯೇ ಕೋಸಲದೇಶದ ರಾಜನಾದ, ರಥಶ್ರೇಷ್ಠನಾದ, ಮಹಾವೇಗ ಮತ್ತು ಪರಾಕ್ರಮವುಳ್ಳ ಬೃಹದ್ಬಲನು ಇನ್ನೊಬ್ಬ ರಥನೆಂದು ನನ್ನ ಅಭಿಪ್ರಾಯ.

ಏಷ ಯೋತ್ಸ್ಯತಿ ಸಂಗ್ರಾಮೇ ಸ್ವಾಂ ಚಮೂಂ ಸಂಪ್ರಹರ್ಷಯನ್ ।
ಉಗ್ರಾಯುಧೋ ಮಹೇಷ್ವಾಸೋ ಧಾರ್ತರಾಷ್ಟ್ರಹಿತೇ ರತಃ ॥೨೦॥

ಉಗ್ರವಾದ ಆಯುಧವುಳ್ಳವನೂ, ಮಹಾಧನುರ್ಧಾರಿಯೂ ಮತ್ತು ದುರ್ಯೋಧನನ ಹಿತದಲ್ಲಿ ರತನಾದ ಅವನು ತನ್ನ ಸೈನ್ಯವನ್ನು ಸಂತೋಷ ಪಡಿಸುತ್ತಾ ಯುದ್ಧವನ್ನು ಮಾಡುವನು.

ಕೃಪಃ ಶಾರದ್ವತೋ ರಾಜನ್ ರಥಯೂಥಪಯೂಥಪಃ ।
ಪ್ರಿಯಾನ್ ಪ್ರಾಣಾನ್ ಪರಿತ್ಯಜ್ಯ ಪ್ರಧಕ್ಷ್ಯತಿ ರಿಪೂಂಸ್ತವ ॥೨೧॥

ಎಲೈ ರಾಜನೇ, ಶಾರದ್ವತರಾದ ಕೃಪರು ರಥಯೂಥಪಯೂಥಪರು. ತಮ್ಮ ಪ್ರಿಯವಾದ ಪ್ರಾಣವನ್ನಾದರೂ ತ್ಯಜಿಸಿ ನಿನ್ನ ಶತ್ರುಗಳನ್ನು ದಹಿಸುವರು.

ಗೌತಮಸ್ಯ ಮಹರ್ಷೇಸ್ತು ಆಚಾರ್ಯಸ್ಯ ಶರದ್ವತಃ ।
ಕಾರ್ತಿಕೇಯ ಇವಾಜೇಯಃ ಶರಸ್ತಂಬಾತ್ ಸುತೋ ಬಭೌ ॥೨೨॥

ಬಾಣಗಳನ್ನು ಧರಿಸಿದ, ಆಚಾರ್ಯರಾದ ಗೌತಮಮಹರ್ಷಿಗಳಿಂದ ಶರಸ್ತಂಬದಿಂದ ಜನಿಸಿದ ಅವರು ಷಣ್ಮುಖನಂತೆ ಅಜೇಯರಾಗಿ ಮೆರೆದರು.

ಏಷ ಸೇನಾಂ ಬಹುವಿಧಾಂ ವಿವಿಧಾಯುಧಕಾರ್ಮುಕಾಃ ।
ಅಗ್ನಿವತ್ ಸಮರೇ ರಾಜನ್ ಚರಿಷ್ಯತಿ ವಿಮರ್ದಯನ್ ॥೨೩॥

ಇವರು ವಿವಿಧವಾದ ಆಯುಧ ಮತ್ತು ಧನುಸ್ಸುಗಳನ್ನು ಧರಿಸಿದ, ಬಹುವಿಧವಾದ ಈ ಶತ್ರುಸೈನ್ಯವನ್ನು ಮರ್ದಿಸುತ್ತಾ ಅಗ್ನಿಯಂತೆ ಸಂಚರಿಸುವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಃಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೈದನೆಯ ಅಧ್ಯಾಯ

ಭೀಷ್ಮರಿಂದ ದುರ್ಯೋಧನನ ಸೈನ್ಯದಲ್ಲಿ ರಥಾತಿರಥರ ಗಣನೆಯ ಅನುವೃತ್ತಿ.

ಭೀಷ್ಮಃ

ಶಕುನಿರ್ಮಾತುಲಸ್ತೇಽಸೌ ರಥ ಏಕೋ ನರಾಧಿಪಃ ।
ಪ್ರಸಜ್ಯ ಪಾಂಡವೈಃ ಸರ್ವೈಃ ಯೋತ್ಸ್ಯತೇ ನಾತ್ರ ಸಂಶಯಃ ॥೧॥

ಭೀಷ್ಮ– ನಿನ್ನ ಸೋದರಮಾವನಾದ, ರಾಜನಾದ ಶಕುನಿಯು ಒಬ್ಬ ರಥ. ಅವನು ಪಾಂಡವರ ಮೇಲೆ ಎರಗಿ ಯುದ್ಧ ಮಾಡುವುದರಲ್ಲಿ ಸಂಶಯವಿಲ್ಲ.

ಏತಸ್ಯ ಸೇನಾ ದುರ್ಧರ್ಷಾ ಸಮರೇ ಪ್ರತಿಯೋಧಿನಃ ।
ವಿವಿಧಾಯುಧಭೂಯಿಷ್ಠಾ ವಾಯುವೇಗಸಮಾ ಜವೇ ॥೨॥

ಯುದ್ಧದಲ್ಲಿ ಪ್ರತಿಯಾಗಿ ಯುದ್ಧವನ್ನು ಮಾಡುವ ಇವನ ಸೈನ್ಯವು ಸೋಲಿಸಲು ಅಸಾಧ್ಯವಾದುದು. ಅನೇಕ ಆಯುಧಗಳಿಂದ ಕೂಡಿರುವಂತಹದು ಮತ್ತು ವೇಗದಲ್ಲಿ ವಾಯುವೇಗಕ್ಕೆ ಸಮನಾಗಿರುವುದು.

ದ್ರೋಣಪುತ್ರೋ ಮಹೇಷ್ವಾಸಃ ಸರ್ವೇಷಾಮತಿ ಧನ್ವಿನಾಮ್ ।
ಸಮರೇ ಚಿತ್ರಯೋಧೀ ಚ ದೃಢಾಸ್ತ್ರಶ್ಚ ಮಹಾರಥಃ ॥೩॥

ದ್ರೋಣಪುತ್ರರಾದ ಅಶ್ವತ್ಥಾಮರು ಎಲ್ಲಾ ಧನುರ್ಧಾರಿಗಳನ್ನೂ ಮೀರಿದವರು. ಅವರು ಮಹಾರಥರು, ದೃಢವಾದ ಅಸ್ತ್ರವನ್ನು ಉಳ್ಳವರು ಮತ್ತು ವಿಚಿತ್ರವಾಗಿ ಯುದ್ಧವನ್ನು ಮಾಡುವವರು.

ಏತಸ್ಯ ಹಿ ಮಹಾರಾಜ ಯಥಾ ಗಾಂಡೀವಧನ್ವನಃ ।
ಶರಾಸನವಿನಿರ್ಮುಕ್ತಾಃ ಸಂಸಕ್ತಾ ಯಾಂತಿ ಸಾಯಕಾಃ ॥೪॥

ನೈಷಶಕ್ಯೋ ಮವೀರಃ ಸಂಖ್ಯಾತುಂ ರಥಸತ್ತಮಃ ।
ನಿರ್ದಹೇದಪಿ ಲೋಕಾಂ ಸ್ತ್ರೀನಿಚ್ಛನ್ನೇಷ ಮಹಾರಥಃ ॥೫॥

ಎಲೈ ಮಹಾರಾಜನೇ, ಇವರು ಪ್ರಯೋಗಿಸಿದ ಬಾಣಗಳು ಅರ್ಜುನನ ಬಾಣಗಳಂತೆ ಒಂದಕ್ಕೊಂದು ಸೇರಿಕೊಂಡು ಹೋಗುತ್ತವೆ. ಈ ಮಹಾವೀರರಾದ

ರಥಶ್ರೇಷ್ಠರನ್ನು ಗಣನೆ ಮಾಡಲೂ ಸಾಧ್ಯವಿಲ್ಲ. ಮಹಾಕೀರ್ತಿವಂತರಾದ ಇವರು ಬಯಸಿದರೆ ಮೂರು ಲೋಕಗಳನ್ನೂ ಸುಟ್ಟಾರು.

ಕ್ರೋಧಸ್ತೇಜಶ್ಚ ತಪಸಾ ಸಂಭೃತೋ ವನವಾಸಿನಾಮ್ ।
ದ್ರೋಣೇನಾನುಗೃಹೀತಶ್ಚ ದಿವ್ಯೈರಸ್ತ್ರೈರುದಾರಧೀಃ ॥೫॥

ಇವರು ವನವಾಸಿಗಳ ಕ್ರೋಧ, ತೇಜಸ್ಸು ಮತ್ತು ತಪಸ್ಸುಗಳಿಂದ ಪೂರ್ಣರಾಗಿದ್ದಾರೆ. ಜೊತೆಗೆ ಉದಾರ ಬುದ್ಧಿಯುಳ್ಳ ಇವರು ದ್ರೋಣರಿಂದ ದಿವ್ಯಾಸ್ತ್ರ ಸಂಪಾದನರೂಪವಾದ ಅನುಗ್ರಹವನ್ನೂ ಪಡೆದಿದ್ದಾರೆ.

ದೋಷಸ್ತಸ್ಯ ಮಹಾನೇಕೋ ಯೇನೈಷ ಭರತರ್ಷಭ ।
ನ ಮೇ ರಥೋ ನಾತಿರಥೋ ಮತಃ ಪಾರ್ಥಿವಸತ್ತಮ ॥೬॥

ಎಲೈ ಭರತರ್ಷಭನೇ, ಅವರಲ್ಲಿ ಒಂದೇ ಒಂದು ದೊಡ್ಡ ದೋಷವಿದೆ. ಆದ್ದರಿಂದ ಎಲೈ ರಾಜಶ್ರೇಷ್ಠನೇ, ನಾನು ಅವರನ್ನು ರಥರೆಂದಾಗಲೀ, ಅತಿರಥರೆಂದಾಗಲೀ ಎಣಿಸುವುದಿಲ್ಲ.

ಜೀವಿತಂ ಪ್ರಿಯಮತ್ಯರ್ಥಮಾಯುಷ್ಕಾಮಃ ಸದಾ ದ್ವಿಜಃ ।
ನ ಹ್ಯಸ್ಯ ಸದೃಶಃ ಕಶ್ಚಿದ್ ಉಭಯೋಃ ಸೇನಯೋರಪಿ ॥೮॥

ಬ್ರಾಹ್ಮಣರಾದ ಅವರಿಗೆ ತಮ್ಮ ಜೀವ ಮತ್ತು ಆಯುಸ್ಸಿನ ಮೇಲೆ ಯಾವಾಗಲೂ ಬಹಳವಾದ ಆಸೆಯಿದೆ. ಎರಡು ಸೈನ್ಯಗಳಲ್ಲಿಯೂ ಅವರಿಗೆ ಸಮಾನರಾದವರು ಯಾರೂ ಇಲ್ಲ.

ಹನ್ಯಾದೇಕರಥೇನೈವ ದೇವಾನಾಮಪಿ ವಾಹಿನೀಮ್ ।
ವಪುಷ್ಮಾಂಸ್ತಳಘೋಷೇಣ ಸ್ಫೋಟಯೇದಪಿ ಪರ್ವತಾನ್ ॥೯॥

ಅವರು ಒಂದೇ ರಥದಿಂದ ದೇವತೆಗಳ ಸೈನ್ಯವನ್ನೂ ವಧೆ ಮಾಡಲು ಸಮರ್ಥರು. ಸಾರವತ್ತಾದ ದೇಹವನ್ನು ಹೊಂದಿರುವ ಅವರು ತಮ್ಮ ಹಸ್ತತಳ ಪ್ರಹಾರಘೋಷದಿಂದ ಪರ್ವತಗಳನ್ನೂ ಒಡೆದಾರು.

ಅಸಂಖ್ಯೇಯಗುಣೋ ವೀರಃ ಪ್ರಹರ್ತಾ ದಾರುಣದ್ಯುತಿಃ ।
ದಂಡಪಾಣಿರಿವಾಸಹ್ಯಃ ಕಾಲವತ್ ಪ್ರಚರಿಷ್ಯತಿ ॥೧೦॥

ಅಸಂಖ್ಯೇಯ ಗುಣವುಳ್ಳವರೂ, ದಾರುಣವಾದ ಕಾಂತಿಯುಳ್ಳವರೂ, ಪ್ರಹಾರವನ್ನು ಮಾಡುವವರೂ, ವೀರರೂ ಆದ ಅವರು ದಂಡಪಾಣಿಯಾದ ಯಮನಂತೆ ಸಂಚರಿಸುವರು.

ಯುಗಾಂತಾಗ್ನಿಸಮಃ ಕ್ರೋಧಾತ್ ಸಿಂಹಗ್ರೀವೋ ಮಹಾತಪಾಃ ।
ಏಷ ಭಾರತ ಯುದ್ಧಸ್ಯ ಪೃಷ್ಠಂ ಸಂಶಮಯಿಷ್ಯತಿ ॥೧೧॥

ಕ್ರೋಧದಿಂದ ಯುಗಾಂತಕಾಲದ ಅಗ್ನಿಗೆ ಸಮರಾದ, ಸಿಂಹಗ್ರೀವವನ್ನು ಹೊಂದಿದ, ಮಹಾತಪಸ್ವಿಗಳಾದ ಇವರು ಎಲೈ ಭಾರತನೇ, ಯುದ್ಧದ ಪೃಷ್ಠಭಾಗವನ್ನು ಸಂಹರಿಸುವರು.

ಪಿತಾ ತ್ವಸ್ಯ ಮಹಾತೇಜಾ ವೃದ್ಧೋಽಪಿ ಯುವಭಿರ್ವರಃ ।
ರಣೇ ಕರ್ಮ ಮಹತ್ ಕರ್ತಾ ಅತ್ರ ಮೇ ನಾಸ್ತಿ ಸಂಶಯಃ ॥೧೨॥

ಇವರ ತಂದೆಯಾದ, ಮಹಾತೇಜಸ್ವಿಗಳಾದ ದ್ರೋಣರು ವೃದ್ಧರಾದರೂ ಯುವಕರಿಗಿಂತಲೂ ಶ್ರೇಷ್ಠರಾದವರು. ಅವರು ಯುದ್ಧದಲ್ಲಿ ಮಹತ್ತಾದ ಕಾರ್ಯವನ್ನು ಮಾಡುವುದರಲ್ಲಿ ನನಗೆ ಸಂಶಯವಿಲ್ಲ.

ಅಸ್ತ್ರವೇಗಾನಿಲೋದ್ಧೂತಃ ಸೇನಾಕಕ್ಷೇಂಧನೋತ್ಥಿತಃ ।
ಪಾಂಡುಪುತ್ರಸ್ಯ ಸೈನ್ಯಾನಿ ಪ್ರಧಕ್ಷ್ಯತಿ ನ ಸಂಶಯಃ ॥೧೩॥

ಅಸ್ತ್ರವೇಗವೆಂಬ ಅನಿಲದಿಂದ ಪ್ರವೃದ್ಧವಾದ, ಸೇನೆ ಎಂಬ ಹುಲ್ಲುಗಾವಲಿನಿಂದ ಎದ್ದ ಅಗ್ನಿಯಂತಿರುವ ಇವರು ಪಾಂಡವರ ಸೈನ್ಯಗಳನ್ನು ದಹಿಸುವರು. ಸಂಶಯವಿಲ್ಲ.

ರಥಯೂಥಪಯೂಥಾನಾಂ ಯೂಥಪೋಽಯಂ ನರರ್ಷಭಃ ।
ಭರದ್ವಾಜಾತ್ಮಜಃ ಕರ್ತಾ ಕರ್ಮ ತೀವ್ರಂ ಹಿತಾಯ ವಃ ॥೧೪॥

ಈ ನರಶ್ರೇಷ್ಠರನ್ನು ರಥ ಯೂಥಪಯೂಥಯೂಥಪ ಎಂದು ಕರೆಯಬೇಕು. ಭರದ್ವಾಜರ ಪುತ್ರರಾದ ಇವರು ನಿಮ್ಮ ಹಿತಕ್ಕಾಗಿ ಘೋರವಾದ ಕರ್ಮವನ್ನು ಮಾಡುವರು.

ಸರ್ವಮೂರ್ಧಾಭಿಷಿಕ್ತಾನಾಮಾಚಾರ್ಯಃ ಸ್ಥವಿರೋ ಗುರುಃ ।
ಗಚ್ಛೇದಂತಂ ಸೃಂಜಯಾನಾಂ ಪ್ರಿಯಸ್ತ ಸ್ಯ ಧನಂಜಯಃ ॥೧೫॥

ಸರ್ವಮೂರ್ಧಾಭಿಷಿಕ್ತರಾದವರಿಗೂ ಆಚಾರ್ಯರಾದ, ವೃದ್ಧರಾದ ಇವರು ಸೃಂಜಯರನ್ನು ನಾಶ ಮಾಡುವರು. ಆದರೆ ಅರ್ಜುನನು ಇವರಿಗೆ ಪ್ರಿಯನಾದವನು.

ನೈಷ ಜಾತು ಮಹೇಷ್ವಾಸಃ ಪಾರ್ಥಮಕ್ಲಿಷ್ಟಕಾರಿಣಮ್ ।
ಹನ್ಯಾದಾಚಾರ್ಯಕಂ ದೀಪ್ತಂ ಸಂಸ್ಮೃತ್ಯ ಗುಣನಿರ್ಜಿತಮ್ ॥೧೬॥

ಮಹಾಧನುರ್ಧಾರಿಗಳಾದ ಇವರು ಅರ್ಜುನನ ಶಿಷ್ಯವೃತ್ತಿಯನ್ನು ಸ್ಮರಿಸಿ, ಅವನ ಗುಣಗಳಿಂದ ನಿರ್ಜಿತರಾಗಿ, ಅಕ್ಲಿಷ್ಟಕಾರಿಯಾದ ಅರ್ಜುನನನ್ನು ಎಂದೂ ಕೊಲ್ಲಲಾರರು.

ಶ್ಲಾಘತ್ಯೇಷ ಸದಾ ವೀರಃ ಪಾರ್ಥಸ್ಯ ಗುಣವಿಸ್ತರೈಃ ।
ಪುತ್ರಾದಭ್ಯಧಿಕಂ ಚೈನಂ ಭಾರದ್ವಾಜೋऽನುಪಶ್ಯತಿ ॥೧೭॥

ವೀರರಾದ ಇವರು ಯಾವಾಗಲೂ ಅರ್ಜುನನ ಗುಣಗಳನ್ನು ಕೊಂಡಾಡುತ್ತಾರೆ. ದ್ರೋಣರು ಅರ್ಜುನನನ್ನು ತಮ್ಮ ಪುತ್ರನಿಗಿಂತಲೂ ಹೆಚ್ಚು ಪ್ರಿಯನೆಂದು ಕಾಣುತ್ತಾರೆ.

ಹನ್ಯಾದೇಕರಥೇನೈವ ದೇವಗಂಧರ್ವದಾನವಾನ್ ।
ಏಕೀಭೂತಾನಪಿ ರಣೇ ದಿವ್ಯೈರಸ್ತ್ರೈಃ ಪ್ರತಾಪವಾನ್ ॥೧೮॥

ಪ್ರತಾಪಶಾಲಿಗಳಾದ ಇವರು ದೇವ-ಗಂಧರ್ವ-ದಾನವರು ಒಂದು ರಥದಲ್ಲಿ ಒಟ್ಟಿಗೇ ಬಂದರೂ ತಮ್ಮ ದಿವ್ಯಾಸ್ತ್ರಗಳಿಂದ ಅವರನ್ನು ಕೊಂದಾರು.

ಪೌರವೋ ರಾಜಶಾರ್ದೂಲಃ ತವ ರಾಜನ್ ಮಹಾರಥಃ ।
ಮತೋ ಮಮ ರಥೋದಾರಃ ಪರವೀರರಥಾರುಜಃ ॥೧೯॥

ಎಲೈ ರಾಜನೇ, ರಾಜಶ್ರೇಷ್ಠನಾದ ಪೌರವನು ನಿನಗೆ ಇನ್ನೊಬ್ಬ ಮಹಾರಥ ಎಂದು ನನ್ನ ಅಭಿಪ್ರಾಯ. ಅವನು ಶ್ರೇಷ್ಠವಾದ ರಥವುಳ್ಳವನು ಮತ್ತು ಶತ್ರುಸೈನ್ಯದ ವೀರರಾದ ರಥರನ್ನು ಸಂಹರಿಸುವವನು.

ಸ್ವೇನ ಸೈನ್ಯೇನ ಮಹತಾ ಪ್ರತಪನ್ ಶತ್ರುವಾಹಿನೀಮ್ ।
ಪ್ರಧಕ್ಷ್ಯತಿ ಸ ಪಾಂಚಾಲಾನ್ ಕಕ್ಷಂ ಕೃಷ್ಣಗತಿರ್ಯಥಾ ॥೨೦॥

ತನ್ನ ದೊಡ್ಡ ಸೈನ್ಯದಿಂದ ಪ್ರಜ್ವಲಿಸುವ ಇವನು ಶತ್ರುಸೈನ್ಯದಲ್ಲಿರುವ ಪಾಂಚಾಲರನ್ನು ಅಗ್ನಿಯು ಹುಲ್ಲುಗಾವಲನ್ನು ಸುಡುವಂತೆ ಸುಡುವನು.

ಸತ್ಯಶ್ರವಾ ರಥಸ್ತ್ವೇಕೋ ರಾಜಪುತ್ರೋ ಮಹದ್ಬಲಃ ।
ತವ ರಾಜನ್ ರಿಪುಬಲೇ ಕಾಲವತ್ ಪ್ರಚರಿಷ್ಯತಿ ॥೨೧॥

ಮಹಾಬಲವುಳ್ಳ ರಾಜಪುತ್ರನಾದ ಸತ್ಯಶ್ರವನು ಒಂದು ರಥ. ಎಲೈ ರಾಜನೇ, ನಿನ್ನ ಪರವಾಗಿ ಶತ್ರುಸೈನ್ಯದಲ್ಲಿ ಅಂತಕನಂತೆ ಸಂಚರಿಸುವನು.

ಏತಸ್ಯ ಯೋಧಾ ರಾಜೇಂದ್ರ ವಿಚಿತ್ರಕವಚಾಯುಧಾಃ ।
ವಿಚರಿಷ್ಯಂತಿ ಸಂಗ್ರಾಮೇ ನಿಘ್ನಂತಃ ಶಾತ್ರವಾನ್ ರಣೇ ॥೨೨॥

ಎಲೈ ರಾಜೇಂದ್ರನೇ, ವಿಚಿತ್ರಕವಚಾಯುಧಗಳನ್ನು ಧರಿಸಿದ ಅವನ ಯೋಧರು ಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುತ್ತಾ ಸಂಚರಿಸುವರು.

ವೃಷಸೇನೋ ರಥಶ್ರೇಷ್ಠಃ ಕರ್ಣಪುತ್ರೋ ಮಹಾರಥಃ ।
ಪ್ರಧಕ್ಷ್ಯತಿ ರಿಪೂಣಾಂ ತೇ ಬಲಂ ತು ಬಲಿನಾಂ ವರಃ ॥೨೩॥

ಕರ್ಣಪುತ್ರನಾದ, ರಥಶ್ರೇಷ್ಠನಾದ ವೃಷಸೇನನು ಒಬ್ಬ ಮಹಾರಥ. ಬಲಿಷ್ಠರಲ್ಲಿ ಶ್ರೇಷ್ಠನಾದ ಅವನು ಶತ್ರುಗಳ ಸೈನ್ಯವನ್ನು ಸುಡುವನು.

ಜಲಸಂಧೋ ಮಹಾತೇಜಾ ರಾಜನ್ ರಥವರಸ್ತವ ।
ತ್ಯಕ್ಷ್ಯತೇ ಸಮರೇ ಪ್ರಾಣಾನ್ ಮಾಗಧಃ ಪರವೀರಹಾ ॥೨೪॥

ಎಲೈ ರಾಜನೇ, ಮಹಾತೇಜಸ್ವಿಯಾದ, ಮಗಧದೇಶದ ಜಲಸಂಧನು ನಿನಗೆ ಒಬ್ಬ ಶ್ರೇಷ್ಠವಾದ ರಥ. ಶತ್ರುಸೈನ್ಯದ ವೀರರನ್ನು ಸಂಹರಿಸುವ ಅವನು ಯುದ್ಧದಲ್ಲಿ ನಿನ್ನ ಸಲುವಾಗಿ ಪ್ರಾಣವನ್ನು ಬಿಡುವನು.

ಏಷ ಯೋತ್ಸ್ಯತಿ ಸಂಗ್ರಾಮೇ ಗಜಸ್ಕಂಧವಿಶಾರದಃ ।
ರಥೇನ ವಾ ಮಹಾಬಾಹುಃ ಕ್ಷಪಯನ್ ಶತ್ರುವಾಹಿನೀಮ್ ॥೨೫॥

ಮಹಾಬಾಹುವಾದ ಇವನು ಗಜಸ್ಕಂಧವಿಶಾರದನೂ ಆಗಿದ್ದು, ಗಜಸ್ಕಂಧದಲ್ಲಾಗಲೀ ಅಥವಾ ರಥದಲ್ಲಾಗಲೀ ಕುಳಿತು, ಶತ್ರುಸೈನ್ಯವನ್ನು ನಾಶ ಮಾಡುತ್ತಾ ಯುದ್ಧವನ್ನು ಮಾಡುವನು.

ರಥ ಏಷ ಮಹಾಬಾಹೋ ಮತೋ ಮಮ ನರರ್ಷಭಃ ।
ತ್ವದರ್ಥೇ ತ್ಯಕ್ಷ್ಯತಿ ಪ್ರಾಣಾನ್ ಸಹಸೈನ್ಯೋ ಮಹಾರಣೇ ॥೨೬॥

ಎಲೈ ಮಹಾಬಾಹುವೇ, ಈ ನರಶ್ರೇಷ್ಠನು ಒಂದು ರಥ ಎಂದು ನನ್ನ ಅಭಿಪ್ರಾಯ. ನಿನ್ನ ಸಲುವಾಗಿ ತನ್ನ ಸೈನ್ಯದ ಜೊತೆಯಲ್ಲಿ ದೊಡ್ಡ ಯುದ್ಧದಲ್ಲಿ ಪ್ರಾಣಗಳನ್ನು ಬಿಡುವನು.

ಏಷ ವಿಕ್ರಾಂತಯೋಧೀ ಚ ಚಿತ್ರಯೋಧೀ ಚ ಸಂಗರೇ ।
ವೀತಭೀಶ್ಚಾಪಿ ತೇ ರಾಜನ್ ಶತ್ರುಭಿಃ ಸಹ ಯೋತ್ಸ್ಯತೇ ॥೨೭॥

ಎಲೈ ರಾಜನೇ, ಪರಾಕ್ರಮದಿಂದ ಯುದ್ಧವನ್ನು ಮಾಡುವವನೂ, ವಿಚಿತ್ರವಾಗಿ ಯುದ್ಧವನ್ನು ಮಾಡುವವನೂ ಆದ ಇವನು ಯುದ್ಧದಲ್ಲಿ ಯಾವ ಭಯವೂ ಇಲ್ಲದೆ ನಿನ್ನ ಶತ್ರುಗಳ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಬಾಹ್ಲೀಕೋऽತಿರಥಶ್ಚೈವ ಸಮರೇ ಚಾನಿವರ್ತಿತಾ ।
ಮಮ ರಾಜನ್ ಮತೋ ಯುದ್ಧೇ ಶೂರೋ ವೈವಸ್ವತೋಪಮಃ॥೨೮॥

ನ ಹ್ಯೇಷ ಸಮರಂ ಪ್ರಾಪ್ಯ ನಿವರ್ತೇತ ಕಥಂಚನ ॥೨೯॥

ಎಲೈ ರಾಜನೇ, ಯಮನಂತಿರುವ, ಶೂರನಾದ, ಯುದ್ಧದಲ್ಲಿ ಹಿಂದಿರುಗದಿರುವ ಬಾಹ್ಲೀಕನು ಒಬ್ಬ ಅತಿರಥನೆಂದು ನನ್ನ ಅಭಿಪ್ರಾಯ. ಇವನು ಯುದ್ಧಭೂಮಿಗೆ ಹೋಗಿ ಎಂದೂ ಹಿಮ್ಮೆಟ್ಟುವುದಿಲ್ಲ.

ಯಥಾ ಸತತಗೋ ರಾಜನ್ ಸ ಹಿ ಹನ್ಯಾತ್ ಪರಾನ್ ರಣೇ ।
ಸೇನಾಪತಿರ್ಮಹಾರಾಜ ಸತ್ಯವಾಂಸ್ತೇ ಮಹಾರಥಃ ॥೩೦॥

ಎಲೈ ಮಹಾರಾಜನೇ, ನಿನ್ನ ಸೇನಾಪತಿಯೂ (ಹನ್ನೊಂದು ಸೇನಾಪತಿಗಳಲ್ಲಿ ಒಬ್ಬನು) ಸತ್ಯವಂತನೂ, ಮಹಾರಥನೂ ಆದ ಇವನು ಸತತವಾಗಿ ಸಂಚರಿಸುವ ವಾಯುವಿನಂತೆ ಯುದ್ಧದಲ್ಲಿ ಶತ್ರುಗಳನ್ನು ಕೊಂದಾನು.

ರಥೇಷ್ವದ್ಭುತಕರ್ಮಾ ಚ ರಥೀ ಪರರಥಾರುಜಃ ।
ಏತಸ್ಯ ಸಮರಂ ದೃಷ್ಟ್ವಾ ನ ವ್ಯಥಾऽಸ್ತಿ ಕದಾಚನ ॥೩೧॥

ಉತ್ಸ್ಮಯನ್ನುತ್ಪತತ್ಯೇಷ ಪರಾನ್ ರಥಪಥೇ ಸ್ಥಿತಾನ್ ॥೩೨॥

ಇವನು ಯುದ್ಧದಲ್ಲಿ ಅದ್ಭುತಕರ್ಮವನ್ನು ಮಾಡುವ, ಶತ್ರುರಥವನ್ನು ನಾಶ ಮಾಡುವ ರಥಿಕನಾಗಿದ್ದಾನೆ. ಇವನ ಯುದ್ಧವನ್ನು ನೋಡಿದರೆ ಯಾವ ವ್ಯಥೆಯನ್ನೂ ಪಡುವ ಕಾರಣವಿಲ್ಲ. ಇವನು ನಗುತ್ತಲೇ ತನ್ನ ರಥಮಾರ್ಗದಲ್ಲಿ ಇರುವ ಶತ್ರುಗಳ ಮೇಲೆ ಎರಗುತ್ತಾನೆ.

ಏಷ ಚಾರಿಷು ವಿಕ್ರಾಂತಃ ಕರ್ಮ ಸತ್ಪುರುಷೋಚಿತಮ್ ।
ಕರ್ತಾ ವಿಮರ್ದೇ ಸುಮಹತ್ ತ್ವದರ್ಥೇ ಪುರುಷೋತ್ತಮಃ ॥೩೩॥

ಪುರುಷೋತ್ತಮನೂ ಮತ್ತು ವಿಕ್ರಮಶಾಲಿಯೂ ಆದ ಇವನು ನಿನ್ನ ಸಲುವಾಗಿ ದೊಡ್ಡ ಯುದ್ಧದಲ್ಲಿ, ಸತ್ಪುರುಷರಿಗೆ ಉಚಿತವಾದ ರೀತಿಯಲ್ಲಿ, ಶತ್ರುಗಳ ಮೇಲೆ ಪರಾಕ್ರಮವನ್ನು ತೋರಿಸಿ ಶ್ರೇಷ್ಠವಾದ ಕರ್ಮವನ್ನು ಮಾಡುವನು.

ಅಲಂಬುಸೋ ರಾಕ್ಷಸೇಂದ್ರಃ ಕ್ರೂರಕರ್ಮಾ ಮಹಾರಥಃ ।
ಹನಿಷ್ಯತಿ ಪರಾನ್ ರಾಜನ್ ಪೂರ್ವವೈರಮನುಸ್ಮರನ್ ॥೩೪॥

ಎಲೈ ರಾಜನೇ, ಮಹಾರಥನೂ, ಕ್ರೂರಕರ್ಮನೂ ಆದ, ರಾಕ್ಷಸೇಂದ್ರನಾದ ಅಲಂಬುಸನು ಹಿಂದಿನ ವೈರವನ್ನು ಸ್ಮರಿಸಿಕೊಂಡು ಶತ್ರುಗಳನ್ನು ಕೊಲ್ಲುವನು.

ಏಷ ರಾಕ್ಷಸಸೈನ್ಯಾನಾಂ ಸರ್ವೇಷಾಂ ರಥಸತ್ತಮಃ ।
ಮಾಯಾವೀ ದೃಢವೈರಶ್ಚ ಸಮರೇ ವಿಚರಿಷ್ಯತಿ ॥೩೫॥

ಇವನು ಎಲ್ಲಾ ರಾಕ್ಷಸಸೈನ್ಯಗಳಿಗೂ ಶ್ರೇಷ್ಠನಾದ ರಥಸತ್ತಮನು. ಮಾಯಾ ಯುದ್ಧವನ್ನು ಬಲ್ಲವನೂ, ದೃಢವೈರವುಳ್ಳವನೂ ಆದ ಇವನು ಯುದ್ಧದಲ್ಲಿ ಸಂಚರಿಸುವನು.

ಪ್ರಾಗ್ಜ್ಯೋತಿಷಾಧಿಪೋ ವೀರೋ ಭಗದತ್ತಃ ಪ್ರತಾಪವಾನ್ ।
ಗಜಾಂಕುಶಧರಃ ಶ್ರೇಷ್ಠೋ ರಥೇ ಚೈವ ವಿಶಾರದಃ ॥೩೬॥

ಪ್ರಾಗ್ಜ್ಯೋತಿಷ ಅಧಿಪತಿಯೂ, ಪ್ರತಾಪಶಾಲಿಯೂ, ವೀರನೂ ಆದ ಭಗದತ್ತನು ಶ್ರೇಷ್ಠವಾದ ಗಜಾಂಕುಶಧಾರಿಯಾದವನು. ಅವನು ರಥದಲ್ಲಿಯೂ ವಿಶಾರದನು.

ಏತೇನ ಯುದ್ಧಮಭವತ್ ಪುರಾ ಗಾಂಡೀವಧನ್ವನಃ ।
ದಿವಸಾನ್ ಸುಬಹೂನ್ ರಾಜನ್ನುಭಯೋರ್ಜಯಕಾಂಕ್ಷಿಣೋಃ ॥೩೭॥

ಎಲೈ ರಾಜನೇ, ಹಿಂದೆ ಇವನ ಜೊತೆಯಲ್ಲಿ ಅರ್ಜುನನಿಗೆ ಯುದ್ಧವು ನಡೆಯಿತು. ಜಯಾಕಾಂಕ್ಷಿಗಳಾದ ಇಬ್ಬರೂ ಅನೇಕ ದಿವಸಗಳವರೆಗೆ ಯುದ್ಧವನ್ನು ಮಾಡಿದರು.

ತೇ ಚಾಸಹಾಯಂ ಗಾಂಧಾರೇ ಮಾನಯನ್ ಪಾಕಶಾಸನಿಮ್ ।
ಅಕರೋತ್ ಸಂವಿದಂ ತೇನ ಪಾಂಡವೇನ ಮಹಾತ್ಮನಾ ॥೩೮॥

ಎಲೈ ಗಾಂಧಾರಿ ಪುತ್ರನೇ, ಸಹಾಯವಿಲ್ಲದ ಅರ್ಜುನನನ್ನು ಗೌರವಿಸುತ್ತಾ ಇವನು ಮಹಾತ್ಮನಾದ ಅರ್ಜುನನ ಜೊತೆಯಲ್ಲಿ ಸಂಧಿಯನ್ನು ಮಾಡಿಕೊಂಡನು.

ಏಷ ಯೋತ್ಸ್ಯತಿ ಸಂಗ್ರಾಮೇ ಗಜಸ್ಕಂಧವಿಶಾರದಃ ।
ಐರಾವತಗತೋ ರಾಜಾ ದೇವಾನಾಮಿವ ವಾಸವಃ ॥೩೯॥

ಇವನು ಯುದ್ಧದಲ್ಲಿ ಐರಾವತದಲ್ಲಿ ಕುಳಿತ ದೇವೇಂದ್ರನು ದೇವತೆಗಳ ಪರವಾಗಿ ಯುದ್ಧವನ್ನು ಮಾಡಿದಂತೆ ಗಜಸ್ಕಂಧವಿಶಾರದನಾಗಿ ಯುದ್ಧವನ್ನು ಮಾಡುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತಾರನೆಯ ಅಧ್ಯಾಯ

ಭೀಷ್ಮರು ಕರ್ಣನನ್ನು ಅರ್ಧರಥ ಎಂದು ಎಣಿಸುತ್ತಿರಲು, ಕರ್ಣನ ಕೋಪ ಮತ್ತು ಭೀಷ್ಮರು ಇರುವವರೆಗೆ ತಾನು ಯುದ್ಧವನ್ನು ಮಾಡುವುದಿಲ್ಲವೆಂಬ ಪ್ರತಿಜ್ಞೆ.

ಭೀಷ್ಮಃ

ಅಚಲೋ ವೃಷಕಶ್ಚೈವ ಸಹಿತೌ ಭ್ರಾತರಾವುಭೌ ।
ರಥೌ ತವ ದುರಾಧರ್ಷೌ ಶತ್ರೂನ್ ವಿಧ್ವಂಸಯಿಷ್ಯತಃ ॥೧॥

ಬಲವಂತೌ ನರವ್ಯಾಘ್ರೌ ದೃಢಕ್ರೋಧೌ ಪ್ರಹಾರಿಣೌ ।
ಗಾಂಧಾರಮುಖ್ಯೌ ತರುಣೌ ದರ್ಶನೀಯೌ ಮಹಾಬಲೌ ॥೨॥

ಭೀಷ್ಮ– ಅಚಲ ಮತ್ತು ವೃಷಕ ಎಂಬ ಗಾಂಧಾರ ದೇಶದ ಇಬ್ಬರು ಸಹೋದರರು ಒಂದೊಂದು ರಥರು. ನರವ್ಯಾಘ್ರರಾದ ಅವರು ಬಲಿಷ್ಠರೂ, ತರುಣರೂ, ಸುಂದರರೂ, ದೃಢವಾದ ಕ್ರೋಧವುಳ್ಳವರೂ, ಪ್ರಹಾರವನ್ನು ಮಾಡುವವರೂ ಆಗಿದ್ದಾರೆ. ಸುಂದರರಾದ ಅವರು ಯುದ್ಧದಲ್ಲಿ ಶತ್ರುಗಳನ್ನು ನಾಶಪಡಿಸುವರು.

ಸಖಾ ತೇ ದಯಿತೋ ನಿತ್ಯಂ ಯ ಏಷ ರಣಕರ್ಕಶಃ ।
ಉತ್ಸಾಹಯತಿ ರಾಜಂಸ್ತಾ ತ್ವಂ ವಿಗ್ರಹೇ ಪಾಂಡವೈಃ ಸಹ ॥೩॥

ಪರುಷಃ ಕತ್ಥತೋऽತೀವ ಕರ್ಣೋ ವೈಕರ್ತನಸ್ತವ ।
ಮಂತ್ರೀ ನೇತಾ ಚ ಬಂಧುಶ್ಚ ಮಾನೀ ಚಾತ್ಯಂತಮುಚ್ಛ್ರಿತಃ ॥೪॥

ಏಷ ನೈವ ರಥಃ ಕರ್ಣೋ ನ ಚಾಪ್ಯತಿರಥೋ ರಣೇ ॥೫॥

ನಿನ್ನ ಸ್ನೇಹಿತನೂ, ಯಾವಾಗಲೂ ಯುದ್ಧಾಕಾಂಕ್ಷಿಯೂ ಆದ ಈ ಕರ್ಣನು ನಿನ್ನನ್ನು ಪಾಂಡವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಯಾವಾಗಲೂ ಪ್ರೇರಿಸುತ್ತಾನೆ. ಅವನು ಒರಟಾದ ಮಾತುಗಳನ್ನು ಆಡುವವನು, ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುವವನು, ತನ್ನನ್ನು ಬಹಳ ದೊಡ್ಡವನೆಂದು ತಿಳಿದು ಅಹಂಕಾರವನ್ನು ಹೊಂದಿರುವವನು ಮತ್ತು ನಿನಗೆ ಮಂತ್ರಿಯೂ, ನಾಯಕನೂ ಆಗಿದ್ದಾನೆ. ಈ ಕರ್ಣನು ರಥನೂ ಅಲ್ಲ, ಅತಿರಥನೂ ಅಲ್ಲ.

ವಿಮುಕ್ತಃ ಕವಚೇನೈಷ ಸಹಜೇನ ವಿಚೇತನಃ ।
ಕುಂಡಲಾಭ್ಯಾಂ ಚ ದಿವ್ಯಾಭ್ಯಾಂ ವಿಮುಕ್ತಃ ಸತತಂ ಘೃಣೀ ॥೬॥

ಅಭಿಶಾಪಾಚ್ಚ ರಾಮಸ್ಯ ಬ್ರಾಹ್ಮಣ್ಯಸ್ಯ ಚ ಭಾಷಣಾತ್ ।
ಕರಣಾನಾಂ ವಿಯೋಗಾಚ್ಚ ತೇನ ಮೇಽರ್ಧರಥೋ ಮತಃ ॥೭॥

ನೈಷ ಫಲ್ಗುನಮಾಸಾದ್ಯ ಪುನರ್ಜೀವನ್ ವಿಮೋಕ್ಷ್ಯತೇ ॥೮॥

ಯಾವಾಗಲೂ ಜಯಶೀಲನಾದ ಅವನು ತನ್ನ ಸಹಜವಾದ ದಿವ್ಯವಾದ ಕವಚಕುಂಡಲಗಳನ್ನು ಕಳೆದುಕೊಂಡಿದ್ದಾನೆ. ತಾನು ಬ್ರಾಹ್ಮಣನೆಂದು ಹೇಳಿಕೊಂಡ ಕಾರಣದಿಂದಾಗಿ ಪರಶುರಾಮರ ಶಾಪಕ್ಕೆ ಗುರಿಯಾಗಿದ್ದಾನೆ. ಹೀಗೆ ಸಾಧನಗಳಿಂದ ಹೀನನಾದ ಅವನು ನನ್ನ ದೃಷ್ಟಿಯಲ್ಲಿ ಅರ್ಧರಥ. ಇವನು ಯುದ್ಧದಲ್ಲಿ ಅರ್ಜುನನನ್ನು ಸಮೀಪಿಸಿ ಪುನಃ ಜೀವಂತನಾಗಿ ಹಿಂದೆ ಬರುವುದಿಲ್ಲ.

ಸಂಜಯಃ

ತತೋಽಬ್ರವೀತ್ ಪುನರ್ದ್ರೋಣಃ ಸರ್ವಶಸ್ತ್ರಭೃತಾಂ ವರಃ ॥೯॥

ಏವಮೇತದ್ ಯದಾತ್ಥ ತ್ವಂ ನ ಮಿಥ್ಯಾಽಸ್ತಿ ಕಥಂಚನ ।
ರಣೇ ರಣೇಽಭಿಮಾನೀ ಚ ವಿಮುಖಶ್ಚಾಪಿ ದೃಶ್ಯತೇ ॥೧೦॥

ಘೃಣೀ ಕರ್ಣಃ ಪ್ರಮಾದೀ ಚ ತೇನ ಮೇಽರ್ಧರಥೋ ಮತಃ ॥೧೧॥

ಸಂಜಯ– ಆಗ ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠರಾದ ದ್ರೋಣರು ಪುನಃ ಮಾತನಾಡಿದರು– 'ಭೀಷ್ಮರೇ, ನೀವು ಹೇಳಿದಂತೆಯೇ ಸರಿ. ನಿಮ್ಮ ಮಾತುಗಳು ಸುಳ್ಳಲ್ಲ. ಪ್ರತಿಯೊಂದು ಯುದ್ಧದಲ್ಲಿಯೂ ಅಹಂಕಾರದಿಂದ ಪ್ರೇರೇಪಿಸಿ ಯುದ್ಧದಿಂದ ವಿಮುಖನಾಗುತ್ತಾನೆ. ಅವನು ದಯಾಳು ಮತ್ತು ಮರೆಯುವ ಸ್ವಭಾವವುಳ್ಳವನು. ಆದ್ದರಿಂದ ನಾನೂ ಅವನನ್ನು ಅರ್ಧರಥನೆಂದೇ ತಿಳಿಯುತ್ತೇನೆ.

ಸಂಜಯಃ

ಏತಚ್ಛ್ರುತ್ವಾ ತು ರಾಧೇಯಃ ಕ್ರೋಧಾದುದ್ವೃತ್ತಲೋಚನಃ ।
ಉವಾಚ ಭೀಷ್ಮಂ ರಾಧೇಯಃ ತುದನ್ ವಾಗ್ಭಿಃ ಪ್ರತೋದವಾನ್ ॥೧೨॥

ಸಂಜಯ– ಈ ಮಾತುಗಳನ್ನು ಕೇಳಿದ ಕರ್ಣನು ಕೋಪದಿಂದ ಅರಳಿದ ಕಣ್ಣುಳ್ಳವನಾಗಿ ಭೀಷ್ಮರನ್ನು ತನ್ನ ಮಾತುಗಳಿಂದ ಚುಚ್ಚುತ್ತಾ ಮಾತನಾಡಿದನು.

ಪಿತಾಮಹ ಯಥೇಷ್ಟಂ ಮಾಂ ವಾಕ್ಶರೈರವಕೃಂತಸಿ ।
ಅನಾಗಸಂ ಸದಾ ದ್ವೇಷಾದ್ ಏವಮೇವ ಪದೇ ಪದೇ ॥೧೩॥

ಎಲೈ ಪಿತಾಮಹರೇ, ನೀವು ನಿರಪರಾಧಿಯಾದ ನನ್ನನ್ನು ನಿಮ್ಮ ಮನಸ್ಸಿಗೆ ಬಂದಂತೆ ಪುನಃ ಪುನಃ ನನ್ನ ಮೇಲಿನ ದ್ವೇಷದಿಂದ ನಿಮ್ಮ ಮಾತುಗಳೆಂಬ ಬಾಣಗಳಿಂದ ಕತ್ತರಿಸುತ್ತಿದ್ದೀರಿ.

ಮರ್ಷಯಾಮಿ ಚ ತತ್ ಸರ್ವಂ ದುರ್ಯೋಧನಕೃತೇನ ವೈ ।
ತ್ವಂ ತು ಮಾಂ ಮನ್ಯಸೇಽಶಕ್ತಂ ಯಥಾ ಕಾಪುರುಷಂ ತಥಾ ॥೧೪॥

ದುರ್ಯೋಧನನ ಸಲುವಾಗಿ ನಾನು ಅದೆಲ್ಲವನ್ನೂ ಸಹಿಸುತ್ತಿದ್ದೇನೆ. ನನ್ನನ್ನು ಅಶಕ್ತನಾದ ಒಬ್ಬ ಅಧಮಪುರುಷನೆಂದು ನೀವು ತಿಳಿದಿದ್ದೀರಿ.

ಭವಾನರ್ಧರಥೋ ಮಹ್ಯಂ ಮತೋ ವೈ ನಾತ್ರ ಸಂಶಯಃ ।
ಸರ್ವಸ್ಯ ಜಗತಶ್ಚೈವ ಗಾಂಗೇಯ ನ ಮೃಷಾ ವದೇ ॥೧೫॥

ಕುರೂಣಾಮಹಿತೋ ನಿತ್ಯಂ ನ ಚ ರಾಜಾಽವಬುಧ್ಯತೇ ॥೧೬॥

ನನ್ನ ದೃಷ್ಟಿಯಲ್ಲಿ ಮತ್ತು ಎಲ್ಲಾ ಜಗತ್ತಿನ ದೃಷ್ಟಿಯಲ್ಲಿ ನೀವೇ ಅರ್ಧರಥರು. ಭೀಷ್ಮರೇ, ನನ್ನ ಮಾತು ಸುಳ್ಳಲ್ಲ. ನೀವು ಯಾವಾಗಲೂ ಕೌರವರಿಗೆ ಅಹಿತರಾದವರು. ದುರ್ಯೋಧನನು ಇದನ್ನು ತಿಳಿಯುತ್ತಿಲ್ಲ.

ಕೋ ಹಿ ನಾಮ ಸಮಾನೇಷು ರಾಜಸೂದಾತ್ತಕರ್ಮಸು ।
ತೇಜೋವಧಮಿಮಂ ಕುರ್ಯಾದ್ ಬಿಭೇದಯಿಷುರಾಹವೇ ॥೧೭॥

ಯಥಾ ತ್ವಂ ಗುಣವಿದ್ವೇಷಾದಪವಾದಂ ಚಿಕೀರ್ಷಸಿ ॥೧೮॥

ಎಲ್ಲರೂ ರಾಜರು ತಮ್ಮ ಉದಾರ ಕರ್ಮಗಳಲ್ಲಿ ಸಮನಾಗಿರುವಾಗ ನೀವು ಗುಣಗಳ ಮೇಲಿನ ದ್ವೇಷದಿಂದ ನಿಂದೆಯ ಮಾತುಗಳನ್ನು ಆಡಿ, ಹೀಗೆ

ತೇಜೋವಧೆಯನ್ನು ಮಾಡಿ, ನಮ್ಮ ಸೈನ್ಯದಲ್ಲೇ ಭೇದವನ್ನು ಉಂಟುಮಾಡಿದಂತೆ ಬೇರೆ ಯಾವನು ಮಾಡುತ್ತಾನೆ?

ನ ಹಾಯನೈರ್ನ ಪಲಿತೈರ್ನ ವಿತ್ತೈರ್ನ ಚ ಬಂಧುಭಿಃ ।
ಮಹಾರಥತ್ವಂ ಸಂಖ್ಯಾತುಂ ಶಕ್ಯಂ ಕ್ಷತ್ರಸ್ಯ ಕೌರವ ॥೧೯॥

ಎಲೈ ಕೌರವರೇ, ವಯಸ್ಸಿನಿಂದಾಗಲೀ, ನೆರೆತ ಕೂದಲುಗಳಿಂದಾಗಲೀ, ಧನದಿಂದಾಗಲೀ, ಬಂಧುಗಳಿಂದಾಗಲೀ ಕ್ಷತ್ರಿಯರಲ್ಲಿ ಯಾರು ಮಹಾರಥರು, ಯಾರು ಅಲ್ಲ ಎಂದು ಗಣನೆ ಮಾಡಲು ಬರುವುದಿಲ್ಲ.

ಬಲಜ್ಯೇಷ್ಠಂ ಸ್ಮೃತಂ ಕ್ಷತ್ರಂ ಮಂತ್ರಜ್ಯೇಷ್ಠಾ ದ್ವಿಜಾತಯಃ ।
ಧನಜ್ಯೇಷ್ಠಾಃ ಸ್ಮೃತಾ ವೈಶ್ಯಾಃ ಶೂದ್ರಾಸ್ತು ವಯಸಾऽಧಿಕಾಃ ॥೨೦॥

ಕ್ಷತ್ರಿಯರಲ್ಲಿ ಯಾರಿಗೆ ಬಲವು ಅಧಿಕವೋ ಅವನು ಜ್ಯೇಷ್ಠ ಎಂದು ಹೇಳಲ್ಪಡುತ್ತದೆ. ಬ್ರಾಹ್ಮಣರಲ್ಲಿ ಮಂತ್ರಬಲದಿಂದ ಜ್ಯೇಷ್ಠತೆಯು ಉಂಟಾಗುತ್ತದೆ. ವೈಶ್ಯರಲ್ಲಿ ಧನದ ಬಲದಿಂದ ಜ್ಯೇಷ್ಠತೆಯು ಹೇಳಲ್ಪಡುತ್ತದೆ. ಶೂದ್ರರಲ್ಲಿ ಮಾತ್ರ ವಯಸ್ಸಿನ ಆಧಿಕ್ಯದಿಂದ ಜ್ಯೇಷ್ಠತೆಯು ಹೇಳಲ್ಪಡುತ್ತದೆ.

ಯಥೇಚ್ಛಕಂ ಸ್ವಯಂ ಬ್ರೂಯಾ ರಥಾನತಿರಥಾಂಸ್ತಥಾ ।
ಕಾಮದ್ವೇಷಸಮಾಯುಕ್ತೋ ಮೋಹಾತ್ ತ್ವಾಕುರುತೇ ಭವಾನ್ ॥೨೧॥

ನೀವು ನಿಮ್ಮ ಇಚ್ಛೆಗೆ ಬಂದಂತೆ ರಥ, ಅತಿರಥರನ್ನು ಗಣನೆ ಮಾಡುತ್ತಿದ್ದೀರಿ. ರಾಗ-ದ್ವೇಷದಿಂದ ಕೂಡಿದವರಾಗಿ, ಮೋಹದಿಂದ ಎಲ್ಲರನ್ನೂ ನೀನು ಎಂದು ಏಕವಚನದಿಂದ ಕರೆಯುತ್ತಿದ್ದೀರಿ.

ದುರ್ಯೋಧನ ಮಹಾಬಾಹೋ ಸಾಧು ಸಮ್ಯಗವೇಕ್ಷ್ಯತಾಮ್ ।
ತ್ಯಜ್ಯತಾಂ ದುಷ್ಟಭಾವೋऽಯಂ ಭೀಷ್ಮಃ ಕಿಲ್ಬಿಷಕೃತ್ ತವ ॥೨೨॥

ಮಹಾಬಾಹುವಾದ ದುರ್ಯೋಧನನೇ, ಎಲ್ಲವನ್ನೂ ಸರಿಯಾಗಿ ಗಮನಿಸು. ನಿನಗೆ ಯಾವಾಗಲೂ ಕೆಡುಕನ್ನು ಮಾಡುವ, ದುಷ್ಟವಾದ ಅಭಿಪ್ರಾಯವುಳ್ಳ ಈ ಭೀಷ್ಮರನ್ನು ಪರಿತ್ಯಜಿಸು.

ಭಿನ್ನಾ ಹಿ ಸೇನಾ ನೃಪತೇ ದುಃಸಂಧೇಯಾ ಭವತ್ಯುತ ।
ಮೌಲಾऽಪಿ ಪುರುಷವ್ಯಾಘ್ರ ಕಿಮು ನಾನಾ ಸಮುತ್ಥಿತಾ ॥೨೩॥

ಎಲೈ ರಾಜನೇ, ಸೈನ್ಯದಲ್ಲಿ ಭೇದವು ಉಂಟಾದರೆ ಅವರನ್ನು ಪುನಃ ಒಂದುಗೂಡಿಸುವುದು ಕಷ್ಟವಾಗುತ್ತದೆ. ಎಲೈ ಪುರುಷವ್ಯಾಘ್ರನೇ, ಧನದಿಂದ ಸಂಪಾದಿಸಿದ ಸೈನ್ಯವೂ ಹೀಗಾಗುತ್ತದೆ. ಇನ್ನು ತಾನಾಗಿಯೇ ಬಂದ ಸೈನ್ಯವನ್ನು ಒಂದುಗೂಡಿಸುವುದು ಹೇಗೆ?

ಏಷಾಂ ದ್ವೇಷಃ ಸಮುತ್ಪನ್ನೋ ಯೋಧಾನಾಂ ಯುಧಿ ಭಾರತ ।
ತೇಜೋವಧೋ ನಃ ಕ್ರಿಯತೇ ಪ್ರತ್ಯಕ್ಷೇಣ ವಿಶೇಷತಃ ॥೨೪॥

ಎಲೈ ಭಾರತನೇ, ಯಾವ ನಮ್ಮ ಯೋಧರಿಗೆ ಶತ್ರುಗಳಾದ ಪಾಂಡವರಲ್ಲಿ ದ್ವೇಷವು ಉಂಟಾಗಿದೆಯೋ ಅಂತಹ ನಮ್ಮ ಯೋಧರ ತೇಜೋವಧೆಯು ವಿಶೇಷವಾಗಿ ಮತ್ತು ಪ್ರತ್ಯಕ್ಷವಾಗಿ ಮಾಡಲ್ಪಡುತ್ತಿದೆ.

ರಥಾನಾಂ ಕ್ವ ಚ ವಿಜ್ಞಾನಂ ಕ್ವ ಚ ಭೀಷ್ಮೋऽಲ್ಪಚೇತನಃ ।
ಅಹಮಾವಾರಯಿಷ್ಯಾಮಿ ಪಾಂಡವಾನಾಮನೀಕಿನೀಮ್ ॥೨೫॥

ರಥಾತಿರಥರ ಜ್ಞಾನವೆಲ್ಲಿ? ಅಲ್ಪಬುದ್ಧಿಯುಳ್ಳ ಭೀಷ್ಮರೆಲ್ಲಿ? ಪಾಂಡವರ ಸೈನ್ಯವನ್ನು ನಾನು ತಡೆಗಟ್ಟುವೆನು.

ಆಸಾದ್ಯ ಮಾಮಮೋಘೇಷುಂ ಗಮಿಷ್ಯಂತಿ ದಿಶೋ ದಶ ।
ಪಾಂಡವಾಃ ಸಹ ಪಾಂಚಾಲಾಃ ಶಾರ್ದೂಲಂ ವೃಷಭಾ ಇವ ॥೨೬॥

ಪಾಂಡವರು ಮತ್ತು ಪಾಂಚಾಲರು ಯುದ್ಧದಲ್ಲಿ ಅಮೋಘ ಬಾಣ ಪ್ರಯೋಗವುಳ್ಳ ನನ್ನನ್ನು ಸಮೀಪಿಸಿ, ವ್ಯಾಘ್ರವನ್ನು ನೋಡಿ ವೃಷಭಗಳು ಓಡಿಹೋಗುವಂತೆ ಹತ್ತು ದಿಕ್ಕುಗಳಿಗೆ ಓಡಿಹೋಗುವರು.

ಕ್ವ ಚ ಯುದ್ಧಂ ವಿಮರ್ದೋ ವಾ ಮಂತ್ರಾಃ ಸುವ್ಯಾಹೃತಾಸ್ತಥಾ ।
ಕ್ವ ಚ ಭೀಷ್ಮೋ ಗತವಯಾ ಮಂದಾತ್ಮಾ ಕಾಲಚೋದಿತಃ ॥೨೭॥

ತೀವ್ರವಾದ ಸಂಘರ್ಷವಿರುವ ಯುದ್ಧವಾಗಲೀ ಮತ್ತು ಅದಕ್ಕೆ ಅನುಕೂಲವಾದ ಮಂತ್ರಾಲೋಚನೆಯಾಗಲೀ ಎಲ್ಲಿ? ಮೃತ್ಯುಗ್ರಸ್ತರೂ, ಅಲ್ಪಪ್ರಜ್ಞರೂ ಮತ್ತು ಬಹಳ ವೃದ್ಧರೂ ಆದ ಭೀಷ್ಮರು ಎಲ್ಲಿ?

ಏಕಾಕೀ ಸ್ಪರ್ಧತೇ ನಿತ್ಯಂ ಸರ್ವೇಣ ಜಗತಾ ಸಹ ।
ನ ಚಾನ್ಯಂ ಪುರುಷಂ ಕಂಚಿನ್ಮನ್ಯತೇ ಮೋಘದರ್ಶನಃ ॥೨೮॥

ತಾನು ಏಕಾಕಿಯಾಗಿ ಸಮಸ್ತ ಜಗತ್ತಿನ ಜೊತೆಯಲ್ಲಿ ಯುದ್ಧವನ್ನು ಮಾಡಲು ನಿತ್ಯವೂ ಬಯಸುತ್ತಾರೆ. ಮಿಥ್ಯಾಜ್ಞಾನವುಳ್ಳ ಇವರು ಬೇರೆ ಯಾರನ್ನೂ ಪುರುಷನೆಂದೇ ಭಾವಿಸುವುದಿಲ್ಲ.

ಶ್ರೋತವ್ಯಂ ಖಲು ವೃದ್ಧಾನಾಮಿತಿ ಶಾಸ್ತ್ರನಿದರ್ಶನಮ್ ।
ನ ತ್ವೇವ ಹ್ಯತಿವೃದ್ಧಾನಾಂ ಪುನರ್ಬಾಲಾ ಹಿ ತೇ ಮತಾಃ ॥೨೯॥

ವೃದ್ಧರ ಮಾತನ್ನು ಕೇಳಬೇಕೆಂದು ಶಾಸ್ತ್ರದ ಆದೇಶವಿದೆ. ಆದರೆ ಬಹಳ ವೃದ್ಧರಾದವರ ಮಾತುಗಳನ್ನು ಕೇಳಬಾರದು. ಅವರು ಎರಡನೆಯ ಬಾರಿಗೆ ಬಾಲಕರಂತಿರುತ್ತಾರೆ ಎಂದು ನನ್ನ ಅಭಿಪ್ರಾಯ.

ಅಹಮೇಕೋ ಹನಿಷ್ಯಾಮಿ ಪಾಂಡವಾನ್ ನಾತ್ರ ಸಂಶಯಃ ।
ಸುಯುದ್ಧೇ ರಾಜಶಾರ್ದೂಲ ಯಶೋ ಭೀಷ್ಮಂ ಗಮಿಷ್ಯತಿ ॥೩೦॥

ಎಲೈ ರಾಜಶಾರ್ದೂಲನೇ, ಘೋರವಾದ ಯುದ್ಧದಲ್ಲಿ ನಾನೊಬ್ಬನೇ ಪಾಂಡವರನ್ನು ಕೊಲ್ಲುವೆನು. ಇದರಲ್ಲಿ ಸಂಶಯವಿಲ್ಲ. ಆದರೆ ಆ ಕೀರ್ತಿಯು ಭೀಷ್ಮರಿಗೆ ಸೇರುವುದು.

ಕೃತಃ ಸೇನಾಪತಿಸ್ತ್ವೇಷ ತ್ವಯಾ ಭೀಷ್ಮೋ ನರಾಧಿಪ ।
ಸೇನಾಪತೌ ಯಶೋ ಗಂತಾ ನ ತು ಯೋಧಾನ್ ಕಥಂಚನ ॥೩೧॥

ಎಲೈ ರಾಜನೇ, ನೀನು ಭೀಷ್ಮರನ್ನು ಸೇನಾಪತಿಯಾಗಿ ಮಾಡಿದ್ದೀಯೆ. ಸೈನ್ಯದಿಂದ ಉಂಟಾದ ಕೀರ್ತಿಯು ಸೇನಾಪತಿಗೆ ಸೇರುವುದೇ ಹೊರತು ಸೈನಿಕರನ್ನು ಸೇರುವುದಿಲ್ಲ.

ನಾಹಂ ಜೀವತಿ ಗಾಂಗೇಯೇ ಯೋತ್ಸ್ಯೇ ರಾಜನ್ ಕಥಂಚನ ।
ಹತೇ ಭೀಷ್ಮೇ ತು ಯೋದ್ಧಾಸ್ಮಿ ಸರ್ವೈರೇವ ಮಹಾರಥೈಃ ॥೩೨॥

ಎಲೈ ರಾಜನೇ, ಭೀಷ್ಮರು ಬದುಕಿರುವವರೆಗೆ ಯಾವ ಕಾರಣದಿಂದಲೂ ನಾನು ಯುದ್ಧವನ್ನು ಮಾಡುವುದಿಲ್ಲ. ಭೀಷ್ಮರು ಹತರಾದ ಮೇಲೆ ಎಲ್ಲಾ ಮಹಾರಥರ ಜೊತೆಯಲ್ಲೂ ನಾನು ಯುದ್ಧವನ್ನು ಮಾಡುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೇಳನೆಯ ಅಧ್ಯಾಯ

ದುರ್ಯೋಧನನಿಂದ ಭೀಷ್ಮರ ಸಾಂತ್ವನ. ಭೀಷ್ಮರಿಂದ ಪಾಂಡವರ ಪಕ್ಷದಲ್ಲಿ ರಥಾತಿರಥರ ಗಣನೆ.

ಭೀಷ್ಮಃ

ಸಮುದ್ಯತೋಯಂ ಭಾರೋ ಮೇ ಸುಮಹಾನ್ ಸಾಗರೋಪಮಃ ।
ಧಾರ್ತರಾಷ್ಟ್ರಸ್ಯ ಸಂಗ್ರಾಮೇ ವರ್ಷಪೂಗಾಭಿಚಿಂತಿತಃ ॥೨॥

ತಸ್ಮಿನ್ನಭ್ಯಾಗತೇ ಕಾಲೇ ಪ್ರತಪ್ತೇ ಲೋಮಹರ್ಷಣೇ ।
ಮಿಥೋ ಭೇದೋ ನ ಮೇ ಕಾರ್ಯಸ್ತೇನ ಜೀವಸಿ ಸೂತಜ ॥೨॥

ಭೀಷ್ಮ– ದುರ್ಯೋಧನನು ಬಹಳ ಕಾಲದಿಂದ ಚಿಂತಿಸುತ್ತಿದ್ದ ಯುದ್ಧರೂಪವಾದ ಸಾಗರದಂತಿರುವ ಈ ದೊಡ್ಡ ಭಾರವು ಅವನಿಗೆ ಪ್ರಾಪ್ತವಾಗಿದೆ. ಒದಗಿಬಂದಿರುವ ಇಂತಹ ಘೋರವಾದ ಮತ್ತು ರೋಮಾಂಚಕಾರಿಯಾದ ಕಾಲದಲ್ಲಿ ನಾನು ನಮ್ಮ ಸೈನ್ಯದಲ್ಲಿಯೇ ಪರಸ್ಪರ ಭೇದವನ್ನುಂಟು ಮಾಡಬಾರದು. ಎಲೈ ಕರ್ಣನೇ, ಆ ಕಾರಣದಿಂದ ನೀನು ಬದುಕಿದ್ದೀಯೆ.

ನ ಹ್ಯಹಂ ತ್ವದ್ಯ ವಿಕ್ರಮ್ಯ ಸ್ಥವಿರೋಽಪಿ ಶಿಶೋಸ್ತವ ।
ಯುದ್ಧಶ್ರದ್ಧಾಂ ರಣೇ ಛಿಂದ್ಯಾಂ ಜೀವಿತಸ್ಯ ಚ ಸೂತಜ ॥೩॥

ಎಲೈ ಸೂತಪುತ್ರನೇ, ವೃದ್ಧನಾದರೂ ನಾನು ಈ ದಿನ ಶಿಶುವಾದ ನಿನ್ನ ಶಿರಸ್ಸನ್ನು ಕತ್ತರಿಸಿ, ನಿನ್ನ ಯುದ್ಧಾಸಕ್ತಿಯನ್ನು ಮತ್ತು ಜೀವನವನ್ನೂ ನಾಶ ಮಾಡಲಾರೆ.

ಜಾಮದಗ್ನ್ಯೇನ ರಾಮೇಣ ಮಹಾಸ್ತ್ರೇಣ ಪ್ರಮುಂಚತಾ ।
ನ ಮೇ ವ್ಯಥಾ ಕೃತಾ ಕಾಚಿತ್ ತ್ವಂ ತು ಮೇ ಕಿಂ ಕರಿಷ್ಯಸಿ ॥೪॥

ಜಮದಗ್ನಿಗಳ ಪುತ್ರರಾದ ಪರಶುರಾಮರು ನನ್ನ ಮೇಲೆ ಮಹಾಸ್ತ್ರವನ್ನು ಪ್ರಯೋಗಿಸಿದರೂ ನನಗೆ ಯಾವ ವ್ಯಥೆಯೂ ಉಂಟಾಗಲಿಲ್ಲ. ನೀನು ನನಗೆ ಏನು ಮಾಡುವಿ?

ಕಾಮಂ ನೈತತ್ ಪ್ರಶಂಸಂತಿ ಸಂತಃ ಆತ್ಮಬಲಸ್ತವಮ್ ।
ವಕ್ಷ್ಯಾಮಿ ತ್ವಾಂ ತು ಸಂತಪ್ತೋ ನಿಹೀನ ಕುಲಪಾಂಸನ ॥೫॥

ತಮ್ಮ ಬಲವನ್ನು ತಾವು ಹೇಳಿಕೊಳ್ಳುವುದನ್ನು ಸಜ್ಜನರು ಪ್ರಶಂಸಿಸುವುದಿಲ್ಲ. ಆದರೆ ಎಲೈ ಅಧಮ ಪುರುಷನೇ, ಕುಲನಾಶನನೇ, ನಿನ್ನ ಮಾತುಗಳಿಂದ ಸಂತಪ್ತನಾಗಿ ನಾನು ಹೇಳುವೆನು.

ಸಮೇತಂ ಪಾರ್ಥಿವಂ ಕ್ಷತ್ರಂ ಕಾಶಿರಾಜಸ್ವಯಂವರೇ ।
ನಿರ್ಜಿತ್ಯೈಕರಥೇನೈವ ಯಾಃ ಕನ್ಯಾಸ್ತರಸಾ ಹೃತಾಃ ॥೬॥

ಕಾಶಿರಾಜನ ಕನ್ಯೆಯರ ಸ್ವಯಂವರದಲ್ಲಿ ಒಂದು ರಥದಲ್ಲಿ ಹೋಗಿದ್ದ ನಾನು ಅಲ್ಲಿ ಒಟ್ಟುಗೂಡಿದ ಎಲ್ಲ ಕ್ಷತ್ರಿಯರನ್ನೂ ಸೋಲಿಸಿ, ನನ್ನ ಬಲದಿಂದ ಆ ಕನ್ಯೆಯರನ್ನು ಕರೆದುಕೊಂಡು ಬಂದೆ.

ಈದೃಶಾನಾಂ ಸಹಸ್ರಾಣಿ ವಿಶಿಷ್ಟಾನಾಮಥೋ ಪುನಃ ।
ಮಯೈಕೇನ ನಿರಸ್ತಾನಿ ಸಸೈನ್ಯಾನಿ ರಣಾಜಿರೇ ॥೭॥

ಇಂತಹ ಮತ್ತು ಇದಕ್ಕಿಂತಲೂ ಅಧಿಕವಾದ ಸಹಸ್ರಾರು ಸೈನ್ಯಗಳನ್ನು ಯುದ್ಧದಲ್ಲಿ ನಾನೊಬ್ಬನೇ ಸೋಲಿಸಿದ್ದೇನೆ.

ತ್ವಾಂ ಪ್ರಾಪ್ಯ ವೈ ಕಾಪುರುಷಂ ಕುರೂಣಾಮನಯೋ ಮಹಾನ್ ।
ಉಪಸ್ಥಿತೋ ವಿನಾಶಾಯ ಯತಸ್ವ ಪುರುಷೋ ಭವ ॥೮೪॥

ನಿನ್ನಂತಹ ನೀಚಪುರುಷನನ್ನು ಹೊಂದಿ, ಕೌರವರಿಗೆ ವಿನಾಶವನ್ನು ತರುವ ದೊಡ್ಡ ಅನರ್ಥವು ಪ್ರಾಪ್ತವಾಗಿದೆ. ನೀನು ಪ್ರಯತ್ನವನ್ನು ಮಾಡಿ ಪುರುಷನಾಗು.

ಯುಧ್ಯಸ್ವ ಸಮರೇ ಪಾರ್ಥಂ ಯೇನ ವಿಸ್ಪರ್ಧಸೇ ಸಹ ।
ದ್ರಕ್ಷ್ಯಾಮಿ ತ್ವಾಂ ವಿನಿರ್ಮುಕ್ತಮಸ್ಮಾದ್ ಯುದ್ಧಾತ್ ಸುದುರ್ಮತೇ ॥

ಯಾವ ಅರ್ಜುನನ ಜೊತೆಯಲ್ಲಿ ಯಾವಾಗಲೂ ಸ್ಪರ್ಧಿಸುತ್ತೀಯೋ ಅಂತಹ ಅರ್ಜುನನ ಜೊತೆಯಲ್ಲಿ ಯುದ್ಧವನ್ನು ಮಾಡು. ಬಹಳ ಕೆಟ್ಟಬುದ್ಧಿಯುಳ್ಳವನೇ, ಈ ಯುದ್ಧದಿಂದ ನೀನು ಜೀವಂತನಾಗಿ ಹೊರಗೆ ಬರುವುದನ್ನು ನಾನು ನೋಡುವೆನು.

ಸಂಜಯಃ

ತಮುವಾಚ ತತೋ ರಾಜಾ ಧಾರ್ತರಾಷ್ಟ್ರಃ ಪ್ರತಾಪವಾನ್ ॥೮೦॥

ಮಾಂ ಸಮೀಕ್ಷಸ್ವ ಗಾಂಗೇಯ ಕಾರ್ಯಂ ಹಿ ಮಹದುದ್ಯತಮ್ ॥೮೧॥

ಚಿಂತ್ಯತಾಮಿದಮೇಕಾಗ್ರಂ ಮಮ ನಿಶ್ರೇಯಸಂ ಪರಮ್ ।
ಉಭಾವಪಿ ಭವಂತೌ ಮೇ ಮಹತ್ಕರ್ಮ ಕರಿಷ್ಯತಃ ॥೮೨॥

ಸಂಜಯ– ಆಗ ಪ್ರತಾಪಶಾಲಿಯಾದ ದುರ್ಯೋಧನರಾಜನು ಭೀಷ್ಮರನ್ನು ಕುರಿತು ಮಾತನಾಡಿದನು– 'ಭೀಷ್ಮರೇ, ನನ್ನನ್ನು ನೋಡಿ, ದೊಡ್ಡ ಕಾರ್ಯವು ಪ್ರಾಪ್ತವಾಗಿದೆ. ಏನು ಮಾಡಿದರೆ ನನಗೆ ಶ್ರೇಯಸ್ಸಾಗುವುದೋ ಅದನ್ನು ಏಕಾಗ್ರಚಿತ್ತದಿಂದ ಚಿಂತಿಸಿ. ನೀವಿಬ್ಬರೂ ಯುದ್ಧದಲ್ಲಿ ದೊಡ್ಡ ಕಾರ್ಯವನ್ನು ಮಾಡುವಿರಿ.

ಭೂಯಶ್ಚ ಶ್ರೋತುಮಿಚ್ಛಾಮಿ ಪರೇಷಾಂ ರಥಸತ್ತಮಾನ್ ।
ಯೇ ಚೈವಾತಿರಥಾಸ್ತತ್ರ ಯೇ ಚೈವ ರಥಯೂಥಪಾಃ ॥೮೩॥

ಮತ್ತು ನಾನು ಪಾಂಡವರ ಪಕ್ಷದಲ್ಲಿರುವ ರಥಶ್ರೇಷ್ಠರನ್ನೂ, ಅತಿರಥರನ್ನೂ ಮತ್ತು ರಥಯೂಥಪರನ್ನೂ ನಿಮ್ಮಿಂದ ಕೇಳಲು ಬಯಸುತ್ತೇನೆ.

ಬಲಾಬಲಮಮಿತ್ರಾಣಾಂ ಶ್ರೋತುಮಿಚ್ಛಾಮಿ ಕೌರವ ।
ಪ್ರಭಾತಾಯಾಂ ತು ಶರ್ವರ್ಯಾಮಿದಂ ಯುದ್ಧಂ ಭವಿಷ್ಯತಿ ॥೧೪॥

ಎಲೈ ಕೌರವರಾದ ಭೀಷ್ಮರೇ, ಶತ್ರುಗಳ ಬಲಾಬಲವನ್ನು ನಿಮ್ಮಿಂದ ಕೇಳಲು ಬಯಸುತ್ತೇನೆ. ರಾತ್ರಿಯು ಕಳೆದು ಬೆಳಗಾದ ಮೇಲೆ ಯುದ್ಧವು ನಡೆಯುವುದು.

ಭೀಷ್ಮಃ

ಏತೇ ರಥಾಸ್ತವಾಖ್ಯಾತಾಸ್ತ್ವೈವಾತಿರಥಾ ನೃಪ ।
ಯೇ ಚಾಪ್ಯರ್ಧರಥಾ ರಾಜನ್ ಪಾಂಡವಾನಾಮತಃ ಶೃಣು ॥೧೫॥

ಭೀಷ್ಮ- ಎಲೈ ರಾಜನೇ, ನಿನ್ನ ಪಕ್ಷದಲ್ಲಿ ರಥರು, ಅತಿರಥರು ಮತ್ತು ಅರ್ಧರಥರನ್ನು ಇಂತಹವರು ಎಂದು ಹೇಳಿದ್ದೇನೆ. ಇನ್ನು ಪಾಂಡವ ಪಕ್ಷದಲ್ಲಿ ಕೇಳುವವನಾಗು.

ಯದಿ ಕೌತೂಹಲಂ ತೇऽದ್ಯ ಪಾಂಡವಾನಾಂ ನಿಬೋಧ ಮೇ ।
ರಥಸಂಖ್ಯಾಂ ಶೃಣುಷ್ವ ತ್ವಂ ಸಹೈಭಿರ್ವಸುಧಾಧಿಪೈಃ ॥೧೬॥

ಪಾಂಡವರ ಪಕ್ಷದಲ್ಲಿ ರಥಾತಿರಥರನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವಿದ್ದರೆ ನನ್ನಿಂದ ಅದನ್ನು ತಿಳಿದುಕೊ. ಈ ರಾಜರ ಜೊತೆಯಲ್ಲಿ ಸೇರಿ ರಥಾದಿಗಣನೆಯನ್ನು ಕೇಳುವವನಾಗು.

ಸ್ವಯಂ ರಾಜಾ ರಥೋದಾರಃ ಪಾಂಡವಃ ಕುಂತಿನಂದನಃ ।
ಅಗ್ನಿವತ್ ಸಮರೇ ತಾತ ಚರಿಷ್ಯತಿ ನ ಸಂಶಯಃ ॥೧೭॥

ಎಲೈ ಪ್ರೀತಿಪಾತ್ರನೇ, ಕುಂತೀ ಮತ್ತು ಪಾಂಡುವಿನ ಪುತ್ರನಾದ ಧರ್ಮರಾಜನು ಸ್ವತಃ ಒಬ್ಬ ಶ್ರೇಷ್ಠನಾದ ರಥ. ಅವನು ಅಗ್ನಿಯಂತೆ ಯುದ್ಧಭೂಮಿಯಲ್ಲಿ ಸಂಚರಿಸುವನು. ಇದರಲ್ಲಿ ಸಂಶಯವಿಲ್ಲ.

ಭೀಮಸೇನಸ್ತು ರಾಜೇಂದ್ರ ರಥೋऽಷ್ಟಗುಣಸಮ್ಮಿತಃ ।
ನಾಗಾಯುತಬಲೋ ಮಾನೀ ತೇಜಸಾ ನ ಸ ಮಾನುಷಃ ॥೧೮॥

ಎಲೈ ರಾಜೇಂದ್ರನೇ, ಭೀಮಸೇನನಾದರೂ ಎಂಟು ರಥರಿಗೆ ಸಮಾನನಾದವನು. ಅವನು ಹತ್ತು ಸಹಸ್ರ ಆನೆಗಳ ಬಲವುಳ್ಳವನು ಮತ್ತು ಮಾನವಂತನು. ಸಾಮರ್ಥ್ಯದ ದೃಷ್ಟಿಯಿಂದ ನೋಡಿದರೆ ಅವನು ಮನುಷ್ಯನೇ ಅಲ್ಲ.

ಮಾದ್ರೀಪುತ್ರೌ ತು ರಥಿನೌ ದ್ವಾವೇವ ಪುರುಷರ್ಷಭೌ ।
ಅಶ್ವಿನಾವಿವ ರೂಪೇಣ ತೇಜಸಾ ಚ ಸಮನ್ವಿತೌ ॥೧೯॥

ರೂಪದಲ್ಲಿ ಅಶ್ವಿನೀದೇವತೆಗಳಂತಿರುವ, ತೇಜಸ್ಸಿನಿಂದ ಕೂಡಿದ ಪುರುಷ ಶ್ರೇಷ್ಠರಾದ ನಕುಲ-ಸಹದೇವರಿಬ್ಬರೂ ರಥರು.

ಏತೇ ಚಮೂಮುಖಿಗತಾಃ ಸ್ಮರಂತಃ ಕ್ಲೇಶಮಾತ್ಮನಃ ।
ರುದ್ರವತ್ ಪ್ರಚರಿಷ್ಯಂತಿ ತತ್ರ ಮೇ ನಾಸ್ತಿ ಸಂಶಯಃ ॥೨೦॥

ಇವರೆಲ್ಲರೂ ಯುದ್ಧಭೂಮಿಯಲ್ಲಿನಿಂತು, ತಾವು ಹಿಂದೆ ಅನುಭವಿಸಿದ ಕ್ಲೇಶವನ್ನು ಸ್ಮರಿಸುತ್ತಾ, ರುದ್ರರಂತೆ ಸಂಚರಿಸುವುದರಲ್ಲಿ ನನಗೆ ಸಂಶಯವಿಲ್ಲ.

ಸರ್ವ ಏವ ಮಹಾತ್ಮಾನಃ ಸಾಲಸ್ತಂಭಾ ಇವೋದ್ಗತಾಃ ।
ಪ್ರಾದೇಶೇನಾಧಿಕಾಃ ಪುಂಭಿರನ್ಯೈಸ್ತೇ ಚ ಪ್ರಮಾಣತಃ ॥೨೧॥

ಈ ಪಾಂಡವರೆಲ್ಲರೂ ಮಹಾತ್ಮರು. ಸಾಲವೃಕ್ಷದ ಬುಡದಂತೆ ಇರುವವರು. ಎತ್ತರದಲ್ಲಿ ಅವರು ಇತರ ಪುರುಷರಿಗಿಂತಲೂ ಒಂದು ಗೇಣಿನಷ್ಟು ಅಧಿಕರಾದವರು.

ಸಿಂಹಸಂಹನನಾಃ ಸರ್ವೇ ಪಾಂಡುಪುತ್ರಾ ಮಹಾಬಲಾಃ ।
ಚರಿತಬ್ರಹ್ಮಚರ್ಯಾಶ್ಚ ಸರ್ವೇ ತಾತ ತಪಸ್ವಿನಃ ॥೨೨॥

ಹ್ರೀಮಂತಃ ಪುರುಷವ್ಯಾಘ್ರಾ ವ್ಯಾಘ್ರಾ ಇವ ಬಲೋತ್ಕಟಾಃ ।
ಜವೇ ಪ್ರಹಾರೇ ಸಮ್ಮರ್ದೇ ಸರ್ವ ಏವಾತಿಮಾನುಷಾಃ ॥೨೩॥

ಸರ್ವೈರ್ಜಿತಾ ಮಹೀಪಾಲಾ ದಿಗ್ಜಯೇ ಭರತರ್ಷಭ ॥೨೪॥

ಪಾಂಡುಪುತ್ರರೆಲ್ಲರೂ ಸಿಂಹಶರೀರದಂತಹ ಶರೀರವನ್ನು ಹೊಂದಿದ ಮಹಾಬಲರು. ಬ್ರಹ್ಮಚರ್ಯವ್ರತವನ್ನು ಆಚರಿಸಿದವರು. ಪ್ರೀತಿಪಾತ್ರನೇ, ಎಲ್ಲರೂ ತಪಸ್ವಿಗಳು. ಎಲ್ಲರೂ ನಾಚಿಕೆಗಳನ್ನು ಹೊಂದಿದ ಪುರುಷವ್ಯಾಘ್ರರು. ವ್ಯಾಘ್ರಗಳಂತೆ ಬಲದಿಂದ ಕೂಡಿದವರು. ವೇಗದಲ್ಲಿ, ಪ್ರಹಾರದಲ್ಲಿ ಮತ್ತು ಶತ್ರುಗಳ ಮೇಲೆ ಎರಗುವುದರಲ್ಲಿ ಅವರೆಲ್ಲರೂ ಮನುಷ್ಯರನ್ನು ಮೀರಿದವರು. ಎಲೈ ಭರತಶ್ರೇಷ್ಠನೇ, ಅವರಲ್ಲಿ ಪ್ರತಿಯೊಬ್ಬರೂ ದಿಗ್ವಿಜಯಕಾಲದಲ್ಲಿ ಎಲ್ಲ ರಾಜರನ್ನೂ ಎದುರಿಸಿ ಜಯಿಸಿದ್ದಾರೆ.

ನ ಚೈಷಾಂ ಪುರುಷಾಃ ಕೇಚಿದಾಯುಧಾನಿ ಗದಾಃ ಶರಾನ್ ।
ವಿಷಹಂತಿ ಸದಾ ಕರ್ತುಮಧಿಜ್ಯಾನಪಿ ಕೌರವ ॥೨೫॥

ಉದ್ಯಂತುಂ ವಾ ಗದಾ ಗುರ್ವೀಃ ಶರಾನ್ ವಾ ಕ್ಷೇಪ್ತುಮಾಹವೇ ॥೨೬॥

ಬೇರೆ ಯಾವ ಪುರುಷರೂ ಅವರ ಆಯುಧಗಳನ್ನಾಗಲೀ, ಗದೆಯನ್ನಾಗಲೀ, ಬಾಣಗಳನ್ನಾಗಲೀ ಸಹಿಸಲಾರರು. ಎಲೈ ಕೌರವನೇ, ಬೇರೆಯವರು ಅವರ ಬಿಲ್ಲನ್ನು ಹೆದೆ ಏರಿಸುವುದಕ್ಕಾಗಲೀ, ಅವರ ಭಾರವಾದ ಗದೆಯನ್ನು ಎತ್ತುವುದಕ್ಕಾಗಲೀ, ಅವರು ಪ್ರಯೋಗ ಮಾಡಿದಂತೆ ಬಾಣಗಳನ್ನು ಪ್ರಯೋಗಿಸುವುದಕ್ಕಾಗಲೀ ಸಮರ್ಥರಲ್ಲ.

ಜವೇ ಲಕ್ಷ್ಯಸ್ಯ ಹರಣೇ ಭಂಗೇ ಚಾಪಿ ವಿಕರ್ಷಣೇ ।
ಬಾಲೈರಪಿ ಭವಂತಸ್ತೈಃ ಸರ್ವ ಏವ ವಿಶೇಷಿತಾಃ ॥೨೭॥

ಅವರು ಬಾಲಕರಾಗಿದ್ದಾಗಲೂ ವೇಗದಲ್ಲಿ ಲಕ್ಷ್ಯವನ್ನು ಹಿಡಿದು ತರುವುದರಲ್ಲಿ, ಲಕ್ಷ್ಯವನ್ನು ಭೇದಿಸುವುದರಲ್ಲಿ ನಿಮ್ಮೆಲ್ಲರಿಗಿಂತಲೂ ಬಹಳ ಅಧಿಕರಾಗಿದ್ದರು.

ಏತತ್ ಸೈನ್ಯಂ ಸಮಾಸಾದ್ಯ ವ್ಯಾಘ್ರಾ ಇವ ಬಲೋತ್ಕಟಾಃ ।
ವಿಧ್ವಂಸಯಿಷ್ಯಂತಿ ರಣೇ ಮಾ ಸ್ಮ ತೈಃ ಸಹ ಸಂಗಮಃ ॥೨೮॥

ವ್ಯಾಘ್ರಗಳಂತೆ ಬಲೋತ್ಕಟರಾದ ಅವರು ನಿನ್ನ ಈ ಸೈನ್ಯವನ್ನು ಸಮೀಪಿಸಿ ಯುದ್ಧದಲ್ಲಿ ನಾಶವನ್ನು ಮಾಡುವರು. ಅವರ ಜೊತೆಯಲ್ಲಿ ಯುದ್ಧದಲ್ಲಿ ಸಮಾಗಮವನ್ನು ಹೊಂದದಿರುವುದು ಒಳ್ಳೆಯದು.

ಏಕೈಕಶಸ್ತೇ ಸಂಗ್ರಾಮೇ ಹನ್ಯುಃ ಸರ್ವಾನ್ ಮಹೀಕ್ಷಿತಃ ।
ಪ್ರತ್ಯಕ್ಷಂ ತವ ರಾಜೇಂದ್ರ ರಾಜಸೂಯೇ ಯಥಾऽಭವತ್ ॥೨೯॥

ಎಲೈ ರಾಜೇಂದ್ರನೇ, ರಾಜಸೂಯ ಯಾಗದಲ್ಲಿ ನಿನ್ನ ಕಣ್ಣೆದುರಿಗೆ ನಡೆದಂತೆ ಅವರಲ್ಲಿ ಒಬ್ಬೊಬ್ಬರೂ ಎಲ್ಲಾ ರಾಜರನ್ನೂ ಯುದ್ಧದಲ್ಲಿ ಕೊಂದಾರು.

ದ್ರೌಪದ್ಯಾಶ್ಚ ಪರಿಕ್ಲೇಶಂ ದ್ಯೂತೇ ಚ ಪರುಷಾ ಗಿರಃ ।
ತೇ ಸ್ಮರಂತಶ್ಚ ಸಂಗ್ರಾಮೇ ವಿಚರಿಷ್ಯಂತಿ ರುದ್ರವತ್ ॥೩೦॥

ದ್ರೌಪದಿಗೆ ಉಂಟಾದ ಪರಿಕ್ಲೇಶವನ್ನೂ ದ್ಯೂತಸಮಯದಲ್ಲಿ ನೀವು ಆಡಿದ ಕ್ರೂರವಾದ ಮಾತುಗಳನ್ನೂ ಸ್ಮರಿಸಿಕೊಳ್ಳುತ್ತಾ ಯುದ್ಧದಲ್ಲಿ ರುದ್ರದೇವರಂತೆ ಸಂಚರಿಸುವರು.

ಲೋಹಿತಾಕ್ಷೋ ಗುಡಾಕೇಶೋ ನಾರಾಯಣಸಹಾಯವಾನ್ ।
ಉಭಯೋಃ ಸೇನಯೋರ್ವೀರೋ ರಥೋ ನಾಸ್ತೀಹ ತಾದೃಶಃ ॥೩೧॥

ಕೆಂಪಾದ ಕಣ್ಣುಳ್ಳವನೂ ಮತ್ತು ನಾರಾಯಣನ ಸಹಾಯವುಳ್ಳವನೂ ಆದ ಗುಡಾಕೇಶನು ಎರಡು ಸೈನ್ಯಗಳಲ್ಲಿಯೂ ಅತ್ಯಂತ ಶ್ರೇಷ್ಠನಾದ ವೀರ. ಅವನಿಗೆ ಸಮಾನನಾದ ರಥರು ಇಲ್ಲಿ ಯಾರೂ ಇಲ್ಲ.

ನ ಹಿ ದೇವೇಷು ವಾ ಪೂರ್ವಂ ದಾನವೇಷೂರಗೇಷು ವಾ ।
ರಾಕ್ಷಸೇಷ್ವಥ ಯಕ್ಷೇಷು ನರೇಷು ಕುತ ಏವ ತು ॥೩೨॥

ಭೂತೋಽಥವಾ ಭವಿಷ್ಯೋ ವಾ ರಥಃ ಕಶ್ಚಿನ್ಮಯಾ ಶ್ರುತಃ ।
ಸಮಾಯುಕ್ತೋ ಮಹಾರಾಜ ರಥಃ ಪಾರ್ಥಸ್ಯ ಧೀಮತಃ ॥೩೩॥

ದೇವತೆಗಳಲ್ಲಾಗಲೀ, ದಾನವರಲ್ಲಾಗಲೀ, ಸರ್ಪಗಳಲ್ಲಾಗಲೀ, ರಾಕ್ಷಸರಲ್ಲಾಗಲೀ, ಯಕ್ಷರಲ್ಲಾಗಲೀ, ಇನ್ನು ಮನುಷ್ಯ ಎಲ್ಲಿಂದ ಬರಬೇಕು– ಅವನಿಗೆ ಸಮಾನನಾದ ರಥನನ್ನು ನಾನು ಹಿಂದೆ ಕೇಳಲಿಲ್ಲ, ಮುಂದೆ ಕೇಳುವುದಿಲ್ಲ. ಎಲೈ ಮಹಾರಾಜನೇ, ಅಂತಹ ಮೇಧಾವಿಯಾದ ಅರ್ಜುನನ ರಥವು ಸರ್ವಸನ್ನದ್ಧವಾಗಿದೆ.

ವಾಸುದೇವಶ್ಚ ಸಂಯಂತಾ ರಥಶ್ಚೈವಾತ್ರ ತಾದೃಶಃ ।
ಗಾಂಡೀವಂ ಚ ಧನುರ್ದಿವ್ಯಂ ತೇ ಚಾಶ್ವಾ ವಾತರಂಹಸಃ ॥೩೪॥

ಅಭೇದ್ಯಕವಚಂ ದಿವ್ಯಮಕ್ಷಯ್ಯೌ ಚ ಮಹೇಷುಧೀ ।
ಅಸ್ತ್ರಗ್ರಾಮಶ್ಚ ಮಾಹೇಂದ್ರೋ ರೌದ್ರಃ ಕೌಬೇರ ಏವ ಚ ॥೩೫॥

ಯಾಮ್ಯಶ್ಚ ವಾರುಣಶ್ಚೈವ ಗದಾಶ್ಚೋಗ್ರಪ್ರದರ್ಶನಾಃ ।
ವಜ್ರಾದೀನಿ ಚ ಮುಖ್ಯಾನಿ ನಾನಾಪ್ರಹರಣಾನಿ ವೈ ॥೩೬॥

ಕೃಷ್ಣನು ಅವನಿಗೆ ಸಾರಥಿಯಾಗಿದ್ದಾನೆ. ರಥವಾದರೂ ಆ ರೀತಿಯಿದೆ. ಅವನ ಬಳಿ ಇರುವುದು ದಿವ್ಯವಾದ ಗಾಂಡೀವ ಧನುಸ್ಸು. ಆ ಅಶ್ವಗಳಾದರೂ ವಾಯುವೇಗವನ್ನು ಹೊಂದಿವೆ. ಅವನ ಕವಚವು ದಿವ್ಯವೂ, ಅಭೇದ್ಯವೂ ಆದುದು. ಅವನ ಬತ್ತಳಿಕೆಗಳು ಅಕ್ಷಯವಾದವುಗಳು. ಅವನ ಅಸ್ತ್ರಸಮೂಹದಲ್ಲಿ ಇಂದ್ರಾಸ್ತ್ರ, ಪಾಶುಪತಾಸ್ತ್ರ, ಕೌಬೇರಾಸ್ತ್ರ, ಯಾಮ್ಯಾಸ್ತ್ರ, ವಾರುಣಾಸ್ತ್ರಗಳೂ ಸೇರಿವೆ. ಅವನ ಗದೆಗಳು ನೋಡುವುದಕ್ಕೇ ಭಯಂಕರವಾಗಿವೆ. ಇನ್ನು ಶಸ್ತ್ರಗಳಲ್ಲಂತೂ ವಜ್ರವೇ ಮೊದಲಾದ ನಾನಾ ವಿಧವಾದ ಶಸ್ತ್ರಗಳಿವೆ.

ದಾನವಾನಾಂ ಸಹಸ್ರಾಣಿ ಹಿರಣ್ಯಪುರವಾಸಿನಾಮ್ ।
ಹತಾನ್ಯೇಕರಥೇನಾಜೌ ಕಸ್ತಸ್ಯ ಸದೃಶೋ ರಥಃ ॥೩೭॥

ಹಿರಣ್ಯಪುರ ವಾಸಿಗಳಾದ ಸಹಸ್ರಾರು ದಾನವರನ್ನು ಒಂದು ರಥದಲ್ಲಿ ಕುಳಿತು ಒಬ್ಬನೇ ಕೊಂದನು. ಅವನಿಗೆ ಸದೃಶನಾದ ರಥನು ಯಾವನು?

ಏಷ ಹನ್ಯಾದ್ಧಿ ಸಂರಂಭೀ ಬಲವಾನ್ ಸತ್ಯಸಂಗರಃ ।
ಭವತ್ಸೇನಾಂ ಮಹಾಬಾಹುಃ ಸ್ವಾಂ ಚೈವ ಪರಿಪಾಲಯನ್ ॥೩೮॥

ಬಲಿಷ್ಠನೂ, ಸತ್ಯಸಂಧನೂ, ಮಹಾಬಾಹುವೂ ಆದ ಅವನು ತನ್ನ ಸೈನ್ಯವನ್ನು ರಕ್ಷಣೆ ಮಾಡಿಕೊಂಡು ಕೋಪದಿಂದ ನಿನ್ನ ಸೈನ್ಯವನ್ನು ಒಬ್ಬನೇ ಕೊಂದಾನು!

ಅಹಂ ಚೈನಂ ಪ್ರತ್ಯುದೀಯಾಮಾಚಾರ್ಯೋ ವಾ ಧನಂಜಯಮ್ ।
ನ ತೃತೀಯೋऽಸ್ತಿ ರಾಜೇಂದ್ರ ಸೇನಯೋರುಭಯೋರಪಿ ॥೩೯॥

ಯ ಏನಂ ಶರವರ್ಷಾಣಿ ಮುಂಚಂತಮುದಿಯಾದ್ ರಥೀ ।
ಜೀಮೂತ ಇವ ಘರ್ಮಾಂತೇ ಮಹಾವಾತಸಮೀರಿತಃ ॥೪೦॥

ಎಲೈ ರಾಜೇಂದ್ರನೇ, ಬೇಸಿಗೆಯು ಕಳೆದ ಮೇಲೆ ವಾಯುವಿನಿಂದ ಪ್ರೇರಿತವಾದ ಮಹಾಮೋಡವು ಮಳೆಯನ್ನು ಸುರಿಸಿದಂತೆ ಬಾಣಗಳ ಮಳೆಯನ್ನು ಸುರಿಸುವ ಇವನಿಗೆ ಎದುರಾಗಿ ನಾನಾಗಲೀ, ಆಚಾರ್ಯರಾದ ದ್ರೋಣರಾಗಲೀ ರಥದಲ್ಲಿ ಎದುರಿಸಬಹುದು. ಆದರೆ ಎರಡು ಸೈನ್ಯಗಳನ್ನು ನೋಡಿದರೂ ಮೂರನೆಯ ವ್ಯಕ್ತಿಯು ಸಿಗುವುದಿಲ್ಲ.

ಸಮಾಯುಕ್ತಸ್ತು ಕೌಂತೇಯೋ ವಾಸುದೇವಸಹಾಯವಾನ್ ।
ತರುಣಶ್ಚ ಕೃತೀ ಚೈವ ಜೀರ್ಣೌ ಚಾವಾಮುಭಾವಪಿ ॥೪೧॥

ಕುಂತೀಪುತ್ರನಾದ ಅರ್ಜುನನು ಕೃಷ್ಣನ ಸಹಾಯವುಳ್ಳವನಾಗಿದ್ದಾನೆ. ಅವನು ತರುಣ ಮತ್ತು ಸುಶಿಕ್ಷಿತನಾಗಿದ್ದಾನೆ. ನಾವಿಬ್ಬರೂ ವೃದ್ಧರಾಗಿದ್ದೇವೆ.

ಸಂಜಯಃ

ಏತಚ್ಛ್ರುತ್ವಾ ತು ಭೀಷ್ಮಸ್ಯ ರಾಜ್ಞಾಂ ದದ್ಧ್ವಂಸಿರೇ ತದಾ ।
ಕಾಂಚನಾಂಗದಿನಃ ಪೀನಾ ಭುಜಾಶ್ಚಂದನರೂಷಿತಾಃ ॥೪೨॥

ಮನೋಭಿಃ ಸಹಸಾ ವೇಗೈಃ ಸಂಸ್ಮೃತ್ಯ ಚ ಪುರಾತನಮ್ ।
ಸಾಮರ್ಥ್ಯಂ ಪಾಂಡವೇಯಾನಾಂ ಯಥಾ ಪ್ರತ್ಯಕ್ಷದರ್ಶನಾತ್ ॥೪೩॥

ಸಂಜಯ– ಭೀಷ್ಮರ ಮಾತುಗಳನ್ನು ಕೇಳಿ ನೆರೆದಿದ್ದ ರಾಜರು ತಮ್ಮ ಕಣ್ಣೆದುರಿಗೆ ನೋಡಿದಂತೆ, ಪಾಂಡವರ ಹಿಂದಿನ ಕಾಲದಿಂದಲೂ ಇರುವ ಸಾಮರ್ಥ್ಯವನ್ನು ಶೀಘ್ರವಾಗಿ ತಮ್ಮ ಮನಸ್ಸಿನಲ್ಲಿ ನೆನೆದು, ಸುವರ್ಣಮಯವಾದ ಅಂಗದಗಳನ್ನು ಧರಿಸಿ, ಪುಷ್ಟವಾದ ತಮ್ಮ ಭುಜಗಳನ್ನು ಚಂದನದಿಂದ ಲೇಪಿಸಿಕೊಂಡಿದ್ದ ಆ ರಾಜರೆಲ್ಲರಿಗೂ ಬಲದ ಹ್ರಾಸವುಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಕೃಷ್ಣನು ಅವನಿಗೆ ಸಾರಥಿಯಾಗಿದ್ದಾನೆ. ರಥವಾದರೂ ಆ ರೀತಿಯಿದೆ. ಅವನ ಬಳಿ ಇರುವುದು ದಿವ್ಯವಾದ ಗಾಂಡೀವ ಧನುಸ್ಸು. ಆ ಅಶ್ವಗಳಾದರೂ ವಾಯುವೇಗವನ್ನು ಹೊಂದಿವೆ. ಅವನ ಕವಚವು ದಿವ್ಯವೂ, ಅಭೇದ್ಯವೂ ಆದುದು. ಅವನ ಬತ್ತಳಿಕೆಗಳು ಅಕ್ಷಯವಾದವುಗಳು. ಅವನ ಅಸ್ತ್ರಸಮೂಹದಲ್ಲಿ ಇಂದ್ರಾಸ್ತ್ರ, ಪಾಶುಪತಾಸ್ತ್ರ, ಕೌಬೇರಾಸ್ತ್ರ, ಯಾಮ್ಯಾಸ್ತ್ರ, ವಾರುಣಾಸ್ತ್ರಗಳೂ ಸೇರಿವೆ. ಅವನ ಗದೆಗಳು ನೋಡುವುದಕ್ಕೇ ಭಯಂಕರವಾಗಿವೆ. ಇನ್ನು ಶಸ್ತ್ರಗಳಲ್ಲಂತೂ ವಜ್ರವೇ ಮೊದಲಾದ ನಾನಾ ವಿಧವಾದ ಶಸ್ತ್ರಗಳಿವೆ.

ದಾನವಾನಾಂ ಸಹಸ್ರಾಣಿ ಹಿರಣ್ಯಪುರವಾಸಿನಾಮ್ ।
ಹತಾನ್ಯೇಕರಥೇನಾಜೌ ಕಸ್ತಸ್ಯ ಸದೃಶೋ ರಥಃ ॥೩೭॥

ಹಿರಣ್ಯಪುರ ವಾಸಿಗಳಾದ ಸಹಸ್ರಾರು ದಾನವರನ್ನು ಒಂದು ರಥದಲ್ಲಿ ಕುಳಿತು ಒಬ್ಬನೇ ಕೊಂದನು. ಅವನಿಗೆ ಸದೃಶನಾದ ರಥನು ಯಾವನು?

ಏಷ ಹನ್ಯಾದ್ಧಿ ಸಂರಂಭೀ ಬಲವಾನ್ ಸತ್ಯಸಂಗರಃ ।
ಭವತ್ಸೇನಾಂ ಮಹಾಬಾಹುಃ ಸ್ವಾಂ ಚೈವ ಪರಿಪಾಲಯನ್ ॥೩೮॥

ಬಲಿಷ್ಠನೂ, ಸತ್ಯಸಂಧನೂ, ಮಹಾಬಾಹುವೂ ಆದ ಅವನು ತನ್ನ ಸೈನ್ಯವನ್ನು ರಕ್ಷಣೆ ಮಾಡಿಕೊಂಡು ಕೋಪದಿಂದ ನಿನ್ನ ಸೈನ್ಯವನ್ನು ಒಬ್ಬನೇ ಕೊಂದಾನು!

ಅಹಂ ಚೈನಂ ಪ್ರತ್ಯುದೀಯಾಮಾಚಾರ್ಯೋ ವಾ ಧನಂಜಯಮ್ ।
ನ ತೃತೀಯೋऽಸ್ತಿ ರಾಜೇಂದ್ರ ಸೇನಯೋರುಭಯೋರಪಿ ॥೩೯॥

ಯ ಏನಂ ಶರವರ್ಷಾಣಿ ಮುಂಚಂತಮುದಿಯಾದ್ ರಥೀ ।
ಜೀಮೂತ ಇವ ಘರ್ಮಾಂತೇ ಮಹಾವಾತಸಮೀರಿತಃ ॥೪೦॥

ಎಲೈ ರಾಜೇಂದ್ರನೇ, ಬೇಸಿಗೆಯು ಕಳೆದ ಮೇಲೆ ವಾಯುವಿನಿಂದ ಪ್ರೇರಿತವಾದ ಮಹಾಮೋಡವು ಮಳೆಯನ್ನು ಸುರಿಸಿದಂತೆ ಬಾಣಗಳ ಮಳೆಯನ್ನು ಸುರಿಸುವ ಇವನಿಗೆ ಎದುರಾಗಿ ನಾನಾಗಲೀ, ಆಚಾರ್ಯರಾದ ದ್ರೋಣರಾಗಲೀ ರಥದಲ್ಲಿ ಎದುರಿಸಬಹುದು. ಆದರೆ ಎರಡು ಸೈನ್ಯಗಳನ್ನು ನೋಡಿದರೂ ಮೂರನೆಯ ವ್ಯಕ್ತಿಯು ಸಿಗುವುದಿಲ್ಲ.

ಸಮಾಯುಕ್ತಸ್ತು ಕೌಂತೇಯೋ ವಾಸುದೇವಸಹಾಯವಾನ್ ।
ತರುಣಶ್ಚ ಕೃತೀ ಚೈವ ಜೀರ್ಣೌ ಚಾವಾಮುಭಾವಪಿ ॥೪೧॥

ಕುಂತೀಪುತ್ರನಾದ ಅರ್ಜುನನು ಕೃಷ್ಣನ ಸಹಾಯವುಳ್ಳವನಾಗಿದ್ದಾನೆ. ಅವನು ತರುಣ ಮತ್ತು ಸುಶಿಕ್ಷಿತನಾಗಿದ್ದಾನೆ. ನಾವಿಬ್ಬರೂ ವೃದ್ಧರಾಗಿದ್ದೇವೆ.

ಸಂಜಯಃ

ಏತಚ್ಚ್ರುತ್ವಾ ತು ಭೀಷ್ಮಸ್ಯ ರಾಜ್ಞಾಂ ದಧ್ವಂಸಿರೇ ತದಾ ।
ಕಾಂಚನಾಂಗದಿನಃ ಪೀನಾ ಭುಜಾಶ್ಚಂದನರೂಷಿತಾಃ ॥೪೨॥

ಮನೋಭಿಃ ಸಹಸಾ ವೇಗೈಃ ಸಂಸ್ಮೃತ್ಯ ಚ ಪುರಾತನಮ್ ।
ಸಾಮರ್ಥ್ಯಂ ಪಾಂಡವೇಯಾನಾಂ ಯಥಾ ಪ್ರತ್ಯಕ್ಷದರ್ಶನಾತ್ ॥೪೩॥

ಸಂಜಯ– ಭೀಷ್ಮರ ಮಾತುಗಳನ್ನು ಕೇಳಿ ನೆರೆದಿದ್ದ ರಾಜರು ತಮ್ಮ ಕಣ್ಣೆದುರಿಗೆ ನೋಡಿದಂತೆ, ಪಾಂಡವರ ಹಿಂದಿನ ಕಾಲದಿಂದಲೂ ಇರುವ ಸಾಮರ್ಥ್ಯವನ್ನು ಶೀಘ್ರವಾಗಿ ತಮ್ಮ ಮನಸ್ಸಿನಲ್ಲಿ ನೆನೆದು, ಸುವರ್ಣಮಯವಾದ ಅಂಗದಗಳನ್ನು ಧರಿಸಿ, ಪುಷ್ಟವಾದ ತಮ್ಮ ಭುಜಗಳನ್ನು ಚಂದನದಿಂದ ಲೇಪಿಸಿಕೊಂಡಿದ್ದ ಆ ರಾಜರೆಲ್ಲರಿಗೂ ಬಲದ ಹ್ರಾಸವುಂಟಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ಮಹಾಭಾರತತಾತ್ಪರ್ಯನಿರ್ಣಯಃ – ಅಧ್ಯಾಯಃ ೨೪

ತತೋ ಯಯುಃ ಕೌರವಾಃ ಪಾಂಡವಾಶ್ಚ
ಕುರುಕ್ಷೇತ್ರಂ ಯೋದ್ಧುಕಾಮಾಃ ಸಕೃಷ್ಣಾಃ ।
ಚಕ್ರುಶ್ಚ ತೇ ಶಿಬಿರಾಣ್ಯತ್ರ ಸರ್ವೇ
ಶುಭೇ ದೇಶೇ ಪಾಂಡವಾಃ ಕೃಷ್ಣಬುದ್ಧ್ಯಾ ॥೮೯॥

ಬಳಿಕ ಪಾಂಡವರೂ ಕೌರವರೂ ಯುದ್ಧ ಮಾಡಲು ಬಯಸಿ ಕೃಷ್ಣನೊಂದಿಗೆ ಕುರುಕ್ಷೇತ್ರಕ್ಕೆ ನಡೆದರು. ಅಲ್ಲಿ ಎಲ್ಲರೂ ಶಿಬಿರಗಳನ್ನು ನಿರ್ಮಿಸಿಕೊಂಡರು. ಅದರಲ್ಲಿಯೂ ಪಾಂಡವರು ಕೃಷ್ಣನ ಆದೇಶದಿಂದ ಶುಭಕರವಾದ ಒಂದು ಸ್ಥಳದಲ್ಲಿಯೇ ಶಿಬಿರ ರಚಿಸಿಕೊಂಡರು.

★ ★ ★ ★ ★

ನೂರ ಅರವತ್ತೆಂಟನೆಯ ಅಧ್ಯಾಯ

ಪಾಂಡವರ ಪಕ್ಷದಲ್ಲಿ ಭೀಷ್ಮರ ಮುಂದುವರೆದ ರಥಗಣನೆ.

ಭೀಷ್ಮಃ

ದ್ರೌಪದೇಯಾಃ ಮಹಾರಾಜ ಸರ್ವೇ ಪಂಚ ಮಹಾರಥಾಃ ।
ವೈರಾಟಿರುತ್ತರಶ್ಚೈವ ರಥೋ ಮಮ ಮಹಾನ್ ಮತಃ ॥೧॥

ಭೀಷ್ಮ– ಎಲೈ ಮಹಾರಾಜನೇ, ದ್ರೌಪದಿಯ ಐದುಮಕ್ಕಳೂ ಎಲ್ಲರೂ ಮಹಾರಥರು. ವಿರಾಟನ ಮಗನಾದ ಉತ್ತರನೂ ಒಬ್ಬ ಮಹಾರಥನೆಂದು ನನ್ನ ಅಭಿಪ್ರಾಯ.

ಅಭಿಮನ್ಯುರ್ಮಹಾಬಾಹೂ ರಥಯೂಥಪಯೂಥಪಃ ।
ಸಮಃ ಪಾರ್ಥೇನ ಸಮರೇ ವಾಸುದೇವೇನ ವಾ ಭವೇತ್ ॥೨॥

ಮಹಾಬಾಹುವಾದ ಅಭಿಮನ್ಯುವು ರಥಯೂಥಪಯೂಥಪನಾದವನು. ಯುದ್ಧದಲ್ಲಿ ಅವನು ಅರ್ಜುನನಿಗೆ ಸಮ ಅಥವಾ ಕೃಷ್ಣನಿಗೂ ಸಮಾನನಾದಾನು!

ಲಘ್ವಸ್ತ್ರಶಿಕ್ಷಿತ್ರಯೋಧೀ ಚ ಮನಸ್ವೀ ದೃಢವಿಕ್ರಮಃ ।
ಸಂಸ್ಮರನ್ ವೈ ಪರಿಕ್ಲೇಶಂ ಸ್ವಪಿತುರ್ವಿಕ್ರಮಿಷ್ಯತಿ ॥೩॥

ಅವನು ಶೀಘ್ರವಾಗಿ ಅಸ್ತ್ರವನ್ನು ಪ್ರಯೋಗಿಸುವವನು. ವಿಚಿತ್ರವಾಗಿ ಯುದ್ಧವನ್ನು ಮಾಡುವವನು. ಧೈರ್ಯಶಾಲಿ ಮತ್ತು ಪರಾಕ್ರಮಶಾಲಿ. ತನ್ನ ತಂದೆಯು ಅನುಭವಿಸಿದ ಕ್ಲೇಶಗಳನ್ನು ಸ್ಮರಿಸಿಕೊಂಡು ಅವನು ತನ್ನ ಪರಾಕ್ರಮವನ್ನು ತೋರಿಸುವನು.

ಸಾತ್ಯಕಿರ್ಮಾಧವಃ ಶೂರೋ ರಥಯೂಥಪಯೂಥಪಃ ।
ಏಷ ವೃಷ್ಣಿಪ್ರವೀರಾಣಾಮಮರ್ಷೀ ಜಿತಸಾಧ್ವಸಃ ॥೪॥

ಮಧುಕುಲದಲ್ಲಿ ಜನಿಸಿದ, ಶೂರನಾದ ಸಾತ್ಯಕಿಯು ರಥಯೂಥಪ-ಯೂಥಪನಾದವನು. ವೃಷ್ಣಿವೀರರ ಮಧ್ಯದಲ್ಲಿ ಬಹಳ ಕೋಪವುಳ್ಳವನು ಮತ್ತು ನಿರ್ಭಯನಾದವನು.

ಉತ್ತಮೌಜಾಸ್ತಥಾ ರಾಜನ್ ರಥೋ ಮಮ ಮಹಾನ್ ಮತಃ ।
ಯುಧಾಮನ್ಯುಶ್ಚ ವಿಕ್ರಾಂತೋ ರಥೋದಾರೋ ನರರ್ಷಭಃ ॥೫॥

ಎಲೈ ರಾಜನೇ, ನನ್ನ ದೃಷ್ಟಿಯಲ್ಲಿ ಉತ್ತಮೌಜನು ಒಬ್ಬ ಮಹಾರಥ. ಪರಾಕ್ರಮಶಾಲಿಯೂ, ನರಶ್ರೇಷ್ಠನೂ ಆದ ಯುಧಾಮನ್ಯುವು ಇನ್ನೊಬ್ಬ ಶ್ರೇಷ್ಠನಾದ ರಥ.

ಏತೇಷಾಂ ಬಹುಸಾಹಸ್ರಾ ರಥಾ ನಾಗಾ ಹಯಾಸ್ತಥಾ ।
ಯೋತ್ಸ್ಯಂತೇ ತೇ ತನುಂ ತ್ಯಕ್ತ್ವಾ ಕುಂತೀಪುತ್ರಪ್ರಿಯೇಪ್ಸಯಾ ॥೬॥

ಪಾಂಡವೈಃ ಸಹ ರಾಜೇಂದ್ರ ತವ ಸೇನಾಸು ಭಾರತ ।
ಅಗ್ನಿಮಾರುತವದ್ ರಾಜನ್ನಾಹ್ವಯಂತಃ ಪರಸ್ಪರಮ್ ॥೭॥

ಈ ಮಹಾರಥರ ಜೊತೆಯಲ್ಲಿ ಅನೇಕ ಸಹಸ್ರ ಸಂಖ್ಯೆಯ ರಥಗಳೂ, ಗಜಗಳೂ ಮತ್ತು ಅಶ್ವಗಳೂ ಇವೆ. ಎಲೈ ರಾಜೇಂದ್ರನೇ, ಅವರು ಯುಧಿಷ್ಠಿರನ ಸೇನೆಯ ಜೊತೆಯಲ್ಲಿ ನಿನ್ನ ಸೇನೆಗೆ ವಿರುದ್ಧವಾಗಿ ಶರೀರವನ್ನು ತ್ಯಾಗ ಮಾಡುವುದನ್ನು ಲೆಕ್ಕಿಸದೇ ಅಗ್ನಿ-ವಾಯುಗಳಂತೆ ಪರಸ್ಪರವಾಗಿ ಆಹ್ವಾನವನ್ನು ಮಾಡುತ್ತಾ ಯುದ್ಧವನ್ನು ಮಾಡುವರು.

ಅಜೇಯೌ ಸಮರೇ ವೃದ್ಧೌ ವಿರಾಟದ್ರುಪದಾವುಭೌ ।
ಮಹಾರಥೌ ಮಹಾವೀರ್ಯೌ ಮತೌ ಮೇ ಪುರುಷರ್ಷಭೌ ॥೮॥

ವಿರಾಟ-ದ್ರುಪದರಿಬ್ಬರೂ ವೃದ್ಧರಾದರೂ ಯುದ್ಧದಲ್ಲಿ ಅಜೇಯರಾದವರು. ಮಹಾಸಾಮರ್ಥ್ಯೋಪೇತರಾದ ಈ ಪುರುಷಶ್ರೇಷ್ಠರಿಬ್ಬರೂ ಮಹಾರಥರೆಂದು ನನ್ನ ಎಣಿಕೆ.

ವಯೋವೃದ್ಧಾವಪಿ ಹಿ ತೌ ಕ್ಷತ್ರಧರ್ಮಪರಾಯಣೌ ।
ಯತಿಷ್ಯೇತೇ ಪರಂ ಶಕ್ತ್ಯಾ ಸ್ಥಿತೌ ವೀರಗತೇ ಪಥಿ ॥೯॥

ಕ್ಷತ್ರಿಯಧರ್ಮಪರಾಯಣರಾದ ಅವರು ವಯಸ್ಸಿನಿಂದ ವೃದ್ಧರಾದರೂ ವೀರರ ಮಾರ್ಗದಲ್ಲಿ ತಮ್ಮ ಶಕ್ತಿಯನ್ನು ಮೀರಿ ನಿಂತವರಾಗಿ, ಯುದ್ಧದಲ್ಲಿ ಪ್ರಯತ್ನವನ್ನು ಮಾಡುವರು.

ಸಂಬಂಧಕೇನ ರಾಜೇಂದ್ರ ತೌ ತು ವೀರ್ಯಬಲಾನ್ವಯಾತ್ ।
ಆರ್ಯವೃತ್ತೌ ಮಹೇಷ್ವಾಸೌ ಸ್ನೇಹಪಾಶಯುತಾವುಭೌ ॥೧೦॥

ಎಲೈ ರಾಜೇಂದ್ರನೇ, ಅವರು ಪಾಂಡವರ ಜೊತೆಯಲ್ಲಿ ತಮಗಿರುವ ಸಂಬಂಧದಿಂದಲೂ, ತಮ್ಮ ಸಾಮರ್ಥ್ಯ ಮತ್ತು ಬಲಗಳ ಕಾರಣದಿಂದಲೂ, ಪಾಂಡವರಲ್ಲಿ ಸ್ನೇಹಪಾಶದಿಂದ ಕಟ್ಟಲ್ಪಟ್ಟವರಾಗಿ ಮಹಾಧನುರ್ಧಾರಿಗಳೂ ಮತ್ತು ಉದಾತ್ತವಾದ ನಡತೆಯುಳ್ಳವರೂ ಆದ ಅವರು ಯುದ್ಧವನ್ನು ಮಾಡುವರು.

ಕಾರಣಂ ಪ್ರಾಪ್ಯ ತು ನರಾಃ ಸರ್ವ ಏವ ಮಹಾಭುಜಾಃ ।
ಶೂರಾ ವಾ ಕಾತರಾ ವಾಽಪಿ ಭವಂತಿ ನರಪುಂಗವಾಃ ॥೧೧॥

ಮಹಾಭುಜರಾದ ನರಶ್ರೇಷ್ಠರೆಲ್ಲರೂ ನಿಮಿತ್ತವು ಒದಗಿದಾಗ ಶೂರರಾಗಲೀ ಅಥವಾ ಭಯಗ್ರಸ್ತರಾಗಲೀ ಆಗುತ್ತಾರೆ.

ಏಕಾಯನಗತಾವೇತೌ ಪಾರ್ಥಿವೌ ದೃಢಧನ್ವಿನೌ ।
ಪ್ರಾಣಾಂಸ್ತ್ಯಕ್ತ್ವಾ ಪರಂ ಶಕ್ತ್ಯಾ ಘಟ್ಟಿತಾರೌ ನರಾಧಿಪ ॥೧೨॥

ಎಲೈ ರಾಜನೇ, ದೃಢವಾದ ಧನುಸ್ಸುಳ್ಳ ಈ ಇಬ್ಬರು ರಾಜರು ಒಂದೇ ಮಾರ್ಗದಲ್ಲಿ ಹೋಗುವವರಾಗಿ ತಮ್ಮ ಪ್ರಾಣಗಳನ್ನು ಬಿಟ್ಟಾದರೂ ತಮ್ಮ ಪೂರ್ಣಶಕ್ತಿಯಿಂದ ಶತ್ರುಗಳ ಮೇಲೆ ಬೀಳುವರು.

ಪೃಥಗಕ್ಷೌಹಿಣೀಭ್ಯಾಂ ತಾವುಭೌ ಸಂಯತಿ ದಾರುಣೌ ।
ಸಂಬಂಧಿಭಾವಂ ರಕ್ಷಂತೌ ಮಹತ್ ಕರ್ಮ ಕರಿಷ್ಯತಃ ॥೧೩॥

ಬೇರೆ ಬೇರೆ ಒಂದೊಂದು ಅಕ್ಷೌಹಿಣಿ ಸೈನ್ಯದಿಂದ ಪಾಂಡವರನ್ನು ಬಂದು ಸೇರಿರುವ ಅವರಿಬ್ಬರೂ ಯುದ್ಧದಲ್ಲಿ ಪರಮಶೂರರಾದವರು. ಪಾಂಡವರ ಜೊತೆಯಲ್ಲಿ ಇರುವ ತಮ್ಮ ಸಂಬಂಧವನ್ನು ರಕ್ಷಿಸುತ್ತಾ ದೊಡ್ಡ ಕಾರ್ಯವನ್ನು ಮಾಡುವರು.

ಲೋಕವೀರೌ ಮಹೇಷ್ವಾಸೌ ತ್ಯಕ್ತಾತ್ಮಾನೌ ಚ ಭಾರತ ।
ಪ್ರತ್ಯಯಂ ಪರಿರಕ್ಷಂತೌ ಮಹತ್ಕರ್ಮ ಕರಿಷ್ಯತಃ ॥೧೪॥

ಎಲೈ ಭಾರತನೇ, ಮಹಾಧನುರ್ಧಾರಿಗಳೂ ಮತ್ತು ಲೋಕವೀರರೂ ಆದ ಅವರು ಪಾಂಡವರು ತಮ್ಮಲ್ಲಿಟ್ಟಿರುವ ವಿಶ್ವಾಸವನ್ನು ರಕ್ಷಿಸಿಕೊಳ್ಳುತ್ತಾ, ದೇಹತ್ಯಾಗವನ್ನು ಮಾಡಿಯಾದರೂ ದೊಡ್ಡ ಕಾರ್ಯವನ್ನು ಮಾಡುವವರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ
ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಅಷ್ಟಷಷ್ಟ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಅರವತ್ತೊಂಬತ್ತನೆಯ ಅಧ್ಯಾಯ

ಭೀಷ್ಮರಿಂದ ಮುಂದುವರೆದ ಪಾಂಡವರ ಸೈನ್ಯದ ರಥಾತಿರಥಗಣನೆ.

ಭೀಷ್ಮಃ

ಪಾಂಚಾಲರಾಜಸ್ಯ ಸುತೋ ರಾಜನ್ ಪರಪುರಂಜಯಃ ।
ಶಿಖಂಡೀ ರಥಮುಖ್ಯೋ ಮೇ ಮತಃ ಪಾರ್ಥಸ್ಯ ಸಮ್ಮತಃ ॥೧॥

ಭೀಷ್ಮ– ಎಲೈ ರಾಜನೇ, ಶತ್ರುಗಳ ಪಟ್ಟಣವನ್ನು ಜಯಿಸುವ ಪಾಂಚಾಲ ರಾಜನ ಪುತ್ರನಾದ ಶಿಖಂಡಿಯು ಅರ್ಜುನನಿಗೆ ಸಮ್ಮತನಾದವನು. ಅವನು ಒಬ್ಬ ಮುಖ್ಯನಾದ ರಥನೆಂದು ನನ್ನ ಭಾವನೆ.

ಏಷ ಯೋತ್ಸ್ಯತಿ ಸಂಗ್ರಾಮೇ ನಾಶಯನ್ ಪೂರ್ವಸಂಸ್ಥಿತಮ್ ।
ವೈರಂ ಯೋಽಸೌ ಸಂಪ್ರಥಯನ್ ತವ ಸೇನಾಸು ಭಾರತ ॥೨॥

ಎಲೈ ಭಾರತನೇ, ಅವನು ತನಗೆ ನಿಮ್ಮ ಮೇಲಿದ್ದ ಹಿಂದಿನ ವೈರವನ್ನು ಸ್ಪಷ್ಟ ಪಡಿಸುತ್ತಾ, ನಿನ್ನ ಸೈನ್ಯವನ್ನು ನಾಶ ಮಾಡುತ್ತಾ ಯುದ್ಧವನ್ನು ಮಾಡುವನು.

ಏತಸ್ಯ ಬಹುಲಾಃ ಸೇನಾಃ ಪಾಂಚಾಲಾಶ್ಚ ಪ್ರಭದ್ರಕಾಃ ।
ತೇನಾಽಸೌ ರಥವಂಶೇನ ಮಹತ್ಕರ್ಮ ಕರಿಷ್ಯತಿ ॥೩॥

ಇವನ ಬಳಿ ಪಾಂಚಾಲರ ಮತ್ತು ಪ್ರಭದ್ರಕರ ದೊಡ್ಡ ಸೈನ್ಯವಿದೆ. ಆ ರಥ ಸೈನ್ಯದಿಂದ ಕೂಡಿದವನಾಗಿ ಇವನು ದೊಡ್ಡ ಕಾರ್ಯವನ್ನು ಮಾಡುವನು.

ಧೃಷ್ಟದ್ಯುಮ್ನಶ್ಚ ಸೇನಾನೀಃ ಸರ್ವಸೇನಾಸು ಭಾರತ ।
ಮತೋ ಮೇಽತಿರಥೋ ರಾಜನ್ ದ್ರೋಣಶಿಷ್ಯೋ ಮಹಾರಥಃ ॥೪॥

ಎಲೈ ಭಾರತನೇ, ರಾಜನೇ, ದ್ರೋಣಶಿಷ್ಯನೂ, ಪಾಂಡವರ ಮಹಾರಥನೂ, ಪಾಂಡವ ಸೇನಾಪತಿಯೂ ಆದ ಧೃಷ್ಟದ್ಯುಮ್ನನು ಎಲ್ಲ ಸೈನ್ಯದಲ್ಲಿಯೂ ಶ್ರೇಷ್ಠನಾದ ಒಬ್ಬ ಅತಿರಥನೆಂದು ನನ್ನ ಭಾವನೆ.

ಏಷ ಯೋತ್ಸ್ಯತಿ ಸಂಗ್ರಾಮೇ ಸೂದಯನ್ ವೈ ಪರಾನ್ ಬಹೂನ್ ।
ಭಗವಾನಿವ ಸಂಕ್ರುದ್ಧಃ ಪಿನಾಕೀ ಯುಗಸಂಕ್ಷಯೇ ॥೫॥

ಇವನು ಭಗವಂತನಾದ ಪಿನಾಕಪಾಣಿಯು ಯುಗಾಂತ್ಯದಲ್ಲಿ ಕ್ರೋಧದಿಂದ ಎಲ್ಲವನ್ನೂ ಸಂಹರಿಸುವಂತೆ ಯುದ್ಧದಲ್ಲಿ ಅನೇಕ ಶತ್ರುಗಳನ್ನು ಸಂಹರಿಸಿ ಯುದ್ಧವನ್ನು ಮಾಡುವನು.

ಏತಸ್ಯ ತದ್ರಥಾನೀಕಂ ಕಥಯಂತಿ ರಣಪ್ರಿಯಾಃ ।
ಬಹುತ್ವಾತ್ ಸಾಗರಪ್ರಖ್ಯಂ ದೇವಾನಾಮಿವ ಸಂಯುಗೇ ॥೬॥

ರಣಪ್ರಿಯರಾದವರು ಇವನ ಬಳಿ ಇರುವ ರಥಗಳ ಸಮೂಹವನ್ನು ಅವುಗಳ ಸಂಖ್ಯಾಬಲದಿಂದ ದೇವತೆಗಳ ಯುದ್ಧದಲ್ಲಿದ್ದ ಸಾಗರಗಳನ್ನು ಹೋಲುವ ರಥಗಳು ಎಂದು ಹೇಳುತ್ತಾರೆ.

ಧೃತವರ್ಮಾ ತು ರಾಜೇಂದ್ರ ಮತೋ ಮೇಽರ್ಧರಥೋ ಮಹಾನ್ ।
ಧೃಷ್ಟದ್ಯುಮ್ನಸ್ಯ ತನಯೋ ಬಾಲ್ಯಾನ್ನಾತಿಕೃತಶ್ರಮಃ ॥೭॥

ಎಲೈ ರಾಜೇಂದ್ರನೇ, ಧೃಷ್ಟದ್ಯುಮ್ನನ ಮಗನಾದ ಧೃತವರ್ಮನು ಅರ್ಧರಥನೆಂದು ನನ್ನ ಭಾವನೆ. ಅವನು ಇನ್ನೂ ಬಾಲಕನಾದವನು ಮತ್ತು ಬಹಳ ಅಭ್ಯಾಸವನ್ನು ಹೊಂದದಿರುವವನು.

ಶಿಶುಪಾಲಸುತೋ ವೀರಃ ಚೇದಿರಾಜೋ ಮಹಾರಥಃ ।
ಧೃಷ್ಟಕೇತುರ್ಮಹೇಷ್ವಾಸಃ ಸಂಬಂಧೀ ಪಾಂಡವಸ್ಯ ಹ ॥೮॥

ಏಷ ಚೇದಿಪತಿಃ ಶೂರಃ ಸಹ ಪುತ್ರೇಣ ಭಾರತ ।
ಮಹಾರಥಾನಾಂ ಸುಕರಂ ಮಹತ್ ಕರ್ಮ ಕರಿಷ್ಯತಿ ॥೯॥

ಇನ್ನು ಚೇದಿರಾಜನೂ, ಶಿಶುಪಾಲನ ಪುತ್ರನೂ ಆದ ಧೃಷ್ಟಕೇತುವು ಮಹಾಧನುರ್ಧಾರಿ ಮತ್ತು ಪಾಂಡವರ ಸಂಬಂಧಿಯಾಗಿದ್ದಾನೆ. ಅವನ ಪುತ್ರರಿಂದ ಕೂಡಿದ, ಚೇದಿಪತಿಯಾದ ಶೂರನಾದ ಅವನು ಮಹಾರಥರು ಸುಲಭವಾಗಿ ಮಾಡುವ ಮಹಾಕಾರ್ಯವನ್ನು ಮಾಡುವನು.

ಕ್ಷತ್ರಧರ್ಮರತೋ ಮಹ್ಯಂ ಮತಃ ಪರಪುರಂಜಯಃ ।
ಕ್ಷತ್ರದೇವಸ್ತು ರಾಜೇಂದ್ರ ಪಾಂಡವೇಷು ರಥೋತ್ತಮಃ ॥೧೦॥

ಎಲೈ ರಾಜೇಂದ್ರನೇ, ಕ್ಷತ್ರಧರ್ಮದಲ್ಲಿ ರತನಾದ, ಪರಪುರಂಜಯನಾದ ಕ್ಷತ್ರದೇವನು ಪಾಂಡವರ ಪಕ್ಷದಲ್ಲಿ ಒಬ್ಬ ರಥಶ್ರೇಷ್ಠನೆಂದು ನನ್ನ ಅಭಿಪ್ರಾಯ.

ಜಯಂತಶ್ಚಾಮಿತೌಜಾಶ್ಚ ಸತ್ಯಜಿಚ್ಚ ಮಹಾರಥಃ ।
ಮಹಾರಥಾ ಮಹಾತ್ಮಾನಃ ಸರ್ವೇ ಪಾಂಚಾಲಸತ್ತಮಾಃ ॥೧೧॥

ಯೋತ್ಸ್ಯಂತಿ ಸಮರೇ ತಾತ ಸಂರಬ್ಧಾ ಇವ ಕುಂಜರಾಃ ॥೧೨॥

ಪಾಂಚಾಲ ರಾಜಕುಮಾರರಾದ ಜಯಂತ, ಅಮಿತೌಜ ಮತ್ತು ಸತ್ಯಜಿತ್ ಇವರೆಲ್ಲರೂ ಮಹಾನುಭಾವರು ಮತ್ತು ಮಹಾರಥರು. ಪ್ರೀತಿಪಾತ್ರನೇ, ಕೋಪಗೊಂಡ ಗಜಗಳಂತೆ ಇವರು ಯುದ್ಧವನ್ನು ಮಾಡುವರು.

ಅಜೋ ಭೋಜಶ್ಚ ವಿಕ್ರಾಂತೌ ಪಾಂಡವೇಷು ಮಹಾರಥೌ ।
ಪಾಂಡವಾನಾಂ ಸಹಾಯಾರ್ಥೇ ಪರಂ ಶಕ್ತ್ಯಾ ಯತಿಷ್ಯತಃ ॥೧೩॥

ಎಲೈ ರಾಜನೇ, ಪರಾಕ್ರಮಶಾಲಿಯಾದ ಅಜ ಮತ್ತು ಭೋಜ ಇಬ್ಬರು ಮಹಾರಥರು. ಪಾಂಡವರಿಗೆ ಸಹಾಯವನ್ನು ಮಾಡುವ ಸಲುವಾಗಿ ಅವರು ಶಕ್ತಿಯನ್ನು ಮೀರಿ ಪ್ರಯತ್ನವನ್ನು ಮಾಡುವರು.

ಶೀಘ್ರಾಸ್ತ್ರಾಶ್ಚಿತ್ರಯೋದ್ಧಾರಃ ಕೃತಿನೋ ದೃಢವಿಕ್ರಮಾಃ ।
ಕೇಕಯಾಃ ಪಂಚ ರಾಜೇಂದ್ರ ಭ್ರಾತರೋ ಯುದ್ಧದುರ್ಮದಾಃ ॥೧೪॥

ಸರ್ವೇ ಚೈವ ರಥೋದಾರಾಃ ಸರ್ವೇ ಲೋಹಿತಕಧ್ವಜಾಃ ॥೧೫॥

ಎಲೈ ರಾಜೇಂದ್ರನೇ, ಶೀಘ್ರಾಸ್ತ್ರವುಳ್ಳವರೂ, ಚಿತ್ರಯೋಧಿಗಳೂ, ಕುಶಲರೂ, ದೃಢವಾದ ಪರಾಕ್ರಮವುಳ್ಳವರೂ ಆದ, ಕೇಕಯದೇಶದ ಸಹೋದರರಾದ ಐದು ಜನ ರಾಜರು ಯುದ್ಧದುರ್ಮದರಾದವರು. ಎಲ್ಲರೂ ಕೆಂಪುಬಣ್ಣದ ಧ್ವಜವುಳ್ಳವರೂ ಮತ್ತು ರಥಶ್ರೇಷ್ಠರೂ ಆಗಿದ್ದಾರೆ.

ಕಾಶಿಕಃ ಸುಕುಮಾರಶ್ಚ ನೀಲೋ ಯಶ್ಚಾಪರೋ ನೃಪ ।
ಸೂರ್ಯದತ್ತಶ್ಚ ಶಂಖಶ್ಚ ಮದಿರಾಕ್ಷಶ್ಚ ನಾಮತಃ ॥೧೬॥

ಸರ್ವ ಏತೇ ರಥೋದಾರಾಃ ಸರ್ವೇ ಚಾಹವಲಕ್ಷಣಾಃ ।
ಸರ್ವಾಸ್ತ್ರವಿದುಷಃ ಸರ್ವೇ ಮಹಾತ್ಮಾನೋ ಮತಾ ಮಮ ॥೧೭॥

ಎಲೈ ರಾಜನೇ, ಕಾಶಿದೇಶದ ಸುಕುಮಾರ, ನೀಲ, ಸೂರ್ಯದತ್ತ, ಶಂಖ, ಮದಿರಾಕ್ಷ ಇವರೆಲ್ಲರೂ ಯುದ್ಧದ ಅಭಿರುಚಿ ಉಳ್ಳವರು. ಎಲ್ಲಾ ಅಸ್ತ್ರಗಳನ್ನೂ ತಿಳಿದವರು, ಎಲ್ಲರೂ ಮಹಾತ್ಮರು, ಅವರೆಲ್ಲರೂ ಶ್ರೇಷ್ಠರಥರೆಂದು ನನ್ನ ಅಭಿಪ್ರಾಯ.

ವಾರ್ಧಕ್ಷೇಮಿರ್ಮಹಾರಾಜ ರಥೋ ಮಮ ಮಹಾನ್ ಮತಃ ।
ಚಿತ್ರಾಯುಧಶ್ಚ ನೃಪತಿರ್ಮತೋ ಮೇ ರಥಸತ್ತಮಃ ॥೧೮॥

ಸ ಹಿ ಸಂಗ್ರಾಮಶೋಭೀ ಚ ಭಕ್ತಶ್ಚಾಪಿ ಕಿರೀಟಿನಃ ॥೧೯॥

ಎಲೈ ಮಹಾರಾಜನೇ, ವಾರ್ಧಕ್ಷೇಮಿಯು ಒಬ್ಬ ಮಹಾರಥ ಮತ್ತು ರಾಜನಾದ ಚಿತ್ರಾಯುಧನು ಒಬ್ಬ ರಥಶ್ರೇಷ್ಠ ಎಂದು ನನ್ನ ಅಭಿಪ್ರಾಯ. ಚಿತ್ರಾಯುಧನು ಯುದ್ಧದಲ್ಲಿ ಶೋಭಿಸುವವನು ಮತ್ತು ಅರ್ಜುನನಲ್ಲಿ ಭಕ್ತಿಯುಳ್ಳವನು.

ಚೇಕಿತಾನಃ ಸತ್ಯಧೃತಿಃ ಪಾಂಡವಾನಾಂ ಮಹಾರಥೌ ।
ದ್ವಾವಿಮೌ ಪುರುಷವ್ಯಾಘ್ರೌ ರಥೋದಾರೌ ಮತೌ ಮಮ ॥೨೦॥

ಚೇಕಿತಾನ ಮತ್ತು ಸತ್ಯಧೃತಿ ಇವರಿಬ್ಬರೂ ಪಾಂಡವರ ಪಕ್ಷದಲ್ಲಿ ಶ್ರೇಷ್ಠವಾದ ರಥವನ್ನು ಹೊಂದಿದವರು. ಪುರುಷವ್ಯಾಘ್ರರಾದ ಇವರಿಬ್ಬರೂ ಶ್ರೇಷ್ಠರಾದ ರಥರು ಎಂದು ನನ್ನ ಅಭಿಪ್ರಾಯ.

ವ್ಯಾಘ್ರದತ್ತಶ್ಚ ರಾಜೇಂದ್ರ ಚಂದ್ರಸೇನಶ್ಚ ಭಾರತ ।
ಮತೌ ಮಮ ರಥೋದಾರೌ ಪಾಂಡವಾನಾಂ ನ ಸಂಶಯಃ ॥೨೧॥

ಎಲೈ ರಾಜೇಂದ್ರನೇ, ಪಾಂಡವರ ಪಕ್ಷದಲ್ಲಿ ವ್ಯಾಘ್ರದತ್ತ ಮತ್ತು ಚಂದ್ರಸೇನ ಇವರಿಬ್ಬರೂ ಶ್ರೇಷ್ಠರಾದ ರಥರು. ಇದರಲ್ಲಿ ಸಂಶಯವಿಲ್ಲ.

ಸೇನಾಬಿಂದುಶ್ಚ ರಾಜೇಂದ್ರ ಕ್ರೋಧಹಂತಾ ಚ ನಾಮತಃ ॥೨೨॥

ಯಃ ಸಮೋ ವಾಸುದೇವೇನ ಭೀಮಸೇನೇನ ಚಾಭಿಭೂಃ ।
ಸ ಯೋತ್ಸ್ಯತಿ ಹಿ ವಿಕ್ರಮ್ಯ ಸಮರೇ ತವ ಸೈನಿಕೈಃ ॥೨೩॥

ಎಲೈ ರಾಜೇಂದ್ರನೇ, ಸೇನಾಬಿಂದು, ಅವನಿಗೆ ಕ್ರೋಧಹಂತಾ ಎಂದೂ ಹೆಸರು. ಶತ್ರುಗಳನ್ನು ಸೋಲಿಸುವ ಈ ರಾಜನು ಯುದ್ಧದಲ್ಲಿ ಕೃಷ್ಣನಿಗೂ, ಭೀಮಸೇನನಿಗೂ ಸಮನಾದವನು. ಅವನು ತನ್ನ ವಿಕ್ರಮವನ್ನು ತೋರಿಸಿ, ನಿನ್ನ ಸೈನ್ಯದ ಎದುರಾಗಿ ಯುದ್ಧವನ್ನು ಮಾಡುವನು.

ಮಾಂ ಚ ದ್ರೋಣಂ ಕೃಪಂ ಚೈವ ಯಥಾ ಸಮ್ಮನ್ಯತೇ ಭವಾನ್ ।
ತಥಾ ಸ ಸಮರಶ್ಲಾಘೀ ಮಂತವ್ಯೋ ರಥಸತ್ತಮಃ ॥೨೪॥

ನೀನು ನನ್ನನ್ನೂ, ದ್ರೋಣರನ್ನೂ, ಕೃಪರನ್ನೂ ಹೇಗೆ ಭಾವಿಸುವೆಯೋ ಅದರಂತೆ ರಥಶ್ರೇಷ್ಠನೂ, ಯುದ್ಧಪ್ರಿಯನೂ ಆದ ಸೇನಾಬಿಂದುವನ್ನು ತಿಳಿಯಬೇಕು.

ಕಾಶ್ಯಃ ಪರಮಶೀಘ್ರಾಸ್ತ್ರಃ ಶ್ಲಾಘನೀಯೋ ರಥೋತ್ತಮಃ ॥೨೫॥

ರಥ ಏಕಗುಣೋ ಮಹ್ಯಂ ಜ್ಞೇಯಃ ಪರಪುರಂಜಯಃ ॥೨೬॥

ಪರಮಶೀಘ್ರಾಸ್ತ್ರನೂ, ಶ್ಲಾಘನೀಯನೂ, ರಥಶ್ರೇಷ್ಠನೂ, ಪರಪುರಂಜಯನೂ ಆದ ಕಾಶಿರಾಜನು ಒಬ್ಬ ರಥನೆಂದು ನನ್ನ ಗಣನೆ.

ಸ್ವಯಂ ಚ ಯುಧಿ ವಿಕ್ರಾಂತೋ ಮಂತವ್ಯೋಽಷ್ಟಗುಣೋ ರಥಃ ।
ಸತ್ಯಜಿತ್ ಸಮರಶ್ಲಾಘೀ ದ್ರುಪದಸ್ಯಾತ್ಮಜೋ ಯುವಾ ॥೨೭॥

ದ್ರುಪದನ ಪುತ್ರನಾದ, ಯುವಕನಾದ, ಸಮರಪ್ರಿಯನಾದ ಸತ್ಯಜಿತುವು ಸ್ವತಃ ಪರಾಕ್ರಮವನ್ನು ತೋರಿಸಿ ಯುದ್ಧವನ್ನು ಮಾಡುವವನು. ಅವನು ಎಂಟು ರಥರಿಗೆ ಸಮಾನನಾದವನು.

ಗತಃ ಸೋಽತಿರಥತ್ವಂ ಹಿ ಧೃಷ್ಟದ್ಯುಮ್ನೇನ ಸಮ್ಮಿತಃ ।
ಪಾಂಡವಾನಾಂ ಯಶಸ್ಕಾಮೋ ಮಹತ್ ಕರ್ಮ ಕರಿಷ್ಯತಿ ॥೨೮॥

ಧೃಷ್ಟದ್ಯುಮ್ನನಿಗೆ ಸದೃಶನಾದ ಅವನು ಅತಿರಥನೆಂದು ಗಣನೆಯನ್ನು ಹೊಂದುವವನು. ಪಾಂಡವರ ಕೀರ್ತಿಕಾಮನಾದ ಅವನು ಯುದ್ಧದಲ್ಲಿ ದೊಡ್ಡ ಕಾರ್ಯವನ್ನು ಮಾಡುವವನು.

ಅನುರಕ್ತಶ್ಚ ಶೂರಶ್ಚ ರಥೋಽಯಮಪರೋ ಮಹಾನ್ ।
ಪಾಂಡ್ಯರಾಜೋ ಮಹಾವೀರ್ಯಃ ಪಾಂಡವಾನಾಂ ಧುರಂಧರಃ ॥೨೯॥

ಮಹಾಪರಾಕ್ರಮಿಯೂ, ಪಾಂಡವರ ಜವಾಬ್ದಾರಿಯನ್ನು ಹೊತ್ತವನೂ, ಪಾಂಡವರಲ್ಲಿ ಅನುರಕ್ತನೂ ಆದ ಪಾಂಡ್ಯರಾಜನು ಇನ್ನೊಬ್ಬ ರಥನು.

ದೃಢಧನ್ವಾ ಮಹೇಷ್ವಾಸಃ ಪಾಂಡವಾನಾಂ ರಥೋತ್ತಮಃ ।
ಶ್ರೇಣಿಮಾನ್ ಕೌರವಶ್ರೇಷ್ಠ ವಸುದಾನಶ್ಚ ಪಾರ್ಥಿವಃ ॥೩೦॥

ಉಭಾವೇತಾವತಿರಥೌ ಮತೌ ಮಮ ಪರಂತಪೌ ॥೩೧॥

ಎಲೈ ಕೌರವಶ್ರೇಷ್ಠನೇ, ದೃಢವಾದ ಧನುಸ್ಸುಳ್ಳವರೂ, ಮಹಾಧನುರ್ಧಾರಿಗಳೂ, ರಥಶ್ರೇಷ್ಠರೂ ಆದ ಶ್ರೇಣಿಮಾನ್ ಮತ್ತು ವಸುದಾನ ಇವರಿಬ್ಬರೂ ಪಾಂಡವರ ಪಕ್ಷದವರು. ಶತ್ರುತಾಪನರಾದ ಇವರಿಬ್ಬರೂ ಅತಿರಥರೆಂದು ನನ್ನ ಅಭಿಪ್ರಾಯ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಸಪ್ತತ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತನೆಯ ಅಧ್ಯಾಯ

ಮುಂದುವರಿದ ಭೀಷ್ಮರ ರಥಗಣನೆ ಮತ್ತು ಶಿಖಂಡಿಯ ಜೊತೆಯಲ್ಲಿ ಯುದ್ಧ ಮಾಡುವುದಿಲ್ಲವೆಂಬ ಪ್ರತಿಜ್ಞೆ.

ಭೀಷ್ಮಃ

ರೋಚಮಾನೋ ಮಹಾರಾಜ ಪಾಂಡವಾನಾಂ ಮಹಾರಥಃ ।
ಯೋತ್ಸ್ಯತೇऽಮರವತ್ ಸಂಖೇ ಪರಸೈನ್ಯೇಷು ಭಾರತ ॥೧॥

ಭೀಷ್ಮ– ಎಲೈ ಮಹಾರಾಜನೇ, ಭಾರತನೇ, ರೋಚಮಾನನು ಪಾಂಡವರ ಪಕ್ಷದಲ್ಲಿ ಇನ್ನೊಬ್ಬ ಮಹಾರಥ. ಅವನು ದೇವತೆಯಂತೆ ಶತ್ರುಸೈನ್ಯದ ಜೊತೆಯಲ್ಲಿ ಯುದ್ಧವನ್ನು ಮಾಡುವನು.

ಪುರುಜಿತ್ ಕುಂತಿಭೋಜಶ್ಚ ಮಹೇಷ್ವಾಸೋ ಮಹಾರಥಃ ।
ಮಾತುಲೋ ಭೀಮಸೇನಸ್ಯ ಸ ಚ ಮೇಽತಿರಥೋ ಮತಃ ॥೨॥

ಮಹಾರಥನೂ, ಮಹೇಷ್ವಾಸನೂ ಆದ ಪುರುಜಿತ್ ಕುಂತಿಭೋಜನು ಭೀಮಸೇನನ ಸೋದರಮಾವನಾದವನು. ಅವನು ಅತಿರಥನೆಂದು ನನ್ನ ಅಭಿಪ್ರಾಯ.

ಏಷ ವೀರೋ ಮಹೇಷ್ವಾಸಃ ಕೃತೀ ಚ ನಿಪುಣಶ್ಚ ಸಃ ।
ಚಿತ್ರಯೋಧೀ ಚ ಶಕ್ತಶ್ಚ ಮತೋ ಮೇ ರಥಪುಂಗವಃ ॥೩॥

ಸ ಯೋತ್ಸ್ಯತಿ ಹಿ ವಿಕ್ರಮ್ಯ ಮಘವಾನಿವ ದಾನವೈಃ ।
ಯೋಧಾ ಯೇ ಚಾಸ್ಯ ವಿಖ್ಯಾತಾಃ ಸರ್ವೇ ಯುದ್ಧವಿಶಾರದಾಃ ॥೪॥

ಭಾಗಿನೇಯಕೃತೇ ವೀರ ಸ ಕರಿಷ್ಯತಿ ಸಂಗರಮ್ ।
ಸುಮಹತ್ ಕರ್ಮ ಪಾಂಡೂನಾಂ ಸ್ಥಿತಃ ಪ್ರಿಯಹಿತೇ ರತಃ ॥೫॥

ಇವನು ವೀರನೂ, ಮಹಾಧನುರ್ಧಾರಿಯೂ, ಬಹಳ ಅಭ್ಯಾಸವನ್ನು ಮಾಡಿದವನೂ, ನಿಪುಣನೂ, ಕ್ಷಿಪ್ರಯೋಧಿಯೂ, ಶಕ್ತನೂ ಆಗಿದ್ದಾನೆ. ಅವನು ಶ್ರೇಷ್ಠನಾದ ರಥ. ಇಂದ್ರನು ದಾನವರ ಜೊತೆಯಲ್ಲಿ ಯುದ್ಧವನ್ನು ಮಾಡಿದಂತೆ ಅವನು ಪರಾಕ್ರಮದಿಂದ ಯುದ್ಧವನ್ನು ಮಾಡುವನು. ಅವನ ಯೋಧರೆಲ್ಲರೂ ಯುದ್ಧವಿಶಾರದರು ಎಂದು ಪ್ರಖ್ಯಾತರಾದವರು. ಎಲೈ ವೀರನೇ, ತನ್ನ ಸೋದರಳಿಯನಾದ ಭೀಮಸೇನನ ಸಲುವಾಗಿ, ಪಾಂಡವರ ಪ್ರಿಯದಲ್ಲಿ ಮತ್ತು ಹಿತದಲ್ಲಿ ರತನಾದ ಅವನು ಪಾಂಡವರ ಪಕ್ಷದಲ್ಲಿದ್ದು ದೊಡ್ಡ ಯುದ್ಧವನ್ನು ಮಾಡುವವನು.

ಭೈಮಸೇನಿರ್ಮಹಾರಾಜ ಹೈಡಿಂಬೋ ರಾಕ್ಷಸೇಶ್ವರಃ ।
ಮತೋ ಮೇ ಬಹುಮಾಯಾವೀ ರಥಯೂಥಪಯೂಥಪಃ ॥೬॥

ಎಲೈ ಮಹಾರಾಜನೇ, ಭೀಮಸೇನಪುತ್ರನಾದ, ರಾಕ್ಷಸೇಶ್ವರನಾದ, ಬಹುಮಾಯೆಗಳನ್ನು ಬಲ್ಲ ಘಟೋತ್ಕಚನು ರಥಯೂಥಪಯೂಥಪನೆಂದು ನನ್ನ ಅಭಿಪ್ರಾಯ.

ಯೋತ್ಸ್ಯತೇ ಸಮರೇ ತಾತ ಮಾಯಾಭಿಃ ಸಮರಪ್ರಿಯಃ ।
ಯೇ ಚಾಸ್ಯ ರಾಕ್ಷಸಾ ವೀರಾಃ ಸಚಿವಾ ವಶವರ್ತಿನಃ ॥೭॥

ಸಮರಪ್ರಿಯನಾದ ಅವನು ಅನೇಕ ಮಾಯೆಗಳಿಂದ ಯುದ್ಧವನ್ನು ಮಾಡುವನು. ಎಲೈ ಪ್ರೀತಿಪಾತ್ರನೇ, ವೀರರಾದ ಎಲ್ಲ ರಾಕ್ಷಸರು ಅವನ ಸಹಾಯಕರೂ ಮತ್ತು ವಶವರ್ತಿಗಳೂ ಆಗಿದ್ದಾರೆ.

ಏತೇ ಚಾನ್ಯೇ ಚ ಬಹವೋ ನಾನಾಜನಪದೇಶ್ವರಾಃ ।
ಸಮೇತಾಃ ಪಾಂಡವಸ್ಯಾರ್ಥೇ ವಾಸುದೇವಪುರೋಗಮಾಃ ॥೮॥

ಇವರೂ ಮತ್ತು ಇನ್ನೂ ಅನೇಕ ದೇಶದ ರಾಜರೂ ಕೃಷ್ಣನನ್ನು ಮುಂದೆ ಮಾಡಿಕೊಂಡು ಒಟ್ಟಾಗಿ ಪಾಂಡವರ ಸಲುವಾಗಿ ಯುದ್ಧವನ್ನು ಮಾಡಲು ಸನ್ನದ್ಧರಾಗಿದ್ದಾರೆ.

ಏತೇ ಪ್ರಾಧಾನ್ಯತೋ ರಾಜನ್ ಪಾಂಡವಸ್ಯ ಮಹಾತ್ಮನಃ ।
ರಥಾಶ್ಚಾತಿರಥಾಶ್ಚೈವ ಯೇ ಚಾನ್ಯೇಽರ್ಧರಥಾ ಮತಾಃ ॥೯॥

ನೇಷ್ಯಂತಿ ಸಮರೇ ಸೇನಾಂ ಭೀಮಾಂ ಯೌಧಿಷ್ಠಿರೀಂ ನೃಪ ।
ಮಹೇಂದ್ರೇಣೇವ ವೀರ್ಯೇಣ ಪಾಲ್ಯಮಾನಾಂ ಕಿರೀಟಿನಾ ॥೧೦॥

ಎಲೈ ರಾಜನೇ, ಮಹಾತ್ಮನಾದ ಪಾಂಡುಪುತ್ರನಾದ ಯುಧಿಷ್ಠಿರನ ಪಕ್ಷದ ರಥ, ಅತಿರಥ ಮತ್ತು ಅರ್ಧರಥರಲ್ಲಿ ಪ್ರಧಾನರಾದವರನ್ನು ಹೇಳಿದ್ದೇನೆ. ತನ್ನ ಪರಾಕ್ರಮದಿಂದ ಇಂದ್ರನು ರಕ್ಷಿಸಿದಂತೆ ಅರ್ಜುನನಿಂದ ರಕ್ಷಿತವಾದ, ಭಯಂಕರವಾದ ಯುಧಿಷ್ಠಿರ ಸೈನ್ಯವನ್ನು ಇವರು ಯುದ್ಧದಲ್ಲಿ ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗುವವರು.

ತೈರಹಂ ಸಮರೇ ವೀರ ಮಾಯಾವಿದ್ಭಿರ್ಜಯೈಷಿಭಿಃ ।
ಯೋತ್ಸ್ಯಾಮಿ ಜಯಮಾಕಾಂಕ್ಷನ್ನಥವಾ ನಿಧನಂ ರಣೇ ॥೧೧॥

ಎಲೈ ವೀರನೇ, ಈ ಜಯಾಕಾಂಕ್ಷಿಗಳೂ ಮತ್ತು ಮಾಯಾವಿಗಳೂ ಆದ ರಾಕ್ಷಸರ ಜೊತೆಯಲ್ಲಿ ಜಯವನ್ನು ಅಥವಾ ನಿಧನವನ್ನು ಆಕಾಂಕ್ಷಿಸುತ್ತಾ ನಾನು ಯುದ್ಧವನ್ನು ಮಾಡುವೆನು.

ವಾಸುದೇವಂ ಚ ಪಾರ್ಥಂ ಚ ಚಕ್ರಗಾಂಡೀವಧಾರಿಣೌ ।
ಸಂಧ್ಯಾಗತಾವಿವಾರ್ಕೇಂದೂ ಸಮೇಷ್ಯೇ ಪುರುಷೋತ್ತಮೌ ॥೧೨॥

ಸಂಧ್ಯಾಕಾಲದಲ್ಲಿ ಸೂರ್ಯ-ಚಂದ್ರರು ಸೇರಿದಂತಿರುವ ಪುರುಷೋತ್ತಮರಾದ ಕೃಷ್ಣಾರ್ಜುನರನ್ನು ನಾನು ಯುದ್ಧದಲ್ಲಿ ಎದುರಿಸುವೆನು.

ಯೇ ಚೈವ ತೇ ರಥೋದಾರಾಃ ಪಾಂಡುಪುತ್ರಸ್ಯ ಸೈನಿಕಾಃ ।
ಸಹಸೈನ್ಯಾನಹಂ ತಾಂಶ್ಚ ಸಮೇಷ್ಯೇ ರಥಮೂರ್ಧನಿ ॥೧೩॥

ಇನ್ನು ಪಾಂಡುಪುತ್ರರ ಸೈನ್ಯದಲ್ಲಿ ಯುದ್ಧವನ್ನು ಮಾಡುವ ಶ್ರೇಷ್ಠರಾದ ರಥರು ಯಾರಿದ್ದಾರೆಯೋ, ಘೋರವಾದ ಸಂಗ್ರಾಮದಲ್ಲಿ ತಮ್ಮ ಸೈನ್ಯದಿಂದ ಕೂಡಿದ ಅವರನ್ನು ಎದುರಿಸಿ ನಾನು ಯುದ್ಧವನ್ನು ಮಾಡುವೆನು.

ಏತೇ ರಥಾಶ್ಚಾತಿರಥಾಶ್ಚ ತುಭ್ಯಂ
ಯಥಾಪ್ರಧಾನಂ ನೃಪ ಕೀರ್ತಿತಾ ಮಯಾ ।
ತಥಾऽಪರೇ ಯೇऽರ್ಧರಥಾಶ್ಚ ಕೇಚಿತ್
ತಥೈವ ತೇಷಾಮಪಿ ಕೌರವೇಂದ್ರ ॥೧೪॥

ಎಲೈ ಕೌರವೇಂದ್ರನೇ, ನಾನು ನಮ್ಮ ಪಕ್ಷದಲ್ಲಿಯೂ ಮತ್ತು ಪಾಂಡವರ ಪಕ್ಷದಲ್ಲಿಯೂ ಇರುವ ರಥರಲ್ಲಿ, ಅತಿರಥರಲ್ಲಿ ಮತ್ತು ಅರ್ಧರಥರಲ್ಲಿ ಪ್ರಧಾನರಾದವರನ್ನು ಹೇಳಿದ್ದೇನೆ.

ಅರ್ಜುನಂ ವಾಸುದೇವಂ ಚ ಯೇ ಚಾನ್ಯೇ ತತ್ರ ಪಾಂಡವಾಃ ।
ಸರ್ವಾನಾವಾರಯಿಷ್ಯಾಮಿ ಯಾವದ್ ದ್ರಕ್ಷ್ಯೇ ಶಿಖಂಡಿನಮ್ ॥೧೫॥

ಅರ್ಜುನ, ಕೃಷ್ಣ ಮತ್ತು ಪಾಂಡವರ ಪಕ್ಷದಲ್ಲಿರುವ ಉಳಿದ ವೀರರು ಎಲ್ಲರನ್ನೂ ಶಿಖಂಡಿಯನ್ನು ನೋಡುವವರೆಗೆ ತಡೆಯುವೆನು.

ಪಾಂಚಾಲ್ಯಂ ತು ಮಹಾಬಾಹೋ ನಾಹಂ ಹನ್ಯಾಂ ಶಿಖಂಡಿನಮ್ ।
ಉದ್ಯತೇಷುಮಭಿಪ್ರೇಕ್ಷ್ಯ ಪ್ರತಿಯುಧ್ಯಂತಮಾಹವೇ ॥೧೬॥

ಎಲೈ ಮಹಾಬಾಹುವೇ, ಪಾಂಚಾಲರಾಜನ ಮಗನಾದ, ಕೈಯಲ್ಲಿ ಬಾಣವನ್ನು ಹಿಡಿದು ಪ್ರಯೋಗಿಸಲು ಉದ್ಯುಕ್ತನಾದ, ಪ್ರತಿಯುದ್ಧವನ್ನು ಮಾಡುವ ಶಿಖಂಡಿಯನ್ನು ಮಾತ್ರ ನಾನು ಕೊಲ್ಲಲಾರೆ.

ಲೋಕಸ್ತಂ ವೇದ ಯದಹಂ ಪಿತುಃ ಪ್ರಿಯಚಿಕೀರ್ಷಯಾ ।
ಪ್ರಾಪ್ತಂ ರಾಜ್ಯಂ ಪರಿತ್ಯಜ್ಯ ಬ್ರಹ್ಮಚರ್ಯೇ ಧೃತವ್ರತಃ ॥೧೭॥

ನಾನು ನನ್ನ ತಂದೆಗೆ ಪ್ರಿಯವನ್ನು ಮಾಡುವ ಇಚ್ಛೆಯಿಂದ ಪ್ರಾಪ್ತವಾದ ರಾಜ್ಯವನ್ನು ಪರಿತ್ಯಾಗ ಮಾಡಿ, ಬ್ರಹ್ಮಚರ್ಯವ್ರತವನ್ನು ಧರಿಸಿರುವುದನ್ನು ಲೋಕವು ತಿಳಿದಿದೆ.

ಚಿತ್ರಾಂಗದಂ ಕೌರವಾಣಾಮಾಧಿಪತ್ಯೇಽಭ್ಯಷೇಚಯಮ್ ।
ವಿಚಿತ್ರವೀರ್ಯಂ ಚ ಶಿಶುಂ ಯೌವರಾಜ್ಯೇಽಭ್ಯಷೇಚಯಮ್ ॥೧೮॥

ನಾನು ಚಿತ್ರಾಂಗದನನ್ನು ರಾಜ್ಯದಲ್ಲಿ ಅಭಿಷೇಕ ಮಾಡಿ ಇನ್ನೂ ಶಿಶುವಾಗಿದ್ದ ವಿಚಿತ್ರವೀರ್ಯನನ್ನು ಯೌವರಾಜ್ಯದಲ್ಲಿ ಅಭಿಷೇಕ ಮಾಡಿದೆನು.

ದೇವವ್ರತತ್ವಂ ವಿಖ್ಯಾತಂ ಪೃಥಿವ್ಯಾಂ ಸರ್ವರಾಜಸು ।
ನೈವ ಹನ್ಯಾಂ ಸ್ತ್ರಿಯಂ ಜಾತು ನ ಸ್ತ್ರೀಪೂರ್ವಂ ಕದಾಚನ ॥೧೯॥

ನಾನು ಮಾಡಿದ ಪ್ರತಿಜ್ಞೆಯು ಮತ್ತು ವ್ರತವು ಭೂಮಿಯಲ್ಲಿರುವ ಎಲ್ಲ ರಾಜರಲ್ಲಿಯೂ ಪ್ರಖ್ಯಾತವಾಗಿದೆ. ನಾನು ಸ್ತ್ರೀಯನ್ನಾಗಲೀ ಅಥವಾ ಹಿಂದೆ ಸ್ತ್ರೀಯಾಗಿದ್ದ ವ್ಯಕ್ತಿಯನ್ನಾಗಲೀ ಕೊಲ್ಲುವುದಿಲ್ಲ.

ಸ ಹಿ ಸ್ತ್ರೀಪೂರ್ವಕೋ ರಾಜನ್ ಶಿಖಂಡೀ ಯದಿ ತೇ ಶ್ರುತಃ ।
ಕನ್ಯಾ ಭೂತ್ವಾ ಪುಮಾನ್ ಜಾತೋ ನ ಯೋತ್ಸ್ಯೇ ತೇನ ಭಾರತ॥೨೦॥

ಎಲೈ ರಾಜನೇ, ನೀನು ಕೇಳಿದ್ದರೆ ಈ ಶಿಖಂಡಿಯು ಸ್ತ್ರೀಪೂರ್ವಕನಾದವನು. ಎಲೈ ಭಾರತನೇ, ಅವನು ಮೊದಲು ಕನ್ಯೆಯಾಗಿದ್ದು ಅನಂತರ ಪುರುಷನಾದವನು. ಅವನ ಜೊತೆಯಲ್ಲಿ ನಾನು ಯುದ್ಧವನ್ನು ಮಾಡುವುದಿಲ್ಲ.

ಸರ್ವಾಂಸ್ತ್ವನ್ಯಾನ್ ಹನಿಷ್ಯಾಮಿ ಪಾರ್ಥಿವಾನ್ ಭರತರ್ಷಭ ।
ಯಾನ್ ಸಮೇಷ್ಯಾಮಿ ಸಮರೇ ನ ತು ಕುಂತೀಸುತಾನ್ ನೃಪ ॥೨೧॥

ಎಲೈ ಭರತಶ್ರೇಷ್ಠನೇ, ಯುದ್ಧದಲ್ಲಿ ನನ್ನ ಎದುರಿಗೆ ಬರುವ ಉಳಿದ ಎಲ್ಲಾ ರಾಜರನ್ನೂ ಕೊಲ್ಲುವೆನು. ಆದರೆ ಎಲೈ ರಾಜನೇ, ಕುಂತೀಪುತ್ರರನ್ನು ಮಾತ್ರ ನಾನು ಕೊಲ್ಲುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತತ್ಯುತ್ತರಶತತಮೋऽಧ್ಯಾಯಃ ॥

॥ ರಥಾತಿರಥಸಂಖ್ಯಾನಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತನೆಯ
ಅಧ್ಯಾಯ ಮುಗಿಯಿತು.

॥ಸಮಾಪ್ತಂ ರಥಾತಿರಥಸಂಖ್ಯಾನಪರ್ವ ॥

★ ★ ★ ★ ★

೧೨. ಅಂಬೋಪಾಖ್ಯಾನಪರ್ವ

ನೂರ ಎಪ್ಪತ್ತೊಂದನೆಯ ಅಧ್ಯಾಯ

ಭೀಷ್ಮರಿಂದ ಕಾಶಿರಾಜನ ಸ್ವಯಂವರದಲ್ಲಿದ್ದ ಕನ್ಯೆಯರ ಹರಣ.

ದುರ್ಯೋಧನಃ

ಕಿಮರ್ಥಂ ಭರತಶ್ರೇಷ್ಠ ನೈವ ಹನ್ಯಾಃ ಶಿಖಂಡಿನಮ್ ।
ಉದ್ಯತೇಷುಮಥೋ ದೃಷ್ಟ್ವಾ ಸಮರೇಷ್ವಾತತಾಯಿನಮ್ ॥೧॥

ಪೂರ್ವಮುಕ್ತ್ವಾ ಮಹಾಬಾಹೋ ಪಾಂಡವಾನ್ ಸಹ ಸೋಮಕೈಃ ।
ಹನಿಷ್ಯಾಮೀತಿ ಗಾಂಗೇಯ ತನ್ಮೇ ಬ್ರೂಹಿ ಪಿತಾಮಹ ॥೨॥

ದುರ್ಯೋಧನ– ಎಲೈ ಮಹಾಬಾಹುವೇ, ಗಾಂಗೇಯನೇ, ಭರತಶ್ರೇಷ್ಠನೇ, ಮೊದಲು ಪಾಂಡವರನ್ನೂ ಮತ್ತು ಸೋಮಕರನ್ನೂ ಕೊಲ್ಲುವೆನು ಎಂದು ಹೇಳಿ, ಈಗ ಯುದ್ಧದಲ್ಲಿ ಆಯುಧವನ್ನು ಹಿಡಿದು, ಬಾಹುವನ್ನು ಎತ್ತಿದ (ಸೋಮಕನಾದ) ಶಿಖಂಡಿಯನ್ನು ನೋಡಿ, ನಾನು ಕೊಲ್ಲುವುದಿಲ್ಲ ಎಂದು ಏತಕ್ಕೆ ಹೇಳುತ್ತಿದ್ದೀಯೆ? ಪಿತಾಮಹನೇ, ಇದಕ್ಕೆ ಕಾರಣವನ್ನು ನನಗೆ ಹೇಳು.

ಭೀಷ್ಮಃ

ಶೃಣು ದುರ್ಯೋಧನ ಕಥಾಂ ಸಹೈಭಿರ್ವಸುಧಾಧಿಪೈಃ ।
ಯದರ್ಥಂ ಯುಧಿ ಸಂಪ್ರೇಕ್ಷ್ಯ ನಾಹಂ ಹನ್ಯಾಂ ಶಿಖಂಡಿನಮ್ ॥೩॥

ಭೀಷ್ಮ– ಎಲೈ ದುರ್ಯೋಧನನೇ, ಯುದ್ಧದಲ್ಲಿ ಶಿಖಂಡಿಯನ್ನು ನೋಡಿ, ನಾನು ಏತಕ್ಕೆ ಅವನನ್ನು ಕೊಲ್ಲುವುದಿಲ್ಲ ಎಂಬ ಕಥೆಯನ್ನು ಈ ರಾಜರ ಜೊತೆಯಲ್ಲಿ ಕೇಳುವವನಾಗು.

ಮಹಾರಾಜೋ ಮಮ ಪಿತಾ ಶಂತನುರ್ಭರತರ್ಷಭಃ ।
ದಿಷ್ಟಾಂತಮಾಪ ಧರ್ಮಾತ್ಮಾ ಸಮಯೇ ಭರತರ್ಷಭ ॥೪॥

ಎಲೈ ಭರತರ್ಷಭನೇ, ಭರತರ್ಷಭನೂ, ಧರ್ಮಾತ್ಮನೂ ಆದ ನನ್ನ ತಂದೆಯಾದ ಶಂತನು ಮಹಾರಾಜನು ಒದಗಿಬಂದ ಕಾಲದಲ್ಲಿ ಮರಣವನ್ನು ಹೊಂದಿದನು.

ತತೋಽಹಂ ಭರತಶ್ರೇಷ್ಠ ಪ್ರತಿಜ್ಞಾಂ ಪರಿಪಾಲಯನ್ ।
ಚಿತ್ರಾಂಗದಂ ಭ್ರಾತರಂ ವೈ ಮಹಾರಾಜ್ಯೇಽಭ್ಯಷೇಚಯಮ್ ॥೫॥

ಎಲೈ ಭರತಶ್ರೇಷ್ಠನೇ, ಆಗ ನಾನು ಹಿಂದೆ ಮಾಡಿದ ಪ್ರತಿಜ್ಞೆಯನ್ನು ರಕ್ಷಿಸಿಕೊಳ್ಳುತ್ತಾ ತಮ್ಮನಾದ ಚಿತ್ರಾಂಗದನಿಗೆ ಮಹಾರಾಜನಾಗಿ ಅಭಿಷೇಕವನ್ನು ಮಾಡಿದೆನು.

ತಸ್ಮಿಂಶ್ಚ ನಿಧನಂ ಪ್ರಾಪ್ತೇ ಸತ್ಯವತ್ಯಾ ಮತೇ ಸ್ಥಿತಃ ।
ವಿಚಿತ್ರವೀರ್ಯಂ ರಾಜಾನಮಭ್ಯಷಿಂಚಂ ಯಥಾವಿಧಿ ॥೬॥

ಅವನೂ ನಿಧನವನ್ನು ಹೊಂದುತ್ತಿರಲು ತಾಯಿಯಾದ ಸತ್ಯವತಿಯ ಅಭಿಪ್ರಾಯದಂತೆ ವಿಚಿತ್ರವೀರ್ಯನನ್ನು ರಾಜನನ್ನಾಗಿ ಶಾಸ್ತ್ರವಿಧಿಯಂತೆ ಅಭಿಷೇಕ ಮಾಡಿದೆನು.

ಮಯಾಽಭಿಷಿಕ್ತೋ ರಾಜೇಂದ್ರ ಯವೀಯಾನಪಿ ಧರ್ಮತಃ ।
ವಿಚಿತ್ರವೀರ್ಯೋ ಧರ್ಮಾತ್ಮಾ ಮಾಮೇವ ಸಮುದೈಕ್ಷತ ॥೭॥

ಎಲೈ ರಾಜೇಂದ್ರನೇ, ನಾನು ಧರ್ಮದ ದೃಷ್ಟಿಯಿಂದ ಚಿಕ್ಕವನಾದ ಅವನಿಗೆ ಅಭಿಷೇಕ ಮಾಡಿದ್ದರೂ ಧರ್ಮಾತ್ಮನಾದ ವಿಚಿತ್ರವೀರ್ಯನು ಎಲ್ಲ ಕಾರ್ಯಗಳಿಗೂ ನನ್ನನ್ನೇ ನೋಡುತ್ತಿದ್ದನು.

ತಸ್ಯ ದಾರಕ್ರಿಯಾಂ ತಾತ ಚಿಕೀರ್ಷುರಹಮುದ್ಯತಃ ।
ಅನುರೂಪಾದಿವ ಕುಲಾದ್ ಇತ್ಯೇವ ಚ ಮನೋ ದಧೇ ॥೮॥

ಎಲೈ ಪ್ರೀತಿಪಾತ್ರನೇ, ಅವನಿಗೆ ವಿವಾಹವನ್ನು ಮಾಡಲು ಉದ್ಯುಕ್ತನಾದ ನಾನು ಅನುರೂಪವಾದ ಕುಲದಿಂದ ಕನ್ಯೆಯನ್ನು ತರಲು ಮನಸ್ಸು ಮಾಡಿದೆ.

ಅಥಾಶ್ರೌಷಂ ಮಹಾಬಾಹೋ ತಿಸ್ರಃ ಕನ್ಯಾಃ ಸ್ವಯಂವರೇ ।
ರೂಪೇಣಾಪ್ರತಿಮಾಃ ಸರ್ವಾಃ ಕಾಶಿರಾಜಸುತಾಸ್ತದಾ ॥೯॥

ಅಂಬಾಂ ಚೈವಾಂಬಿಕಾಂ ಚೈವ ತಥೈವಾಂಬಾಲಿಕಾಮಪಿ ॥೧೦॥

ರಾಜಾನಶ್ಚ ಸಮಾಹೂತಾಃ ಪೃಥಿವ್ಯಾಂ ಭರತರ್ಷಭ ॥೧೧॥

ಆಗ ಎಲೈ ಮಹಾಬಾಹುವೇ, ಕಾಶಿರಾಜನ ಮೂರು ಮಕ್ಕಳಾದ ಅಂಬಾ, ಅಂಬಿಕಾ ಮತ್ತು ಅಂಬಾಲಿಕೆಯರು ಸ್ವಯಂವರದಲ್ಲಿದ್ದಾರೆಂದೂ, ಅವರೆಲ್ಲರೂ ರೂಪದಲ್ಲಿ ಅಸದೃಶವಾಗಿರುವರೆಂದೂ ಕೇಳಿದೆನು. ಎಲೈ ಭರತರ್ಷಭನೇ, ಸ್ವಯಂವರಕ್ಕಾಗಿ ಭೂಮಿಯ ಮೇಲಿದ್ದ ರಾಜರೆಲ್ಲರು ಆಹ್ವಾನಿಸಲ್ಪಟ್ಟರು.

ಅಂಬಾ ಜ್ಯೇಷ್ಠಾऽಭವತ್ ತಾಸಾಮಂಬಿಕಾ ತ್ವಥ ಮಧ್ಯಮಾ ।
ಅಂಬಾಲಿಕಾ ಚ ರಾಜೇಂದ್ರ ರಾಜಕನ್ಯಾ ಯವೀಯಸೀ ॥೧೨॥

ಎಲೈ ರಾಜೇಂದ್ರನೇ, ಅವರಲ್ಲಿ ಅಂಬೆಯು ದೊಡ್ಡವಳು, ಅಂಬಿಕೆಯು ಮಧ್ಯದವಳು ಮತ್ತು ಅಂಬಾಲಿಕೆಯು ಕೊನೆಯ ರಾಜಕುಮಾರಿ.

ಸೋऽಹಮೇಕರಥೇನೈವ ಗತಃ ಕಾಶೀಪತೇಃ ಪುರೀಮ್ ।
ಅಪಶ್ಯಂ ತಾ ಮಹಾಬಾಹೋ ತಿಸ್ರಃ ಕನ್ಯಾಃ ಸ್ವಲಂಕೃತಾಃ ।
ರಾಜ್ಞಶ್ಚೈವ ಸಮಾಹೂತಾನ್ ಪಾರ್ಥಿವಾನ್ ಪೃಥಿವೀಪತೇ ॥೧೩॥

ಎಲೈ ಮಹಾಬಾಹುವೇ, ಪೃಥಿವೀಪತಿಯೇ, ನಾನು ಒಂದೇ ರಥವನ್ನು ತೆಗೆದುಕೊಂಡು ಕಾಶೀರಾಜನ ಪಟ್ಟಣಕ್ಕೆ ಹೋಗಿ, ಅಲಂಕೃತರಾಗಿದ್ದ ಆ ಮೂರು ಕನ್ಯೆಯರನ್ನೂ ಸ್ವಯಂವರಕ್ಕಾಗಿ ಭೂಮಿಯಲ್ಲಿದ್ದ ಅನೇಕ ರಾಜರನ್ನೂ ನೋಡಿದೆನು.

ತತೋऽಹಂ ತಾನ್ ನೃಪಾನ್ ಸರ್ವಾನಾಹೂಯ ಸಮರೇ ಸ್ಥಿತಾನ್ ।
ರಥಮಾರೋಪಯಾಂಚಕ್ರೇ ಕನ್ಯಾಸ್ತಾ ಭರತರ್ಷಭ ॥೧೫॥

ಎಲೈ ಭರತರ್ಷಭನೇ, ಆಗ ನಾನು ಆ ರಾಜರೆಲ್ಲರನ್ನೂ ಯುದ್ಧಕ್ಕೆ ಆಹ್ವಾನ ಮಾಡಿ ಆ ಕನ್ಯೆಯರನ್ನು ರಥದಲ್ಲಿ ಕುಳ್ಳಿರಿಸಿಕೊಂಡೆ.

ವೀರ್ಯಶುಲ್ಕಾಶ್ಚ ತಾ ಜ್ಞಾತ್ವಾ ಸಮಾರೋಪ್ಯ ರಥಂ ತದಾ ।
ಅವೋಚಂ ಪಾರ್ಥಿವಾನ್ ಸರ್ವಾನಹಂ ತತ್ರ ಸಮಾಗತಾನ್ ॥೧೬॥

ಆ ಕನ್ಯೆಯರು ವೀರ್ಯಶುಲ್ಕರೆಂದು ತಿಳಿದು, ನನ್ನ ರಥದಲ್ಲಿ ಕುಳ್ಳಿರಿಸಿಕೊಂಡು ಎಲ್ಲಾ ರಾಜರನ್ನೂ ಕುರಿತು ಹೀಗೆ ಹೇಳಿದೆ.

ಭೀಷ್ಮಃ ಶಾಂತನವಃ ಕನ್ಯಾ ಹರತೀತಿ ಪುನಃ ಪುನಃ ।
ತೇ ಯತಧ್ವಂ ಪರಂ ಶಕ್ತ್ಯಾ ಸರ್ವೇ ಮೋಕ್ಷಾಯ ಪಾರ್ಥಿವಾಃ ॥೧೭॥

ಪ್ರಸಹ್ಯ ಹಿ ಹರಾಮ್ಯೇಷ ಮಿಷತಾಂ ವೋ ನರರ್ಷಭಾಃ ॥೧೮॥

ಶಂತನು ಪುತ್ರನಾದ ಭೀಷ್ಮನು ಕನ್ಯೆಯರನ್ನು ಹರಣ ಮಾಡುತ್ತಿದ್ದಾನೆ. ರಾಜರಾದ ನೀವೆಲ್ಲರೂ ಕನ್ಯೆಯರನ್ನು ಬಿಡಿಸಿಕೊಳ್ಳಲು ಪ್ರಯತ್ನ ಮಾಡಿ. ಎಲೈ ನರರ್ಷಭರೇ, ನೀವು ನೋಡುತ್ತಿರುವಂತೆಯೇ ನಿಮ್ಮನ್ನು ಅತಿಕ್ರಮಿಸಿ ನಾನು ಕನ್ಯೆಯರನ್ನು ಹರಣ ಮಾಡುತ್ತಿದ್ದೇನೆ.

ಯೋಗೋ ಯೋಗ ಇತಿ ಕ್ರುದ್ಧಾಃ ಸಾರಥೀಂಶ್ಚಾಪ್ಯಚೋದಯತ್ ॥೧೯॥

ಆ ರಾಜರು ಯೋಗ ಯೋಗ (ಸೈನ್ಯವನ್ನು ವ್ಯೂಹ ಮಾಡಿ) ಎಂದು ಹೇಳಿ ಕೋಪದಿಂದ ತಮ್ಮ ಸಾರಥಿಗಳನ್ನು ಪ್ರಚೋದಿಸಿದರು.

ತೇ ರಥೈರ್ಮೇಘಸಂಕಾಶೈರ್ಗಜೈಶ್ಚ ಗಜಯೋಧಿನಃ ।
ಉಷ್ಟ್ರೈಶ್ಚಾಶ್ವೈರ್ಮಹೇಷ್ವಾಸಾಃ ಸಮುತ್ಪೇತುರುದಾಯುಧಾಃ ॥೨೦॥

ಅವರು ಮೇಘಗಳನ್ನು ಹೋಲುವ ರಥಗಳಿಂದಲೂ, ಗಜಯೋಧಿಗಳಾದವರು ಗಜಗಳಿಂದಲೂ, ಇನ್ನೂ ಕೆಲವು ಧನುರ್ಧಾರಿಗಳು ಒಂಟೆಗಳ ಮೇಲೆ ಮತ್ತು ಅಶ್ವಗಳ ಮೇಲೆ ಕುಳಿತು, ಕೈಯಲ್ಲಿ ಆಯುಧಗಳನ್ನು ಹಿಡಿದು ನನ್ನ ಮೇಲೆರಗಿದರು.

ತತಸ್ತೇ ಪೃಥಿವೀಪಾಲಾ ಸರ್ವ ಏವ ವಿಶಾಂಪತೇ ।
ರಥವ್ರಾತೇನ ಮಹತಾ ಸರ್ವತಃ ಪರ್ಯವಾರಯನ್ ॥೨೧॥

ತಾನಹಂ ಶರವರ್ಷೇಣ ಮಹತಾ ಪ್ರತ್ಯವಾರಯಮ್ ॥೨೨॥

ಎಲೈ ರಾಜನೇ, ಆಗ ಆ ಎಲ್ಲಾ ರಾಜರು ತಮ್ಮ ದೊಡ್ಡದಾದ ರಥಸಮೂಹದಿಂದ ಎಲ್ಲ ಕಡೆಗಳಿಂದಲೂ ನನ್ನನ್ನು ತಡೆದರು. ಅವರನ್ನು ನಾನು ದೊಡ್ಡದಾದ ಬಾಣಗಳ ಮಳೆಯಿಂದ ತಡೆದೆನು.

ಸರ್ವಾನ್ ನೃಪಾಂಶ್ಚಾಪ್ಯಜಯಂ ದೇವರಾಡಿವ ದಾನವಾನ್ ।
ತೇಷಾಮಾಪತತಾಂ ಚಿತ್ರಾನ್ ಧ್ವಜಾನ್ ಹೇಮಪರಿಷ್ಕೃತಾನ್ ॥೨೩॥

ಅಪಾತಯಂ ಶರೈರ್ದೀಪ್ತೈಃ ಪ್ರಹಸನ್ ಭರತರ್ಷಭ ।
ಏಕೈಕೇನ ಹಿ ಬಾಣೇನ ಭೂಮೌ ಪಾತಿತವಾನಹಮ್ ॥೨೪॥

ದೇವೇಂದ್ರನು ದಾನವರನ್ನು ಗೆಲ್ಲುವಂತೆ ನಾನು ಎಲ್ಲಾ ರಾಜರನ್ನೂ ಗೆದ್ದೆನು. ಎಲೈ ಭರತರ್ಷಭನೇ, ಅವರು ಮೇಲೇರಿ ಬರುತ್ತಿದ್ದಾಗ ಹೇಮದಿಂದ ಅಲಂಕೃತವಾದ ಅವರ ವಿಚಿತ್ರವಾದ ಧ್ವಜಗಳನ್ನೂ ನಾನು ಪ್ರಕಾಶಮಾನವಾದ ಬಾಣಗಳಿಂದ ಹೊಡೆದು ಉರುಳಿಸಿದೆನು. ಎಲೈ ಭರತರ್ಷಭನೇ, ನಾನು ನಗುತ್ತಲೇ ಶೀಘ್ರಗತಿಯುಳ್ಳ ನನ್ನ ಒಂದೊಂದು ಬಾಣಗಳಿಂದ ಅವುಗಳನ್ನು ಭೂಮಿಯಲ್ಲಿ ಕೆಡವಿದೆನು.

ಹಯಾಂಸ್ತೇಷಾಂ ಗಜಾಂಶ್ಚೈವ ಸಾರಥೀಂಶ್ಚಾಪ್ಯಹಂ ರಣೇ ।
ಅಪಾತಯಂ ಶರೈಶ್ಚೈವ ಪ್ರಹಸನ್ ಪುರುಷರ್ಷಭ ॥೨೫॥

ತೇ ನಿವೃತ್ತಾಶ್ಚ ಭಗ್ನಾಶ್ಚ ದೃಷ್ಟ್ವಾ ತಲ್ಲಾಘವಂ ಚ ಮೇ ॥೨೬॥

ಎಲೈ ಪುರುಷರ್ಷಭನೇ, ನಾನು ನನ್ನ ಬಾಣಗಳಿಂದ ಅವರ ಅಶ್ವಗಳನ್ನೂ, ಗಜಗಳನ್ನೂ, ಸಾರಥಿಗಳನ್ನೂ ಹೊಡೆದು ಉರುಳಿಸಿದೆನು. ಅವರು ನನ್ನ ಕ್ಷಿಪ್ರತೆಯನ್ನು ನೋಡಿ, ಯುದ್ಧದಲ್ಲಿ ಭಗ್ನರಾಗಿ ಎಲ್ಲರೂ ಹಿಂದಿರುಗಿದರು.

ಪ್ರಣಿಪೇತುಶ್ಚ ಸರ್ವೇ ವೈ ಪ್ರಶಶಂಸುಶ್ಚ ಪಾರ್ಥಿವಾಃ ।
ತತ ಆದಾಯ ತಾಃ ಕನ್ಯಾ ನೃಪತೀಂಶ್ಚ ವಿಸೃಜ್ಯ ತಾನ್ ॥೨೭॥

ತತೋಽಹಂ ಹಸ್ತಿನಪುರಮಾಗಾಂ ಜಿತ್ವಾ ಮಹೀಕ್ಷಿತಃ ॥೨೮॥

ಆ ರಾಜರೆಲ್ಲರೂ ನನಗೆ ನಮಸ್ಕಾರವನ್ನು ಮಾಡಿ ನನ್ನನ್ನು ಪ್ರಶಂಸಿಸಿದರು. ಅನಂತರ ಆ ಕನ್ಯೆಯರನ್ನು ಕರೆದುಕೊಂಡು ಆ ರಾಜರನ್ನು ಅಲ್ಲಿಯೇ ಬಿಟ್ಟು, ಎಲ್ಲ ರಾಜರನ್ನೂ ಗೆದ್ದು ಹಸ್ತಿನಪುರಕ್ಕೆ ಹಿಂದಿರುಗಿದೆನು.

ತತೋಽಹಂ ತಾಶ್ಚ ಕನ್ಯಾ ವೈ ಭ್ರಾತುರರ್ಥಾಯ ಭಾರತ ।
ತಚ್ಚ ಕರ್ಮ ಮಹಾಬಾಹೋ ಸತ್ಯವತ್ಯೈ ನ್ಯವೇದಯಮ್ ॥೨೯॥

ಎಲೈ ಭಾರತನೇ, ಮಹಾಬಾಹುವೇ, ಅನಂತರ ನಾನು ಆ ಕನ್ಯೆಯರಿಗೂ ಮತ್ತು ತಾಯಿಯಾದ ಸತ್ಯವತಿಗೂ ನಾನು ತಮ್ಮನಾದ ವಿಚಿತ್ರವೀರ್ಯನ ಸಲುವಾಗಿ ಈ ಕಾರ್ಯವನ್ನು ಮಾಡಿದೆನೆಂದು ನಿವೇದಿಸಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕಸಪ್ತತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆರಡನೆಯ ಅಧ್ಯಾಯ

ವಿವಾಹ ಸಮಯದಲ್ಲಿ ಅಂಬೆಯಿಂದ ತಾನು ಸಾಲ್ವಪೂರ್ವಳೆಂದು ಕಥನ.

ಭೀಷ್ಮಃ

ತತೋಽಹಂ ಭರತಶ್ರೇಷ್ಠ ಮಾತರಂ ವೀರಮಾತರಮ್ ।
ಅಭಿಗಮ್ಯೋಪಸಂಗೃಹ್ಯ ದಾಶೇಯೀಮಿದಮಬ್ರವಮ್ ॥೧॥

ಭೀಷ್ಮ– ಎಲೈ ಭರತಶ್ರೇಷ್ಠನೇ, ಆಗ ನಾನು ವೀರಮಾತೆಯಾದ, ನನ್ನ ತಾಯಿಯಾದ, ದಾಶಕನ್ಯೆಯಾದ ಸತ್ಯವತಿಯ ಬಳಿಗೆ ಆ ಕನ್ಯೆಯರನ್ನು ಕರೆದುಕೊಂಡು ಹೋಗಿ ಈ ಮಾತನ್ನು ಆಡಿದೆನು.

ಇಮಾಃ ಕಾಶೀಪತೇಃ ಕನ್ಯಾ ಮಯಾ ನಿರ್ಜಿತ್ಯ ಪಾರ್ಥಿವಾನ್ ।
ವಿಚಿತ್ರವೀರ್ಯಸ್ಯ ಕೃತೇ ವೀರ್ಯಶುಲ್ಕಾ ಉಪಾರ್ಜಿತಾಃ ॥೨॥

ಇವರು ಕಾಶೀರಾಜನ ಮಕ್ಕಳು. ನಾನು ವೀರ್ಯಶುಲ್ಕರಾದ ಇವರನ್ನು, ಎಲ್ಲ ರಾಜರನ್ನೂ ಸೋಲಿಸಿ, ವಿಚಿತ್ರವೀರ್ಯನ ಸಲುವಾಗಿ ಸಂಪಾದಿಸಿಕೊಂಡು ಬಂದಿದ್ದೇನೆ (ಎಂದು ಹೇಳಿದೆನು).

ತತೋ ಮೂರ್ಧನ್ಯುಪಾಘ್ರಾಯ ಪರ್ಯಶ್ರುನಯನಾ ನೃಪ ।
ಆಹ ಸತ್ಯವತೀ ಹೃಷ್ಟಾ ದಿಷ್ಟ್ಯಾ ಪುತ್ರ ಜಿತಂ ತ್ವಯಾ ॥೩॥

ಎಲೈ ರಾಜನೇ, ಆಗ ಸತ್ಯವತಿಯು ಕಣ್ಣಿನಲ್ಲಿ ನೀರನ್ನು ತುಂಬಿಕೊಂಡು, ನನ್ನನ್ನು ಶಿರಸ್ಸಿನಲ್ಲಿ ಆಘ್ರಾಣಿಸಿ, ಸಂತೋಷದಿಂದ ನನ್ನನ್ನು ಕುರಿತು– 'ಪುತ್ರನೇ, ದೇವರ ದಯೆಯಿಂದ ನೀನು ರಾಜರನ್ನು ಗೆದ್ದಿದ್ದೀಯೆ' ಎಂದು ಹೇಳಿದಳು.

ಸತ್ಯವತ್ಯಾಸ್ತ್ವನುಮತೇ ವಿವಾಹೇ ಸಮುಪಸ್ಥಿತೇ ।
ಉವಾಚ ವಾಕ್ಯಂ ಸವ್ರೀಡಾ ಜ್ಯೇಷ್ಠಾ ಕಾಶೀಪತೇಃ ಸುತಾ ॥೪॥

ಸತ್ಯವತಿಯ ಅನುಮತಿಯಿಂದ ವಿವಾಹಕ್ರಿಯೆಯಲ್ಲಿ ಉದ್ಯುಕ್ತನಾಗಿರುವಾಗ ಕಾಶೀರಾಜನ ಹಿರಿಯ ಮಗಳಾದ ಅಂಬೆಯು ನಾಚಿಕೆಯಿಂದ ನನ್ನ ಬಳಿಯಲ್ಲಿ ಹೀಗೆ ಹೇಳಿದಳು.

ಭೀಷ್ಮ ತ್ವಮಸಿ ಧರ್ಮಜ್ಞಃ ಸರ್ವಶಾಸ್ತ್ರವಿಶಾರದಃ ।
ಶ್ರುತ್ವಾ ಚ ವಚನಂ ಮಹ್ಯಂ ಧರ್ಮ್ಯಂ ಕರ್ತುಮಿಹಾರ್ಹಸಿ ॥೫॥

ಎಲೈ ಭೀಷ್ಮನೇ, ನೀನು ಧರ್ಮವನ್ನು ತಿಳಿದವನೂ ಮತ್ತು ಎಲ್ಲ ಶಾಸ್ತ್ರಗಳಲ್ಲಿ ವಿಶಾರದನೂ ಆಗಿದ್ದೀಯೆ. ನನ್ನ ಮಾತನ್ನು ಕೇಳಿ ಅನಂತರ ಧರ್ಮಯುಕ್ತವಾದುದನ್ನು ಆಚರಿಸು.

ಮಯಾ ಸಾಲ್ವಪತಿಃ ಪೂರ್ವಂ ಮನಸಾऽಭಿವೃತೋ ವರಃ ।
ತೇನ ಚಾಪಿ ವೃತಾ ಪೂರ್ವಂ ರಹಸ್ಯವಿದಿತೇ ಪಿತುಃ ॥೬॥

ನಾನು ಸಾಲ್ವರಾಜನನ್ನು ಮೊದಲೇ ಮನಸ್ಸಿನಿಂದ ಪತಿಯಾಗಿ ವರಿಸಿದ್ದೇನೆ. ಅವನೂ ಸಹ ನನ್ನನ್ನು ಪತ್ನಿಯಾಗಿ ವರಿಸಿದ್ದಾನೆ. ಇದು ನನ್ನ ತಂದೆಗೆ ತಿಳಿದಿಲ್ಲ.

ಕಥಂ ಮಾಮನ್ಯಕಾಮಾಂ ತ್ವಂ ರಾಜಧರ್ಮಮತೀತ್ಯ ವೈ ।
ವಾಸಯೇಥಾ ಗೃಹೇ ಭೀಷ್ಮ ಕೌರವಃ ಸನ್ ವಿಶೇಷತಃ ॥೭॥

ಎಲೈ ಭೀಷ್ಮನೇ, ವಿಶೇಷವಾಗಿ ಕೌರವನಾದ ನೀನು ರಾಜಧರ್ಮವನ್ನು ಮೀರಿ, ಇನ್ನೊಬ್ಬನಲ್ಲಿ ಪ್ರೀತಿ ಇರುವ ನನ್ನನ್ನು ಹೇಗೆ ನಿನ್ನ ಮನೆಯಲ್ಲಿ ಇರಿಸಿಕೊಳ್ಳುತ್ತೀಯೆ?

ಏತದ್ ಬುದ್ಧ್ಯಾ ವಿನಿಶ್ಚಿತ್ಯ ಮನಸಾ ಚ ನರರ್ಷಭ ।
ಯತ್ ಕ್ಷಮಂ ತೇ ಮಹಾಬಾಹೋ ತದಿಹಾರಬ್ಧುಮರ್ಹಸಿ ॥೮॥

ಎಲೈ ನರಶ್ರೇಷ್ಠನೇ, ಮಹಾಬಾಹುವೇ, ಇದನ್ನು ನಿನ್ನ ಬುದ್ಧಿಯಿಂದಲೂ ಮತ್ತು ಮನಸ್ಸಿನಿಂದಲೂ ವಿಚಾರ ಮಾಡಿ ಯಾವುದು ಸೂಕ್ತವೋ ಅದರಂತೆ ನಡೆದುಕೊಳ್ಳುವವನಾಗು.

ಸ ಮಾಂ ಪ್ರತೀಕ್ಷತೇ ವೋಢುಂ ಸಾಲ್ವರಾಜೋ ವಿಶಾಂಪತೇ ।
ತಸ್ಮಾನ್ಮಾಂ ತ್ವಂ ಕುರುಶ್ರೇಷ್ಠ ಸಮನುಜ್ಞಾತುಮರ್ಹಸಿ ॥೯॥

ಎಲೈ ರಾಜನೇ, ಸಾಲ್ವರಾಜನು ನನ್ನನ್ನು ವಿವಾಹ ಮಾಡಿಕೊಳ್ಳಲು ನಿರೀಕ್ಷಿಸುತ್ತಿದ್ದಾನೆ. ಆದ್ದರಿಂದ ಎಲೈ ಕುರುಶ್ರೇಷ್ಠನೇ, ನೀನು ನನಗೆ ಅಪ್ಪಣೆಯನ್ನು ಕೊಡಬೇಕು.

ಕೃಪಾಂ ಕುರು ಮಹಾಬಾಹೋ ಮಯಿ ಧರ್ಮಭೃತಾಂ ವರ ।
ತ್ವಂ ಹಿ ಸತ್ಯವ್ರತೋ ವೀರಃ ಪೃಥಿವ್ಯಾಮಿತಿ ನಃ ಶ್ರುತಮ್ ॥೧೦॥

ಎಲೈ ಮಹಾಬಾಹುವೇ, ಎಲೈ ಧರ್ಮಜ್ಞರಲ್ಲಿ ಶ್ರೇಷ್ಠನೇ, ನೀನು ಭೂಮಿಯಲ್ಲಿ ಸತ್ಯವ್ರತವುಳ್ಳವನು ಮತ್ತು ವೀರನು ಎಂದು ಕೇಳಿದ್ದೇವೆ. ನನ್ನ ಮೇಲೆ ದಯೆಯನ್ನು ತೋರಿಸು (ಎಂದು ಹೇಳಿದಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿಸಪ್ತತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ಮೂರನೆಯ ಅಧ್ಯಾಯ

ಸಾಲ್ವನಿಂದ ತನ್ನ ಬಳಿಗೆ ಬಂದ ಅಂಬೆಯ ಪರಿತ್ಯಾಗ.

ಭೀಷ್ಮಃ

ತತೋಽಹಂ ಸಮನುಜ್ಞಾಪ್ಯ ಕಾಳೀಂ ಸತ್ಯವತೀಂ ತದಾ ।
ಮಂತ್ರಿಣಶ್ಚರ್ತ್ವಿಜಶ್ಚೈವ ತಥೈವ ಚ ಪುರೋಹಿತಾನ್ ॥೧॥

ಸಮನುಜ್ಞಾಪಿಷಂ ಕನ್ಯಾಮಂಬಾಂ ಜ್ಯೇಷ್ಠಾಂ ನರಾಧಿಪ ॥೨॥

ಭೀಷ್ಮ– ಆಗ ನಾನು ತಾಯಿಯಾದ ಸತ್ಯವತಿಯ, ಮಂತ್ರಿಗಳ, ಪುರೋಹಿತರ ಮತ್ತು ಋತ್ವಿಜರ ಅನುಮತಿಯನ್ನು ಪಡೆದು ಎಲೈ ನರಶ್ರೇಷ್ಠನೇ, ಹಿರಿಯಳಾದ ಅಂಬೆಗೆ ಅನುಮತಿಯನ್ನು ನೀಡಿದೆ.

ಅನುಜ್ಞಾತಾ ಯಯೌ ಸಾ ತು ಕನ್ಯಾ ಸಾಲ್ವಪತೇಃ ಪುರಮ್ ।
ವೃದ್ಧೈರ್ದ್ವಿಜಾತಿಭಿರ್ಗುಪ್ತಾ ಧಾತ್ರ್ಯಾ ಚಾನುಗತಾ ತದಾ ॥೩॥

ನನ್ನಿಂದ ಅನುಮತಿಯನ್ನು ಪಡೆದು, ವೃದ್ಧರಾದ ಬ್ರಾಹ್ಮಣರಿಂದಲೂ, ದಾದಿಯಿಂದಲೂ ಗುಪ್ತಳಾಗಿ ಮತ್ತು ಹಿಂಬಾಲಿಸಲ್ಪಟ್ಟು ಸಾಲ್ವಪತಿಯ ಪಟ್ಟಣಕ್ಕೆ ಹೋದಳು.

ಅತೀತ್ಯ ಚ ತಮಧ್ವಾನಮಾಸಸಾದ ನರಾಧಿಪಮ್ ।
ಸಾ ತಮಾಸಾದ್ಯ ರಾಜಾನಂ ಸಾಲ್ವಂ ವಚನಮಬ್ರವೀತ್ ॥೪॥

ಅವಳು ಮಾರ್ಗವನ್ನು ದಾಟಿ ಸಾಲ್ವರಾಜನ ಬಳಿಗೆ ಹೋಗಿ, ಅವನನ್ನು ಕುರಿತು ಹೀಗೆ ಹೇಳಿದಳು.

ಆಗತಾಽಹಂ ಮಹಾಬಾಹೋ ತ್ವಾಮುದ್ದಿಶ್ಯ ಮಹಾಮತೇ ।
ಅಭಿನಂದಸ್ವ ಮಾಂ ರಾಜನ್ ಸದಾ ಪ್ರಿಯಹಿತೇ ರತಾಮ್ ॥೫॥

ತ್ವಂ ಹಿ ಮೇ ಮನಸಾ ಧ್ಯಾತಸ್ತ್ವಯಾ ಚಾಪ್ಯುಪಮಂತ್ರಿತಾ ॥೬॥

'ಎಲೈ ಮಹಾಬಾಹುವೇ, ಮಹಾಮತಿಯೇ, ನಾನು ನಿನ್ನ ಬಳಿಗೆ ಬಂದಿದ್ದೇನೆ. ಎಲೈ ರಾಜನೇ, ಸದಾ ನಿನ್ನ ಪ್ರಿಯದಲ್ಲಿ ಮತ್ತು ಹಿತದಲ್ಲಿ ರತಳಾದ ನನ್ನನ್ನು ನೋಡಿ

ಸಂತೋಷವನ್ನು ಹೊಂದು. ನಾನು ಮನಸ್ಸಿನಲ್ಲಿಯೇ ನಿನ್ನನ್ನು ಪತಿಯಾಗಿ ಸಂಕಲ್ಪಿಸಿದ್ದೇನೆ. ನೀನೂ ಸಹ ಹಾಗೆಯೇ ಮಾಡಿದ್ದೀಯೆ' (ಎಂದು ಹೇಳಿದಳು).

ತಮಬ್ರವೀತ್ ಸಾಲ್ವಪತಿಃ ಸ್ಮಯನ್ನಿವ ವಿಶಾಂಪತೇ ॥೭॥

ತ್ವಯಾಽನ್ಯಪೂರ್ವಯಾ ನಾಹಂ ಭಾರ್ಯಾರ್ಥೀ ವರವರ್ಣಿನಿ ॥೮॥

ಎಲೈ ರಾಜನೇ, ಆಗ ಸಾಲ್ವಪತಿಯು ನಗುತ್ತಾ, ಅವಳನ್ನು ಕುರಿತು ಹೇಳಿದನು– 'ಎಲೌ ಸುಂದರಿಯೇ, ಇನ್ನೊಬ್ಬನ ಜೊತೆಯಲ್ಲಿ ಸಂಬಂಧವುಳ್ಳ ನಿನ್ನನ್ನು ನಾನು ಪತ್ನಿಯಾಗಿ ಅಪೇಕ್ಷಿಸುವುದಿಲ್ಲ'.

ಗಚ್ಛ ಭದ್ರೇ ಪುನಸ್ತತ್ರ ಸಕಾಶಂ ಭೀಷ್ಮಕಸ್ಯ ವೈ ।
ನಾಹಮಿಚ್ಛಾಮಿ ಭೀಷ್ಮೇಣ ಗೃಹೀತಾಂ ತ್ವಾಂ ಪ್ರಸಹ್ಯ ವೈ ॥೯॥

ಮಂಗಳಸ್ವರೂಪಳೇ, ಪುನಃ ಅಲ್ಪನಾದ ಆ ಭೀಷ್ಮನ ಬಳಿಗೇ ಹೋಗು. ಭೀಷ್ಮನು ಬಲಾತ್ಕಾರದಿಂದ ಕರೆದುಕೊಂಡು ಹೋದ ನಿನ್ನನ್ನು ನಾನು ಬಯಸುವುದಿಲ್ಲ.

ತ್ವಂ ಹಿ ಭೀಷ್ಮೇಣ ನಿರ್ಜಿತ್ಯ ನೀತಾ ಪ್ರೀತಿಮತೀ ತದಾ ।
ಪರಾಮೃಷ್ಟಾ ಮಹಾಯುದ್ಧೇ ನಿರ್ಜಿತ್ಯ ಪೃಥಿವೀಪತೀನ್ ॥೧೦॥

ನಾಹಂ ತ್ವಯ್ಯನ್ಯಪೂರ್ವಾಯಾಂ ಭಾರ್ಯಾರ್ಥೀ ವರವರ್ಣಿನಿ ॥೧೧॥

ಎಲೌ ಸುಂದರಿಯೇ, ಭೀಷ್ಮನಿಂದ ನಿರ್ಜಿತಳಾಗಿ ನೀನು ಸಂತೋಷದಿಂದ ಅವನ ಜೊತೆಯಲ್ಲಿ ಹೋದೆ. ಮಹಾಯುದ್ಧದಲ್ಲಿ ರಾಜರನ್ನು ಗೆದ್ದು, ಅವನು ನಿನ್ನನ್ನು ಸ್ಪರ್ಶಿಸಿದ್ದಾನೆ. ಆದ್ದರಿಂದ ಇನ್ನೊಬ್ಬನ ಸಂಬಂಧವನ್ನು ಹೊಂದಿದ ನಿನ್ನನ್ನು ನಾನು ಪತ್ನಿಯಾಗಿ ಬಯಸುವುದಿಲ್ಲ.

ಕಥಮಸ್ಮದ್ವಿಧೋ ರಾಜಾ ಪರಪೂರ್ವಾಂ ಪ್ರವೇಶಯೇತ್ ।
ನಾರೀಂ ವಿದಿತವಿಜ್ಞಾನಃ ಪರೇಷಾಂ ಧರ್ಮಮಾದಿಶನ್ ॥೧೨॥

ಯಥೇಷ್ಟಂ ಗಮ್ಯತಾಂ ಭದ್ರೇ ಮಾ ತ್ವಾಂ ಕಾಲೋಽತ್ಯಗಾದಯಮ್ ॥

ಇನ್ನೊಬ್ಬರಿಗೆ ಧರ್ಮವನ್ನು ಉಪದೇಶ ಮಾಡುವ, ಎಲ್ಲದರ ಜ್ಞಾನವುಳ್ಳ ನನ್ನಂತಹ ರಾಜನು ಹೇಗೆ ಇನ್ನೊಬ್ಬನ ಸಂಬಂಧವನ್ನು ಹೊಂದಿದ ವನಿತೆಯನ್ನು ತನ್ನ ಮನೆಗೆ

ಪ್ರವೇಶಿಸುವಂತೆ ಮಾಡಿಯಾನು? ಆದ್ದರಿಂದ ಮಂಗಳಸ್ವರೂಪಳೇ, ನಿನ್ನ ಇಚ್ಛೆಯಂತೆ ಹೊರಟು ಹೋಗು, ನಿನಗೆ ಈ ಕಾಲವು ಮೀರಿ ಹೋಗುವುದು ಬೇಡ (ಎಂದು ಹೇಳಿದನು).

ಅಂಬಾ ತಮಬ್ರವೀದ್ ರಾಜನ್ ಅನಂಗಶರಪೀಡಿತಾ ॥೧೪॥

ನೈವಂ ವದ ಮಹೀಪಾಲ ನೈತದೇವಂ ಕಥಂಚನ ॥೧೫॥

ನಾಸ್ಮಿ ಪ್ರೀತಿಮತೀ ನೀತಾ ಭೀಷ್ಮೇಣಾಮಿತ್ರಕರ್ಶನ ।
ಬಲಾನ್ನೀತಾऽಸ್ಮಿ ರುದತೀ ವಿದ್ರಾವ್ಯ ಪೃಥಿವೀಪತೀನ್ ॥೧೬॥

ಎಲೈ ರಾಜನೇ, ಕಾಮಪೀಡಿತಳಾದ ಅಂಬೆಯು ಅವನನ್ನು ಕುರಿತು– 'ಮಹಾರಾಜನೇ, ಹೀಗೆ ಮಾತನಾಡಬೇಡ. ನೀನು ಹೇಳುವಂತೆ ಏನೂ ನಡೆದಿಲ್ಲ. ಎಲೈ ಶತ್ರುಕರ್ಶನನೇ, ನಾನು ಭೀಷ್ಮರ ಜೊತೆಯಲ್ಲಿ ಸಂತೋಷದಿಂದ ಹೋಗಲಿಲ್ಲ. ಭೀಷ್ಮನು ರಾಜರರೆಲ್ಲರನ್ನು ತನ್ನ ಸಾಮರ್ಥ್ಯದಿಂದ ಓಡಿಸಿ, ಅಳುತ್ತಿದ್ದ ನನ್ನನ್ನು ಬಲಾತ್ಕಾರದಿಂದ ಕರೆದುಕೊಂಡು ಹೋದನು.

ಭಜಸ್ವ ಮಾಂ ಸಾಲ್ವಪತೇ ಭಕ್ತಾಂ ಬಾಲಾಮನಾಗಸೀಮ್ ।
ಭಕ್ತಾನಾಂ ಹಿ ಪರಿತ್ಯಾಗೋ ನ ಧರ್ಮೇಷು ಪ್ರಶಸ್ಯತೇ ॥೧೭॥

ಬಾಲೆಯೂ, ನಿರಪರಾಧಿನಿಯೂ ಮತ್ತು ನಿನ್ನಲ್ಲಿ ಪ್ರೀತಿಯುಳ್ಳವಳೂ ಆದ ನನ್ನನ್ನು ಸ್ವೀಕರಿಸು. ಅನುರಾಗವುಳ್ಳವರ ಪರಿತ್ಯಾಗವು ಧರ್ಮಶಾಸ್ತ್ರದಲ್ಲಿ ಪ್ರಶಂಸಿಸಲ್ಪಡುವುದಿಲ್ಲ.

ಸಾऽಹಮಾಮಂತ್ರ್ಯ ಗಾಂಗೇಯಂ ಸಮರೇಷ್ವನಿವರ್ತಿನಮ್ ।
ಅನುಜ್ಞಾತಾ ಚ ತೇನೈವ ತತೋऽಹಂ ಭೃಶಮಾಗತಾ ॥೧೮॥

ಅಂತಹ ನಾನು ಯುದ್ಧದಲ್ಲಿ ಹಿಮ್ಮೆಟ್ಟದಿರುವ ಭೀಷ್ಮರ ಅನುಮತಿಯನ್ನು ಕೇಳಿ, ಅವರಿಂದ ಅನುಮತಿಯನ್ನು ಪಡೆದು ಶೀಘ್ರವಾಗಿ ನಿನ್ನ ಬಳಿಗೆ ಬಂದಿದ್ದೇನೆ.

ನ ಸ ಭೀಷ್ಮೋ ಮಹಾಬಾಹುರ್ಮಾಮಿಚ್ಛತಿ ವಿಶಾಂಪತೇ ।
ಭ್ರಾತೃಹೇತೋಃ ಸಮಾರಂಭೋ ಭೀಷ್ಮಸ್ಯೇತಿ ಶ್ರುತಂ ಮಯಾ ॥೧೯॥

ಎಲೈ ರಾಜನೇ, ಮಹಾಬಾಹುವಾದ ಭೀಷ್ಮನು ನನ್ನನ್ನು ಬಯಸುವುದಿಲ್ಲ. ನನ್ನ ತಮ್ಮನ ಸಲುವಾಗಿ ನನ್ನ ಈ ಪ್ರಯತ್ನ ಎಂಬ ಭೀಷ್ಮರ ಮಾತನ್ನು ನಾನು ಕೇಳಿದ್ದೇನೆ.

ಭಗಿನ್ಯೌ ಮಮ ಯೇ ನೀತೇ ಅಂಬಿಕಾಂಬಾಲಿಕೇ ನೃಪ ।
ಪ್ರಾದಾದ್ ವಿಚಿತ್ರವೀರ್ಯಾಯ ಗಾಂಗೇಯೋ ಹಿ ಯವೀಯಸೇ ॥

ಎಲೈ ರಾಜನೇ, ಭೀಷ್ಮನು ತಾನು ಕರೆದುಕೊಂಡು ಹೋಗಿದ್ದ ನನ್ನ ತಂಗಿಯರಾದ ಅಂಬಿಕೆ ಮತ್ತು ಅಂಬಾಲಿಕೆಯರನ್ನು ತಮ್ಮನಾದ ವಿಚಿತ್ರವೀರ್ಯನಿಗೆ ಕೊಟ್ಟು ವಿವಾಹ ಮಾಡಿದ್ದಾನೆ.

ಯಥಾ ಸಾಲ್ವಪತೇ ನಾನ್ಯಂ ನರಂ ಯಾಮಿ ಕಥಂಚನ ।
ತ್ವಾಮೃತೇ ಪುರುಷವ್ಯಾಘ್ರಂ ತಥಾ ಮೂರ್ಧಾನಮಾಲಭೇ ॥೨೧॥

ಸಾಲ್ವಪತಿಯೇ, ಪುರುಷವ್ಯಾಘ್ರನಾದ ನಿನ್ನನ್ನು ಬಿಟ್ಟು ನಾನು ಇನ್ನೊಬ್ಬರನ್ನು ಯೋಚಿಸಿಲ್ಲ ಎಂದು ನನ್ನ ಶಿರಸ್ಸಿನ ಮೇಲೆ ಪ್ರಮಾಣ ಮಾಡಿ ಹೇಳುತ್ತಿದ್ದೇನೆ.

ನ ಚಾನ್ಯಪೂರ್ವಾ ರಾಜೇಂದ್ರ ತ್ವಾಮಹಂ ಸಮುಪಸ್ಥಿತಾ ।
ಸಾ ತ್ವಾ ಬ್ರವೀಮಿ ಸಾಲ್ವೈತತ್ ಸತ್ಯೇನಾತ್ಮಾನಮಾಲಭೇ ॥೨೨॥

ಎಲೈ ರಾಜೇಂದ್ರನೇ, ನಾನು ಇನ್ನೊಬ್ಬರ ಸಂಬಂಧವನ್ನು ಮಾಡಿ ನಿನ್ನ ಬಳಿಗೆ ಬರುತ್ತಿಲ್ಲ. ಸಾಲ್ವನೇ, ನನ್ನ ಮೇಲೆ ಆಣೆಯನ್ನು ಮಾಡಿ, ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಭಜಸ್ವ ಮಾಂ ವಿಶಾಲಾಕ್ಷ ಸ್ವಯಂ ಕನ್ಯಾಮುಪಸ್ಥಿತಾಮ್ ।
ಅನನ್ಯಪೂರ್ವಾಂ ರಾಜೇಂದ್ರ ತ್ವತ್ಪ್ರಸಾದಾಭಿಕಾಂಕ್ಷಿಣೀಮ್ ॥೨೩॥

ಎಲೈ ವಿಶಾಲಾಕ್ಷನೇ, ರಾಜೇಂದ್ರನೇ, ಇನ್ನೊಬ್ಬರ ಸಂಬಂಧವಿಲ್ಲದ, ನಿನ್ನ ಅನುಗ್ರಹವನ್ನು ಬಯಸುವ, ತಾನಾಗಿಯೇ ಬಂದ ಕನ್ಯೆಯಾದ ನನ್ನನ್ನು ಸ್ವೀಕರಿಸು' (ಎಂದು ಹೇಳಿದಳು).

ತಾಮೇವಂ ಭಾಷಮಾಣಾಂ ತು ಸಾಲ್ವಃ ಕಾಶೀಪತೇಃ ಸುತಾಮ್ ।
ಅತ್ಯಜದ್ ಭರತಶ್ರೇಷ್ಠ ಜೀರ್ಣಾಂ ತ್ವಚಮಿವೋರಗಃ ॥೨೪॥

ಎಲೈ ಭರತಶ್ರೇಷ್ಠನೇ, ಕಾಶೀಪತಿಯ ಮಗಳಾದ ಅವಳು ಹೀಗೆ ಹೇಳುತ್ತಿದ್ದರೂ ಸಾಲ್ವನು ಸರ್ಪವು ಜೀರ್ಣವಾದ ಚರ್ಮವನ್ನು ಬಿಡುವಂತೆ ಅವಳನ್ನು ಪರಿತ್ಯಜಿಸಿದನು.

ಏವಂ ಬಹುವಿಧೈರ್ವಾಕ್ಯೈರ್ಯಾಚ್ಯಮಾನಸ್ತಯಾऽನಘ ।
ನಾಶ್ರದ್ದಧತ್ ಸಾಲ್ವಪತಿಃ ಕನ್ಯಾಯಾಂ ಭರತರ್ಷಭ ॥೨೫॥

ಎಲೈ ಭರತರ್ಷಭನೇ, ಅನಘನೇ, ಹೀಗೆ ಬಹುವಿಧವಾದ ಮಾತುಗಳಿಂದ ಆ ಕನ್ಯೆಯು ಅವನನ್ನು ಬೇಡುತ್ತಿದ್ದರೂ ಸಾಲ್ವನು ಅವಳ ಮಾತುಗಳನ್ನು ನಂಬಲಿಲ್ಲ.

ತತಃ ಸಾ ಮನ್ಯುನಾऽऽವಿಷ್ಟಾ ಜ್ಯೇಷ್ಠಾ ಕಾಶೀಪತೇಃ ಸುತಾ ।
ಅಬ್ರವೀತ್ ಸಾಶ್ರುನಯನಾ ಬಾಷ್ಪವಿಹ್ವಲಯಾ ಗಿರಾ ॥೨೬॥

ತ್ವಯಾ ತ್ಯಕ್ತಾ ಗಮಿಷ್ಯಾಮಿ ಯತ್ರ ತತ್ರ ವಿಶಾಂಪತೇ ।
ತತ್ರ ಮೇ ಸಂತು ಗತಯಃ ಸಂತಃ ಸತ್ಯಂ ಯಥಾ ಧ್ರುವಮ್ ॥೨೭॥

ಆಗ ಕಾಶಿಪತಿಯ ಜ್ಯೇಷ್ಠ ಪುತ್ರಿಯಾದ ಅವಳು ಕೋಪದಿಂದ ಕೂಡಿದವಳಾಗಿ, ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು, ಬಾಷ್ಪದಿಂದ ಗದ್ಗದವಾದ ಕಂಠದಿಂದ– 'ಎಲೈ ರಾಜನೇ, ನಿನ್ನಿಂದ ತ್ಯಕ್ತಳಾಗಿ ನಾನು ಎಲ್ಲಿಗಾದರೂ ಹೋಗುವೆನು. ಅಲ್ಲಿಯೇ ನನಗೆ ಸಜ್ಜನರು ಹೇಳಿದಂತೆ ಶಾಶ್ವತವಾದ ಸತ್ಯದಂತೆ ಗತಿಯಾಗಲಿ' ಎಂದು ಹೇಳಿದಳು.

ಏವಂ ತಾಂ ಭಾಷಮಾಣಾಂ ತು ನೃಶಂಸಃ ಸಾಲ್ವರಾಟ್ ತದಾ ।
ಪರಿತತ್ಯಾಜ ಕೌರವ್ಯ ಕರುಣಂ ಪರಿದೇವಿನೀಮ್ ॥೨೮॥

ಎಲೈ ಕೌರವ್ಯನೇ, ಹೀಗೆ ಕರುಣಾಜನಕವಾಗಿ ಗೋಳಾಡುತ್ತಾ ಮಾತನಾಡುತ್ತಿದ್ದ ಅವಳನ್ನು ಕ್ರೂರಿಯಾದ ಸಾಲ್ವರಾಜನು ಆಗ ಪರಿತ್ಯಜಿಸಿದನು.

ಗಚ್ಛ ಗಚ್ಛೇತಿ ತಾಂ ಸಾಲ್ವಃ ಪುನಃ ಪುನರಭಾಷತ ।
ಬಿಭೇಮಿ ಭೀಷ್ಮಾತ್ ಸುಶ್ರೋಣಿ ತ್ವಂ ಚ ಭೀಷ್ಮಪರಿಗ್ರಹಃ ॥೨೯॥

ಎಲೌ ಸುಂದರಿಯೇ, ನೀನು ಭೀಷ್ಮನ ಪತ್ನಿ. ನಾನು ಭೀಷ್ಮರಿಗೆ ಹೆದರುತ್ತೇನೆ. ಆದ್ದರಿಂದ ಹೋಗು, ಹೋಗು ಎಂದು ಪುನಃ ಪುನಃ ಸಾಲ್ವನು ಹೇಳಿದನು.

ಏವಮುಕ್ತಾ ತು ಸಾ ತೇನ ಸಾಲ್ವೇನಾದೀರ್ಘದರ್ಶಿನಾ ।
ನಿಶ್ಚಕ್ರಾಮ ಪುರಾದ್ ದೀನಾ ರುದತೀ ಕುರರೀ ಯಥಾ ॥೩೦॥

ದೀರ್ಘದರ್ಶಿಯಲ್ಲದ ಸಾಲ್ವನಿಂದ ಹೀಗೆ ಹೇಳಲ್ಪಟ್ಟ ಅವಳು ಹೆಣ್ಣು ಜಿಂಕೆಯಂತೆ ಅಳುತ್ತಾ, ದೈನ್ಯದಿಂದ ಕೂಡಿದವಳಾಗಿ ನಗರದಿಂದ ಹೊರಬಂದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿಸಪ್ತತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

ಭೀಷ್ಮರಿಗೆ ಪ್ರತೀಕಾರವನ್ನು ಮಾಡಲು ಅಂಬೆಯಿಂದ ತಾಪಸಾಶ್ರಮಗಳಿಗೆ ಹೋಗಿ ತನ್ನ ವೃತ್ತಾಂತದ ಕಥನ.

ಭೀಷ್ಮಃ

ಸಾ ನಿಷ್ಕ್ರಮಂತೀ ನಗರಾತ್ ಚಿಂತಯಾಮಾಸ ಭಾರತ ॥೧॥

ಪೃಥಿವ್ಯಾಂ ನಾಸ್ತಿ ಯುವತಿರ್ವಿಷಮಸ್ಥತರಾ ಮಯಾ ।
ಬಂಧುಭಿರ್ವಿಪ್ರಹೀಣಾಽಸ್ಮಿ ಸಾಲ್ವೇನ ಚ ನಿರಾಕೃತಾ ॥೨॥

ಭೀಷ್ಮ– ಎಲೈ ಭಾರತನೇ, ಅವಳು ನಗರದಿಂದ ಹೊರಬರುತ್ತಾ, ಭೂಮಿಯಲ್ಲಿ ನನ್ನಷ್ಟು ಕಷ್ಟಕ್ಕೆ ಸಿಲುಕಿದ ಯುವತಿಯು ಯಾವಳೂ ಇಲ್ಲ. ನಾನು ಬಂಧುಗಳಿಂದಲೂ ರಹಿತಳಾಗಿದ್ದೇನೆ ಮತ್ತು ಸಾಲ್ವನಿಂದಲೂ ನಿರಾಕರಿಸಲ್ಪಟ್ಟಿದ್ದೇನೆ ಎಂದು ಚಿಂತಿಸಿದಳು.

ನ ಚ ಶಕ್ಯಂ ಪುನರ್ಗಂತುಂ ಮಯಾ ವಾರಣಸಾಹ್ವಯೇ ।
ಅನುಜ್ಞಾತಾ ತು ಭೀಷ್ಮೇಣ ಸಾಲ್ವಮುದ್ದಿಶ್ಯ ಕಾರಣಮ್ ॥೩॥

ಸಾಲ್ವನ ಹೆಸರನ್ನು ಹೇಳಿ, ಭೀಷ್ಮರಿಂದ ಅನುಮತಿಯನ್ನು ಪಡೆದು ಬಂದ ನಾನು ಇನ್ನೊಮ್ಮೆ ಹಸ್ತಿನಪುರಕ್ಕೆ ಹೋಗಲು ಸಾಧ್ಯವಿಲ್ಲ.

ಕಿಂ ನು ಗರ್ಹಾಮ್ಯಥಾತ್ಮಾನಮಥ ಭೀಷ್ಮಂ ದುರಾಸದಮ್ ।
ಆಹೋಸ್ವಿತ್ ಪಿತರಂ ಮೂಢಂ ಯೋ ಮೇಽಕಾರ್ಷೀತ್ ಸ್ವಯಂವರಮ್ ॥

ನಾನು ನನ್ನನ್ನೇ ನಿಂದಿಸಿಕೊಳ್ಳಲೋ ಅಥವಾ ದುರಾತ್ಮನಾದ ಭೀಷ್ಮನನ್ನು ನಿಂದಿಸಲೋ ಅಥವಾ ಮೂಢನಾಗಿ ನನ್ನ ಸ್ವಯಂವರವನ್ನು ಏರ್ಪಡಿಸಿದ ನನ್ನ ತಂದೆಯನ್ನು ನಿಂದಿಸಲೋ?

ಮಮಾಯಂ ಸ್ವಕೃತೋ ದೋಷೋ ಯಾಽಹಂ ಭೀಷ್ಮರಥಾತ್ ತದಾ ।
ಪ್ರವೃತ್ತೇ ವೈಶಸೇ ಯುದ್ಧೇ ಸಾಲ್ವಾರ್ಥಂ ನಾಪತಂ ಪುರಾ ॥೫॥

ತಸ್ಯೇಯಂ ಫಲನಿರ್ವೃತ್ತಿರ್ಯದಾಪನ್ನಾಽಸ್ಮಿ ಮೂಢವತ್ ॥೬॥

ನಾನು ಆ ಹಿಂಸಾತ್ಮಕ ಯುದ್ಧವು ನಡೆಯುತ್ತಿದ್ದಾಗ ಸಾಲ್ವನಿಗೋಸ್ಕರವಾಗಿ ಭೀಷ್ಮರ ರಥದಿಂದ ಇಳಿದು ಬರದಿದ್ದುದು ನನ್ನ ದೋಷ. ಅದರ ಈ ಫಲವನ್ನು ಮೂಢಳಂತೆ ಈಗ ನಾನು ಅನುಭವಿಸುತ್ತಿದ್ದೇನೆ.

ಧಿಗ್ ಭೀಷ್ಮಂ ಧಿಕ್ ಚ ಮೇ ಮಂದಂ ಪಿತರಂ ಮೂಢಚೇತಸಮ್ ॥

ಯೇನಾಹಂ ವೀರ್ಯಶುಲ್ಕೇತಿ ಪಣ್ಯಸ್ತ್ರೀವತ್ ಪ್ರವೇಶಿತಾ ॥೮॥

ಭೀಷ್ಮನಿಗೆ ಧಿಕ್ಕಾರವಿರಲಿ. ಏನೂ ತಿಳಿಯದ ನನ್ನ ತಂದೆಗೆ ಧಿಕ್ಕಾರವಿರಲಿ. ಏಕೆಂದರೆ ನನ್ನನ್ನು ವೀರ್ಯಶುಲ್ಕಳೆಂದು ಹೇಳಿ ಮಾರಾಟಕ್ಕಿದ್ದ ವನಿತೆಯಂತೆ ಸ್ವಯಂವರ ಸಭೆಗೆ ಪ್ರವೇಶ ಮಾಡುವಂತೆ ಮಾಡಿದನು.

ಧಿಙ್ ಮಾಂ ಧಿಕ್ ಸಾಲ್ವರಾಜಾನಂ ಧಿಗ್ ಧಾತಾರಮಥಾಪಿ ವಾ ।
ಯೇಷಾಂ ದುರ್ನೀತಭಾವೇನ ಪ್ರಾಪ್ತಾಽಸ್ಮ್ಯಾಪದಮುತ್ತಮಾಮ್ ॥೯॥

ನನಗೇ ಧಿಕ್ಕಾರವಿರಲಿ. ಸಾಲ್ವರಾಜನಿಗೆ ಧಿಕ್ಕಾರವಿರಲಿ ಅಥವಾ ಇಂತಹ ದುರ್ನೀತಿಯಿಂದ ಇಂತಹ ಘೋರವಾದ ಆಪತ್ತನ್ನು ತಂದೊಡ್ಡಿದ ಆ ಬ್ರಹ್ಮನಿಗೇ ಧಿಕ್ಕಾರವಿರಲಿ.

ಸರ್ವಥಾ ಭಾಗಧೇಯಾನಿ ಸ್ವಾನಿ ಪ್ರಾಪ್ನೋತಿ ಮಾನವಃ ।
ಅನಯಸ್ಯಾಸ್ಯ ತು ಮುಖಂ ಭೀಷ್ಮಃ ಶಾಂತನವೋ ಮಮ ॥೧೦॥

ಮನುಷ್ಯನು ತನ್ನ ಪುಣ್ಯ-ಪಾಪಗಳ ಫಲವನ್ನು ಖಂಡಿತವಾಗಿ ಅನುಭವಿಸುತ್ತಾನೆ. ನನಗೆ ಉಂಟಾದ ಈ ಆಪತ್ತಿಗೆ ಮುಖ್ಯವಾದ ಕಾರಣವೆಂದರೆ ಶಂತನುಪುತ್ರನಾದ ಭೀಷ್ಮ.

ಸಾ ಭೀಷ್ಮೇ ಪ್ರತಿಕರ್ತವ್ಯಮಹಂ ಪಶ್ಯಾಮಿ ಸಾಂಪ್ರತಮ್ ।
ತಪಸಾ ವಾ ಯುಧಾ ವಾಽಪಿ ದುಃಖಹೇತುಃ ಸ ಮೇ ಮತಃ ॥೧೧॥

ಕೋ ನು ಭೀಷ್ಮಂ ಯುಧಾ ಜೇತುಮುತ್ಸಹೇತ ಮಹೀಪತಿಃ ॥೧೨॥

ನನ್ನ ದುಃಖಕ್ಕೆ ಕಾರಣನಾದವನು ಭೀಷ್ಮನೆಂದು ನನ್ನ ಅಭಿಪ್ರಾಯ. ತಪಸ್ಸಿನಿಂದಾಗಲೀ ಅಥವಾ ಯುದ್ಧದಿಂದಾಗಲೀ ನಾನು ಸದ್ಯದಲ್ಲಿ ಭೀಷ್ಮನಿಗೆ ಪ್ರತೀಕಾರವನ್ನು ಮಾಡಬೇಕು. ಯಾವ ರಾಜನು ಯುದ್ಧದಲ್ಲಿ ಭೀಷ್ಮನನ್ನು ಗೆಲ್ಲಲು ಆಸಕ್ತನಾದಾನು?

ಏವಂ ಸಾ ಪರಿನಿಶ್ಚಿತ್ಯ ಜಗಾಮ ನಗರಾದ್ ಬಹಿಃ ।
ಆಶ್ರಮಂ ಪುಣ್ಯಶೀಲಾನಾಂ ತಾಪಸಾನಾಂ ಮಹಾತ್ಮನಾಮ್ ॥೧೩॥

ಹೀಗೆ ನಿಶ್ಚಯ ಮಾಡಿ, ಅವಳು ನಗರದ ಹೊರಗೆ ಬಂದು ಪುಣ್ಯವಂತರೂ, ಮಹಾತ್ಮರೂ ಆದ ತಪಸ್ವಿಗಳ ಆಶ್ರಮವನ್ನು ಸೇರಿದಳು.

ತತಸ್ತಾಮವಸದ್ ರಾತ್ರಿಂ ತಾಪಸೈಃ ಪರಿಪಾಲಿತಾ ॥೧೪॥

ಆಚಖ್ಯೌ ಚ ಯಥಾವೃತ್ತಂ ಸರ್ವಮಾತ್ಮನಿ ಭಾರತ ।
ವಿಸ್ತರೇಣ ಮಹಾಬಾಹೋ ನಿಖಿಲೇನ ಶುಚಿಸ್ಮಿತಾ ॥೧೫॥

ಹರಣಂ ಚ ವಿಸರ್ಗಂ ಚ ಸಾಲ್ವೇನ ಚ ವಿಸರ್ಜನಮ್ ।

ಎಲೈ ಭಾರತನೇ, ಆ ತಾಪಸರಿಂದ ರಕ್ಷಿತಳಾಗಿ ಒಂದು ರಾತ್ರಿಯನ್ನು ಅಲ್ಲಿ ಕಳೆದಳು. ಅನಂತರ ನಡೆದ ಎಲ್ಲ ತನ್ನ ವೃತ್ತಾಂತವನ್ನು ವಿಸ್ತಾರವಾಗಿ ಏನೂ ಬಿಡದೆ , ಶುಚಿಸ್ಮಿತೆಯಾದ ಅವಳು ತಾಪಸಿಗಳಲ್ಲಿ ತಿಳಿಸಿದಳು. ಭೀಷ್ಮರಿಂದ ಹರಣ, ಭೀಷ್ಮರಿಂದ ಬಿಡುಗಡೆ, ಸಾಲ್ವನಿಂದ ಪರಿತ್ಯಾಗ ಎಲ್ಲವನ್ನೂ ಹೇಳಿದಳು.

ತತಸ್ತತ್ರ ಮಹಾನಾಸೀದ್ ಬ್ರಾಹ್ಮಣಃ ಸಂಶಿತವ್ರತಃ ॥೧೬॥

ಶೈಖಾವತ್ಯಸ್ತಪೋವೃದ್ಧಃ ಶಾಸ್ತ್ರೇ ಚಾರಣ್ಯಕೇ ಗುರುಃ ।
ಆರ್ತಾಂ ತಾಮಾಹ ಸ ಮುನಿಃ ಶೈಖಾವತ್ಯೋ ಮಹಾತಪಾಃ ॥೧೭॥

ನಿಃಶ್ವಸಂತೀಂ ಸ ತಾಂ ಬಾಲಾಂ ದುಃಖಶೋಕಪರಾಯಣಾಮ್ ॥೧೮॥

ಆ ಆಶ್ರಮದಲ್ಲಿ ಶೈಖಾವತ್ಯನೆಂಬ ಒಳ್ಳೆಯ ವ್ರತಧಾರಿಯಾದ ತಪೋವೃದ್ಧನಾದ, ವೇದದಲ್ಲಿಯೂ ಮತ್ತು ಶಾಸ್ತ್ರದಲ್ಲಿಯೂ ಪರಿಣತನಾದ ಬ್ರಾಹ್ಮಣನಿದ್ದನು. ದುಃಖ-ಶೋಕಪರಾಯಣಳಾಗಿ, ಆರ್ತಳಾಗಿ, ನಿಟ್ಟುಸಿರನ್ನು ಬಿಡುತ್ತಿದ್ದ ಆ ಕನ್ಯೆಯನ್ನು ಕುರಿತು ಮಹಾತಪಸ್ವಿಯಾದ ಶೈಖಾವತ್ಯ ಮುನಿಯು ಹೇಳಿದನು.

ಏವಂ ಗತೇ ತು ಕಿಂ ಭದ್ರೇ ಶಕ್ಯಂ ಕರ್ತುಂ ತಪಸ್ವಿಭಿಃ ।
ಆಶ್ರಮಸ್ಥೈರ್ಮಹಾಭಾಗೈಃ ತಪೋಯುಕ್ತೈರ್ಮಹಾತ್ಮಭಿಃ ॥೧೯॥

ಎಲೌ ಮಂಗಳಸ್ವರೂಪಳೇ, ಪರಿಸ್ಥಿತಿಯು ಹೀಗಿರುವಾಗ ಆಶ್ರಮದಲ್ಲಿರುವ ತಪಸ್ವಿಗಳಾದ ಮಹಾನುಭಾವರಿಂದ ಏನು ಮಾಡಲು ಸಾಧ್ಯ ? (ಎಂದು ಕೇಳಿದನು).

ಸಾ ತ್ವೇನಮಬ್ರವೀದ್ ರಾಜನ್ ಕ್ರಿಯತಾಂ ಮದನುಗ್ರಹಃ ।
ಪ್ರವ್ರಾಜಿತುಮಿಹೇಚ್ಛಾಮಿ ತಪಸ್ತಪ್ಸ್ಯಾಮಿ ದುಶ್ಚರಮ್ ॥೨೦॥

ಎಲೈ ರಾಜನೇ, ಅವಳು ಅವನನ್ನು ಕುರಿತು ನನಗೆ ಅನುಗ್ರಹವನ್ನು ಮಾಡಿ, ನಾನು ಸಂನ್ಯಾಸವನ್ನು ತೆಗೆದುಕೊಂಡು ದುಶ್ಚರವಾದ ತಪಸ್ಸನ್ನು ಮಾಡುವೆನು ಎಂದು ಹೇಳಿದಳು.

ಮಯೈವ ತಾನಿ ಕರ್ಮಾಣಿ ಪೂರ್ವದೇಹೇಷು ಮೂಢಯಾ ।
ಕೃತಾನಿ ನೂನಂ ಪಾಪಾನಿ ತೇಷಾಮೇತತ್ ಫಲಂ ಧ್ರುವಮ್ ॥೨೧॥

ಇದೆಲ್ಲಾ ನಾನು ಮೂಢಳಾಗಿ ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪದ ಫಲವೆಂಬುದು ನಿಶ್ಚಿತವಾದುದು.

ನೋತ್ಸಹೇಽಹಂ ಪುನರ್ಗಂತುಂ ಸ್ವಜನಂ ಪ್ರತಿ ತಾಪಸಾಃ ।
ಪ್ರತ್ಯಾಖ್ಯಾತಾ ನಿರಾನಂದಾ ಸಾಲ್ವೇನ ಚ ನಿರಾಕೃತಾ ॥೨೨॥

ಎಲೈ ತಾಪಸರೇ, ಬಂಧುಗಳಿಂದಲೂ ಮತ್ತು ಸಾಲ್ವನಿಂದಲೂ ನಿರಾಕೃತಳಾದ ನಾನು ಯಾವ ಸಂತೋಷವೂ ಇಲ್ಲದೆ ಇನ್ನೊಮ್ಮೆ ನನ್ನ ಜನರ ಬಳಿಗೆ ಹೋಗಲು ಇಷ್ಟಪಡುವುದಿಲ್ಲ.

ಉಪದಿಷ್ಟಮಿಹೇಚ್ಛಾಮಿ ತಪಸೇ ವೀತಕಲ್ಮಷಾಃ ।
ಯುಷ್ಮಾಭಿರ್ದೇವಸಂಕಾಶೈಃ ಕೃಪಾ ಭವತು ವೋ ಮಯಿ ॥೨೩॥

ದೇವತೆಗಳ ಕಾಂತಿಯನ್ನು ಹೊಂದಿದವರೂ, ದೋಷದೂರರೂ ಆದ ನೀವು ನನಗೆ ತಪಸ್ಸನ್ನು ಉಪದೇಶ ಮಾಡಬೇಕೆಂದು ನಾನು ಬಯಸುತ್ತೇನೆ. ನೀವು ನನ್ನ ಮೇಲೆ ಕೃಪೆಯನ್ನು ತೋರಿಸಿ ಎಂದು ಹೇಳಿದಳು.

ಸ ತಾಮಾಶ್ವಾಸಯತ್ ಕನ್ಯಾಂ ದೃಷ್ಟಾಂತಾಗಮಹೇತುಭಿಃ ।
ಸಾಂತ್ವಯಾಮಾಸ ಕಾರ್ಯಂ ಚ ಪ್ರತಿಜಜ್ಞೇ ದ್ವಿಜೈಃ ಸಹ ॥೨೪॥

ಆ ತಪಸ್ವಿಯು ಅನೇಕ ದೃಷ್ಟಾಂತಗಳನ್ನು ಮತ್ತು ಆಗಮಗಳನ್ನೂ ಹೇಳಿ, ಅವಳನ್ನು ಸಮಾಧಾನಪಡಿಸಿ, ಉಳಿದ ಬ್ರಾಹ್ಮಣರ ಜೊತೆಯಲ್ಲಿ ಅವಳಿಗೆ ಉಪಕಾರವನ್ನು ಮಾಡುವುದಾಗಿ ಪ್ರತಿಜ್ಞೆಯನ್ನು ಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುಃಸಪ್ತತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೈದನೆಯ ಅಧ್ಯಾಯ

ತಾಪಸರ ಆಶ್ರಮಕ್ಕೆ ಅಂಬೆಯ ಮಾತಾಮಹನಾದ ಹೋತ್ರವಾಹನನ ಆಗಮನ ಮತ್ತು ಪರಶುರಾಮರಿಗೆ ಶರಣಾಗತಳಾಗುವಂತೆ ಪ್ರೇರಣೆ.

ಭೀಷ್ಮಃ

ತತಸ್ತೇ ತಾಪಸಾಃ ಸರ್ವೇ ಕಾರ್ಯವಂತೋऽಭವಂಸ್ತದಾ ।
ತಾಂ ಕನ್ಯಾಂ ಚಿಂತಯಂತಸ್ತೇ ಕಿಂ ಕಾರ್ಯಮಿತಿ ಧರ್ಮಿಣಃ ॥೧॥

ಭೀಷ್ಮ– ಅನಂತರ ಆ ತಾಪಸಿಗಳೆಲ್ಲರೂ ಆ ಕನ್ಯೆಗೆ ಸಹಾಯ ಮಾಡಲು ಉದ್ಯುಕ್ತರಾದರು. ಧರ್ಮಜ್ಞರಾದ ಅವರು ಆ ಕನ್ಯೆಗೆ ಏನು ಮಾಡಬೇಕೆಂದು ಚಿಂತಿಸಿದರು.

ಕೇಚಿದಾಹುಃ ಪಿತುರ್ವೇಶ್ಮ ನೀಯತಾಮಿತಿ ತಾಪಸಾಃ ।
ಕೇಚಿದಸ್ಮದುಪಾಲಂಭೇ ಮತಿಂ ಚಕ್ರುರ್ದ್ವಿಜೋತ್ತಮಾಃ ॥೨॥

ಕೆಲವು ತಾಪಸರು ಅವಳನ್ನು ತಂದೆಯ ಮನೆಗೆ ಕಳುಹಿಸಬೇಕೆಂದು ಚಿಂತಿಸಿದರು. ಇನ್ನು ಕೆಲವು ಬ್ರಾಹ್ಮಣಶ್ರೇಷ್ಠರು ಅವಳನ್ನು ಹರಣ ಮಾಡಿದ ನನ್ನನ್ನೇ ನಿಂದಿಸಿದರು.

ಕೇಚಿತ್ ಸಾಲ್ವಪತಿಂ ಗತ್ವಾ ನಿಯೋಕ್ಷ್ಯಾಮೀತಿ ಮೇನಿರೇ ।
ನೇತಿ ಕೇಚಿದ್ ವ್ಯವಸ್ಯಂತಿ ಪ್ರತ್ಯಾಖ್ಯಾತಾ ಯಥಾ ಹಿ ಸಾ ॥೩॥

ಇನ್ನು ಕೆಲವರು ಸಾಲ್ವರಾಜನ ಬಳಿಗೆ ಹೋಗಿ, ಅವನಿಗೆ ಒತ್ತಾಯ ಮಾಡುವುದಾಗಿ ಹೇಳಿದರು. ಇನ್ನು ಕೆಲವರು ಅವನಿಂದ ಹಾಗೆ ನಿರಾಕೃತಳಾದ್ದರಿಂದ ಹಾಗೆ ಮಾಡಬಾರದು ಎಂದು ನಿಶ್ಚಯಿಸಿದರು.

ಏವಂ ಗತೇ ತು ಕಿಂ ಶಕ್ಯಂ ಭದ್ರೇ ಕರ್ತುಂ ಮನೀಷಿಭಿಃ ।
ಪುನರೂಚುಶ್ಚ ತೇ ಸರ್ವೇ ತಾಪಸಾಃ ಸಂಶಿತವ್ರತಾಃ ॥೪॥

ಪರಿಸ್ಥಿತಿಯು ಹೀಗಿರುವಾಗ ಎಲೌ ಮಂಗಳಸ್ವರೂಪಳೇ, ವಿವೇಕಿಗಳಾದ ನಾವು ಏನು ಮಾಡಲು ಸಾಧ್ಯ ಎಂದು ಯೋಚಿಸಿ ಒಳ್ಳೆಯ ವ್ರತಧಾರಿಗಳಾದ ಆ ತಾಪಸರೆಲ್ಲರೂ ಪುನಃ ಮಾತನಾಡಿದರು.

ಅಲಂ ಪ್ರವ್ರಜಿತೇನೇಹ ಭದ್ರೇ ಶೃಣು ಹಿತಂ ವಚಃ ।
ಇತೋ ಗಚ್ಛಸ್ವ ಭದ್ರಂ ತೇ ಪಿತುರೇವ ನಿವೇಶನಮ್ ॥೫॥

ಮಂಗಳಸ್ವರೂಪಳೇ, ಸಂನ್ಯಾಸವು ಬೇಡ. ನಮ್ಮ ಹಿತವಚನವನ್ನು ಕೇಳು. ನಿನಗೆ ಮಂಗಳವಾಗಲಿ, ನಿನ್ನ ತಂದೆಯ ಮನೆಗೇ ಹೋಗುವವಳಾಗು.

ಪ್ರತಿವಕ್ಷ್ಯತಿ ರಾಜಾಽಸೌ ಪಿತಾ ತೇ ಯದನಂತರಮ್ ।
ತತ್ರ ವತ್ಸ್ಯಸಿ ಕಲ್ಯಾಣಿ ಸುಖಂ ಸರ್ವಗುಣಾನ್ವಿತಾ ॥೬॥

ಅನಂತರ ನಿನ್ನ ತಂದೆಯು ಮುಂದೆ ಮಾಡಬೇಕಾದ ಕಾರ್ಯವನ್ನು ತಿಳಿಸುವನು. ಎಲೌ ಕಲ್ಯಾಣಿಯೇ, ಎಲ್ಲ ಗುಣಗಳಿಂದ ಕೂಡಿದವಳಾಗಿ, ನೀನು ಅಲ್ಲಿ ಸುಖವಾಗಿ ವಾಸವನ್ನು ಮಾಡುವಿ.

ನ ಚ ತೇಽನ್ಯಾ ಗತಿರ್ನ್ಯಾಯ್ಯಾ ಭವೇದ್ ಭದ್ರೇ ಯಥಾ ಪಿತಾ ।
ಪತಿರ್ವಾಽಪಿ ಗತಿರ್ನಾರ್ಯಾಃ ಪಿತಾ ವಾ ವರವರ್ಣಿನಿ ॥೭॥

ಎಲೌ ಮಂಗಳಸ್ವರೂಪಳೇ, ನಿನಗೆ ತಂದೆಯಂತಹ ನ್ಯಾಯವಾದ ಬೇರೆ ಗತಿಯು ಇಲ್ಲ. ಎಲೌ ಸುಂದರಿಯೇ, ನಾರಿಗೆ ಪತಿಯಾಗಲೀ ಅಥವಾ ತಂದೆಯಾಗಲೀ ಗತಿ.

ಗತಿಃ ಪತಿಃ ಸಮಸ್ಥಾಯಾ ವಿಷಮೇ ತು ಪಿತಾ ಗತಿಃ ।
ಪ್ರವ್ರಜ್ಯಾ ಹಿ ಸುದುಃಖೇಯಂ ಸುಕುಮಾರ್ಯಾ ವಿಶೇಷತಃ ॥೮॥

ರಾಜಪುತ್ರ್ಯಾಃ ಪ್ರಕೃತ್ಯಾ ಚ ಕುಮಾರ್ಯಾಸ್ತವ ಭಾಮಿನಿ ॥೯॥

ಆವಳು ಚೆನ್ನಾಗಿದ್ದರೆ ಪತಿಯು ಗತಿ. ಸಂಕಟಕ್ಕೆ ಸಿಲುಕಿದರೆ ತಂದೆಯು ಗತಿ. ಎಲೌ ಭಾಮಿನಿಯೇ (ಕೋಪವುಳ್ಳವನಿತೆಯೇ) ಸುಕುಮಾರಿಯೂ, ರಾಜಪುತ್ರಿಯೂ ಆದ ನಿನಗೆ ಸಂನ್ಯಾಸವು ಬಹಳ ದುಃಖಕರವಾದುದು.

ಭದ್ರೇ ದೋಷಾ ಹಿ ವಿದ್ಯಂತೇ ಬಹವೋ ವರವರ್ಣಿನಿ ।
ಆಶ್ರಮೇ ವೈ ವಸಂತ್ಯಾಸ್ತೇ ನ ಭವೇಯುಃ ಪಿತುರ್ಗೃಹೇ ॥೧೦॥

ಎಲೌ ಸುಂದರಿಯೇ, ಮಂಗಳಸ್ವರೂಪಳೇ, ಆಶ್ರಮದಲ್ಲಿ ವಾಸಿಸುವ ನಿನಗೆ ಬಹಳ ದೋಷಗಳು ಉಂಟಾಗುತ್ತವೆ. ತಂದೆಯ ಮನೆಯಲ್ಲಿ ಆ ದೋಷಗಳು ಇರುವುದಿಲ್ಲ.

ತತಸ್ತ್ವನ್ಯೇऽಬ್ರುವನ್ ವಾಕ್ಯಂ ತಾಪಸಾಸ್ತಾಂ ತಪಸ್ವಿನೀಮ್ ॥೧೧॥

ತ್ವಾಮಿಹೈಕಾಕಿನೀಂ ದೃಷ್ಟ್ವಾ ನಿರ್ಜನೇ ಗಹನೇ ವನೇ ।
ಪ್ರಾರ್ಥಯಿಷ್ಯಂತಿ ರಾಜಾನಸ್ತಸ್ಮಾನ್ನೈವಂ ಮನಃ ಕೃಥಾಃ ॥೧೨॥

ಆಗ ಇನ್ನು ಕೆಲವು ತಪಸ್ವಿಗಳು ಶೋಚನೀಯಳಾದ ಅವಳನ್ನು ಕುರಿತು, ನಿರ್ಜನವಾದ ಕಾಡಿನಲ್ಲಿ ನೀನು ಒಬ್ಬಳೇ ಇರುವುದನ್ನು ನೋಡಿ ರಾಜರು ನಿನ್ನನ್ನು ಪ್ರಾರ್ಥಿಸುವರು. ಆದ್ದರಿಂದ ಹೀಗೆ ಮನಸ್ಸನ್ನು ಮಾಡಬೇಡ ಎಂದು ಹೇಳಿದರು.

ಅಂಬಾ

ನ ಶಕ್ಯಂ ಕಾಶಿನಗರಂ ಪುನರ್ಗಂತುಂ ಪಿತುರ್ಗೃಹಾನ್ ।
ಅವಜ್ಞಾತಾ ಭವಿಷ್ಯಾಮಿ ಬಾಂಧವಾನಾಂ ನ ಸಂಶಯಃ ॥೧೩॥

ಉಷಿತಾ ಹ್ಯನ್ಯಥಾ ಬಾಲ್ಯೇ ಪಿತುರ್ವೇಶ್ಮನಿ ತಾಪಸಾಃ ॥೧೪॥

ಅಂಬಾ– ನಾನು ಕಾಶಿಗೆ ಹೋಗಿ ಪುನಃ ತಂದೆಯ ಮನೆಗೆ ಹೋಗಲು ಸಾಧ್ಯವಿಲ್ಲ. ಎಲೈ ತಾಪಸರೇ, ನಾನು ತಂದೆಯ ಮನೆಗೆ ಹೋಗಿ, ಬಾಲ್ಯದಲ್ಲಿ ಪತಿರಹಿತಳಾಗಿದ್ದರೆ ನನ್ನ ಬಾಂಧವರಿಂದ ಅಪಮಾನಕ್ಕೆ ಗುರಿಯಾಗುವುದರಲ್ಲಿ ಸಂಶಯವಿಲ್ಲ.

ನಾಹಂ ಗಮಿಷ್ಯೇ ಭದ್ರಂ ವಸ್ತತ್ರ ಯತ್ರ ಪಿತಾ ಮಮ ।
ತಪಸ್ತಪ್ತುಮಭೀಪ್ಸಾಮಿ ತಾಪಸೈಃ ಪರಿಪಾಲಿತಾ ॥೧೫॥

ಯಥಾ ಪರೇऽಪಿ ಲೋಕೇ ನ ಸ್ಯಾದೇವಂ ಮಹಾತ್ಯಯಮ್ ॥೧೬॥

ದೌರ್ಭಾಗ್ಯಂ ಬ್ರಾಹ್ಮಣಶ್ರೇಷ್ಠಾಸ್ತಸ್ಮಾತ್ ತಪ್ಸ್ಯೇ ಮಹಂ ತಪಃ ॥೧೭॥

ಎಲೈ ತಾಪಸರೇ, ನಿಮಗೆ ಮಂಗಳವಾಗಲಿ. ನನ್ನ ತಂದೆಯ ಮನೆಗೆ ನಾನು ಹೋಗುವುದಿಲ್ಲ. ತಾಪಸರಾದ ನಿಮ್ಮಿಂದ ರಕ್ಷಿತಳಾಗಿ ತಪಸ್ಸನ್ನು ಆಚರಿಸಲು

ಬಯಸುತ್ತೇನೆ. ಎಲೈ ಬ್ರಾಹ್ಮಣಶ್ರೇಷ್ಠರೇ, ಇಂತಹ ದೌರ್ಭಾಗ್ಯವು ನನಗೆ ಪರಲೋಕದಲ್ಲಾದರೂ ಆಗಬಾರದು. ಆದ್ದರಿಂದ ನಾನು ತಪಸ್ಸನ್ನು ಮಾಡುವೆನು ಎಂದು ಹೇಳಿದಳು.

ಇತ್ಯೇವಂ ತೇಷು ವಿಪ್ರೇಷು ಚಿಂತಯತ್ಸು ಯಥಾತಥಮ್ ।
ರಾಜರ್ಷಿಸ್ತದ್ವನಂ ಪ್ರಾಪ್ತಸ್ತಪಸ್ವೀ ಹೋತ್ರವಾಹನಃ ॥೧೮॥

ತಾಂ ತಥಾಭಾವಿನೀಂ ದೃಷ್ಟ್ವಾ ಶ್ರುತ್ವಾ ಚೋದ್ವಿಗ್ನಮಾನಸಃ ॥೧೯॥

ಹೀಗೆ ಆ ಬ್ರಾಹ್ಮಣರು ಏನು ಮಾಡಬೇಕೆಂದು ಚಿಂತಿಸುತ್ತಿರುವಷ್ಟರಲ್ಲಿ ತಪಸ್ವಿಯಾದ ಹೋತ್ರವಾಹನನು ಆ ಆಶ್ರಮಕ್ಕೆ ಬಂದನು. ಅಂಬೆಯನ್ನು ನೋಡಿ, ಅವಳ ಅವಸ್ಥೆಯನ್ನು ಕೇಳಿ ಅವನು ಉದ್ವೇಗಗೊಂಡನು.

ತತಸ್ತೇ ತಾಪಸಾಃ ಸರ್ವೇ ಪೂಜಯಂತಿ ಸ್ಮ ತಂ ನೃಪಮ್ ।
ಪೂಜಾಭಿಃ ಸ್ವಾಗತಾದ್ಯಾಭಿರಾಸನೇನೋದಕೇನ ಚ ॥೨೦॥

ಆಗ ಆ ತಾಪಸರೆಲ್ಲರೂ ಸ್ವಾಗತ, ಆಸನ, ಅರ್ಘ್ಯಗಳಿಂದ ಆ ಹೋತ್ರವಾಹನ ರಾಜನನ್ನು ಪೂಜಿಸಿದರು.

ತಸ್ಯೋಪವಿಷ್ಟಸ್ಯ ಸತೋ ವಿಶ್ರಾಂತಸ್ಯೋಪಶೃಣ್ವತಃ ।
ಪುನರೇವ ಕಥಾಂ ಚಕ್ರುಃ ಕನ್ಯಾಂ ಪ್ರತಿ ವನೌಕಸಃ ॥೨೧॥

ಅವನು ವಿಶ್ರಾಂತಿಯನ್ನು ತೆಗೆದುಕೊಂಡು ಕುಳಿತುಕೊಂಡ ಮೇಲೆ ಆ ವನವಾಸಿಗಳೆಲ್ಲರೂ ಪುನಃ ಆ ಕನ್ಯೆಯ ಕಥೆಯನ್ನೆಲ್ಲಾ ಹೇಳಿದರು.

ಅಂಬಾಯಾಸ್ತಾಂ ಕಥಾಂ ಶ್ರುತ್ವಾ ಕಾಶಿರಾಜಸ್ಯ ಚ ಭಾರತ ।
ರಾಜರ್ಷಿಃ ಸ ಮಹಾತೇಜಾ ಬಭೂವೋದ್ವಿಗ್ನಮಾನಸಃ ॥೨೨॥

ಎಲೈ ಭಾರತನೇ, ಕಾಶಿರಾಜನ ಮಗಳಾದ ಅಂಬೆಯ ಆ ಕಥೆಯನ್ನು ಕೇಳಿ ರಾಜರ್ಷಿಯೂ, ಮಹಾತೇಜಸ್ವಿಯೂ ಆದ ಅವನು ಮನಸ್ಸಿನಲ್ಲಿ ಬಹಳ ಸಂಕಟಪಟ್ಟನು.

ತಾಂ ತಥಾವಾದಿನೀಂ ಶ್ರುತ್ವಾ ದೃಷ್ಟ್ವಾ ಚ ಸ ಮಹಾತಪಾಃ ।
ರಾಜರ್ಷಿಃ ಕೃಪಯಾऽऽವಿಷ್ಟೋ ಮಹಾತ್ಮಾ ಹೋತ್ರವಾಹನಃ ॥೨೩॥

ಸ ವೇಪಮಾನ ಉತ್ಥಾಯ ಮಾತುಸ್ತಸ್ಯಾಃ ಪಿತಾ ತದಾ ।
ತಾಂ ಕನ್ಯಾಮಂಕಮಾರೋಪ್ಯ ಪರ್ಯಾಶ್ವಾಸಯತ ಪ್ರಭೋ ॥೨೪॥

ಹಾಗೆ ಮಾತನಾಡುತ್ತಿದ್ದ ಅವಳನ್ನು ನೋಡಿ ಮತ್ತು ಕೇಳಿ ಆ ಮಹಾತಪಸ್ವಿಯೂ, ಮಹಾತ್ಮನೂ, ರಾಜರ್ಷಿಯೂ ಆದ ಹೋತ್ರವಾಹನನು ಕೃಪೆಯಿಂದ ಕೂಡಿದವನಾಗಿ, ವಯೋನಿಮಿತ್ತದಿಂದ ನಡುಗುತ್ತಾ ಎದ್ದು, ಅವಳ ತಾಯಿಯ ತಂದೆಯಾದ ಅವನು ಅವಳನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಸಮಾಧಾನಪಡಿಸಿದನು.

ಸ ತಾಮಪೃಚ್ಛತ್ ಕಾರ್ತ್ಸ್ನ್ಯೇನ ವ್ಯಸನೋತ್ಪತ್ತಿಮಾದಿತಃ ।
ಸಾ ಚ ತಸ್ಮೈ ಯಥಾವೃತ್ತಂ ವಿಸ್ತರೇಣ ನ್ಯವೇದಯತ್ ॥೨೫॥

ಅವನು ಇನ್ನೊಮ್ಮೆ ಅವಳ ದುಃಖೋತ್ಪತ್ತಿಗೆ ಕಾರಣವನ್ನು ಸಮಗ್ರವಾಗಿ ಕೇಳಿದನು. ಅವಳಾದರೂ ಎಲ್ಲವನ್ನೂ ವಿಸ್ತಾರವಾಗಿ ನಡೆದಂತೆಯೇ ನಿವೇದಿಸಿದಳು.

ತತಃ ಸ ರಾಜರ್ಷಿರಭೂದ್ ದುಃಖಶೋಕಸಮನ್ವಿತಃ ।
ಕಾರ್ಯಂ ಚ ಪ್ರತಿಪೇದೇ ತನ್ಮನಸಾ ಸುಮಹಾತಪಾಃ ॥೨೬॥

ಅಬ್ರವೀದ್ ವೇಪಮಾನಶ್ಚ ಕನ್ಯಾಮಾರ್ತಾಂ ಸುದುಃಖಿತಾಮ್ ॥೨೭॥

ಆಗ ಆ ರಾಜರ್ಷಿಯು ದುಃಖಶೋಕಸಮನ್ವಿತನಾದನು. ಆ ಮಹಾತಪಸ್ವಿಯು ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿ, ನಡುಗುತ್ತಾ ಆರ್ತಳೂ, ದುಃಖಿತಳೂ ಆದ ಆ ಕನ್ಯೆಯನ್ನು ಕುರಿತು ಹೇಳಿದನು.

ಮಾ ಗಾಃ ಪಿತೃಗೃಹಂ ಭದ್ರೇ ಮಾತುಸ್ತೇ ಜನಕೋ ಹ್ಯಹಮ್ ॥೨೮॥

ದುಃಖಂ ಛೇತ್ಸ್ಯಾಮಿ ತೇऽಹಂ ವೈ ಮಯಿ ವರ್ತಸ್ವ ಪುತ್ರವತ್ ।
ಪರ್ಯಾಪ್ತಂ ತೇ ತಪಃ ಪುತ್ರಿ ಯದೇವಂ ಪರಿಶುಷ್ಯಸಿ ॥೨೯॥

ಮಂಗಳಸ್ವರೂಪಳೇ, ನಾನು ನಿನ್ನ ತಾಯಿಯ ತಂದೆ. ನಿನ್ನ ತಂದೆಯ ಮನೆಗೆ ಹೋಗಬೇಡ. ನಾನು ನಿನ್ನ ದುಃಖವನ್ನು ಪರಿಹರಿಸುವೆನು. ನನ್ನ ಜೊತೆಯಲ್ಲಿ ಮಗನಂತೆ

ವರ್ತಿಸು. ಎಲೌ ಮಗಳೇ, ಇಷ್ಟು ಶೋಕದಿಂದ ಒಣಗಿಹೋಗುತ್ತಿರುವ ನೀನು ತಪಸ್ಸನ್ನು ಮಾಡುವುದು ಬೇಡ.

ಗಚ್ಛ ಮದ್ವಚನಾದ್ ರಾಮಂ ಜಾಮದಗ್ನ್ಯಂ ತಪಸ್ವಿನಮ್ ।
ರಾಮಸ್ತೇ ಸುಮಹದ್ದುಃಖಂ ಶೋಕಂ ಚೈವಾಪನೇಷ್ಯತಿ ॥೩೦॥

ನನ್ನ ಮಾತಿನಂತೆ ಜಮದಗ್ನಿಗಳ ಪುತ್ರನಾದ, ತಪಸ್ವಿಯಾದ ಪರಶುರಾಮನ ಬಳಿಗೆ ಹೋಗು. ಪರಶುರಾಮನು ನಿನ್ನ ದೊಡ್ಡ ದುಃಖವನ್ನೂ ಮತ್ತು ಶೋಕವನ್ನೂ ಪರಿಹರಿಸುವನು.

ಹನಿಷ್ಯತಿ ರಣೇ ಭೀಷ್ಮಂ ನ ಕರಿಷ್ಯತಿ ಚೇದ್ ವಚಃ ।
ತಂ ಗಚ್ಛ ಭಾರ್ಗವಶ್ರೇಷ್ಠಂ ಕಾಲಾಗ್ನಿಸಮತೇಜಸಮ್ ॥೩೧॥

ಪ್ರತಿಷ್ಠಾಪಯಿತಾ ಸ ತ್ವಾಂ ಧರ್ಮ್ಯೇ ಪಥಿ ನಿರಾಮಯೇ ॥೩೨॥

ತನ್ನ ಮಾತನ್ನು ಕೇಳದಿದ್ದರೆ ಅವನು ಯುದ್ಧದಲ್ಲಿ ಭೀಷ್ಮರನ್ನು ಕೊಲ್ಲುವನು. ಆದ್ದರಿಂದ ಕಾಲಾಗ್ನಿಗೆ ಸಮನವಾದ ತೇಜಸ್ಸುಳ್ಳ, ಭಾರ್ಗವಶ್ರೇಷ್ಠನಾದ ಪರಶುರಾಮನ ಬಳಿಗೆ ಹೋಗುವವಳಾಗು. ಅವನು ನಿನ್ನನ್ನು ನಿರ್ದುಷ್ಟವಾದ ಧರ್ಮಪಥದಲ್ಲಿ ಸ್ಥಾಪಿಸುವನು (ಎಂದು ಹೇಳಿದನು).

ತತಸ್ತು ಸುಸ್ವರಂ ಬಾಷ್ಪಮುತ್ಸೃಜಂತೀ ಪುನಃ ಪುನಃ ।
ಅಬ್ರವೀತ್ ಪಿತರಂ ಮಾತುಃ ಸಾ ತದಾ ಹೋತ್ರವಾಹನಮ್ ॥೩೩॥

ಅನಂತರ ಅವಳು ಸುಸ್ವರದಿಂದ ಅಳುತ್ತಾ, ಪುನಃ ಪುನಃ ಕಣ್ಣೀರನ್ನು ಸುರಿಸುತ್ತಾ, ತನ್ನ ಮಾತಾಮಹನಾದ ಹೋತ್ರವಾಹನನನ್ನು ಕುರಿತು ಹೇಳಿದಳು.

ಅಭಿವಾದಯಿತ್ವಾ ಶಿರಸಾ ಗಮಿಷ್ಯೇ ತವ ಶಾಸನಾತ್ ।
ಅಪಿ ನಾಮಾದ್ಯ ಪಶ್ಯೇಯಮಾರ್ಯಂ ತಂ ಲೋಕವಿಶ್ರುತಮ್ ॥೩೪॥

ನಿನಗೆ ಶಿರಸಾ ನಮಸ್ಕಾರವನ್ನು ಮಾಡಿ, ನಿನ್ನ ಶಾಸನದಂತೆ ನಾನು ಪರಶುರಾಮರ ಬಳಿಗೆ ಹೋಗುವೆನು. ಲೋಕವಿಖ್ಯಾತನಾದ ಆ ಪೂಜ್ಯನನ್ನು ನಾನು ಈ ದಿನ ಏನಾದರೂ ನೋಡುವೆನೆ?

ಕಥಂ ಚ ತೀವ್ರಂ ದುಃಖಂ ಮೇ ನಾಶಯಿಷ್ಯತಿ ಭಾರ್ಗವಃ ।
ಏತದಿಚ್ಛಾಮ್ಯಹಂ ಶ್ರೋತುಂ ಯಥಾ ಯಾಸ್ಯಾಮಿ ತತ್ರ ವೈ ॥೩೫॥

ಭಾರ್ಗವನಾದ ಅವನು ನನ್ನ ತೀವ್ರವಾದ ದುಃಖವನ್ನು ಹೇಗೆ ನಾಶಪಡಿಸುವನು? ಮತ್ತು ನಾನು ಅವನ ಆಶ್ರಮಕ್ಕಾದರೂ ಹೇಗೆ ಹೋಗಬೇಕು ಎಂದು ಕೇಳಲು ಬಯಸುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಸಪ್ತತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತಾರನೆಯ ಅಧ್ಯಾಯ

ಹೋತ್ರವಾಹನನಿಂದ ಅಕೃತವ್ರಣನಿಗೆ ತನ್ನ ಮೊಮ್ಮಗಳ ವೃತ್ತಾಂತ ಕಥನ.

ಹೋತ್ರವಾಹನಃ

ರಾಮಂ ದ್ರಕ್ಷ್ಯಸಿ ವತ್ಸೇ ತ್ವಂ ಜಾಮದಗ್ನ್ಯಂ ಮಹಾವನೇ ।
ಉಗ್ರೇ ತಪಸಿ ವರ್ತಂತಂ ಸತ್ಯಸಂಧಂ ಮಹಾಬಲಮ್ ॥೧॥

ಹೋತ್ರವಾಹನ– ವತ್ಸೆಯೇ, ನೀನು ಉಗ್ರವಾದ ತಪಸ್ಸನ್ನು ಆಚರಿಸುತ್ತಿರುವ ಸತ್ಯಸಂಧನೂ, ಮಹಾಬಲನೂ ಆದ, ಜಮದಗ್ನಿಪುತ್ರನಾದ ಪರಶುರಾಮನನ್ನು ಮಹಾವನದಲ್ಲಿ ನೋಡುವಿ.

ಮಾಹೇಂದ್ರಂ ವೈ ಗಿರಿಶ್ರೇಷ್ಠಂ ರಾಮೋ ನಿತ್ಯಮುಪಾಸತೇ ।
ಋಷಯೋ ವೇದವಿದುಷೋ ಗಂಧರ್ವಾಪ್ಸರಸಸ್ತಥಾ ॥೨॥

ಪರಶುರಾಮನು ಮತ್ತು ವೇದಜ್ಞರಾದ ಋಷಿಗಳೂ, ಗಂಧರ್ವರೂ ಮತ್ತು ಅಪ್ಸರೆಯರೂ ಯಾವಾಗಲೂ ಮಾಹೇಂದ್ರ ಪರ್ವತಶ್ರೇಷ್ಠದಲ್ಲಿ ಇರುತ್ತಾರೆ.

ತತ್ರ ಗಚ್ಛಸ್ವ ಭದ್ರಂ ತೇ ಬ್ರೂಯಾಶ್ಚೈನಂ ವಚೋ ಮಮ ।
ಅಭಿವಾದ್ಯ ಚ ತಂ ಮೂರ್ಧ್ನಾ ತಪೋವೃದ್ಧಂ ದೃಢವ್ರತಮ್ ॥೩॥

ಬ್ರೂಯಾಶ್ಚೈನಂ ಪುನರ್ಭದ್ರೇ ಯತ್ ತೇ ಕಾರ್ಯಂ ಮನೀಷಿತಮ್ ।
ಮಯಿ ಸಂಕೀರ್ತಿತೇ ರಾಮಃ ಸರ್ವಂ ತತ್ ತೇ ಕರಿಷ್ಯತಿ ॥೪॥

ನಿನಗೆ ಮಂಗಳವಾಗಲಿ, ಅಲ್ಲಿಗೆ ಹೋಗಿ ತಪೋವೃದ್ಧನೂ, ದೃಢವ್ರತನೂ ಆದ ಅವನಿಗೆ ಶಿರಸಾ ನಮಸ್ಕಾರವನ್ನು ಮಾಡಿ, ನನ್ನ ಮಾತುಗಳನ್ನು ಹೇಳು. ಎಲೌ ಮಂಗಳಸ್ವರೂಪಳೇ ಮತ್ತು ನಿನ್ನ ಮನಸ್ಸಿನಲ್ಲಿರುವ ಕಾರ್ಯವನ್ನು ಅವನಿಗೆ ಹೇಳು. ನನ್ನ ಹೆಸರನ್ನು ಹೇಳಿದರೆ ಪರಶುರಾಮನು ನಿನಗೆ ಎಲ್ಲವನ್ನೂ ಮಾಡುವನು.

ಮಮ ರಾಮಃ ಸಖಾ ವತ್ಸೇ ಪ್ರೀತಿಯುಕ್ತಃ ಸುಹೃಚ್ಚ ಮೇ ।
ಜಮದಗ್ನಿಸುತೋ ವೀರಃ ಸರ್ವಶಸ್ತ್ರಭೃತಾಂ ವರಃ ॥೫॥

ವತ್ಸೆಯೇ, ಜಮದಗ್ನಿಸುತನಾದ ಪರಶುರಾಮನು ವೀರನಾದವನು. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದವನು. ನನ್ನ ಸ್ನೇಹಿತ ಮತ್ತು ಬಹಳ ಪ್ರೀತಿಯುಳ್ಳ ನನ್ನ ಹಿತೈಷಿ (ಎಂದು ಹೇಳಿದನು).

ಏವಂ ಬ್ರುವತಿ ಕನ್ಯಾಂ ತು ಪಾರ್ಥಿವೇ ಹೋತ್ರವಾಹನೇ ।
ಅಕೃತವ್ರಣಃ ಪ್ರಾದುರಾಸೀದ್ ರಾಮಸ್ಯಾನುಚರಃ ಪ್ರಿಯಃ ॥೬॥

ಹೋತ್ರವಾಹನ ರಾಜನು ಆ ಕನ್ಯೆಯನ್ನು ಕುರಿತು ಹೀಗೆ ಹೇಳುತ್ತಿರುವಷ್ಟರಲ್ಲಿ ಪರಶುರಾಮನ ಅನುಚರನೂ, ಪ್ರಿಯನೂ ಆದ ಅಕೃತವ್ರಣನು ಕಾಣಿಸಿಕೊಂಡನು.

ತತಸ್ತೇ ಮುನಯಃ ಸರ್ವೇ ಸಮುತ್ತಸ್ಥುಃ ಸಹಸ್ರಶಃ ।
ಸ ಚ ರಾಜಾ ವಯೋವೃದ್ಧಃ ಸೃಂಜಯೋ ಹೋತ್ರವಾಹನಃ ॥೭॥

ಆಗ ಸಹಸ್ರಸಂಖ್ಯೆಯಲ್ಲಿದ್ದ ಆ ಋಷಿಗಳು ಮತ್ತು ವಯೋವೃದ್ಧನಾದ ಸೃಂಜಯನಾದ ಹೋತ್ರವಾಹನರಾಜನೂ ಎದ್ದುನಿಂತರು.

ತತಃ ಪೃಷ್ಟ್ವಾ ಯಥಾನ್ಯಾಯಮನ್ಯೋನ್ಯಂ ತೇ ವನೌಕಸಃ ।
ಸಹಿತಾ ಭರತಶ್ರೇಷ್ಠ ನಿಷೇದುಃ ಪರಿವಾರ್ಯ ತಮ್ ॥೮॥

ಎಲೈ ಭರತಶ್ರೇಷ್ಠನೇ, ಅನಂತರ ಆ ವನವಾಸಿಗಳು ಪರಸ್ಪರವಾಗಿ ನ್ಯಾಯದಂತೆ ಅನ್ಯೋನ್ಯ ಯೋಗಕ್ಷೇಮವನ್ನು ವಿಚಾರಿಸಿ ಎಲ್ಲರೂ ಅವನನ್ನು ಸುತ್ತುವರಿದು ಕುಳಿತರು.

ತತಸ್ತೇ ಕಥಯಾಮಾಸುಃ ಕಥಾಸ್ತಾಸ್ತಾ ಮನೋರಮಾಃ ।
ಧನ್ಯಾ ದಿವ್ಯಾಶ್ಚ ರಾಜೇಂದ್ರ ಪ್ರೀತಿಹರ್ಷಮುದಾ ಯುತಾಃ ॥೯॥

ಎಲೈ ರಾಜೇಂದ್ರನೇ, ಅನಂತರ ಅವರು ಹರ್ಷ-ಸಂತೋಷಗಳಿಂದ ಕೂಡಿದವರಾಗಿ ಧನ್ಯವಾದ, ದಿವ್ಯವಾದ ಮತ್ತು ಮನೋಹರವಾದ ಮಾತುಗಳನ್ನು ಆಡಿದರು.

ತತಃ ಕಥಾಂತೇ ರಾಜರ್ಷಿರ್ಮಹಾತ್ಮಾ ಹೋತ್ರವಾಹನಃ ।
ರಾಮಂ ಶ್ರೇಷ್ಠಂ ಮಹರ್ಷೀಣಾಮಪೃಚ್ಛದಕೃತವ್ರಣಮ್ ॥೧೦॥

ಕ್ವ ಸಂಪ್ರತಿ ಮಹಾಬಾಹೋ ಜಾಮದಗ್ನ್ಯಃ ಪ್ರತಾಪವಾನ್ ।
ಅಕೃತವ್ರಣ ಶಕ್ಯೋ ವೈ ದ್ರಷ್ಟುಂ ವೇದವಿದಾಂ ವರಮ್ ॥೧೧॥

ಆ ಮಾತುಗಳು ಮುಗಿದ ಮೇಲೆ ಮಹಾತ್ಮನಾದ ಹೋತ್ರವಾಹನ ರಾಜರ್ಷಿಯು ಮಹರ್ಷಿಗಳಲ್ಲಿ ಶ್ರೇಷ್ಠನಾದ ಅಕೃತವ್ರಣನನ್ನು ಕುರಿತು ಪರಶುರಾಮರ ವಿಷಯದಲ್ಲಿ ಎಲೈ ಅಕೃತವ್ರಣನೇ, ಮಹಾಬಾಹುವೇ, ಪ್ರತಾಪಶಾಲಿಯಾದ ಪರಶುರಾಮನು ಈಗ ಎಲ್ಲಿದ್ದಾನೆ? ವೇದಜ್ಞರಲ್ಲಿ ಶ್ರೇಷ್ಠನಾದ ಅವನನ್ನು ನೋಡಲು ಸಾಧ್ಯವೇ ಎಂದು ಪ್ರಶ್ನೆ ಮಾಡಿದನು.

ಅಕೃತವ್ರಣಃ

ಭವಂತಮೇವ ಸತತಂ ರಾಮಃ ಕೀರ್ತಯತಿ ಪ್ರಭೋ ।
ಸೃಂಜಯೋ ಮೇ ಪ್ರಿಯಸಖೋ ರಾಜರ್ಷಿರಿತಿ ಪಾರ್ಥಿವ ॥೧೨॥

ಅಕೃತವ್ರಣ– ಎಲೈ ಪ್ರಭುವೇ, ರಾಜನೇ, ಪರಶುರಾಮನು ಯಾವಾಗಲೂ ಸೃಂಜಯನಾದ ರಾಜರ್ಷಿಯಾದ ಹೋತ್ರವಾಹನನು ನನ್ನ ಪ್ರಿಯಸ್ನೇಹಿತನೆಂದು ನಿನ್ನ ಹೆಸರನ್ನೇ ಹೇಳುತ್ತಿರುತ್ತಾನೆ.

ಇಹ ರಾಮಃ ಪ್ರಭಾತೇ ಶ್ವೋ ಭವಿತೇತಿ ಮತಿರ್ಮಮ ।
ದ್ರಷ್ಟಾಸ್ಯೇನಮಿಹಾಯಾಂತಂ ತವ ದರ್ಶನಕಾಂಕ್ಷಯಾ ॥೧೩॥

ತತ್ರ ಗಚ್ಛಸ್ವ ಭದ್ರಂ ತೇ ಬ್ರೂಯಾಶ್ಚೈನಂ ವಚೋ ಮಮ ।
ಅಭಿವಾದ್ಯ ಚ ತಂ ಮೂರ್ಧ್ನಾ ತಪೋವೃದ್ಧಂ ದೃಢವ್ರತಮ್ ॥೩॥

ಬ್ರೂಯಾಶ್ಚೈನಂ ಪುನರ್ಭದ್ರೇ ಯತ್ ತೇ ಕಾರ್ಯಂ ಮನೀಷಿತಮ್ ।
ಮಯಿ ಸಂಕೀರ್ತಿತೇ ರಾಮಃ ಸರ್ವಂ ತತ್ ತೇ ಕರಿಷ್ಯತಿ ॥೪॥

ನಿನಗೆ ಮಂಗಳವಾಗಲಿ, ಅಲ್ಲಿಗೆ ಹೋಗಿ ತಪೋವೃದ್ಧನೂ, ದೃಢವ್ರತನೂ ಆದ ಅವನಿಗೆ ಶಿರಸಾ ನಮಸ್ಕಾರವನ್ನು ಮಾಡಿ, ನನ್ನ ಮಾತುಗಳನ್ನು ಹೇಳು. ಎಲೌ ಮಂಗಳಸ್ವರೂಪಳೇ ಮತ್ತು ನಿನ್ನ ಮನಸ್ಸಿನಲ್ಲಿರುವ ಕಾರ್ಯವನ್ನು ಅವನಿಗೆ ಹೇಳು. ನನ್ನ ಹೆಸರನ್ನು ಹೇಳಿದರೆ ಪರಶುರಾಮನು ನಿನಗೆ ಎಲ್ಲವನ್ನೂ ಮಾಡುವನು.

ಮಮ ರಾಮಃ ಸಖಾ ವತ್ಸೇ ಪ್ರೀತಿಯುಕ್ತಃ ಸುಹೃಚ್ಚ ಮೇ ।
ಜಮದಗ್ನಿಸುತೋ ವೀರಃ ಸರ್ವಶಸ್ತ್ರಭೃತಾಂ ವರಃ ॥೫॥

ವತ್ಸೆಯೇ, ಜಮದಗ್ನಿಸುತನಾದ ಪರಶುರಾಮನು ವೀರನಾದವನು. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದವನು. ನನ್ನ ಸ್ನೇಹಿತ ಮತ್ತು ಬಹಳ ಪ್ರೀತಿಯುಳ್ಳ ನನ್ನ ಹಿತೈಷಿ (ಎಂದು ಹೇಳಿದನು).

ಏವಂ ಬ್ರುವತಿ ಕನ್ಯಾಂ ತು ಪಾರ್ಥಿವೇ ಹೋತ್ರವಾಹನೇ ।
ಅಕೃತವ್ರಣಃ ಪ್ರಾದುರಾಸೀದ್ ರಾಮಸ್ಯಾನುಚರಃ ಪ್ರಿಯಃ ॥೬॥

ಹೋತ್ರವಾಹನ ರಾಜನು ಆ ಕನ್ಯೆಯನ್ನು ಕುರಿತು ಹೀಗೆ ಹೇಳುತ್ತಿರುವಷ್ಟರಲ್ಲಿ ಪರಶುರಾಮನ ಅನುಚರನೂ, ಪ್ರಿಯನೂ ಆದ ಅಕೃತವ್ರಣನು ಕಾಣಿಸಿಕೊಂಡನು.

ತತಸ್ತೇ ಮುನಯಃ ಸರ್ವೇ ಸಮುತ್ತಸ್ಥುಃ ಸಹಸ್ರಶಃ ।
ಸ ಚ ರಾಜಾ ವಯೋವೃದ್ಧಃ ಸೃಂಜಯೋ ಹೋತ್ರವಾಹನಃ ॥೭॥

ಆಗ ಸಹಸ್ರಸಂಖ್ಯೆಯಲ್ಲಿದ್ದ ಆ ಋಷಿಗಳು ಮತ್ತು ವಯೋವೃದ್ಧನಾದ ಸೃಂಜಯನಾದ ಹೋತ್ರವಾಹನರಾಜನೂ ಎದ್ದುನಿಂತರು.

ತತಃ ಪೃಷ್ಟ್ವಾ ಯಥಾನ್ಯಾಯಮನ್ಯೋನ್ಯಂ ತೇ ವನೌಕಸಃ ।
ಸಹಿತಾ ಭರತಶ್ರೇಷ್ಠ ನಿಷೇದುಃ ಪರಿವಾರ್ಯ ತಮ್ ॥೮॥

ಎಲೈ ಭರತಶ್ರೇಷ್ಠನೇ, ಅನಂತರ ಆ ವನವಾಸಿಗಳು ಪರಸ್ಪರವಾಗಿ ನ್ಯಾಯದಂತೆ ಅನ್ಯೋನ್ಯ ಯೋಗಕ್ಷೇಮವನ್ನು ವಿಚಾರಿಸಿ ಎಲ್ಲರೂ ಅವನನ್ನು ಸುತ್ತುವರಿದು ಕುಳಿತರು.

ತತಸ್ತೇ ಕಥಯಾಮಾಸುಃ ಕಥಾಸ್ತಾಸ್ತಾ ಮನೋರಮಾಃ ।
ಧನ್ಯಾ ದಿವ್ಯಾಶ್ಚ ರಾಜೇಂದ್ರ ಪ್ರೀತಿಹರ್ಷಮುದಾ ಯುತಾಃ ॥೯॥

ಎಲೈ ರಾಜೇಂದ್ರನೇ, ಅನಂತರ ಅವರು ಹರ್ಷ-ಸಂತೋಷಗಳಿಂದ ಕೂಡಿದವರಾಗಿ ಧನ್ಯವಾದ, ದಿವ್ಯವಾದ ಮತ್ತು ಮನೋಹರವಾದ ಮಾತುಗಳನ್ನು ಆಡಿದರು.

ತತಃ ಕಥಾಂತೇ ರಾಜರ್ಷಿರ್ಮಹಾತ್ಮಾ ಹೋತ್ರವಾಹನಃ ।
ರಾಮಂ ಶ್ರೇಷ್ಠಂ ಮಹರ್ಷೀಣಾಮಪೃಚ್ಛದಕೃತವ್ರಣಮ್ ॥೧೦॥

ಕ್ವ ಸಂಪ್ರತಿ ಮಹಾಬಾಹೋ ಜಾಮದಗ್ನ್ಯಃ ಪ್ರತಾಪವಾನ್ ।
ಅಕೃತವ್ರಣ ಶಕ್ಯೋ ವೈ ದ್ರಷ್ಟುಂ ವೇದವಿದಾಂ ವರಮ್ ॥೧೧॥

ಆ ಮಾತುಗಳು ಮುಗಿದ ಮೇಲೆ ಮಹಾತ್ಮನಾದ ಹೋತ್ರವಾಹನ ರಾಜರ್ಷಿಯು ಮಹರ್ಷಿಗಳಲ್ಲಿ ಶ್ರೇಷ್ಠನಾದ ಅಕೃತವ್ರಣನನ್ನು ಕುರಿತು ಪರಶುರಾಮರ ವಿಷಯದಲ್ಲಿ ಎಲೈ ಅಕೃತವ್ರಣನೇ, ಮಹಾಬಾಹುವೇ, ಪ್ರತಾಪಶಾಲಿಯಾದ ಪರಶುರಾಮನು ಈಗ ಎಲ್ಲಿದ್ದಾನೆ? ವೇದಜ್ಞರಲ್ಲಿ ಶ್ರೇಷ್ಠನಾದ ಅವನನ್ನು ನೋಡಲು ಸಾಧ್ಯವೇ ಎಂದು ಪ್ರಶ್ನೆ ಮಾಡಿದನು.

ಅಕೃತವ್ರಣಃ

ಭವಂತಮೇವ ಸತತಂ ರಾಮಃ ಕೀರ್ತಯತಿ ಪ್ರಭೋ ।
ಸೃಂಜಯೋ ಮೇ ಪ್ರಿಯಸಖೋ ರಾಜರ್ಷಿರಿತಿ ಪಾರ್ಥಿವ ॥೧೨॥

ಅಕೃತವ್ರಣ– ಎಲೈ ಪ್ರಭುವೇ, ರಾಜನೇ, ಪರಶುರಾಮನು ಯಾವಾಗಲೂ ಸೃಂಜಯನಾದ ರಾಜರ್ಷಿಯಾದ ಹೋತ್ರವಾಹನನು ನನ್ನ ಪ್ರಿಯಸ್ನೇಹಿತನೆಂದು ನಿನ್ನ ಹೆಸರನ್ನೇ ಹೇಳುತ್ತಿರುತ್ತಾನೆ.

ಇಹ ರಾಮಃ ಪ್ರಭಾತೇ ಶ್ವೋ ಭವಿತೇತಿ ಮತಿರ್ಮಮ ।
ದ್ರಷ್ಟಾಸ್ಯೇನಮಿಹಾಯಾಂತಂ ತವ ದರ್ಶನಕಾಂಕ್ಷಯಾ ॥೧೩॥

ನಾಳೆಯ ಪ್ರಾತಃಕಾಲದಲ್ಲಿ ಪರಶುರಾಮನು ಇಲ್ಲಿ ಬರುವನೆಂದು ನನ್ನ ಅಭಿಪ್ರಾಯ. ನಿನ್ನನ್ನು ನೋಡುವ ಉದ್ದೇಶದಿಂದ ಇಲ್ಲಿಗೆ ಬರುವ ಅವನನ್ನು ನೀನು ನೋಡುವಿ.

ಇಯಂ ಚ ಕನ್ಯಾ ರಾಜರ್ಷೇ ಕಿಮರ್ಥಂ ವನಮಾಗತಾ ।
ಕಸ್ಯ ಚೇಯಂ ಭವತಿ ಕಾ ಭವತೇಚ್ಛಾಮಿ ವೇದಿತುಮ್ ॥೧೪॥

ಎಲೈ ರಾಜರ್ಷಿಯೇ, ಈ ಕನ್ಯೆಯು ಏತಕ್ಕೆ ಕಾಡಿಗೆ ಬಂದಿದ್ದಾಳೆ? ಇವಳು ಯಾರ ಮಗಳೆಂದು ನಿನ್ನಿಂದ ತಿಳಿಯಲು ಬಯಸುತ್ತೇನೆ.

ಹೋತ್ರವಾಹನಃ

ದೌಹಿತ್ರೀಯಂ ಮಮ ವಿಭೋ ಕಾಶಿರಾಜಸುತಾ ಪ್ರಿಯಾ ।
ಜ್ಯೇಷ್ಠಾ ಸ್ವಯಂವರೇ ತಸ್ಥೌ ಭಗಿನೀನಾಂ ತಥಾऽನಘ ॥೧೫॥

ಹೋತ್ರವಾಹನ– ಎಲೈ ಅನಘನೇ, ವಿಭುವೇ, ಇವಳು ನನ್ನ ಮಗಳ ಮಗಳು. ಕಾಶಿರಾಜನಿಗೆ ಪ್ರಿಯಳಾದ ಮಗಳು. ಕಾಶಿರಾಜನ ಜ್ಯೇಷ್ಠಪುತ್ರಿಯಾದ ಇವಳು ತಂಗಿಯರ ಜೊತೆಯಲ್ಲಿ ಸ್ವಯಂವರದಲ್ಲಿ ನಿಂತಿದ್ದಳು.

ಇಯಮಂಬೇತಿ ವಿಖ್ಯಾತಾ ಜ್ಯೇಷ್ಠಾ ಕಾಶಿಪತೇಃ ಸುತಾ ।
ಅಂಬಿಕಾಂಬಾಲಿಕೇ ತ್ವನ್ಯೇ ಕನೀಯಸ್ಯೌ ತಪೋಧನ ॥೧೬॥

ಇವಳು ಅಂಬಾ ಎಂದು ವಿಖ್ಯಾತಳಾದ ಕಾಶಿರಾಜನ ಜ್ಯೇಷ್ಠ ಪುತ್ರಿ. ಎಲೈ ತಪೋಧನರೇ, ಅಂಬಿಕಾ ಅಂಬಾಲಿಕೆಯರು ಬೇರೆ ಮತ್ತು ಇವಳ ತಂಗಿಯರು.

ಸಮೇತಂ ಪಾರ್ಥಿವಂ ಕ್ಷತ್ರಂ ಕಾಶಿಪುರ್ಯಾಂ ತದಾऽಭವತ್ ।
ಕನ್ಯಾನಿಮಿತ್ತಂ ವಿಪ್ರರ್ಷೇ ತತ್ರಾಸೀದುತ್ಸವೋ ಮಹಾನ್ ॥೧೭॥

ಎಲೈ ವಿಪ್ರರ್ಷಿಯೇ, ಆಗ ಕಾಶಿಪಟ್ಟಣದಲ್ಲಿ ಕನ್ಯಾನಿಮಿತ್ತವಾಗಿ ಭೂಮಿಯ ಮೇಲಿದ್ದ ಎಲ್ಲಾ ರಾಜರು ಬಂದು ಸೇರಿದ್ದರು. ಅಲ್ಲಿ ದೊಡ್ಡ ಉತ್ಸವವು ನಡೆಯಿತು.

ತತಃ ಕಿಲ ಮಹಾವೀರ್ಯೋ ಭೀಷ್ಮಃ ಶಾಂತನವೋ ನೃಪಾನ್ ।
ಅಧಿಕ್ಷಿಪ್ಯ ಮಹಾತೇಜಾಸ್ತಿಸ್ರಃ ಕನ್ಯಾ ಜಹಾರ ತಾಃ ॥೧೮॥

ಆಗ ಮಹಾಪರಾಕ್ರಮಿಯೂ, ಮಹಾತೇಜಸ್ವಿಯೂ ಆದ, ಶಂತನುಪುತ್ರನಾದ ಭೀಷ್ಮನು ಎಲ್ಲ ರಾಜರನ್ನೂ ನಿಂದಿಸಿ ಆ ಮೂರು ಕನ್ಯೆಯರನ್ನೂ ಹರಣ ಮಾಡಿದನು.

ನಿರ್ಜಿತ್ಯ ಪೃಥಿವೀಪಾಲಾನಥ ಭೀಷ್ಮೋ ಗಜಾಹ್ವಯಮ್ ।
ಆಜಗಾಮ ವಿಶುದ್ಧಾತ್ಮಾ ಕನ್ಯಾಭಿಃ ಸಹ ಭಾರತ ॥೧೯॥

ಎಲೈ ಭಾರತನೇ, ವಿಶುದ್ಧಾತ್ಮನಾದ ಭೀಷ್ಮನು ಗಜಾಶ್ವಗಳಿಂದ ಕೂಡಿದ ಎಲ್ಲ ರಾಜರನ್ನೂ ಗೆದ್ದು ಕನ್ಯೆಯರ ಜೊತೆಯಲ್ಲಿ ಹಸ್ತಿನಪುರಕ್ಕೆ ಬಂದನು.

ಸತ್ಯವತ್ಯೈ ನಿವೇದ್ಯಾಥ ವಿವಾಹಾರ್ಥಮನಂತರಮ್ ।
ಭ್ರಾತುರ್ವಿಚಿತ್ರವೀರ್ಯಸ್ಯ ಸಮಾಜ್ಞಾಪಯತ ಪ್ರಭುಃ ॥೨೦॥

ಮೊದಲು ಸತ್ಯವತಿಗೆ ವಿಷಯವನ್ನು ನಿವೇದಿಸಿ, ಅನಂತರ ತಮ್ಮನಾದ ವಿಚಿತ್ರವೀರ್ಯನ ವಿವಾಹಕ್ಕಾಗಿ ಪ್ರಭುವಾದ ಅವನು ಆಜ್ಞೆ ಮಾಡಿದನು.

ತಂ ತು ವೈವಾಹಿಕಂ ದೃಷ್ಟ್ವಾ ಕನ್ಯೇಯಂ ಸಮುಪಾರ್ಜಿತಮ್ ।
ಅಬ್ರವೀತ್ ತತ್ರ ಗಾಂಗೇಯಂ ಮಂತ್ರಿಮಧ್ಯೇ ದ್ವಿಜರ್ಷಭ ॥೨೧॥

ಎಲೈ ದ್ವಿಜಶ್ರೇಷ್ಠನೇ, ಆಗ ವಿವಾಹದ ಸಿದ್ಧತೆಗಳು ನಡೆಯುತ್ತಿರುವುದನ್ನು ನೋಡಿ ಈ ಕನ್ಯೆಯು ಮಂತ್ರಿಗಳ ಮಧ್ಯದಲ್ಲಿ ಭೀಷ್ಮನನ್ನು ಕುರಿತು ಹೀಗೆ ಹೇಳಿದಳು.

ಮಯಾ ಸಾಲ್ವಪತಿರ್ವೀರ ಮನಸಾऽಭಿವೃತಃ ಪತಿಃ ।
ನ ಮಾಮರ್ಹಸಿ ಧರ್ಮಜ್ಞ ದಾತುಂ ಭ್ರಾತ್ರೇऽನ್ಯಕಾಮುಕಾಮ್ ॥೨೨॥

ಎಲೈ ವೀರನೇ, ನಾನು ಸಾಲ್ವಪತಿಯನ್ನು ಮನಸ್ಸಿನಿಂದಲೇ ಪತಿಯಾಗಿ ವರಿಸಿದ್ದೇನೆ. ಎಲೈ ಧರ್ಮಜ್ಞನೇ, ಇನ್ನೊಬ್ಬನಲ್ಲಿ ಪ್ರೀತಿ ಇರುವ ನನ್ನನ್ನು ನಿನ್ನ ತಮ್ಮನಿಗೆ ಕೊಡುವುದು ಯುಕ್ತವಲ್ಲ (ಎಂದು ಹೇಳಿದಳು).

ತಚ್ಛ್ರುತ್ವಾ ವಚನಂ ಭೀಷ್ಮಃ ಸಮ್ಮಂತ್ರ್ಯ ಸಹ ಮಂತ್ರಿಭಿಃ ।
ನಿಶ್ಚಿತ್ಯ ವಿಸಸರ್ಜೇಮಾಂ ಸತ್ಯವತ್ಯಾ ಮತೇ ಸ್ಥಿತಃ ॥೨೩॥

ಅದನ್ನು ಕೇಳಿದ ಭೀಷ್ಮನು ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡಿ, ಏನು ಮಾಡಬೇಕೆಂದು ನಿಶ್ಚಯಿಸಿ, ಸತ್ಯವತಿಯ ಅಭಿಪ್ರಾಯವನ್ನು ಪಡೆದು ಇವಳನ್ನು ಬೀಳ್ಕೊಟ್ಟನು.

ಅನುಜ್ಞಾತಾ ತು ಭೀಷ್ಮೇಣ ಸಾಲ್ವಂ ಸೌಭಪತಿಂ ತತಃ ।
ಕನ್ಯೇಯಂ ಮುದಿತಾ ತತ್ರ ಕಾಲೇ ವಚನಮಬ್ರವೀತ್ ॥೨೪॥

ಭೀಷ್ಮನ ಅನುಮತಿಯನ್ನು ಪಡೆದ ಈ ಕನ್ಯೆಯು ಸಂತೋಷದಿಂದ ಕೂಡಿದವಳಾಗಿ, ಯೋಗ್ಯವಾದ ಕಾಲದಲ್ಲಿ ಸೌಭಪತಿಯಾದ ಸಾಲ್ವನನ್ನು ಕುರಿತು ಹೀಗೆ ಮಾತನಾಡಿದಳು.

ವಿಸರ್ಜಿತಾಽಸ್ಮಿ ಭೀಷ್ಮೇಣ ಧರ್ಮಂ ಮಾಂ ಪ್ರತಿಪಾದಯ ।
ಮನಸಾಽಭಿವೃತಃ ಪೂರ್ವಂ ಮಯಾ ತ್ವಂ ಪಾರ್ಥಿವರ್ಷಭ ॥೨೫॥

ನಾನು ಭೀಷ್ಮನಿಂದ ಕಳುಹಿಸಲ್ಪಟ್ಟಿದ್ದೇನೆ. ನನ್ನನ್ನು ಧರ್ಮಮಾರ್ಗದಲ್ಲಿ ಯೋಜಿಸುವವನಾಗು. ಎಲೈ ಪಾರ್ಥಿವಶ್ರೇಷ್ಠನೇ, ನಾನು ನಿನ್ನನ್ನು ಮೊದಲೇ ಮನಸ್ಸಿನಲ್ಲಿ ವರಿಸಿದ್ದೇನೆ (ಎಂದು ಹೇಳಿದಳು).

ಪ್ರತ್ಯಾಚಕ್ಷೌ ಚ ಸಾಲ್ವೋಽಸ್ಯಾಶ್ಚಾರಿತ್ರಸ್ಯಾಭಿಶಂಕಿತಃ ।
ಸೇಯಂ ತಪೋವನಂ ಪ್ರಾಪ್ತಾ ತಪಸ್ಯಾಭಿರತಾ ಭೃಶಮ್ ॥೨೬॥

ಆದರೆ ಸಾಲ್ವನು ಅವಳ ಶೀಲದ ಬಗ್ಗೆ ಸಂಶಯವನ್ನು ಹೊಂದಿ, ಅವಳನ್ನು ನಿರಾಕರಿಸಿದನು. ಅಂತಹ ಇವಳು ತಪಸ್ಸಿನಲ್ಲಿ ಬಹಳವಾಗಿ ಆಸಕ್ತಳಾಗಿ ತಪೋವನಕ್ಕೆ ಬಂದಿದ್ದಾಳೆ.

ಮಯಾ ಚ ಪ್ರತ್ಯಭಿಜ್ಞಾತಾ ವಂಶಸ್ಯ ಪರಿಕೀರ್ತನಾತ್ ।
ಅಸ್ಯ ದುಃಖಸ್ಯ ಚೋತ್ಪತ್ತಿಂ ಭೀಷ್ಮಮೇವೇಹ ಮನ್ಯತೇ ॥ ೨೭॥

ನನ್ನ ವಂಶದ ಹೆಸರನ್ನು ಹೇಳಿದುದರಿಂದ ನಾನು ಅವಳನ್ನು ಗುರುತಿಸಿದೆ. ಅವಳ ಈ ದುಃಖಕ್ಕೆ ಭೀಷ್ಮನೇ ಮೂಲಕಾರಣನೆಂದು ಅವಳು ಭಾವಿಸುತ್ತಾಳೆ.

ಅಂಬಾ

ಭಗವನ್ನೇವಮೇವೈತದ್ ತದಾಹ ಪೃಥಿವೀಪತಿಃ ।
ಶರೀರಕರ್ತಾ ಮಾತುರ್ಮೇ ಸೃಂಜಯೋ ಹೋತ್ರವಾಹನಃ ॥೨೮॥

ಅಂಬಾ– ನನ್ನ ತಾಯಿಯ ತಂದೆಯಾದ ಹೋತ್ರವಾಹನರಾಜನು ಹೇಳಿದಂತೆಯೇ ಎಲ್ಲವೂ ಸರಿ.

ನ ಹ್ಯುತ್ಸಹೇ ಸ್ವನಗರಂ ಪ್ರತಿಯಾತುಂ ತಪೋಧನ ।
ಅವಮಾನಭಯಾಚ್ಚೈವ ವ್ರೀಡಯಾ ಚ ಮಹಾಮುನೇ ॥೨೯॥

ಎಲೈ ತಪೋಧನನೇ, ಮಹರ್ಷಿಯೇ, ಅವಮಾನದ ಭಯದಿಂದಲೂ ಮತ್ತು ನಾಚಿಕೆಯಿಂದಲೂ ನಾನು ಇನ್ನೊಮ್ಮೆ ನನ್ನ ಪಟ್ಟಣಕ್ಕೆ ಹೋಗಲು ಇಚ್ಛೆಪಡುವುದಿಲ್ಲ.

ಯತ್ತು ಮಾಂ ಭಗವಾನ್ ರಾಮೋ ವಕ್ಷ್ಯತಿ ದ್ವಿಜಸತ್ತಮ ।
ತನ್ಮೇ ಕಾರ್ಯತಮಂ ಕಾರ್ಯಮಿತಿ ಮೇ ಭಗವನ್ ಮತಿಃ ॥೩೦॥

ಎಲೈ ಪೂಜ್ಯನೇ, ಎಲೈ ದ್ವಿಜಶ್ರೇಷ್ಠನೇ, ಭಗವಂತನಾದ ಪರಶುರಾಮನು ನನಗೆ ಏನು ಹೇಳುವನೋ ಅದು ನಾನು ಮಾಡಬೇಕಾದ ಕಾರ್ಯವೆಂದು ನಾನು ತಿಳಿಯುತ್ತೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಟ್‌ಸಪ್ತತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಷಷ್ಠೋಽಧ್ಯಾಯಃ ॥೬॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೇಳನೆಯ ಅಧ್ಯಾಯ

ಅಕೃತವ್ರಣನಿಂದ ಭೀಷ್ಮರಿಗೆ ಪ್ರತಿಕಾರ ಮಾಡುವಂತೆ ನಿರ್ಧಾರ.
ಭೀಷ್ಮರನ್ನು ಕೊಲ್ಲುವಂತೆ ಪರಶುರಾಮರಿಗೆ ಅಂಬೆಯ ಪ್ರಾರ್ಥನೆ.

ಅಕೃತವ್ರಣಃ

ದುಃಖಂ ದ್ವಯೋರಿದಂ ಭದ್ರೇ ಕತರಸ್ಯ ಚಿಕೀರ್ಷಸಿ ।
ಪ್ರತಿಕರ್ತವ್ಯಮಬಲೇ ತತ್ ತ್ವಂ ವತ್ಸೇ ವದಸ್ವ ಮೇ ॥೧॥

ಅಕೃತವ್ರಣ– ವತ್ಸೆಯೇ, ನಿನ್ನ ದುಃಖವು ಇಬ್ಬರಿಂದ ಪ್ರಾಪ್ತವಾಗಿದೆ. ಎಲೌ ಅಬಲೆಯೇ, ನೀನು ಯಾರಿಗೆ ಪ್ರತೀಕಾರವನ್ನು ಮಾಡಲು ಬಯಸುತ್ತೀಯೆ ಎಂದು ನನಗೆ ಹೇಳು.

ಯದಿ ಸೌಭಪತಿರ್ಭದ್ರೇ ನಿಯೋಕ್ತವ್ಯೋ ಮತಸ್ತವ ।
ನಿಯೋಕ್ಷ್ಯತಿ ಮಹಾತ್ಮಾ ಸ ರಾಮಸ್ತ್ವದ್ಧಿತಕಾಮ್ಯಯಾ ॥೨॥

ಎಲೌ ಭದ್ರೆಯೇ, ನಿನಗೆ ಸೌಭಪತಿಯಾದ ಸಾಲ್ವನು ನಿಯಂತ್ರಿಸಲ್ಪಡಬೇಕು ಎಂಬ ಅಭಿಪ್ರಾಯವಿದ್ದರೆ ಮಹಾತ್ಮನಾದ ಪರಶುರಾಮನು ನಿನ್ನ ಹಿತವನ್ನು ಬಯಸಿ ಅವನನ್ನೇ ನಿಯೋಜಿಸುವನು.

ಅಥಾಪಗೇಯಂ ಭೀಷ್ಮಂ ತ್ವಂ ರಾಮೇಣೇಚ್ಛಸಿ ಧೀಮತಾ ।
ರಣೇ ವಿನಿರ್ಜಿತಂ ದ್ರಷ್ಟುಂ ಕುರ್ಯಾತ್ ತದಪಿ ಭಾರ್ಗವಃ ॥೩॥

ಅಥವಾ ಗಂಗಾಪುತ್ರನಾದ ಭೀಷ್ಮನು ಪರಶುರಾಮನಿಂದ ಯುದ್ಧದಲ್ಲಿ ವಿನಿರ್ಜಿತನಾಗಬೇಕೆಂದು ಬಯಸಿದರೆ ಪರಶುರಾಮನು ಅದನ್ನೂ ಮಾಡವನು.

ಸೃಂಜಯಸ್ಯ ವಚಃ ಶ್ರುತ್ವಾ ತಥೈವ ಚ ಶುಚಿಸ್ಮಿತೇ ।
ಯದತ್ರಾನಂತರಂ ಕಾರ್ಯಂ ತದತ್ರೈವ ವಿಚಿಂತ್ಯತಾಮ್ ॥೪॥

ಎಲೌ ಶುಚಿಸ್ಮಿತೆಯೇ, ಸೃಂಜಯನಾದ ಹೋತ್ರವಾಹನನ ಮಾತನ್ನೂ ಕೇಳಿ ಮುಂದೆ ಏನು ಮಾಡಬೇಕೆಂದು ಇಲ್ಲಿಯೇ ವಿಚಾರ ಮಾಡು.

ಅಂಬಾ

ಅಪನೀತಾऽಸ್ಮಿ ಭೀಷ್ಮೇಣ ಭಗವನ್ನವಿಜಾನತಾ ।
ನ ಹಿ ಜಾನಾತಿ ಮೇ ಭೀಷ್ಮೋ ಬ್ರಹ್ಮನ್ ಸಾಲ್ವಗತಂ ಮನಃ ॥೫॥

ಅಂಬಾ– ಪೂಜ್ಯನೇ, ಭೀಷ್ಮನು ಅಜ್ಞಾನದಿಂದ ನನ್ನನ್ನು ಕರೆದುಕೊಂಡು ಹೋದನು. ನನ್ನ ಮನಸ್ಸು ಸಾಲ್ವನಲ್ಲಿದೆ ಎಂದು ಅವನು ತಿಳಿದಿರಲಿಲ್ಲ.

ಏತದ್ ವಿಚಾರ್ಯ ಮನಸಾ ಭಗವಾನೇತದ್ ವಿನಿಶ್ಚಯಮ್ ।
ವಿಚಿನೋತು ಯಥಾನ್ಯಾಯಂ ವಿಧಾನಂ ಕ್ರಿಯತಾಂ ತಥಾ ॥೬॥

ಇದನ್ನು ಮನಸ್ಸಿನಲ್ಲಿ ವಿಚಾರಿಸಿ, ನೀನೇ ಒಂದು ನಿಶ್ಚಯವನ್ನು ಮಾಡುವವನಾಗು. ಅನಂತರ ಅದಕ್ಕೆ ಅನುಗುಣವಾಗಿ ಕಾರ್ಯವು ಮಾಡಲ್ಪಡಲಿ.

ಭೀಷ್ಮೇ ವಾ ಕುರುಶಾರ್ದೂಲೇ ಸಾಲ್ವರಾಜೇऽಥವಾ ಪುನಃ ।
ಉಭಯೋರೇವ ವಾ ಬ್ರಹ್ಮನ್ ಯುಕ್ತಂ ಯತ್ ತತ್ ಸಮಾಚರ ॥೭॥

ಎಲೈ ಬ್ರಾಹ್ಮಣನೇ, ಕುರುಶಾರ್ದೂಲನಾದ ಭೀಷ್ಮನಿಗೆ ಅಥವಾ ಸೌಭಪತಿಯಾದ ಸಾಲ್ವನಿಗೆ ಅಥವಾ ಇಬ್ಬರಿಗೂ ಯಾವುದು ಯೋಗ್ಯವೋ ಅಂತಹದನ್ನು ಮಾಡುವವನಾಗು.

ನಿವೇದಿತಂ ಮಯಾ ಹ್ಯೇತದ್ ದುಃಖಮೂಲಂ ಯಥಾತಥಮ್ ।
ವಿಧಾನಂ ತತ್ರ ಭಗವನ್ ಕರ್ತುಮರ್ಹತಿ ಯುಕ್ತಿತಃ ॥೮॥

ನಾನು ನನ್ನ ದುಃಖದ ಮೂಲಕಾರಣವನ್ನು ಯಥಾರ್ಥವಾಗಿ ತಿಳಿಸಿದ್ದೇನೆ. ಪೂಜ್ಯನೇ, ಯೋಗ್ಯವಾದ ರೀತಿಯಲ್ಲಿ ಅದರ ಪ್ರತೀಕಾರವನ್ನು ನೀನು ಮಾಡಬೇಕು.

ಅಕೃತವ್ರಣಃ

ಉಪಪನ್ನಮಿದಂ ಭದ್ರೇ ಯದೇವಂ ವರವರ್ಣಿನಿ ।
ಧರ್ಮ್ಯಂ ಪ್ರತಿವಚೋ ಬ್ರೂಯಾಃ ಶೃಣು ಚೇದಂ ವಚೋ ಮಮ ॥೯॥

ಅಕೃತವ್ರಣ– ಎಲೌ ಭದ್ರೆಯೇ, ಸುಂದರಿಯೇ, ನೀನು ಹೀಗೆ ಧರ್ಮಯುಕ್ತವಾದ ಮಾತನ್ನಾಡುತ್ತಿರುವುದು ಯೋಗ್ಯವೇ ಆಗಿದೆ. ಈ ನನ್ನ ಮಾತನ್ನು ಕೇಳು.

ಯದಿ ತ್ವಮಾಪಗೇಯೋ ವೈ ನ ನಯೇದ್ ಗಜಸಾಹ್ವಯಮ್ ।
ಸಾಲ್ವಸ್ತ್ವಾಂ ಶಿರಸಾ ಭೀರು ಗೃಹ್ಣೀಯಾದ್ ರಾಮಚೋದಿತಃ ॥೧೦॥

ಎಲೌ ಭೀರುವೇ, ನಿನ್ನನ್ನು ಭೀಷ್ಮನು ಹಸ್ತಿನಪುರಕ್ಕೆ ಕರೆದುಕೊಂಡು ಹೋಗದೆ ಇದ್ದರೆ ಪರಶುರಾಮನ ಮಾತನ್ನು ಶಿರಸಾ ವಹಿಸಿ ಸಾಲ್ವನು ನಿನ್ನನ್ನು ಸ್ವೀಕರಿಸಿರುತ್ತಿದ್ದನು.

ತೇನ ತ್ವಂ ನಿರ್ಜಿತಾ ಭದ್ರೇ ಯಸ್ಮಾನ್ನೀತಾऽಸಿ ಭಾಮಿನಿ ।
ಸಂಶಯಃ ಸಾಲ್ವರಾಜಸ್ಯ ತೇನ ತ್ವಯಿ ಸುಮಧ್ಯಮೇ ॥೧೧॥

ಎಲೌ ಭದ್ರೆಯೇ, ಭಾಮಿನಿಯೇ, ಭೀಷ್ಮನಿಂದ ನೀನು ನಿರ್ಜಿತಳಾಗಿ ಕರೆದುಕೊಂಡು ಹೋಗಲ್ಪಟ್ಟೆ. ಆ ಕಾರಣದಿಂದ ಸಾಲ್ವರಾಜನಿಗೆ ನಿನ್ನ ವಿಷಯದಲ್ಲಿ ಸಂಶಯವಿದೆ.

ಭೀಷ್ಮಃ ಪುರುಷಮಾನೀ ಚ ಜಿತಕಾಶೀ ತಥೈವ ಚ ।
ತಸ್ಮಾತ್ ಪ್ರತಿಕ್ರಿಯಾ ಯುಕ್ತಾ ಭೀಷ್ಮೇ ಕಾರಯಿತುಂ ತ್ವಯಾ ॥೧೨॥

ಭೀಷ್ಮನು ತನ್ನನ್ನು ಶ್ರೇಷ್ಠಪುರುಷನೆಂದು ತಿಳಿದವನು ಮತ್ತು ಜಯಾಕಾಂಕ್ಷಿಯಾಗಿದ್ದಾನೆ. ಆದ್ದರಿಂದ ಭೀಷ್ಮನಿಗೇ ಪ್ರತೀಕಾರ ಮಾಡಿಸುವುದು ಯೋಗ್ಯವಾಗಿದೆ.

ಅಂಬಾ

ಮಮಾಪ್ಯೇಷ ಸದಾ ಬ್ರಹ್ಮನ್ ಹೃದಿ ಕಾಮೋಽಭಿವರ್ತತೇ ।
ಘಾತಯೇಯಂ ಯದಿ ರಣೇ ಭೀಷ್ಮಮಿತ್ಯೇವ ನಿತ್ಯದಾ ॥೧೩॥

ಅಂಬಾ– ಎಲೈ ಬ್ರಾಹ್ಮಣನೇ, ನನಗೂ ಸಹ ಯಾವಾಗಲೂ ಮನಸ್ಸಿನಲ್ಲಿ ಯುದ್ಧದಲ್ಲಿ ಭೀಷ್ಮನನ್ನು ಕೊಲ್ಲಿಸಬೇಕು ಎಂಬ ಆಸೆಯು ಇದೆ.

ಭೀಷ್ಮಂ ವಾ ಸಾಲ್ವರಾಜಂ ವಾ ಯಂ ವಾ ದೋಷೇಣ ಗಚ್ಛಸಿ ।
ಪ್ರಶಾಧಿ ತಂ ಮಹಾಬಾಹೋ ಯತ್ಕೃತೇಽಹಂ ಸುದುಃಖಿತಾ ॥೧೪॥

ಎಲೈ ಮಹಾಬಾಹುವೇ, ಯಾರು ಈ ವಿಷಯದಲ್ಲಿ ದೋಷದಿಂದ ಕೂಡಿದವರು ಎಂದು ನಿರ್ಧರಿಸುತ್ತೀಯೋ ಅವನು ಭೀಷ್ಮನಾಗಲೀ ಅಥವಾ ಸಾಲ್ವನಾಗಲೀ ಅವನಿಗೆ ಶಾಸನವನ್ನು ಮಾಡುವವನಾಗು. ಏಕೆಂದರೆ ಅವನ ನಿಮಿತ್ತದಿಂದಾಗಿ ನಾನು ಬಹಳ ದುಃಖವನ್ನು ಹೊಂದಿದ್ದೇನೆ.

ಭೀಷ್ಮಃ

ಏವಂ ಕಥಯತಾಮೇವ ತೇಷಾಂ ಸ ದಿವಸೋ ಗತಃ ।
ರಾತ್ರಿಶ್ಚ ಭರತಶ್ರೇಷ್ಠ ಸುಖಶೀತೋಷ್ಣಮಾರುತಾ ॥೧೫॥

ಭೀಷ್ಮ- ಎಲೈ ಭರತಶ್ರೇಷ್ಠನೇ, ಹೀಗೆ ಅವರು ಮಾತನಾಡುತ್ತಿರುವಂತೆಯೇ ಹಗಲು ಕಳೆದುಹೋಯಿತು. ಹಾಗೆಯೇ ರಾತ್ರಿಯೂ ಸುಖಶೀತೋಷ್ಣಸ್ಪರ್ಶವುಳ್ಳ ವಾಯುವಿನಿಂದ ಕಳೆದು ಹೋಯಿತು.

ತತೋ ರಾಮಃ ಪ್ರಾದುರಾಸೀದ್ ಪ್ರಜ್ವಲನ್ನಿವ ತೇಜಸಾ ।
ಶಿಷ್ಯೈಃ ಪರಿವೃತೋ ರಾಜನ್ ಜಟಾಚೀರಧರೋ ಮುನಿಃ ॥೧೬॥

ಎಲೈ ರಾಜನೇ, ಅನಂತರ ತನ್ನ ಕಾಂತಿಯಿಂದ ಬೆಳಗುತ್ತಾ, ಜಟಾವಲ್ಕಲಗಳನ್ನು ಧರಿಸಿ ಶಿಷ್ಯರಿಂದ ಕೂಡಿದ ಪರಶುರಾಮ ಮುನಿಯು ಪ್ರತ್ಯಕ್ಷನಾದನು.

ಧನುಷ್ಪಾಣಿರದೀನಾತ್ಮಾ ಖಡ್ಗಂ ಬಿಭ್ರತ್ ಪರಶ್ವಧೀ ।
ವಿರಜಾ ರಾಜಶಾರ್ದೂಲ ಸೋಽಭ್ಯಯಾತ್ ಸೃಂಜಯಂ ನೃಪಮ್ ॥

ಎಲೈ ರಾಜಶಾರ್ದೂಲನೇ, ಧೈರ್ಯಶಾಲಿಯಾದ, ಪರಿಶುದ್ಧನಾದ ಅವನು (ದೈನ್ಯವಿಲ್ಲದ ಅವನು) ಕೈಯಲ್ಲಿ ಧನುಸ್ಸನ್ನೂ, ಖಡ್ಗವನ್ನೂ ಮತ್ತು ಪರಶುವನ್ನೂ ಹಿಡಿದು ಸೃಂಜಯನೃಪನ ಬಳಿಗೆ ಬಂದನು.

ತತಸ್ತಂ ತಾಪಸಾ ದೃಷ್ಟ್ವಾ ಸ ಚ ರಾಜಾ ಮಹಾತಪಾಃ ।
ತಸ್ಥುಃ ಪ್ರಾಂಜಲಯೋ ರಾಜನ್ ಸಾ ಚ ಕನ್ಯಾ ತಪಸ್ವಿನೀ ॥೧೮॥

ಆಗ ಅವನನ್ನು ನೋಡಿ ಮಹಾತಪಸ್ವಿಯಾದ ಸೃಂಜಯನೂ, ಉಳಿದ ತಪಸ್ವಿಗಳೂ ಮತ್ತು ತಪಸ್ವಿನಿಯಾದ ಅಂಬೆಯೂ ಸಹ ಕೈಗಳನ್ನು ಮುಗಿದು ಎದ್ದು ನಿಂತರು.

ಪೂಜಯಾಮಾಸುರವ್ಯಗ್ರಾ ಮಧುಪರ್ಕೇಣ ಭಾರ್ಗವಮ್ ।
ಪೂಜಿತಶ್ಚ ಯಥಾನ್ಯಾಯಂ ನಿಷಸಾದ ಸಹೈವ ತೈಃ ॥೧೯॥

ಅವರು ಶ್ರದ್ಧೆಯಿಂದ ಭಾರ್ಗವರಾಮನನ್ನು ಮಧುಪರ್ಕದಿಂದ ಪೂಜಿಸಿದರು. ವಿಧಿ ಪ್ರಕಾರದಂತೆ ಪೂಜಿಸಲ್ಪಟ್ಟ ಪರಶುರಾಮನು ಅವರ ಜೊತೆಯಲ್ಲಿ ಕುಳಿತನು.

ತತಃ ಪೂರ್ವವ್ಯತೀತಾನಿ ಕಥಯೇತೇ ಸ್ಮ ತಾವುಭೌ ।
ಆಸಾತಾಂ ಜಾಮದಗ್ನ್ಯಶ್ಚ ಸೃಂಜಯಶ್ಚೈವ ಭಾರತ ॥೨೦॥

ಎಲೈ ಭಾರತನೇ, ಅನಂತರ ಪರಶುರಾಮ ಸೃಂಜಯರಿಬ್ಬರೂ ಹಿಂದಿನ ಕಥೆಗಳನ್ನು ಹೇಳುತ್ತಾ ಕುಳಿತರು.

ತಥಾ ಕಥಾಂತೇ ರಾಜರ್ಷಿರ್ಭೃಗುಶ್ರೇಷ್ಠಂ ಮಹಾಬಲಮ್ ।
ಉವಾಚ ಮಧುರಂ ಕಾಲೇ ರಾಮಂ ವಚನಮರ್ಥವತ್ ॥೨೧॥

ಆ ಮಾತುಗಳು ಮುಗಿದ ಮೇಲೆ ರಾಜರ್ಷಿಯಾದ ಹೋತ್ರವಾಹನನು ಮಹಾಬಲನಾದ, ಭೃಗುಶ್ರೇಷ್ಠನಾದ ಪರಶುರಾಮನನ್ನು ಕುರಿತು ಅರ್ಥವತ್ತಾದ, ಮಧುರವಾದ ಮಾತುಗಳನ್ನು ಯೋಗ್ಯವಾದ ಸಮಯದಲ್ಲಿ ಆಡಿದನು.

ರಾಮೇಯಂ ಮಮ ದೌಹಿತ್ರೀ ಕಾಶಿರಾಜಸುತಾ ಪ್ರಭೋ ।
ಅಸ್ಯಾಃ ಶೃಣು ಯಥಾತತ್ತ್ವಂ ಕಾರ್ಯಂ ಕಾರ್ಯವಿಶಾರದ ॥೨೨॥

ಎಲೈ ರಾಮನೇ, ಪ್ರಭುವೇ, ಕಾಶಿರಾಜನ ಮಗಳಾದ ಇವಳು ನನ್ನ ಮಗಳ ಮಗಳು. ಎಲೈ ಕಾರ್ಯವಿಶಾರದನೇ, ಇವಳಿಗೆ ಆಗಬೇಕಾದ ಶ್ರೇಷ್ಠವಾದ ಕಾರ್ಯವನ್ನು ಸರಿಯಾಗಿ ಕೇಳು.

ಪರಮಂ ಕಥ್ಯತಾಂ ಚೇತಿ ತಾಂ ರಾಮಃ ಪ್ರತ್ಯಭಾಷತ ।
ತತಃ ಸಾಽಭ್ಯವದದ್ ರಾಮಂ ಜ್ವಲಂತಮಿವ ಪಾವಕಮ್ ॥೨೩॥

ಆಗ ಪರಶುರಾಮನು ಹೇಳು ಎಂದು ಅವರಿಗೆ ಹೇಳಿದನು. ಆಗ ಅವಳು ಜ್ವಲಿಸುವ ಅಗ್ನಿಯಂತಿರುವ ಅವನಿಗೆ ತನ್ನ ಕಥೆಯನ್ನು ಹೇಳಿದಳು.

ತತೋಽಭಿವಾದ್ಯ ಚರಣೌ ರಾಮಸ್ಯ ಶಿರಸಾ ಶುಭಾ ।
ಸ್ಪೃಷ್ಟ್ವಾ ಪದ್ಮದಲಾಭಾಭ್ಯಾಂ ಪಾಣಿಭ್ಯಾಮಗ್ರತಃ ಸ್ಥಿತಾ ॥೨೪॥

ಆಗ ಶುಭಳಾದ ಅವಳು ರಾಮನ ಪಾದಗಳಿಗೆ ಶಿರಸಾ ಪ್ರಣಾಮವನ್ನು ಮಾಡಿ ತನ್ನ ಪದ್ಮದಲಗಳಂತಿದ್ದ ಹಸ್ತಗಳಿಂದ ಅವನ ಪಾದಗಳನ್ನು ಮುಟ್ಟಿ ಎದುರಿಗೆ ನಿಂತಳು.

ಪ್ರರುರೋದ ವರಾರೋಹಾ ಬಾಷ್ಪವ್ಯಾಕುಲಲೋಚನಾ ।
ಪ್ರಪೇದೇ ಶರಣಂ ಚೈವ ಶರಣ್ಯಂ ಭೃಗುನಂದನಮ್ ॥೨೫॥

ಸುಂದರಿಯಾದ ಅವಳು ಕಣ್ಣೀರಿನಿಂದ ತುಂಬಿದ ಕಣ್ಣುಳ್ಳವಳಾಗಿ, ಶರಣು ಹೊಂದಲು ಅತ್ಯಂತ ಅರ್ಹನಾದ ಪರಶುರಾಮನನ್ನು ಶರಣು ಹೊಂದಿದಳು.

ರಾಮಃ

ಯಥಾ ತ್ವಂ ಸೃಂಜಯಸ್ಯಾಸ್ಯ ತಥಾ ತ್ವಂ ಮೇ ನೃಪಾತ್ಮಜೇ ।
ಬ್ರೂಹಿ ತತ್ ತೇ ಮನೋದುಃಖಂ ಕರಿಷ್ಯೇ ವಚನಂ ತವ ॥೨೬॥

ರಾಮ– ಎಲೌ ರಾಜಕುಮಾರಿಯೇ, ನೀನು ಸೃಂಜಯನಿಗೆ ಹೇಗೋ ನನಗೂ ಸಹ ಹಾಗೆಯೇ. ನಿನ್ನ ಮನಸ್ಸಿನ ದುಃಖವನ್ನು ಹೇಳು, ನಿನ್ನ ಮಾತನ್ನು ನಡೆಸುವೆನು.

ಅಂಬಾ

ಭಗವನ್ ಶರಣಂ ತ್ವಾऽದ್ಯ ಪ್ರಪನ್ನಾऽಸ್ಮಿ ಮಹಾವ್ರತಮ್ ।
ಶೋಕಪಂಕಾರ್ಣವೇ ಮಗ್ನಾಂ ಘೋರಾದುದ್ಧರ ಮಾಂ ವಿಭೋ ॥೨೭॥

ಅಂಬಾ– ಪೂಜ್ಯನೇ, ವಿಭುವೇ, ನಾನು ಈ ದಿನ ಮಹಾವ್ರತಧಾರಿಯಾದ ನಿನಗೆ ಶರಣಾಗತಳಾಗಿದ್ದೇನೆ. ಘೋರವಾದ ದುಃಖವೆಂಬ ಕೆಸರಿನಲ್ಲಿ ಮುಳುಗುತ್ತಿರುವ ನನ್ನನ್ನು ಎತ್ತುವವನಾಗು.

ಭೀಷ್ಮಃ

ತಸ್ಯಾಶ್ಚ ದೃಷ್ಟ್ವಾ ರೂಪಂ ಸ ವಯಶ್ಚಾಭಿನವಂ ಪುನಃ ।
ಸೌಕುಮಾರ್ಯಂ ಪರಂ ಚೈವ ರಾಮಶ್ಚಿಂತಾಪರೋऽಭವತ್ ॥೨೮॥

ಭೀಷ್ಮ– ಪರಶುರಾಮನು ಅವಳ ರೂಪವನ್ನೂ, ಎಳೆಯ ವಯಸ್ಸನ್ನೂ, ಸುಕುಮಾರವಾದ ಶರೀರವನ್ನೂ ನೋಡಿ ಚಿಂತಾಕ್ರಾಂತನಾದನು.

ಕಿಮಿಯಂ ವಕ್ಷ್ಯತೀತ್ಯೇವಂ ವಿಮೃಶನ್ ಭೃಗುಸತ್ತಮಃ ।
ಇತಿ ದಧ್ಯೌ ಚಿರಂ ರಾಮಃ ಕೃಪಯಾऽಭಿಪರಿಪ್ಲುತಃ ॥೨೯॥

ಭೃಗುಶ್ರೇಷ್ಠನಾದ ಪರಶುರಾಮನು ಇವಳು ಏನು ಹೇಳುವಳು ಎಂದು ವಿಮರ್ಶೆ ಮಾಡುತ್ತಾ, ಅವಳ ಮೇಲೆ ಕೃಪೆಯಿಂದ ಪೂರ್ಣನಾಗಿ ಬಹಳ ಸಮಯದವರೆಗೆ ಧ್ಯಾನ ಮಾಡಿದನು.

ಕಥ್ಯತಾಮಿತಿ ಸಾ ಭೂಯೋ ರಾಮೇಣೋಕ್ತಾ ಶುಚಿಸ್ಮಿತಾ ।
ಸರ್ವಮೇವ ಯಥಾತತ್ತ್ವಂ ಕಥಯಾಮಾಸ ಭಾರ್ಗವೇ ॥೩೦॥

ಹೇಳು ಎಂದು ಪರಶುರಾಮನಿಂದ ಪುನಃ ಪ್ರೇರಿಸಲ್ಪಟ್ಟ ಶುಚಿಸ್ಮಿತೆಯಾದ ಅವಳು ಎಲ್ಲವನ್ನೂ ಯಥಾರ್ಥವಾಗಿ ಅವನಿಗೆ ತಿಳಿಸಿದಳು.

ತಚ್ಛ್ರುತ್ವಾ ಜಾಮದಗ್ನ್ಯಸ್ತು ರಾಜಪುತ್ರ್ಯಾ ವಚಸ್ತದಾ ।
ಉವಾಚ ತಾಂ ವರಾರೋಹಾಂ ನಿಶ್ಚಿತ್ಯಾರ್ಥವಿನಿಶ್ಚಯಮ್ ॥೩೧॥

ರಾಜಪುತ್ರಿಯ ಆ ಮಾತುಗಳನ್ನು ಕೇಳಿದ ಪರಶುರಾಮನು ಮಾಡಬೇಕಾದ ಕಾರ್ಯವನ್ನು ಮನಸ್ಸಿನಲ್ಲಿಯೇ ನಿಶ್ಚಯಿಸಿ ಆ ಸುಂದರಿಯನ್ನು ಕುರಿತು ಹೇಳಿದನು.

ಪ್ರೇಷಯಿಷ್ಯಾಮಿ ಭೀಷ್ಮಾಯ ಕುರುಶ್ರೇಷ್ಠಾಯ ಭಾಮಿನಿ ।
ಕರಿಷ್ಯತಿ ವಚೋ ಮಹ್ಯಂ ಶ್ರುತ್ವಾ ಧರ್ಮಂ ನರಾಧಿಪಃ ॥೩೨॥

ಎಲೌ ಭಾಮಿನಿಯೇ, ಕುರುಶ್ರೇಷ್ಠನಾದ ಭೀಷ್ಮನಿಗೆ ನಾನು ದೂತನನ್ನು ಕಳುಹಿಸುವೆನು. ರಾಜನಾದ ಅವನು ಧರ್ಮಯುಕ್ತವಾದ ನನ್ನ ಮಾತನ್ನು ಕೇಳಿ ಅದನ್ನು ನಡೆಸಿಕೊಡುವನು.

ನ ಚೇತ್ ಕರಿಷ್ಯತಿ ವಚೋ ಮಯೋಕ್ತಂ ಜಾಹ್ನವೀಸುತಃ ।
ಧಕ್ಷ್ಯಾಮ್ಯೇನಂ ರಣೇ ಭದ್ರೇ ಸಾಮಾತ್ಯಂ ಶಸ್ತ್ರತೇಜಸಾ ॥೩೩॥

ಗಂಗಾಸುತನಾದ ಅವನು ನನ್ನ ಮಾತನ್ನು ಕೇಳದಿದ್ದರೆ ಎಲೌ ಭದ್ರೆಯೇ, ಅಮಾತ್ಯರಿಂದ ಕೂಡಿದ ಅವನನ್ನು ಯುದ್ಧದಲ್ಲಿ ನನ್ನ ಶಸ್ತ್ರತೇಜಸ್ಸಿನಿಂದ ಸುಟ್ಟು ಬಿಡುವೆನು.

ಅಥವಾ ತೇ ಮತಿಸ್ತತ್ರ ರಾಜಪುತ್ರಿ ನ ವರ್ತತೇ ।
ಯಾವತ್ ಸಾಲ್ವಪತಿಂ ವೀರಂ ಯೋಜಯಾಮ್ಯತ್ರ ಕರ್ಮಣಿ ॥೩೪॥

ಅಥವಾ ರಾಜಕುಮಾರಿಯೇ, ನಿನಗೆ ಆ ಅಭಿಪ್ರಾಯವಿಲ್ಲದಿದ್ದರೆ ವೀರನಾದ ಸಾಲ್ವಪತಿಯನ್ನಾದರೂ ನಾನು ಈ ಕಾರ್ಯದಲ್ಲಿ ಯೋಜಿಸುತ್ತೇನೆ.

ಅಂಬಾ

ವಿಸರ್ಜಿತಾऽಹಂ ಭೀಷ್ಮೇಣ ಶ್ರುತ್ವೈವ ಭೃಗುನಂದನ ।
ಸಾಲ್ವರಾಜಗತಂ ಭಾವಂ ಮಮ ಪೂರ್ವಂ ಮನೀಷಿತಮ್ ॥೩೫॥

ಅಂಬಾ– ಎಲೈ ಭೃಗುನಂದನನೇ, ನನ್ನ ಪ್ರೀತಿಯು ಮೊದಲೇ ಸಾಲ್ವರಾಜನಲ್ಲಿದೆ ಎಂಬ ಮಾತನ್ನು ಕೇಳಿದ ಭೀಷ್ಮನು ನನ್ನನ್ನು ಕಳುಹಿಸಿಕೊಟ್ಟನು.

ಸೌಭರಾಜಮುಪೇತ್ಯಾಹಮವೋಚಂ ದುರ್ವಚಂ ವಚಃ ।
ನ ಚ ಮಾಂ ಪ್ರತ್ಯಗೃಹ್ಣಾತ್ ಸ ಚಾರಿತ್ರಪರಿಶಂಕಿತಃ ॥೩೬॥

ನಾನು ಸೌಭಪತಿಯಾದ ಸಾಲ್ವನ ಬಳಿಗೆ ಬಂದು ಮಾತನಾಡಲು ಕಷ್ಟವಾದ ಮಾತುಗಳನ್ನು ಆಡಿದೆನು. ನನ್ನ ಶೀಲವನ್ನು ಶಂಕಿಸಿ ಅವನು ನನ್ನನ್ನು ಸ್ವೀಕರಿಸಲಿಲ್ಲ.

ಏತತ್ ಸರ್ವಂ ವಿನಿಶ್ಚಿತ್ಯ ಸ್ವಬುದ್ಧ್ಯಾ ಭೃಗುನಂದನ ।
ಯದತ್ರೌಪಯಿಕಂ ಕಾರ್ಯಂ ತಚ್ಚಿಂತಯಿತುಮರ್ಹಸಿ ॥೩೭॥

ಎಲೈ ಭೃಗುನಂದನನೇ, ಇದೆಲ್ಲವನ್ನೂ ನಿನ್ನ ಬುದ್ಧಿಯಿಂದಲೇ ವಿಮರ್ಶೆ ಮಾಡಿ, ಇದರಲ್ಲಿ ಯಾವುದು ಸೂಕ್ತವಾದ ಕಾರ್ಯವೋ ಅದನ್ನು ನಿರ್ಧರಿಸುವವನಾಗು.

ಮಮ ತು ವ್ಯಸನಸ್ಯಾಸ್ಯ ಭೀಷ್ಮೋ ಮೂಲಂ ಮಹಾವ್ರತಃ ।
ಯೇನಾಹಂ ವಶಮಾನೀತಾ ಸಮುತ್ಥಾಪ್ಯ ಬಲಾತ್ ತದಾ ॥೩೮॥

ನನ್ನ ಈ ದುಃಖಕ್ಕೆ ಮೂಲಕಾರಣನಾದವನು ಮಹಾವ್ರತನಾದ ಭೀಷ್ಮ. ಏಕೆಂದರೆ ಅವನು ನನ್ನನ್ನು ವಶಪಡಿಸಿಕೊಂಡು ಬಲಾತ್ಕಾರದಿಂದ ನನ್ನನ್ನು ಕಾಶಿಯಿಂದ ಕರೆದುಕೊಂಡು ಹೋದನು.

ಜಹಿ ಭೀಷ್ಮಂ ಮಹಾಬಾಹೋ ಯತ್ಕೃತೇ ದುಃಖಮೀದೃಶಮ್ ।
ಪ್ರಾಪ್ತಾऽಹಂ ಭೃಗುಶಾರ್ದೂಲ ಚರಾಮ್ಯಪ್ರಿಯಮುತ್ತಮಮ್ ॥೩೯॥

ಎಲೈ ಭೃಗುಶಾರ್ದೂಲನೇ, ಯಾವ ಭೀಷ್ಮನ ಕಾರಣದಿಂದಾಗಿ ನಾನು ಇಂತಹ ಅಧಿಕವಾದ ದುಃಖವನ್ನು ಅನುಭವಿಸುತ್ತಿದ್ದೇನೆಯೋ ಎಲೈ ಮಹಾಬಾಹುವೇ, ಅಂತಹ ಭೀಷ್ಮನನ್ನು ಸಂಹಾರ ಮಾಡು.

ಸ ಹಿ ಲುಬ್ಧಶ್ಚ ಮಾನೀ ಚ ಜಿತಕಾಶೀ ಚ ಭಾರ್ಗವ ।
ತಸ್ಮಾತ್ ಪ್ರತಿಕ್ರಿಯಾಂ ಕರ್ತುಂ ಯುಕ್ತಂ ತಸ್ಯೈ ತ್ವಯಾऽನಘ ॥೪೦॥

ಎಲೈ ಭಾರ್ಗವನೇ, ಅವನು ಲೋಭವುಳ್ಳವನು, ಅಹಂಕಾರಿ ಮತ್ತು ಯಾವಾಗಲೂ ಜಯಾಕಾಂಕ್ಷಿ. ಎಲೈ ಅನಘನೇ, ಆದ್ದರಿಂದ ಭೀಷ್ಮನಿಗೇ ಪ್ರತಿಕಾರವನ್ನು ಮಾಡುವುದು ಯೋಗ್ಯವಾಗುತ್ತದೆ.

ಏಷ ಮೇ ಹ್ರಿಯಮಾಣಾಯಾ ಭಾರತೇನ ತದಾ ವಿಭೋ ।
ಅಭವದ್ ಹೃದಿ ಸಂಕಲ್ಪೋ ಘಾತಯೇಯಂ ಮಹಾವ್ರತಮ್ ॥೪೧॥

ಎಲೈ ವಿಭುವೇ, ನನ್ನನ್ನು ಅವನು ಕಾಶಿಯಿಂದ ರಥದಲ್ಲಿ ಕೂಡಿಸಿಕೊಂಡು ಕರೆದುಕೊಂಡು ಹೋಗುತ್ತಿರುವಾಗಲೇ ಮಹಾವ್ರತನಾದ ಇವನನ್ನು ಕೊಲ್ಲಿಸಿಯೇನು ಎಂಬ ಅಭಿಪ್ರಾಯವು ನನ್ನ ಮನಸ್ಸಿನಲ್ಲಿ ಮೂಡಿತು.

ತಸ್ಮಾತ್ ಕಾಮಂ ಮಮಾದ್ಯೇಮಂ ರಾಮ ಸಂಪಾದಯಾನಘ ।
ಜಹಿ ಭೀಷ್ಮಂ ಮಹಾಬಾಹೋ ಯಥಾ ವೃತ್ರಂ ಪುರಂದರಃ ॥೪೨॥

ಎಲೈ ಅನಘನೇ, ಪರಶುರಾಮನೇ, ಈ ನನ್ನ ಮನಸ್ಸಿನ ಆಸೆಯನ್ನು ಈ ದಿನ ಈಡೇರಿಸುವವನಾಗು. ಮಹಾಬಾಹುವೇ, ಇಂದ್ರನು ವೃತ್ರನನ್ನು ಸಂಹರಿಸಿದಂತೆ ಭೀಷ್ಮನನ್ನು ಸಂಹರಿಸು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಸಪ್ತತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತೇಳನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೆಂಟನೆಯ ಅಧ್ಯಾಯ

ಪರಶುರಾಮರಿಂದ ಅಂಬೆಯನ್ನು ಕರೆದುಕೊಂಡು ಕುರುಕ್ಷೇತ್ರಕ್ಕೆ ಗಮನ.

ಭೀಷ್ಮಃ

ಏವಮುಕ್ತಸ್ತದಾ ರಾಮೋ ಜಹಿ ಭೀಷ್ಮಮಿತಿ ಪ್ರಭೋ ।
ಉವಾಚ ರುದತೀಂ ಕನ್ಯಾಂ ಚೋದಯಂತೀಂ ಪುನಃ ಪುನಃ ॥೧॥

ಭೀಷ್ಮ– ಎಲೈ ಪ್ರಭುವೇ, ಹೀಗೆ ಭೀಷ್ಮನನ್ನು ಕೊಲ್ಲು ಎಂದು ಪುನಃ ಪುನಃ ಹೇಳಲ್ಪಟ್ಟ ಪರಶುರಾಮನು ಅಳುತ್ತಿದ್ದ, ಪುನಃ ಪುನಃ ಒತ್ತಾಯ ಮಾಡುತ್ತಿದ್ದ ಆ ಕನ್ಯೆಯನ್ನು ಕುರಿತು ಮಾತನಾಡಿದನು.

ಕಾಶ್ಯೇ ಕಾಮಂ ನ ಗೃಹ್ಣಾಮಿ ಶಸ್ತ್ರಂ ವೈ ವರವರ್ಣಿನಿ ।
ಋತೇ ಬ್ರಹ್ಮವಿದಾಂ ಹೇತೋಃ ಕಿಮನ್ಯತ್ ಕರವಾಣಿ ತೇ ॥೨॥

ಕಾಶಿರಾಜನ ಪುತ್ರಿಯಾದ ಸುಂದರಿಯೇ, ನಾನು ಬ್ರಾಹ್ಮಣರ ಸಲುವಾಗಿ ಶಸ್ತ್ರವನ್ನು ಹಿಡಿಯುವುದನ್ನು ಬಿಟ್ಟು ನನ್ನ ಇಚ್ಛೆಯಿಂದ ಶಸ್ತ್ರವನ್ನು ಹಿಡಿಯುವುದಿಲ್ಲ. ನಿನಗೆ ಬೇರೆ ಏನನ್ನು ಮಾಡಲಿ?

ವಾಚಾ ಭೀಷ್ಮಶ್ಚ ಸಾಲ್ವಶ್ಚ ಮಮ ರಾಜ್ಞಿ ವಶಾನುಗೌ ।
ಭವಿಷ್ಯತೋಽನವದ್ಯಾಂಗಿ ತತ್ ಕರಿಷ್ಯಾಮಿ ಮಾ ಶುಚಃ ॥೩॥

ಎಲೌ ರಾಜಕುಮಾರಿಯೇ, ನಿರ್ದುಷ್ಟ ಅವಯವವುಳ್ಳವಳೇ, ಭೀಷ್ಮ ಮತ್ತು ಸಾಲ್ವರಿಬ್ಬರೂ ನನ್ನ ಮಾತಿಗೆ ವಶವರ್ತಿಗಳಾಗುವರು. ಆದ್ದರಿಂದ ನಿನ್ನ ಆಸೆಯನ್ನು ನೆರವೇರಿಸುವೆನು, ಶೋಕಪಡಬೇಡ.

ನ ತು ಶಸ್ತ್ರಂ ಗ್ರಹೀಷ್ಯಾಮಿ ಕಥಂಚಿದಪಿ ಭಾಮಿನಿ ।
ಋತೇ ನಿಯೋಗಾದ್ ವಿಪ್ರಾಣಾಮೇಷ ಮೇ ಸಮಯಃ ಕೃತಃ ॥೪॥

ಆದರೆ ಎಲೌ ಕೋಪವುಳ್ಳ ವನಿತೆಯೇ, ಬ್ರಾಹ್ಮಣರ ಆದೇಶವಿಲ್ಲದೆ ನಾನು ಎಂದೂ ಶಸ್ತ್ರವನ್ನು ಹಿಡಿಯುವುದಿಲ್ಲ. ಇದು ನಾನು ಮಾಡಿರುವ ಪ್ರತಿಜ್ಞೆ.

ಅಂಬಾ

ಮಮ ದುಃಖಂ ಭಗವತಾ ವ್ಯಪನೇಯಂ ಯತಸ್ತತಃ ।
ತಚ್ಚ ಭೀಷ್ಮಪ್ರಸೂತಂ ಮೇ ತಂ ಜಹೀಶ್ವರ ಮಾಚಿರಮ್ ॥೫॥

ಅಂಬಾ– ನನಗೆ ಯಾವ ಕಾರಣದಿಂದ ದುಃಖವುಂಟಾಗಿದೆಯೋ ಆ ಕಾರಣವನ್ನು ಪರಿಹರಿಸಬೇಕು. ನನ್ನ ದುಃಖಕ್ಕೆ ಭೀಷ್ಮನು ಕಾರಣ. ಆದ್ದರಿಂದ ಅವನನ್ನು ಶೀಘ್ರವಾಗಿ ಸಂಹರಿಸು.

ರಾಮಃ

ಕಾಶಿಕನ್ಯೇ ಪುನರ್ಬ್ರೂಹಿ ಭೀಷ್ಮಸ್ತೇ ಚರಣಾವುಭೌ ।
ಶಿರಸಾ ವಂದನಾರ್ಹೋ೯ಪಿ ಗ್ರಹೀಷ್ಯತಿ ಗಿರಾ ಮಮ ॥೬॥

ರಾಮ– ಕಾಶಿಕನ್ಯೆಯೇ, ಪುನಃ ಹೇಳು. ನಮಸ್ಕಾರಕ್ಕೆ ಯೋಗ್ಯನಾದರೂ ಸಹ ಭೀಷ್ಮನು ನನ್ನ ಮಾತಿನಂತೆ ನಿನ್ನ ಪಾದಗಳಿಗೆ ನಮಸ್ಕರಿಸುವನು.

ಅಂಬಾ

ಜಹಿ ಭೀಷ್ಮಂ ರಣೇ ವೀರ ಮಮ ಚೇದಿಚ್ಛಸಿ ಪ್ರಿಯಮ್ ।
ಪ್ರತಿಶ್ರುತಂ ಚ ಯದಿದಂ ತತ್ಸತ್ಯಂ ಕರ್ತುಮರ್ಹಸಿ ॥೭॥

ಅಂಬಾ– ಎಲೈ ವೀರನೇ, ನನಗೆ ಪ್ರಿಯವನ್ನು ಮಾಡುವುದಾದರೆ ಭೀಷ್ಮನನ್ನು ಕೊಲ್ಲು. ನೀನು ಮುಂಚೆಯೇ ಮಾಡಿದ ಪ್ರತಿಜ್ಞೆಯನ್ನು ಸತ್ಯವನ್ನಾಗಿ ಮಾಡಬೇಕು.

ಭೀಷ್ಮಃ

ತಯೋಃ ಸಂವದತೋರೇವಂ ರಾಜನ್ ರಾಮಾಂಬಯೋಸ್ತದಾ ।
ಅಕೃತವ್ರಣೋ ಜಾಮದಗ್ನ್ಯಮಿದಂ ವಚನಮಬ್ರವೀತ್ ॥೮॥

ಭೀಷ್ಮ– ಎಲೈ ರಾಜನೇ, ಪರಶುರಾಮ ಮತ್ತು ಅಂಬೆಯರು ಹೀಗೆ ಮಾತನಾಡುತ್ತಿದ್ದಾಗ ಅಕೃತವ್ರಣನು ಪರಶುರಾಮನನ್ನು ಕುರಿತು ಮಾತನಾಡಿದನು.

ಶರಣಾಗತಾಂ ಮಹಾಬಾಹೋ ಕನ್ಯಾಂ ನ ತ್ಯಕ್ತುಮರ್ಹಸಿ ।
ಜಹಿ ಭೀಷ್ಮಂ ರಣೇ ರಾಮ ಗರ್ಜಂತಮಸುರಂ ಯಥಾ ॥೯॥

ಎಲೈ ಮಹಾಬಾಹುವೇ, ಶರಣಾಗತಳಾದ ಈ ಕನ್ಯೆಯನ್ನು ಪರಿತ್ಯಜಿಸುವುದು ಯೋಗ್ಯವಲ್ಲ. ಎಲೈ ರಾಮನೇ, ಅಸುರನಂತೆ ಗರ್ಜಿಸುತ್ತಿರುವ ಭೀಷ್ಮನನ್ನು ಯುದ್ಧದಲ್ಲಿ ಕೊಲ್ಲುವವನಾಗು.

ಯದಿ ಭೀಷ್ಮೋ ರಣೇ ರಾಮ ಸಮಾಹೂತಸ್ತ್ವಯಾ ಮೃಧೇ ।
ನಿರ್ಜಿತೋಽಸ್ಮೀತಿ ವಾ ಬ್ರೂಯಾತ್ ಕುರ್ಯಾದ್ ವಾ ವಚನಂ ತವ ॥

ಕೃತಮಸ್ಯಾ ಭವೇತ್ ಕಾರ್ಯಂ ಕನ್ಯಾಯಾ ಭೃಗುನಂದನ ।
ವಾಕ್ಯಂ ಸತ್ಯಂ ಚ ತೇ ವೀರ ಭವಿಷ್ಯತಿ ಕೃತಂ ವಿಭೋ ॥೧೧॥

ಎಲೈ ರಾಮನೇ, ಯುದ್ಧಕ್ಕೆ ಆಹ್ವಾನಿಸಲ್ಪಟ್ಟ ಭೀಷ್ಮನು ನಾನು ಸೋತಿದ್ದೇನೆ ಎಂದು ಹೇಳಿದರೆ ಅಥವಾ ನಿನ್ನ ಮಾತನ್ನು ಕೇಳಿದರೆ ಈ ಕನ್ಯೆಯ ಕಾರ್ಯವು ನೆರವೇರಿದಂತಾದೀತು. ಎಲೈ ಭೃಗುನಂದನನೇ, ವೀರನೇ, ವಿಭುವೇ, ನೀನು ಆಡಿದ ಮಾತೂ ಸಹ ಸತ್ಯವಾಗುವುದು.

ಇಯಂ ಚಾಪಿ ಪ್ರತಿಜ್ಞಾ ತೇ ತದಾ ರಾಮ ಮಹಾಮುನೇ ॥೧೨॥

ಜಿತ್ವಾ ವೈ ಕ್ಷತ್ರಿಯಾನ್ ಸರ್ವಾನ್ ಬ್ರಾಹ್ಮಣೇಷು ಪ್ರತಿಶ್ರುತಾ ॥೧೩॥

ಎಲೈ ಮಹಾಮುನಿಯಾದ ರಾಮನೇ, ಇದೂ ಸಹ ಕ್ಷತ್ರಿಯರನ್ನು ಗೆದ್ದು ನೀನು ಎಲ್ಲಾ ಬ್ರಾಹ್ಮಣರಲ್ಲಿ ಮಾಡಿದ ಪ್ರತಿಜ್ಞೆ.

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರಶ್ಚೈವ ರಣೇ ಯದಿ ।
ಬ್ರಹ್ಮದ್ವಿಡ್ ಭವಿತಾ ತಂ ವೈ ಹನಿಷ್ಯಾಮೀತಿ ಭಾರ್ಗವ ॥೧೪॥

ಎಲೈ ಭಾರ್ಗವನೇ, ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ ಅಥವಾ ಶೂದ್ರನಾಗಲೀ ಬ್ರಾಹ್ಮಣ ದ್ವೇಷವನ್ನು ಮಾಡಿದರೆ ಯುದ್ಧದಲ್ಲಿ ಅವನನ್ನು ಕೊಲ್ಲುವೆನು ಎಂಬುದು (ನಿನ್ನ ಪ್ರತಿಜ್ಞೆ).

ಶರಣಂ ಹಿ ಪ್ರಪನ್ನಾನಾಂ ಭೀತಾನಾಂ ಜೀವಿತಾರ್ಥಿನಾಮ್ ।
ನ ಶಕ್ಷ್ಯಾಮಿ ಪರಿತ್ಯಾಗಂ ಕರ್ತುಂ ಜೀವನ್ ಕಥಂಚನ ॥೧೫॥

ಯಾರು ಭಯಗ್ರಸ್ತರಾಗಿ ಜೀವಿಸಲು ಬಯಸಿ ಶರಣಾಗತರಾಗುವರೋ ಅವರನ್ನು ನಾನು ಬದುಕಿರುವವರೆಗೆ ಯಾವ ಕಾರಣದಿಂದಲೂ ಪರಿತ್ಯಾಗ ಮಾಡುವುದಿಲ್ಲ (ಎಂಬುದೂ ನಿನ್ನ ಪ್ರತಿಜ್ಞೆ).

ಯಶ್ಚ ಕ್ಷತ್ರಂ ರಣೇ ಕೃತ್ಸ್ನಂ ವಿಜೇಷ್ಯತಿ ಸಮಾಗತಮ್ ।
ದೃಪ್ತಾತ್ಮಾನಮಹಂ ತಂ ಚ ಹನಿಷ್ಯಾಮೀತಿ ಭಾರ್ಗವ ॥೧೬॥

ಎಲೈ ಭಾರ್ಗವನೇ, ಯಾವನು ಯುದ್ಧದಲ್ಲಿ ಎದುರಾದ ಸಮಸ್ತ ಕ್ಷತ್ರಿಯರನ್ನು ಗೆದ್ದು ದರ್ಪದಿಂದ ಕೂಡಿರುತ್ತಾನೆಯೋ ಅವನನ್ನೂ ಕೊಲ್ಲುವೆನೆಂದು (ನಿನ್ನ ಪ್ರತಿಜ್ಞೆ).

ಸ ಏಷ ವಿಜಯೀ ರಾಮ ಭೀಷ್ಮಃ ಕುರುಕುಲೋದ್ವಹಃ ।
ತೇನ ಯುಧ್ಯಸ್ವ ಸಂಗ್ರಾಮೇ ಸಮೇತ್ಯ ಭೃಗುನಂದನ ॥೧೭॥

ಎಲೈ ರಾಮನೇ, ಕುರುಕುಲೋದ್ವಹನಾದ ಈ ಭೀಷ್ಮನು ಎಲ್ಲ ಕ್ಷತ್ರಿಯರನ್ನು ಗೆದ್ದವನು. ಎಲೈ ಭೃಗುನಂದನನೇ, ಅವನ ಜೊತೆಯಲ್ಲಿ ಯುದ್ಧವನ್ನು ಮಾಡುವವನಾಗು.

ರಾಮಃ

ಸ್ಮರಾಮ್ಯಹಂ ಪೂರ್ವಕೃತಾಂ ಪ್ರತಿಜ್ಞಾಮೃಷಿಸತ್ತಮ ।
ತಥೈವ ಚ ಕರಿಷ್ಯಾಮಿ ಯಥಾ ಸಾಮ್ನೈವ ಲಪ್ಸ್ಯತೇ ॥೧೮॥

ರಾಮ– ಎಲೈ ಋಷಿಶ್ರೇಷ್ಠನೇ, ನಾನು ಹಿಂದೆ ಮಾಡಿದ ಪ್ರತಿಜ್ಞೆಯನ್ನು ಸ್ಮರಿಸುತ್ತಿದ್ದೇನೆ. ಸಾಮೋಪಾಯದಿಂದಲೇ ಎಲ್ಲವೂ ಲಭ್ಯವಾಗುವಂತೆ ಪ್ರಯತ್ನವನ್ನು ಮಾಡುವೆನು.

ಕಾರ್ಯಮೇತನ್ಮಹದ್ ಬ್ರಹ್ಮನ್ ಕಾಶಿಕನ್ಯಾಮನೋಗತಮ್ ।
ಗಮಿಷ್ಯಾಮಿ ಸ್ವಯಂ ತತ್ರ ಕನ್ಯಾಮಾದಾಯ ಯತ್ರ ಸಃ ॥೧೯॥

ಎಲೈ ಬ್ರಾಹ್ಮಣನೇ, ಕಾಶಿಕನ್ಯೆಯ ಮನಸ್ಸಿನಲ್ಲಿರುವ ಈ ಕಾರ್ಯವು ಬಹಳ ದೊಡ್ಡದು. ಆದ್ದರಿಂದ ಅವಳನ್ನು ಕರೆದುಕೊಂಡು ಭೀಷ್ಮನಿರುವಲ್ಲಿಗೆ ನಾನೇ ಹೋಗುವೆನು.

ಯದಿ ಭೀಷ್ಮೋ ರಣಶ್ಲಾಘೀ ನ ಕರಿಷ್ಯತಿ ಮದ್ವಚಃ ।
ಹನಿಷ್ಯಾಮ್ಯಹಮುದ್ರಿಕ್ತಮಿತಿ ಮೇ ನಿಶ್ಚಿತಾ ಮತಿಃ ॥೨೦॥

ರಣವನ್ನು ಬಯಸುವ ಭೀಷ್ಮನು ನನ್ನ ಮಾತನ್ನು ನೆರವೇರಿಸದಿದ್ದರೆ ಉದ್ರಿಕ್ತವಾದ ಅವನನ್ನು ಕೊಲ್ಲುವೆನು ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ನ ಹಿ ಬಾಣಾ ಮಯೋತ್ಸೃಷ್ಟಾಃ ಸಜ್ಜಂತೀಹ ಶರೀರಿಣಾಮ್ ।
ಕಾಯೇಷು ವಿದಿತಂ ತುಭ್ಯಂ ಪುರಾ ಕ್ಷತ್ರಿಯಸಂಗರೇ ॥೨೧॥

ನಾನು ಕ್ಷತ್ರಿಯರ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಪ್ರಯೋಗಿಸುವ ಬಾಣಗಳು ಶತ್ರುಗಳ ಶರೀರದಲ್ಲಿಯೇ ಉಳಿಯುವುದಿಲ್ಲವೆಂಬುದು ನಿನಗೆ ಮೊದಲಿನಿಂದಲೂ ತಿಳಿದಿದೆ (ಬಾಣಗಳು ಶರೀರವನ್ನು ಭೇದಿಸಿಕೊಂಡು ಮುಂದೆ ಸಾಗುತ್ತವೆ ಎಂದು ಅಭಿಪ್ರಾಯ).

ಭೀಷ್ಮಃ

ಏವಮುಕ್ತ್ವಾ ತತೋ ರಾಮಃ ಸಹ ತೈರ್ಬ್ರಹ್ಮವಾದಿಭಿಃ ।
ಪ್ರಯಾಣಾಯ ಮತಿಂ ಕೃತ್ವಾ ಸಮುತ್ತಸ್ಥೌ ಮಹಾತಪಾಃ ॥೨೨॥

ಭೀಷ್ಮ- ಹೀಗೆ ಹೇಳಿ ಮಹಾತಪಸ್ವಿಯಾದ ಪರಶುರಾಮನು ಪ್ರಯಾಣವನ್ನು ಮಾಡಲು ನಿರ್ಧರಿಸಿ, ಆ ಬ್ರಹ್ಮವಾದಿಗಳ ಜೊತೆಯಲ್ಲಿ ಎದ್ದುನಿಂತನು.

ತತಸ್ತೇ ತಾಮುಷಿತ್ವಾ ತು ರಜನೀಂ ತತ್ರ ತಾಪಸಾಃ ।
ಹುತಾಗ್ನಯೋ ಜಪ್ತಜಪ್ಯಾಃ ಪ್ರತಸ್ಥುರ್ಮಜ್ಜಿಘಾಂಸಯಾ ॥೨೩॥

ಅನಂತರ ಆ ತಾಪಸರು ಆ ರಾತ್ರಿಯನ್ನು ಅಲ್ಲಿಯೇ ಕಳೆದು, ಪ್ರಾತಃಕಾಲದಲ್ಲಿ ಅಗ್ನಿಯಲ್ಲಿ ಹೋಮವನ್ನು ಮಾಡಿ, ಆಹ್ನಿಕವನ್ನು ಮುಗಿಸಿ, ನನ್ನನ್ನು ಕೊಲ್ಲುವ ಉದ್ದೇಶದಿಂದ ಹೊರಟರು.

ಅಭ್ಯಾಗಚ್ಛತ್ ತತೋ ರಾಮಃ ಸಹ ತೈರ್ಬ್ರಹ್ಮವಾದಿಭಿಃ ।
ಕುರುಕ್ಷೇತ್ರಂ ಮಹಾರಾಜ ಕನ್ಯಯಾ ಸಹ ಭಾರ್ಗವಃ ॥೨೪॥

ಎಲೈ ಮಹಾರಾಜನೇ, ಅನಂತರ ಭಾರ್ಗವನಾದ ಪರಶುರಾಮನು ಆ ಬ್ರಹ್ಮಾದಿಗಳ ಮತ್ತು ಆ ಕನ್ಯೆಯ ಜೊತೆಯಲ್ಲಿ ಕುರುಕ್ಷೇತ್ರಕ್ಕೆ ಬಂದನು.

ನ್ಯವಿಶಂತ ತತಃ ಸರ್ವೇ ಪರಿಗೃಹ್ಯ ಸರಸ್ವತೀಮ್ ।
ತಾಪಸಾಸ್ತೇ ಮಹಾತ್ಮಾನೋ ಭೃಗುಶ್ರೇಷ್ಠಪುರಸ್ಕೃತಾಃ ॥೨೫॥

ಭೃಗುಶ್ರೇಷ್ಠನಾದ ಪರಶುರಾಮನನ್ನು ಮುಂದೆ ಮಾಡಿಕೊಂಡ ಮಹಾತ್ಮರಾದ ಆ ತಪಸ್ವಿಗಳು ಸರಸ್ವತೀ ನದಿಯ ತೀರದಲ್ಲಿ ತಂಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಸಪ್ತತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ಭೀಷ್ಮರಿಂದ ಪರಶುರಾಮರಿಗೆ ಯುದ್ಧಾಹ್ವಾನ.

ಭೀಷ್ಮಃ

ತತಸ್ತೃತೀಯೇ ದಿವಸೇ ಸಮೇ ದೇಶೇ ವ್ಯವಸ್ಥಿತಃ ।
ಪ್ರೇಷಯಾಮಾಸ ಮೇ ರಾಜನ್ ಪ್ರಾಪ್ತೋಽಸ್ಮೀತಿ ಮಹಾವ್ರತಃ ॥೧॥

ಭೀಷ್ಮ– ಎಲೈ ರಾಜನೇ, ಅನಂತರ ಮೂರನೆಯ ದಿವಸದಲ್ಲಿ ಒಂದು ಸಮತಟ್ಟಾದ ಪ್ರದೇಶದಲ್ಲಿ ಇರುವವನಾಗಿ ಮಹಾವ್ರತರಾದ ಪರಶುರಾಮರು, ನಾನು ಬಂದಿದ್ದೇನೆ ಎಂಬ ಸಂದೇಶವನ್ನು ನನಗೆ ಕಳುಹಿಸಿದರು.

ತಮಾಗತಮಹಂ ಶ್ರುತ್ವಾ ವಿಷಯಾಂತಂ ಮಹಾಬಲಮ್ ।
ಅಭ್ಯಗಚ್ಛಂ ಜವೇನಾಶು ಪ್ರೀತ್ಯಾ ತೇಜೋನಿಧಿಂ ಪ್ರಭುಮ್ ॥೨॥

ಮಹಾಬಲರಾದ ಅವರು ನನ್ನ ದೇಶದ ಕೊನೆಯ ಭಾಗದಲ್ಲಿ ಇರುವುದನ್ನು ಕೇಳಿ ನಾನು ತೇಜೋನಿಧಿಗಳೂ, ಪ್ರಭುಗಳೂ ಆದ ಅವರ ಮೇಲಿನ ಪ್ರೀತಿಯಿಂದ ಶೀಘ್ರವಾಗಿ ಅವರ ಬಳಿಗೆ ಹೋದೆನು.

ಗಾಂ ಪುರಸ್ಕೃತ್ಯ ರಾಜೇಂದ್ರ ಬ್ರಾಹ್ಮಣೈಃ ಪರಿವಾರಿತಃ ।
ಋತ್ವಿಗ್ಭಿರ್ದೇವಕಲ್ಪೈಶ್ಚ ತಥೈವ ಚ ಪುರೋಹಿತೈಃ ॥೩॥

ಎಲೈ ರಾಜೇಂದ್ರನೇ, ಗೋವನ್ನು ಮುಂದೆ ಮಾಡಿಕೊಂಡು, ಬ್ರಾಹ್ಮಣರಿಂದ ಪರಿವೃತನಾಗಿ, ದೇವತೆಗಳಂತಿದ್ದ ಋತ್ವಿಜರಿಂದಲೂ ಮತ್ತು ಪುರೋಹಿತರಿಂದಲೂ ಕೂಡಿದವನಾಗಿ ಅವರ ಬಳಿಗೆ ಹೋದೆನು.

ಸ ಮಾಮಭಿಗತಂ ದೃಷ್ಟ್ವಾ ಜಾಮದಗ್ನ್ಯಃ ಪ್ರತಾಪವಾನ್ ।
ಪ್ರತಿಜಗ್ರಾಹ ತಾಂ ಪೂಜಾಂ ವಚನಂ ಚೇದಮಬ್ರವೀತ್ ॥೪॥

ಪ್ರತಾಪಶಾಲಿಗಳಾದ, ಜಮದಗ್ನಿಪುತ್ರರಾದ ಅವರು ನಾನು ಬಂದುದನ್ನು ನೋಡಿ ಪೂಜೆಯನ್ನು ಸ್ವೀಕರಿಸಿ, ಈ ಮಾತನ್ನಾಡಿದರು.

ಭೀಷ್ಮ ಕಾಂ ಬುದ್ಧಿಮಾಸ್ಥಾಯ ಕಾಶಿರಾಜಸುತಾ ತ್ವಯಾ ।
ಅಕಾಮೇಯಮಿಹಾನೀತಾ ಪುನಶ್ಚೈವ ವಿಸರ್ಜಿತಾ ॥೫॥

ಭೀಷ್ಮನೇ, ಯಾವ ಅಭಿಪ್ರಾಯದಿಂದ ನೀನು ಇಷ್ಟವಿಲ್ಲದ ಈ ಕಾಶಿರಾಜಕುಮಾರಿಯನ್ನು ಕರೆದುಕೊಂಡು ಹೋಗಿ ಪುನಃ ಪರಿತ್ಯಾಗವನ್ನು ಮಾಡಿದೆ?

ವಿಭ್ರಂಶಿತಾ ತ್ವಯಾ ಹೀಯಂ ಧರ್ಮಾದಾಸ್ತೇ ಯಶಸ್ವಿನೀ ।
ಪರಾಮೃಷ್ಟಾಂ ತ್ವಯಾ ಹೀಮಾಂ ಕೋ ಹಿ ಗಂತುಮಿಹಾರ್ಹತಿ ॥೬॥

ಯಶಸ್ವಿನಿಯಾದ ಇವಳು ನಿನ್ನಿಂದ ಧರ್ಮಭ್ರಷ್ಟಳಾಗಿದ್ದಾಳೆ. ನೀನು ಕರೆದುಕೊಂಡು ಹೋದ ಅವಳನ್ನು ಬೇರೆ ಯಾವನು ವಿವಾಹವಾಗುತ್ತಾನೆ?

ಪ್ರತ್ಯಾಖ್ಯಾತಾ ಹಿ ಸಾಲ್ವೇನ ತ್ವಯಾ ನೀತೇತಿ ಭಾರತ ।
ತಸ್ಮಾದಿಮಾಂ ಮನ್ನಿಯೋಗಾತ್ ಪ್ರತಿಗೃಹ್ಣೀಷ್ವ ಭಾರತ ॥೭॥

ಎಲೈ ಭಾರತನೇ, ನೀನು ಕರೆದುಕೊಂಡು ಹೋದೆ ಎಂಬ ಕಾರಣದಿಂದ ಸಾಲ್ವನು ಅವಳನ್ನು ನಿರಾಕರಿಸಿದ್ದಾನಷ್ಟೆ! ಆದ್ದರಿಂದ ಭಾರತನೇ, ನನ್ನ ಆದೇಶದಂತೆ ಇವಳನ್ನು ಸ್ವೀಕರಿಸು.

ಸ್ವಧರ್ಮಂ ಪುರುಷವ್ಯಾಘ್ರ ರಾಜಪುತ್ರೀ ಲಭತ್ವಿಯಮ್ ।
ನ ಯುಕ್ತಮವಮಾನೋಽಯಂ ರಾಜ್ಞಾ ಕರ್ತುಂ ತ್ವಯಾಽನಘ ॥೮॥

ಎಲೈ ಪುರುಷವ್ಯಾಘ್ರನೇ, ಈ ರಾಜಪುತ್ರಿಯು ತನ್ನ ಧರ್ಮವನ್ನು ಹೊಂದಲಿ. ಎಲೈ ಅನಘನೇ, ರಾಜನಾದ ನೀನು ಹೀಗೆ ಅವಮಾನವನ್ನು ಮಾಡುವುದು ಸರಿಯಲ್ಲ (ಎಂದು ಹೇಳಿದರು).

ಭೀಷ್ಮಃ

ತತಸ್ತಂ ವೈ ವಿಮನಸಮುದೀಕ್ಷ್ಯಾಹಮಥಾಬ್ರವಮ್ ।
ನಾಹಮೇನಾಂ ಪುನರ್ದದ್ಯಾಂ ಬ್ರಹ್ಮನ್ ಭ್ರಾತ್ರೇ ಕಥಂಚನ ॥೯॥

ಸಾಲ್ವಸ್ಯಾಹಮಿತಿ ಪ್ರಾಹ ಪುರಾ ಮಾಮೇವ ಭಾರ್ಗವ ।
ಮಯಾ ಚೈವಾಭ್ಯನುಜ್ಞಾತಾ ಗತಾ ಸೌಭಪುರಂ ಪ್ರತಿ ॥೧೦॥

ನ ಭಯಾನ್ನಾಪ್ಯನುಕ್ರೋಶಾನ್ನ ಲೋಭಾನ್ನಾರ್ಥಕಾಮ್ಯಯಾ ।
ಕ್ಷಾತ್ರಂ ಧರ್ಮಮಹಂ ಜಹ್ಯಾಮಿತಿ ಮೇ ವ್ರತಮಾಹಿತಮ್ ॥೧೧॥

ಭೀಷ್ಮ– ಆಗ ನಾನು ಅಸಂತುಷ್ಟರಾಗಿದ್ದ ಅವರನ್ನು ನೋಡಿ– 'ಬ್ರಾಹ್ಮಣರೇ, ನಾನು ಪುನಃ ಇವಳನ್ನು ನನ್ನ ತಮ್ಮನಿಗೆ ಕೊಡುವುದಿಲ್ಲ. ಇವಳು ಹಿಂದೆ ನನ್ನ ಬಳಿಯಲ್ಲಿಯೇ ನನಗೆ ಸಾಲ್ವನಲ್ಲಿ ಪ್ರೀತಿಯಿದೆ ಎಂದು ಹೇಳಿದಳು. ನಾನು ಅನುಮತಿಯನ್ನು ನೀಡಿದ ಮೇಲೆ ತಾನಾಗಿಯೇ ಸಾಲ್ವನ ಪಟ್ಟಣಕ್ಕೆ ಹೋದಳು. ಭಯದಿಂದಲಾಗಲೀ, ದಾಕ್ಷಿಣ್ಯದಿಂದಾಗಲೀ, ಲೋಭದಿಂದಾಗಲೀ ಅಥವಾ ದ್ರವ್ಯ ಲಾಭದ ಆಸೆಯಿಂದಾಗಲೀ ನಾನು ಕ್ಷತ್ರಧರ್ಮವನ್ನು ಬಿಡಲಾರೆ. ಇದು ನನ್ನ ವ್ರತ' ಎಂದು ಹೇಳಿದೆನು.

ಅಥ ಮಾಮಬ್ರವೀದ್ ರಾಮಃ ಕ್ರೋಧಪರ್ಯಾಕುಲೇಕ್ಷಣಃ ।
ನ ಕರಿಷ್ಯಸಿ ಚೇದೇತದ್ ವಾಕ್ಯಂ ಮೇ ನರಪುಂಗವ ॥೧೨॥

ಹನಿಷ್ಯಾಮಿ ಸಹಾಮಾತ್ಯಂ ತ್ವಾಮದ್ಯೇತಿ ಪುನಃ ಪುನಃ ॥೧೩॥

ಆಗ ಪರಶುರಾಮರು ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ನನ್ನನ್ನು ಕುರಿತು– 'ಎಲೈ ನರಶ್ರೇಷ್ಠನೇ, ನನ್ನ ಮಾತನ್ನು ನಡೆಸದಿದ್ದರೆ ಈ ದಿನ ನಿನ್ನನ್ನು ಮತ್ತು ನಿನ್ನ ಮಂತ್ರಿಗಳನ್ನು ಕೊಲ್ಲುವೆನು' ಎಂದು ಪುನಃ ಪುನಃ ಹೇಳಿದರು.

ತಮಹಂ ಗೀರ್ಭಿರಿಷ್ಟಾಭಿಃ ಪುನಃ ಪುನರರಿಂದಮ ।
ಅಯಾಚಂ ಭೃಗುಶಾರ್ದೂಲಂ ನ ಚೈವ ಪ್ರಶಶಾಮ ಸಃ ॥೧೪॥

ಎಲೈ ಅರಿಂದಮನೇ, ನಾನು ಆ ಭೃಗುಶ್ರೇಷ್ಠರನ್ನು ಅವರಿಗೆ ಇಷ್ಟವಾದ ವಚನಗಳಿಂದ ಮತ್ತೆ ಮತ್ತೆ ಬೇಡಿದೆನು. ಆದರೆ ಅವರು ಶಾಂತರಾಗಲಿಲ್ಲ.

ಯದಾ ಪ್ರಯಾಚ್ಯಮಾನೋಽಪಿ ಪ್ರಸಾದಂ ನ ಕರೋತಿ ಮೇ ॥೧೫॥

ಪ್ರಣಮ್ಯ ತಮಹಂ ಮೂರ್ಧ್ನಾ ಭೂಯೋ ಬ್ರಾಹ್ಮಣಸತ್ತಮಮ್ ।
ಅಬ್ರವಂ ಕಾರಣಂ ಕಿಂ ತದ್ ಯತ್ ತ್ವಂ ಯೋದ್ಧುಮಿಹೇಚ್ಛಸಿ ॥೧೬॥

ಇಷ್ವಸ್ತ್ರಂ ಮಮ ಬಾಲಸ್ಯ ತ್ವಯಾ ಚೈವ ಚತುರ್ವಿಧಮ್ ।
ಉಪದಿಷ್ಟಂ ಮಹಾಬಾಹೋ ಶಿಷ್ಯೋಽಸ್ಮಿ ತವ ಭಾರ್ಗವ ॥೧೭॥

ಎಷ್ಟು ಬೇಡಿದರೂ ಅವರು ಪ್ರಸನ್ನರಾಗದಿದ್ದಾಗ ಆ ಬ್ರಾಹ್ಮಣಶ್ರೇಷ್ಠರಿಗೆ ನಾನು ಶಿರಸಾ ನಮಸ್ಕಾರವನ್ನು ಮಾಡಿ, ನನ್ನ ಮೇಲೆ ಯುದ್ಧವನ್ನು ಮಾಡುವುದಕ್ಕೆ ನಿಮಗೆ ಕಾರಣವೇನು? ಎಲೈ ಮಹಾಬಾಹುವೇ, ಎಲೈ ಭಾರ್ಗವರೇ, ಬಾಲ್ಯದಲ್ಲಿ ನನಗೆ ಚತುರ್ವಿಧವಾದ ಅಸ್ತ್ರವಿದ್ಯೆಯನ್ನು ಮತ್ತು ಧನುರ್ವಿದ್ಯೆಯನ್ನು ನೀವು ಉಪದೇಶ ಮಾಡಿದ್ದೀರಿ. ನಾನು ನಿಮ್ಮ ಶಿಷ್ಯನಾಗಿದ್ದೇನೆ ಎಂದು ಹೇಳಿದೆನು.

ತತೋ ಮಾಮಬ್ರವೀದ್ ರಾಮಃ ಕ್ರೋಧಸಂರಕ್ತಲೋಚನಃ ॥೧೮॥

ಜಾನೀಷೇ ಮಾಂ ಗುರುಂ ಭೀಷ್ಮ ನ ಚೇಮಾಂ ಪ್ರತಿಗೃಹ್ಣಸೇ ।
ಸುತಾಂ ಕಾಶ್ಯಸ್ಯ ಕೌರವ್ಯ ಮತ್ಪ್ರಿಯಾರ್ಥಂ ಮಹೀಪತೇ ॥೧೯॥

ಆಗ ಪರಶುರಾಮರು ಕೋಪದಿಂದ ಕೆಂಪಾದ ಕಣ್ಣುಳ್ಳವರಾಗಿ ನನ್ನನ್ನು ಕುರಿತು– 'ಎಲೈ ಭೀಷ್ಮನೇ, ನನ್ನನ್ನು ಗುರು ಎಂದು ಹೇಳುತ್ತಿದ್ದೀಯೆ. ಆದರೆ ಎಲೈ ರಾಜನೇ,

ಕೌರವ್ಯನೇ, ನನ್ನನ್ನು ಸಂತೋಷಪಡಿಸುವುದಕ್ಕಾಗಿ ಈ ಕಾಶಿರಾಜನ ಕನ್ಯೆಯನ್ನು ಸ್ವೀಕರಿಸುತ್ತಿಲ್ಲ.

ನ ಹಿ ಮೇ ವಿದ್ಯತೇ ಶಾಂತಿರನ್ಯಥಾ ಕುರುಸತ್ತಮ ।
ಗೃಹಾಣೇಮಾಂ ಮಹಾಬಾಹೋ ರಕ್ಷಸ್ವ ಕುಲಮಾತ್ಮನಃ ॥೨೦॥

ತ್ವಯಾ ವಿಭ್ರಂಶಿತಾ ಹೀಯಂ ಭರ್ತಾರಂ ನಾಧಿಗಚ್ಛತಿ ॥೨೧॥

ಎಲೈ ಕುರುಶ್ರೇಷ್ಠನೇ, ಮಹಾಬಾಹುವೇ, ಇವಳನ್ನು ಸ್ವೀಕರಿಸಿ, ನಿನ್ನ ಕುಲವನ್ನು ರಕ್ಷಿಸು. ಇಲ್ಲದಿದ್ದರೆ ನನಗೆ ಸಮಾಧಾನವಾಗುವುದಿಲ್ಲ. ನಿನ್ನಿಂದ ಪರಿತ್ಯಕ್ತಳಾದ ಇವಳು ಬೇರೆ ಪತಿಯನ್ನು ಪಡೆಯುತ್ತಿಲ್ಲವಷ್ಟೆ! ಎಂದು ಹೇಳಿದರು.

ಭೀಷ್ಮಃ

ತಥಾ ಬ್ರುವಂತಂ ತಮಹಂ ರಾಮಂ ಪರಪುರಂಜಯಮ್ ।
ನೈತದೇವಂ ಪುನರ್ಭಾವಿ ಬ್ರಹ್ಮರ್ಷೇ ಕಿಂ ಶ್ರಮೇಣ ತೇ ॥೨೨॥

ಭೀಷ್ಮ– ಹಾಗೆ ಮಾತನಾಡಿದ ಪರಪುರಂಜಯರಾದ ಪರಶುರಾಮರನ್ನು ಕುರಿತು ನಾನು ಬ್ರಹ್ಮರ್ಷಿಗಳೇ, ಹೀಗೆ ಪುನಃ ಎಂದೂ ಆಗುವುದಿಲ್ಲ. ವ್ಯರ್ಥವಾಗಿ ಏಕೆ ಶ್ರಮವನ್ನು ಪಡುತ್ತೀರಿ?

ಗುರುತ್ವಂ ತ್ವಯಿ ಸಂಪ್ರೇಕ್ಷ್ಯ ಜಾಮದಗ್ನ್ಯ ಪುರಾತನಮ್ ।
ಪ್ರಸಾದಯೇ ತ್ವಾಂ ಭಗವನ್ ತ್ಯಕ್ತೈಷಾ ತು ಪುರಾ ಮಯಾ ॥೨೩॥

ಎಲೈ ಪೂಜ್ಯರೇ, ಜಮದಗ್ನಿ ಪುತ್ರರೇ, ನಿಮ್ಮಲ್ಲಿ ಇರುವ ಗುರುತ್ವವನ್ನು ನೋಡಿ ನಾನು ನಿಮ್ಮನ್ನು ಪ್ರಸನ್ನರಾಗಿ ಎಂದು ಬೇಡುತ್ತಿದ್ದೇನೆ. ಇವಳನ್ನು ಮಾತ್ರ ಹಿಂದೆಯೇ ತ್ಯಜಿಸಿದ್ದೇನೆ.

ಕೋ ಜಾತು ಪರಭಾವಾಂ ಹಿ ನಾರೀಂ ವ್ಯಾಲೀಮಿವ ಸ್ಥಿತಾಮ್ ।
ವಾಸಯೇತ ಗೃಹೇ ಜಾನನ್ ಸ್ತ್ರೀಣಾಂ ದೋಷಾನ್ ಮಹಾತ್ಯಯಾನ್॥

ಸ್ತ್ರೀಯರ ಮಹಾದೋಷಗಳನ್ನು ತಿಳಿದ ಯಾವನು ತಾನೇ ಇನ್ನೊಬ್ಬನಲ್ಲಿ ಪ್ರೀತಿ ಇರುವ ಸ್ತ್ರೀಯನ್ನು, ಸರ್ಪವನ್ನು ಮನೆಯಲ್ಲಿ ಸಾಕಿದಂತೆ ತನ್ನ ಮನೆಯಲ್ಲಿ ಇಟ್ಟುಕೊಂಡಾನು?

ನ ಭಯಾದ್ ವಾಸವಸ್ಯಾಪಿ ಧರ್ಮಂ ಜಹ್ಯಾಂ ಮಹಾವ್ರತ ।
ಪ್ರಸೀದ ಮಾ ವಾ ಯದ್ವಾ ತೇ ಕಾರ್ಯಂ ತತ್ ಕುರು ಮಾಚಿರಮ್॥

ಎಲೈ ಮಹಾವ್ರತರೇ, ಇಂದ್ರನ ಭಯದಿಂದಲೂ ನಾನು ಧರ್ಮವನ್ನು ಬಿಡಲಾರೆ. ನೀವು ಪ್ರಸನ್ನರಾಗಿ ಅಥವಾ ಬಿಡಿ. ಮುಂದೇನು ಮಾಡಬೇಕೋ ಅದನ್ನು ಶೀಘ್ರವಾಗಿ ಮಾಡಿ.

ಅಯಂ ಚಾಪಿ ವಿಶುದ್ಧಾತ್ಮನ್ ಪುರಾಣೇ ಶ್ರೂಯತೇ ವಿಭೋ ।
ಮರುತ್ತೇನ ಮಹಾಯುದ್ಧೇ ಗೀತಃ ಶ್ಲೋಕೋ ಮಹಾತ್ಮನಾ ॥೨೬॥

ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ ।
ಉತ್ಪಥಂ ಪ್ರತಿಪನ್ನಸ್ಯ ಕಾರ್ಯಂ ಭವತಿ ಶಾಸನಮ್ ॥೨೭॥

ಎಲೈ ವಿಶುದ್ಧಾತ್ಮರೇ, ವಿಭುಗಳೇ, ಗುರುವೂ ಸಹ ಕಾರ್ಯಾಕಾರ್ಯಗಳನ್ನು ತಿಳಿಯದೆ ಅಹಂಕಾರದಿಂದ ದುರ್ಮಾರ್ಗವನ್ನು ಹಿಡಿದರೆ ಅವನಿಗೂ ಶಾಸನವನ್ನು ಮಾಡಬೇಕಾಗುತ್ತದೆ ಎಂಬ ಮಹಾತ್ಮನಾದ ಮರುತ್ತನು ಮಹಾಯುದ್ಧದಲ್ಲಿ ಹಾಡಿದ ಶ್ಲೋಕವೊಂದು ಪುರಾಣದಲ್ಲಿ ಕೇಳಿಬರುತ್ತದೆ.

ಸ ತ್ವಂ ಗುರುರಿತಿ ಪ್ರೇಮ್ಣಾ ಮಯಾ ಸಮ್ಮಾನಿತೋ ಭೃಶಮ್ ।
ಗುರುವೃತ್ತಿಂ ನ ಜಾನೀಷೇ ತಸ್ಮಾದ್ ಯೋತ್ಸ್ಯಾಮಿ ವೈ ತ್ವಯಾ ॥೨೮॥

ನೀವು ಗುರುಗಳು ಎಂಬ ಪ್ರೀತಿಯಿಂದ ನಾನು ನಿಮಗೆ ಸನ್ಮಾನವನ್ನು ಮಾಡಿದೆ. ಆದರೆ ನೀವು ಗುರುಗಳ ನಡತೆಯನ್ನು ತಿಳಿದಿಲ್ಲ. ಆದ್ದರಿಂದ ನಿಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವೆನು.

ಗುರುಂ ನ ಹನ್ಯಾಂ ಸಮರೇ ಬ್ರಾಹ್ಮಣಂ ಚ ವಿಶೇಷತಃ ।
ವಿಶೇಷತಸ್ತಪೋವೃದ್ಧಮೇವಂ ಕ್ಷಾಂತಂ ಮಯಾ ತವ ॥೨೯॥

ಯುದ್ಧದಲ್ಲಿ ಗುರುಗಳನ್ನು, ಅದರಲ್ಲೂ ವಿಶೇಷವಾಗಿ ಬ್ರಾಹ್ಮಣರನ್ನು, ಅದರಲ್ಲೂ ವಿಶೇಷವಾಗಿ ತಪೋವೃದ್ಧರನ್ನು ನಾನು ಕೊಲ್ಲುವುದಿಲ್ಲ ಎಂದು ನಿಮ್ಮನ್ನು ಕ್ಷಮಿಸಿದೆನು.

ಉದ್ಯತೇಷುಂ ರಣೇ ದೃಷ್ಟ್ವಾ ಬ್ರಾಹ್ಮಣಂ ಕ್ಷತ್ರಬಂಧುವತ್ ।
ಯೋ ಹನ್ಯಾತ್ ಸಮರೇ ಕ್ರುದ್ಧಂ ಯುಧ್ಯಂತಮಪಲಾಯಿನಮ್ ॥೩೦॥

ಬ್ರಹ್ಮಹತ್ಯಾ ನ ತಸ್ಯ ಸ್ಯಾದಿತಿ ಧರ್ಮೇಷು ನಿಶ್ಚಯಃ ।
ಕ್ಷತ್ರಿಯಾಣಾಂ ಸ್ಥಿತೋ ಧರ್ಮೇ ಕ್ಷತ್ರಿಯೋಽಸ್ಮಿ ತಪೋಧನ ॥೩೧॥

ಯಾವನು ಯುದ್ಧದಲ್ಲಿ ಕ್ಷತ್ರಿಯನಂತೆ ಬಾಣವನ್ನು ಹಿಡಿದಿರುವ ಬ್ರಾಹ್ಮಣನನ್ನು ನೋಡಿ ಯುದ್ಧದಲ್ಲಿ ಹಿಮ್ಮೆಟ್ಟದಿರುವ ಕ್ರುದ್ಧನಾದ ಅವನನ್ನು ಕೊಲ್ಲುವನೋ ಅವನಿಗೆ ಬ್ರಹ್ಮಹತ್ಯಾ ದೋಷವು ಬರುವುದಿಲ್ಲ ಎಂದು ಧರ್ಮಶಾಸ್ತ್ರಗಳ ನಿಶ್ಚಯ. ಎಲೈ ತಪೋಧನರೇ, ನಾನು ಕ್ಷತ್ರಿಯನಾದವನು. ಕ್ಷತ್ರಿಯ ಧರ್ಮದಲ್ಲಿ ಇರುವವನಾಗಿದ್ದೇನೆ.

ಯೋ ಯಥಾ ವರ್ತತೇ ಯಸ್ಮಿನ್ ತಥಾ ತಸ್ಮಿನ್ ಪ್ರವರ್ತತೇ ।
ನಾಧರ್ಮಂ ಸಮವಾಪ್ನೋತಿ ನರಃ ಶ್ರೇಯಶ್ಚ ವಿಂದತಿ ॥೩೨॥

ಯಾವನು ಹೇಗೆ ನಡೆದುಕೊಳ್ಳುತ್ತಾನೆಯೋ ಅವನ ವಿಷಯದಲ್ಲಿ ಹಾಗೆಯೇ ನಡೆದುಕೊಂಡರೆ ಅಧರ್ಮವುಂಟಾಗುವುದಿಲ್ಲ. ಮನುಷ್ಯನು ಶ್ರೇಯಸ್ಸನ್ನು ಹೊಂದುತ್ತಾನೆ.

ಅರ್ಥೇ ವಾ [illegible] ವಾ ಧರ್ಮೇ ಸಮರ್ಥೋ ದೇಶಕಾಲವಿತ್ ।
ಅನರ್ಥೇ ಸಂಶಯಾಪನ್ನಃ ಶ್ರೇಯಾನ್ ನಿಃಸಂಶಯೋ ನರಃ ॥೩೩॥

ದೇಶ-ಕಾಲಗಳನ್ನು ತಿಳಿದು ಸಮರ್ಥನಾದ ಯಾವನಾದರೂ ಅರ್ಥದ ವಿಷಯದಲ್ಲಾಗಲೀ ಅಥವಾ ಧರ್ಮದ ವಿಷಯದಲ್ಲಾಗಲೀ ಸಂಶಯವನ್ನು ಹೊಂದಿದರೆ ಅವನಿಗಿಂತ ಸಂಶಯವಿಲ್ಲದ ಮನುಷ್ಯನು ಶ್ರೇಷ್ಠನಾದವನು.

ತಸ್ಮಾತ್ ಸಂಶಯಿತೇಽಪ್ಯರ್ಥೇ ಯಥಾನ್ಯಾಯಂ ಪ್ರವರ್ತಯೇತ್ ।
ತಸ್ಮಾದ್ ಯೋತ್ಸ್ಯಾಮಿ ಸಹಿತಸ್ತ್ವಯಾ ರಾಮ ಮಹಾಹವೇ ॥೩೪॥

ಆದ್ದರಿಂದ ಅರ್ಥವು ಸಂಶಯಗ್ರಸ್ತವಾದಾಗ ನ್ಯಾಯಕ್ಕೆ ಅನುಗುಣವಾಗಿ ವರ್ತಿಸಬೇಕು. ಆದ್ದರಿಂದ ಎಲೈ ಪರಶುರಾಮರೇ, ನಿಮ್ಮ ಜೊತೆಯಲ್ಲಿ ದೊಡ್ಡ ಯುದ್ಧವನ್ನು ಮಾಡುವೆನು.

ಪಶ್ಯ ಮೇ ಬಾಹುವೀರ್ಯಂ ಚ ವಿಕ್ರಮಂ ಚಾತಿಮಾನುಷಮ್ ।
ಏವಂ ಗತೇಽಪಿ ತು ಮಯಾ ಯಚ್ಚಕ್ಯಂ ಭೃಗುನಂದನ ॥೩೫॥

ತತ್ ಕರಿಷ್ಯೇ ಕುರುಕ್ಷೇತ್ರೇ ಯೋತ್ಸ್ಯೇ ವಿಪ್ರ ತ್ವಯಾ ಸಹ ॥೩೬॥

ದ್ವಂದ್ವೇ ರಾಮ ಯಥೇಷ್ಟಂ ತೇ ಸಜ್ಜೀಭವ ಮಹಾದ್ಯುತೇ ॥೩೭॥

ನನ್ನ ಅತಿಮಾನುಷವಾದ ಪರಾಕ್ರಮವನ್ನೂ ಮತ್ತು ಬಾಹುಬಲವನ್ನೂ ನೋಡುವವರಾಗಿ. ಎಲೈ ಭೃಗುನಂದನರೇ, ಇಂತಹ ಪರಿಸ್ಥಿತಿಯಲ್ಲಿ ನಾನು ಏನು ಮಾಡಬಹುದೋ ಅದನ್ನು ಮಾಡುವೆನು. ಎಲೈ ಬ್ರಾಹ್ಮಣರೇ, ನಿಮ್ಮ ಜೊತೆಯಲ್ಲಿ ಕುರುಕ್ಷೇತ್ರದಲ್ಲಿ ದ್ವಂದ್ವಯುದ್ಧವನ್ನು ಮಾಡುವೆನು. ಮಹಾತೇಜಸ್ವಿಗಳಾದ ಪರಶುರಾಮರೇ ಸಿದ್ಧರಾಗಿ.

ತತ್ರ ತ್ವಂ ನಿಹತೋ ರಾಮ ಮಯಾ ಶರಶತಾರ್ದಿತಃ ।
ಪ್ರಾಪ್ಸ್ಯಸೇ ನಿರ್ಜಿತಾನ್ ಲೋಕಾನ್ ಶಸ್ತ್ರಪೂತೋ ಮಯಾ ರಣೇ ॥

ಎಲೈ ಪರಶುರಾಮರೇ, ಅಲ್ಲಿ ನೀವು ನನ್ನ ನೂರಾರು ಬಾಣಗಳಿಂದ ಪೀಡಿತರಾಗಿ, ಯುದ್ಧದಲ್ಲಿ ಶಸ್ತ್ರದಿಂದ ಪವಿತ್ರರಾಗಿ, ಮರಣವನ್ನು ಹೊಂದಿದವರು ಪಡೆಯುವ ಲೋಕಗಳನ್ನು ಹೊಂದುವಿರಿ.

ಸಂಗಚ್ಛ ವಿನಿವರ್ತಸ್ವ ಕುರುಕ್ಷೇತ್ರಂ ರಣಪ್ರಿಯ ।
ಸಮಾಹ್ವಯ ಮಹಾಬಾಹೋ ಯುದ್ಧಾಯ ತ್ವಂ ತಪೋಧನ ॥೩೯॥

ಎಲೈ ರಣಪ್ರಿಯರೇ, ನೀವು ಹಿಂದಿರುಗಿ ಕುರುಕ್ಷೇತ್ರಕ್ಕೆ ಹೋಗಿ ನನ್ನ ಜೊತೆಗೆ ಸಮಾಗಮವನ್ನು ಹೊಂದಿ. ಎಲೈ ತಪೋಧನರೇ, ಮಹಾಬಾಹುಗಳೇ, ನನ್ನನ್ನು ಯುದ್ಧಕ್ಕಾಗಿ ಆಹ್ವಾನಿಸಿ.

ಅಪಿ ಯತ್ರ ತ್ವಯಾ ರಾಮ ಕೃತಂ ಶೌಚಂ ಪುರಾ ಪಿತುಃ ।
ತತ್ರಾಹಮಪಿ ಹತ್ವಾ ತ್ವಾಂ ಶೌಚಂ ಕರ್ತಾಸ್ಮಿ ಭಾರ್ಗವ ॥೪೦॥

ಎಲೈ ಭಾರ್ಗವರಾಮರೇ, ನೀವು ಎಲ್ಲಿ ಹಿಂದೆ ನಿಮ್ಮ ತಂದೆಗೆ ಶ್ರಾದ್ಧವನ್ನು ಮಾಡಿದಿರೋ ಅಲ್ಲಿ ನಾನೂ ಸಹ ನಿಮ್ಮನ್ನು ಕೊಂದು ನಿಮಗೆ ಶ್ರಾದ್ಧವನ್ನು ಮಾಡುವೆನು.

ತತ್ರ ರಾಮ ಸ ಗಚ್ಛ ತ್ವಂ ತ್ವರಿತಂ ಯುದ್ಧದುರ್ಮದಃ ।
ವ್ಯಪನೇಷ್ಯಾಮಿ ತೇ ದರ್ಪಂ ಪೌರಾಣಂ ಬ್ರಾಹ್ಮಣಬ್ರುವ ॥೪೧॥

ಎಲೈ ಪರಶುರಾಮರೇ, ಯುದ್ಧದುರ್ಮದರಾದ ನೀವು ಶೀಘ್ರವಾಗಿ ಅಲ್ಲಿಗೆ ಹೋಗಿ. ಬ್ರಾಹ್ಮಣರೆಂದು ಹೇಳಿಕೊಳ್ಳುವ ನಿಮ್ಮ ಪ್ರಾಚೀನವಾದ ದರ್ಪವನ್ನು ನಾನು ನಾಶಮಾಡುವೆನು.

ಯಚ್ಚಾಪಿ ಕತ್ಥಸೇ ರಾಮ ಬಹುಶಃ ಪರಿಷತ್ಸು ವೈ ।
ನಿರ್ಜಿತಾಃ ಕ್ಷತ್ರಿಯಾ ಲೋಕೇ ಮಯೈಕೇನೇತಿ ತಚ್ಛೃಣು ॥೪೨॥

ನ ತದಾ ಜಾತವಾನ್ ಭೀಷ್ಮಃ ಕ್ಷತ್ರಿಯೋಽಪಿ ಹಿ ಮದ್ವಿಧಃ ।
ಪಶ್ಚಾಜ್ಜಾತಾನಿ ತೇಜಾಂಸಿ ತೃಣೇಷು ಜ್ವಲಿತಂ ಯಥಾ ॥೪೩॥

ಎಲೈ ಪರಶುರಾಮರೇ, ಸಭೆಗಳಲ್ಲಿ ನೀವು ಅನೇಕ ಬಾರಿ ನಾನೊಬ್ಬನೇ ಲೋಕದಲ್ಲಿ ಕ್ಷತ್ರಿಯರೆಲ್ಲರನ್ನೂ ಸೋಲಿಸಿದೆ ಎಂದು ನಿಮ್ಮನ್ನು ಹೊಗಳಿಕೊಳ್ಳುವಿರಷ್ಟೆ? ಆ ವಿಷಯದಲ್ಲಿ ನನ್ನ ಮಾತನ್ನು ಕೇಳಿ. ಆಗ ಭೀಷ್ಮನು ಜನಿಸಿರಲಿಲ್ಲ ಅಥವಾ ನನ್ನಂತಹ ಕ್ಷತ್ರಿಯನೂ ಜನಿಸಿರಲಿಲ್ಲ. ತೇಜಸ್ವಿಗಳಾದ ಕ್ಷತ್ರಿಯರು ತೃಣಗಳಲ್ಲಿ ಅಗ್ನಿ ಉಂಟಾದಂತೆ ಅನಂತರ ಜನಿಸಿದರು.

ಯಸ್ತೇ ಯುದ್ಧಗತಂ ದರ್ಪಂ ಕಾಮಂ ಚ ವ್ಯಪನಾಶಯೇತ್ ।
ಸೋಽಹಂ ಜಾತೋ ಮಹಾಬಾಹೋ ಭೀಷ್ಮಃ ಪರಪುರಂಜಯಃ ॥೪೪॥

ವ್ಯಪನೇಷ್ಯಾಮಿ ತೇ ದರ್ಪಂ ಯುದ್ಧೇ ರಾಮ ನ ಸಂಶಯಃ ॥೪೫॥

ಎಲೈ ಮಹಾಬಾಹುಗಳೇ, ಯಾವನು ನಿಮ್ಮ ಯುದ್ಧದ ದರ್ಪವನ್ನೂ ಅಥವಾ ನಿಮ್ಮ ಆಸೆಯನ್ನೂ ನಾಶಮಾಡಿಯಾನೋ ಅಂತಹ ಪರಪುರಂಜಯನಾದ, ಭೀಷ್ಮನಾದ ನಾನು ಹುಟ್ಟಿದ್ದೇನೆ. ಎಲೈ ಪರಶುರಾಮನೇ, ನಿಮ್ಮ ಯುದ್ಧ ದರ್ಪವನ್ನು ನಿಸ್ಸಂಶಯವಾಗಿ ನಾಶಮಾಡುವೆನು ಎಂದು ಹೇಳಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನಾಶೀತ್ಯುತ್ತರಶತತಮೋಽಧ್ಯಾಯಃ ॥
॥ ಅಂಬೋಪಾಖ್ಯಾನಪರ್ವಣಿ ನವಮೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಪ್ಪತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತನೆಯ ಅಧ್ಯಾಯ

ತಾಯಿಯ ಆಶೀರ್ವಾದವನ್ನು ಪಡೆದು ಭೀಷ್ಮರ ಕುರುಕ್ಷೇತ್ರಗಮನ. ಯುದ್ಧವನ್ನು ಮಾಡದಂತೆ ಪರಶುರಾಮರಿಗೆ ಮತ್ತು ಭೀಷ್ಮರಿಗೆ ಗಂಗೆಯ ಒತ್ತಾಯ.

ಭೀಷ್ಮಃ

ತತೋ ಮಾಮಬ್ರವೀದ್ ರಾಮಃ ಪ್ರಹಸನ್ನಿವ ಭಾರತ ।
ದಿಷ್ಟ್ಯಾ ಭೀಷ್ಮ ಮಯಾ ಸಾರ್ಧಂ ಯೋದ್ಧುಮಿಚ್ಛಸಿ ಸಂಗರೇ ॥೧॥

ಅಹಂ ಗಚ್ಛಾಮಿ ಕೌರವ್ಯ ಕುರುಕ್ಷೇತ್ರಂ ತ್ವಯಾ ಸಹ ।
ಭಾಷಿತಂ ತೇ ಕರಿಷ್ಯಾಮಿ ತತ್ರಾಗಚ್ಛೇಃ ಪರಂತಪ ॥೨॥

ಭೀಷ್ಮ– ಎಲೈ ಭಾರತನೇ, ಆಗ ಪರಶುರಾಮರು ನಗುತ್ತಾ ನನ್ನನ್ನು ಕುರಿತು ಎಲೈ ಭೀಷ್ಮನೇ, ಅದೃಷ್ಟವಶದಿಂದ ನೀನು ನನ್ನ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುತ್ತೀಯೆ. ಎಲೈ ಕೌರವ್ಯನೇ, ನಾನು ನಿನ್ನ ಜೊತೆಯಲ್ಲಿ ಕುರುಕ್ಷೇತ್ರಕ್ಕೆ ಬರುತ್ತೇನೆ. ಎಲೈ ಪರಂತಪನೇ, ನೀನು ಅಲ್ಲಿಗೆ ಬರುವವನಾಗು. ನಿನ್ನ ಮಾತನ್ನು ಅಲ್ಲಿ ನಡೆಸುವೆನು ಎಂದು ಹೇಳಿದರು.

ತತ್ರ ತ್ವಾಂ ನಿಹತಂ ಮಾತಾ ಮಯಾ ಶರಶತಾಚಿತಮ್ ।
ಜಾಹ್ನವೀ ಪಶ್ಯತಾಂ ಭೀಷ್ಮ ಗೃಧ್ರಕಂಕಬಲಾಶನಮ್ ॥೩॥

ಎಲೈ ಭೀಷ್ಮನೇ, ಈ ದಿನ ನೀನು ಅಲ್ಲಿ ನನ್ನ ನೂರಾರು ಬಾಣಗಳಿಂದ ಪೀಡಿತನಾಗಿ ಮೃತನಾಗಿ ಹದ್ದು, ಗಿಡಗ ಮೊದಲಾದ ಪಕ್ಷಿಗಳಿಗೆ ಆಹಾರವಾಗುವುದನ್ನು ನಿನ್ನ ತಾಯಿಯು ನೋಡಲಿ.

ಕೃಪಣಂ ತ್ವಾಮಭಿಪ್ರೇಕ್ಷ್ಯ ಸಿದ್ಧಚಾರಣಸೇವಿತಾ ।
ಮಯಾ ವಿನಿಹತಂ ವೀರ ರುದತಾಮದ್ಯ ಪಾರ್ಥಿವ ॥೪॥

ಎಲೈ ರಾಜನೇ, ವೀರನೇ, ನನ್ನ ಮಾತನ್ನು ಕೇಳದಿರುವ ನೀನು ಹತನಾದುದನ್ನು ನೋಡಿ, ಸಿದ್ಧ-ಚಾರಣಸೇವಿತಳಾದ ಅವಳು ಈ ದಿನ ರೋದನವನ್ನು ಮಾಡಲಿ.

ಅತದರ್ಹಾ ಮಹಾಭಾಗ ಭಗೀರಥಸುತಾ ನದೀ ।
ಯಾ ತ್ವಾಮಜೀಜನನ್ಮಂದಂ ಯುದ್ಧಕಾಮುಕಮಾತುರಮ್ ॥೫॥

ಎಲೈ ಮಹಾಭಾಗನೇ, ಯುದ್ಧಕಾಮುಕನಾದ, ಹಠಮಾರಿಯಾದ ನಿನ್ನಂತಹ ಮಗನನ್ನು ಪಡೆದ ಭಗೀರಥನ ಪುತ್ರಿಯಾದ ಆ ನದಿಯು ಅಂತಹ ದುಃಖಕ್ಕೆ ಅರ್ಹಳಲ್ಲ.

ಏಹಿ ಗಚ್ಛ ಮಯಾ ಭೀಷ್ಮ ಯುದ್ಧಮದ್ಯೈವ ವರ್ತತಾಮ್ ।
ಗೃಹಾಣ ಸರ್ವಂ ಕೌರವ್ಯ ರಥಾದಿ ಭರತರ್ಷಭ ॥೬॥

ಎಲೈ ಭೀಷ್ಮನೇ, ಬಾ. ಕುರುಕ್ಷೇತ್ರಕ್ಕೆ ಹೋಗು. ಈ ದಿನವೇ ಯುದ್ಧವು ನಡೆಯಲಿ. ಎಲೈ ಕೌರವ್ಯನೇ, ಭರತರ್ಷಭನೇ, ರಥ ಮೊದಲಾದ ಎಲ್ಲಾ ಯುದ್ಧದ ಸಲಕರಣೆಗಳನ್ನು ತೆಗೆದುಕೊ (ಎಂದು ಹೇಳಿದರು).

ಭೀಷ್ಮಃ

ಇತಿ ಬ್ರುವಾಣಂ ತಮಹಂ ರಾಮಂ ಪರಪುರಂಜಯಮ್ ।
ಪ್ರಣಮ್ಯ ಶಿರಸಾ ಪಾದಾವೇವಮಸ್ತಿ ತ್ವಥಾಬ್ರವಮ್ ॥೭॥

ಭೀಷ್ಮ- ಹೀಗೆ ಮಾತನಾಡಿದ ಪರಪುರಂಜಯರಾದ ಪರಶುರಾಮರ ಪಾದಗಳಿಗೆ ನಾನು ಶಿರಸಾ ಪ್ರಣಾಮವನ್ನು ಮಾಡಿ ಹಾಗೆಯೇ ಆಗಲಿ ಎಂದು ಹೇಳಿದೆನು.

ಏವಮುಕ್ತೋ ಯಯೌ ರಾಮಃ ಕುರುಕ್ಷೇತ್ರಂ ಯುಯುತ್ಸಯಾ ।
ಪ್ರವಿಶ್ಯ ನಗರಂ ಚಾಹಂ ಸತ್ಯವತ್ಯೈ ನ್ಯವೇದಯಮ್ ॥೮॥

ಈ ಮಾತನ್ನು ಕೇಳಿದ ಅವರು ಯುದ್ಧ ಮಾಡುವ ಇಚ್ಛೆಯಿಂದ ಕುರುಕ್ಷೇತ್ರಕ್ಕೆ ಹೋದರು. ನಾನು ನಗರಕ್ಕೆ ಹೋಗಿ ಸತ್ಯವತಿಗೆ ಈ ವಿಷಯವನ್ನು ನಿವೇದಿಸಿದೆ.

ತತಃ ಕೃತಸ್ತ್ವಯನೋ ಮಾತ್ರಾ ಚ ಪ್ರತಿನಂದಿತಃ ।
ದ್ವಿಜಾತೀನ್ ವಾಚ್ಯ ಪುಣ್ಯಾಹಂ ಸ್ವಸ್ತಿ ಚೈವ ಮಹಾದ್ಯುತೇ ॥೯॥

ರಥಮಾಸ್ಥಾಯ ರುಚಿರಂ ರಾಜಿತಂ ಪಾಂಡರೈರ್ಹಯೈಃ ।
ಸೂಪಸ್ಕರಂ ಸ್ವಧಿಷ್ಠಾನಂ ವೈಯಾಘ್ರಪರಿವಾರಣಮ್ ॥೧೦॥

ಉಪಪನ್ನಂ ಮಹಾಶಸ್ತ್ರೈಃ ಸರ್ವೋಪಕರಣಾನ್ವಿತಮ್ ।
ತತ್ಕುಲೀನೇನ ವೀರೇಣ ಹಯಶಾಸ್ತ್ರವಿದಾ ನೃಪ ॥೧೧॥

ಯತ್ತಂ ಸೂತೇನ ಶಿಷ್ಟೇನ ಬಹುಶೋ ದುಷ್ಟಕರ್ಮಣಾ ॥೧೨॥

ದಂಸಿತಃ ಪಾಂಡರೇಣಾಹಂ ಕವಚೇನ ವಪುಷ್ಮತಾ ।
ಪಾಂಡರಂ ಕಾರ್ಮುಕಂ ಗೃಹ್ಯ ಪ್ರಾಯಾಂ ಭರತಸತ್ತಮ ॥೧೩॥

ಎಲೈ ಮಹಾದ್ಯುತಿಯೇ, ಭರತಶ್ರೇಷ್ಠನೇ, ಆಗ ನಾನು ತಾಯಿಯಿಂದ ಆಶೀರ್ವಾದವನ್ನು ಪಡೆದು, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನೂ ಮತ್ತು ಪುಣ್ಯಾಹವಾಚನವನ್ನು ಮಾಡಿಸಿಕೊಂಡು, ಶ್ವೇತಾಶ್ವಗಳಿಂದ ಶೋಭಿಸುವ, ಮನೋಹರವಾದ ಎಲ್ಲಾ ಸಲಕರಣೆಗಳಿಂದ ಕೂಡಿದ, ಒಳ್ಳೆಯ ಮಧ್ಯಪ್ರದೇಶವುಳ್ಳ, ವ್ಯಾಘ್ರಚರ್ಮಪರಿವೃತವಾದ, ಎಲ್ಲ ಶಸ್ತ್ರಗಳಿಂದಲೂ ಮತ್ತು ಉಪಕರಣಗಳಿಂದಲೂ ಸಂಪನ್ನವಾದ, ಹಯಶಾಸ್ತ್ರವನ್ನು ಬಲ್ಲ, ಅನೇಕ ಯುದ್ಧಗಳನ್ನು ನೋಡಿದ, ವೀರನೂ ಶಿಷ್ಟನೂ ಆದ, ಸತ್ಕುಲ ಪ್ರಸೂತನಾದ ಸೂತನನ್ನು ಸಾರಥಿಯಾಗಿ ಹೊಂದಿದ ರಥವನ್ನು ಏರಿ, ಶೋಭಿಸುವ ಬಿಳಿಯ ಬಣ್ಣದ ಕವಚವನ್ನು ಧರಿಸಿ ಶ್ವೇತವರ್ಣದ ಧನುಸ್ಸನ್ನು ಹಿಡಿದು ಕುರುಕ್ಷೇತ್ರಕ್ಕೆ ಹೋದೆನು.

ಪಾಂಡರೇಣಾತಪತ್ರೇಣ ಧ್ರಿಯಮಾಣೇನ ಮೂರ್ಧನಿ ।
ವ್ಯಜನೈಃ ಪಾಂಡರೈಶ್ಚಾಪಿ ವೀಜ್ಯಮಾನೋ ನರಾಧಿಪ ॥೧೪॥

ಶುಕ್ಲವಾಸಾಃ ಸಿತೋಷ್ಣೀಷಃ ಸರ್ವಶುಕ್ಲವಿಭೂಷಣಃ ॥೧೫॥

ಸ್ತೂಯಮಾನೋ ಜಯಾಶೀರ್ಭಿರ್ನಿಷ್ಕ್ರಮ್ಯ ಗಜಸಾಹ್ವಯಾತ್ ।
ಕುರುಕ್ಷೇತ್ರಂ ರಣಕ್ಷೇತ್ರಮುಪಾಯಾಂ ಭರತರ್ಷಭ ॥೧೬॥

ಎಲೈ ರಾಜನೇ, ನನ್ನ ಶಿರಸ್ಸಿನ ಮೇಲೆ ಶ್ವೇತಚ್ಛತ್ರವನ್ನು ಹಿಡಿಸಿಕೊಂಡು, ಶ್ವೇತಚಾಮರಗಳಿಂದ ಬೀಸಲ್ಪಟ್ಟವನಾಗಿ, ಶುಕ್ಲವಸ್ತ್ರವನ್ನು ಧರಿಸಿ, ಶುಕ್ಲವಾದ ರುಮಾಲನ್ನು ಧರಿಸಿ, ಶುಕ್ಲವಾದ ಎಲ್ಲಾ ಆಭರಣಗಳನ್ನು ಧರಿಸಿ, ಜಯಾಶೀರ್ವಾದಗಳಿಂದ ಸ್ತೋತ್ರ ಮಾಡಲ್ಪಟ್ಟವನಾಗಿ, ಹಸ್ತಿನಪುರದಿಂದ ಹೊರಟು ಎಲೈ ಭರತರ್ಷಭನೇ, ಯುದ್ಧ ಕ್ಷೇತ್ರವಾದ ಕುರುಕ್ಷೇತ್ರಕ್ಕೆ ಬಂದೆನು.

ತೇ ಹಯಾಶ್ಚೋದಿತಾಸ್ತೇನ ಸೂತೇನ ಪರಮಾಹವೇ ।
ಅವಹನ್ ಮಾಂ ಭೃಶಂ ರಾಜನ್ ಮನೋಮಾರುತರಂಹಸಃ ॥೧೭॥

ಎಲೈ ರಾಜನೇ, ಆ ಸಾರಥಿಯಿಂದ ದೊಡ್ಡ ಯುದ್ಧದಲ್ಲಿ ಪ್ರಚೋದಿತವಾದ, ಮನೋಮಾರುತವೇಗವುಳ್ಳ ಆ ಅಶ್ವಗಳು ನನ್ನನ್ನು ಶೀಘ್ರವಾಗಿ ಕರೆದುಕೊಂಡು ಹೋದವು.

ಗತ್ವಾಽಹಂ ತತ್ ಕುರುಕ್ಷೇತ್ರಂ ಸ ಚ ರಾಮಃ ಪ್ರತಾಪವಾನ್ ।
ಯುದ್ಧಾಯ ಸಹಸಾ ರಾಜನ್ ಪರಾಕ್ರಾಂತೌ ಪರಸ್ಪರಮ್ ॥೧೮॥

ಎಲೈ ರಾಜನೇ, ನಾನು ಮತ್ತು ಪರಶುರಾಮರು ಕುರುಕ್ಷೇತ್ರವನ್ನು ತಲುಪಿ ಪರಸ್ಪರವಾಗಿ ಯುದ್ಧವನ್ನು ಮಾಡಲು ಶೀಘ್ರವಾಗಿ ಸಿದ್ಧರಾದೆವು.

ತತಃ ಸಂದರ್ಶನೇ ತಿಷ್ಠನ್ ರಾಮಸ್ಯಾತಿತಪಸ್ವಿನಃ ।
ಪ್ರಗೃಹ್ಯ ಶಂಖಪ್ರವರಂ ತತಃ ಪ್ರಾಧಮಮುತ್ತಮಮ್ ॥೧೯॥

ಅನಂತರ ನಾನು ಅತಿತಪಸ್ವಿಗಳಾದ ಪರಶುರಾಮರು ಕಾಣುವಷ್ಟು ದೂರದಲ್ಲಿ ನಿಂತು, ನಾನು ಶ್ರೇಷ್ಠವಾದ ಶಂಖವನ್ನು ತೆಗೆದುಕೊಂಡು ಊದಿದೆನು.

ತತಸ್ತತ್ರ ದ್ವಿಜಾ ರಾಜನ್ ತಾಪಸಾಶ್ಚ ವನೌಕಸಃ ।
ಅಪಶ್ಯಂತ ರಣಂ ದಿವ್ಯಂ ದೇವಾಃ ಸೇಂದ್ರಪುರೋಗಮಾಃ ॥೨೦॥

ಎಲೈ ರಾಜನೇ, ಆಗ ಅಲ್ಲಿ ಬ್ರಾಹ್ಮಣರೂ, ವನವಾಸಿಗಳಾದ ತಪಸ್ವಿಗಳೂ, ಇಂದ್ರ ಮೊದಲಾದ ದೇವತೆಗಳೂ ದಿವ್ಯವಾದ ಯುದ್ಧವನ್ನು ನೋಡಿದರು.

ತತೋ ದಿವ್ಯಾನಿ ಮಾಲ್ಯಾನಿ ಪ್ರಾದುರಾಸನ್ ಮುಹುರ್ಮುಹುಃ ।
ವಾದಿತ್ರಾಣಿ ಚ ದಿವ್ಯಾನಿ ಮೇಘವೃಂದಾನಿ ಚೈವ ಹ ॥೨೧॥

ಆಗ ದಿವ್ಯವಾದ ಮಾಲೆಗಳು ಪುನಃ ಪುನಃ ಪ್ರಾದುರ್ಭವಿಸಿದವು. ದಿವ್ಯವಾದ ವಾದ್ಯಗಳೂ ಮತ್ತು ಮೇಘವೃಂದಗಳ ಶಬ್ದಗಳೂ ಕೇಳಿಬಂದವು.

ತತಸ್ತೇ ತಾಪಸಾ ಸರ್ವೇ ಭಾರ್ಗವಸ್ಯಾನುಯಾಯಿನಃ ।
ಪ್ರೇಕ್ಷಕಾಃ ಸಮಪದ್ಯಂತ ಪರಿವಾರ್ಯ ರಣಾಜಿರಮ್ ॥೨೨॥

ಆಗ ಪರಶುರಾಮರ ಅನುಯಾಯಿಗಳಾದ ತಪಸ್ವಿಗಳೆಲ್ಲರೂ ಯುದ್ಧಭೂಮಿಯಲ್ಲಿ ಸುತ್ತಲೂ ನಿಂತು ಪ್ರೇಕ್ಷಕರಾದರು.

ತತೋ ಮಾಮಬ್ರವೀದ್ ದೇವೀ ಸರ್ವಭೂತಹಿತೈಷಿಣೀ ।
ಮಾತಾ ಸ್ವರೂಪಿಣೀ ರಾಜನ್ ಕಿಮಿದಂ ತೇ ಚಿಕೀರ್ಷಿತಮ್ ॥೨೩॥

ಆಗ ಸರ್ವಭೂತ ಹಿತೈಷಿಯಾದ, ನನ್ನ ತಾಯಿಯಾದ ಗಂಗೆಯು ದೇಹವನ್ನು ಧರಿಸಿ ನನ್ನ ಬಳಿಗೆ ಬಂದು, ಇದೇನು ಮಾಡಲು ಬಯಸುತ್ತಿದ್ದೀಯೆ ಎಂದು ಕೇಳಿದಳು.

ಗತ್ವಾಽಹಂ ಜಾಮದಗ್ನ್ಯಂ ತು ಪ್ರಯಾಚಿಷ್ಯೇ ಕುರೂದ್ವಹ ।
ಭೀಷ್ಮೇಣ ಸಹ ಮಾ ಯೋತ್ಸೀಃ ಶಿಷ್ಯೇಣೇತಿ ಪುನಃ ಪುನಃ ॥೨೪॥

ಎಲೈ ಕುರೂದ್ವಹನೇ, ನಾನು ಪರಶುರಾಮರ ಬಳಿಗೆ ಹೋಗಿ ಶಿಷ್ಯನಾದ ಭೀಷ್ಮನ ಜೊತೆಗೆ ಯುದ್ಧವನ್ನು ಮಾಡಬೇಡವೆಂದು ಪುನಃ ಪುನಃ ಬೇಡುತ್ತೇನೆ ಎಂದು ಹೇಳಿದಳು.

ಮಾ ಮೈವಂ ಪುತ್ರ ನಿರ್ಬಂಧಂ ಕುರು ವಿಪ್ರೇಣ ಪಾರ್ಥಿವ ।
ಜಾಮದಗ್ನ್ಯೇನ ಸಮರೇ ಯೋದ್ಧುಮಿತ್ಯವಭರ್ತ್ಸಯತ್ ॥೨೫॥

ಎಲೈ ಪುತ್ರನೇ, ರಾಜನೇ, ಬ್ರಾಹ್ಮಣರಾದ ಪರಶುರಾಮರ ಜೊತೆಯಲ್ಲಿ ಯುದ್ಧವನ್ನು ಮಾಡಲು ನಿರ್ಬಂಧವನ್ನು ಮಾಡಬೇಡ ಎಂದು ಹೇಳಿ, ನನ್ನನ್ನು ಗದರಿಸಿದಳು.

ಕಿಂ ನ ವೈ ಕ್ಷತ್ರಿಯಹಣೋ ಹರತುಲ್ಯಪರಾಕ್ರಮಃ ।
ವಿದಿತಃ ಪುತ್ರ ರಾಮಸ್ತೇ ಯತಸ್ತ್ವಂ ಯೋದ್ಧುಮಿಚ್ಛಸಿ ॥೨೬॥

ಎಲೈ ಪುತ್ರನೇ, ನಿನಗೆ ಪರಶುರಾಮರು ಕ್ಷತ್ರಿಯ ನಾಶಕರೆಂದೂ, ರುದ್ರದೇವರಿಗೆ ಸಮಾನವಾದ ಪರಾಕ್ರಮವುಳ್ಳವರೆಂದೂ ತಿಳಿದಿಲ್ಲವೇ? ಆದ್ದರಿಂದ ಏಕೆ ಯುದ್ಧವನ್ನು ಮಾಡಲು ಬಯಸುತ್ತಿದ್ದೀಯೆ? (ಎಂದು ಹೇಳಿದಳು).

ತತೋಽಹಮಬ್ರವಂ ದೇವೀಮಭಿವಾದ್ಯ ಕೃತಾಂಜಲಿಃ ।
ಸರ್ವಂ ತದ್ ಭರತಶ್ರೇಷ್ಠ ಯಥಾವೃತ್ತಂ ಸ್ವಯಂವರೇ ॥೨೭॥

ಆಗ ನಾನು ಆ ದೇವಿಗೆ ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು, ಎಲೈ ಭರತಶ್ರೇಷ್ಠನೇ, ಸ್ವಯಂವರದಲ್ಲಿ ನಡೆದುದನ್ನೆಲ್ಲಾ ಹೇಳಿದೆನು.

ಯಥಾ ಚ ರಾಮೋ ರಾಜೇಂದ್ರ ಮಯಾ ಪೂರ್ವಂ ಪ್ರಚೋದಿತಃ ।
ಕಾಶಿರಾಜಸುತಾಯಾಶ್ಚ ಯಥಾ ಕಾಮಃ ಪುರಾತನಃ ॥೨೮॥

ಎಲೈ ರಾಜೇಂದ್ರನೇ, ಪರಶುರಾಮರು ಹೇಗೆ ನನಗೆ ಯುದ್ಧಕ್ಕೆ ಪ್ರಚೋದಿಸಿದರು ಮತ್ತು ಕಾಶಿರಾಜನ ಸುತೆಯಾದ ಅಂಬೆಯ ಮೊದಲಿನ ಪ್ರೀತಿಯು ಎಲ್ಲಿದ್ದಿತು ಎಲ್ಲವನ್ನೂ ಹೇಳಿದೆನು.

ತತಃ ಸಾ ರಾಮಮಭ್ಯೇತ್ಯ ಜನನೀ ಮೇ ಮಹಾನದೀ ।
ಮದರ್ಥಂ ತಮೃಷಿಂ ದೇವೀ ಕ್ಷಮಯಾಮಾಸ ಭಾರ್ಗವಮ್ ॥೨೯॥

ಭೀಷ್ಮೇಣ ಸಹ ಮಾ ಯೋತ್ಸೀಃ ಶಿಷ್ಯೇಣೇತಿ ವಚೋಽಬ್ರವೀತ್ ॥೩೦॥

ಅನಂತರ ನನ್ನ ತಾಯಿಯಾದ ಮಹಾನದಿಯು ಋಷಿಗಳಾದ ಪರಶುರಾಮರ ಬಳಿಗೆ ಬಂದು, ನನ್ನ ಸಲುವಾಗಿ ಶಿಷ್ಯನಾದ ಭೀಷ್ಮನ ಜೊತೆಯಲ್ಲಿ ಯುದ್ಧವನ್ನು ಮಾಡಬೇಡಿ ಎಂದು ಕ್ಷಮೆಯನ್ನು ಯಾಚಿಸಿದಳು.

ಸ ಚ ತಾಮಾ- ಯಾಚಂತೀಂ ಭೀಷ್ಮಮೇವ ನಿವರ್ತಯ ।
ನ ಹಿ ಮೇ ಕುರುತೇ ಕರ್ಮ ಇತ್ಯುಕ್ತ್ವಾ ಮಾಮುಪಾಗಮತ್ ॥೩೧॥

ಅವರು ಬೇಡುತ್ತಿದ್ದ ನನ್ನ ತಾಯಿಯನ್ನು ಕುರಿತು, ಭೀಷ್ಮನನ್ನೇ ಯುದ್ಧದಿಂದ ಹಿಂದೆ ಸರಿಯುವಂತೆ ಹೇಳು. ಅವನು ನನ್ನ ಮಾತನ್ನು ಕೇಳುವುದಿಲ್ಲ ಎಂದು ಹೇಳಿ ನನಗೆ ಎದುರಾದರು.

ತತೋ ಗಂಗಾ ಸುತಸ್ನೇಹಾನ್ಮಾಂ ಸಾ ಪುನರುಪಾಗಮತ್ ।
ನಾಸ್ಯಾ ಅಕರವಂ ವಾಕ್ಯಂ ಕ್ರೋಧಪರ್ಯಾಕುಲೇಕ್ಷಣಃ ॥೩೨॥

ಆಗ ಗಂಗೆಯು ಪುನಃ ಪುತ್ರಸ್ನೇಹದಿಂದ ನನ್ನ ಬಳಿಗೆ ಬಂದು ಯುದ್ಧವನ್ನು ಮಾಡಬೇಡವೆಂದು ಹೇಳಿದಳು. ಕ್ರೋಧದಿಂದ ಕೆಂಪಾದ ಕಣ್ಣುಳ್ಳ ನಾನು ಅವಳ ಮಾತನ್ನು ಕೇಳಲಿಲ್ಲ.

ಅಥಾದೃಶ್ಯತ ಧರ್ಮಾತ್ಮಾ ಭೃಗುಶ್ರೇಷ್ಠೋ ಮಹಾತಪಾಃ ।
ಆಹ್ವಯಾಮಾಸ ಚ ತದಾ ಯುದ್ಧಾಯ ದ್ವಿಜಸತ್ತಮಃ ॥೩೩॥

ಆಗ ಮಹಾತಪಸ್ವಿಗಳೂ, ದ್ವಿಜಶ್ರೇಷ್ಠರೂ, ಧರ್ಮಾತ್ಮರೂ, ಭೃಗುಶ್ರೇಷ್ಠರೂ ಆದ ಪರಶುರಾಮರು ನನ್ನ ದೃಷ್ಟಿಗೆ ಗೋಚರರಾಗಿ ಯುದ್ಧಕ್ಕೆ ಆಹ್ವಾನಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂದನೆಯ ಅಧ್ಯಾಯ

ಭೀಷ್ಮ-ಪರಶುರಾಮರ ಯುದ್ಧದ ವರ್ಣನೆ.

ಭೀಷ್ಮಃ

ತಮಹಂ ಸ್ಮಯನ್ನಿವ ರಣೇ ಪ್ರತ್ಯಭಾಷಂ ವ್ಯವಸ್ಥಿತಮ್ ।
ಭೂಮಿಷ್ಠಂ ನೋತ್ಸಹೇ ಯೋದ್ಧುಂ ಭವಂತಂ ರಥಮಾಸ್ಥಿತಃ ॥೧॥

ಆರೋಹ ಸ್ಯಂದನಂ ವೀರ ಕವಚಂ ಚ ಮಹಾಭುಜ ।
ಬಧಾನ ಸಮರೇ ರಾಮ ಯದಿ ಯೋದ್ಧುಮಿಹೇಚ್ಛಸಿ ॥೨॥

ಭೀಷ್ಮ– ಭೂಮಿಯ ಮೇಲೆ ಯುದ್ಧಕ್ಕೆ ಸನ್ನದ್ಧರಾಗಿ ನಿಂತ ಅವರನ್ನು ನೋಡಿ ನಗುತ್ತಾ ರಥದಲ್ಲಿ ಕುಳಿತ ನಾನು ಭೂಮಿಯ ಮೇಲೆ ನಿಂತಿರುವವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುವುದಿಲ್ಲ. ಎಲೈ ವೀರರಾದ ಮಹಾಭುಜರೇ, ಯುದ್ಧವನ್ನು ಮಾಡಲು ಇಚ್ಛಿಸಿದರೆ ರಥವನ್ನು ಏರಿ, ಕವಚವನ್ನು ಧರಿಸಿ ಎಂದು ಹೇಳಿದೆನು.

ತತೋ ಮಾಮಬ್ರವೀದ್ ರಾಮಃ ಸ್ಮಯಮಾನೋ ರಣಾಜಿರೇ ॥೩॥

ಆಗ ನಾನು ಆ ದೇವಿಗೆ ನಮಸ್ಕಾರವನ್ನು ಮಾಡಿ, ಕೈಗಳನ್ನು ಮುಗಿದು, ಎಲೈ ಭರತಶ್ರೇಷ್ಠನೇ, ಸ್ವಯಂವರದಲ್ಲಿ ನಡೆದುದನ್ನೆಲ್ಲಾ ಹೇಳಿದೆನು.

ಯಥಾ ಚ ರಾಮೋ ರಾಜೇಂದ್ರ ಮಯಾ ಪೂರ್ವಂ ಪ್ರಚೋದಿತಃ ।
ಕಾಶಿರಾಜಸುತಾಯಾಶ್ಚ ಯಥಾ ಕಾಮಃ ಪುರಾತನಃ ॥೨೮॥

ಎಲೈ ರಾಜೇಂದ್ರನೇ, ಪರಶುರಾಮರು ಹೇಗೆ ನನಗೆ ಯುದ್ಧಕ್ಕೆ ಪ್ರಚೋದಿಸಿದರು ಮತ್ತು ಕಾಶಿರಾಜನ ಸುತೆಯಾದ ಅಂಬೆಯ ಮೊದಲಿನ ಪ್ರೀತಿಯು ಎಲ್ಲಿದ್ದಿತು ಎಲ್ಲವನ್ನೂ ಹೇಳಿದೆನು.

ತತಃ ಸಾ ರಾಮಮಭ್ಯೇತ್ಯ ಜನನೀ ಮೇ ಮಹಾನದೀ ।
ಮದರ್ಥಂ ತಮೃಷಿಂ ದೇವೀ ಕ್ಷಮಯಾಮಾಸ ಭಾರ್ಗವಮ್ ॥೨೯॥

ಭೀಷ್ಮೇಣ ಸಹ ಮಾ ಯೋತ್ಸೀಃ ಶಿಷ್ಯೇಣೇತಿ ವಚೋಽಬ್ರವೀತ್ ॥೩೦॥

ಅನಂತರ ನನ್ನ ತಾಯಿಯಾದ ಮಹಾನದಿಯು ಋಷಿಗಳಾದ ಪರಶುರಾಮರ ಬಳಿಗೆ ಬಂದು, ನನ್ನ ಸಲುವಾಗಿ ಶಿಷ್ಯನಾದ ಭೀಷ್ಮನ ಜೊತೆಯಲ್ಲಿ ಯುದ್ಧವನ್ನು ಮಾಡಬೇಡಿ ಎಂದು ಕ್ಷಮೆಯನ್ನು ಯಾಚಿಸಿದಳು.

ಸ ಚ ತಾಮಾ᳓ಯಾಚಂತೀಂ ಭೀಷ್ಮಮೇವ ನಿವರ್ತಯ ।
ನ ಹಿ ಮೇ ಕುರುತೇ ಕರ್ಮ ಇತ್ಯುಕ್ತ್ವಾ ಮಾಮುಪಾಗಮತ್ ॥೩೧॥

ಅವರು ಬೇಡುತ್ತಿದ್ದ ನನ್ನ ತಾಯಿಯನ್ನು ಕುರಿತು, ಭೀಷ್ಮನನ್ನೇ ಯುದ್ಧದಿಂದ ಹಿಂದೆ ಸರಿಯುವಂತೆ ಹೇಳು. ಅವನು ನನ್ನ ಮಾತನ್ನು ಕೇಳುವುದಿಲ್ಲ ಎಂದು ಹೇಳಿ ನನಗೆ ಎದುರಾದರು.

ತತೋ ಗಂಗಾ ಸುತಸ್ನೇಹಾನ್ಮಾಂ ಸಾ ಪುನರುಪಾಗಮತ್ ।
ನಾಸ್ಯಾ ಅಕರವಂ ವಾಕ್ಯಂ ಕ್ರೋಧಪರ್ಯಾಕುಲೇಕ್ಷಣಃ ॥೩೨॥

ಆಗ ಗಂಗೆಯು ಪುನಃ ಪುತ್ರಸ್ನೇಹದಿಂದ ನನ್ನ ಬಳಿಗೆ ಬಂದು ಯುದ್ಧವನ್ನು ಮಾಡಬೇಡವೆಂದು ಹೇಳಿದಳು. ಕ್ರೋಧದಿಂದ ಕೆಂಪಾದ ಕಣ್ಣುಳ್ಳ ನಾನು ಅವಳ ಮಾತನ್ನು ಕೇಳಲಿಲ್ಲ.

ಅಥಾದೃಶ್ಯತ ಧರ್ಮಾತ್ಮಾ ಭೃಗುಶ್ರೇಷ್ಠೋ ಮಹಾತಪಾಃ ।
ಆಹ್ವಯಾಮಾಸ ಚ ತದಾ ಯುದ್ಧಾಯ ದ್ವಿಜಸತ್ತಮಃ ॥೩೩॥

ಆಗ ಮಹಾತಪಸ್ವಿಗಳೂ, ದ್ವಿಜಶ್ರೇಷ್ಠರೂ, ಧರ್ಮಾತ್ಮರೂ, ಭೃಗುಶ್ರೇಷ್ಠರೂ ಆದ ಪರಶುರಾಮರು ನನ್ನ ದೃಷ್ಟಿಗೆ ಗೋಚರರಾಗಿ ಯುದ್ಧಕ್ಕೆ ಆಹ್ವಾನಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂದನೆಯ ಅಧ್ಯಾಯ

ಭೀಷ್ಮ-ಪರಶುರಾಮರ ಯುದ್ಧದ ವರ್ಣನೆ.

ಭೀಷ್ಮಃ

ತಮಹಂ ಸ್ಮಯನ್ನಿವ ರಣೇ ಪ್ರತ್ಯಭಾಷಂ ವ್ಯವಸ್ಥಿತಮ್ ।
ಭೂಮಿಷ್ಠಂ ನೋತ್ಸಹೇ ಯೋದ್ಧುಂ ಭವಂತಂ ರಥಮಾಸ್ಥಿತಃ ॥೧॥

ಆರೋಹ ಸ್ಯಂದನಂ ವೀರ ಕವಚಂ ಚ ಮಹಾಭುಜ ।
ಬಧ್ನಾನ ಸಮರೇ ರಾಮ ಯದಿ ಯೋದ್ಧುಮಿಹೇಚ್ಛಸಿ ॥೨॥

ಭೀಷ್ಮ– ಭೂಮಿಯ ಮೇಲೆ ಯುದ್ಧಕ್ಕೆ ಸನ್ನದ್ಧರಾಗಿ ನಿಂತ ಅವರನ್ನು ನೋಡಿ ನಗುತ್ತಾ ರಥದಲ್ಲಿ ಕುಳಿತ ನಾನು ಭೂಮಿಯ ಮೇಲೆ ನಿಂತಿರುವವರ ಜೊತೆಯಲ್ಲಿ ಯುದ್ಧವನ್ನು ಮಾಡಲು ಬಯಸುವುದಿಲ್ಲ. ಎಲೈ ವೀರರಾದ ಮಹಾಭುಜರೇ, ಯುದ್ಧವನ್ನು ಮಾಡಲು ಇಚ್ಛಿಸಿದರೆ ರಥವನ್ನು ಏರಿ, ಕವಚವನ್ನು ಧರಿಸಿ ಎಂದು ಹೇಳಿದೆನು.

ತತೋ ಮಾಮಬ್ರವೀದ್ ರಾಮಃ ಸ್ಮಯಮಾನೋ ರಣಾಜಿರೇ ॥೩॥

ರಥೋ ಮೇ ಮೇದಿನೀ ವೀರ ವಾಹಾ ವೇದಾಃ ಸದಶ್ವವತ್ ।
ಸೂತಶ್ಚ ಮಾತರಿಶ್ವಾ ವೈ ಕವಚಂ ವೇದಮಾತರಃ ॥೪॥

ಸುಸಂವೀತೋ ರಣೇ ತಾಭಿರ್ಯೋತ್ಸ್ಯೇಽಹಂ ಕುರುನಂದನ ॥೫॥

ಆಗ ರಣರಂಗದಲ್ಲಿ ಪರಶುರಾಮರು ನಗುತ್ತಾ ನನ್ನನ್ನು ಕುರಿತು– 'ಎಲೈ ವೀರನೇ, ಭೂಮಿಯೇ ನನ್ನ ರಥ. ವೇದಗಳೇ ಒಳ್ಳೆಯ ಅಶ್ವದಂತಿರುವ ವಾಹನಗಳು. ವಾಯುದೇವನೇ ಸೂತ. ವೇದಮಾತೆಯರು ನನ್ನ ಕವಚ. ಎಲೈ ಕುರುನಂದನನೇ, ಇವರಿಂದ ರಕ್ಷಿಸಲ್ಪಟ್ಟು ನಾನು ಯುದ್ಧವನ್ನು ಮಾಡುವೆನು' ಎಂದು ಹೇಳಿದರು.

ಏವಂ ಬ್ರುವಾಣೋ ಗಾಂಧಾರೇ ರಾಮೋ ಮಾಂ ಸತ್ಯವಿಕ್ರಮಃ ।
ಶರವ್ರಾತೇನ ಮಹತಾ ಸರ್ವತಃ ಪ್ರತ್ಯವಾರಯತ್ ॥೬॥

ಎಲೈ ಗಾಂಧಾರಿ ಪುತ್ರನೇ, ಹೀಗೆ ಹೇಳುತ್ತಾ ಸತ್ಯವಿಕ್ರಮರಾದ ಪರಶುರಾಮರು ಬಾಣಗಳ ದೊಡ್ಡ ಸಮೂಹದಿಂದ ನನ್ನನ್ನು ಎಲ್ಲ ಕಡೆಗಳಿಂದಲೂ ತಡೆದರು.

ತತೋಽಪಶ್ಯಂ ಜಾಮದಗ್ನ್ಯಂ ರಥೇ ದಿವ್ಯೇ ವ್ಯವಸ್ಥಿತಮ್ ।
ಸರ್ವಾಯುಧಧರೇ ಶ್ರೀಮತ್ಯದ್ಭುತೋಪಮದರ್ಶನೇ ॥೭॥

ಮನಸಾ ವಿಹಿತೇ ಪುಣ್ಯೇ ವಿಸ್ತೀರ್ಣೇ ನಗರೋಪಮೇ ।
ದಿವ್ಯಾಶ್ವಯುಜಿ ಸನ್ನದ್ಧೇ ಕವಚೇನ ವಿಭೂಷಿತೇ ॥೮॥

ಧ್ವಜೇನ ಚ ಮಹಾಬಾಹೋ ಸೋಮಾರ್ಕಕೃತಲಕ್ಷ್ಮಣಾ ।
ಧನುರ್ಧರೋ ಬದ್ಧತೂಣೋ ಬದ್ಧಗೋಧಾಂಗುಲಿತ್ರವಾನ್ ॥೯॥

ಅನಂತರ ನಾನು ಸರ್ವಾಯುಧವನ್ನು ಧರಿಸಿದ, ಕಾಂತಿಯುಕ್ತವಾದ, ಅದ್ಭುತವಾದ, ಮನಸ್ಸಿನಿಂದಲೇ ಸೃಷ್ಟಿಯನ್ನು ಮಾಡಿದ, ಪವಿತ್ರವಾದ, ವಿಸ್ತಾರವಾದ ನಗರದಂತಿರುವ ದಿವ್ಯಾಶ್ವಗಳನ್ನು ಹೂಡಿದ, ಕವಚಗಳಿಂದ ಭೂಷಿತವಾದ, ಸೂರ್ಯ-ಚಂದ್ರರ ಚಿಹ್ನೆಗಳಿಂದ ಅಲಂಕೃತವಾದ ಧ್ವಜದಿಂದ ಕೂಡಿದ ದಿವ್ಯವಾದ ರಥದಲ್ಲಿ ಧನುಸ್ಸನ್ನು ಧರಿಸಿ, ಬತ್ತಳಿಕೆಯನ್ನು ಬಿಗಿದು, ಹಸ್ತಗಳಿಗೆ ಗೋದಾಂಗುಲಿ ರಕ್ಷೆಯನ್ನು ಹಾಕಿಕೊಂಡಿದ್ದ ಪರಶುರಾಮರನ್ನು ನೋಡಿದೆನು.

ಸಾರಥ್ಯಂ ಕೃತವಾಂಸ್ತತ್ರ ಯುಯುತ್ಸೋರಕೃತವ್ರಣಃ ।
ಸಖಾ ವೇದವಿದತ್ಯಂತಂ ದಯಿತೋ ಭಾರ್ಗವಸ್ಯ ಹ ॥೧೦॥

ಯುದ್ಧವನ್ನು ಮಾಡಲು ಬಯಸಿದ ಪರಶುರಾಮರಿಗೆ ಸ್ನೇಹಿತರೂ, ವೇದವೇತ್ತರೂ ಮತ್ತು ಪರಶುರಾಮರಿಗೆ ಅತ್ಯಂತ ಪ್ರಿಯರೂ ಆದ ಅಕೃತವ್ರಣರು ಸಾರಥ್ಯವನ್ನು ಮಾಡಿದರು.

ಆಹ್ವಯಾನಃ ಸ ಮಾಂ ಯುದ್ಧೇ ಮನೋ ಹರ್ಷಯತೀವ ಮೇ ।
ಪುನಃ ಪುನರಪಿ ಕ್ರೋಶನ್ ಉಪಾಯಾನ್ಮಾಂ ಹಿ ಭಾರ್ಗವಃ ॥೧೧॥

ಪರಶುರಾಮರು ನನ್ನನ್ನು ಯುದ್ಧಕ್ಕೆ ಆಹ್ವಾನಿಸುತ್ತಾ ನನ್ನ ಮನಸ್ಸಿಗೆ ಹರ್ಷವನ್ನು ಉಂಟುಮಾಡಿದರು. ಭಾರ್ಗವರಾದ ಅವರು ಪುನಃ ಪುನಃ ಗರ್ಜಿಸುತ್ತಾ ನನ್ನನ್ನು ಸಮೀಪಿಸಿದರು.

ತಮಾದಿತ್ಯಮಿವೋದ್ಯಂತಮನಾಧೃಷ್ಯಂ ಮಹಾಬಲಮ್ ।
ಕ್ಷತ್ರಿಯಾಂತಕರಂ ರಾಮಮೇಕಮೇಕಃ ಸಮಾಸದಮ್ ॥೧೨॥

ಉದಯಿಸುವ ಸೂರ್ಯನಂತೆ ಪ್ರಕಾಶಿಸುವ, ಸೋಲಿಸಲು ಅಸಾಧ್ಯರಾದ, ಮಹಾಬಲರಾದ, ಕ್ಷತ್ರಿಯ ಕುಲನಾಶಕರಾದ, ಏಕಾಕಿಯಾದ ಪರಶುರಾಮರನ್ನು ನಾನೂ ಏಕಾಕಿಯಾಗಿ ಸಮೀಪಿಸಿದೆನು.

ತತೋಽಹಂ ಬಾಣಪಾತೇಷು ತ್ರಿಷು ವಾಹಾನ್ ನಿಗೃಹ್ಯ ವೈ ॥೧೩॥

ಅವತೀರ್ಯ ಧನುರ್ನ್ಯಸ್ಯ ಪದಾತಿರ್ಋಷಿಸತ್ತಮಮ್ ।
ಅಭ್ಯಗಚ್ಛಂ ತದಾ ರಾಮಮರ್ಚಿಷ್ಯನ್ ದ್ವಿಜಸತ್ತಮಮ್ ॥೧೪॥

ಅಭಿವಾದ್ಯ ಚೈನಂ ವಿಧಿವದಬ್ರುವಂ ವಾಕ್ಯಮುತ್ತಮಮ್ ॥೧೫॥

ಆಗ ನಾನು ಮೂರು ಬಾಣಪ್ರಯೋಗಗಳಿಂದ ಅವರ ಕುದುರೆಗಳನ್ನು ಸ್ತಂಭಿಸಿ ನನ್ನ ರಥದಿಂದ ಕೆಳಗಿಳಿದು, ಧನುಸ್ಸನ್ನು ಭೂಮಿಯ ಮೇಲಿಟ್ಟು, ಋಷಿಶ್ರೇಷ್ಠರೂ, ದ್ವಿಜಶ್ರೇಷ್ಠರೂ ಆದ ಪರಶುರಾಮರನ್ನು ಪೂಜಿಸುತ್ತಾ, ಕಾಲಿನಿಂದಲೇ ನಡೆದು ಅವರ ಬಳಿಗೆ ಹೋದೆನು. ಅವರಿಗೆ ವಿಧಿಪ್ರಕಾರವಾಗಿ ನಮಸ್ಕಾರವನ್ನು ಮಾಡಿ, ಅವರನ್ನು ಕುರಿತು ಮಾತನಾಡಿದೆನು.

ಯೋತ್ಸ್ಯೇ ತ್ವಯಾ ರಣೇ ರಾಮ ವಿಶಿಷ್ಟೇನಾಧಿಕೇನ ಚ ।
ಗುರುಣಾ ಧರ್ಮಶೀಲೇನ ಜಯಮಾಶಾಸ್ವ ಮೇ ವಿಭೋ ॥೧೬॥

ಎಲೈ ಪರಶುರಾಮರೇ, ನನಗಿಂತ ಶ್ರೇಷ್ಠರೂ ಗುಣಗಳಿಂದ ವಿಶಿಷ್ಟರೂ, ಗುರುಗಳೂ, ಧರ್ಮಶೀಲರೂ ಆದ ನಿಮ್ಮ ಜೊತೆಯಲ್ಲಿ ಯುದ್ಧವನ್ನು ಮಾಡುವೆನು. ವಿಭುಗಳೇ, ನನಗೆ ಜಯವನ್ನು ಆಶಂಸಿಸಿ (ಎಂದು ಹೇಳಿದೆನು).

ರಾಮಃ

ಏವಮೇತತ್ ಕುರುಶ್ರೇಷ್ಠ ಕರ್ತವ್ಯಂ ಭೂತಿಮಿಚ್ಛತಾ ।
ಧರ್ಮೋ ಹ್ಯೇಷ ಮಹಾಬಾಹೋ ವಿಶಿಷ್ಟೈಃ ಸಹ ಯುಧ್ಯತಾಮ್ ॥

ಶಪೇಯಂ ತ್ವಾಂ ನ ಚೇದೇವಮಾಗಚ್ಛೇಥಾ ವಿಶಾಂಪತೇ ।
ಯುಧ್ಯಸ್ವ ತ್ವಂ ರಣೇ ಯತ್ತೋ ಧೈರ್ಯಮಾಲಂಬ್ಯ ಕೌರವ ॥೧೮॥

ರಾಮ– ಎಲೈ ಕುರುಶ್ರೇಷ್ಠನೇ, ಶುಭವನ್ನು ಆಕಾಂಕ್ಷಿಸುವವನು ಹೀಗೆಯೇ ಮಾಡಬೇಕು. ಎಲೈ ಮಹಾಬಾಹುವೇ, ತಮಗಿಂತ ಉತ್ತಮರ ಜೊತೆಯಲ್ಲಿ ಯುದ್ಧವನ್ನು ಮಾಡುವಾಗ ಇದು ಧರ್ಮ. ಎಲೈ ರಾಜನೇ, ನೀನು ಹೀಗೆ ನನ್ನ ಬಳಿಗೆ ಬರದಿದ್ದರೆ ನಿನಗೆ ಶಾಪವನ್ನು ಕೊಡುತ್ತಿದ್ದೆ. ಎಲೈ ಕೌರವ್ಯನೇ, ಧೈರ್ಯವನ್ನು ಆಲಂಬಿಸಿ ಜಾಗರೂಕತೆಯಿಂದ ಯುದ್ಧವನ್ನು ಮಾಡು.

ನ ತು ತೇ ಜಯಮಾಶಂಸೇ ತ್ವಾಂ ವಿಜೇತುಮಹಂ ಸ್ಥಿತಃ ।
ಗಚ್ಛ ಯುಧ್ಯಸ್ವ ಧರ್ಮೇಣ ಪ್ರೀತೋಽಸ್ಮಿ ಚರಿತೇನ ತೇ ॥೧೯॥

ನಿನಗೆ ಜಯವನ್ನು ಆಶಂಸಿಸುವುದಿಲ್ಲ. ಏಕೆಂದರೆ ನಾನು ನಿನ್ನನ್ನು ಗೆಲ್ಲಲು ಬಂದಿದ್ದೇನೆ. ನೀನು ಹೋಗಿ ಯುದ್ಧವನ್ನು ಮಾಡು. ನಿನ್ನ ಧಾರ್ಮಿಕವಾದ ನಡತೆಯಿಂದ ನಾನು ಪ್ರಸನ್ನನಾಗಿದ್ದೇನೆ.

ಭೀಷ್ಮಃ

ತತೋಽಹಂ ತಂ ನಮಸ್ಕೃತ್ಯ ರಥಮಾರುಹ್ಯ ಸತ್ವರಃ ।
ಪ್ರಾಧ್ಮಾಪಯಂ ರಣೇ ಶಂಖಂ ಪುನರ್ಹೇಮಪರಿಷ್ಕೃತಮ್ ॥೨೦॥

ಭೀಷ್ಮ– ಆಗ ನಾನು ಅವರಿಗೆ ನಮಸ್ಕಾರವನ್ನು ಮಾಡಿ, ಹಿಂದಕ್ಕೆ ಬಂದು ಶೀಘ್ರವಾಗಿ ನನ್ನ ರಥವನ್ನು ಏರಿ, ಸುವರ್ಣಾಲಂಕೃತವಾದ ಶಂಖವನ್ನು ಗಟ್ಟಿಯಾಗಿ ಊದಿದೆನು.

ತತೋ ಯುದ್ಧಂ ಸಮಭವನ್ಮಮ ತಸ್ಯ ಚ ಭಾರತ ।
ದಿವಸಾನ್ ಸುಬಹೂನ್ ರಾಜನ್ ಪರಸ್ಪರಜಿಗೀಷಯಾ ॥೨೧॥

ಎಲೈ ಭಾರತನೇ, ರಾಜನೇ, ಅನಂತರ ಪರಸ್ಪರ ಜಯದ ಇಚ್ಛೆಯಿಂದ ಬಹಳ ದಿವಸಗಳವರೆಗೆ ನನಗೂ ಮತ್ತು ಪರಶುರಾಮರಿಗೂ ಯುದ್ಧವು ನಡೆಯಿತು.

ಸ ಮೇ ತಸ್ಮಿನ್ ರಣೇ ಪೂರ್ವಂ ಪ್ರಾಹರತ್ ಕಂಕಪತ್ರಿಭಿಃ ।
ಷಷ್ಟ್ಯಾ ಶತೈಶ್ಚ ನವಭಿಃ ಶರಾಣಾಮಗ್ನಿವರ್ಚಸಾಮ್ ॥೨೨॥

ಅವರು ಕಂಕಪತ್ರದಿಂದ ಕೂಡಿದ್ದ, ಬಾಗಿದ ತುದಿಯುಳ್ಳ, ಅಗ್ನಿಯ ಕಾಂತಿಯುಳ್ಳ ಒಂಭೈನೂರ ಅರವತ್ತು ಬಾಣಗಳನ್ನು ನನ್ನ ಮೇಲೆ ಮೊದಲು ಪ್ರಯೋಗಿಸಿದರು.

ಚತ್ವಾರಸ್ತೇನ ಮೇ ವಾಹಾಃ ಸೂತಶ್ಚೈವ ವಿಶಾಂಪತೇ ।
ಪ್ರತಿರುದ್ಧಾಸ್ತಥೈವಾಹಂ ಸಮರೇ ದಂಸಿತಃ ಸ್ಥಿತಃ ॥೨೩॥

ಎಲೈ ರಾಜನೇ, ಅದರಿಂದ ನನ್ನ ನಾಲ್ಕು ಕುದುರೆಗಳೂ ಮತ್ತು ಸೂತನೂ ಸ್ತಂಭಿತರಾದರು. ನಾನು ಮಾತ್ರ ಕವಚವನ್ನು ಧರಿಸಿ ಯುದ್ಧದಲ್ಲಿ ಹಾಗೆಯೇ ಇದ್ದೆನು.

ನಮಸ್ಕೃತ್ಯ ಚ ದೇವೇಭ್ಯೋ ಬ್ರಾಹ್ಮಣೇಭ್ಯೋ ವಿಶೇಷತಃ ।
ತಮಹಂ ಸ್ಮಯನ್ನಿವ ರಣೇ ಪ್ರತ್ಯಭಾಷಂ ವ್ಯವಸ್ಥಿತಮ್ ॥೨೪॥

ಆಗ ನಾನು ವಿಶೇಷವಾಗಿ ದೇವತೆಗಳಿಗೂ ಮತ್ತು ಬ್ರಾಹ್ಮಣರಿಗೂ ನಮಸ್ಕರಿಸಿ, ಯುದ್ಧದಲ್ಲಿ ನಗುತ್ತಾ ನಿಂತ ಅವರನ್ನು ಕುರಿತು ಮಾತನಾಡಿದೆನು.

ಆಚಾರ್ಯತಾ ಮಾನಿತಾ ಮೇ ನಿರ್ಮರ್ಯಾದೇ ಹ್ಯಪಿ ತ್ವಯಿ ।
ಭೂಯಶ್ಚ ಶೃಣು ಮೇ ಬ್ರಹ್ಮನ್ ಸಂವಾದಂ ಧರ್ಮಸಂಗ್ರಹೇ ॥೨೫॥

ನೀವು ಎಲ್ಲೆಯನ್ನು ಮೀರಿದ್ದರೂ ನಿಮ್ಮ ಗುರುತ್ವವನ್ನು ನಾನು ಗೌರವಿಸಿದ್ದೇನೆ. ಬ್ರಾಹ್ಮಣರೇ, ಧರ್ಮದ ವಿಷಯದಲ್ಲಿ ನನ್ನ ಮಾತನ್ನು ಇನ್ನೂ ಕೇಳುವವರಾಗಿ.

ಏತೇ ವೇದಾಃ ಶರೀರಸ್ಥಾ ಬ್ರಾಹ್ಮಣ್ಯಂ ಯಚ್ಚ ತೇ ಮಹತ್ ।
ತಪಶ್ಚ ಸುಮಹತ್ ತಪ್ತಂ ನ ತೇಭ್ಯಃ ಪ್ರಹರಾಮ್ಯಹಮ್ ॥೨೬॥

ಪ್ರಹರೇ ಕ್ಷತ್ರಧರ್ಮಂ ತಂ ಯಂ ತ್ವಂ ರಾಮ ಸಮಾಶ್ರಿತಃ ।
ಬ್ರಾಹ್ಮಣಃ ಕ್ಷತ್ರಿಯತ್ವಂ ಹಿ ಯಾತಿ ಶಸ್ತ್ರಮುದ್ಯಮಾತ್ ॥೨೭॥

ಪಶ್ಯ ಮೇ ಧನುಷೋ ವೀರ್ಯಂ ಪಶ್ಯ ಬಾಹ್ವೋರ್ಬಲಂ ಚ ಮೇ ।
ಏಷ ತೇ ಕಾರ್ಮುಕಂ ವೀರ ದ್ವಿಧಾ ಕುರ್ಯಾಂ ಸಸಾಯಕಮ್ ॥೨೮॥

ನಿಮ್ಮ ಶರೀರದಲ್ಲಿರುವ ಈ ವೇದಗಳು, ಈ ಮಹಾಬ್ರಾಹ್ಮಣ್ಯ ಮತ್ತು ಆಚರಿಸಿದ ದೊಡ್ಡ ತಪಸ್ಸು ಇವುಗಳ ಮೇಲೆ ನಾನು ಬಾಣಪ್ರಯೋಗವನ್ನು ಮಾಡುವುದಿಲ್ಲ. ಎಲೈ ಪರಶುರಾಮರೇ, ನೀವು ಯಾವ ಕ್ಷತ್ರಧರ್ಮವನ್ನು ಆಚರಿಸಿದ್ದೀರೋ ಅದರ ಮೇಲೆ ಬಾಣಪ್ರಯೋಗವನ್ನು ಮಾಡುತ್ತೇನೆ. ಏಕೆಂದರೆ ಶಸ್ತ್ರವನ್ನು ಧರಿಸಿದ ಬ್ರಾಹ್ಮಣನು ಕ್ಷತ್ರಿಯನಾಗುತ್ತಾನೆ. ನನ್ನ ಧನುಸ್ಸಿನ ಸಾಮರ್ಥ್ಯವನ್ನು ಮತ್ತು ನನ್ನ ಬಾಹುಗಳ ಬಲವನ್ನು ನೋಡುವವರಾಗಿ. ಎಲೈ ವೀರರೇ, ನಿಮ್ಮ ಬಿಲ್ಲು ಮತ್ತು ಬಾಣಗಳನ್ನು ಎರಡು ಭಾಗವಾಗಿ ಕತ್ತರಿಸುವೆನು ಎಂದು ಹೇಳಿದೆನು.

ತಸ್ಯಾಹಂ ನಿಶಿತಂ ಭಲ್ಲಂ ಪ್ರಾಹಿಣ್ವಂ ಭರತರ್ಷಭ ।
ತೇನಾಸ್ಯ ಧನುಷಃ ಕೋಟಿಃ ಛಿನ್ನಾ ಭೂಮಿಮಥಾಗಮತ್ ॥೨೯॥

ಎಲೈ ಭರತರ್ಷಭನೇ, ಅವರ ಮೇಲೆ ನಾನು ನಿಶಿತವಾದ ಭಲ್ಲೆಯನ್ನು ಪ್ರಯೋಗಿಸಿದೆನು. ಅದರಿಂದ ಅವರ ಧನುಸ್ಸು ಮುರಿದು ಭೂಮಿಯ ಮೇಲೆ ಬಿದ್ದಿತು.

ನವ ಚಾಪಿ ಪೃಷತ್ಕಾನಾಂ ಶತಾನಿ ನತಪರ್ವಣಾಮ್ ।
ಪ್ರಾಹಿಣ್ವಂ ಕಂಕಪತ್ರಾಣಾಂ ಜಾಮದಗ್ನ್ಯರಥಂ ಪ್ರತಿ ॥೩೦॥

ಮತ್ತು ಅವರ ರಥದ ಮೇಲೆ ಬಾಗಿದ ತುದಿಯುಳ್ಳ, ಕಂಕಪತ್ರಗಳನ್ನು ಹೊಂದಿದ್ದ ಒಂಬೈನೂರು ಬಾಣಗಳನ್ನು ಪ್ರಯೋಗಿಸಿದೆನು.

ಕಾಯೇ ನಿಷಕ್ತಾಸ್ತು ತದಾ ವಾಯುನಾ ಸಮುದೀರಿತಾಃ ।
ಚೇಲುಃ ಕ್ಷರಂತೋ ರುಧಿರಂ ನಾಗಾ ಇವ ವಸುಂಧರಾಮ್ ॥೩೧॥

ಅವರ ದೇಹವನ್ನು ಸಂಧಿಸಿದ ಆ ಬಾಣಗಳು ವಾಯುವಿನಿಂದ ಉತ್ತೇಜಿತವಾಗಿ ಸರ್ಪವು ಭೂಮಿಯನ್ನು ಪ್ರವೇಶಿಸಿದಂತೆ, ಶರೀರದಿಂದ ರಕ್ತವನ್ನು ಸುರಿಸುತ್ತಾ ಶರೀರವನ್ನು ಭೇದಿಸಿ ಮುಂದೆ ಹೋದವು.

ಕ್ಷತಜೋಕ್ಷಿತಸರ್ವಾಂಗಃ ಕ್ಷರನ್ ಸ ರುಧಿರಂ ರಣೇ ।
ಬಭೌ ರಾಮಸ್ತದಾ ರಾಜನ್ ಮೇರುರ್ಧಾತೂನಿವೋತ್ಸೃಜನ್ ॥೩೨॥

ಎಲ್ಲಾ ಅವಯವಗಳಿಂದಲೂ ಯುದ್ಧದಲ್ಲಿ ರಕ್ತವನ್ನು ಸುರಿಸುತ್ತಿದ್ದ ಪರಶುರಾಮರು ಎಲೈ ರಾಜನೇ, ಧಾತುವನ್ನು ಸುರಿಸುತ್ತಿರುವ ಮೇರುಪರ್ವತದಂತೆ ಶೋಭಿಸಿದರು.

ಹೇಮಂತಾಂತೇऽಶೋಕ ಇವ ರಕ್ತಸ್ತಬಕಮಂಡಿತಃ ।
ಬಭೌ ರಾಮಸ್ತದಾ ರಾಜನ್ ಕ್ವಚಿತ್ ಕಿಂಶುಕಸನ್ನಿಭಃ ॥೩೩॥

ಎಲೈ ರಾಜನೇ, ಆಗ ಪರಶುರಾಮರು ಹೇಮಂತ ಋತುವಿನ ಕೊನೆಯಲ್ಲಿ ಕೆಂಪು ಮೊಗ್ಗುಗಳಿಂದ ಕೂಡಿದ ಅಶೋಕ ವೃಕ್ಷದಂತೆ, ಕೆಲವು ಸಲ ಕೆಂಪು ಪುಷ್ಪಗಳಿಂದ ಕೂಡಿದ ಮುತ್ತುಗದ ಮರದಂತೆ ಶೋಭಿಸಿದರು.

ತತೋऽನ್ಯದ್ ಧನುರಾದಾಯ ರಾಮಃ ಕ್ರೋಧಸಮನ್ವಿತಃ ।
ಹೇಮಪುಂಖಾನ್ ಸುನಿಶಿತಾನ್ ಶರಾಂಸ್ತಾನ್ ಪ್ರವವರ್ಷ ಸಃ ॥೩೪॥

ಅನಂತರ ಪರಶುರಾಮರು ಕೋಪದಿಂದ ಕೂಡಿದವರಾಗಿ ಇನ್ನೊಂದು ಬಿಲ್ಲನ್ನು ತೆಗೆದುಕೊಂಡು, ಹೇಮಪುಂಖಗಳಿದ್ದ ಹರಿತವಾದ ಬಾಣಗಳ ಮಳೆಯನ್ನು ನನ್ನ ಮೇಲೆ ಸುರಿಸಿದರು.

ತೇ ಸಮಾಸಾದ್ಯ ಮಾಂ ರೌದ್ರಾ ಬಹುಧಾ ಮರ್ಮಭೇದಿನಃ ।
ಅಕಂಪಯನ್ ಮಹಾವೇಗಾಃ ಸರ್ಪಾನನವಿಷೋಪಮಾಃ ॥೩೫॥

ಭಯಂಕರಗಳೂ, ಮರ್ಮಭೇದಿಗಳೂ, ಸರ್ಪಮುಖದಂತೆ ವಿಷೋಲ್ಬಣಗಳೂ, ಮಹಾವೇಗವುಳ್ಳವೂ ಆದ ಆ ಬಾಣಗಳು ನನ್ನನ್ನು ಸಂಧಿಸಿ ನನ್ನನ್ನು ಅಲುಗಾಡಿಸಿದವು.

ತಮಹಂ ಸಮವಷ್ಟಭ್ಯ ಪುನರಾತ್ಮಾನಮಾಹವೇ ।
ಶತಸಂಖ್ಯೈಃ ಶರೈಃ ಕ್ರುದ್ಧಸ್ತದಾ ರಾಮಮವಾಕಿರಮ್ ॥೩೬॥

ಆಗ ಯುದ್ಧದಲ್ಲಿ ನನ್ನನ್ನು ನಾನೇ ಸಮಾಧಾನ ಮಾಡಿಕೊಂಡು, ಕೋಪದಿಂದ ನೂರು ಬಾಣಗಳಿಂದ ಪರಶುರಾಮರ ಮೇಲೆ ಬಾಣಗಳ ಮಳೆಯನ್ನು ಸುರಿಸಿದೆನು.

ಸ ತೈರಗ್ನ್ಯರ್ಕಸಂಕಾಶೈಃ ಶರೈರಾಶೀವಿಷೋಪಮೈಃ ।
ಶಿತೈರಭ್ಯರ್ದಿತೋ ರಾಮೋ ಮಂದಚೇತಾ ಇವಾಭವನ್ ॥೩೭॥

ಅಗ್ನಿಸೂರ್ಯಪ್ರಕಾಶವುಳ್ಳ, ಸರ್ಪಗಳನ್ನು ಹೋಲುವ ಹರಿತವಾದ ಆ ಬಾಣಗಳಿಂದ ಪೀಡಿತರಾದ ಪರಶುರಾಮರು ಮಂದಪ್ರಜ್ಞರಂತೆ ಆದರು.

ತತೋಽಹಂ ಕೃಪಯಾಽಽವಿಷ್ಟೋ ವಿನಿಂದ್ಯಾತ್ಮಾನಮಾತ್ಮನಾ ।
ಧಿಗ್ಧಿಗಿತ್ಯಬ್ರವಂ ಯುದ್ಧಂ ಕ್ಷತ್ರಧರ್ಮಂ ಚ ಭಾರತ ॥೩೮॥

ಎಲೈ ಭಾರತನೇ, ಆಗ ನಾನು ಅವರ ಮೇಲೆ ಕೃಪೆಯಿಂದ ಕೂಡಿದವನಾಗಿ ನನ್ನನ್ನು ನಾನೇ ನಿಂದಿಸಿಕೊಂಡು, ಕ್ಷತ್ರಿಯಧರ್ಮಕ್ಕೆ ಧಿಕ್ಕಾರವಿರಲಿ, ಯುದ್ಧಕ್ಕೆ ಧಿಕ್ಕಾರವಿರಲಿ ಎಂದು ಪುನಃ ಪುನಃ ಹೇಳಿದೆನು.

ಅಸಕೃಚ್ಚಾಬ್ರುವಂ ರಾಜನ್ ಶೋಕವೇಗಪರಿಪ್ಲುತಃ ॥೩೯॥

ಅಹೋ ಬತ ಕೃತಂ ಪಾಪಂ ಮಯೇದಂ ಕ್ಷತ್ರಧರ್ಮಣಾ ।
ಗುರುರ್ದ್ವಿಜಾತಿರ್ಧರ್ಮಾತ್ಮಾ ಯದೇವಂ ಪೀಡಿತಃ ಶರೈಃ ॥೪೦॥

ಎಲೈ ರಾಜನೇ, ಶೋಕವೇಗದಿಂದ ಪೂರ್ಣನಾಗಿ, ಕ್ಷತ್ರಿಯಧರ್ಮವನ್ನು ಆಚರಿಸುವ ನಾನು ಎಂತಹ ಪಾಪಕರ್ಮವನ್ನು ಮಾಡಿದೆ! ಬ್ರಾಹ್ಮಣರೂ ಧರ್ಮಾತ್ಮರೂ ಆದ ಇವರನ್ನು ನಾನು ಈ ರೀತಿಯಾಗಿ ಬಾಣಗಳಿಂದ ಪೀಡಿಸಿದೆ ಎಂದು ಅನೇಕ ಬಾರಿ ಹೇಳಿಕೊಂಡೆನು.

ತತೋಽಹಂ ಪ್ರಾಹರಂ ಭೂಯೋ ಜಾಮದಗ್ನ್ಯಾಯ ಭಾರತ ॥೪೧॥

ಅಥಾಪತತ್ ಸ ಪೃಥಿವೀಂ ಪೂಷಾ ದಿವಸಸಂಕ್ಷಯೇ ।
ಜಗಾಮಾಸ್ತಂ ಸಹಸ್ರಾಂಶುಃ ತತೋ ಯುದ್ಧಮುಪಾರಮತ್ ॥೪೨॥

ಎಲೈ ಭಾರತನೇ, ನಾನು ಪುನಃ ಪರಶುರಾಮರ ಮೇಲೆ ಬಾಣ ಪ್ರಯೋಗವನ್ನು ಮಾಡಿದೆನು. ಆಗ ಸಾಯಂಕಾಲವಾಯಿತು. ಸೂರ್ಯನು ಅಸ್ತಂಗತನಾದನು ಮತ್ತು ಆ ದಿವಸ ಯುದ್ಧವು ಉಪರಮವನ್ನು ಹೊಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಏಕಾಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆರಡನೆಯ ಅಧ್ಯಾಯ

ಪರಶುರಾಮ ಮತ್ತು ಭೀಷ್ಮರ ಯುದ್ಧದ ವರ್ಣನೆ.

ಭೀಷ್ಮಃ

ಆತ್ಮನಸ್ತು ತತಃ ಸೂತೋ ಹಯಾನಾಂ ಚ ವಿಶಾಂಪತೇ ।
ಮಮ ಚಾಪನಯಾಮಾಸ ಶಲ್ಯಾನ್ ಕುಶಲಸಮ್ಮತಃ ॥೧॥

ಭೀಷ್ಮ– ಎಲೈ ರಾಜನೇ, ಅನಂತರ ಕುಶಲನಾದ ನನ್ನ ಸೂತನು, ನನಗೂ, ಅಶ್ವಗಳಿಗೂ ಮತ್ತು ತನಗೂ ನೆಟ್ಟಿದ್ದ ಆಯುಧದ ಚೂರುಗಳನ್ನು ತೆಗೆದನು.

ಸ್ನಾತೋಪವೃತ್ತೈಸ್ತುರಗೈರ್ಲಬ್ಧತೋಯೈರವಿಹ್ವಲೈಃ ।
ಪ್ರಭಾತೇ ಚೋದಿತೇ ಸೂರ್ಯೇ ತತೋ ಯುದ್ಧಮವರ್ತತ ॥೨॥

ಅಶ್ವಗಳಿಗೆ ಸ್ನಾನವನ್ನು ಮಾಡಿಸಿ, ನೀರನ್ನು ಕೊಟ್ಟು, ದಣಿವಾರಿಸಿದ ಮೇಲೆ ಪ್ರಭಾತಕಾಲದಲ್ಲಿ ಸೂರ್ಯನು ಉದಯಿಸುತ್ತಿರಲು ಯುದ್ಧವು ಪ್ರಾರಂಭವಾಯಿತು.

ದೃಷ್ಟ್ವಾ ಮಾಂ ತೂರ್ಣಮಾಯಾಂತಂ ದಂಸಿತಂ ಸ್ಯಂದನೇ ಸ್ಥಿತಮ್ ।
ಅಕರೋದ್ ರಥಮತ್ಯಂತಂ ರಾಮಃ ಸಜ್ಜಂ ಪ್ರತಾಪವಾನ್ ॥೩॥

ನಾನು ರಥದಲ್ಲಿ ಕವಚವನ್ನು ಧರಿಸಿ, ಶೀಘ್ರವಾಗಿ ಬರುತ್ತಿರುವುದನ್ನು ನೋಡಿದ ಪ್ರತಾಪಶಾಲಿಯಾದ ಪರಶುರಾಮರು ತಮ್ಮ ರಥವನ್ನು ಬಹಳವಾಗಿ ಸಿದ್ಧಗೊಳಿಸಿದರು.

ತತೋಽಹಂ ರಾಮಮಾಯಾಂತಂ ದೃಷ್ಟ್ವಾ ಸಮರಕಾಂಕ್ಷಿಣಮ್ ।
ಧನುಃಶ್ರೇಷ್ಠಂ ಸಮುತ್ಸೃಜ್ಯ ಸಹಸಾಽವತರಂ ರಥಾತ್ ॥೪॥

ಆಗ ನಾನು ಯುದ್ಧಾಕಾಂಕ್ಷಿಗಳಾಗಿ ಮುಂದೆ ಬರುತ್ತಿರುವ ಪರಶುರಾಮರನ್ನು ನೋಡಿ ನನ್ನ ಶ್ರೇಷ್ಠವಾದ ಧನುಸ್ಸನ್ನು ಬಿಟ್ಟು ತಕ್ಷಣ ರಥದಿಂದ ಇಳಿದೆನು.

ಅಭಿವಾದ್ಯ ತಥೈವಾಹಂ ರಥಮಾರುಹ್ಯ ಭಾರತ ।
ಯುಯುತ್ಸುರ್ಜಾಮದಗ್ನ್ಯಸ್ಯ ಪ್ರಮುಖೇ ವೀತಭೀಃ ಸ್ಥಿತಃ ॥೫॥

ಎಲೈ ಭಾರತನೇ, ನಾನು ಅವರಿಗೆ ನಮಸ್ಕಾರವನ್ನು ಮಾಡಿ, ಪುನಃ ಹಾಗೆಯೇ ರಥವನ್ನು ಹತ್ತಿ, ಯುದ್ಧವನ್ನು ಮಾಡಲು ಬಯಸಿ, ಪರಶುರಾಮರ ಎದುರಿನಲ್ಲಿ ನಿರ್ಭಯವಾಗಿ ನಿಂತೆನು.

ತತೋ ಮಾಂ ಶರವರ್ಷೇಣ ಮಹತಾ ಸಮವಾಕಿರತ್ ।
ಅಹಂ ಚ ಶರವರ್ಷೇಣ ವರ್ಷಂತಂ ಸಮವಾಕಿರಮ್ ॥೬॥

ಅನಂತರ ಅವರು ನನ್ನ ಮೇಲೆ ದೊಡ್ಡ ಬಾಣಗಳ ಮಳೆಯನ್ನು ಸುರಿಸಿದರು. ನಾನೂ ಸಹ ಅವರ ಮೇಲೆ ಬಾಣಗಳ ಮಳೆಯನ್ನು ಸುರಿಸಿದೆ.

ಸಂಕ್ರುದ್ಧೋ ಜಾಮದಗ್ನ್ಯಸ್ತು ಪುನರೇವ ಪತತ್ರಿಣಃ ।
ಪ್ರೇಷಯಾಮಾಸ ಮೇ ರಾಜನ್ ದೀಪ್ತಾಸ್ಯಾನುರಗಾನಿವ ॥೭॥

ಎಲೈ ರಾಜನೆ, ಕೋಪಗೊಂಡ ಪರಶುರಾಮರು ನನ್ನ ಮೇಲೆ ಹಿಂದೆ ಗರಿಗಳನ್ನು ಕಟ್ಟಿದ, ಅಗ್ನಿಮುಖವನ್ನು ಹೊಂದಿದ, ಸರ್ಪಗಳಂತಿರುವ ಬಾಣಗಳನ್ನು ಪ್ರಯೋಗಿಸಿದರು.

ತಾನಹಂ ನಿಶಿತೈರ್ಭಲ್ಲೈಃ ಶತಶೋಽಥ ಸಹಸ್ರಶಃ ।
ಅಚ್ಛಿದಂ ಸಹಸಾ ರಾಜನ್ನಂತರಿಕ್ಷೇ ಪುನಃ ಪುನಃ ॥೮॥

ಎಲೈ ರಾಜನೇ, ನಾನು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿದ್ದ ಆ ಬಾಣಗಳನ್ನು ಹರಿತವಾದ ಭಲ್ಲೆಗಳಿಂದ ಪುನಃ ಪುನಃ ಅಂತರಿಕ್ಷದಲ್ಲಿಯೇ ಕತ್ತರಿಸಿದೆನು.

ತತಸ್ತ ಸ್ತ್ರಾಣಿ ದಿವ್ಯಾನಿ ಜಾಮದಗ್ನ್ಯಃ ಪ್ರತಾಪವಾನ್ ।
ಮಯಿ ಪ್ರಯೋಜಯಾಮಾಸ ತಾನ್ಯಹಂ ಪ್ರತ್ಯಷೇಧಯಮ್ ॥೯॥

ಅಸ್ತ್ರೈರೇವ ಮಹಾಬಾಹೋ ಚಿಕೀರ್ಷನ್ನಧಿಕಕ್ರಿಯಾಮ್ ॥೧೦॥

ತತೋ ದಿವಿ ಮಹಾನ್ ನಾದಃ ಪ್ರಾದುರಾಸೀತ್ ಸಮಂತತಃ ॥೧೧॥

ಅನಂತರ ಪ್ರತಾಪಶಾಲಿಗಳಾದ ಪರಶುರಾಮರು ನನ್ನ ಮೇಲೆ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು. ಎಲೈ ಮಹಾಬಾಹುವೇ, ನಾನೂ ಸಹ ಅವರನ್ನು ಮೀರಿಸುವವನಾಗಿ ಅಸ್ತ್ರಗಳಿಂದಲೇ ಅವರ ಅಸ್ತ್ರಗಳನ್ನು ಪ್ರತಿಷೇಧಿಸಿದೆನು. ಆಗ ಆಕಾಶದಲ್ಲಿ ಎಲ್ಲ ಕಡೆಯಲ್ಲಿಯೂ ದೊಡ್ಡ ನಾದ ಉಂಟಾಯಿತು.

ತತೋಽಹಮಸ್ತ್ರಂ ವಾಯವ್ಯಂ ಜಾಮದಗ್ನ್ಯೇ ಪ್ರಯುಕ್ತವಾನ್ ।
ಪ್ರತ್ಯಾಜಘ್ನೇ ಚ ತದ್ ರಾಮೋ ಗುಹ್ಯಾಸ್ತ್ರೇಣ ವೀರ್ಯವಾನ್ ॥೧೨॥

ಅನಂತರ ನಾನು ಪರಶುರಾಮರ ಮೇಲೆ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದೆನು. ವೀರ್ಯಶಾಲಿಗಳಾದ ಪರಶುರಾಮರು ಅದನ್ನು ಗುಹ್ಯಕಾಸ್ತ್ರದಿಂದ ನಿವಾರಿಸಿದರು.

ತತೋಽಹಮಸ್ತ್ರಮಾಗ್ನೇಯಮನುಮಂತ್ರ್ಯ ಪ್ರಯುಕ್ತವಾನ್ ।
ವಾರುಣೇನೈವ ತದ್ ರಾಮೋ ವಾರಯಾಮಾಸ ಮೇ ವಿಭುಃ ॥೧೩॥

ಅನಂತರ ನಾನು ಅಭಿಮಂತ್ರಣವನ್ನು ಮಾಡಿ, ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದೆನು. ವಿಭುಗಳಾದ ಪರಶುರಾಮರು ಅದನ್ನು ವಾರುಣಾಸ್ತ್ರದಿಂದ ನಿವಾರಣೆ ಮಾಡಿದರು.

ಏವಮಸ್ತ್ರಾಣಿ ದಿವ್ಯಾನಿ ರಾಮಸ್ಯಾಹಮವಾರಯಮ್ ।
ರಾಮಶ್ಚ ಮಮ ತೇಜಸ್ವೀ ದಿವ್ಯಾನ್ಯಸ್ತ್ರಾಣಿ ಸಂಯುಗೇ ॥೧೪॥

ಹೀಗೆ ಯುದ್ಧದಲ್ಲಿ ನಾನು ಪರಶುರಾಮರ ದಿವ್ಯಾಸ್ತ್ರಗಳನ್ನೂ, ತೇಜಸ್ವಿಗಳಾದ ಪರಶುರಾಮರು ನನ್ನ ದಿವ್ಯಾಸ್ತ್ರಗಳನ್ನೂ ಪರಸ್ಪರವಾಗಿ ನಿವಾರಿಸಿದೆವು.

ತತೋ ಮಾಂ ಸವ್ಯತೋ ರಾಜನ್ ರಾಮಃ ಕುರ್ವನ್ ದ್ವಿಜೋತ್ತಮಃ ।
ಉರಸ್ಯವಿಧ್ಯತ್ ಸಂರಬ್ಧಃ ಜಾಮದಗ್ನ್ಯೋ ಮಹಾಬಲಃ ॥೧೫॥

ತತೋಽಹಂ ಭರತಶ್ರೇಷ್ಠ ಸಂನ್ಯಷೀದಂ ರಥೋತ್ತಮೇ ॥೧೬॥

ಎಲೈ ರಾಜನೇ, ಅನಂತರ ದ್ವಿಜಶ್ರೇಷ್ಠರಾದ, ಮಹಾಬಲರಾದ ಪರಶುರಾಮರು ಕೋಪಗೊಂಡು, ನನ್ನನ್ನು ಎಡಕ್ಕೆ ಮಾಡಿಕೊಂಡು ನನ್ನ ವಕ್ಷಸ್ಥಲಕ್ಕೆ ಹೊಡೆದರು. ಎಲೈ ಭರತಶ್ರೇಷ್ಠನೇ, ಆಗ ನಾನು ಶ್ರೇಷ್ಠವಾದ ರಥದಲ್ಲಿ ಕುಸಿದೆನು.

ತತೋ ಮಾಂ ಕಶ್ಮಲಾವಿಷ್ಟಂ ಸೂತಸ್ತೂರ್ಣಮುದಾವಹತ್ ।
ಗ್ಲಾಯಂತಂ ಭರತಶ್ರೇಷ್ಠ ರಾಮಬಾಣಪ್ರಪೀಡಿತಮ್ ॥೧೭॥

ಎಲೈ ಭರತಶ್ರೇಷ್ಠನೇ, ರಾಮಬಾಣಗಳಿಂದ ಪೀಡಿತನಾಗಿ, ಕಶ್ಮಲಾವಿಷ್ಟನಾಗಿ ಕುಸಿಯುತ್ತಿರುವ ನನ್ನನ್ನು ಸೂತನು ಶೀಘ್ರವಾಗಿ ಬೇರೆ ಕಡೆಗೆ ಕರೆದುಕೊಂಡು ಹೋದನು.

ತತೋ ಮಾಮಪಯಾತಂ ವೈ ಭೃಶಂ ವಿದ್ಧಮಚೇತಸಮ್ ।
ರಾಮಸ್ಯಾನುಚರಾ ಹೃಷ್ಟಾಃ ಸರ್ವೇ ದೃಷ್ಟ್ವಾ ವಿಚುಕ್ರುಶುಃ ॥೧೮॥

ಅಕೃತವ್ರಣಪ್ರಭೃತಯಃ ಕಾಶಿಕನ್ಯಾ ಚ ಭಾರತ ॥೧೯॥

ಆಗ ನಾನು ರಾಮರ ಬಾಣಗಳ ಏಟಿನಿಂದ ಪ್ರಜ್ಞೆಯನ್ನು ಕಳೆದುಕೊಂಡು, ಯುದ್ಧ ಭೂಮಿಯಿಂದ ಅಪಯಾನ ಮಾಡಿದುದನ್ನು ನೋಡಿ ಅಕೃತವ್ರಣ ಮೊದಲಾದ ರಾಮರ ಅನುಚರರರೆಲ್ಲರೂ ಸಂತೋಷದಿಂದ ಕೇಕೆಯನ್ನು ಹಾಕಿದರು. ಎಲೈ ಭಾರತನೇ, ಕಾಶಿಕನ್ಯೆಯಾದ ಅಂಬೆಯೂ ಸಹ ಸಂತೋಷದಿಂದ ಕಿರುಚಿದಳು.

ತತಸ್ತು ಲಬ್ಧಸಂಜ್ಞೋಽಹಂ ಜ್ಞಾತ್ವಾ ಸೂತಮಥಾಬ್ರವಮ್ ।
ಯಾಹಿ ಸೂತ ಯತೋ ರಾಮಃ ಸಜ್ಜೋಽಹಂ ಗತವೇದನಃ ॥೨೦॥

ಅನಂತರ ನಾನು ಪ್ರಜ್ಞೆಯನ್ನು ಮರಳಿ ಪಡೆದು ಸೂತನನ್ನು ಕುರಿತು– 'ಸೂತನೇ, ನನ್ನ ವೇದನೆಯು ಹೋಗಿದೆ. ನಾನು ಸಿದ್ಧನಾಗಿದ್ದೇನೆ. ಪರಶುರಾಮರಿರುವಲ್ಲಿಗೆ ರಥವನ್ನು ನಡೆಸು' ಎಂದು ಹೇಳಿದೆ.

ತತೋ ಮಾಮವಹತ್ ಸೂತೋ ಹಯೈಃ ಪರಮಶೋಭಿತೈಃ ।
ನೃತ್ಯದ್ಭಿರಿವ ಕೌರವ್ಯ ಮಾರುತಪ್ರತಿಮೈರ್ಗತೌ ॥೨೧॥

ಎಲೈ ಕೌರವ್ಯನೇ, ಆಗ ಸೂತನು ಪರಮಶೋಭಿತವಾದ, ಗತಿಯಲ್ಲಿ ವಾಯುವಿಗೆ ಸಮಾನವಾದ, ನರ್ತನವನ್ನು ಮಾಡುವಂತೆ ಕಾಣುವ ಕುದುರೆಗಳಿಂದ ಹೂಡಿದ ರಥವನ್ನು ಮುಂದೆ ತೆಗೆದುಕೊಂಡು ಹೋದನು.

ತತೋಽಹಂ ರಾಮಮಾಸಾದ್ಯ ಬಾಣಜಾಲೇನ ಕೌರವ ।
ಅವಾಕಿರಂ ಸುಸಂರಬ್ಧಃ ಸಂರಬ್ಧಂ ಚ ಜಿಗೀಷಯಾ ॥೨೨॥

ಎಲೈ ಕೌರವ್ಯನೇ, ಅನಂತರ ನಾನು ರಾಮನನ್ನು ಸಮೀಪಿಸಿ, ಬಹಳ ಕೋಪದಿಂದ ಕೂಡಿದವನಾಗಿ, ಅವರನ್ನು ಗೆಲ್ಲುವ ಆಸೆಯಿಂದ ಅವರ ಮೇಲೆ ಬಾಣಗಳ ಸಮೂಹವನ್ನು ಸುರಿಸಿದೆ.

ತಾನಾಪತತ ಏವಾಸೌ ರಾಮೋ ಬಾಣಾನಜಿಹ್ಮಗಾನ್ ।
ಬಾಣೈರೇವಾಚ್ಛಿನತ್ ತೂರ್ಣಮೇಕೈಕಂ ತ್ರಿಭಿರಾಹವೇ ॥೨೩॥

ಪರಶುರಾಮರು ಆ ಬಾಣಗಳು ತಮ್ಮ ಕಡೆಗೆ ನೇರವಾಗಿ ಬರುತ್ತಿರುವಂತೆಯೇ ತಮ್ಮ ಬಾಣಗಳಿಂದ ಒಂದೊಂದು ಬಾಣವನ್ನೂ ಮೂರು ಮೂರು ಬಾಣಗಳಿಂದ ಕತ್ತರಿಸಿದರು.

ತತಸ್ತೇ ಸೂದಿತಾಃ ಸರ್ವೇ ಮಮ ಬಾಣಾಃ ಸುಸಂಶಿತಾಃ ।
ರಾಮಬಾಣೈರ್ದ್ವಿಧಾ ಚ್ಛಿನ್ನಾಃ ಶತಶೋಽಥ ಮಹಾಹವೇ ॥೨೪॥

ಆಗ ಆ ಮಹಾಯುದ್ಧದಲ್ಲಿ ನನ್ನ ಹರಿತವಾದ ಬಾಣಗಳೆಲ್ಲವೂ ನೂರಾರು ಸಂಖ್ಯೆಯಲ್ಲಿ ಪರಶುರಾಮರ ಬಾಣಗಳಿಂದ ಕತ್ತರಿಸಲ್ಪಟ್ಟವು.

ತತಃ ಪುನಃ ಶರಂ ದೀಪ್ತಂ ಸುಪ್ರಭಂ ಕಾಲಸಮ್ಮಿತಮ್ ।
ಅಸೃಜಂ ಜಾಮದಗ್ನ್ಯಾಯ ರಾಮಾಯಾಹಂ ಜಿಘಾಂಸಯಾ ॥೨೫॥

ಆಗ ನಾನು ಪುನಃ ಮೃತ್ಯುವಿನಂತಿರುವ, ಪ್ರಕಾಶಮಾನವಾಗಿ ಬೆಳಗುವ ಒಂದು ಬಾಣವನ್ನು ಪರಶುರಾಮರ ವಧೆಯನ್ನು ಬಯಸಿ ಅವರ ಮೇಲೆ ಪ್ರಯೋಗಿಸಿದೆನು.

ತೇನ ತ್ವಭಿಹತೋ ಗಾಢಂ ಬಾಣವೇಗವಶಂ ಗತಃ ।
ಮುಮೋಹ ಸಮರೇ ರಾಮೋ ಭೂಮೌ ಚ ನಿಪಪಾತ ಹ ॥೨೬॥

ಆ ಬಾಣದ ವೇಗಕ್ಕೆ ವಶರಾಗಿ ಆ ಬಾಣದಿಂದ ಗಾಢವಾಗಿ ಹೊಡೆಯಲ್ಪಟ್ಟ ಪರಶುರಾಮರು ಮೂರ್ಛೆಗೆ ಒಳಗಾಗಿ ಭೂಮಿಯ ಮೇಲೆ ಬಿದ್ದರು.

ತತೋ ಹಾಹಾಕೃತಂ ಸರ್ವಂ ರಾಮೋ ಭೂತಳಮಾಶ್ರಿತೇ ।
ಜಗದ್‌ಭಾರತ ಸಂವಿಗ್ನಂ ಯಥಾಽರ್ಕಪತನೇ ತಥಾ ॥೨೭॥

ತತ ಏನಂ ಸುಸಂವಿಗ್ನಾಃ ಸರ್ವ ಏವಾಭಿದುದ್ರುವುಃ ।
ತಪೋಧನಾಸ್ತೇ ಸಹಸಾ ಕಾಶ್ಯಾ ಚ ಭೃಗುನಂದನಮ್ ॥೨೮॥

ಎಲೈ ಭಾರತನೇ, ಪರಶುರಾಮರು ಭೂಮಿಯಲ್ಲಿ ಬೀಳುತ್ತಿರಲು, ಸೂರ್ಯನು ಭೂಮಿಯ ಮೇಲೆ ಬಿದ್ದಂತಿರುವ ಅವರನ್ನು ನೋಡಿ, ಜಗತ್ತೆಲ್ಲವೂ ಭಯದಿಂದ ಕೂಡಿ ಹಾಹಾಕಾರವನ್ನು ಮಾಡಿತು. ಆಗ ಬಹಳ ಭಯದಿಂದ ಕೂಡಿದ ಎಲ್ಲ ತಪೋಧನರೂ ಮತ್ತು ಕಾಶಿಕನ್ಯೆಯಾದ ಅಂಬೆಯೂ ಪರಶುರಾಮರ ಕಡೆಗೆ ಧಾವಿಸಿದರು.

ತತ ಏನಂ ಪರಿಷ್ವಜ್ಯ ಶನೈರಾಶ್ವಾಸಯಂಸ್ತದಾ ।
ಪಾಣಿಭಿರ್ಜಲಶೀತೈಶ್ಚ ಜಯಾಶೀರ್ಭಿಶ್ಚ ಕೌರವ ॥೨೯॥

ಎಲೈ ಕೌರವ್ಯನೇ, ಅನಂತರ ಅವರು ಅವನನ್ನು ಆಲಿಂಗಿಸಿ, ತಮ್ಮ ಹಸ್ತ ತಳಗಳಿಂದಲೂ, ಶೀತಜಲಗಳಿಂದಲೂ ಜಯಾಶೀರ್ವಾದಗಳಿಂದಲೂ ನಿಧಾನವಾಗಿ ಸಮಾಧಾನಗೊಳಿಸಿದರು.

ತತಃ ಸ ವಿಹ್ವಲೋ ವಾಕ್ಯಂ ರಾಮ ಉತ್ಥಾಯ ಚಾಬ್ರವೀತ್ ।
ತಿಷ್ಠ ಭೀಷ್ಮ ಹತೋಽಸೀತಿ ಬಾಣಂ ಸಂಧಾಯ ಕಾರ್ಮುಕೇ ॥೩೦॥

ಆಗ ಇನ್ನೂ ವಿಹ್ವಲರಾಗಿದ್ದ ಅವರು ಎದ್ದು ನನ್ನನ್ನು ಕುರಿತು– 'ಭೀಷ್ಮನೇ, ನಿಲ್ಲು. ಈ ಬಾಣದಿಂದ ನೀನು ಹತನಾಗುವಿ' ಎಂದು ಹೇಳುತ್ತಾ ತಮ್ಮ ಧನುಸ್ಸಿನಲ್ಲಿ ಬಾಣವನ್ನು ಹೂಡಿದರು.

ಸ ಮುಕ್ತೋ ನ್ಯಪತತ್ ತೂರ್ಣಂ ಸವ್ಯೇ ಪಾರ್ಶ್ವೇ ಮಹಾಹವೇ ।
ತೇನಾಹಂ ಭೃಶಮುದ್ವಿಗ್ನೋ ವ್ಯಾಘೂರ್ಣಿತ ಇವ ದ್ರುಮಃ ॥೩೧॥

ಅವರಿಂದ ಪ್ರಯೋಗಿಸಲ್ಪಟ್ಟ ಆ ಬಾಣವು ಆ ದೊಡ್ಡ ಯುದ್ಧದಲ್ಲಿ ನನ್ನ ಎಡ ಪಕ್ಕೆಗೆ ಬಿದ್ದಿತು. ಅದರಿಂದ ನಾನು ಬುಡದಿಂದ ಅಲ್ಲಾಡಿಸಿದ ಮರದಂತೆ ಬಹಳವಾಗಿ ಉದ್ವಿಗ್ನನಾದೆ.

ಹತ್ವಾ ಹಯಾಂಸ್ತತೋ ರಾಮಃ ಶಸ್ತ್ರಾಸ್ತ್ರೇಣ ಮಹಾಹವೇ ।
ಅವಾಕಿರನ್ಮಾಂ ವಿಸ್ರಬ್ಧಂ ಬಾಣೈಸ್ತೈರ್ಲೋಮವಾಹಿಭಿಃ ॥೩೨॥

ಅನಂತರ ಪರಶುರಾಮರು ಆ ದೊಡ್ಡ ಯುದ್ಧದಲ್ಲಿ ಶಸ್ತ್ರಾಸ್ತ್ರಗಳಿಂದ ನನ್ನ ಅಶ್ವಗಳನ್ನು ಕೊಂದು, ಬಹಳ ಆತ್ಮವಿಶ್ವಾಸದಿಂದ ರೋಮವನ್ನೂ ಕತ್ತರಿಸುವ ಬಾಣಗಳನ್ನು ನನ್ನ ಮೇಲೆ ಸುರಿಸಿದರು.

ತತೋಽಹಮಪಿ ಶೀಘ್ರಾಸ್ತ್ರಂ ಸಮರಪ್ರತಿವಾರಣಮ್ ।
ಅವಾಸೃಜಂ ಮಹೇಷ್ವಾಸಂ ತೇಽಂತರಾ ವಿಷ್ಠಿತಾಃ ಶರಾಃ ॥೩೩॥

ರಾಮಸ್ಯ ಚ ಮಮೈವಾಶು ವ್ಯೋಮಾವೃತ್ಯ ಸಮಂತತಃ ॥೩೪॥

ಆಗ ನಾನೂ ಸಹ ಅವರ ಯುದ್ಧವನ್ನು ತಡೆಯುವ ಶೀಘ್ರಾಸ್ತ್ರವನ್ನು ಪ್ರಯೋಗಿಸಿದೆನು. ನಮ್ಮಿಬ್ಬರಿಂದ ಪ್ರಯೋಗಿಸಲ್ಪಟ್ಟ ಬಾಣಗಳು ಆಕಾಶದಲ್ಲೆಲ್ಲಾ ಹರಡಿ ನಿಂತವು.

ನ ಸ್ಮ ಸೂರ್ಯಃ ಪ್ರತಪತಿ ಶರಜಾಲಸಮಾವೃತಃ ।
ಮಾತರಿಶ್ವಾಽಂತರೇ ತಸ್ಮಿನ್ ಮೇಘರುದ್ಧ ಇವಾನದತ್ ॥೩೫॥

ಬಾಣಗಳ ಬಲೆಯಿಂದ ಆವೃತನಾದ ಸೂರ್ಯನ ಪ್ರಕಾಶವೇ ಕಾಣುತ್ತಿರಲಿಲ್ಲ. ವಾಯುವು ಆ ಬಾಣದ ಜಾಲದಲ್ಲಿ ಸಿಲುಕಿ ಮೋಡಗಳಿಗೆ ಸಿಲುಕಿದಂತೆ ಗರ್ಜಿಸುತ್ತಿದ್ದಿತು.

ತತೋ ವಾಯೋಃ ಪ್ರಕಂಪಾಚ್ಚ ಸೂರ್ಯಸ್ಯ ಚ ಗಭಸ್ತಿಭಿಃ ।
ಅಭಿವಾತಪ್ರಭಾವಾಚ್ಚ ಪಾವಕಃ ಸಮಜಾಯತ ॥೩೬॥

ಆಗ ವಾಯುವಿನ ಪ್ರಕಂಪನದಿಂದಲೂ, ಸೂರ್ಯನ ಕಿರಣಗಳಿಂದಲೂ ಮತ್ತು ಎದುರು ಗಾಳಿಯ ವೇಗದಿಂದಲೂ ಅಗ್ನಿಯು ಉಂಟಾಯಿತು.

ತೇ ಶರಾಃ ಸುಸಮಿದ್ಧೇನ ಪ್ರದೀಪ್ತಾಶ್ಚಿತ್ರಭಾನುನಾ ।
ಭೂಮೌ ಸರ್ವೇ ತತೋ ರಾಜನ್ ಭಸ್ಮೀಭೂತಾಃ ಪ್ರಪೇದಿರೇ ॥೩೭॥

ಎಲೈ ರಾಜನೇ, ಆ ಅಗ್ನಿಯು ಬಹಳವಾಗಿ ಅಭಿವೃದ್ಧಿಯನ್ನು ಹೊಂದಿ, ಅದರಿಂದ ಎಲ್ಲ ಬಾಣಗಳೂ ಭಸ್ಮವಾಗಿ ಭೂಮಿಯ ಮೇಲೆ ಬಿದ್ದವು.

ತದಾ ಶತಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಅಯುತಾನ್ಯಥ ಖರ್ವಾಣಿ ನಿಖರ್ವಾಣಿ ಚ ಕೌರವ ॥೩೮॥
ರಾಮಃ ಶರಾಣಾಂ ಸಂಕ್ರುದ್ಧೋ ಮಯಿ ತೂರ್ಣಂ ನ್ಯಪಾತಯತ್ ॥

ಎಲೈ ಕೌರವನೇ, ಆಗ ಪರಶುರಾಮರು ಸಂಕ್ರುದ್ಧರಾಗಿ ನೂರು, ಸಾವಿರ, ಹತ್ತುಸಾವಿರ, ಅಯುತ, ಪ್ರಯುತ, ಖರ್ವ, ನಿಖರ್ವ ಸಂಖ್ಯೆಯ ಬಾಣಗಳನ್ನು ನನ್ನ ಮೇಲೆ ಸುರಿಸಿದರು.

ತತೋಽಹಂ ತಾನಪಿ ರಣೇ ಶರೈರಾಶೀವಿಷೋಪಮೈಃ ।
ಸಂಛಿದ್ಯ ಭೂಮೌ ನೃಪತೇಽಪಾತಯಂ ಪನ್ನಗಾನಿವ ॥೪೦॥

ಆಗ ನಾನೂ ಸಹ ಸರ್ಪಗಳಂತಿರುವ ನನ್ನ ಬಾಣಗಳಿಂದ ಸರ್ಪದಂತಿದ್ದ ಆ ಬಾಣಗಳನ್ನು ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದೆನು.

ಏವಂ ತದಭವದ್ ಯುದ್ಧಂ ತದಾ ಭರತಸತ್ತಮ ।
ಸಂಧ್ಯಾಕಾಲೇ ವ್ಯತೀತೇ ತು ವ್ಯಪಾಯಾತ್ ಸಮರಾದ್ ಗುರುಃ ॥೪೧॥

ಎಲೈ ಭರತಶ್ರೇಷ್ಠನೇ, ಹೀಗೆ ಆ ಯುದ್ಧವು ನಡೆಯಿತು. ಆಗ ಸಂಧ್ಯಾಕಾಲವು ಮೀರುತ್ತಿರಲು ಗುರುಗಳಾದ ಪರಶುರಾಮರು ಯುದ್ಧದಿಂದ ಹಿಂದೆ ಸರಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವ್ಯಶೀತ್ಯುತ್ತರಶತತಮೋಽಧ್ಯಾಯಃ ॥
॥ ಅಂಬೋಪಾಖ್ಯಾನಪರ್ವಣಿ ದ್ವಾದಶೋಽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ಮೂರನೆಯ ಅಧ್ಯಾಯ

ಪರಶುರಾಮ ಮತ್ತು ಭೀಷ್ಮರ ಯುದ್ಧದ ವರ್ಣನೆ.

ಭೀಷ್ಮಃ

ಸಮಾಗತಸ್ಯ ರಾಮೇಣ ಪುನರೇವಾತಿದಾರುಣಮ್ ।
ಅನ್ಯೇದ್ಯುಸ್ತುಮುಲಂ ಯುದ್ಧಮಾಸೀದ್ ಭರತಸತ್ತಮ ॥೧॥

ಭೀಷ್ಮ– ಎಲೈ ಭರತಶ್ರೇಷ್ಠನೇ, ಮರುದಿನ ಪರಶುರಾಮರು ಹಿಂದಿರುಗಿ ಬಂದ ಮೇಲೆ ಅತಿದಾರುಣವಾದ, ಘೋರವಾದ ಯುದ್ಧವು ನಡೆಯಿತು.

ತತೋ ದಿವ್ಯಾಸ್ತ್ರವಿಚ್ಛೂರೋ ದಿವ್ಯಾನ್ಯಸ್ತ್ರಾಣ್ಯನೇಕಶಃ ।
ಅಯೋಜಯತ್ ಸ ಧರ್ಮಾತ್ಮಾ ದಿವಸೇ ದಿವಸೇ ವಿಭುಃ ॥೨॥

ಆಗ ದಿವ್ಯಾಸ್ತ್ರಗಳನ್ನು ಬಲ್ಲ ಆ ಶೂರರೂ, ಧರ್ಮಾತ್ಮರೂ ಆದ ಪರಶುರಾಮರು ಪ್ರತಿದಿವಸದಲ್ಲಿಯೂ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು.

ತಾನ್ಯಹಂ ತತ್ಪ್ರತೀಘಾತೈರಸ್ತ್ರೈರಸ್ತ್ರಾಣಿ ಭಾರತ ।
ವ್ಯಧಮಂ ತುಮುಲೇ ಯುದ್ಧೇ ಪ್ರಾಣಾಂಸ್ತ್ಯಕ್ತ್ವಾ ಸುದುಸ್ತ್ಯಜಾನ್ ॥೩॥

ಎಲೈ ಭಾರತನೇ, ಆ ಘೋರವಾದ ಯುದ್ಧದಲ್ಲಿ ನಾನು ತ್ಯಜಿಸಲು ಬಹಳ ಕಷ್ಟವಾದ ನನ್ನ ಪ್ರಾಣಗಳ ಮೇಲಿನ ಹಂಗನ್ನು ತೊರೆದು ಆ ಅಸ್ತ್ರಗಳಿಗೆ ಪ್ರತ್ಯಸ್ತ್ರಗಳನ್ನು ಪ್ರಯೋಗಿಸಿ ಅವುಗಳನ್ನು ನಾಶಮಾಡಿದೆನು.

ಅಸ್ತ್ರೈರಸ್ತ್ರೇಷು ಬಹುಧಾ ಹತೇಷ್ವೇವ ಚ ಭಾರ್ಗವಃ ।
ಅಕ್ರುಧ್ಯತ ಮಹಾಬಾಹುಃ ತ್ಯಕ್ತಪ್ರಾಣಃ ಸ ಸಂಯುಗೇ ॥೪॥

ನನ್ನ ಅಸ್ತ್ರಗಳಿಂದ ಅವರ ಅಸ್ತ್ರಗಳು ನಾಶಹೊಂದುತ್ತಿರಲು ಮಹಾಬಾಹುವೂ, ಜೀವದ ಹಂಗನ್ನು ತೊರೆದವರೂ ಆದ ಪರಶುರಾಮರು ಬಹಳ ಕೋಪಗೊಂಡರು.

ತತಃ ಶಕ್ತಿಂ ಪ್ರಾಹಿಣೋದ್ ಘೋರರೂಪಾಮ್
ಅಸ್ತ್ರೈ ರುದ್ಧೇ ಜಾಮದಗ್ನ್ಯೇ ಮಹಾತ್ಮಾ ।

ಕಾಲೋತ್ಸೃಷ್ಟಾಂ ಪ್ರಜ್ವಲಿತಾಮಿವೋಲ್ಕಾಂ
ಸಂದೀಪ್ತಾಗ್ರಾಂ ತೇಜಸಾ ವ್ಯಾಪ್ಯ ಲೋಕಮ್ ॥೫॥

ಅವರ ಅಸ್ತ್ರಗಳು ಪ್ರತಿರುದ್ಧವಾಗುತ್ತಿರಲು ಮಹಾತ್ಮರಾದ ಪರಶುರಾಮರು ಯಮನಿಂದ ಪ್ರಯೋಗಿಸಲ್ಪಟ್ಟಂತೆ ಉರಿಯುವ, ಉಲ್ಕೆಯಂತಿರುವ ತನ್ನ ತೇಜಸ್ಸಿಂದ ಲೋಕವನ್ನು ವ್ಯಾಪಿಸಿದ, ಜ್ವಾಲೆಯುಳ್ಳ ತುದಿಯುಳ್ಳ ಘೋರವಾದ ಶಕ್ತ್ಯಾಯುಧವನ್ನು ನನ್ನ ಮೇಲೆ ಪ್ರಯೋಗಿಸಿದರು.

ತತೋಽಹಂ ತಾಮಿಷುಭಿರ್ದೀಪ್ಯಮಾನೈಃ
ಸಮಾಯಾಂತೀಮಂತಕಸನ್ನಿಕಾಶಾಮ್ ।
ಛಿತ್ತ್ವಾ ತ್ರೇಧಾ ಪಾತಯಾಮಾಸ ಭೂಮೌ
ತತೋ ವವೌ ಪವನಃ ಪುಣ್ಯಗಂಧೀ ॥೬॥

ಆಗ ನಾನು ಯಮನಂತೆ ನನ್ನ ಬಳಿಗೆ ಬರುತ್ತಿದ್ದ ಆ ಶಕ್ತಿಯನ್ನು ಪ್ರಕಾಶಮಾನವಾದ ಮೂರು ಬಾಣಗಳನ್ನು ಪ್ರಯೋಗಿಸಿ, ಮೂರು ಭಾಗವಾಗಿ ಮಾಡಿ ಭೂಮಿಯ ಮೇಲೆ ಬೀಳಿಸಿದೆನು. ಅನಂತರ ಪುಣ್ಯಗಂಧಮಯವಾದ ವಾಯುವು ಬೀಸಿತು.

ತಸ್ಯಾಂ ಛಿನ್ನಾಯಾಂ ಕ್ರೋಧದೀಪ್ತೋಽಥ ರಾಮಃ
ಶಕ್ತಿಘೋರಾಃ ಪ್ರಾಹಿಣೋದ್ ದ್ವಾದಶಾನ್ಯಾಃ ।
ತಾಸಾಂ ರೂಪಂ ಭಾರತ ನೋತ ಶಕ್ಯಂ
ತೇಜಸ್ವಿತ್ವಾಲ್ಲಾಘವಾಚ್ಚೈವ ವಕ್ತುಮ್ ॥೭॥

ಆ ಶಕ್ತ್ಯಾಯುಧವು ಕತ್ತರಿಸಲ್ಪಡುತ್ತಿರಲು ಕ್ರೋಧದಿಂದ ಉರಿಯುತ್ತಿದ್ದ ಪರಶುರಾಮರು ನನ್ನ ಮೇಲೆ ಹನ್ನೆರಡು ಘೋರವಾದ ಶಕ್ತಿಗಳನ್ನು ಪ್ರಯೋಗಿಸಿದರು. ಎಲೈ ಭಾರತನೇ, ಅವುಗಳ ಸಾಮರ್ಥ್ಯ ಮತ್ತು ಕ್ಷಿಪ್ರತೆಯ ಕಾರಣದಿಂದಾಗಿ ಅವುಗಳ ರೂಪವನ್ನು ವರ್ಣಿಸಲು ಸಾಧ್ಯವಿಲ್ಲ.

ಕಿಂತ್ವೇವಾಹಂ ವಿಹ್ವಲಃ ಸಂಪ್ರದೃಶ್ಯ
ದಿಗ್ಭ್ಯಃ ಸರ್ವಾಸ್ತಾ ಮಹೋಲ್ಕಾ ಇವಾಗ್ನೇಃ ।
ನಾನಾರೂಪಾಸ್ತೇಜಸೋಗ್ರೇಣ ದೀಪ್ತಾ
ಯಥಾಽಽದಿತ್ಯಾ ದ್ವಾದಶ ಲೋಕಸಂಕ್ಷಯೇ ॥೮॥

ಅನೇಕ ದಿಕ್ಕುಗಳಿಂದ ಅಗ್ನಿಮಯವಾದ ಉಲ್ಕೆಗಳಂತೆ ನಾನಾ ರೂಪವನ್ನು ಧರಿಸಿ ಉಗ್ರವಾದ ತೇಜಸ್ಸಿನಿಂದ ಪ್ರಳಯಕಾಲವು ಸನ್ನಿಹಿತವಾದಾಗ ದ್ವಾದಶಾದಿತ್ಯರಂತೆ ಉರಿಯುತ್ತಿದ್ದ ಆ ಶಕ್ತಿಗಳನ್ನು ನೋಡಿ ವಿಹ್ವಲನಾದೆ.

ತತೋಽನಲಂ ಬಾಣಮಯಂ ವಿವೃತ್ಯ
ಸಂದಿಶ್ಯ ಭಿತ್ವಾ ಶರಜಾಲೇನ ರಾಮಮ್ ।
ತಾನ್ ದ್ವಾದಶೇಷೂನ್ ಪ್ರಾಹಿಣವಂ ರಣೇಽಹಂ
ತತಃ ಶಕ್ತೀರ್ವ್ಯಧಮಂ ಘೋರರೂಪಾಃ ॥೯॥

ಆಗ ನಾನು ಬಾಣಮಯವಾದ ಅಗ್ನಿಯನ್ನು ಪ್ರಾದುರ್ಭಾವಗೊಳಿಸಿ, ಪರಶುರಾಮರನ್ನು ಉದ್ದೇಶಿಸಿ ಹನ್ನೆರಡು ಬಾಣಗಳನ್ನು ಪ್ರಯೋಗಿಸಿದೆ ಮತ್ತು ಅದರಿಂದ ಘೋರರೂಪವನ್ನು ಹೊಂದಿದ್ದ ಆ ಶಕ್ತಿಗಳನ್ನು ನಾಶ ಮಾಡಿದೆ.

ತತೋ ರಾಜನ್ ಜಾಮದಗ್ನ್ಯೋ ಮಹಾತ್ಮಾ
ಶಕ್ತೀಘೋರ್ಮಾ ಪ್ರಾಕ್ಷಿಪದ್ದೇಮದಂಡಾಃ ।
ವಿಚಿತ್ರಿತಾಃ ಕಾಂಚನಪಟ್ಟಬದ್ಧಾಃ
ಯಥಾ ಮಹೋಲ್ಕಾ ಜ್ವಲಿತಾಸ್ತಥಾ ತಾಃ ॥೧೦॥

ಎಲೈ ರಾಜನೇ, ಅನಂತರ ಮಹಾತ್ಮರಾದ ಪರಶುರಾಮರು ಸುವರ್ಣಮಯವಾದ ದಂಡವಿದ್ದ ಘೋರಶಕ್ತಿಗಳನ್ನು ನನ್ನ ಮೇಲೆ ಎಸೆದರು. ಚಿನ್ನದ ಪಟ್ಟಿಗಳನ್ನು ಹೊಂದಿದ್ದ ವಿಚಿತ್ರವಾದ ಆ ಶಕ್ತಿಗಳು ಉರಿಯುವ ಮಹೋಲ್ಕೆಗಳಂತೆ ಇದ್ದವು.

ತಾಶ್ಚಾಪ್ಯುಗ್ರಾಶ್ಚರ್ಮಣಾ ವಾರಯಿತ್ವಾ
ಖಡ್ಗೇನಾಜೌ ಪಾತಿತಾ ಮೇ ನರೇಂದ್ರ ।
ಬಾಣೈರ್ದಿವ್ಯೈರ್ಜಾಮದಗ್ನ್ಯಸ್ಯ ಸಂಖ್ಯೇ
ದಿವ್ಯಾನಶ್ವಾನಭ್ಯವರ್ಷಂ ಸಸೂತಾನ್ ॥೧೧॥

ಎಲೈ ರಾಜೇಂದ್ರನೇ, ನಾನು ಆ ಶಕ್ತಿಗಳನ್ನೂ ಗುರಾಣಿಯಿಂದ ನಿವಾರಿಸಿ, ಖಡ್ಗದಿಂದ ಕತ್ತರಿಸಿ ಬೀಳಿಸಿದೆ ಮತ್ತು ಯುದ್ಧದಲ್ಲಿ ದಿವ್ಯಬಾಣಗಳನ್ನು ಪ್ರಯೋಗಿಸಿ ಪರಶುರಾಮರ ಸೂತ ಮತ್ತು ಅಶ್ವಗಳ ಮೇಲೆ ದಿವ್ಯವಾದ ಬಾಣಗಳ ಮಳೆಯನ್ನು ಕರೆದೆ.

ನಿರ್ಮುಕ್ತಾನಾಂ ಪನ್ನಗಾನಾಂ ಸರೂಪಾ
ದೃಷ್ಟ್ವಾ ಶಕ್ತೀರ್ಹೇಮಚಿತ್ರಾ ನಿಕೃತ್ತಾಃ ।
ಪ್ರಾದುಶ್ಚಕ್ರೇ ದಿವ್ಯಮಸ್ತ್ರಂ ಮಹಾತ್ಮಾ
ಕ್ರೋಧಾವಿಷ್ಟೋ ಹೈಹಯೇಶಪ್ರಮಾಥೀ ॥೧೨॥

ಬಂಧನದಿಂದ ಬಿಡುಗಡೆಯನ್ನು ಹೊಂದಿ ಹೊರಗೆ ಬರುತ್ತಿರುವ ಸರ್ಪಗಳನ್ನು ಹೋಲುವ, ಸುವರ್ಣಾಲಂಕೃತವಾದ ಆ ಶಕ್ತಿಗಳು ಕತ್ತರಿಸಲ್ಪಟ್ಟಿದ್ದನ್ನು ನೋಡಿ ಮಹಾತ್ಮರಾದ, ಹೈಹಯಕುಲಾಂತಕರಾದ ಪರಶುರಾಮರು ಕ್ರೋಧಾವಿಷ್ಟರಾಗಿ ದಿವ್ಯಾಸ್ತ್ರವನ್ನು ಪ್ರಾದುರ್ಭಾವಗೊಳಿಸಿದರು.

ತತಃ ಶ್ರೇಣ್ಯಃ ಶಲಭಾನಾಮಿವೋಗ್ರಾಃ
ಸಮಾಪೇತುರ್ವಿಶಿಖಾನಾಂ ಪ್ರದೀಪ್ತಾಃ ।
ಸಮಾಚಿನೋಚ್ಚಾಪಿ ಭೃಶಂ ಶರೀರಂ
ಹಯಾನ್ ಸೂತಂ ಸರಥಂ ಚೈವ ಮಹ್ಯಮ್ ॥೧೩॥

ಆಗ ಪತಂಗಗಳ ಸಾಲಿನಂತೆ ಉಗ್ರವಾದ ಮತ್ತು ಜ್ವಾಲೆಯಿಂದ ಕೂಡಿದ ಬಾಣಗಳು ನನ್ನ ಮೇಲೆ ಬಿದ್ದು ನನ್ನ ಶರೀರವನ್ನೂ, ಅಶ್ವಗಳನ್ನೂ, ಸೂತನನ್ನೂ ಮತ್ತು ನನ್ನ ರಥವನ್ನೂ ಎಲ್ಲವನ್ನೂ ಮುಚ್ಚಿದವು.

ರಥಃ ಶರೈರ್ಮೇ ನಿಚಿತಃ ಸರ್ವತೋಽಭೂತ್
ತಥಾ ಹಯಾ ಸಾರಥಿಶ್ಚೈವ ರಾಜನ್ ।
ಯುಗಂ ರಥೇಷಾಂ ಚ ತಥೈವ ಚಕ್ರೇ
ತಥೈವಾಕ್ಷಃ ಶರಕೃತ್ತೋಽಪಿ ಭಗ್ನಃ ॥೧೪॥

ಆ ಬಾಣಗಳಿಂದ ನನ್ನ ರಥವೂ, ಅಶ್ವಗಳೂ, ಸಾರಥಿಯೂ ಎಲ್ಲ ಕಡೆಗಳಲ್ಲಿಯೂ ಮುಚ್ಚಲ್ಪಟ್ಟವು. ಎಲೈ ರಾಜನೇ, ಹಾಗೆಯೇ ನನ್ನ ರಥದ ನೊಗವೂ, ಮೂಕಿಯೂ, ಚಕ್ರಗಳೂ, ರಥದ ಅಕ್ಷವೂ (ತೂಗು) ಎಲ್ಲವೂ ಬಾಣಗಳಿಂದ ಕತ್ತರಿಸಲ್ಪಟ್ಟು ಭಗ್ನವಾದವು.

ತತಸ್ತಸ್ಮಿನ್ ಬಾಣವರ್ಷೇ ವ್ಯತೀತೇ
ಶರೌಘೇನ ಪ್ರತ್ಯವರ್ಷಂ ಗುರುಂ ತಮ್ ।
ಸ ವಿಕ್ಷತೋ ಮಾರ್ಗಣೈರ್ಬ್ರಹ್ಮರಾಶಿಃ
ದೇಹಾದಜಸ್ರಂ ಮುಮುಚೇ ಭೂರಿ ರಕ್ತಮ್ ॥೧೫॥

ಅನಂತರ ಆ ಬಾಣಗಳ ಮಳೆಯು ಸ್ವಲ್ಪ ಕಡಿಮೆಯಾದ ಮೇಲೆ ನಾನೂ ಬಾಣಗಳ ಸಮೂಹದ ಮಳೆಯನ್ನು ಗುರುಗಳ ಮೇಲೆ ಕರೆದೆನು. ವೇದರಾಶಿಯಂತಿದ್ದ ಅವರು ನನ್ನ ಬಾಣಗಳಿಂದ ಗಾಯಗೊಂಡು ದೇಹದಿಂದ ಸತತವಾಗಿ ಬಹಳ ರಕ್ತವನ್ನು ಸುರಿಸಿದರು.

ಯಥಾ ರಾಮೋ ಬಾಣಜಾಲಾಭಿತಪ್ತಃ
ತಥೈವಾಹಂ ಸುಭೃಶಂ ಗಾಢವಿದ್ಧಃ ।
ತತೋ ಯುದ್ಧಂ ವ್ಯರಮಚ್ಚಾಪರಾಹ್ಣೇ
ಭಾನಾವಸ್ತಂ ಪ್ರಾರ್ಥಯಾನೇ ಮಹೀಧ್ರಮ್ ॥೧೬॥

ಪರಶುರಾಮರೂ ಬಾಣಸಮೂಹಗಳಿಂದ ಪೀಡಿಸಲ್ಪಟ್ಟಿದ್ದರು ಮತ್ತು ಹಾಗೆಯೇ ನಾನೂ ಸಹ ಅವರ ಬಾಣಗಳಿಂದ ಬಹಳವಾಗಿ ಗಾಯಗೊಂಡಿದ್ದೆನು. ಆಗ ಸೂರ್ಯನು ಅಸ್ತಪರ್ವತದ ಕಡೆಗೆ ಹೋಗುತ್ತಿರಲು ಅಪರಾಹ್ಣಕಾಲದಲ್ಲಿ ಯುದ್ಧವು ಉಪರಮವನ್ನು ಹೊಂದಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರ್ಯಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ನಾಲ್ಕನೆಯ ಅಧ್ಯಾಯ

ಪರಶುರಾಮರ ಪ್ರಹಾರದಿಂದ ಭೀಷ್ಮರ ಪಾತ. ಋಷಿಗಳಿಂದ ಅವರ ಸಮಾಶ್ವಾಸನೆ. ಯುದ್ಧವನ್ನು ನಿಲ್ಲಿಸುವಂತೆ ಪರಶುರಾಮರಿಗೆ ಪ್ರಾರ್ಥನೆ.

ಭೀಷ್ಮಃ

ತತಃ ಪ್ರಭಾತೇ ರಾಜೇಂದ್ರ ಸೂರ್ಯೇ ವಿಮಲ ಉದ್ಗತೇ ।
ಭಾರ್ಗವಸ್ಯ ಮಯಾ ಸಾರ್ಧಂ ಪುನರ್ಯುದ್ಧಮವರ್ತತ ॥೧॥

ಭೀಷ್ಮ– ಎಲೈ ರಾಜೇಂದ್ರನೇ, ಪ್ರಾತಃಕಾಲದಲ್ಲಿ ಸೂರ್ಯನು ನಿರ್ಮಲನಾಗಿ ಉದಯಿಸುತ್ತಿರಲು ಪರಶುರಾಮರಿಗೂ ಮತ್ತು ನನಗೂ ಪುನಃ ಯುದ್ಧವು ನಡೆಯಿತು.

ತತೋऽಭ್ಯಾಂತೇ ರಥೇ ತಿಷ್ಠನ್ ರಾಮಃ ಪ್ರಹರತಾಂ ವರಃ ।
ವವರ್ಷ ಶರವರ್ಷಾಣಿ ಮಯಿ ಮೇಘ ಇವಾಚಲೇ ॥೨॥

ಪ್ರಹಾರ ಮಾಡುವವರಲ್ಲಿ ಶ್ರೇಷ್ಠರಾದ ಪರಶುರಾಮರು ಮೋಡವನ್ನು ಮುಟ್ಟುವಂತಿದ್ದ ಉನ್ನತವಾದ ರಥದಲ್ಲಿ ಕುಳಿತು ಮೋಡವು ಪರ್ವತದ ಮೇಲೆ ಸುರಿಸಿದಂತೆ ನನ್ನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು.

ತತಃ ಸೂತೋ ಮಮ ಸುಹೃತ್ ಶರವರ್ಷೇಣ ತಾಡಿತಃ ।
ನಿಪಪಾತ ರಥೋಪಸ್ಥೇ ಮನೋ ಮಮ ವಿಷಾದಯನ್ ॥೩॥

ಆಗ ನನ್ನ ಸ್ನೇಹಿತನಾದ ಸೂತನು ಆ ಬಾಣಗಳ ಮಳೆಯಿಂದ ತಾಡಿತನಾಗಿ, ನನ್ನ ಮನಸ್ಸಿಗೆ ದುಃಖವನ್ನುಂಟು ಮಾಡುತ್ತಾ, ರಥದಲ್ಲಿ ಮುಂದೆ ಕುಳಿತುಕೊಳ್ಳುವ ಸ್ಥಳದಲ್ಲಿ ಕುಸಿದನು.

ತತಃ ಸೂತೋ ಮಮಾತ್ಯರ್ಥಂ ಕಶ್ಮಲಂ ಪ್ರಾವಿಶನ್ಮಹತ್ ।
ಪೃಥಿವ್ಯಾಂ ಚ ಶರಾಘಾತಾನ್ನಿಪಪಾತ ಮುಮೋಹ ಚ ॥೪॥

ಅನಂತರ ನನ್ನ ಸೂತನಿಗೆ ದೊಡ್ಡ ಕಶ್ಮಲ ಉಂಟಾಯಿತು. ಆ ಬಾಣದ ಹೊಡೆತದಿಂದ ಅವನು ಅಲ್ಲಿಂದ ಭೂಮಿಯ ಮೇಲೆ ಬಿದ್ದು ಮೂರ್ಛೆ ಹೋದನು.

ತತಃ ಸೂತೋಽಜಹಾತ್ ಪ್ರಾಣಾನ್ ರಾಮಬಾಣಪ್ರಪೀಡಿತಃ ।
ಮುಹೂರ್ತಾದಿವ ರಾಜೇಂದ್ರ ಮಾಂ ಚ ಭೀರಾವಿಶತ್ ತದಾ ॥೫॥

ಎಲೈ ರಾಜೇಂದ್ರನೇ, ಆನಂತರ ಒಂದು ಮುಹೂರ್ತದಲ್ಲಿ ಪರಶುರಾಮರ ಬಾಣಗಳಿಂದ ಪೀಡಿತನಾದ ಸೂತನು ಪ್ರಾಣಗಳನ್ನು ತ್ಯಜಿಸಿದನು. ಆಗ ನನಗೆ ಭಯವುಂಟಾಯಿತು.

ತತಃ ಸೂತೇ ಹತೇ ತಸ್ಮಿನ್ ಕ್ಷಿಪತಸ್ತಸ್ಯ ಮೇ ಶರಾನ್ ।
ಪ್ರಮತ್ತಮನಸೋ ರಾಮಃ ಪ್ರಾಹಿಣೋನ್ಮೃತ್ಯುಸಮ್ಮಿತಮ್ ॥೬॥

ಸೂತನು ಹತನಾಗುತ್ತಿರಲು ಸ್ವಲ್ಪ ಅಜಾಗರೂಕತೆಯಿಂದ ಬಾಣಗಳನ್ನು ಪ್ರಯೋಗಿಸುತ್ತಿದ್ದ ನನ್ನ ಮೇಲೆ ಪರಶುರಾಮರು ಮೃತ್ಯುವಿಗೆ ಸದೃಶವಾದ ಒಂದು ಬಾಣವನ್ನು ಪ್ರಯೋಗಿಸಿದರು.

ತತಃ ಸೂತವ್ಯಸನಿನಂ ವಿಪ್ಲುತಂ ಮಾಂ ಸ ಭಾರ್ಗವಃ ।
ಶರೇಣಾಭ್ಯಹನದ್ ಗಾಢಂ ವಿಕೃಷ್ಯ ಬಲವದ್ ಧನುಃ ॥೭॥

ಸೂತನ ನಿಧನದಿಂದ ಉಂಟಾದ ವ್ಯಸನದಿಂದ ಸಂಕಟಪಡುತ್ತಿದ್ದ ನನ್ನ ಮೇಲೆ ಪರಶುರಾಮರು ತಮ್ಮ ಬಲಿಷ್ಠವಾದ ಧನುಸ್ಸನ್ನು ಎಳೆದು ಒಂದು ಬಾಣವನ್ನು ಗಾಢವಾಗಿ ಪ್ರಯೋಗಿಸಿದರು.

ಸ ಮೇ ಭುಜಾಂತರೇ ರಾಜನ್ ನಿಪತ್ಯ ರುಧಿರಾಶನಃ ।
ಮಯೈವ ಸಹ ರಾಜೇಂದ್ರ ಜಗಾಮ ವಸುಧಾತಳಮ್ ॥೮॥

ಎಲೈ ರಾಜನೇ, ರಕ್ತಪಿಪಾಸುವಾದ ಆ ಬಾಣವು ನನ್ನ ಭುಜಗಳ ಮಧ್ಯದಲ್ಲಿ ಬಿದ್ದು ನನ್ನನ್ನೂ ಎಳೆದುಕೊಂಡು ಭೂಮಿಗೆ ಹೋಯಿತು.

ಮತ್ವಾ ತು ನಿಹತಂ ರಾಮಸ್ತತೋ ಮಾಂ ಭೃಗುನಂದನಃ ।
ಮೇಘವದ್ ವಿನನಾದೋಚ್ಚೈರ್ಜಹೃಷೇ ಚ ಪುನಃ ಪುನಃ ॥೯॥

ಭೃಗುನಂದನರಾದ ಪರಶುರಾಮರು ನಾನು ಮೃತನಾದೆನೆಂದು ತಿಳಿದು ಮೇಘದಂತೆ ಗಟ್ಟಿಯಾದ ಸಿಂಹನಾದವನ್ನು ಮಾಡಿ ಪುನಃ ಪುನಃ ಸಂತೋಷಪಟ್ಟರು.

ತಥಾ ತು ಪತಿತೇ ರಾಜನ್ ಮಯಿ ರಾಮೋ ಮುದಾ ಯುತಃ ।
ಉದಕ್ರೋಶನ್ಮಹಾನಾದಂ ಸಹ ತೈರನುಯಾಯಿಭಿಃ ॥೧೦॥

ಎಲೈ ರಾಜನೇ, ನಾನು ಹಾಗೆ ಬೀಳುತ್ತಿರಲು ಪರಶುರಾಮರು ಸಂತೋಷದಿಂದ ಕೂಡಿ, ಅವರ ಅನುಯಾಯಿಗಳ ಜೊತೆಯಲ್ಲಿ ಮಹಾನಾದಗಳನ್ನು ಗಟ್ಟಿಯಾಗಿ ಮಾಡಿದರು.

ಮಮ ತತ್ರಾಭವನ್ ಯೇ ತು ಕುರವಃ ಪಾರ್ಶ್ವತಃ ಸ್ಥಿತಾಃ ।
ಆಗತಾ ಯೇ ಚ ಯುದ್ಧಂ ತತ್ ಜನಾಸ್ತತ್ರ ದಿದೃಕ್ಷವಃ ॥೧೧॥

ಆರ್ತಿಂ ಪರಮಿಕಾಂ ಜಗ್ಮುಸ್ತೇ ತದಾ ಪಾತಿತೇ ಮಯಿ ॥೧೨॥

ಯುದ್ಧವನ್ನು ನೋಡಲು ಬಂದ ಜನರಲ್ಲಿ ಯಾವ ಕೌರವರು ಪಾರ್ಶ್ವಗಳಲ್ಲಿ ನಿಂತಿದ್ದರೋ ಅವರು ನಾನು ಬೀಳುತ್ತಿರಲು ಬಹಳ ದುಃಖವನ್ನು ಹೊಂದಿದರು.

ತತೋಽಪಶ್ಯಂ ಪತಿತೋ ರಾಜಸಿಂಹ
ದ್ವಿಜಾನಷ್ಟೌ ಸೂರ್ಯಹುತಾಶನಾಭಾನ್ ।
ತೇ ಮಾಂ ಸಮಂತಾತ್ ಪರಿವಾರ್ಯ ತಸ್ಥುಃ
ಸ್ವಬಾಹುಭಿಃ ಪರಿಗೃಹ್ಯಾಜಿಮಧ್ಯೇ ॥೧೩॥

ಎಲೈ ರಾಜಸಿಂಹನೇ, ನಾನು ರಥದಿಂದ ಕೆಳಗೆ ಬೀಳುತ್ತಿದ್ದಾಗ ಸೂರ್ಯಾಗ್ನಿ ಸಮಾನವಾದ ಕಾಂತಿಯುಳ್ಳ ಎಂಟು ಋಷಿಗಳು ನನ್ನ ಸುತ್ತಲೂ ಇದ್ದು, ತಮ್ಮ ಬಾಹುಗಳಿಂದ ರಣರಂಗದಲ್ಲಿ ನನ್ನನ್ನು ಎತ್ತಿಹಿಡಿದಿರುವುದನ್ನು ನಾನು ನೋಡಿದೆನು.

ರಕ್ಷ್ಯಮಾಣಶ್ಚ ತೈಃ ಸರ್ವೈರ್ನಾಹಂ ಭೂಮಿಮುಪಾಸ್ಪೃಶಮ್ ।
ಅಂತರಿಕ್ಷೇ ಧೃತೋ ಹ್ಯಸ್ಮಿ ತೈರ್ವಿಪ್ರೈರ್ಬಾಂಧವೈರಿವ ॥೧೪॥

ಅವರೆಲ್ಲರಿಂದಲೂ ರಕ್ಷಿತನಾದ ನಾನು ಭೂಮಿಯನ್ನು ತಲುಪಲಿಲ್ಲ. ಬಾಂಧವರಂತಿದ್ದ ಆ ವಿಪ್ರರಿಂದ ನಾನು ಅಂತರಿಕ್ಷದಲ್ಲೇ ಹಿಡಿಯಲ್ಪಟ್ಟೆ.

ಶ್ವಸನ್ನಿವಾಂತರಿಕ್ಷೇ ಚ ಜಲಬಿಂದುಭಿರುಕ್ಷಿತಃ ।
ತತಸ್ತೇ ಬ್ರಾಹ್ಮಣಾ ರಾಜನ್ನಬ್ರುವನ್ ಪರಿಗೃಹ್ಯ ಮಾಮ್ ॥೧೫॥

ಮಾ ಭೈರಿತಿ ಸಮಂ ಸರ್ವೇ ಸ್ಪೃಷ್ಟಿ ತೇಽಸ್ತ್ವಿತಿ ಚಾಸಕೃತ್ ॥೧೬॥

ಅಂತರಿಕ್ಷದಲ್ಲಿ ಉಸಿರಾಡುತ್ತಿದ್ದ ನನಗೆ ಅವರು ನೀರಿನ ಬಿಂದುಗಳನ್ನು ಪ್ರೋಕ್ಷಿಸಿದರು. ಮತ್ತು ಆ ಬ್ರಾಹ್ಮಣರು ನನ್ನನ್ನು ಹಿಡಿದು ಒಟ್ಟಿಗೆ ಎಲೈ ರಾಜನೇ, ಹೆದರಬೇಡ, ನಿನಗೆ ಮಂಗಳವಾಗಲಿ ಎಂದು ಎಲ್ಲರೂ ಅನೇಕ ಬಾರಿ ಹೇಳಿದರು.

ತತಸ್ತೇಷಾಮಹಂ ವಾಗ್ಭಿಸ್ತರ್ಪಿತಃ ಸಹಸೋತ್ಥಿತಃ ।
ಮಾತರಂ ಸರಿತಾಂ ಶ್ರೇಷ್ಠಾಮಪಶ್ಯಂ ರಥಮಾಸ್ಥಿತಾಮ್ ॥೧೭॥

ಅವರ ಮಾತುಗಳಿಂದ ತೃಪ್ತಿಗೊಂಡು ಇದ್ದಕ್ಕಿದ್ದಂತೆಯೇ ಎದ್ದ ನಾನು ನದಿಗಳಲ್ಲಿ ಶ್ರೇಷ್ಠಳಾದ ನನ್ನ ತಾಯಿಯು ರಥದಲ್ಲಿ ಇರುವುದನ್ನು ನೋಡಿದೆನು.

ಹಯಾಶ್ಚ ಮೇ ಸಂಗೃಹೀತಾಸ್ತಯಾಽಽಸನ್
ಮಹಾನದ್ಯಾ ಸಂಯತಿ ಕೌರವೇಂದ್ರ ।
ಪಾದೌ ಜನನ್ಯಾಃ ಪ್ರತಿಗೃಹ್ಯ ಚಾಹಂ
ತಥಾ ಪಿತೄಣಾಂ ರಥಮಭ್ಯರೋಹಮ್ ॥೧೮॥

ಎಲೈ ಕೌರವೇಂದ್ರನೇ, ನನ್ನ ತಾಯಿಯಾದ ಮಹಾನದಿಯು ಕುದುರೆಗಳ ಕಡಿವಾಣವನ್ನು ಹಿಡಿದಿದ್ದಳು. ನಾನು ತಾಯಿಯ ಪಾದಗಳಿಗೆ ನಮಸ್ಕರಿಸಿ ಹಾಗೆಯೇ ಪಿತೃಗಳ ಪಾದಗಳಿಗೂ ನಮಸ್ಕರಿಸಿ ರಥವನ್ನು ಏರಿದೆ.

ರರಕ್ಷ ಸಾ ಮಾಂ ಸರಥಂ ಹಯಾಂಶ್ಚೋಪಸ್ಕರಾಣಿ ಚ ।
ತಾಮಹಂ ಪ್ರಾಂಜಲಿರ್ಭೂತ್ವಾ ಪುನರೇವ ವ್ಯಸರ್ಜಯಮ್ ॥೧೯॥

ನನ್ನ ತಾಯಿಯು ನನ್ನನ್ನೂ, ನನ್ನ ರಥವನ್ನೂ, ರಥದ ಎಲ್ಲಾ ಸಲಕರಣೆಗಳನ್ನೂ ರಕ್ಷಿಸಿದಳು. ನಾನು ಅವಳಿಗೆ ಕೈ ಮುಗಿದು ಪುನಃ ಕಳುಹಿಸಿಕೊಟ್ಟೆನು.

ತತೋಽಹಂ ಸ್ವಯಮುದ್ಯಮ್ಯ ಹಯಾಂಸ್ತಾನ್ ವಾತರಂಹಸಃ ।
ಅಯುಧ್ಯಂ ಜಾಮದಗ್ನ್ಯೇನ ನಿವೃತ್ತೇಽಹನಿ ಭಾರತ ॥೨೦॥

ಅನಂತರ ನಾನು ಹಗಲು ಮುಗಿಯುತ್ತಿರಲು ವಾಯುವೇಗವುಳ್ಳ ಕುದುರೆಗಳನ್ನು ನಾನೇ ನಿಯಂತ್ರಿಸುತ್ತಾ ಪರಶುರಾಮರ ಜೊತೆಯಲ್ಲಿ ಯುದ್ಧವನ್ನು ಮಾಡಿದೆನು.

ತತೋಽಹಂ ಭರತಶ್ರೇಷ್ಠ ವೇಗವಂತಂ ಮಹಾಬಲಮ್ ।
ಅಮುಂಚಂ ಸಮರೇ ಭಾಣಂ ರಾಮಾಯ ಹೃದಯಚ್ಛಿದಮ್ ॥೨೧॥

ಎಲೈ ಭರತಶ್ರೇಷ್ಠನೇ, ನಾನು ಆಗ ವೇಗವುಳ್ಳ, ಮಹಾಬಲಿಷ್ಠವಾದ, ಹೃದಯವನ್ನು ಭೇದಿಸುವ ಒಂದು ಬಾಣವನ್ನು ಪರಶುರಾಮರ ಮೇಲೆ ಪ್ರಯೋಗಿಸಿದೆನು.

ತತೋ ಜಗಾಮ ವಸುಧಾಂ ಮಮ ಬಾಣಪ್ರಪೀಡಿತಃ ।
ಜಾನುಭ್ಯಾಂ ಧನುರುತ್ಸೃಜ್ಯ ರಾಮೋ ಮೋಹವಶಂ ಗತಃ ॥೨೨॥

ನನ್ನ ಬಾಣದಿಂದ ಪೀಡಿತರಾದ ಅವರು ಧನುಸ್ಸನ್ನು ಬಿಟ್ಟು, ಮಂಡಿಗಳ ಮೇಲೆ ಭೂಮಿಯಲ್ಲಿಕುಸಿದು ಮೂರ್ಛಾಕ್ರಾಂತರಾದರು.

ತತಸ್ತಸ್ಮಿನ್ ನಿಪತಿತೇ ರಾಮೇ ಭೂರಿಸಹಸ್ರದೇ ।
ಆವವ್ರುರ್ಜಲದಾ ವ್ಯೋಮ ಕ್ಷರಂತೋ ರುಧಿರಂ ಬಹು ॥೨೩॥

ಬ್ರಾಹ್ಮಣರಿಗೆ ಸಹಸ್ರ ದಕ್ಷಿಣೆಗಳನ್ನು ಕೊಡುವ ಪರಶುರಾಮರು ಬೀಳುತ್ತಿರಲು ಆಕಾಶದಲ್ಲೆಲ್ಲಾ ಮೋಡಗಳು ತುಂಬಿ ರಕ್ತದ ಮಳೆಯನ್ನು ಸುರಿಸಿದವು.

ಉಲ್ಕಾಶ್ಚ ಬಹುಶಃ ಪೇತುಃ ಸನಿರ್ಘಾತಾಃ ಸಕಂಪನಾಃ ।
ಅರ್ಕಂ ಚ ಬಹುಧಾ ದೀಪ್ತಂ ಸ್ವರ್ಭಾನುರಭಿಸಂವೃಣೋತ್ ॥೨೪॥

ಆಕಾಶದಿಂದ ಅನೇಕ ಉಲ್ಕೆಗಳು ಬಿದ್ದವು. ಸಿಡಿಲುಗಳು ಉಂಟಾದವು. ಭೂಕಂಪ ಉಂಟಾಯಿತು. ಬಹಳವಾಗಿ ಪ್ರಕಾಶಿಸುತ್ತಿದ್ದ ಸೂರ್ಯನನ್ನು ರಾಹುವು ಆವರಿಸಿದನು.

ವವುಶ್ಚ ವಾತಾಃ ಪರುಷಾಶ್ಚಲಿತಾ ಚ ವಸುಂಧರಾ ।
ಗೃಧ್ರಾ ಬಲಾಶ್ಚ ಕಂಕಾಶ್ಚ ಪರಿಪೇತುರ್ಮುದಾ ಯುತಾಃ ॥೨೫॥

ವಾಯುವು ಕರ್ಕಶವಾಗಿ ಬೀಸಿತು. ಭೂಮಿಯು ನಡುಗಿತು. ಹದ್ದುಗಳು, ಗಿಡುಗಗಳು, ಕಂಕಗಳು ಮುಂತಾದ ಪಕ್ಷಿಗಳು ಸಂತೋಷದಿಂದ ಹಾರಾಡಿದವು.

ದೀಪ್ತಾಯಾಂ ದಿಶಿ ಗೋಮಾಯುರ್ದಾರುಣಂ ಮುಹುರುನ್ನದನ್ ।
ಅನಾಹತಾ ದುಂದುಭಯೋ ವಿನೇದುರ್ಭೈಶನಿಸ್ವನಾಃ ॥೨೬॥

ದೀಪ್ತವಾದ ದಕ್ಷಿಣ ದಿಕ್ಕಿನಲ್ಲಿ ನರಿಯು ದಾರುಣವಾಗಿ ರೋದನವನ್ನು ಮಾಡಿತು. ದುಂದುಭಿಗಳನ್ನು ಬಾರಿಸದಿದ್ದರೂ ಅವು ಘೋರವಾದ ಸ್ವರವನ್ನು ಮಾಡಿದವು.

ಏತದೌತ್ಪಾತಿಕಂ ಘೋರಂ ಸರ್ವಮಾಸೀದ್ ಭಯಂಕರಮ್ ।
ವಿಸಂಜ್ಞಕಲ್ಪೇ ಧರಣೀಂ ಗತೇ ರಾಮೇ ಮಹಾತ್ಮನಿ ॥೨೭॥

ಮೂರ್ಛೆ ಹೋಗುವ ಸಮೀಪದಲ್ಲಿ ಇದ್ದ ಮಹಾತ್ಮರಾದ ಪರಶುರಾಮರು ಭೂಮಿಯ ಮೇಲೆ ಬಿದ್ದಾಗ ಇಂತಹ ಭಯಂಕರವಾದ ಮತ್ತು ಉಗ್ರವಾದ ಎಲ್ಲಾ ಅಪಶಕುನಗಳೂ ಉಂಟಾದವು.

ತತೋ ವೈ ಸಹಸೋತ್ಥಾಯ ರಾಮೋ ಮಾಮಭ್ಯವರ್ತತ ।
ಪುನರುತ್ಥಾಯ ಕೌರವ್ಯ ವಿಹ್ವಲಃ ಕ್ರೋಧಮೂರ್ಚ್ಛಿತಃ ॥೨೮॥

ಎಲೈ ಕೌರವ್ಯನೇ, ಆಗ ಪರಶುರಾಮರು ವಿಹ್ವಲರೂ ಮತ್ತು ಕ್ರೋಧಮೂರ್ಛಿತರೂ ಆಗಿ ಇದ್ದಕ್ಕಿದ್ದಂತೆಯೇ ಎದ್ದು ನನ್ನೆಡೆಗೆ ಧಾವಿಸಿದರು.

ಆದದಾನೋ ಮಹಾಬಾಹುಃ ಕಾರ್ಮುಕಂ ತಾಳಸಮ್ಮಿತಮ್ ।
ಶರಂ ಚ ಋಷಯೋಽಭ್ಯೇನಂ ಮಾ ರಾಮೇತ್ಯಬ್ರುವನ್ ವಚಃ ॥೨೯॥

ಮಹಾಬಾಹುಗಳಾದ ಅವರು ತಾಳವೃಕ್ಷದಷ್ಟು ಎತ್ತರವಾದ ಬಿಲ್ಲು ಮತ್ತು ಬಾಣಗಳನ್ನು ತೆಗೆದುಕೊಳ್ಳುವಷ್ಟರಲ್ಲಿ ಋಷಿಗಳು ಅವರನ್ನು ಕುರಿತು– 'ಪರಶುರಾಮರೇ, ಇದು ಬೇಡ' ಎಂದು ಮಾತನಾಡಿದರು.

ಮಹರ್ಷಿಮತಮಾಸ್ಥಾಯ ಕ್ರೋಧಾವಿಷ್ಟೋ ಹಿ ಭಾರ್ಗವಃ ।
ಸಮಾಹರದಮೇಯಾತ್ಮಾ ಶರಂ ಕಾಲಾಂತಕೋಪಮಮ್ ॥೩೦॥

ಮಹರ್ಷಿಗಳ ಅಭಿಪ್ರಾಯವನ್ನು ತಿಳಿದ ಕ್ರೋಧಾವಿಷ್ಟರೂ, ಅಪ್ರಮೇಯ ಸ್ವರೂಪರೂ ಆದ ಪರಶುರಾಮರು ಕಾಲಾಂತಕನಂತಿದ್ದ ಆ ಬಾಣವನ್ನು ಹಿಂದೆ ತೆಗೆದುಕೊಂಡರು.

ತತೋ ರವಿರ್ಮಂದಮರೀಚಿಮಂಡಲೋ
ಜಗಾಮಾಸ್ತಂ ಪಾಂಸುಪುಂಜಾವಗಾಢಃ ।

ನಿಶಾ ವ್ಯಗಾಹತ್ ಸುಖಶೀತಮಾರುತಾ
ತತೋ ಯುದ್ಧಂ ಪ್ರತ್ಯಪಹಾರಯಾವ ॥೩೧॥

ಆಗ ಮಂದಕಿರಣಗಳ ಮಂಡಲದಿಂದ ಕೂಡಿದ ಸೂರ್ಯನು ಧೂಳಿನ ಸಮೂಹದಿಂದ ಆವೃತನಾಗಿ ಅಸ್ತವನ್ನು ಹೊಂದಿದನು. ಸುಖಶೀತ ವಾಯುವಿನಿಂದ ಕೂಡಿದ ರಾತ್ರಿಯು ಉಂಟಾಯಿತು. ಆಗ ಇಬ್ಬರೂ ಯುದ್ಧವನ್ನು ನಿಲ್ಲಿಸಿದೆವು.

ಏವಂ ರಾಜನ್ನಪಹಾರೋ ಬಭೂವ
ತತಃ ಪುನರ್ವಿಮಲೇऽಭೂತ್ ಸುಘೋರಮ್ ।
ಕಾಲ್ಯಂ ಕಾಲ್ಯಂ ವಿಂಶತಿರ್ವೈ ದಿನಾನಿ
ತಥೈವ ಚಾನ್ಯಾನಿ ದಿನತ್ರಯಾಣಿ ॥೩೨॥

ಎಲೈ ರಾಜನೇ, ಹೀಗೆ ಯುದ್ಧದ ವಿರಾಮವು ಉಂಟಾಯಿತು. ಪುನಃ ಸೂರ್ಯನು ಉದಯಿಸಿದ ಮೇಲೆ ಘೋರವಾದ ಯುದ್ಧವು ನಡೆಯುತ್ತಿತ್ತು. ಹೀಗೆ ಪ್ರತಿದಿನವೂ ಉಷಃಕಾಲದಿಂದ ಪ್ರಾರಂಭಿಸಿ ಇಪ್ಪತ್ತೂರು ದಿನಗಳವರೆಗೆ ಯುದ್ಧವು ನಡೆಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೈದನೆಯ ಅಧ್ಯಾಯ

ದಿವ್ಯಪುರುಷರಿಂದ ಭೀಷ್ಮರಿಗೆ ಸ್ವಪ್ನದಲ್ಲಿ ಸ್ವಾಪನಾಸ್ತ್ರದ ಸ್ಮಾರಣ.

ಭೀಷ್ಮಃ

ತತೋऽಹಂ ನಿಶಿ ರಾಜೇಂದ್ರ ಪ್ರಣಮ್ಯ ಶಿರಸಾ ತದಾ ।
ಬ್ರಾಹ್ಮಣಾನಾಂ ಪಿತೃಣಾಂ ಚ ದೇವತಾನಾಂ ಚ ಸರ್ವಶಃ ॥೧॥

ನಕ್ತಂಚರಾಣಾಂ ಭೂತಾನಾಂ ರಜನ್ಯಾಶ್ಚ ವಿಶಾಂಪತೇ ।
ಶಯನಂ ಪ್ರಾಪ್ಯ ರಹಿತೇ ಮನಸಾ ಸಮಚಿಂತಯಮ್ ॥೨॥

ಭೀಷ್ಮ- ಎಲೈ ರಾಜೇಂದ್ರನೇ, ಆಗ ನಾನು ರಾತ್ರಿಯಲ್ಲಿ ಬ್ರಾಹ್ಮಣರಿಗೂ, ಪಿತೃಗಳಿಗೂ, ಎಲ್ಲಾ ದೇವತೆಗಳಿಗೂ, ನಕ್ತಂಚರರಾದ ಭೂತಗಳಿಗೂ, ರಾತ್ರಿದೇವತೆಗೂ ಶಿರಸಾ ನಮಸ್ಕಾರವನ್ನು ಮಾಡಿ ಏಕಾಂತ ಸ್ಥಳದಲ್ಲಿ ಮಲಗಿ ಮನಸ್ಸಿನಲ್ಲಿ ಚಿಂತಿಸಿದೆನು.

ಜಾಮದಗ್ನ್ಯೇನ ಮೇ ಯುದ್ಧಮಿದಂ ಪರಮದಾರುಣಮ್ ।
ಅಹಾನಿ ಚ ಬಹೂನ್ಯದ್ಯ ವರ್ತತೇ ಸುಮಹಾತ್ಯಯಃ ॥೩॥

ಇಂದಿನವರೆಗೆ ಬಹಳ ದಿನಗಳಿಂದ ಘೋರ ಅಪಚಾರರೂಪವಾದ, ಪರಮ ದಾರುಣವಾದ ಯುದ್ಧವು ನನಗೆ ಪರಶುರಾಮರ ಜೊತೆಯಲ್ಲಿ ಉಂಟಾಗಿದೆ.

ನ ಚ ರಾಮಂ ಮಹಾವೀರ್ಯಂ ಶಕ್ನೋಮಿ ರಣಮೂರ್ಧನಿ ।
ವಿಜೇತುಂ ಸಮರೇ ವಿಪ್ರಂ ಜಾಮದಗ್ನ್ಯಂ ಮಹಾಬಲಮ್ ॥೪॥

ಮಹಾಬಲರೂ, ಮಹಾಪರಾಕ್ರಮವುಳ್ಳವರೂ, ವಿಪ್ರರಾದ ಜಮದಗ್ನಿ ಪುತ್ರರೂ ಆದ ಪರಶುರಾಮರನ್ನು ಯುದ್ಧದಲ್ಲಿ ನಾನು ಗೆಲ್ಲಲು ಸಾಧ್ಯವಾಗುತ್ತಿಲ್ಲ.

ಯದಿ ಶಕ್ಯೋ ಮಯಾ ಜೇತುಂ ಜಾಮದಗ್ನ್ಯಃ ಪ್ರತಾಪವಾನ್ ।
ದೈವತಾನಿ ಪ್ರಸನ್ನಾನಿ ದರ್ಶಯಂತು ನಿಶಾಂ ಮಮ ॥೫॥

ನಾನು ಒಂದು ಪಕ್ಷ ಪ್ರತಾಪಶಾಲಿಗಳಾದ ಪರಶುರಾಮರನ್ನು ಗೆಲ್ಲಲು ಶಕ್ಯನಾಗುವುದಾದರೆ ದೇವತೆಗಳು ಪ್ರಸನ್ನರಾಗಿ ಈ ರಾತ್ರಿಯಲ್ಲಿ ನನಗೆ ದರ್ಶನವನ್ನು ಕೊಡಲಿ (ಎಂದು ಚಿಂತಿಸಿದೆನು).

ತತೋ ನಿಶಿ ಚ ರಾಜೇಂದ್ರ ಪ್ರಸುಪ್ತಃ ಶರವಿಕ್ಷತಃ ।
ದಕ್ಷಿಣೇನೇಹ ಪಾರ್ಶ್ವೇಣ ಪ್ರಭಾತಸಮಯೇ ತದಾ ॥೬॥

ಎಲೈ ರಾಜೇಂದ್ರನೇ, ಆ ರಾತ್ರಿಯಲ್ಲಿ ಬೆಳಗಿನ ಜಾವದ ಸಮಯದಲ್ಲಿ ಬಾಣಗಳಿಂದ ಗಾಯಗೊಂಡಿದ್ದ ನಾನು ಬಲಭಾಗಕ್ಕೆ ತಿರುಗಿ ಮಲಗಿದೆ.

ತತೋಽಹಂ ವಿಪ್ರಮುಖ್ಯೈಸ್ತೈರ್ಯೈರಸ್ಮಿ ಪತಿತೋ ರಥಾನ್ ।
ಉತ್ಥಾಪಿತೋ ಧೃತಶ್ಚೈವ ಮಾ ಭೈರಿತಿ ಚ ಸಾಂತ್ವಿತಃ ॥೭॥

ತ ಏವ ಮಾಂ ಮಹಾಭಾಗ ಸ್ವಪ್ನೇ ದರ್ಶನಮೇತ್ಯ ವೈ ।
ಪರಿವಾರ್ಯಾಬ್ರುವನ್ ವಾಕ್ಯಂ ತನ್ನಿಬೋಧ ಕುರೂದ್ವಹ ॥೮॥

ಆಗ ನಾನು ರಥದಿಂದ ಬೀಳುವಾಗ ಯಾವ ಬ್ರಾಹ್ಮಣಶ್ರೇಷ್ಠರಿಂದ ಎತ್ತಿ ಹಿಡಿಯಲ್ಪಟ್ಟು, ಹೆದರಬೇಡ ಎಂದು ಸಮಾಧಾನ ಪಡಿಸಲ್ಪಟ್ಟೆನೋ ಅದೇ ಬ್ರಾಹ್ಮಣರು ಸ್ವಪ್ನದಲ್ಲಿ ನನಗೆ ದರ್ಶನವನ್ನು ನೀಡಿ, ನನ್ನನ್ನು ಸುತ್ತುವರಿದು ಆಡಿದ ಮಾತನ್ನು ಮಹಾನುಭಾವನಾದ ಕೌರವನೇ, ಕೇಳುವವನಾಗು.

ಉತ್ತಿಷ್ಠ ಮಾ ಭೈರ್ಗಾಂಗೇಯ ಭಯಂ ತೇ ನಾಸ್ತಿ ಕಿಂಚನ ।
ರಕ್ಷಾಮಹೇ ನರವ್ಯಾಘ್ರ ಸ್ವಶರೀರಂ ಹಿ ನೋ ಭವಾನ್ ॥೯॥

ಎಲೈ ಗಾಂಗೇಯನೇ, ಎದ್ದೇಳು. ನಿನಗೆ ಯಾವ ಭಯವೂ ಇಲ್ಲ. ನರವ್ಯಾಘ್ರನೇ, ನಿನ್ನನ್ನು ನಾವು ರಕ್ಷಿಸುತ್ತೇವೆ. ಏಕೆಂದರೆ ನೀನು ನಮ್ಮ ಶರೀರವೇ ಆಗಿದ್ದೀಯೆ.

ನ ತ್ವಾಂ ರಾಮೋ ರಣೇ ಜೇತಾ ಜಾಮದಗ್ನ್ಯಃ ಕಥಂಚನ ।
ತ್ವಮೇವ ಸಮರೇ ರಾಮಂ ವಿಜೇತಾ ಭರತರ್ಷಭ ॥೧೦॥

ಎಲೈ ಭರತರ್ಷಭನೇ, ನಿನ್ನನ್ನು ಜಮದಗ್ನಿ ಪುತ್ರನಾದ ರಾಮನು ಯುದ್ಧದಲ್ಲಿ ಗೆಲ್ಲುವುದಿಲ್ಲ. ನೀನೇ ರಾಮನನ್ನು ಗೆಲ್ಲುವಿ.

ಇದಮಸ್ತ್ರಂ ಸುದಯಿತಂ ಪ್ರತ್ಯಭಿಜ್ಞಾಸ್ಯತೇ ಭವಾನ್ ।
ಉಪಸ್ಥಾಸ್ಯತಿ ರಾಜೇಂದ್ರ ಸ್ವಯಮೇವ ತವಾನಘ ॥೧೧॥

ಯೇನ ಶತ್ರೂನ್ ಮಹಾವೀರ್ಯಾನ್ ಪ್ರಶಾಸಿಷ್ಯತಿ ಕೌರವ ॥೧೨॥

ನಿನಗೆ ಪ್ರಿಯವಾದ ಈ ಅಸ್ತ್ರವನ್ನು ನೀನು ಸ್ಮರಿಸಿಕೊಳ್ಳುವಿ. ಎಲೈ ಅನಘನೇ, ರಾಜೇಂದ್ರನೇ, ಕೌರವನೇ, ನಿನಗೆ ಆ ಅಸ್ತ್ರವು ತಾನಾಗಿಯೇ ಸಮೀಪಕ್ಕೆ ಬರುತ್ತದೆ. ಅದರಿಂದ ಮಹಾಪರಾಕ್ರಮಿಗಳಾದ ಶತ್ರುಗಳನ್ನು ನಿಯಂತ್ರಿಸುವಿ.

ವಿದಿತಂ ಹಿ ತವಾಪ್ಯೇತತ್ ಪೂರ್ವಸ್ಮಿನ್ ದೇಹಧಾರಣೇ ।
ಪ್ರಾಜಾಪತ್ಯಂ ವಿಶ್ವಕೃತಂ ಸುಸ್ವಾಪಂ ನಾಮ ಭಾರತ ॥೧೩॥

ನಿನ್ನ ಹಿಂದಿನ ದೇಹದಲ್ಲಿ ನಿನಗೆ ಈ ಅಸ್ತ್ರವು ತಿಳಿದಿದ್ದಿತು. ಎಲೈ ಭಾರತನೇ, ಇದು ಪ್ರಜಾಪತಿ ದೇವತಾಕವಾದ, ವಿಶ್ವಕರ್ಮ ನಿರ್ಮಿತವಾದ ಸುಸ್ವಾಪ ಎಂಬ ಅಸ್ತ್ರ.

ನ ಹೀದಂ ವೇದ ರಾಮೋಽಪಿ ಪೃಥಿವ್ಯಾಂ ವಾ ಪುಮಾನ್ ಕ್ವಚಿತ್ ।
ತತ್ ಸ್ಮರಸ್ವ ಮಹಾಬಾಹೋ ಭೃಶಂ ಸಂಯೋಜಯಸ್ವ ಚ ॥೧೪॥

ಇದನ್ನು ಪರಶುರಾಮನಾಗಲೀ ಅಥವಾ ಭೂಮಿಯಲ್ಲಿ ಬೇರೆ ಯಾವ ಪುರುಷನಾಗಲೀ ತಿಳಿದಿಲ್ಲ. ಮಹಾಬಾಹುವೇ, ಅದನ್ನು ಸ್ಮರಿಸಿ ಬಿಲ್ಲಿನಲ್ಲಿ ಚೆನ್ನಾಗಿ ಹೂಡುವವನಾಗು.

ನ ಚ ರಾಮಃ ಕ್ಷಯಂ ಗಂತಾ ತೇನಾಸ್ತ್ರೇಣ ನರಾಧಿಪ ।
ಏನಸಾ ನ ತು ಸಂಯೋಗಂ ಪ್ರಾಪ್ಸ್ಯಸೇ ಜಾತು ಮಾನದ ॥೧೫॥

ಎಲೈ ನರಾಧಿಪನೇ, ಆ ಅಸ್ತ್ರದಿಂದ ರಾಮನು ನಾಶವನ್ನು ಹೊಂದುವುದಿಲ್ಲ. ಎಲೈ ಮಾನದನೇ, ಆದ್ದರಿಂದ ನಿನಗೆ ಪಾಪದ ಸಂಯೋಗವೂ ಉಂಟಾಗುವುದಿಲ್ಲ.

ಸ್ವಪ್ಸ್ಯತೇ ಜಾಮದಗ್ನ್ಯೋಽಸೌ ತ್ವದ್ಬಾಣಬಲಪೀಡಿತಃ ।
ತತೋ ಜಿತ್ವಾ ತ್ವಮೇವೈನಂ ಪುನರುತ್ಥಾಪಯಿಷ್ಯಸಿ ॥೧೬॥

ಅಸ್ತ್ರೇಣ ದಯಿತೇನಾಜೌ ಭೀಷ್ಮ ಸಂಬೋಧನೇನ ವೈ ॥೧೭॥

ನಿನ್ನ ಬಾಣದ ಬಲದಿಂದ ಪೀಡಿತನಾದ ಈ ಪರಶುರಾಮನು ನಿದ್ರೆಯನ್ನು ಮಾಡುವನು. ಎಲೈ ಭೀಷ್ಮನೇ, ಪುನಃ ನೀನು ನಿನಗೆ ಪ್ರಿಯವಾದ ಸಂಬೋಧನಾಸ್ತ್ರದಿಂದ ಯುದ್ಧದಲ್ಲಿ ಅವನನ್ನು ಎಬ್ಬಿಸುವಿ.

ಏವಂ ಕುರುಷ್ವ ಕೌರವ್ಯ ಪ್ರಭಾತೇ ರಥಮಾಸ್ಥಿತಃ ।
ಪ್ರಸುಪ್ತಂ ವಾ ಮೃತಂ ವೇತಿ ತುಲ್ಯಂ ಮನ್ಯಾಮಹೇ ವಯಮ್ ॥೧೮॥

ನ ಚ ರಾಮೇಣ ಮರ್ತವ್ಯಂ ಕದಾಚಿದಪಿ ಪಾರ್ಥಿವ ।
ತತಃ ಸಮುತ್ಥಾಯಮಿದಂ ಪ್ರಸ್ವಾಪಂ ಯುಜ್ಯತಾಮಿತಿ ॥೧೯॥

ಎಲೈ ಕೌರವ್ಯನೇ, ನಾಳೆ ಪ್ರಾತಃಕಾಲದಲ್ಲಿ ರಥವನ್ನು ಏರಿ ಹೀಗೆ ಮಾಡು. ನಮ್ಮ ದೃಷ್ಟಿಯಲ್ಲಿ ನಿದ್ರೆ ಮತ್ತು ಮರಣ ಎರಡೂ ಸಮಾನವಾದುದು. ಎಲೈ ರಾಜನೇ, ಪರಶುರಾಮನು ಖಂಡಿತವಾಗಿ ಮರಣವನ್ನು ಹೊಂದಬಾರದು. ಆದ್ದರಿಂದ ನಿನ್ನ ಬಳಿಗೆ ಬರುವ ಈ ಪ್ರಸ್ವಾಪಾಸ್ತ್ರವನ್ನು ಯೋಜಿಸುವವನಾಗು.

ಇತ್ಯುಕ್ತ್ವಾ ತಂತರ್ಹಿತಾ ರಾಜನ್ ಸರ್ವ ಏವ ದ್ವಿಜೋತ್ತಮಾಃ ।
ಅಷ್ಟೌ ಸದೃಶರೂಪಾಸ್ತೇ ಸರ್ವೇ ಭಾಸುರಮೂರ್ತಯಃ ॥೨೦॥

ಎಲೈ ರಾಜನೇ, ಸಮಾನರೂಪವನ್ನು ಹೊಂದಿದ್ದ, ಪ್ರಕಾಶಮಾನವಾದ ಶರೀರವನ್ನು ಹೊಂದಿದ್ದ ಆ ಎಂಟು ಜನ ದ್ವಿಜಶ್ರೇಷ್ಠರೂ ಸಹ ಹೀಗೆ ಹೇಳಿ ಅಂತರ್ಧಾನವನ್ನು ಹೊಂದಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚಾಶೀತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಪಂಚದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತೈದನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತಾರನೆಯ ಅಧ್ಯಾಯ

ಪರಶುರಾಮ ಮತ್ತು ಭೀಷ್ಮರ ಯುದ್ಧ. ಭೀಷ್ಮರಿಗೆ ಸ್ವಾಪನಾಸ್ತ್ರದ ಸ್ಮರಣೆ.

ಭೀಷ್ಮಃ

ತತೋ ರಾತ್ರ್ಯಾಂ ವ್ಯತೀತಾಯಾಂ ಪ್ರತಿಬುದ್ಧೋಽಸ್ಮಿ ಭಾರತ ।
ತತಃ ಸಂಚಿಂತ್ಯ ವೈ ಸ್ವಪ್ನಮವಾಪಂ ಹರ್ಷಮುತ್ತಮಮ್ ॥೧॥

ಭೀಷ್ಮ– ಎಲೈ ಭಾರತನೇ, ರಾತ್ರಿಯು ಕಳೆಯುತ್ತಿರಲು ನಾನು ಎಚ್ಚರಗೊಂಡು, ಆ ಸ್ವಪ್ನವನ್ನು ಚಿಂತಿಸಿ, ಶ್ರೇಷ್ಠವಾದ ಸಂತೋಷವನ್ನು ಹೊಂದಿದೆನು.

ತತಃ ಸಮಭವದ್ ಯುದ್ಧಂ ಮಮ ತಸ್ಯ ಚ ಭಾರತ ।
ತುಮುಲಂ ಸರ್ವಭೂತಾನಾಂ ಲೋಮಹರ್ಷಣಮದ್ಭುತಮ್ ॥೨॥

ಎಲೈ ಭಾರತನೇ, ಆಗ ನನಗೂ ಮತ್ತು ಪರಶುರಾಮರಿಗೂ ತೀವ್ರವಾದ, ಅದ್ಭುತವಾದ ಮತ್ತು ಸರ್ವಪ್ರಾಣಿಗಳಿಗೂ ರೋಮಾಂಚಕಾರಿಯಾದ ಯುದ್ಧವು ಜರುಗಿತು.

ತತೋ ಬಾಣಮಯಂ ವರ್ಷಂ ವವರ್ಷ ಮಯಿ ಭಾರ್ಗವಃ ।
ನ್ಯವಾರಯಮಹಂ ತಚ್ಚ ಶರಜಾಲೇನ ಭಾರತ ॥೩॥

ಎಲೈ ಭಾರತನೇ, ಪರಶುರಾಮರು ನನ್ನ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. ಅದನ್ನು ನಾನು ಬಾಣಗಳ ಸಮೂಹದಿಂದ ತಡೆದೆನು.

ತತಃ ಪರಮಸಂಕ್ರುದ್ಧಃ ಪುನರೇವ ಮಹಾತಪಾಃ ।
ಹ್ಯಸ್ತನೇನ ಚ ಕೋಪೇನ ಶಕ್ತಿಂ ವೈ ಪ್ರಾಹಿಣೋನ್ಮಯಿ ॥೪॥

ಇಂದ್ರಾಶನಿಸಮಸ್ಪರ್ಶಾಂ ಯಮದಂಡೋಪಮಪ್ರಭಾಮ್ ।
ಜ್ವಲಂತೀಮಗ್ನಿವತ್ ಸಂಖೇ ಲೇಲಿಹಾನಾಂ ಸಮಂತತಃ ॥೫॥

ಅನಂತರ ಮಹಾತಪಸ್ವಿಗಳಾದ ಅವರು ಪರಮ ಕೋಪದಿಂದ ಕೂಡಿದವರಾಗಿ ಹಿಂದಿನ ದಿನದ ಕೋಪದಿಂದ ನನ್ನ ಮೇಲೆ ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಸ್ಪರ್ಶವುಳ್ಳ, ಯಮದಂಡದಂತಹ ಕಾಂತಿಯುಳ್ಳ, ಅಗ್ನಿಯಂತೆ ಜ್ವಲಿಸುವ, ಯುದ್ಧದಲ್ಲಿ ಎಲ್ಲ ಕಡೆಗಳಲ್ಲಿಯೂ ನಾಲಿಗೆಯನ್ನು ಚಾಚಿದಂತಿರುವ ಶಕ್ತ್ಯಾಯುಧವನ್ನು ಪ್ರಯೋಗಿಸಿದರು.

ತತೋ ಭರತಶಾರ್ದೂಲ ಧಿಷ್ಣ್ಯಮಾಕಾಶಗಂ ಯಥಾ ।
ಸಾ ಮಾಮಭ್ಯವಧೀತ್ ತೂರ್ಣಮಂಸದೇಶೇ ಚ ಭಾರತ ॥೬॥

ಎಲೈ ಭಾರತನೇ, ಭರತಶಾರ್ದೂಲನೇ, ಅದು ದೇವತಾವಿಮಾನದಂತೆ ಎತ್ತರದಲ್ಲಿದ್ದ ನನಗೆ ವಕ್ಷಪ್ರದೇಶದಲ್ಲಿ ಬಡಿಯಿತು.

ಅಥಾಸೃಗಸ್ರವದ್ ಘೋರಂ ಗಿರೇರ್ಗೈರಿಕಧಾತುವತ್ ।
ರಾಮೇಣ ಸುಮಹಾಬಾಹೋ ಕ್ಷತಸ್ಯ ಕ್ಷತಜೋಕ್ಷಣಮ್ ॥೭॥

ಆಗ ಪರ್ವತದಿಂದ ಗೈರಿಕಧಾತುವು ಸುರಿದಂತೆ ಎಲೈ ಮಹಾಬಾಹುವೇ, ಪರಶುರಾಮರಿಂದ ಉಂಟಾದ ನನ್ನ ವ್ರಣದಿಂದ ರಕ್ತವು ಸುರಿಯಿತು.

ತತೋಽಹಂ ಜಾಮದಗ್ನ್ಯಾಯ ಭೃಶಂ ಕ್ರೋಧಸಮನ್ವಿತಃ ।
ಪ್ರೈಷಯಂ ಮೃತ್ಯುಸಂಕಾಶಂ ಬಾಣಂ ಸರ್ಪವಿಷೋಪಮಮ್ ॥೮॥

ಆಗ ನಾನು ಬಹಳ ಕೋಪದಿಂದ ಕೂಡಿದವನಾಗಿ, ಸರ್ಪವಿಷದಂತಿದ್ದ ಮತ್ತು ಮೃತ್ಯುವಿನಂತಿದ್ದ ಬಾಣವನ್ನು ಅವರ ಮೇಲೆ ಪ್ರಯೋಗಿಸಿದೆನು.

ಸ ತೇನಾಭಿಹತೋ ವೀರೋ ಲಲಾಟೇ ದ್ವಿಜಸತ್ತಮಃ ।
ಅಶೋಭತ ಮಹಾರಾಜ ಸಶೃಂಗ ಇವ ಪರ್ವತಃ ॥೯॥

ಎಲೈ ಮಹಾರಾಜನೇ, ಆ ಬಾಣದಿಂದ ಹಣೆಯಲ್ಲಿ ಹೊಡೆಯಲ್ಪಟ್ಟ ಆ ವೀರರಾದ ಬ್ರಾಹ್ಮಣಶ್ರೇಷ್ಠರು ಶಿಖರ ಸಹಿತವಾದ ಪರ್ವತದಂತೆ ಶೋಭಿಸಿದರು.

ಸ ಸಂರಬ್ಧಃ ಸಮಾವೃತ್ಯ ಶರಂ ಕಾಲಾಂತಕೋಪಮಮ್ ।
ಸಂದಧೇ ಬಲವತ್ ಕೃಷ್ಯ ಘೋರಂ ಶತ್ರುನಿಬರ್ಹಣಮ್ ॥೧೦॥

ಅವರು ತಿರುಗಿ ಕೋಪಗೊಂಡು ಕಾಲಾಂತಕನಂತಿರುವ, ಶತ್ರುವಿನಾಶಕವಾದ ಘೋರವಾದ ಬಾಣವನ್ನು, ಬಿಲ್ಲನ್ನು ಬಲವಾಗಿ ಎಳೆದು ಬಿಲ್ಲಿನಲ್ಲಿ ಹೂಡಿದರು.

ಸ ವಕ್ಷಸಿ ಪಪಾತೋಗ್ರಃ ಶರೋ ವ್ಯಾಲ ಇವ ಶ್ವಸನ್ ।
ಮಹೀಂ ರಾಜಂಸ್ತತಶ್ಚಾಹಮಗಮಂ ರುಧಿರಾವಿಲಃ ॥೧೧॥

ಆ ಉಗ್ರವಾದ ಬಾಣವು ಭುಸುಗುಟ್ಟುವ ಸರ್ಪದಂತೆ ನನ್ನ ಎದೆಯಲ್ಲಿ ಬಿದ್ದಿತು. ರಾಜನೇ, ನಾನು ಆಗ ರಕ್ತಸಿಕ್ತನಾಗಿ ಭೂಮಿಯ ಮೇಲೆ ಬಿದ್ದೆನು.

ಸಂಪ್ರಾಪ್ಯ ತು ಪುನಃ ಸಂಜ್ಞಾಂ ಜಾಮದಗ್ನ್ಯಾಯ ಧೀಮತೇ ।
ಪ್ರಾಹಿಣ್ವಂ ವಿಮಲಾಂ ಶಕ್ತಿಂ ಜ್ವಲಂತೀಮಶನೀಮಿವ ॥೧೨॥

ಪುನಃ ಪ್ರಜ್ಞೆಯನ್ನು ಪಡೆದು, ಮೇಧಾವಿಗಳಾದ ಪರಶುರಾಮರ ಮೇಲೆ ಉರಿಯುವ ವಜ್ರದಂತಿರುವ, ನಿರ್ಮಲವಾದ ಶಕ್ತ್ಯಾಯುಧವನ್ನು ಪ್ರಯೋಗಿಸಿದೆನು.

ಸಾ ತಸ್ಯ ದ್ವಿಜಮುಖ್ಯಸ್ಯ ನಿಪಪಾತ ಭುಜಾಂತರೇ ।
ವಿಹ್ವಲಶ್ಚಾಭವದ್ ರಾಜನ್ ವೇಪಥುಶ್ಚೈನಮಾವಿಶತ್ ॥೧೩॥

ಆ ಶಕ್ತಿಯು ಆ ದ್ವಿಜಶ್ರೇಷ್ಠರ ಭುಜಗಳ ಮಧ್ಯದಲ್ಲಿ ಬಿದ್ದಿತು. ಎಲೈ ರಾಜನೇ, ಅದರಿಂದ ಅವರು ಸಂಕಟಪಟ್ಟರು ಮತ್ತು ಅವರ ಶರೀರದಲ್ಲಿ ನಡುಕ ಉಂಟಾಯಿತು.

ತತ ಏನಂ ಪರಿಷ್ವಜ್ಯ ಸಖಾ ವಿಪ್ರೋ ಮಹಾತಪಾಃ ।
ಅಕೃತವ್ರಣಃ ಶುಭೈರ್ವಾಕ್ಯೈ ರಾಶ್ವಾಸದನೇಕಧಾ ॥೧೪॥

ಆಗ ಅವರ ಸ್ನೇಹಿತನೂ, ಬ್ರಾಹ್ಮಣನೂ, ಮಹಾತಪಸ್ವಿಯೂ ಆದ ಅಕೃತವ್ರಣನು ಅವರನ್ನು ಆಲಿಂಗಿಸಿ, ಶುಭವಾದ ವಾಕ್ಯಗಳಿಂದ ಅನೇಕ ರೀತಿಯಲ್ಲಿ ಸಮಾಧಾನ ಪಡಿಸಿದನು.

ಸಮಾಶ್ವಸ್ತಸ್ತತೋ ರಾಮಃ ಕ್ರೋಧಾಮರ್ಷಸಮನ್ವಿತಃ ।
ಪ್ರಾದುಶ್ಚಕ್ರೇ ತದಾ ಬ್ರಾಹ್ಮಂ ಪರಮಾಸ್ತ್ರಂ ಮಹಾವ್ರತಃ ॥೧೫॥

ಸುಧಾರಿಸಿಕೊಂಡ, ಮಹಾವ್ರತಧಾರಿಗಳಾದ ಪರಶುರಾಮರು ಕ್ರೋಧಾಮರ್ಷಗಳಿಂದ ಕೂಡಿದವರಾಗಿ ಶ್ರೇಷ್ಠವಾದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದರು.

ತತಸ್ತತ್ಪ್ರತಿಘಾತಾರ್ಥಂ ಬ್ರಾಹ್ಮಮೇವಾಸ್ತ್ರಮುತ್ತಮ್ ।
ಮಯಾ ಪ್ರಯುಕ್ತಂ ಜಜ್ವಾಲ ಯುಗಾಂತಮಿವ ದರ್ಶಯತ್ ॥೧೬॥

ಅದನ್ನು ನಿವಾರಣೆ ಮಾಡಲು ನಾನೂ ಶ್ರೇಷ್ಠವಾದ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದೆ. ನನ್ನಿಂದ ಪ್ರಯೋಗಿಸಲ್ಪಟ್ಟ ಬ್ರಹ್ಮಾಸ್ತ್ರವು ಯುಗಾಂತವನ್ನು ತೋರಿಸುತ್ತಿದೆಯೋ ಎಂಬಂತೆ ಜ್ವಲಿಸುತ್ತಿದ್ದಿತು.

ತಯೋರ್ಬ್ರಹ್ಮಾಸ್ತ್ರಯೋರಾಸೀದ್ ಅಂತರಾ ಖೇ ಸಮಾಗಮಃ ।
ಅಸಂಪ್ರಾಪ್ಯೈವ ರಾಮಂ ಚ ಮಾಂ ಚ ಭಾರತಸತ್ತಮ ॥೧೭॥

ಎಲೈ ಭರತಶ್ರೇಷ್ಠನೇ, ಆ ಬ್ರಹ್ಮಾಸ್ತ್ರಗಳು ನನ್ನನ್ನಾಗಲೀ, ಪರಶುರಾಮರನ್ನಾಗಲೀ ತಲುಪದೇ ಆಕಾಶದ ಮಧ್ಯದಲ್ಲಿ ಅವುಗಳಿಗೆ ಪರಸ್ಪರ ಸಮಾಗಮ ಉಂಟಾಯಿತು.

ತತೋ ವ್ಯೋಮ್ನಿ ಪ್ರಾದುರಭೂತ್ ತೇಜ ಏವ ಹಿ ಕೇವಲಮ್ ।
ಭೂತಾನಿ ಚೈವ ಸರ್ವಾಣಿ ಜಗ್ಮುರಾರ್ತಿಂ ವಿಶಾಂಪತೇ ॥೧೮॥

ಆಗ ಆಕಾಶದಲ್ಲಿ ಎಲ್ಲ ಕಡೆಯಲ್ಲಿಯೂ ಕೇವಲ ತೇಜಸ್ಸೇ ಕಂಡು ಬಂದಿತು. ಎಲೈ ರಾಜನೇ, ಎಲ್ಲ ಪ್ರಾಣಿಗಳೂ ವಿಷಾದವನ್ನು ಹೊಂದಿದವು.

ಋಷಯಶ್ಚ ಸಗಂಧರ್ವಾ ದೇವತಾಶ್ಚೈವ ಭಾರತ ।
ಸಂತಾಪಂ ಪರಮಂ ಜಗ್ಮುರಸ್ತ್ರತೇಜೋಭಿಪೀಡಿತಾಃ ॥೧೯॥

ಎಲೈ ಭಾರತನೇ, ಆ ಅಸ್ತ್ರದ ಸಾಮರ್ಥ್ಯದಿಂದ ಪೀಡಿತರಾದ ಋಷಿಗಳೂ, ಗಂಧರ್ವರೂ ಮತ್ತು ದೇವತೆಗಳೂ ಬಹಳ ಸಂತಾಪವನ್ನು ಹೊಂದಿದರು.

ತತಶ್ಚಚಾಲ ಪೃಥಿವೀ ಸಪರ್ವತವನದ್ರುಮಾ ।
ಸಂತಪ್ತಾನಿ ಚ ಭೂತಾನಿ ವಿಷಾದಂ ಜಗ್ಮುರುತ್ತಮಮ್ ॥೨೦॥

ಪ್ರಜಜ್ವಾಲ ನಭೋ ರಾಜನ್ ಧೂಮಾಯಂತೇ ದಿಶೋ ದಶ ।
ನ ಸ್ಥಾತುಮಂತರಿಕ್ಷೇ ನ ಶೇಕುರಾಕಾಶಗಾಸ್ತದಾ ॥೨೧॥

ಎಲೈ ರಾಜನೇ, ಆಕಾಶವೆಲ್ಲವೂ ಉರಿಯುತ್ತಿದ್ದಿತು. ಹತ್ತು ದಿಕ್ಕುಗಳು ಧೂಮದಿಂದ ತುಂಬಿದ್ದವು. ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು ಅಂತರಿಕ್ಷದಲ್ಲಿ ನಿಲ್ಲಲು ಸಾಧ್ಯವಾಗಲಿಲ್ಲ.

ತತೋ ಹಾಹಾಕೃತೇ ಲೋಕೇ ಸದೇವಾಸುರರಾಕ್ಷಸೇ ।
ಇದಮಂತರಮಿತ್ಯೇವ ಮೋಕ್ತುಕಾಮೋಽಸ್ಮಿ ಭಾರತ ॥೨೨॥

ಪ್ರಸ್ವಾಪಮಸ್ತ್ರಂ ದಯಿತಂ ವಚನಾದ್ ಬ್ರಹ್ಮವಾದಿನಾಮ್ ।
ಚಿಂತಿತಂ ಚ ತದಾಽಸ್ತ್ರಂ ಮೇ ಮನಸಾ ಪ್ರತ್ಯಭಾತ್ ತದಾ ॥೨೩॥

ಎಲೈ ಭಾರತನೇ, ಆಗ ದೇವಾಸುರ, ರಾಕ್ಷಸರ ಲೋಕಗಳಲ್ಲಿ ಹಾಹಾಕಾರ ಉಂಟಾಗುತ್ತಿರಲು ಇದೇ ಅವಕಾಶವೆಂದು ತಿಳಿದು, ನಾನು ಬ್ರಹ್ಮವಾದಿಗಳು ಹೇಳಿದ, ನನಗೆ ಪ್ರಿಯವಾದ ಪ್ರಸ್ವಾಪಾಸ್ತ್ರವನ್ನು ಪ್ರಯೋಗಿಸಲು ಬಯಸಿದೆ. ನಾನು ಚಿಂತಿಸಿದ ತಕ್ಷಣವೇ ಆ ಅಸ್ತ್ರವು ನನ್ನ ಮನಸ್ಸಿನಲ್ಲಿ ಪ್ರತಿಭಾತವಾಯಿತು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಡಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತಾರನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೇಳನೆಯ ಅಧ್ಯಾಯ

ನಾರದರ ವಚನದಂತೆ ಪ್ರಸ್ವಾಪಾಸ್ತ್ರವನ್ನು ಪ್ರಯೋಗಿಸದೆ ಯುದ್ಧ ವಿರಾಮ.
ಪರಶುರಾಮರಿಂದ ತಮ್ಮ ಪರಾಭವದ ಅಂಗೀಕಾರ.

ಭೀಷ್ಮಃ

ತತೋ ಹಲಹಲಾಶಬ್ದೋ ದಿವಿ ರಾಜನ್ ಮಹಾನಭೂತ್ ।
ಪ್ರಸ್ವಾಪನಂ ಭೀಷ್ಮ ಸ್ರಾಕ್ಷೀರಿತಿ ಕೌರವನಂದನ ॥೧॥

ಭೀಷ್ಮ– ಎಲೈ ರಾಜನೇ, ಆಗ ಆಕಾಶದಲ್ಲಿ, ಕೌರವನಂದನನಾದ ಭೀಷ್ಮನೇ, ಪ್ರಸ್ವಾಪಾಸ್ತ್ರವನ್ನು ಪ್ರಯೋಗಿಸು ಎಂಬ ದೊಡ್ಡ ಕೋಲಾಹಲ ಶಬ್ದವುಂಟಾಯಿತು.

ಅಯೋಜಯಮಹಂ ತತ್ರ ತದಸ್ತ್ರಂ ಭೃಗುನಂದನೇ ।
ಪ್ರಸ್ವಾಪಂ ಮಾಂ ಪ್ರಯುಂಜಾನಂ ನಾರದೋ ವಾಕ್ಯಮಬ್ರವೀತ್ ॥೨॥

ನಾನು ಭೃಗುನಂದನರಾದ ಪರಶುರಾಮರನ್ನು ಉದ್ದೇಶಿಸಿ ಆ ಪ್ರಸ್ವಾಪಾಸ್ತ್ರವನ್ನು ಹೂಡುವಷ್ಟರಲ್ಲಿ ನಾರದರು ಮಾತನಾಡಿದರು.

ಏತೇ ವಿಯತಿ ಕೌರವ್ಯ ದಿವಿ ದೇವಗಣಾಃ ಸ್ಥಿತಾಃ ।
ತೇ ತ್ವಾಂ ನಿವಾರಯಂತ್ಯದ್ಯ ಪ್ರಸ್ವಾಪಂ ಮಾ ಪ್ರಯೂಯುಜಃ ॥೩॥

ಎಲೈ ಕೌರವ್ಯನೇ, ಆಕಾಶದಲ್ಲಿ ಇರುವ ದೇವತಾಗಣಗಳು ಈ ದಿನ ನಿನ್ನನ್ನು ನಿವಾರಿಸುತ್ತಿವೆ. ಪ್ರಸ್ವಾಪಾಸ್ತ್ರವನ್ನು ಪ್ರಯೋಗಿಸಬೇಡ.

ರಾಮಸ್ತಪಸ್ವೀ ಬ್ರಹ್ಮಣ್ಯೋ ಬ್ರಾಹ್ಮಣಶ್ಚ ಗುರುಶ್ಚ ತೇ ।
ತಸ್ಯಾವಮಾನಂ ಕೌರವ್ಯ ಮಾ ಸ್ಮ ಕಾರ್ಷೀಃ ಕಥಂಚನ ॥೪॥

ಪರಶುರಾಮರು ತಪಸ್ವಿಗಳೂ, ಬ್ರಾಹ್ಮಣರ ವತ್ಸಲರೂ, ಬ್ರಾಹ್ಮಣರೂ ಮತ್ತು ನಿನ್ನ ಗುರುಗಳೂ ಆಗಿದ್ದಾರೆ. ಎಲೈ ಕೌರವ್ಯನೇ, ಅವರಿಗೆ ಯಾವ ರೀತಿಯಿಂದಲೂ ಅವಮಾನವನ್ನು ಮಾಡಬೇಡ.

ತತೋಽಪಶ್ಯಂ ದಿವಿಷ್ಠಾನ್ ವೈ ತಾನಷ್ಟೌ ಬ್ರಹ್ಮವಾದಿನಃ ।
ತೇ ಮಾಂ ಸ್ಮಯಂತೋ ರಾಜೇಂದ್ರ ಶನಕೈರಿದಮಬ್ರುವನ್ ॥೫॥

ಆಗ ನಾನು ಆಕಾಶದಲ್ಲಿ ನಿಂತ ಆ ಎಂಟು ಬ್ರಹ್ಮವಾದಿಗಳನ್ನು ನೋಡಿದೆನು. ಅವರು ನಗುತ್ತಾ ನನ್ನನ್ನು ಕುರಿತು ಹೀಗೆ ಹೇಳಿದರು.

ಯದಾಹ ಭರತಶ್ರೇಷ್ಠ ನಾರದಸ್ತತ್ ತಥಾ ಕುರು ।
ಏತದ್ಧಿ ಪರಮಂ ಶ್ರೇಯೋ ಲೋಕಾನಾಂ ಭರತರ್ಷಭ ॥೬॥

ಎಲೈ ಭರತಶ್ರೇಷ್ಠನೇ, ನಾರದರು ಹೇಳಿದಂತೆ ಮಾಡು. ಇದರಿಂದ ಲೋಕಕ್ಕೆ ಪರಮಶ್ರೇಯಸ್ಸು ಉಂಟಾಗುವುದು.

ತತೋಽಹಂ ಪ್ರತಿಸಂಹೃತ್ಯ ತದಸ್ತ್ರಂ ಸ್ವಾಪನಂ ಮೃಧೇ ।
ಬ್ರಹ್ಮಾಸ್ತ್ರಂ ದೀಪಯಾಂಚಕ್ರೇ ತಸ್ಮಿನ್ ಯುಧಿ ಯಥಾವಿಧಿ ॥೭॥

ಆಗ ನಾನು ಯುದ್ಧದಲ್ಲಿ ಸ್ವಾಪನಾಸ್ತ್ರವನ್ನು ಉಪಸಂಹಾರ ಮಾಡಿ ವಿಧಿ ಪೂರ್ವಕವಾಗಿ ಧನುಸ್ಸಿನಲ್ಲಿ ಬ್ರಹ್ಮಾಸ್ತ್ರವನ್ನು ಹೂಡಿದೆನು.

ತತೋ ರಾಮೋ ರುಷಿತೋ ರಾಜಸಿಂಹ
ದೃಷ್ಟ್ವಾ ತದಸ್ತ್ರಂ ವಿನಿವರ್ತಿತಂ ವೈ ।
ಜಿತೋಽಸ್ಮಿ ಭೀಷ್ಮೇಣ ಸುಮಂದಬುದ್ಧಿಃ
ಇತ್ಯೇವ ವಾಕ್ಯಂ ಸಹಸಾ ವ್ಯಮುಂಚತ್ ॥೮॥

ಎಲೈ ರಾಜಸಿಂಹನೇ, ಆಗ ಕೋಪಗೊಂಡ ಪರಶುರಾಮರು ನಾನು ಪ್ರಸ್ವಾಪಾಸ್ತ್ರವನ್ನು ಹಿಂದೆ ತೆಗೆದುಕೊಂಡದ್ದನ್ನು ನೋಡಿ, ಮಂದಬುದ್ಧಿಯುಳ್ಳ ನಾನು ಭೀಷ್ಮರಿಂದ ಪರಾಜಿತನಾಗಿದ್ದೇನೆ ಎಂದು ಇದ್ದಕ್ಕಿದ್ದಂತೆಯೇ ಹೇಳಿದರು.

ತತೋಽಪಶ್ಯತ್ ಪಿತರಂ ಜಾಮದಗ್ನ್ಯಃ
ಪಿತುಸ್ತಥಾ ಪಿತರಂ ಚಾಸ್ಯ ಚಾನ್ಯಾನ್ ।
ತೇ ತತ್ರ ಚೈನಂ ಪರಿವಾರ್ಯ ತಸ್ಥುಃ
ಊಚುಶ್ಚೈನಂ ಸಾಂತ್ವಪೂರ್ವಂ ತದಾನೀಮ್ ॥೯॥

ಆಗ ಪರಶುರಾಮರು ತಮ್ಮ ತಂದೆಗಳಾದ ಜಮದಗ್ನಿಗಳನ್ನೂ, ಅವರ ತಂದೆಯಾದ ಋಚೀಕರನ್ನೂ ಮತ್ತು ಬೇರೆ ಋಷಿಗಳನ್ನೂ ನೋಡಿದರು. ಅವರೆಲ್ಲರೂ ಅವರನ್ನು ಸುತ್ತುವರಿದು, ಅವರನ್ನು ಕುರಿತು ಆಗ ಸಮಾಧಾನ ಮಾಡುತ್ತಾ, ಈ ಮಾತುಗಳನ್ನು ಆಡಿದರು.

ಮಾ ಸ್ಮೈವಂ ಸಾಹಸಂ ತಾತ ಪುನಃ ಕಾರ್ಷೀಃ ಕಥಂಚನ ।
ಭೀಷ್ಮೇಣ ಸಂಯುಗಂ ಗಂತುಂ ಕ್ಷತ್ರಿಯೇಣ ವಿಶೇಷತಃ ॥೧೦॥

ಎಲೈ ಪ್ರೀತಿಪಾತ್ರನೇ, ವಿಶೇಷವಾಗಿ ಕ್ಷತ್ರಿಯರಾದ ಭೀಷ್ಮರ ಜೊತೆಯಲ್ಲಿ ಯುದ್ಧವನ್ನು ಮಾಡುವಂತಹ ಸಾಹಸಕಾರ್ಯವನ್ನು ಇನ್ನೊಮ್ಮೆ ಯಾವ ಕಾರಣದಿಂದಲೂ ಮಾಡಬೇಡ.

ಕ್ಷತ್ರಿಯಸ್ಯ ತು ಧರ್ಮೋಽಯಂ ಯದ್ ಯುದ್ಧಂ ಭೃಗುನಂದನ ।
ಸ್ವಾಧ್ಯಾಯೋ ವ್ರತಚರ್ಯಾ ಚ ಬ್ರಾಹ್ಮಣಾನಾಂ ಪರಂ ಧನಮ್ ॥೧೧॥

ಎಲೈ ಭೃಗುನಂದನನೇ, ಯುದ್ಧ ಮಾಡುವುದು ಕ್ಷತ್ರಿಯರ ಧರ್ಮ. ಸ್ವಾಧ್ಯಾಯ ಮತ್ತು ವ್ರತಾನುಷ್ಠಾನಗಳು ಬ್ರಾಹ್ಮಣರ ಶ್ರೇಷ್ಠವಾದ ಧನ.

ಇದಂ ನಿಮಿತ್ತಂ ಕಸ್ಮಿಂಶ್ಚಿದ್ ಅಸ್ಮಾಭಿರುಪಮಂತ್ರಿತಮ್ ।
ಶಸ್ತ್ರಧಾರಣಮತ್ಯುಗ್ರಂ ತಚ್ಚ ಕಾರ್ಯಂ ಕೃತಂ ತ್ವಯಾ ॥೧೨॥

ನಾವು ಯಾವುದೋ ಉದ್ದೇಶದಿಂದ ನೀನು ಉಗ್ರವಾದ ಶಸ್ತ್ರಧಾರಣವನ್ನು ಮಾಡಬೇಕೆಂದು ಆಲೋಚಿಸಿದ್ದೆವು. ನೀನು ಆ ಉದ್ದೇಶವನ್ನು ನೆರವೇರಿಸಿದ್ದೀಯೆ.

ವತ್ಸ ಪರ್ಯಾಪ್ತಮೇತಾವದ್ ಭೀಷ್ಮೇಣ ಸಹ ಸಂಯುಗೇ ।
ವಿಮರ್ದಸ್ತೇ ಮಹಾಬಾಹೋ ವ್ಯಪಯಾಹಿ ರಣಾದಿತಃ ॥೧೩॥

ಎಲೈ ವತ್ಸನೇ, ಮಹಾಬಾಹುವೇ, ಯುದ್ಧದಲ್ಲಿ ಭೀಷ್ಮರ ಜೊತೆಯಲ್ಲಿ ಮಾಡಿದ ಸಂಘರ್ಷವು ಇಷ್ಟು ಸಾಕು. ಯುದ್ಧದಿಂದ ಹಿಂದಿರುಗುವವನಾಗು.

ಪರ್ಯಾಪ್ತಮೇತದ್ ಭದ್ರಂ ತೇ ತವ ಕಾರ್ಮುಕಧಾರಣಮ್ ।
ವಿಸರ್ಜಯೈತದ್ ದುರ್ಧರ್ಷ ತಪಸ್ತಪ್ಯಸ್ವ ಭಾರ್ಗವ ॥೧೪॥

ಎಲೈ ದುರ್ಧರ್ಷನೇ, ನಿನಗೆ ಮಂಗಳವಾಗಲಿ. ನೀನು ಧನುಸ್ಸನ್ನು ಧಾರಣೆ ಮಾಡಿದುದು ಸಾಕು. ಭಾರ್ಗವನೇ, ಅದನ್ನು ವಿಸರ್ಜಿಸಿ ತಪಸ್ಸನ್ನು ಮಾಡುವವನಾಗು (ಎಂದು ಹೇಳಿದರು).

ಏವಂ ಭೀಷ್ಮಃ ಶಾಂತನವೋ ದೇವೈಃ ಸರ್ವೈರ್ನಿವಾರಿತಃ ।
ನಿವರ್ತಸ್ವ ರಣಾದಸ್ಮಾದ್ ಇತಿ ಚೈವ ಪ್ರಚೋದಿತಃ ॥೧೫॥

ಹೀಗೆಯೇ ಶಂತನುಪುತ್ರನಾದ ಭೀಷ್ಮನೂ ಸಹ ಈ ಯುದ್ಧದಿಂದ ಹಿಮ್ಮೆಟ್ಟುವವನಾಗಲಿ ಎಂದು ದೇವತೆಗಳಿಂದ ಪ್ರೇರಿಸಲ್ಪಟ್ಟು ತಡೆಯಲ್ಪಟ್ಟೆನು.

ರಾಮೇಣ ಸಹ ಮಾ ಯೋತ್ಸೀರ್ಗುರುಣೇತಿ ಪುನಃ ಪುನಃ ।
ನ ಹಿ ರಾಮೋ ರಣೇ ಜೇತುಂ ತ್ವಯಾ ನ್ಯಾಯ್ಯಃ ಕುರೂದ್ವಹ ॥೧೬॥

ಪುನಃ ಪುನಃ ಗುರುಗಳಾದ ಪರಶುರಾಮರ ಜೊತೆಯಲ್ಲಿ ಯುದ್ಧವನ್ನು ಮಾಡಬೇಡ. ಎಲೈ ಕುರೂದ್ವಹನೇ, ನೀನು ಪರಶುರಾಮರನ್ನು ಯುದ್ಧದಲ್ಲಿ ಜಯಿಸುವುದು ನ್ಯಾಯವಲ್ಲ.

ಮಾನಂ ಕುರುಷ್ವ ರಾಜೇಂದ್ರ ಬ್ರಾಹ್ಮಣಸ್ಯ ರಣಾಜಿರೇ ।
ವಯಂ ತು ಗುರವಸ್ತುಭ್ಯಂ ತಸ್ಮಾತ್ ತ್ವಾಂ ವರಯಾಮಹೇ ॥೧೭॥

ಎಲೈ ರಾಜೇಂದ್ರನೇ, ಯುದ್ಧ ಭೂಮಿಯಲ್ಲಿ ಬ್ರಾಹ್ಮಣರಾದ ಪರಶುರಾಮರಿಗೆ ಗೌರವವನ್ನು ತೋರಿಸು. ನಾವು ನಿನ್ನ ಗುರುಗಳು. ಆದ್ದರಿಂದ ನಿನ್ನನ್ನು ತಡೆಯುತ್ತಿದ್ದೇವೆ.

ಭೀಷ್ಮೋ ವಸೂನಾಮನ್ಯತಮೋ ದಿಷ್ಟ್ಯಾ ಜೀವಸಿ ಪುತ್ರಕ ।
ಗಾಂಗೇಯಃ ಶಂತನೋಃ ಪುತ್ರೋ ವಸುರೇಷ ಮಹಾಯಶಾಃ ॥೧೮॥

ಕಥಂ ತ್ವದ್ಯ ತ್ವಯಾ ಜೇತುಂ ರಾಮಃ ಶಕ್ಯೋ ನಿವರ್ತ ವೈ ।

ಎಲೈ ಪುತ್ರನೇ, ಭೀಷ್ಮನಾದ ನೀನು ವಸುಗಳಲ್ಲಿ ಒಬ್ಬನು. ಆದ್ದರಿಂದ ದೇವರ ದಯದಿಂದ ಬದುಕಿದ್ದೀಯೆ. ಗಂಗಾಪುತ್ರನೂ, ಶಂತನುಪುತ್ರನೂ, ಮಹಾಯಶಸ್ವಿಯೂ ಆದ ನೀನು ವಸುವೇ ಆಗಿದ್ದೀಯೆ. ಆದ್ದರಿಂದ ನೀನು ಯುದ್ಧದಲ್ಲಿ ಪರಶುರಾಮರನ್ನು ಗೆಲ್ಲುವುದು ಹೇಗೆ ಸಾಧ್ಯ ? ಹಿಂದಿರುಗು.

(ಶಿಷ್ಯನಾದ ನೀನು ಗುರುಗಳಿಗೆ ದ್ರೋಹವನ್ನು ಮಾಡಿದುದರಿಂದ ನೀನೂ ಸಹ ನಿನ್ನ ಪೌತ್ರರಿಂದ ಮರಣವನ್ನು ಹೊಂದುವಿ ಎಂಬ ಶಾಪವನ್ನು ಕೊಡುವುದರಿಂದಲೂ ಮತ್ತು ದೇವರ್ಷಿಗಳ ವಚನದಿಂದಲೂ ಭೀಷ್ಮರ ಜಯ ಮತ್ತು ಪರಶುರಾಮರ ಛೇದ ಭೇದಾದಿ ದರ್ಶನವು ಅಸುರಜನ ಮೋಹನಾರ್ಥವಾಗಿ ಎಂದು ತಿಳಿಯಬೇಕು. ಮತ್ತು ಮುಂದೆ ಬರಲಿರುವ ದುಷ್ಟವಾದ ಫಲದ ಸಾಧನೆಗಾಗಿಯೂ ಎಂದು ತಿಳಿಯಬೇಕು– ಲಕ್ಷ್ಮಲಂಕಾರ).

ಅರ್ಜುನಃ ಪಾಂಡವಶ್ರೇಷ್ಠಃ ಪುರಂದರಸುತೋ ಬಲೀ ॥೧೯॥

ನರಃ ಪ್ರಜಾಪತಿರ್ವೀರಃ ಪೂರ್ವದೇವಃ ಸನಾತನಃ ॥೨೦॥

ಸವ್ಯಸಾಚೀತಿ ವಿಖ್ಯಾತಃ ತ್ರಿಷು ಲೋಕೇಷು ಸತ್ಯವಾನ್ ॥೨೧॥

ಭೀಷ್ಮಮೃತ್ಯುರ್ಯಥಾಕಾಲಂ ವಿಹಿತೋ ವೈ ಸ್ವಯಂಭುವಾ ॥೨೨॥

ಪಾಂಡವ ಶ್ರೇಷ್ಠನಾದ ಅರ್ಜುನನು ಬಲಿಷ್ಠನಾದವನು ಮತ್ತು ಇಂದ್ರನ ಪುತ್ರ. ವೀರನಾದ ಅವನು ನರ ಎನಿಸುತ್ತಾನೆ. ಅವನು ದೇವತೆಗಳಲ್ಲಿ ಶ್ರೇಷ್ಠನಾದವನು. ಮೂರುಲೋಕಗಳಲ್ಲಿಯೂ ಸವ್ಯಸಾಚಿ ಎಂದು ಪ್ರಖ್ಯಾತನಾದ ಅವನು ಸತ್ಯಸಂಧನಾದವನು. ಬ್ರಹ್ಮದೇವರು ಉಚಿತ (ಯೋಗ್ಯ)ವಾದ ಕಾಲದಲ್ಲಿ ಅವನನ್ನು ಭೀಷ್ಮಮೃತ್ಯುವೆಂದು ವಿಧಾನ ಮಾಡಿದ್ದಾರೆ (ಎಂದು ಹೇಳಿದರು).

ಭೀಷ್ಮಃ

ಏವಮುಕ್ತಃ ಸ ಪಿತೃಭಿಃ ಪಿತೄನ್ ರಾಮೋಽಬ್ರವೀದಿದಮ್ ॥೨೩॥

ನಾಹಂ ಯುಧಿ ನಿವರ್ತೇಯಮಿತಿ ಮೇ ವ್ರತಮಾಹಿತಮ್ ।
ನ ನಿವರ್ತಿತಪೂರ್ವಶ್ಚ ಕದಾಚಿದ್ ರಣಮೂರ್ಧನಿ ॥೨೪॥

ನಿವರ್ತ್ಯತಾಮಾಪಗೇಯಃ ಕಾಮಂ ಯುದ್ಧಾತ್ ಪಿತಾಮಹಾಃ ।
ನ ತ್ವಹಂ ವಿನಿವರ್ತಿಷ್ಯೇ ಯುದ್ಧಾದಸ್ಮಾತ್ ಕಥಂಚನ ॥೨೫॥

ಭೀಷ್ಮ– ಪಿತೃಗಳಿಂದ ಹೀಗೆ ಹೇಳಲ್ಪಟ್ಟ ಪರಶುರಾಮರು ಅವರನ್ನು ಕುರಿತು, ನಾನು ಯುದ್ಧದಿಂದ ಹಿಂದಿರುಗುವುದಿಲ್ಲ. ಇದು ನಾನು ಧರಿಸಿರುವ ವ್ರತ ಮತ್ತು ಹಿಂದೆಂದೂ ನಾನು ರಣರಂಗದಿಂದ ಹಿಂದೆ ಸರಿದಿಲ್ಲ. ಆದ್ದರಿಂದ ಎಲೈ ಪಿತಾಮಹರೇ, ನೀವು ಭೀಷ್ಮನನ್ನೇ ಯುದ್ಧದಿಂದ ಹಿಂದಿರುಗುವಂತೆ ಮಾಡಿ. ನಾನು ಮಾತ್ರ ಈ ಯುದ್ಧದಿಂದ ಹಿಂದೆ ಸರಿಯುವುದಿಲ್ಲ ಎಂದು ಹೇಳಿದರು.

ತತಸ್ತೇ ಮುನಯೋ ರಾಜನ್ನೃಚೀಕಪ್ರಮುಖಾಸ್ತದಾ ।
ನಾರದೇನೈವ ಸಹಿತಾಃ ಸಮಾಗಮ್ಯೇದಮಬ್ರುವನ್ ॥೨೬॥

ನಿವರ್ತಸ್ವ ರಣಾತ್ ತಾತ ಮಾನಯಸ್ವ ದ್ವಿಜೋತ್ತಮಮ್ ॥೨೭॥

ನೇತ್ಯವೋಚಮಹಂ ತಾಂಶ್ಚ ಕ್ಷತ್ರಧರ್ಮವ್ಯಪೇಕ್ಷಯಾ ॥೨೮॥

ಆಗ ಎಲೈ ರಾಜನೇ, ಋಚೀಕ ಮೊದಲಾದ ಋಷಿಗಳು ನಾರದರಿಂದ ಕೂಡಿಕೊಂಡು ನನ್ನ ಬಳಿಗೆ ಬಂದು, ಪ್ರೀತಿಪಾತ್ರನೇ, ಯುದ್ಧದಿಂದ ಹಿಂದಿರುಗು. ಬ್ರಾಹ್ಮಣಶ್ರೇಷ್ಠರಾದ ಪರಶುರಾಮರನ್ನು ಗೌರವಿಸು ಎಂದು ಹೇಳಿದರು. ನಾನು ಕ್ಷತ್ರಿಯ ಧರ್ಮವನ್ನು ಗಮನಿಸಿ, ಅದು ಸಾಧ್ಯವಿಲ್ಲ ಎಂದು ಹೇಳಿದೆನು.

ಮಮ ವ್ರತಮಿದಂ ಲೋಕೇ ನಾಹಂ ಯುದ್ಧಾತ್ ಕದಾಚನ ।
ವಿಮುಖೋ ವಿನಿವರ್ತೇಯಂ ಪೃಷ್ಠತೋಽಭ್ಯಾಹತಃ ಶರೈಃ ॥೨೯॥

ಇದು ನನ್ನ ವ್ರತ. ನಾನು ಎಂದೂ ಹಿಂದಿರುಗಿ ಬೆನ್ನಿನಲ್ಲಿ ಬಾಣಗಳನ್ನು ಹೊಡೆಯಲ್ಪಡುವುದಿಲ್ಲ.

ನಾಹಂ ಲೋಭಾನ್ನ ಕಾರ್ಪಣ್ಯಾನ್ನ ಭಯಾನ್ನಾರ್ಥಕಾರಣಾತ್ ।
ತ್ಯಜೇಯಂ ಶಾಶ್ವತಂ ಧರ್ಮಮಿತಿ ಮೇ ನಿಶ್ಚಿತಾ ಮತಿಃ ॥೩೦॥

ನಾನು ಲೋಭದಿಂದಾಗಲೀ, ದೈನ್ಯದಿಂದಾಗಲೀ, ಭಯದಿಂದಾಗಲೀ, ದ್ರವ್ಯಲಾಭದ ಉದ್ದೇಶದಿಂದಾಗಲೀ ಶಾಶ್ವತವಾದ ಕ್ಷತ್ರಿಯ ಧರ್ಮವನ್ನು ಬಿಡುವುದಿಲ್ಲ ಎಂಬುದು ನನ್ನ ನಿಶ್ಚಿತವಾದ ಅಭಿಪ್ರಾಯ (ಎಂದು ಹೇಳಿದೆನು).

ತತಸ್ತೇ ಮುನಯಃ ಸರ್ವೇ ನಾರದಪ್ರಮುಖಾ ನೃಪ ।
ಭಾಗೀರಥೀ ಚ ಮೇ ಮಾತಾ ರಣಮಧ್ಯಂ ಪ್ರಪೇದಿರೇ ॥೩೧॥

ಎಲೈ ರಾಜನೇ, ಆಗ ನಾರದರೇ ಮೊದಲಾದ ಎಲ್ಲ ಋಷಿಗಳೂ ಮತ್ತು ನನ್ನ ತಾಯಿಯಾದ ಗಂಗೆಯೂ ಯುದ್ಧದಲ್ಲಿ ನಮ್ಮಿಬ್ಬರ ಮಧ್ಯದಲ್ಲಿ ನಿಂತರು.

ತಥೈವಾತ್ತಶರೋ ಧನ್ವೀ ತಥೈವ ದೃಢವಿಕ್ರಮಃ ।
ಸ್ಥಿತೋಽಹಮಾಹವೇ ಯೋದ್ಧುಂ ತತಸ್ತೇ ರಾಮಮಬ್ರುವನ್ ॥೩೨॥

ಸಮೇತ್ಯ ಸಹಿತಾ ಭೂಯಃ ಸಮರೇ ಭೃಗುನಂದನಮ್ ॥೩೩॥

ನಾನು ಹಾಗೆಯೇ ದೃಢವಾದ ಪರಾಕ್ರಮವುಳ್ಳವನಾಗಿ ಧನುಸ್ಸನ್ನು ಹಿಡಿದು, ಬಾಣಗಳನ್ನು ಹಿಡಿದು ಯುದ್ಧದಲ್ಲಿ ಅಲುಗಾಡದೇ ನಿಂತೆನು. ಆಗ ಅವರೆಲ್ಲರೂ ಭೃಗುನಂದನರಾದ ಪರಶುರಾಮರನ್ನು ಒಟ್ಟಿಗೆ ಸಮೀಪಿಸಿ ಪುನಃ ಮಾತನಾಡಿದರು.

ನವನೀತಂ ಹಿ ಹೃದಯಂ ವಿಪ್ರಾಣಾಂ ಶಾಮ್ಯ ಭಾರ್ಗವ ।
ರಾಮ ರಾಮ ನಿವರ್ತಸ್ವ ಯುದ್ಧಾದಸ್ಮಾದ್ ದ್ವಿಜೋತ್ತಮ ॥೩೪॥

ಅವಧ್ಯೋ ಹಿ ತ್ವಯಾ ಭೀಷ್ಮಸ್ತ್ವಂ ಚ ಭೀಷ್ಮಸ್ಯ ಭಾರ್ಗವ ॥೩೫॥

ಎಲೈ ಪರಶುರಾಮರೇ, ಬ್ರಾಹ್ಮಣರ ಮನಸ್ಸು ಬೆಣ್ಣೆಯಂತೆ. ಆದ್ದರಿಂದ ಶಾಂತರಾಗಿ. ಎಲೈ ಬ್ರಾಹ್ಮಣಶ್ರೇಷ್ಠರೇ, ಯುದ್ಧದಿಂದ ನಿವೃತ್ತರಾಗಿ. ಎಲೈ ಭಾರ್ಗವರೇ, ನಿಮ್ಮಿಂದ ಭೀಷ್ಮನೂ ವಧ್ಯನಲ್ಲ. ನೀವೂ ಸಹ ಭೀಷ್ಮರಿಂದ ವಧ್ಯರಲ್ಲ ಎಂದು ಹೇಳಿದರು.

ಏವಂ ಬ್ರುವಂತಸ್ತೇ ಸರ್ವೇ ಪ್ರತಿರುದ್ಧ್ಯ ರಣಾಜಿರಮ್ ।
ವಾರಯಾಂಚಕ್ರಿರೇ ಶಸ್ತ್ರಂ ಪಿತರೋ ಭೃಗುನಂದನಮ್ ॥೩೬॥

ಹೀಗೆ ಮಾತನಾಡುತ್ತಾ ಆ ಪಿತೃಗಳೆಲ್ಲರೂ ಯುದ್ಧಭೂಮಿಯಲ್ಲಿ ಅಡ್ಡ ನಿಂತು ಪರಶುರಾಮರನ್ನೂ ಮತ್ತು ಶಸ್ತ್ರವನ್ನೂ ನಿವಾರಿಸಿದರು.

ತತೋಽಹಂ ಪುನರೇವಾಥ ತಾನಷ್ಟೌ ಬ್ರಹ್ಮವಾದಿನಃ ।
ಅದ್ರಾಕ್ಷಂ ದೀಪ್ಯಮಾನಾನ್ ವೈ ಗ್ರಹಾನಷ್ಟಾವಿವೋದಿತಾನ್ ॥೩೭॥

ಆಗ ನಾನು ಪುನಃ ಎಂಟು ಗ್ರಹಗಳಂತೆ ಶೋಭಿಸುವ ಆ ಎಂಟು ಬ್ರಹ್ಮವಾದಿಗಳನ್ನು ನೋಡಿದೆನು.

ತೇ ಮಾಂ ಸಪ್ರಣಯಂ ವಾಕ್ಯಮಬ್ರುವನ್ ಸಮರೇ ಸ್ಥಿತಮ್ ॥೩೮॥

ಪ್ಯೇಹಿ ರಾಮಂ ಮಹಾಬಾಹೋ ಗುರುಂ ಲೋಕಹಿತಂ ಕುರು ॥೩೯॥

ಆಗ ಅವರು ಪ್ರೀತಿಯಿಂದ ನನ್ನನ್ನು ಕುರಿತು– ಮಹಾಬಾಹುವೇ, ಯುದ್ಧದಲ್ಲಿ ಎದುರಾಗಿರುವ ನಿನ್ನ ಗುರುಗಳಾದ ಪರಶುರಾಮರಿಗೆ ಶರಣಾಗತನಾಗು. ಲೋಕಹಿತವನ್ನು ಮಾಡು ಎಂದು ಹೇಳಿದರು.

ಭೀಷ್ಮಃ

ದೃಷ್ಟ್ವಾ ನಿವರ್ತಿತಂ ರಾಮಂ ಸುಹೃದ್ವಾಕ್ಯೇನ ತೇನ ವೈ ।
ಲೋಕಾನಾಂ ಚ ಹಿತಂ ಕುರ್ವನ್ನಹಮಪ್ಯಾದದೇ ವಚಃ ॥೪೦॥

ಭೀಷ್ಮ– ಹಿಂದೆ ಸರಿದ ಪರಶುರಾಮರನ್ನು ನೋಡಿ ಮತ್ತು ಆ ಹಿತೈಷಿಗಳ ವಚನದಿಂದಲೂ ಪ್ರೇರಿತನಾಗಿ ಲೋಕಗಳಿಗೆ ಹಿತವನ್ನು ಮಾಡಲು ಬಯಸಿ, ಅವರ ಮಾತನ್ನು ಸ್ವೀಕರಿಸಿದೆನು.

ತತೋಽಹಂ ರಾಮಮಾಸಾದ್ಯ ವವಂದೇ ಭೃಶವಿಕ್ಷತಃ ।
ರಾಮಶ್ಚಾಪ್ಯುತ್ಸ್ಮಯನ್ ಪ್ರೇಮ್ಣಾ ಮಾಮುವಾಚ ಮಹಾತಪಾಃ ॥೪೧॥

ತ್ವತ್ಸಮೋ ನಾಸ್ತಿ ಲೋಕೇಽಸ್ಮಿನ್ ಕ್ಷತ್ರಿಯಃ ಪೃಥಿವೀಚರಃ ।
ಗಮ್ಯತಾಂ ಭೀಷ್ಮ ಯುದ್ಧೇಽಸ್ಮಿಂಸ್ತೋಷಿತೋಽಹಂ ಭೃಶಂ ತ್ವಯಾ॥೪೨॥

ಆಗ ನಾನು ಎಲ್ಲ ಕಡೆಗಳಲ್ಲಿಯೂ ಗಾಯಗೊಂಡು ಪರಶುರಾಮರ ಬಳಿಗೆ ಹೋಗಿ ಅವರಿಗೆ ನಮಸ್ಕಾರವನ್ನು ಮಾಡಿದೆನು. ಮಹಾತಪಸ್ವಿಗಳಾದ ಪರಶುರಾಮರು ಪ್ರೀತಿಯಿಂದ ನಗುತ್ತಾ ನನ್ನನ್ನು ಕುರಿತು, ಈ ಭೂಮಿಯಲ್ಲಿ ನಿನಗೆ ಸಮಾನನಾದ ಇನ್ನೊಬ್ಬ ಕ್ಷತ್ರಿಯನಿಲ್ಲ. ಭೀಷ್ಮನೇ ಹೋಗು, ಯುದ್ಧದಲ್ಲಿ ನನ್ನನ್ನು ನೀನು ಬಹಳವಾಗಿ ಸಂತೋಷಪಡಿಸಿದ್ದೀಯೆ ಎಂದು ಹೇಳಿದರು.

ಭೀಷ್ಮಃ

ಮಮ ಚೈವ ಸಮಕ್ಷಂ ತಾಂ ಕನ್ಯಾಮಾಹೂಯ ಭಾರ್ಗವಃ ।
ಉಕ್ತವಾನ್ ದೀನಯಾ ವಾಚಾ ಮಧ್ಯೇ ತೇಷಾಂ ತಪಸ್ವಿನಾಮ್ ॥೪೩॥

ಭೀಷ್ಮ– ಪರಶುರಾಮರು ನನ್ನ ಎದುರಿನಲ್ಲಿಯೇ ಆ ಕನ್ಯೆಯನ್ನು ಕರೆದು, ಆ ತಪಸ್ವಿಗಳ ಮಧ್ಯದಲ್ಲಿ ದೈನ್ಯದಿಂದ ಕೂಡಿದ ಮಾತಿನಿಂದ ಹೀಗೆ ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಸಪ್ತಾಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೆಂಟನೆಯ ಅಧ್ಯಾಯ

ಪರಶುರಾಮರ ಅಪ್ಪಣೆಯನ್ನು ಪಡೆದು ಹೊರಟ ಅಂಬೆಯಿಂದ ಪುಣ್ಯಾಶ್ರಮಗಳಲ್ಲಿ ದುಶ್ಚರ ತಪಾಚರಣ.

ರಾಮಃ

ಪ್ರತ್ಯಕ್ಷಮೇತಲ್ಲೋಕಾನಾಂ ಸರ್ವೇಷಾಮೇವ ಭಾಮಿನಿ ।
ಯಥಾಶಕ್ತ್ಯಾ ಮಯಾ ಯುದ್ಧಂ ಕೃತಂ ವೈ ಪೌರುಷಂ ಮಹತ್ ॥೧॥

ರಾಮ– ಎಲೌ ಭಾಮಿನಿಯೇ, ನಾನು ನನ್ನ ಶಕ್ತಿಗೆ ಅನುಗುಣವಾಗಿ ಯುದ್ಧವನ್ನು ಮಾಡಿ ದೊಡ್ಡ ಪೌರುಷವನ್ನು ತೋರಿಸಿದ್ದು ಎಲ್ಲ ಲೋಕಕ್ಕೂ ತಿಳಿದ ವಿಷಯ.

ನ ಚೈವಮಪಿ ಶಕ್ತೋಽಸ್ಮಿ ಭೀಷ್ಮಂ ಶಸ್ತ್ರಭೃತಾಂ ವರಮ್ ।
ವಿಶೇಷಯಿತುಮತ್ಯರ್ಥಮುತ್ತಮಾಸ್ತ್ರಾಣಿ ದರ್ಶಯನ್ ॥೨॥

ಉತ್ತಮಾಸ್ತ್ರವನ್ನು ಪ್ರದರ್ಶಿಸಿ ಇಷ್ಟು ಪ್ರಯತ್ನಪಟ್ಟರೂ ಸಹ ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಭೀಷ್ಮನನ್ನು ಅತಿಶಯಿಸಲು (ಮೀರಲು) ನನಗೆ ಸಾಧ್ಯವಾಗಲಿಲ್ಲ.

ಏಷಾ ಮೇ ಪರಮಾ ಶಕ್ತಿರೇತನ್ಮೇ ಪರಮಂ ಬಲಮ್ ।
ಯಥೇಷ್ಟಂ ಗಮ್ಯತಾಂ ಭದ್ರೇ ಕಿಮನ್ಯದ್ವಾ ಕರೋಮಿ ತೇ ॥೩॥

ಇದು ನನ್ನ ಪರಮ ಶಕ್ತಿ, ಇದು ನನ್ನ ಪರಮ ಬಲ. ಮಂಗಳಸ್ವರೂಪಳೇ, ನೀನು ಇಷ್ಟ ಬಂದಂತೆ ಹೋಗು ಅಥವಾ ನಿನಗೆ ಬೇರೆ ಏನನ್ನು ಮಾಡಲಿ?

ಭೀಷ್ಮಮೇವ ಪ್ರಪದ್ಯಸ್ವ ನ ತೇಽನ್ಯಾ ವಿದ್ಯತೇ ಗತಿಃ ।
ನಿರ್ಜಿತೋ ಹ್ಯಸ್ಮಿ ಭೀಷ್ಮೇಣ ಮಹಾಸ್ತ್ರಾಣಿ ಪ್ರಮುಂಚತಾ ॥೪॥

ಭೀಷ್ಮನನ್ನೇ ಶರಣು ಹೊಂದು. ನಿನಗೆ ಬೇರೆ ಗತಿ ಇಲ್ಲ. ಏಕೆಂದರೆ ನಾನು ಮಹಾಸ್ತ್ರಗಳನ್ನು ಪ್ರಯೋಗಿಸುವ ಭೀಷ್ಮನಿಂದ ಪರಾಜಿತನಾಗಿದ್ದೇನೆ.

ಏವಮುಕ್ತ್ವಾ ತತೋ ರಾಮೋ ವಿನಿಃಶ್ವಸ್ಯ ಮಹಾಮನಾಃ ।
ತೂಷ್ಣೀಮಾಸೀತ್ ತತಃ ಕನ್ಯಾ ಪ್ರೋವಾಚ ಭೃಗುನಂದನಮ್ ॥೫॥

ಹೀಗೆ ಹೇಳಿ, ಧೈರ್ಯಶಾಲಿಗಳಾದ ಪರಶುರಾಮರು ನಿಟ್ಟುಸಿರನ್ನು ಬಿಟ್ಟು ಸುಮ್ಮನಾದರು. ಆಗ ಆ ಕನ್ಯೆಯು ಭೃಗುನಂದರರ್ನು ಕುರಿತು ಮಾತನಾಡಿದಳು.

ಭಗವನ್ನೇವಮೇವೈತದ್ ಯಥಾಽಽಹ ಭಗವಾಂಸ್ತಥಾ ।
ಅಜೇಯೋ ಯುಧಿ ಭೀಷ್ಮೋಽಯಮಪಿ ದೇವೈರುದಾರಧೀಃ ॥೬॥

ಯಥಾಶಕ್ತಿ ಯಥೋತ್ಸಾಹಂ ಮಮ ಕಾರ್ಯಂ ಕೃತಂ ತ್ವಯಾ ॥೭॥

ಪೂಜ್ಯರೇ, ನೀವು ಹೇಳಿದಂತೆಯೇ ಸರಿ. ಪೂಜ್ಯರೇ, ಉದಾರ ಮನಸ್ಸುಳ್ಳ ಭೀಷ್ಮನು ದೇವತೆಗಳಿಂದಲೂ ಜಯಿಸಲು ಅಸಾಧ್ಯನಾದವನು. ನೀವಾದರೂ ನಿಮ್ಮ ಶಕ್ತಿಗೆ ಮತ್ತು ಉತ್ಸಾಹಕ್ಕೆ ಅನುಗುಣವಾಗಿ ನನ್ನ ಕಾರ್ಯವನ್ನು ಮಾಡಿದ್ದೀರಿ.

ಅನಿವಾರ್ಯ ರಣೇ ವೀರ್ಯಮಸ್ತ್ರಾಣಿ ವಿವಿಧಾನಿ ಚ ।
ನ ಚೈವ ಶಕ್ಯತೇ ಯುದ್ಧೇ ವಿಶೇಷಯಿತುಮಂತತಃ ॥೮॥

ನ ಚಾಹಮೇನಂ ಯಾಸ್ಯಾಮಿ ಪುನರ್ಭೀಷ್ಮಂ ಕಥಂಚನ ॥೯॥

ನಿಮ್ಮ ಪರಾಕ್ರಮವನ್ನು ಅಥವಾ ಅಸ್ತ್ರಗಳನ್ನು ಯಾವುದನ್ನೂ ಮುಚ್ಚು ಮರೆ ಮಾಡದೆ ಯುದ್ಧವನ್ನು ಮಾಡಿದರೂ ಕೊನೆಗೆ ಭೀಷ್ಮನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ನಾನು ಮಾತ್ರ ಪುನಃ ಆ ಭೀಷ್ಮನ ಬಳಿಗೆ ಹೋಗುವುದಿಲ್ಲ.

ಗಮಿಷ್ಯಾಮಿ ತು ತತ್ರಾಹಂ ಯತ್ರ ಭೀಷ್ಮಂ ತಪೋಧನ ।
ಸಂಗರೇ ಪಾತಯಿಷ್ಯಾಮಿ ಸ್ವಯಮೇವ ಭೃಗೂದ್ವಹ ॥೧೦॥

ಎಲೈ ತಪೋಧನರೇ, ಭೃಗೂದ್ವಹರೇ, ಎಲ್ಲಿ ಹೋದರೆ ನಾನು ಸ್ವತಃ ಭೀಷ್ಮನನ್ನು ಯುದ್ಧದಲ್ಲಿ ವಿನಾಶ ಮಾಡುವೆನೋ ಅಂತಹ ಸ್ಥಳಕ್ಕೆ ಹೋಗುವೆನು (ಎಂದು ಹೇಳಿದಳು).

ಏವಮುಕ್ತ್ವಾ ಯಯೌ ಕನ್ಯಾ ರೋಷವ್ಯಾಕುಲಲೋಚನಾ ।
ತಪಸೇ ಧೃತಸಂಕಲ್ಪಾ ಸಾ ಮೇ ಚಿಂತಯತೀ ವಧಮ್ ॥೧೧॥

ಹೀಗೆ ಹೇಳಿ ರೋಷದಿಂದ ದೂಷಿತವಾದ ಕಣ್ಣುಳ್ಳ ಆ ಕನ್ಯೆಯು ತಪಸ್ಸನ್ನು ಮಾಡುವುದರಲ್ಲಿ ದೃಢನಿಶ್ಚಯವನ್ನು ಮಾಡಿ, ನನ್ನ ವಧೆಯನ್ನು ಚಿಂತಿಸುತ್ತಾ ಅಲ್ಲಿಂದ ಹೊರಟಳು.

ತತೋ ಮಹೇಂದ್ರಸಹಿತೈರ್ಮುನಿಭಿರ್ಭೃಗುಸತ್ತಮಃ ।
ಯಥಾಗತಂ ತಥಾ ಸೋಽಗಾನ್ಮಾಮುಪಾಮಂತ್ರ್ಯ ಭಾರತ ॥೧೨॥

ಅನಂತರ ಎಲೈ ಭಾರತನೇ, ಭೃಗುಶ್ರೇಷ್ಠರಾದ ಪರಶುರಾಮರೂ ಸಹ ನನ್ನಿಂದ ಬೀಳ್ಕೊಡಲ್ಪಟ್ಟು ತಾವು ಬಂದಂತೆಯೇ ಮಹೇಂದ್ರ ಸಹಿತರಾದ ಋಷಿಗಳ ಜೊತೆಯಲ್ಲಿ ಹೊರಟು ಹೋದರು.

ತತೋ ರಥಂ ಸಮಾರುಹ್ಯ ಸ್ತೂಯಮಾನೋ ದ್ವಿಜಾತಿಭಿಃ ।
ಪ್ರವಿಶ್ಯ ನಗರಂ ಮಾತ್ರೇ ಸತ್ಯವತ್ಯೈ ನ್ಯವೇದಯಮ್ ॥೧೩॥

ಯಥಾವೃತ್ತಂ ಮಹಾರಾಜ ಸಾ ಚ ಮಾಂ ಪ್ರತ್ಯನಂದತ ।
ಪುರುಷಾಂಶ್ಚಾದಿಶತ್ ಪ್ರಾಜ್ಞಾನ್ ಕನ್ಯಾವೃತ್ತಾಂತಕರ್ಮಣಿ ॥೧೪॥

ಅನಂತರ ನಾನು ರಥವನ್ನು ಏರಿ, ಬ್ರಾಹ್ಮಣರಿಂದ ಸ್ತೋತ್ರ ಮಾಡಲ್ಪಟ್ಟವನಾಗಿ, ನಗರವನ್ನು ಪ್ರವೇಶಿಸಿ, ತಾಯಿಯಾದ ಸತ್ಯವತಿಗೆ ಎಲ್ಲವನ್ನೂ ನಡೆದಂತೆಯೇ, ನಿವೇದಿಸಿದೆನು. ಎಲೈ ಮಹಾರಾಜನೇ, ಅವಳು ನನ್ನನ್ನು ಅಭಿನಂದಿಸಿದಳು ಮತ್ತು ಪ್ರಾಜ್ಞರಾದ ಪುರುಷರನ್ನು ಕನ್ಯೆಯ ವೃತ್ತಾಂತವನ್ನು ತಿಳಿಯಲು ನಿಯೋಜಿಸಿದಳು.

ದಿವಸೇ ದಿವಸೇ ಹ್ಯಸ್ಯಾ ಗತಿಜಲ್ಪಿತಚೇಷ್ಟಿತಮ್ ।
ಪ್ರತ್ಯಾಹರಂಶ್ಚ ಮೇ ಯುಕ್ತಾಃ ಸ್ಥಿತಾಃ ಪ್ರಿಯಹಿತೇ ಮಮ ॥೧೫॥

ನನ್ನ ಪ್ರಿಯ, ಹಿತಗಳಲ್ಲಿ ಆಸಕ್ತರಾದ, ನಿಷ್ಠಾವಂತರಾದ ನನ್ನ ಗೂಢಚಾರರು ಪ್ರತಿದಿವಸದಲ್ಲಿಯೂ ಅವಳ ಗಮನ, ಮಾತು, ಕ್ರಿಯೆ ಎಲ್ಲದರ ವೃತ್ತಾಂತವನ್ನು ನನಗೆ ತಂದುಕೊಡುತ್ತಿದ್ದರು.

ಯದೈವ ಹಿ ವನಂ ಪ್ರಾಯಾತ್ ಸಾ ಕನ್ಯಾ ತಪಸೇ ಧೃತಾ ।
ತಥೈವ ವ್ಯಥಿತೋ ದೀನೋ ಗತಚೇತಾ ಇವಾಭವಮ್ ॥೧೬॥

ಯಾವಾಗ ಆ ಕನ್ಯೆಯು ತಪಸ್ಸನ್ನು ನಿಶ್ಚಯ ಮಾಡಿ ಕಾಡಿಗೆ ಹೊರಟಳೋ ಆಗಲೇ ನಾನು ವ್ಯಥೆಯಿಂದಲೂ, ದೈನ್ಯದಿಂದಲೂ ಕೂಡಿ ಮನಸ್ಸಿನ ಉತ್ಸಾಹವನ್ನು ಕಳೆದು ಕೊಂಡೆನು.

ನ ಹಿ ಮಾಂ ಕ್ಷತ್ರಿಯಃ ಕಶ್ಚಿದ್ ವೀರ್ಯೇಣ ವಿಜಯೇದ್ ಯುಧಿ ।
ಋತೇ ಬ್ರಹ್ಮವಿದಸ್ತಾತ ತಾಪಸಾನ್ ಸಂಶಿತವ್ರತಾನ್ ॥೧೭॥

ಎಲೈ ಪ್ರೀತಿಪಾತ್ರನೇ, ನಾನು ರಥಧಾರಿಗಳಾದ ತಪಸ್ವಿಗಳಾದ ಬ್ರಹ್ಮ, ಬ್ರಾಹ್ಮಣರನ್ನು ಬಿಟ್ಟು ಬೇರೆ ಯಾವ ಕ್ಷತ್ರಿಯರಿಂದಲೂ ಯುದ್ಧದಲ್ಲಿ ಸೋಲಿಸಲ್ಪಡುವುದಿಲ್ಲ.

ಅಪಿ ಚೈತನ್ಮಯಾ ರಾಜನ್ ನಾರದೇ ನಿವೇದಿತಮ್ ।
ವ್ಯಾಸೇ ಚೈವ ತಥಾ ಕಾರ್ಯಂ ತೌ ಚೋಭೌ ಮಾಮವೋಚತಾಮ್ ॥

ನ ವಿಷಾದಸ್ತ್ವಯಾ ಕಾರ್ಯೋ ಭೀಷ್ಮ ಕಾಶಿಸುತಾಂ ಪ್ರತಿ ।
ದೈವಂ ಪುರುಷಕಾರೇಣ ಕೋ ನಿವರ್ತಿತುಮುತ್ಸಹೇತ್ ॥೧೯॥

ಎಲೈ ರಾಜನೇ, ನಾನು ಈ ವಿಷಯವನ್ನು ನಾರದರಿಗೂ ಮತ್ತು ವ್ಯಾಸರಿಗೂ ನಿವೇದಿಸಿದೆನು. ಅವರಿಬ್ಬರೂ ನನ್ನನ್ನು ಕುರಿತು ಮುಂದಿನ ಕಾರ್ಯದ ವಿಷಯದಲ್ಲಿ 'ಭೀಷ್ಮನೇ, ಕಾಶಿಸುತೆಯ ವಿಷಯದಲ್ಲಿ ವಿಷಾದವನ್ನು ಮಾಡಬೇಡ. ಪುರುಷ ಪ್ರಯತ್ನದಿಂದ ದೈವಸಂಕಲ್ಪವನ್ನು ವ್ಯತ್ಯಾಸ ಮಾಡಲು ಯಾವನು ಪ್ರಯತ್ನ ಪಡುತ್ತಾನೆ' ಎಂದು ಹೇಳಿದರು.

ಸಾ ಕನ್ಯಾ ತು ಮಹಾರಾಜ ಪ್ರವಿಶ್ಯಾಶ್ರಮಮಂಡಲಮ್ ।
ಯಮುನಾತೀರಮಾಶ್ರಿತ್ಯ ತಪಸ್ತೇಪೇऽತಿಮಾನುಷಮ್ ॥೨೦॥

ಎಲೈ ಮಹಾರಾಜನೇ, ಆ ಕನ್ಯೆಯು ಆಶ್ರಮವನ್ನು ಪ್ರವೇಶಿಸಿ, ಯಮುನಾ ತೀರದಲ್ಲಿ ನೆಲೆಸಿ, ಮನುಷ್ಯರಿಗೆ ಮೀರಿದ ತಪಸ್ಸನ್ನು ಮಾಡಿದಳು.

ನಿರಾಹಾರಾ ಕೃಶಾ ರೂಕ್ಷಾ ಜಟಿಲಾ ಮಲಪಂಕಿನೀ ।
ಷಣ್ಮಾಸಾನ್ ವಾಯುಭಕ್ಷಾ ಚ ಸ್ಥಾಣುಭೂತಾ ತಪೋಧನಾ ॥೨೧॥

ಯಮುನಾಜಲಮಾಶ್ರಿತ್ಯ ಸಂವತ್ಸರಮಥಾಪರಮ್ ।
ಉದವಾಸಂ ನಿರಾಹಾರಾ ಪಾರಯಾಮಾಸ ಭಾಮಿನೀ ॥೨೨॥

ಆಹಾರವನ್ನು ಸೇವಿಸದೆ ಕೃಶಳಾಗಿ, ಒರಟಾಗಿ, ಜಟೆಗಳನ್ನು ಧರಿಸಿ, ದೇಹದ ಮೇಲೆ ಕಶ್ಮಲವನ್ನು ಹೊಂದಿ, ಆರುತಿಂಗಳುಗಳ ಕಾಲ ವಾಯುಭಕ್ಷಳಾಗಿ ತಪೋಧನಳಾದ ಅವಳು ಮರದ ಬುಡದಂತೆ ನಿಂತಳು. ಅನಂತರ ಒಂದು ವರ್ಷದ ಕಾಲ ಕೋಪಗೊಂಡಿದ್ದ ಅವಳು ನಿರಾಹಾರಳಾಗಿ ಯಮುನಾನದಿಯ ಜಲದಲ್ಲಿ ನಿಂತು ಉದವಾಸವನ್ನು ಮಾಡಿ ತಪಸ್ಸನ್ನು ಪೂರ್ಣಗೊಳಿಸಿದಳು.

ಶೀರ್ಣಪರ್ಣೇನ ಚೈಕೇನ ಧಾರಯಾಮಾಸ ಸಾ ಪರಮ್ ।
ಸಂವತ್ಸರಂ ತೀವ್ರಕೋಪಾತ್ ಪಾದಾಂಗುಷ್ಠಾಗ್ರವಿಷ್ಠಿತಾ ॥೨೩॥

ಅವಳು ತೀವ್ರಕೋಪದಿಂದ ಪಾದಾಂಗುಷ್ಠದ ಮೇಲೆ ಭೂಮಿಯ ಮೇಲೆ ನಿಂತು ಇನ್ನೊಂದು ಸಂವತ್ಸರದ ಕಾಲ ಉದುರಿದ ಎಲೆಗಳನ್ನು ಸೇವಿಸಿ ಪ್ರಾಣವನ್ನು ಧರಿಸಿದಳು.

ಏವಂ ದ್ವಾದಶವರ್ಷಾಣಿ ತಾಪಯಾಮಾಸ ರೋದಸೀ ।
ನಿವರ್ತ್ಯಮಾನಾ ಪಿತ್ರಾ ಚ ಜ್ಞಾತಿಭಿರ್ನೈವ ಶಕ್ಯತೇ ॥೨೪॥

ಹೀಗೆ ಹನ್ನೆರಡು ವರ್ಷಗಳ ಕಾಲ ಭೂಮಿ-ಅಂತರಿಕ್ಷಗಳನ್ನು ಅವಳು ತಾಪಕ್ಕೆ ಈಡುಮಾಡಿದಳು. ತಂದೆಯೂ ಮತ್ತು ಬಂಧುಗಳೂ ಅವಳನ್ನು ಹಿಂದೆ ತಿರುಗಿಸಲು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ.

ತತೋಽಗಮದ್ ವತ್ಸಭೂಮಿಂ ಸಿದ್ಧಚಾರಣಸೇವಿತಾಮ್ ।
ಆಶ್ರಮಂ ಪುಣ್ಯಶೀಲಾನಾಂ ತಾಪಸಾನಾಂ ಮಹಾತ್ಮನಾಮ್ ॥೨೫॥

ಅನಂತರ ಅವಳು ಸಿದ್ಧಚಾರಣ ಸೇವಿತವಾದ, ಪುಣ್ಯಶೀಲರಾದ, ಮಹಾತ್ಮರಾದ ತಾಪಸರ ಆಶ್ರಮವಿರುವ ವತ್ಸ ಎಂಬ ಋಷಿಯ ಪ್ರದೇಶಕ್ಕೆ ಹೋದಳು.

ತತ್ರ ಪುಣ್ಯೇಷು ತೀರ್ಥೇಷು ಸಾ ಪ್ಲುತಾಂಗೀ ದಿವಾನಿಶಮ್ ।
ವ್ಯಚರತ್ ಕಾಶಿಕನ್ಯಾ ಸಾ ಯಥಾಕಾಮಂ ವಿಚಾರಿಣೀ ॥೨೬॥

ಅಲ್ಲಿ ಕಾಶಿಕನ್ಯೆಯಾದ ಅವಳು ಪುಣ್ಯತೀರ್ಥಗಳಲ್ಲಿ ಸ್ನಾನವನ್ನು ಮಾಡುತ್ತಾ ಹಗಲೂ ರಾತ್ರಿಯೂ ತನ್ನ ಮನಸ್ಸಿಗೆ ಬಂದಂತೆ ಸಂಚರಿಸಿದಳು.

ನಂದಾಶ್ರಮೇ ಮಹಾರಾಜ ತಥೋಲೂಕಾಶ್ರಮೇ ಶುಭೇ ।
ಚ್ಯವನಸ್ಯಾಶ್ರಮೇ ಚೈವ ಬ್ರಹ್ಮಣಃ ಸ್ಥಾನ ಏವ ಚ ॥೨೭॥

ಪ್ರಯಾಗೇ ದೇವಯಜನೇ ದೇವಾರಣ್ಯೇಷು ಚೈವ ಹ ।
ಭೋಗವತ್ಯಾಂ ಮಹಾರಾಜ ಕೌಶಿಕಸ್ಯಾಶ್ರಮೇ ತಥಾ ॥೨೮॥

ಮಾಂಡವ್ಯಸ್ಯಾಶ್ರಮೇ ರಾಜನ್ ದಿಲೀಪಸ್ಯಾಶ್ರಮೇ ತಥಾ ।
ರಾಮಾಶ್ರಮೇ ಚ ಕೌರವ್ಯ ತಥಾ ಗಾರ್ಗ್ಯಸ್ಯ ಚಾಶ್ರಮೇ ॥೨೯॥

ಏತೇಷು ತೀರ್ಥೇಷು ತದಾ ಕಾಶಿಕನ್ಯಾ ವಿಶಾಂಪತೇ ।
ಆಪ್ಲಾವಯತ ಗಾತ್ರಾಣಿ ತೀವ್ರಮಾಸ್ಥಾಯ ವೈ ತಪಃ ॥೩೦॥

ಎಲೈ ಮಹಾರಾಜನೇ, ಅವಳು ನಂದಾಶ್ರಮ, ಶುಭವಾದ ಉಲೂಕಾಶ್ರಮ, ಚ್ಯವನಾಶ್ರಮ, ಬ್ರಹ್ಮಸ್ಥಾನ, ಪ್ರಯಾಗ, ದೇವಯಜನ, ದೇವಾರಣ್ಯಗಳು, ಭೋಗವತಿ,

ವಿಶ್ವಾಮಿತ್ರಾಶ್ರಮ, ಮಾಂಡವ್ಯಾಶ್ರಮ, ದಿಲೀಪಾಶ್ರಮ, ರಾಮಾಶ್ರಮ, ಗಾರ್ಗ್ಯಾಶ್ರಮ ಇವುಗಳಲ್ಲಿ ಇರುವ ತೀರ್ಥಗಳಲ್ಲಿ ಸ್ನಾನವನ್ನು ಮಾಡುತ್ತಾ ತೀವ್ರವಾದ ತಪಸ್ಸನ್ನು ಮಾಡಿದಳು.

ತಾಮಬ್ರವೀಚ್ಚ ಕೌರವ್ಯ ಮಮ ಮಾತಾ ಜಲೋತ್ಥಿತಾ ॥೩೧॥

ಕಿಮರ್ಥಂ ಕ್ಲಿಶ್ಯಸೇ ಭದ್ರೇ ತಥ್ಯಮೇತದ್ ವದಸ್ವ ಮೇ ॥೩೨॥

ಎಲೈ ಕೌರವ್ಯನೇ, ನನ್ನ ತಾಯಿಯು ಜಲದಿಂದ ಎದ್ದು ಬಂದು, ಅವಳನ್ನು ಕುರಿತು ಭದ್ರೆಯೇ, ಏತಕ್ಕೆ ಹೀಗೆ ಕ್ಲೇಶಪಡುತ್ತಿದ್ದೀಯೆ? ನನಗೆ ನಿಜವನ್ನು ಹೇಳು ಎಂದು ಕೇಳಿದಳು.

ಭೀಷ್ಮಃ

ಸೈನಾಮಥಾಬ್ರವೀದ್ ರಾಜನ್ ಕೃತಾಂಜಲಿರನಿಂದಿತಾ ॥೩೩॥

ಭೀಷ್ಮೇಣ ಸಮರೇ ರಾಮೋ ನಿರ್ಜಿತಶ್ಚಾರುಲೋಚನೇ ।
ಕೋऽನ್ಯಸ್ತಮುತ್ಸಹೇಜ್ಜೇತುಮುದ್ಯತೇಷುಂ ಮಹೀಪತಿಃ ॥೩೪॥

ಸಾऽಹಂ ಭೀಷ್ಮವಿನಾಶಾಯ ತಪಸ್ತಪ್ಸ್ಯೇ ಸುದಾರುಣಮ್ ।
ವಿಚರಾಮಿ ಮಹೀಂ ದೇವಿ ಯಥಾ ಹನ್ಯಾಮ್ಯಹಂ ನೃಪಮ್ ॥೩೫॥

ಏತದ್‌ವ್ರತಫಲಂ ದೇವಿ ಪರಮಸ್ಮಿನ್ ಯಥಾ ಹಿ ಮೇ ॥೩೬॥

ಭೀಷ್ಮ– ಎಲೈ ರಾಜನೇ, ಅನಿಂದಿತಳಾದ ಅಂಬೆಯು ಕೈಗಳನ್ನು ಮುಗಿದು, ಅವಳನ್ನು ಕುರಿತು 'ಚಾರುನೇತ್ರೆಯೇ, ಭೀಷ್ಮನಿಂದ ಯುದ್ಧದಲ್ಲಿ ಪರಶುರಾಮನು ನಿರ್ಜಿತನಾದನು. ಬೇರೆ ಯಾವ ರಾಜನು ಕೈಯಲ್ಲಿ ಬಿಲ್ಲು-ಬಾಣಗಳನ್ನು ಹಿಡಿದ ಭೀಷ್ಮನನ್ನು ಗೆಲ್ಲಲು ಉತ್ಸಾಹವನ್ನು ಹೊಂದುತ್ತಾನೆ? ಎಲೌ ದೇವಿಯೇ, ನಾನು ಹೇಗೆ ಭೀಷ್ಮನನ್ನು ಕೊಂದೇನು ಎಂದು ಯೋಚಿಸುತ್ತಾ ಭೀಷ್ಮವಿನಾಶಕ್ಕಾಗಿ ಘೋರವಾದ ತಪಸ್ಸನ್ನು ಆಚರಿಸುತ್ತಿದ್ದೇನೆ. ಎಲೌ ದೇವಿಯೇ, ನನಗೆ ಈ ವ್ರತದ ಫಲವು ದೊರೆಯುವಂತೆ ಅನುಗ್ರಹವನ್ನು ಮಾಡು' (ಎಂದು ಕೇಳಿದಳು).

ಭೀಷ್ಮಃ

ತತೋಽಬ್ರವೀತ್ ಸಾಗರಗಾ ಜಿಹ್ಮಂ ಚರಸಿ ಭಾಮಿನಿ ।
ನೈಷ ಕಾಮೋಽನವದ್ಯಾಂಗಿ ಶಕ್ಯಃ ಪ್ರಾಪ್ತುಂ ತ್ವಯಾಽಬಲೇ ॥೩೭॥

ಭೀಷ್ಮ– ಆಗ ನನ್ನ ತಾಯಿಯು ಅವಳನ್ನು ಕುರಿತು 'ಭಾಮಿನಿಯೇ, ನೀನು ಕುಟಿಲವಾದ ತಪಸ್ಸನ್ನು ಮಾಡುತ್ತಿದ್ದೀಯೆ. ಎಲೌ ಅನವದ್ಯಾಂಗಿಯೇ, ಅಬಲೆಯೇ, ಈ ನಿನ್ನ ಆಸೆಯು ನೆರವೇರುವುದಿಲ್ಲ.

ವ್ರತಸ್ಥಾ ತು ಶರೀರಂ ತ್ವಂ ಯದಿ ನಾಮ ವಿಮೋಕ್ಷ್ಯಸಿ ।
ನದೀ ಭವಿಷ್ಯಸಿ ಶುಭೇ ಕುಟಿಲಾ ವಾರ್ಷಿಕೋದಕಾ ॥೩೯॥

ದುಸ್ತೀರ್ಥಾ ಚಾನಭಿಜ್ಞಾತಾ ವಾರ್ಷಿಕೀನಾಽಷ್ಟಮಾಸಿಕೀ ।
ಭೀಷ್ಮಗ್ರಾಹವತೀ ಘೋರಾ ಸರ್ವಭೂತಭಯಂಕರೀ ॥೪೦॥

ಕಾಶಿಕನ್ಯೆಯೇ, ನೀನು ಭೀಷ್ಮನ ವಿನಾಶಕ್ಕಾಗಿ ವ್ರತವನ್ನು ಮಾಡುತ್ತಾ, ದೇಹವನ್ನು ತ್ಯಾಗ ಮಾಡುವುದಾದರೆ ಶುಭಳಾದ ನೀನು ಮಳೆಗಾಲದ ಕದಡಿದ ನೀರಿರುವ ವಕ್ರವಾದ ನದಿಯಾಗುವಿ. ಒಳ್ಳೆಯ ನೀರನ್ನು ಹೊಂದದೆ, ಯಾರಿಂದಲೂ ಗುರುತಿಸಲ್ಪಡದೆ ವರ್ಷಾಕಾಲದ ಎಂಟು ಮಾಸಗಳಲ್ಲಿ ಹರಿಯುವ, ಭಯಂಕರವಾದ ಮೊಸಳೆಗಳಿಂದ ಕೂಡಿದ, ಎಲ್ಲಾ ಪ್ರಾಣಿಗಳನ್ನೂ ಹೆದರಿಸುವ ಘೋರವಾದ ನದಿಯಾಗುವಿ' (ಎಂದು ಹೇಳಿದಳು).

ಏವಮುಕ್ತ್ವಾ ತತೋ ರಾಜನ್ ಕಾಶಿಕನ್ಯಾಂ ನ್ಯವರ್ತತ ।
ಮಾತಾ ಮಮ ಮಹಾಭಾಗ ಸ್ಮಯಮಾನೇವ ಭಾಮಿನೀ ॥೪೧॥

ಎಲೈ ರಾಜನೇ, ನನ್ನ ತಾಯಿಯಾದ, ಮಹಾನುಭಾವಳಾದ, ಭಾಮಿನಿಯಾದ ಗಂಗೆಯು ಕಾಶಿಕನ್ಯೆಯನ್ನು ಕುರಿತು ನಗುವವಳಂತೆ ಈ ಮಾತನ್ನು ಹೇಳಿ ಹೊರಟು ಹೋದಳು.

ಕದಾಚಿದಷ್ಟಮೇ ಮಾಸಿ ಕದಾಚಿದ್ದಶಮೇ ತಥಾ ।
ನ ಪ್ರಾಶ್ನೀತೋದಕಮಪಿ ತೇಪೇ ಸಾ ವರವರ್ಣಿನೀ ॥೪೨॥

ಅನಂತರ ಕೆಲವೊಮ್ಮೆ ಎಂಟು ತಿಂಗಳಿಗೊಮ್ಮೆಯಾದರೂ, ಕೆಲವೊಮ್ಮೆ ಹತ್ತು ತಿಂಗಳಿಗೊಮ್ಮೆಯಾದರೂ ನೀರನ್ನೂ ಕುಡಿಯದೆ ಸುಂದರಿಯಾದ ಅಂಬೆಯು ತಪಸ್ಸನ್ನು ಮಾಡಿದಳು.

ಸಾ ವತ್ಸಭೂಮಿಂ ಕೌರವ್ಯ ತೀರ್ಥಲೋಭಾತ್ ತತಸ್ತತಃ ।
ಪತಿತಾ ಪರಿಧಾವಂತೀ ಪುನಃ ಕಾಶಿಪತೇಃ ಸುತಾ ॥೪೩॥

ಎಲೈ ಕೌರವ್ಯನೇ, ಕಾಶಿಪತಿಯ ಮಗಳಾದ ಅವಳು ವತ್ಸಭೂಮಿಯಲ್ಲಿರುವ ತೀರ್ಥಗಳ ಮೇಲಿನ ಲೋಭದಿಂದ ಇಲ್ಲಿಂದಲ್ಲಿಗೆ ಓಡಾಡುತ್ತಾ ಕಾಲವನ್ನು ಕಳೆದಳು.

ಸಾ ನದೀ ವತ್ಸಭೂಮ್ಯಾಂ ತು ಪ್ರಥಿತಾऽಂಬೇತಿ ಭಾರತ ।
ವಾರ್ಷಿಕೀ ಗ್ರಾಹಬಹುಲಾ ದುಸ್ತೀರ್ಥಾ ಕುಟಿಲಾ ತಥಾ ॥೪೪॥

ಸಾ ಕನ್ಯಾ ತಪಸಾ ತೇನ ದೇಹಾರ್ಧೇನ ವ್ಯಜಾಯತ ।
ನದೀ ಚ ರಾಜನ್ ವತ್ಸೇಷು ಕನ್ಯಾ ಚೈವಾಭವತ್ ತದಾ ॥೪೫॥

ಎಲೈ ಭಾರತನೇ, ಆ ಕನ್ಯೆಯು ತನ್ನ ತಪಸ್ಸಿನಿಂದಲೂ ಮತ್ತು ದೇಹದ ಅರ್ಧ ಅಂಶದಿಂದಲೂ ಮಳೆಗಾಲದಲ್ಲಿ ಹರಿಯುವ ಮೊಸಳೆಗಳಿಂದ ಕೂಡಿದ ಕೆಟ್ಟ ನೀರಿರುವ ವಕ್ರಗತಿಯುಳ್ಳ ನದಿಯಾದಳು. ಎಲೈ ರಾಜನೇ, ಅವಳು ಅರ್ಧದೇಹದಿಂದ ನದಿಯೂ ಮತ್ತು ಅರ್ಧದೇಹದಿಂದ ಕನ್ಯೆಯೂ ಆದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಅಷ್ಟಾಶೀತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಅಷ್ಟಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತೆಂಟನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ಎಂಬತ್ತೊಂಬತ್ತನೆಯ ಅಧ್ಯಾಯ

ರುದ್ರದೇವರಿಂದ ಅಂಬೆಗೆ, ಜನ್ಮಾಂತರದಲ್ಲಿ ಪುಂಸ್ತ್ವ ಪ್ರಾಪ್ತಿರೂಪವಾದ ವರದಾನ ಮತ್ತು ಅಂಬೆಯ ಅಗ್ನಿಪ್ರವೇಶ.

ಭೀಷ್ಮಃ

ತತಸ್ತೇ ತಾಪಸಾಃ ಸರ್ವೇ ತಪಸೇ ಧೃತನಿಶ್ಚಯಾಮ್ ।
ದೃಷ್ಟ್ವಾ ನ್ಯವರ್ತಯಂಸ್ತಾತ ಕಿಂ ಕಾರ್ಯಮಿತಿ ಚಾಸಕೃತ್ ॥೧॥

ಭೀಷ್ಮ- ಪ್ರೀತಿಪಾತ್ರನೇ, ಆಗ ತಪಸ್ಸು ಮಾಡುವುದರಲ್ಲಿ ದೃಢಸಂಕಲ್ಪವನ್ನು ಹೊಂದಿದ್ದ ಅವಳನ್ನು ಕುರಿತು, ಎಲ್ಲಾ ತಪಸ್ವಿಗಳೂ ಯಾವ ಪ್ರಯೋಜನಕ್ಕಾಗಿ ಮಾಡುತ್ತಿದ್ದೀಯೆ ಎಂದು ಅನೇಕ ಬಾರಿ ಕೇಳಿ, ತಪಸ್ಸನ್ನು ಅವಳನ್ನು ತಪಸ್ಸಿನಿಂದ ಹಿಂದಿರುಗಿಸಲು ಪ್ರಯತ್ನಿಸಿದರು.

ತಾನುವಾಚ ತತಃ ಕನ್ಯಾ ತಪೋವೃದ್ಧಾನೃಷೀಂಸ್ತದಾ ॥೨॥

ನಿರಾಕೃತಾऽಸ್ಮಿ ಭೀಷ್ಮೇಣ ಭ್ರಂಶಿತಾ ಪತಿಧರ್ಮತಃ ।
ವಧಾರ್ಥಂ ತಸ್ಯ ದೀಕ್ಷಾ ಮೇ ನ ಲೋಕಾರ್ಥಂ ತಪೋಧನಾಃ ॥೩॥

ನಿಹತ್ಯ ಭೀಷ್ಮಂ ಗಚ್ಛೇಯಂ ಶಾಂತಿಮಿತ್ಯೇವ ನಿಶ್ಚಯಃ ॥೪॥

ಆ ಕನ್ಯೆಯು ತಪೋವೃದ್ಧರಾದ ಋಷಿಗಳನ್ನು ಕುರಿತು, ಭೀಷ್ಮನು ನನ್ನನ್ನು ನಿರಾಕರಿಸಿದ್ದಾನೆ. ಅದರಿಂದ ನಾನು ಪತಿಧರ್ಮದಿಂದ ಚ್ಯುತಳಾಗಿದ್ದೇನೆ. ಎಲೈ ತಪೋಧನರೇ, ಭೀಷ್ಮರ ವಧೆಗಾಗಿ ನನ್ನ ದೀಕ್ಷೆ ಇದೆ. ಲೋಕಪ್ರಾಪ್ತಿಗಾಗಿ ಅಲ್ಲ. ಭೀಷ್ಮರನ್ನು ಕೊಂದು ನಾನು ಸಮಾಧಾನವನ್ನು ಹೊಂದುವದು ತನ್ನ ನಿಶ್ಚಯ ಎಂದು ಹೇಳಿದಳು.

ಯತ್ಕೃತೇ ದುಃಖಮಸತಿಮಿಮಾಂ ಪ್ರಾಪ್ತಾऽಸ್ಮಿ ಶಾಶ್ವತೀಮ್ ।
ಪತಿಲೋಕಾದ್ ವಿಹೀನಾ ಚ ನೈವ ಸ್ತ್ರೀ ನ ಪುಮಾನಿಹ ॥೫॥

ನಾಹತ್ವಾ ಯುಧಿ ಗಾಂಗೇಯಂ ನಿವರ್ತೇಯಂ ತಪೋಧನಾಃ ।

ಯಾವನ ನಿಮಿತ್ತದಿಂದ ಪತಿಲೋಕದಿಂದ ರಹಿತಳಾಗಿ ಸ್ತ್ರೀಯೂ ಅಲ್ಲದೆ ಪುರುಷನೂ ಅಲ್ಲದೆ ಇಲ್ಲಿ ಬಹಳ ದುಃಖವನ್ನು ಅನುಭವಿಸುತ್ತಿದ್ದೇನೆಯೋ ಅಂತಹ ಭೀಷ್ಮನನ್ನು ಕೊಲ್ಲದೆ ನಾನು ತಪಸ್ಸಿನಿಂದ ಹಿಂದಿರುಗುವುದಿಲ್ಲ.

ಏಷ ಮೇ ಹೃದಿ ಸಂಕಲ್ಪೋ ಯದರ್ಥಮಿದಮುದ್ಯತಮ್ ॥೬॥

ಎಲೈ ತಪೋಧನರೇ, ಇದು ನನ್ನ ಮನಸ್ಸಿನಲ್ಲಿರುವ ದೃಢವಾದ ಸಂಕಲ್ಪ. ಅದಕ್ಕಾಗಿ ಈ ಪ್ರಯತ್ನವನ್ನು ಮಾಡುತ್ತಿದ್ದೇನೆ.

ಸ್ತ್ರೀಭಾವೇ ಪರಿನಿರ್ವಿಣ್ಣಾ ಪುಂಸ್ತ್ವಾರ್ಥೇ ಕೃತನಿಶ್ಚಯಾ ।
ಭೀಷ್ಮೇ ಪ್ರತಿಚಿಕೀರ್ಷಾಮಿ ನಾಸ್ಮಿ ವಾರ್ಯೇತಿ ವೈ ಪುನಃ ॥೭॥

ನನಗೆ ಈ ಸ್ತ್ರೀತ್ವದಲ್ಲಿ ಬೇಸರ ಉಂಟಾಗಿದೆ. ಪುಂಸ್ತ್ವವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿದ್ದೇನೆ. ನಾನು ಭೀಷ್ಮನಿಗೆ ಪ್ರತೀಕಾರವನ್ನು ಮಾಡಲು ಬಯಸುತ್ತೇನೆ. ನನ್ನನ್ನು ತಡೆಯಬೇಡಿ (ಎಂದು ಹೇಳಿದಳು).

ತಾಂ ದೇವೋ ದರ್ಶಯಾಮಾಸ ಶೂಲಪಾಣಿರುಮಾಪತಿಃ ।
ಮಧ್ಯೇ ತೇಷಾಂ ಮಹರ್ಷೀಣಾಂ ಸ್ವೇನ ರೂಪೇಣ ಭಾಮಿನೀಮ್॥೮॥

ಶೂಲಪಾಣಿಯಾದ, ಉಮಾಪತಿಯಾದ ಮಹಾದೇವನು ಕೋಪಗೊಂಡ ಅವಳಿಗೆ ಋಷಿಗಳ ಮಧ್ಯದಲ್ಲಿ ತನ್ನ ನಿಜರೂಪವನ್ನು ತೋರಿಸಿದನು.

ಛಂದ್ಯಮಾನಾ ವರೇಣಾಥ ಸಾ ವವ್ರೇ ಮತ್ಪರಾಜಯಮ್ ।
ಹನಿಷ್ಯಸೀತಿ ತಾಂ ದೇವಃ ಪ್ರತ್ಯುವಾಚ ಮನಸ್ವಿನೀಮ್ ॥೯॥

ವರವನ್ನು ಕೇಳು ಎಂದು ಹೇಳಿದಾಗ ಅವಳು, ನನ್ನ ಪರಾಜಯವನ್ನು ವರವಾಗಿ ಕೇಳಿದಳು. ಧೈರ್ಯಶಾಲಿಯಾದ ಅವಳನ್ನು ಕುರಿತು ಮಹಾದೇವನು ನೀನು ಅವನನ್ನು ಕೊಲ್ಲುವಿ ಎಂದು ಹೇಳಿದನು.

ತತಃ ಸಾ ಪುನರೇವಾಥ ಕನ್ಯಾ ರುದ್ರಮುವಾಚ ಹ ॥೧೦॥

ಉಪಪದ್ಯೇತ್ ಕಥಂ ದೇವ ಸ್ತ್ರಿಯಾ ಯುಧಿ ಜಯೋ ಮಮ ॥೧೧॥

ಸ್ತ್ರೀಭಾವೇನ ಚ ಮೇ ಗಾಢಂ ಮನಃ ಶಾಂತಮುಮಾಪತೇ ।
ಪ್ರತಿಶ್ರುತಶ್ಚ ಭೂತೇಶ ತ್ವಯಾ ಭೀಷ್ಮಪರಾಜಯಃ ॥೧೨॥

ಯಥಾ ಸ ಸತ್ಯೋ ಭವತಿ ತಥಾ ಕುರು ವೃಷಧ್ವಜ ।
ಯಥಾ ಹನ್ಯಾಂ ಸಮಾಗಮ್ಯ ಭೀಷ್ಮಂ ಶಾಂತನವಂ ಯುಧಿ ॥೧೩॥

ಆಗ ಅವಳು ಪುನಃ ಮಹದೇವನನ್ನು ಕುರಿತು ಹೀಗೆ ಹೇಳಿದಳು– ಎಲೈ ದೇವನೇ, ಸ್ತ್ರೀಯಾದ ನನಗೆ ಯುದ್ಧದಲ್ಲಿ ಹೇಗೆ ಜಯ ಉಂಟಾದೀತು? ಎಲೈ ಉಮಾಪತಿಯೇ, ಈ ಸ್ತ್ರೀಭಾವವು ನನ್ನ ಮನಸ್ಸಿಗೆ ಸಾಕಾಗಿದೆ. ಎಲೈ ಭೂತೇಶನೇ, ನೀನು ಭೀಷ್ಮ ಪರಾಜಯವನ್ನು ಪ್ರತಿಜ್ಞೆ ಮಾಡಿದ್ದೀಯೆ. ಎಲೈ ವೃಷಧ್ವಜನೇ, ಹೇಗೆ ನಿನ್ನ ಆ ಮಾತು ಸತ್ಯವಾಗುವುದೋ, ಹೇಗೆ ನಾನು ಶಂತನುಪುತ್ರನಾದ ಭೀಷ್ಮನನ್ನು ಯುದ್ಧದಲ್ಲಿ ಕೊಲ್ಲುವೆನೋ ಹಾಗೆ ಮಾಡುವವನಾಗು.

ತಾಮುವಾಚ ಮಹಾದೇವಃ ಕನ್ಯಾಂ ಕಿಲ ವೃಷಧ್ವಜಃ ॥೧೪॥

ನ ಮೇ ವಾಗನೃತಂ ಪ್ರಾಹ ಸತ್ಯಂ ಭದ್ರೇ ಭವಿಷ್ಯತಿ ॥೧೫॥

ಹನಿಷ್ಯಸಿ ರಣೇ ಭೀಷ್ಮಂ ಪುರುಷತ್ವಂ ಚ ಲಪ್ಸ್ಯಸೇ ।
ಸ್ಮರಿಷ್ಯಸಿ ಚ ತತ್ ಸರ್ವಂ ದೇಹಮನ್ಯಂ ಗತಾ ಸತೀ ॥೧೬॥

ದ್ರುಪದಸ್ಯ ಕುಲೇ ಜಾತಾ ಭವಿಷ್ಯಸಿ ಮಹಾರಥಃ ।
ಶೀಘ್ರಾಸ್ತ್ರಶ್ಚಿತ್ರಯೋಧೀ ಚ ಭವಿಷ್ಯಸಿ ಸುಸಮ್ಮತಃ ॥೧೭॥

ಯಥೋಕ್ತಮೇವ ಕಲ್ಯಾಣಿ ಸರ್ವಮೇತದ್ ಭವಿಷ್ಯತಿ ।
ಭವಿಷ್ಯಸಿ ಪುಮಾನ್ ಪಶ್ಚಾತ್ ಕಸ್ಮಾಚ್ಚಿತ್ ಕಾಲಪರ್ಯಯಾತ್ ॥೧೮॥

ವೃಷಧ್ವಜನಾದ ಮಹಾದೇವನು ಆ ಕನ್ಯೆಯನ್ನು ಕುರಿತು ಹೀಗೆ ಹೇಳಿದನಷ್ಟೆ– 'ಭದ್ರೆಯೇ, ನನ್ನ ಮಾತು ಎಂದೂ ಸುಳ್ಳಾಗುವುದಿಲ್ಲ. ಸತ್ಯವೇ ಆಗುವುದು. ನೀನು ಪುರುಷತ್ವವನ್ನು ಹೊಂದುವಿ ಮತ್ತು ಯುದ್ಧದಲ್ಲಿ ಭೀಷ್ಮನನ್ನೂ ಕೊಲ್ಲುವಿ. ಇನ್ನೊಂದು ದೇಹವನ್ನು ಪಡೆದ ನೀನು ಇವೆಲ್ಲವನ್ನೂ ಸ್ಮರಿಸುವಿ. ದ್ರುಪದನ ಕುಲದಲ್ಲಿ ಜನಿಸಿ ಮಹಾರಥನೂ, ಶೀಘ್ರಾಸ್ತ್ರನೂ, ಚಿತ್ರಯೋಧಿಯೂ, ಎಲ್ಲರಿಗೂ ಸಮ್ಮತನೂ ಆಗುವಿ.

ಎಲೌ ಕಲ್ಯಾಣಿಯೇ, ನಾನು ಹೇಳಿದಂತೆಯೇ ಎಲ್ಲವೂ ಆಗುವುದು. ಸ್ವಲ್ಪ ಸಮಯದ ನಂತರ ನೀನು ಪುರುಷನಾಗುವಿ'.

ಏವಮುಕ್ತ್ವಾ ಮಹಾದೇವಃ ಕಪರ್ದೀ ವೃಷಭಧ್ವಜಃ ।
ಪಶ್ಯತಾಮೇವ ವಿಪ್ರಾಣಾಂ ತತ್ರೈವಾಂತರಧೀಯತ ॥೧೯॥

ಕಪರ್ದಿಯೂ, ವೃಷಭಧ್ವಜನೂ ಆದ ಮಹಾದೇವನು ಹೀಗೆ ಹೇಳಿ, ಬ್ರಾಹ್ಮಣರು ನೋಡುತ್ತಿರುವಂತೆಯೇ ಅಂತರ್ಧಾನವನ್ನು ಹೊಂದಿದನು.

ತತಃ ಸಾ ಪಶ್ಯತಾಂ ತೇಷಾಂ ಮಹರ್ಷೀಣಾಮನಿಂದಿತಾ ।
ಸಮಾಹೃತ್ಯ ವನಾತ್ ತಸ್ಮಾತ್ ಕಾಷ್ಠಾನಿ ವರವರ್ಣಿನೀ ॥೨೦॥

ಚಿತಾಂ ಕೃತ್ವಾ ಸುಮಹತೀಂ ಪ್ರದಾಯ ಚ ಹುತಾಶನಮ್ ।
ಪ್ರದೀಪ್ತೇऽಗ್ನೌ ಮಹಾರಾಜ ರೋಷದೀಪ್ತೇನ ಚೇತಸಾ ॥೨೧॥

ಉಕ್ತ್ವಾ ಭೀಷ್ಮವಧಾಯೇತಿ ಪ್ರವಿವೇಶ ಹುತಾಶನಮ್ ।
ಜ್ಯೇಷ್ಠಾ ಕಾಶಿಸುತಾ ರಾಜನ್ ಯಮುನಾಮಭಿತೋ ನದೀಮ್ ॥೨೨॥

ಅನಂತರ ಅನಿಂದಿತೆಯೂ, ಸುಂದರಿಯೂ ಆದ ಅವಳು ಆ ಮಹರ್ಷಿಗಳು ನೋಡುತ್ತಿರುವಂತೆಯೇ ಆ ಕಾಡಿನಿಂದ ಕಟ್ಟಿಗೆಗಳನ್ನು ತಂದು, ದೊಡ್ಡ ಚಿತೆಯನ್ನು ಮಾಡಿ, ಅಗ್ನಿಯನ್ನು ದೀಪ್ತಗೊಳಿಸಿ ರೋಷದಿಂದ ಉರಿಯುವ ಮನಸ್ಸಿನಿಂದ ಪ್ರದೀಪ್ತವಾದ ಅಗ್ನಿಯಲ್ಲಿ ಭೀಷ್ಮವಧೆಗಾಗಿ ಎಂದು ಹೇಳಿ ಅಗ್ನಿಪ್ರವೇಶವನ್ನು ಮಾಡಿದಳು. ಎಲೈ ಮಹಾರಾಜನೇ, ಯಮುನಾ ನದಿಯ ತೀರದಲ್ಲಿ ಕಾಶಿರಾಜನ ಜ್ಯೇಷ್ಠ ಪುತ್ರಿಯಾದ ಅವಳು (ಅಗ್ನಿಪ್ರವೇಶವನ್ನು ಮಾಡಿದಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕೋನವತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ಎಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತನೆಯ ಅಧ್ಯಾಯ

ದ್ರುಪದನಿಗೆ ರುದ್ರದೇವರಿಂದ ವರಪ್ರದಾನ. ಸ್ತ್ರೀಶಿಶುವಿನ ಜನನ. ಸ್ತ್ರೀತ್ವವನ್ನು ಮುಚ್ಚಿಟ್ಟು ಶಿಖಂಡಿ ಎಂದು ನಾಮಕರಣ.

ದುರ್ಯೋಧನಃ

ಕಥಂ ಶಿಖಂಡೀ ಗಾಂಗೇಯ ಕನ್ಯಾ ಭೂತ್ವಾ ಸತೀ ತದಾ ।
ಪುರುಷೋऽಭೂದ್ ಯುಧಿಶ್ರೇಷ್ಠ ತನ್ಮೇ ಬ್ರೂಹಿ ಪಿತಾಮಹ ॥೧॥

ದುರ್ಯೋಧನ– ಎಲೈ ಯುದ್ಧದಲ್ಲಿ ಶ್ರೇಷ್ಠನಾದ ಪಿತಾಮಹನೇ, ಗಾಂಗೇಯನೇ, ಶಿಖಂಡಿಯು ಮೊದಲು ಸ್ತ್ರೀಯಾಗಿದ್ದವಳು ಹೇಗೆ ಪುರುಷಳಾದಳು? ಅದನ್ನು ನನಗೆ ಹೇಳಿ.

ಭೀಷ್ಮಃ

ಭಾರ್ಯಾ ತು ತಸ್ಯ ರಾಜೇಂದ್ರ ದ್ರುಪದಸ್ಯ ಮಹೀಪತೇಃ ।
ಮಹಿಷೀ ದಯಿತಾ ಹ್ಯಾಸೀದಪುತ್ರಾ ಚ ವಿಶಾಂಪತೇ ॥೨॥

ಭೀಷ್ಮ– ಎಲೈ ರಾಜೇಂದ್ರನೇ, ದ್ರುಪದರಾಜನಿಗೆ ಪ್ರಿಯಳಾದ ಭಾರ್ಯೆ ಇದ್ದಳು. ಅವಳಿಗೆ ಮಕ್ಕಳಿರಲಿಲ್ಲ.

ಏತಸ್ಮಿನ್ನೇವ ಕಾಲೇ ತು ದ್ರುಪದೋ ವೈ ಮಹೀಪತಿಃ ।
ಅಪತ್ಯಾರ್ಥೇ ಮಹಾರಾಜ ತೋಷಯಾಮಾಸ ಶಂಕರಮ್ ॥೩॥

ಎಲೈ ಮಹಾರಾಜನೇ, ಇದೇ ಕಾಲದಲ್ಲಿ ದ್ರುಪದರಾಜನು ಸಂತಾನದ ಸಲುವಾಗಿ ತಪಸ್ಸನ್ನು ಮಾಡಿ ರುದ್ರನನ್ನು ಸಂತೋಷಪಡಿಸಿದನು.

ಅಸ್ಮದ್ವಧಾರ್ಥಂ ನಿಶ್ಚಿತ್ಯ ತಪೋ ಘೋರಂ ಸಮಾಸ್ಥಿತಃ ।
ಲೇಭೇ ಕನ್ಯಾಂ ಮಹಾದೇವಾತ್ ಪುರುಷೋ ಮೇ ಸ್ಯಾದಿತಿ ಬ್ರುವನ್॥

ನನ್ನ ವಧೆಯನ್ನು ಅವನು ನಿಶ್ಚಯಿಸಿ, ಘೋರ ತಪಸ್ಸನ್ನು ಆಚರಿಸಿ, ನನಗೆ ಪುರುಷ ಶಿಶುವು ಬೇಕೆಂದು ಕೇಳಿದರೂ ಮಹಾದೇವನ ಅನುಗ್ರಹದಿಂದ ಕನ್ಯೆಯನ್ನು ಪಡೆದನು.

ಭಗವನ್ ಪುತ್ರಮಿಚ್ಛಾಮಿ ಭೀಷ್ಮಪ್ರತಿಚಿಕೀರ್ಷಯಾ ।
ಇತ್ಯುಕ್ತೋ ದೇವದೇವೇನ ಸ್ತ್ರೀ ಪುಮಾಂಸ್ತೇ ಭವಿಷ್ಯತಿ ॥೫॥

ನಿವರ್ತಸ್ವ ಮಹೀಪಾಲ ನೈತಜ್ಜಾತ್ವನ್ಯಥಾ ಭವೇತ್ ।

ಭಗವಂತನೇ, ಭೀಷ್ಮರಿಗೆ ಪ್ರತೀಕಾರವನ್ನು ಮಾಡಲು ನಾನು ಒಬ್ಬ ಮಗನನ್ನು ಬಯಸುತ್ತೇನೆ ಎಂದು ಹೇಳಿದಾಗ ಮಹಾದೇವನು ರಾಜನೇ, ನಿನಗೆ ಕನ್ಯೆಯು ಜನಿಸುವಳು. ಕಾಲಕ್ರಮದಲ್ಲಿ ಅವಳು ಪುರುಷಳಾಗುವಳು. ನೀನು ಹಿಂದಿರುಗು. ಇದು ವ್ಯತ್ಯಾಸವಾಗುವುದಿಲ್ಲ ಎಂದು ಹೇಳಿದನು.

ಸ ತು ಗತ್ವಾ ಚ ನಗರಂ ಭಾರ್ಯಾಮಿದಮುವಾಚ ಹ ॥೬॥

ಕೃತೋ ಯತ್ನೋ ಮಯಾ ದೇವಿ ಪುತ್ರಾರ್ಥಂ ತಪಸಾ ಮಹಾನ್ ।
ಕನ್ಯಾ ಭೂತ್ವಾ ಪುಮಾನ್ ಭಾವೀ ಇತಿ ಚೋಕ್ತೋಽಸ್ಮಿ ಶಂಭುನಾ ॥೭॥

ಪುನಃ ಪುನರ್ಯಾಚ್ಯಮಾನೋ ದಿಷ್ಟಮಿತ್ಯಬ್ರವೀಚ್ಛಿವಃ ।
ನ ತದನ್ಯಚ್ಚ ಭವಿತಾ ಭವಿತವ್ಯಂ ಹಿ ತತ್ ತಥಾ ॥೮॥

ಅವನು ನಗರಕ್ಕೆ ಹೋಗಿ ತನ್ನ ಭಾರ್ಯೆಯನ್ನು ಕುರಿತು, ದೇವಿಯೇ, ಮಗನ ಸಲುವಾಗಿ ದೊಡ್ಡ ತಪಸ್ಸನ್ನು ಮಾಡಿ ಪ್ರಯತ್ನವನ್ನು ಮಾಡಿದೆ. ರುದ್ರದೇವರು, ಶಿಶುವು ಕನ್ಯೆಯಾಗಿ ಜನಿಸಿ ಅನಂತರ ಪುರುಷನಾಗುತ್ತಾನೆ ಎಂದು ಹೇಳಿದರು. ಮತ್ತೆ ಮತ್ತೆ ಬೇಡಿದರೂ ನಾನು ಕೊಟ್ಟಿದ್ದಾಗಿದೆ (ಇದು ದೈವೇಚ್ಛೆ) ಎಂದು ರುದ್ರದೇವರು ಹೇಳಿದರು. ಇದು ಬೇರೆ ರೀತಿಯಾಗುವುದಿಲ್ಲ. ಹೀಗೆಯೇ ಆಗಬೇಕಾಗಿದೆ ಎಂದು ಹೇಳಿದರು.

ತತಃ ಸಾ ನಿಯತಾ ಭೂತ್ವಾ ಋತುಕಾಲೇ ಮನಸ್ವಿನೀ ।
ಪತ್ನೀ ದ್ರುಪದರಾಜಸ್ಯ ದ್ರುಪದಂ ಪ್ರವಿವೇಶ ಹ ॥೯॥

ಅನಂತರ ಧೈರ್ಯಶಾಲಿನಿಯಾದ ಅವಳು ನಿಯಮಬದ್ಧಳಾಗಿ ಋತುಕಾಲದಲ್ಲಿ ದ್ರುಪದರಾಜನ ಸಮಾಗಮವನ್ನು ಹೊಂದಿದಳು.

ಲೇಭೇ ಗರ್ಭಂ ಯಥಾಕಾಲಂ ವಿಧಿದೃಷ್ಟೇನ ಹೇತುನಾ ।
ಪಾರ್ಷತಸ್ಯ ಮಹೀಪಾಲ ಯಥಾ ಮಾಂ ನಾರದೋಽಬ್ರವೀತ್ ॥೧೦॥

ತತೋ ದಧಾರ ಸಾ ದೇವೀ ಗರ್ಭಂ ರಾಜೀವಲೋಚನಾ ॥೧೧॥

ಎಲೈ ರಾಜನೇ, ಅವಳು ವಿಧಿಯ ಸಂಕಲ್ಪದಂತೆ ಯೋಗ್ಯವಾದ ಕಾಲದಲ್ಲಿ ದ್ರುಪದನಿಂದ ಗರ್ಭವನ್ನು ಪಡೆದಳು ಎಂದು ನಾರದರು ನನಗೆ ಹೇಳಿದ್ದಾರೆ. ಅನಂತರ ರಾಜೀವಲೋಚನೆಯಾದ ಆ ದೇವಿಯು ಗರ್ಭವನ್ನು ಧರಿಸಿದಳು.

ತಾಂ ಸ ರಾಜಪ್ರಿಯಾಂ ಭಾರ್ಯಾಂ ದ್ರುಪದಃ ಕುರುನಂದನ ।
ಪುತ್ರಸ್ನೇಹಾನ್ಮಹಾಬಾಹುಃ ಸುಖಂ ಪರ್ಯಚರತ್ ತದಾ ॥೧೨॥

ಎಲೈ ಕುರುನಂದನನೇ, ಮಹಾಬಾಹುವಾದ ದ್ರುಪದನು ಪುತ್ರಸ್ನೇಹದಿಂದ ತನಗೆ ಪ್ರಿಯಳಾದ ಭಾರ್ಯೆಯನ್ನು ಅನೇಕ ಸುಖಸಾಧನಗಳಿಂದ ಆಗ ಉಪಚರಿಸಿದನು.

ಸರ್ವಾನಭಿಪ್ರಾಯಗತಾನ್ ಭಾರ್ಯಾऽಲಭತ ಕೌರವ ।
ಅಪುತ್ರಸ್ಯ ಸತೋ ರಾಜ್ಞೋ ದ್ರುಪದಸ್ಯ ಯಶಸ್ವಿನಃ ॥೧೩॥

ಎಲೈ ಕೌರವನೇ, ಪುತ್ರನಿಲ್ಲದ ಕೀರ್ತಿಶಾಲಿಯಾದ ದ್ರುಪದರಾಜನಿಂದ ಅವನ ಪತ್ನಿಯು ತನ್ನ ಮನಸ್ಸಿಗೆ ಇಷ್ಟವಾದುದೆಲ್ಲವನ್ನೂ ಪಡೆದಳು.

ಯಥಾಕಾಲಂ ತು ಸಾ ದೇವೀ ಮಹಿಷೀ ದ್ರುಪದಸ್ಯ ಹ ।
ಕನ್ಯಾಂ ಪ್ರವರರೂಪಾಂ ತು ಪ್ರಾಜಾಯತ ನರಾಧಿಪ ॥೧೪॥

ಎಲೈ ರಾಜನೇ, ದ್ರುಪದನ ರಾಣಿಯಾದ ಆ ದೇವಿಯು ಯೋಗ್ಯವಾದ ಕಾಲದಲ್ಲಿ ಒಂದು ಸುಂದರವಾದ ಕನ್ಯೆಯನ್ನು ಪ್ರಸವಿಸಿದಳು.

ಅಪುತ್ರಸ್ಯ ತು ರಾಜ್ಞಃ ಸಾ ದ್ರುಪದಸ್ಯ ಮನಸ್ವಿನೀ ।
ಖ್ಯಾಪಯಾಮಾಸ ರಾಜೇಂದ್ರ ಪುತ್ರೋ ಹ್ಯೇಷ ಮಮೇತಿ ವೈ ॥೧೫॥

ಧೈರ್ಯಶಾಲಿನಿಯಾದ ಆ ದ್ರುಪದ ಪತ್ನಿಯು ಪುತ್ರರಹಿತನಾದ ರಾಜನಿಗೆ ಇವನು ನನ್ನ ಪುತ್ರನೆಂದೇ ಪ್ರಸಿದ್ಧಪಡಿಸಿದಳು.

ತತಃ ಸ ರಾಜಾ ದ್ರುಪದಃ ಪ್ರಚ್ಛನ್ನಾಯಾ ನರಾಧಿಪ ।
ಪುತ್ರವತ್ ಪುತ್ರಕಾರ್ಯಾಣಿ ಸರ್ವಾಣಿ ಸಮಕಾರಯತ್ ॥೧೬॥

ಎಲೈ ರಾಜನೇ, ಆಗ ಹೀಗೆ ಪ್ರಚ್ಛನ್ನಳಾದ ಆ ಶಿಶುವಿಗೆ ದ್ರುಪದರಾಜನು ಪುತ್ರನಂತೆಯೇ ಎಲ್ಲಾ ಪುತ್ರಕಾರ್ಯಗಳನ್ನೂ ಮಾಡಿಸಿದನು.

ರಕ್ಷಣಂ ಚೈವ ಮಂತ್ರಸ್ಯ ಮಹಿಷೀ ದ್ರುಪದಸ್ಯ ಸಾ ।
ಚಕಾರ ಸರ್ವಯತ್ನೇನ ಬ್ರುವಾಣಾ ಪುತ್ರ ಇತ್ಯುತ ॥೧೭॥

ನ ಹಿ ತಾಂ ವೇದ ನಗರೇ ಕಶ್ಚಿದನ್ಯತ್ರ ಪಾರ್ಷತಾತ್ ॥೧೮॥

ದ್ರುಪದನ ಪತ್ನಿಯು ಬಹಳ ಎಚ್ಚರಿಕೆಯಿಂದ ಮತ್ತು ಪ್ರಯತ್ನದಿಂದ ಪುತ್ರನೆಂದು ಹೇಳುತ್ತಲೇ ಆ ರಹಸ್ಯವನ್ನು ರಕ್ಷಿಸಿದಳು. ದ್ರುಪದನನ್ನು ಬಿಟ್ಟು ಆ ನಗರದಲ್ಲಿ ಬೇರೆ ಯಾರಿಗೂ ಅವಳು ಕನ್ಯೆ ಎಂದು ತಿಳಿದಿರಲಿಲ್ಲ.

ಶ್ರದ್ದಧಾನೋ ಹಿ ತದಾಕ್ಯಂ ದೇವಸ್ಯಾದ್ಭುತಚೇತಸಃ ।
ಧಾದಯಾಮಾಸ ತಾಂ ಕನ್ಯಾಂ ಪುಮಾನಿತಿ ಚ ಸೋಽಬ್ರವೀತ್ ॥೧೯॥

ಅದ್ಭುತ ಮನಸ್ಸುಳ್ಳ ರುದ್ರದೇವರ ಮಾತನ್ನು ನಂಬಿ, ಆ ಕನ್ಯೆಯನ್ನು ಮರೆಮಾಚಿ ರಾಜನು ತನ್ನ ಪುತ್ರನೆಂದೇ ಹೇಳಿದನು.

ಜಾತಕರ್ಮಾಣಿ ಸರ್ವಾಣಿ ಕಾರಯಾಮಾಸ ಪಾರ್ಥಿವಃ ।
ಪುಂವದ್ವಿಧಾನಯುಕ್ತಾನಿ ಶಿಖಂಡೀತಿ ಚ ತಾಂ ವಿದುಃ ॥೨೦॥

ರಾಜನು ಪುತ್ರನಂತೆಯೇ ಅವನಿಗೆ ಎಲ್ಲಾ ಜಾತಕರ್ಮಾದಿ ಕ್ರಿಯೆಗಳನ್ನು ಮಾಡಿಸಿದನು. ಅವನನ್ನು ಎಲ್ಲರೂ ಶಿಖಂಡಿ ಎಂದು ಕರೆಯುತ್ತಾರೆ.

ಅಹಮೇಕಸ್ತು ಚಾರೇಣ ವಚನಾನ್ನಾರದಸ್ಯ ಹ ।
ಜ್ಞಾತವಾನ್ ದೇವವಾಕ್ಯೇನ ಅಂಬಾಯಾಸ್ತಪಸಾ ತಥಾ ॥೨೧॥

ನಾನೊಬ್ಬನು ಮಾತ್ರ ಗೂಢಚಾರರ ಮಾತಿನಿಂದಲೂ, ನಾರದರ ಮಾತಿನಿಂದಲೂ, ದೇವವಾಕ್ಯದಿಂದಲೂ ಮತ್ತು ಅಂಬೆಯ ತಪಸ್ಸಿನಿಂದಲೂ ನಿಜವಾದ ಸ್ಥಿತಿಯನ್ನು ತಿಳಿದಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ನವತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೊಂದನೆಯ ಅಧ್ಯಾಯ

ದ್ರೋಣರಿಂದ ಶಿಖಂಡಿಯ ಧನುರ್ವಿದ್ಯಾ ಪ್ರಾಪ್ತಿ. ವಿವಾಹ ಮತ್ತು ದಶಾರ್ಣಾಧಿಪತಿಯ ಕ್ರೋಧ.

ಭೀಷ್ಮಃ

ಚಕಾರ ಯತ್ನಂ ದ್ರುಪದಃ ಸುತಾಯಾಃ ಸರ್ವಕರ್ಮಸು ।
ತತೋ ಲೇಖಾದಿಷು ತಥಾ ಶಿಲ್ಪೇಷು ಚ ಪರಂತಪ ॥೧॥

ಇಷ್ವಸ್ತ್ರೇಷು ಚ ರಾಜೇಂದ್ರ ದ್ರೋಣಶಿಷ್ಯೋ ಬಭೂವ ಹ ॥೨॥

ಭೀಷ್ಮ– ಎಲೈ ಪರಂತಪನೇ, ದ್ರುಪದನು ತನ್ನ ಮಗಳಿಗೆ ಲೇಖನಾದಿಗಳಲ್ಲಿ ಮತ್ತು ಶಿಲ್ಪಕಲೆಗಳಲ್ಲಿಯೂ ಪ್ರಯತ್ನಪೂರ್ವಕವಾಗಿ ಶಿಕ್ಷಣವನ್ನು ನೀಡಿದನು. ಎಲೈ ರಾಜೇಂದ್ರನೇ, ಶಸ್ತ್ರಾಸ್ತ್ರಪ್ರಯೋಗಗಳಲ್ಲಿ ಅವನು ದ್ರೋಣಶಿಷ್ಯನಾದನು.

ತಸ್ಯ ಮಾತಾ ಮಹಾರಾಜ ರಾಜಾನಂ ವರವರ್ಣಿನೀ ।
ಚೋದಯಾಮಾಸ ಭಾರ್ಯಾರ್ಥಂ ಕನ್ಯಾಯಾಃ ಪುತ್ರವತ್ ತದಾ ॥೩॥

ಎಲೈ ಮಹಾರಾಜನೇ, ಸುಂದರಿಯಾದ ಶಿಖಂಡಿಯ ತಾಯಿಯು ತನ್ನ ಕನ್ಯೆಗೆ, ಪುತ್ರನಂತೆ ಕನ್ಯೆಯನ್ನು ಸಂಪಾದಿಸಲು ಪತಿಗೆ ಒತ್ತಾಯವನ್ನು ಮಾಡಿದಳು.

ತತಸ್ತಾಂ ಪಾರ್ಷತೋ ದೃಷ್ಟ್ವಾ ಕನ್ಯಾಂ ಸಂಪ್ರಾಪ್ತಯೌವನಾಮ್ ।
ಸ್ತ್ರಿಯಂ ಮತ್ವಾ ತತಶ್ಚಿಂತಾಂ ಪ್ರಪೇದೇ ಸಹ ಭಾರ್ಯಯಾ ॥೪॥

ಆಗ ಪಾರ್ಷತನು ಯೌವನವನ್ನು ಹೊಂದಿದ ತನ್ನ ಮಗಳನ್ನು ಕನ್ಯೆ ಎಂದು ತಿಳಿದು ಭಾರ್ಯೆಯ ಜೊತೆಯಲ್ಲಿ ಚಿಂತಾಕ್ರಾಂತನಾದನು.

ಕನ್ಯಾ ಮಮೇಯಂ ಸಂಪ್ರಾಪ್ತಾ ಯೌವನಂ ಶೋಕವರ್ಧಿನೀ ।
ಮಯಾ ಪ್ರಚ್ಛಾದಿತಾ ಚೈಷಾ ವಚನಾಚ್ಚೂಲಪಾಣಿನಃ ॥೫॥

ನ ತನ್ಮಿಥ್ಯಾ ಮಹಾರಾಜ್ಞಿ ಭವಿಷ್ಯತಿ ಕಥಂಚನ ॥೬॥

ಈ ನನ್ನ ಮಗಳು ಯೌವನವನ್ನು ಹೊಂದಿ, ನನ್ನ ಶೋಕವನ್ನು ಹೆಚ್ಚಿಸುತ್ತಿದ್ದಾಳೆ. ರುದ್ರದೇವರ ಮಾತಿನಂತೆ ನಾನು ಈ ಸಂಗತಿಯನ್ನು ಮುಚ್ಚಿಟ್ಟಿದ್ದೆನು. ಮಹಾರಾಣಿಯೇ, ರುದ್ರದೇವರ ಮಾತು ಎಂದೂ ಸುಳ್ಳಾಗುವುದಿಲ್ಲ.

ಭಾರ್ಯಾ

ತ್ರೈಲೋಕ್ಯಕರ್ತಾ ಕಸ್ಮಾದ್ಧಿ ವೃಥಾ ವಕ್ತುಮಿಹಾರ್ಹತಿ ।
ಯದಿ ತೇ ರೋಚತೇ ರಾಜನ್ ವಕ್ಷ್ಯಾಮಿ ಶೃಣು ಮೇ ವಚಃ ॥೭॥

ಶ್ರುತ್ವೇದಾನೀಂ ಪ್ರಪದ್ಯೇಥಾಃ ಸ್ವಾಂ ಮತಿಂ ಪೃಷತಾತ್ಮಜ ॥೮॥

ಕ್ರಿಯತಾಮದ್ಯ ಯತ್ನೇನ ವಿಧಿವದ್ ದಾರಸಂಗ್ರಹಃ ।
ಭವಿತಾ ತದ್ವಚಃ ಸತ್ಯಮಿತಿ ಮೇ ನಿಶ್ಚಿತಾ ಮತಿಃ ॥೯॥

ಭಾರ್ಯಾ– ಮೂರುಲೋಕಗಳಿಗೆ ಕಾರಣನಾದ ರುದ್ರದೇವರು ಏಕೆ ವ್ಯರ್ಥವಾಗಿ ಸುಳ್ಳನ್ನು ಹೇಳುತ್ತಾರೆ? ರಾಜನೇ, ನಿನಗೆ ಇಷ್ಟವಾಗುವುದಾದರೆ ನನ್ನ ಮಾತುಗಳನ್ನು ಕೇಳು ಮತ್ತು ಪೃಷತಪುತ್ರನೇ, ನನ್ನ ಮಾತನ್ನು ಕೇಳಿ ನೀನು ನಿನ್ನ ಅಭಿಪ್ರಾಯವನ್ನು ಹೊಂದುವವನಾಗು. ಈ ದಿನ ಪ್ರಯತ್ನಪೂರ್ವಕವಾಗಿ, ಶಾಸ್ತ್ರಕ್ಕೆ ಅನುಗುಣವಾಗಿ ಕನ್ಯಾಸಂಗ್ರಹವನ್ನು ಮಾಡುವವನಾಗು. ರುದ್ರದೇವರ ಮಾತು ಸತ್ಯವೇ ಆಗುತ್ತದೆ ಎಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ಭೀಷ್ಮಃ

ತತಸ್ತೌ ನಿಶ್ಚಯಂ ಕೃತ್ವಾ ತಸ್ಮಿನ್ ಕಾರ್ಯೇಽಥ ದಂಪತೀ ।
ವರಯಾಂಚಕ್ರತುಃ ಕನ್ಯಾಂ ದಶಾರ್ಣಾಧಿಪತೇಃ ಸುತಾಮ್ ॥೧೦॥

ಭೀಷ್ಮ– ಅನಂತರ ಆ ದಂಪತಿಗಳು ಆ ಕಾರ್ಯವನ್ನು ಮಾಡುವುದಾಗಿ ನಿಶ್ಚಯಿಸಿ ದಶಾರ್ಣಾಧಿಪತಿಯ ಮಗಳನ್ನು ಕನ್ಯೆಯಾಗಿ ವರಿಸಿದರು.

ತತೋ ರಾಜಾ ದ್ರುಪದೋ ರಾಜಸಿಂಹಃ
ಸರ್ವಾನ್ ರಾಜ್ಞಃ ಕುಲತಃ ಸನ್ನಿಶಾಮ್ಯ ।
ದಾಶಾರ್ಣಕಸ್ಯ ನೃಪತೇಸ್ತನೂಜಾಂ
ಶಿಖಂಡಿನೇ ವರಯಾಮಾಸ ಕನ್ಯಾಮ್ ॥೧೧॥

ಆಗ ರಾಜಸಿಂಹನಾದ ದ್ರುಪದನು ಎಲ್ಲ ರಾಜರ ಕುಲಗಳನ್ನು ಚೆನ್ನಾಗಿ ಗಮನಿಸಿ ದಶಾರ್ಣಾಧಿಪತಿಯ ಮಗಳನ್ನು ಶಿಖಂಡಿಗೆ ಕನ್ಯೆಯಾಗಿ ವರಿಸಿದನು.

ಹಿರಣ್ಯವರ್ಮೇತಿ ನೃಪೋ ಯೋಽಸೌ ದಾಶಾರ್ಣಕಃ ಸ್ಮೃತಃ ।
ಸ ಚ ಪ್ರಾದಾನ್ಮಹೀಪಾಲಃ ಕನ್ಯಾಂ ತಸ್ಮೈ ಶಿಖಂಡಿನೇ ॥೧೨॥

ದಶಾರ್ಣಾಧಿಪತಿಯ ಹೆಸರು ಹಿರಣ್ಯವರ್ಮನೆಂದು. ಆ ರಾಜನು ಶಿಖಂಡಿಗೆ ತನ್ನ ಮಗಳನ್ನು ಕೊಟ್ಟನು.

ಸ ಚ ರಾಜಾ ದಶಾರ್ಣೇಷು ಮಹಾನಾಸೀತ್ ಸುದುರ್ಜಯಃ ।
ಹಿರಣ್ಯವರ್ಮಾ ದುರ್ಧರ್ಷೋ ಮಹಾಸೇನೋ ಮಹಾಬಲಃ ॥೧೩॥

ಹಿರಣ್ಯವರ್ಮರಾಜನು ದಶಾರ್ಣದೇಶದಲ್ಲಿ ಗೆಲ್ಲಲು ಅಸಾಧ್ಯನಾದವನೂ, ಸೋಲಿಸಲು ಅಸಾಧ್ಯನಾದವನೂ, ದೊಡ್ಡ ಸೈನ್ಯವುಳ್ಳವನೂ ಮತ್ತು ಮಹಾಬಲವುಳ್ಳವನೂ ಆದ ದೊಡ್ಡ ರಾಜನಾಗಿದ್ದನು.

ಕೃತೇ ವಿವಾಹೇ ತು ತದಾ ಸಾ ಕನ್ಯಾ ರಾಜಸತ್ತಮ ।
ಯೌವನಂ ಸಮನುಪ್ರಾಪ್ತಾ ಸಾ ಚ ಕನ್ಯಾ ಶಿಖಂಡಿನೀ ॥೧೪॥

ಕೃತದಾರಃ ಶಿಖಂಡೀ ಚ ಕಾಂಪಿಲ್ಯಂ ಪುನರಾಗಮತ್ ।
ನ ಚ ಸಾ ವೇದ ತಾಂ ಕನ್ಯಾಂ ಕಂಚಿತ್ ಕಾಲಂ ಸ್ತ್ರಿಯಂ ಕಿಲ ॥೧೫॥

ಎಲೈ ರಾಜಶ್ರೇಷ್ಠನೇ, ವಿವಾಹವು ಮುಗಿಯುತ್ತಿರಲು ಆ ಕನ್ಯೆಯು ಮತ್ತು ಶಿಖಂಡಿಯು ಯೌವನವನ್ನು ಹೊಂದಿದರು. ಶಿಖಂಡಿಯು ವಿವಾಹವನ್ನು ಮಾಡಿಕೊಂಡು ಕಾಂಪಿಲ್ಯನಗರಕ್ಕೆ ಹಿಂದಿರುಗಿದನು. ದಶಾರ್ಣಾಧಿಪತಿಯ ಮಗಳು ಶಿಖಂಡಿಯನ್ನು ಕನ್ಯೆ ಎಂದು ಸ್ವಲ್ಪಕಾಲದವರೆಗೆ ತಿಳಿಯಲಿಲ್ಲ.

ಯದಾ ತ್ವೇನಮಜಾನಾತ್ ಸಾ ಸ್ತ್ರಿಯಮೇವ ನ್ಯವೇದಯತ್ ॥೧೬॥

ಧಾತ್ರೀಣಾಂ ಚ ಸಖೀನಾಂ ಚ ವ್ರೀಡಮಾನಾ ನ್ಯವೇದಯತ್ ।
ಕನ್ಯಾಂ ಪಾಂಚಾಲರಾಜಸ್ಯ ಸುತಾಂ ತಾಂ ವೈ ಶಿಖಂಡಿನೀಮ್ ॥೧೭॥

ರಾಜಕುಮಾರಿಯಾದ ಅವಳು ಶಿಖಂಡಿಯು ಕನ್ಯೆಯೇ ಎಂದು ತಿಳಿದಾಗ ತನ್ನ ದಾಸಿಯರಿಗೂ ಮತ್ತು ಸಖಿಯರಿಗೂ ನಾಚಿಕೆಯಿಂದ, ಪಾಂಚಾಲರಾಜನ ಮಗಳಾದ ಶಿಖಂಡಿಯು ಕನ್ಯೆ ಎಂದು ತಿಳಿಸಿದಳು.

ತತಸ್ತಾ ರಾಜಶಾರ್ದೂಲ ಧಾತ್ರ್ಯೀ ದಾಶಾರ್ಣಿಕಾಸ್ತದಾ ।
ಜಗ್ಮುರಾರ್ತಿಂ ಪರಾಂ ಪ್ರೇಷ್ಯಾಃ ಪ್ರೇಷಯಾಮಾಸುರೇವ ಚ ॥೧೮॥

ಎಲೈ ರಾಜಶಾರ್ದೂಲನೇ, ಅನಂತರ ದಶಾರ್ಣದೇಶದ ಆ ದಾದಿಯರು ಬಹಳ ದುಃಖವನ್ನು ಹೊಂದಿ, ನಿಜಸಂಗತಿಯನ್ನು ತಿಳಿದುಕೊಳ್ಳಲು ಸೇವಕಿಯರನ್ನು ಕಳುಹಿಸಿದರು.

ತತೋ ದಶಾರ್ಣಾಧಿಪತೇಃ ಪ್ರೇಷ್ಯಾಃ ಸರ್ವಾ ನ್ಯವೇದಯನ್ ।
ವಿಪ್ರಲಂಭಂ ಯಥಾವೃತ್ತಂ ಸ ಚ ಚುಕ್ರೋಧ ಪಾರ್ಥಿವಃ ॥೧೯॥

ಅನಂತರ ದಶಾರ್ಣಾಧಿಪತಿಯ ಸೇವಕಿಯರೆಲ್ಲರೂ ನಡೆದಿರುವ ಮೋಸವನ್ನು ತಿಳಿಸಿದರು. ಆಗ ರಾಜನು ಕ್ರೋಧಗೊಂಡನು.

ಶಿಖಂಡ್ಯಪಿ ಮಹಾರಾಜ ಪುಂವದ್ ರಾಜಕುಲೇ ತದಾ ।
ವಿಜಹಾರ ಮುದಾ ಯುಕ್ತಃ ಸ್ತ್ರೀತ್ವಂ ನೈವಾಭಿರೋಚಯನ್ ॥೨೦॥

ಎಲೈ ಮಹಾರಾಜನೇ, ಶಿಖಂಡಿಯೂ ಸಹ ಆಗ ತನ್ನ ಸ್ತ್ರೀತ್ವವನ್ನು ಇಷ್ಟಪಡದೆ ಪುರುಷನಂತೆ ಸಂತೋಷದಿಂದ ರಾಜಕುಲದಲ್ಲಿ ವಿಹರಿಸುತ್ತಿದ್ದನು.

ತತಃ ಕತಿಪಯಾಹಸ್ಸು ತಚ್ಚ್ರುತ್ವಾ ಭರತರ್ಷಭ ।
ಹಿರಣ್ಯವರ್ಮಾ ರಾಜೇಂದ್ರ ರೋಷಾದಾರ್ತಿಂ ಜಗಾಮ ಹ ॥೨೧॥

ಎಲೈ ಭರತರ್ಷಭನೇ, ಕೆಲವು ದಿವಸಗಳಲ್ಲಿ ಹಿರಣ್ಯವರ್ಮನು ಆ ವಾರ್ತೆಯನ್ನು ಕೇಳಿ, ರೋಷದಿಂದ ಕೂಡಿದವನಾಗಿ ದುಃಖವನ್ನು ಹೊಂದಿದನು.

ತತೋ ದಾಶಾರ್ಣಕೋ ರಾಜಾ ತೀವ್ರಕೋಪಸಮನ್ವಿತಃ ।
ದೂತಂ ಪ್ರಸ್ಥಾಪಯಾಮಾಸ ದ್ರುಪದಸ್ಯ ನಿವೇಶನಮ್ ॥೨೨॥

ಅನಂತರ ದಶಾರ್ಣಾಧಿಪತಿಯಾದ ರಾಜನು ಬಹಳ ಕೋಪದಿಂದ ಕೂಡಿದವನಾಗಿ ದ್ರುಪದನ ಬಳಿಗೆ ಸಂದೇಶವಾಹಕನಾದ ತನ್ನ ದೂತನನ್ನು ಕಳುಹಿಸಿದನು.

ತತೋ ದ್ರುಪದಮಾಸಾದ್ಯ ದೂತಃ ಕಾಂಚನವರ್ಮಣಃ ।
ಏಕಸ್ತ್ವೇಕಾಂತಮುತ್ಸಾರ್ಯ ರಹೋ ವಚನಮಬ್ರವೀತ್ ॥೨೩॥

ಅನಂತರ ಹಿರಣ್ಯವರ್ಮನ ದೂತನು ದ್ರುಪದನನ್ನು ಸಮೀಪಿಸಿ, ಎಲ್ಲರನ್ನೂ ಕಳುಹಿಸಿ, ಏಕಾಂತದಲ್ಲಿ ತಾನೊಬ್ಬನೇ ಅವನೊಬ್ಬನನ್ನೇ ಕುರಿತು ರಹಸ್ಯವಾಗಿ ಮಾತನಾಡಿದನು.

ದಶಾರ್ಣರಾಜೋ ರಾಜಂಸ್ತಾ ಮಿದಂ ವಚನಮಬ್ರವೀತ್ ।
ಅಭಿಷಂಗಾತ್ ಪ್ರಕುಪಿತೋ ವಿಪ್ರಲಬ್ಧಸ್ತ್ವಯಾऽನಘ ॥೨೪॥

ಎಲೈ ರಾಜನೇ, ಅನಘನೇ, ನಿನ್ನ ಮೋಸ-ವಂಚನೆಗಳಿಂದ ಬಹಳ ಕೋಪಗೊಂಡ ದಶಾರ್ಣರಾಜನು ಈ ಸಂದೇಶವನ್ನು ಕಳುಹಿಸಿದ್ದಾನೆ.

ಅವಮನ್ಯಸೇ ಮಾಂ ನೃಪತೇ ನೂನಂ ದುರ್ಮಂತ್ರಿತಂ ತವ ।
ಯನ್ಮಾಂ ಕನ್ಯಾಂ ಸ್ವಕನ್ಯಾರ್ಥೇ ಮೋಹಾದ್ ಯಾಚಿತವಾನಸಿ ॥೨೫॥

ಎಲೈ ರಾಜನೇ, ನೀನು ನನಗೆ ಅವಮಾನವನ್ನು ಮಾಡುತ್ತಿದ್ದೀಯೆ. ಖಂಡಿತವಾಗಿಯೂ ನಿನ್ನ ಯೋಚನೆಯು ದುರಾಲೋಚನೆ. ಏಕೆಂದರೆ ಮೋಹದಿಂದ ನನ್ನ ಮಗಳನ್ನು ನಿನ್ನ ಮಗಳ ಸಲುವಾಗಿ ಯಾಚನೆ ಮಾಡಿದೆ.

ತಸ್ಯಾದ್ಯ ವಿಪ್ರಲಂಭಸ್ಯ ಫಲಂ ಪ್ರಾಪ್ನುಹಿ ದುರ್ಮತೇ ।
ಏಷ ತ್ವಾಂ ಸಜನಾಮಾತ್ಯಮುದ್ಧರಾಮಿ ಸ್ಥಿರೋ ಭವ ॥೨೬॥

ಎಲೈ ದುರ್ಮತಿಯೇ, ಈ ಮೋಸದ ಫಲವನ್ನು ಅನುಭವಿಸುವವನಾಗು. ನಿನ್ನನ್ನು ನಿನ್ನ ಪರಿವಾರ ಮತ್ತು ಅಮಾತ್ಯರೊಂದಿಗೆ ವಿನಾಶಪಡಿಸುತ್ತೇನೆ. ಸ್ಥಿರವಾಗಿರು.

ಅವಮತ್ಯ ಚ ವೀರ್ಯಂ ಮೇ ಕುಲಂ ಚಾರಿತ್ರಮೇವ ಚ ।
ವಿಪ್ರಲಂಭಸ್ತ್ವಯಾऽಪೂರ್ವೋ ಮನುಷ್ಯೇಷು ಪ್ರಕೀರ್ತಿತಃ ॥೨೭॥

ನನ್ನ ಕುಲವನ್ನೂ, ಪರಾಕ್ರಮವನ್ನೂ, ಚಾರಿತ್ರ್ಯವನ್ನೂ ಅವಮಾನಗೊಳಿಸಿ ಮನುಷ್ಯರಲ್ಲಿ ಎಂದೂ ನಡೆಯದಿದ್ದ ಒಂದು ಮೋಸವನ್ನು ನೀನು ಮಾಡಿದ್ದೀಯೆ.

ಕುರು ಸರ್ವಾಣಿ ಕಾರ್ಯಾಣಿ ಭುಂಕ್ಷ್ವ ಭೋಗಾನನುತ್ತಮಾನ್ ।
ಅಭಿಯಾಸ್ಯಾಮಿ ಶೀಘ್ರಂ ತ್ವಾಂ ಸಮುದ್ಧರ್ತುಂ ಸಬಾಂಧವಮ್ ॥೨೮॥

ಮಾಡಬೇಕಾದ ಎಲ್ಲಾ ಕಾರ್ಯಗಳನ್ನೂ ಮಾಡು. ಶ್ರೇಷ್ಠವಾದ ಭೋಗಗಳನ್ನೂ ಭೋಗಿಸು. ನಾನು ನಿನ್ನ ಬಂಧುಗಳ ಜೊತೆಯಲ್ಲಿ ನಿನ್ನನ್ನು ವಿನಾಶಗೊಳಿಸಲು ಶೀಘ್ರವಾಗಿ ಸೈನ್ಯದ ಜೊತೆಯಲ್ಲಿ ಬರುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಏಕನವತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೆರಡನೆಯ ಅಧ್ಯಾಯ

ದಾಶಾರ್ಣನಿಂದ ಪುನಃ ದೂತಪ್ರೇಷಣ. ದ್ರುಪದನಿಂದ ಪತ್ನಿಯ ಜೊತೆಯಲ್ಲಿ ಕರ್ತವ್ಯಸಮಾಲೋಚನೆ.

ಭೀಷ್ಮಃ

ಏವಮುಕ್ತಸ್ಯ ದೂತೇನ ದ್ರುಪದಸ್ಯ ತದಾ ನೃಪ ।
ಚೋರಸ್ಯೇವ ಗೃಹೀತಸ್ಯ ನ ಪ್ರಾವರ್ತತ ಭಾರತೀ ॥೧॥

ಭೀಷ್ಮ– ಎಲೈ ರಾಜನೇ, ದೂತನು ಹೀಗೆ ಹೇಳಿದಾಗ ಸಿಕ್ಕಿಬಿದ್ದ ಕಳ್ಳನಂತೆ ದ್ರುಪದನ ಬಾಯಿಯಿಂದ ಯಾವ ಮಾತೂ ಹೊರಡಲಿಲ್ಲ.

ಸ ಯತ್ನಮಕರೋತ್ ತೀವ್ರಂ ಸಂಬಂಧಿನ್ಯನುಶಾಸನೇ ।
ದೂತೈರ್ಮಧುರಸಂಭಾಷ್ಯೈರ್ನ ತದಸ್ತೀತಿ ಸಂದಿಶನ್ ॥೨॥

ಅವನು ತನ್ನ ಸಂಬಂಧಿಯಾದ ದಾಶಾರ್ಣರಾಜನನ್ನು ಸಮಾಧಾನಗೊಳಿಸಲು ಮಧುರವಾಗಿ ಮಾತನಾಡುವ ದೂತನನ್ನು ಕಳುಹಿಸಿ, ನೀನು ತಿಳಿದಿರುವುದು ಸರಿಯಲ್ಲ ಎಂದು ತಿಳಿಸಲು ತೀವ್ರವಾದ ಪ್ರಯತ್ನವನ್ನು ಮಾಡಿದನು.

ಸ ರಾಜಾ ಭೂಯ ಏವಾಥ ಜ್ಞಾತ್ವಾ ತತ್ತ್ವಮಥಾಗಮತ್ ।
ಕನ್ಯೇತಿ ಪಾಂಚಾಲಸುತಾಂ ತ್ವರಮಾಣೋ ವಿನಿರ್ಯಯೌ ॥೩॥

ಆ ದಶಾರ್ಣರಾಜನು ಪುನಃ ಬಂದು ಪಾಂಚಾಲರಾಜನ ಮಗನನ್ನು ಕನ್ಯೆ ಎಂದು ತಿಳಿದು ಶೀಘ್ರವಾಗಿ ಹೊರಟು ಹೋದನು.

ತತಃ ಸಂಪ್ರೇಷಯಾಮಾಸ ಮಿತ್ರಾಣಾಮಮಿತೌಜಸಾಮ್ ।
ದುಹಿತುರ್ವಿಪ್ರಲಂಭಂ ತಂ ಧಾತ್ರೀಣಾಂ ವಚನಾತ್ ತದಾ ॥೪॥

ಅನಂತರ ಅವನು ಅಮಿತಪರಾಕ್ರಮಿಗಳಾದ ತನ್ನ ಮಿತ್ರರಿಗೆ ದಾದಿಯರ ಮಾತಿನಂತೆ ತಾನು ತಿಳಿದ, ತನ್ನ ಮಗಳಿಗೆ ಆದ ಮೋಸವನ್ನು ದೂತರ ಮೂಲಕ ತಿಳಿಸಿದನು.

ತತಃ ಸಮುದಯಂ ಕೃತ್ವಾ ಬಲಾನಾಂ ರಾಜಸತ್ತಮ ।
ಅಭಿಯಾನೇ ಮತಿಂ ಚಕ್ರೇ ದ್ರುಪದಂ ಪ್ರತಿ ಭಾರತ ॥೫॥

ಎಲೈ ಭಾರತನೇ, ಅನಂತರ ರಾಜಶ್ರೇಷ್ಠನಾದ ಅವನು ಸೈನ್ಯದ ಸಂಗ್ರಹವನ್ನು ಮಾಡಿ, ದ್ರುಪದನ ಮೇಲೆ ದಂಡೆತ್ತಿ ಹೋಗಲು ನಿರ್ಧರಿಸಿದನು.

ತತಃ ಸಮ್ಮಂತ್ರಯಾಮಾಸ ಮಂತ್ರಿಭಿಃ ಸ ಮಹೀಪತಿಃ ।
ಹಿರಣ್ಯವರ್ಮಾ ರಾಜೇಂದ್ರ ಪಾಂಚಾಲ್ಯಂ ಪಾರ್ಥಿವಂ ಪ್ರತಿ ॥೬॥

ಎಲೈ ರಾಜೇಂದ್ರನೇ, ಅನಂತರ ಆ ಹಿರಣ್ಯವರ್ಮರಾಜನು ಪಾಂಚಾಲ ರಾಜನಾದ ದ್ರುಪದನನ್ನು ಕುರಿತು ಏನು ಮಾಡಬೇಕೆಂದು ಮಂತ್ರಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ನಡೆಸಿದನು.

ತತ್ರ ವೈ ನಿಶ್ಚಿತಂ ತೇಷಾಮಭೂದ್ ರಾಜ್ಞಾಂ ಮಹಾತ್ಮನಾಮ್ ॥೭॥

ತಥ್ಯಂ ಭವತಿ ಚೇದೇತತ್ ಕನ್ಯಾ ರಾಜನ್ ಶಿಖಂಡಿನೀ ।
ಬದ್ಧ್ವಾ ಪಾಂಚಾಲರಾಜಾನಮಾನಯಿಷ್ಯಾಮಹೇ ಗೃಹಮ್ ॥೮॥

ಅನ್ಯಂ ರಾಜಾನಮಾಧಾಯ ಪಾಂಚಾಲೇಷು ನರೇಶ್ವರಮ್ ।
ಅದ್ಯೈವ ಪಾತಯಿಷ್ಯಾಮೋ ದ್ರುಪದಂ ಸಶಿಖಂಡಿನಮ್ ॥೯॥

ಅಲ್ಲಿ ಮಹಾತ್ಮರಾದ ಅವರು ಎಲೈ ರಾಜನೇ, ಶಿಖಂಡಿಯು ಕನ್ಯೆಯೇ ಆದರೆ ನಾವು ಪಾಂಚಾಲರಾಜನನ್ನು ಬಂಧಿಸಿ ಇಲ್ಲಿಗೆ ಕರೆದು ತರುವೆವು. ಪಾಂಚಾಲ ದೇಶದಲ್ಲಿ ಇನ್ನೊಬ್ಬನನ್ನು ರಾಜನನ್ನಾಗಿ ಮಾಡಿ, ಈ ದಿನವೇ ದ್ರುಪದನನ್ನೂ ಮತ್ತು ಶಿಖಂಡಿಯನ್ನೂ ನಾಶಗೊಳಿಸುವೆವು ಎಂದು ಹೇಳಿ ನಿಶ್ಚಯಿಸಿದರು.

ಸ ತಥಾ ದ್ರುತಮಾಜ್ಞಾಯ ಪುನಃ ಕ್ಷತ್ತಾರಮೀಶ್ವರಃ ।
ಪ್ರಾಸ್ಥಾಪಯತ್ ಪಾರ್ಷತಾಯ ನಿಹನ್ಮೀತಿ ಸ್ಥಿರೋ ಭವ ॥೧೦॥

ಆ ಹಿರಣ್ಯವರ್ಮರಾಜನು ಪುನಃ ತನ್ನ ಸಾರಥಿಯನ್ನು ಕರೆದು ಅವನಿಗೆ, ನಿನ್ನನ್ನು ಕೊಲ್ಲುತ್ತೇನೆ, ಸ್ಥಿರವಾಗಿರು ಎಂದು ಸಂದೇಶವನ್ನು ಕೊಟ್ಟು ದೂತನನ್ನಾಗಿ ದ್ರುಪದನ ಬಳಿಗೆ ಕಳುಹಿಸಿದನು.

ಸ ಹಿ ಪ್ರಕೃತ್ಯಾ ಭೀತಶ್ಚ ಕಿಲ್ಬಿಷೀ ಚ ನರಾಧಿಪಃ ।
ಭಯಂ ತೀವ್ರಮನುಪ್ರಾಪ್ತೋ ದ್ರುಪದಃ ಪೃಥಿವೀಪತಿಃ ॥೧೧॥

ಸ್ವಾಭಾವಿಕವಾಗಿಯೇ ಭಯಗ್ರಸ್ತಸ್ವಭಾವವುಳ್ಳ ದ್ರುಪದರಾಜನು ಈಗ ಅನ್ಯಾಯವನ್ನು ಮಾಡಿದ್ದರಿಂದ ತೀವ್ರವಾದ ಭಯವನ್ನು ಹೊಂದಿದನು.

ವಿಸೃಜ್ಯ ದೂತಾನ್ ದಾಶಾರ್ಣೇ ದ್ರುಪದಃ ಶೋಕಮೂರ್ಚ್ಛಿತಃ ।
ಸಮೇತ್ಯ ಭಾರ್ಯಾಂ ರಹಿತೇ ವಾಕ್ಯಮಾಹ ನರಾಧಿಪಃ ॥೧೨॥

ಭಯೇನ ಮಹತಾऽऽವಿಷ್ಟೋ ಹೃದಿ ಶೋಕೇನ ಕರ್ಶಿತಃ ।
ಪಾಂಚಾಲರಾಜೋ ದಯಿತಾಂ ಮಾತರಂ ವೈ ಶಿಖಂಡಿನಃ ॥೧೩॥

ದ್ರುಪದರಾಜನು ದಾಶಾರ್ಣನಿಗೆ ಪುನಃ ದೂತನನ್ನು ಕಳುಹಿಸಿ, ಶೋಕತಪ್ತನಾಗಿ ಪತ್ನಿಯ ಜೊತೆಯಲ್ಲಿ ಏಕಾಂತದಲ್ಲಿ ಮಾತನಾಡಿದನು. ಬಹಳ ಭಯದಿಂದ ಕೂಡಿದ

ಮತ್ತು ಶೋಕದಿಂದ ಕರ್ಶಿತನಾದ ಪಾಂಚಾಲರಾಜನು ಶಿಖಂಡಿಯ ತಾಯಿಯಾದ ತನ್ನ ಪ್ರಿಯೆಯನ್ನು ಕುರಿತು ಹೀಗೆ ಮಾತನಾಡಿದನು.

ಅಭಿಯಾಸ್ಯತಿ ಮಾಂ ಕೋಪಾತ್ ಸಂಬಂಧೀ ಸುಮಹಾಬಲಃ ।
ಹಿರಣ್ಯವರ್ಮಾ ನೃಪತಿಃ ಕರ್ಷಮಾಣೋ ವರೂಥಿನೀಮ್ ॥೧೪॥

ನನ್ನ ಸಂಬಂಧಿಯೂ ಮತ್ತು ಮಹಾಬಲವುಳ್ಳವನೂ ಆದ ಹಿರಣ್ಯವರ್ಮರಾಜನು ದೊಡ್ಡ ಸೈನ್ಯವನ್ನು ತೆಗೆದುಕೊಂಡು ದಂಡೆತ್ತಿ ಬರುವನು.

ಕಿಮಿದಾನೀಂ ಕರಿಷ್ಯಾವೋ ಮೂಢೌ ಕನ್ಯಾಮಿಮಾಂ ಪ್ರತಿ ।
ಶಿಖಂಡೀ ಕಿಲ ಪುತ್ರಸ್ತೇ ಕನ್ಯೇತಿ ಪರಿಶಂಕಿತಃ ॥೧೫॥

ಇತಿ ನಿಶ್ಚಿತ್ಯ ತತ್ತ್ವೇನ ಸಮಿತ್ರಃ ಸಬಲಾನುಗಃ ।
ವಂಚಿತೋಽಸ್ಮೀತಿ ಮನ್ವಾನೋ ಮಾಂ ಕಿಲೋದ್ಧರ್ತುಮಿಚ್ಛತಿ ॥೧೬॥

ಮೂಢರಾದ ನಾವು ಈ ಕನ್ಯೆಯ ವಿಷಯದಲ್ಲಿ ಈಗ ಏನು ಮಾಡೋಣ? ಶಿಖಂಡಿಯು ಕನ್ಯೆ ಎಂಬ ಸಂಶಯವನ್ನು ಹೊಂದಿದ್ದ ಅವನು ಈಗ ಕನ್ಯೆ ಎಂದು ಸರಿಯಾಗಿ ತಿಳಿದು, ತಾನು ಮೋಸಹೋಗಿದ್ದೇನೆಂದು ತಿಳಿದು, ತನ್ನ ಮಿತ್ರರಾಜರು ಮತ್ತು ಸೈನ್ಯದೊಡನೆ ನನ್ನನ್ನು ನಾಶಮಾಡಲು ಬಯಸುತ್ತಾನೆ.

ಕಿಮತ್ರ ತಥ್ಯಂ ಸುಶ್ರೋಣಿ ಕಿಂ ಮಿಥ್ಯಾ ಬ್ರೂಹಿ ಶೋಭನೇ ।
ಶ್ರುತ್ವಾ ತತ್ತಃ ಶ್ರುತಂ ವಾಕ್ಯಂ ಸಂವಿಧಾಸ್ಯಾಮ್ಯಹಂ ತಥಾ ॥೧೭॥

ಎಲೌ ಸುಂದರಿಯೇ, ಶೋಭನೆಯೇ, ಈ ವಿಷಯದಲ್ಲಿ ಯಾವುದು ನಿಜ, ಯಾವುದು ಸುಳ್ಳು ಎಂದು ಹೇಳು. ನಿನ್ನ ಮಾತನ್ನು ಕೇಳಿ ನಾನು ಅದಕ್ಕೆ ಅನುಗುಣವಾಗಿ ಕಾರ್ಯವನ್ನು ಮಾಡುವೆನು.

ಅಹಂ ಹಿ ಸಂಶಯಂ ಪ್ರಾಪ್ತೋ ಬಾಲಾ ಚೇಯಂ ಶಿಖಂಡಿನೀ ।
ತ್ವಂ ಚ ರಾಜ್ಞಿ ಮಹತ್ ಕೃಚ್ಛ್ರಂ ಸಂಪ್ರಾಪ್ತಾ ವರವರ್ಣಿನೀ ॥೧೮॥

ಈ ಶಿಖಂಡಿನಿಯು ಕನ್ಯೆ ಎಂದು ನನಗೇ ದೊಡ್ಡ ಸಂಶಯವುಂಟಾಗಿದೆ. ಎಲೌ ಸುಂದರಿಯಾದ ರಾಣಿಯೇ, ನೀನೂ ಸಹ ದೊಡ್ಡ ಕಷ್ಟಕ್ಕೆ ಸಿಲುಕಿದ್ದೀಯೆ.

ಸಾ ತ್ವಂ ಸರ್ವವಿಮೋಕ್ಷಾಯ ತತ್ತ್ವಮಾಖ್ಯಾಹಿ ಪೃಚ್ಛತಃ ।
ತಥಾ ವಿದಧ್ಯಾಂ ಸುಶ್ರೋಣಿ ಕೃತ್ಯಮಾಶು ಶುಚಿಸ್ಮಿತೇ ॥೧೯॥
ಶಿಖಂಡಿನಿ ಚ ಮಾ ಭೈಸ್ತ್ವಂ ವಿಧಾಸ್ಯೇ ತತ್ರ ತತ್ತ್ವತಃ ॥೨೦॥

ಎಲೌ ಶುಚಿಸ್ಮಿತೆಯೇ, ಅಂತಹ ನೀನು ಯೋಚನೆ ಮಾಡುತ್ತಿರುವ ನನಗೆ ಈ ಸಂಕಟದಿಂದ ಪಾರುಮಾಡಲು ನಿಜವನ್ನು ಹೇಳು. ಎಲೌ ಸುಂದರಿಯೇ, ಅದನ್ನು ಕೇಳಿ ನಾನು ಸೂಕ್ತವಾದ ಕಾರ್ಯವನ್ನು ಮಾಡುವೆನು. ಶಿಖಂಡಿಯ ವಿಷಯದಲ್ಲಿ ನೀನು ಹೆದರಬೇಡ, ನಾನು ಸರಿಯಾದ ಕಾರ್ಯವನ್ನು ಮಾಡುವೆನು.

ಕೃಪಯಾऽಹಂ ವರಾರೋಹೇ ವಂಚಿತಃ ಪುತ್ರಧರ್ಮತಃ ।
ಮಯಾ ದಾಶಾರ್ಣಕೋ ರಾಜಾ ವಂಚಿತಃ ಸ ಮಹೀಪತಿಃ ॥೨೧॥
ತದಾಚಕ್ಷ್ವ ಮಹಾಭಾಗೇ ವಿಧಾಸ್ಯೇ ತತ್ರ ಯದ್ಧಿತಮ್ ॥೨೨॥

ಎಲೌ ಸುಂದರಿಯೇ, ಪುತ್ರಧರ್ಮದಿಂದ ನಾನು ವಂಚಿತನಾಗಿದ್ದೇನೆ. ನಾನೂ ಸಹ ಆ ದಶಾರ್ಣರಾಜನಿಗೆ ವಂಚನೆಯನ್ನು ಮಾಡಿದ್ದೇನೆ. ಮಹಾನುಭಾವಳೇ, ನನ್ನ ಮೇಲೆ ಕೃಪೆಯಿಂದ ಸರಿಯಾಗಿ ಹೇಳು, ನಾನು ಈ ವಿಷಯದಲ್ಲಿ ಹಿತವನ್ನು ಮಾಡುವೆನು.

ಭೀಷ್ಮಃ

ಜಾನತಾ ಹಿ ನರೇಂದ್ರೇಣ ಖ್ಯಾಪನಾರ್ಥಂ ಪರಸ್ಯ ವೈ ।
ಪ್ರಕಾಶಂ ಚೋದಿತಾ ದೇವೀ ಪ್ರತ್ಯುವಾಚ ಮಹೀಪತಿಮ್ ॥೨೩॥

ಭೀಷ್ಮ– ದ್ರುಪದರಾಜನು ಸತ್ಯವನ್ನು ತಿಳಿದಿದ್ದರೂ ಇನ್ನೊಬ್ಬರಿಗೆ ಪ್ರಸಿದ್ಧಿ ಪಡಿಸುವುದಕ್ಕಾಗಿ, ಎಲ್ಲರಿಗೂ ತಿಳಿಯುವಂತೆ ತನ್ನ ಭಾರ್ಯೆಯನ್ನು ಪ್ರಶ್ನಿಸಿದಾಗ ಅವಳು ರಾಜನನ್ನು ಕುರಿತು ಮಾತನಾಡಿದಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ದ್ವಿನವತ್ಯುತ್ತರಶತತಮೋऽಧ್ಯಾಯಃ ॥
॥ ಅಂಬೋಪಾಖ್ಯಾನಪರ್ವಣಿ ದ್ವಾವಿಂಶೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತೆರಡನೆಯ
ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ಮೂರನೆಯ ಅಧ್ಯಾಯ

ಶಿಖಂಡಿಯಿಂದ ವನಕ್ಕೆ ಹೋಗಿ ಸ್ಥೂಣಾಕರ್ಣನಲ್ಲಿ ಪುಂಸ್ತ್ವವರಣ.

ಭೀಷ್ಮಃ

ತತಃ ಶಿಖಂಡಿನೋ ಮಾತಾ ಯಥಾತತ್ತ್ವಂ ನರಾಧಿಪ ।
ಆಚಚಕ್ಷೇ ಮಹಾಬಾಹೋ ಭರ್ತ್ರೇ ಕನ್ಯಾಂ ಶಿಖಂಡಿನೀಮ್ ॥೧॥

ಭೀಷ್ಮ- ಎಲೈ ರಾಜನೇ, ಮಹಾಬಾಹುವೇ, ಆಗ ಶಿಖಂಡಿಯ ತಾಯಿಯು ತನ್ನ ಪತಿಗೆ, ಶಿಖಂಡಿಯು ಕನ್ಯೆ ಎಂದು ಸತ್ಯವನ್ನು ಹೇಳಿದಳು.

ಅಪುತ್ರಯಾ ಮಯಾ ರಾಜನ್ ಸಪತ್ನೀನಾಂ ಭಯಾದಿಯಮ್ ।
ಕನ್ಯಾ ಶಿಖಂಡಿನೀ ಜಾತೋ ಪುರುಷೋ ವೈ ನಿವೇದಿತಃ ॥೨॥

ಎಲೈ ರಾಜನೇ, ಪುತ್ರರಿಲ್ಲದ ನಾನು ಸವತಿಯರಿಗೆ ಹೆದರಿ, ಶಿಖಂಡಿಯು ಕನ್ಯೆಯಾಗಿ ಜನಿಸಿದ್ದರೂ ಪುರುಷನೆಂದು ನಿವೇದಿಸಿದೆ.

ತ್ವಯಾ ಚೈವ ನರಶ್ರೇಷ್ಠ ಮಮ ಪ್ರೀತ್ಯಾಽನುಮೋದಿತಮ್ ।
ಪುತ್ರಕರ್ಮ ಕೃತಂ ಚೈವ ಕನ್ಯಾಯಾಃ ಪಾರ್ಥಿವರ್ಷಭ ॥೩॥

ಎಲೈ ನರಶ್ರೇಷ್ಠನೇ, ನೀನೂ ಸಹ ನನ್ನ ಮಾತನ್ನು ಅನುಮೋದಿಸಿದೆ ಮತ್ತು ಪಾರ್ಥಿವರ್ಷಭನೇ, ಕನ್ಯೆಗೆ ಪುತ್ರಸಂಸ್ಕಾರಗಳನ್ನು ಮಾಡಿದ್ದಾಯಿತು.

ಭಾರ್ಯೋಢಾ ವೈ ತ್ವಯಾ ರಾಜನ್ ದಶಾರ್ಣಾದಿಪತೇಃ ಸುತಾ ।
ಮಯಾ ಚ ಪ್ರತ್ಯಭಿಹಿತಂ ದೇವಕಾರ್ಯಾರ್ಥದರ್ಶನಾತ್ ॥೪॥

ಕನ್ಯಾ ಭೂತ್ವಾ ಪುಮಾನ್ ಭಾವೀತ್ಯುಕ್ತಂ ಚೈತದುಪೇಕ್ಷಿತಮ್ ॥೫॥

ಎಲೈ ರಾಜನೇ, ದಶಾರ್ಣಾಧಿಪತಿಯ ಪುತ್ರಿಯನ್ನು ತಂದು ನೀನು ವಿವಾಹವನ್ನೂ ಮಾಡಿದೆ. ದೇವಕಾರ್ಯವನ್ನು ಗಮನಿಸಿ ನಾನೂ ಸಹ ಅದನ್ನು ಅನುಮೋದಿಸಿದೆ. ಕನ್ಯೆಯಾಗಿ ಹುಟ್ಟಿ ಪುರುಷನಾಗುತ್ತಾನೆ ಎಂಬ ದೇವವಚನವಿದ್ದುದರಿಂದ ಈ ದೋಷವನ್ನು ಉಪೇಕ್ಷೆಮಾಡಿದೆ ಎಂದು ಹೇಳಿದಳು.

ತಚ್ಚ್ರುತ್ವಾ ವೈ ದ್ರುಪದೋ ಯಾಜ್ಞಸೇನಃ
ಸರ್ವಂ ತತ್ವಂ ಮಂತ್ರವಿದ್ಭ್ಯೋ ನಿವೇದ್ಯ ।
ಮಂತ್ರಂ ರಾಜಾ ಮಂತ್ರಯಾಮಾಸ ರಾಜನ್
ಯಥಾಯುಕ್ತಂ ರಕ್ಷಣೇಽಥ ಪ್ರಜಾನಾಮ್ ॥೬॥

ಎಲೈ ರಾಜನೇ, ಯಜ್ಞಸೇನನ ಮಗನಾದ ದ್ರುಪದ ಮಹಾರಾಜನು ಅದನ್ನು ಕೇಳಿ, ಎಲ್ಲಸತ್ಯಸಂಗತಿಯನ್ನೂ ಮಂತ್ರಿಗಳಿಗೆ ತಿಳಿಸಿ, ಪ್ರಜೆಗಳ ರಕ್ಷಣೆಯನ್ನು ಹೇಗೆ ಮಾಡಲು ಸಾಧ್ಯವಾದೀತು ಎಂದು ಮಂತ್ರಾಲೋಚನೆಯನ್ನು ಮಾಡಿದನು.

ಸಂಬಂಧಕಂ ಚೈವ ಸಮರ್ಥ್ಯ ತಸ್ಮಿನ್
ದಾಶಾರ್ಣಕೇ ವೈ ನೃಪತೌ ನರೇಂದ್ರಃ ।
ಸ್ವಯಂ ಕೃತ್ವಾ ವಿಪ್ರಲಂಭಂ ಯಥಾವತ್
ಮಂತ್ರೈಕಾಗ್ರೋ ನಿಶ್ಚಯಂ ವೈ ಜಗಾಮ ॥೭॥

ದಾಶಾರ್ಣನ ಜೊತೆಯಲ್ಲಿಸಂಬಂಧವನ್ನು ತಾನೇ ಅಪೇಕ್ಷಿಸಿ ಮತ್ತು ಮೋಸವನ್ನು ಮಾಡಿ ಈ ಮಂತ್ರಾಲೋಚನೆಯನ್ನು ಮಾಡಿ. ಒಂದು ನಿಶ್ಚಯಕ್ಕೆ ಬಂದನು.

ಸ್ವಭಾವಯುಕ್ತಂ ನಗರಮಾಪತ್ಕಾಲೇ ತು ಭಾರತ ।
ಗೋಪಯಾಮಾಸ ರಾಜೇಂದ್ರ ಸರ್ವತಃ ಸಮಲಂಕೃತಮ್ ॥೮॥

ಎಲೈ ಭಾರತನೇ, ಸ್ವಾಭಾವಿಕ ಪರಿಸ್ಥಿತಿಯಲ್ಲಿದ್ದ ಅಲಂಕೃತವಾದ ತನ್ನ ನಗರವನ್ನು ಆಪತ್ಕಾಲದಲ್ಲಿ ಚೆನ್ನಾಗಿ ರಕ್ಷಣೆ ಮಾಡಿದನು.

ಆರ್ತಿಂ ಚ ಪರಮಾಂ ರಾಜಾ ಜಗಾಮ ಸಹ ಭಾರ್ಯಯಾ ।
ದಶಾರ್ಣಪತಿನಾ ಸಾರ್ಧಂ ವಿರೋಧೇ ಭರತರ್ಷಭ ॥೯॥

ಎಲೈ ಭರತರ್ಷಭನೇ, ದಶಾರ್ಣಾಧಿಪತಿಯ ಜೊತೆಯಲ್ಲಿ ವಿರೋಧವು ಉಂಟಾಗುತ್ತಿರಲು ರಾಜನು ತನ್ನ ಪತ್ನಿಯ ಜೊತೆಯಲ್ಲಿ ಬಹಳ ದುಃಖವನ್ನು ಹೊಂದಿದನು.

ಕಥಂ ಸಂಬಂಧಿನಾ ಸಾರ್ಧಂ ನ ಮೇ ಸ್ಯಾದ್ ವಿಗ್ರಹೋ ಮಹಾನ್ ।
ಇತಿ ಸಂಚಿಂತ್ಯ ಮನಸಾ ದೇವತಾಮರ್ಚಯತ್ ತದಾ ॥೧೦॥

ಸಂಬಂಧಿಯಾದ ಅವನ ಜೊತೆಯಲ್ಲಿ ನನಗೆ ಹೇಗೆ ದೊಡ್ಡ ಯುದ್ಧವು ನಡೆಯುವುದು ತಪ್ಪೀತು ಎಂದು ಮನಸ್ಸಿನಲ್ಲಿ ಯೋಚಿಸುತ್ತಾ ದೇವತೆಗಳನ್ನು ಪೂಜಿಸಿದನು.

ತಂ ತು ದೃಷ್ಟ್ವಾ ತದಾ ರಾಜನ್ ದೇವೀ ದೇವಪರಂ ತದಾ ।
ಅರ್ಚಾಂ ಪ್ರಯುಂಜಾನಮಥೋ ಭಾರ್ಯಾ ವಚನಮಬ್ರವೀತ್ ॥೧೧॥

ಎಲೈ ರಾಜನೇ, ದೇವನಿಷ್ಠನಾಗಿ ಪೂಜೆಯನ್ನು ಮಾಡುವ ರಾಜನನ್ನು ನೋಡಿ ಅವನ ಪತ್ನಿಯು ಮಾತನಾಡಿದಳು.

ದೇವಾನಾಂ ಪ್ರತಿಪತ್ತಿಶ್ಚ ಸತ್ಯಾ ಸಾಧುಮತಾ ತದಾ ।
ದೈವತಾನಿ ಚ ಸರ್ವಾಣಿ ಪೂಜ್ಯಂತಾಂ ಭೂರಿದಕ್ಷಿಣೈಃ ॥೧೨॥

ಅಗ್ನಯಶ್ಚಾಪಿ ಹೂಯಂತಾಂ ದಾಶಾರ್ಣಪ್ರತಿಷೇಧನೇ ॥೧೩॥

ದೇವತೆಗಳ ಪೂಜೆಯು ಸತ್ಯವಾದ ಫಲವನ್ನು ಕೊಡುತ್ತದೆ ಎಂದು ಸಜ್ಜನರಿಗೆ ಅಭಿಪ್ರೇತವಾದುದು. ಆದ್ದರಿಂದ ಬಹಳ ದಕ್ಷಿಣೆಗಳನ್ನು ಕೊಟ್ಟು ಎಲ್ಲಾ ದೇವತೆಗಳನ್ನೂ ಪೂಜೆ ಮಾಡುವವನಾಗು. ದಶಾರ್ಣಾಧಿಪತಿಯು ಬರದಂತೆ ಸಂಕಲ್ಪವನ್ನು ಮಾಡಿ ಅಗ್ನಿಗಳಲ್ಲಿ ಹೋಮವನ್ನು ಮಾಡು.

ಅಯುದ್ಧೇನ ನಿವೃತ್ತಿಂ ಚ ಮನಸಾ ಚಿಂತಯ ಪ್ರಭೋ ।
ದೇವತಾನಾಂ ಪ್ರಸಾದೇನ ಸರ್ವಮೇತದ್ ಭವಿಷ್ಯತಿ ॥೧೪॥

ಎಲೈ ಪ್ರಭುವೇ, ದಶಾರ್ಣಾಧಿಪತಿಯು ಯುದ್ಧವನ್ನು ಮಾಡದೆ ಹಿಂದಿರುಗುವಂತೆ ಮನಸ್ಸಿನಲ್ಲಿ ಚಿಂತಿಸು. ದೇವತೆಗಳ ಅನುಗ್ರಹದಿಂದ ಇವೆಲ್ಲವೂ ಕೈಗೂಡುವುದು.

ಮಂತ್ರಿಭಿರ್ಮಂತ್ರಿತಂ ಸಾರ್ಧಂ ತ್ವಯಾ ಪೃಥುಲಲೋಚನ ।
ಪುರಸ್ಯಾಸ್ಯಾವಿನಾಶಾಯ ಯಚ್ಚ ರಾಜಂಸ್ತಥಾ ಕುರು ॥೧೫॥

ಎಲೈ ವಿಶಾಲಾಕ್ಷನೇ, ಈ ಪಟ್ಟಣದ ರಕ್ಷಣೆಗಾಗಿ ಮಂತ್ರಿಗಳ ಜೊತೆಯಲ್ಲಿ ಏನು ಮಂತ್ರಾಲೋಚನೆಯನ್ನು ನಡೆಸಿದೆಯೋ ಅದರಂತೆ ಎಲ್ಲವನ್ನೂ ವ್ಯವಸ್ಥೆ ಮಾಡು.

ದೈವಂ ಹಿ ಮಾನುಷೋಪೇತಂ ಭೃಶಂ ಸಿದ್ಧ್ಯತಿ ಪಾರ್ಥಿವ ।
ಪರಸ್ಪರವಿರೋಧಾತ್ತು ನಾನಯೋಃ ಸಿದ್ಧಿರಸ್ತಿ ವೈ ॥೧೬॥

ಎಲೈ ರಾಜನೇ, ದೈವಾನುಗ್ರಹದ ಜೊತೆಯಲ್ಲಿ ಮನುಷ್ಯಪ್ರಯತ್ನವೂ ಸೇರಿದರೆ ಕಾರ್ಯಗಳು ಚೆನ್ನಾಗಿ ಸಿದ್ಧಿಸುತ್ತವೆ. ಅವುಗಳಿಗೆ ವಿರೋಧವಿದ್ದರೆ ಮಾತ್ರ ಸಿದ್ಧಿಯಾಗುವುದಿಲ್ಲವಷ್ಟೆ!

ತಸ್ಮಾದ್ ವಿಧಾಯ ನಗರೇ ವಿಧಾನಂ ಸಚಿವೈಃ ಸಹ ।
ಅರ್ಚಯಸ್ವ ಯಥಾಕಾಮಂ ದೈವತಾನಿ ವಿಶಾಂಪತೇ ॥೧೭॥

ಎಲೈ ರಾಜನೇ, ಆದ್ದರಿಂದ ಸಚಿವರ ಜೊತೆಯಲ್ಲಿ ನಗರದ ರಕ್ಷಣೆಗೆ ವ್ಯವಸ್ಥೆ ಮಾಡಿ, ನಿನ್ನ ಇಚ್ಛೆಗೆ ಅನುಗುಣವಾಗಿ ದೇವತೆಗಳನ್ನು ಪೂಜಿಸು (ಎಂದು ಹೇಳಿದಳು).

ಏವಂ ಸಂಭಾಷಮಾಣೌ ತು ದೃಷ್ಟ್ವಾ ಶೋಕಪರಾಯಣೌ ।
ಶಿಖಂಡಿನೀ ತದಾ ಕನ್ಯಾ ವ್ರೀಡಿತೇವ ತಪಸ್ವಿನೀ ॥೧೮॥

ಹೀಗೆ ಶೋಕಪರಾಯಣರಾಗಿ ಮಾತನಾಡುತ್ತಿದ್ದ ಅವರನ್ನು ನೋಡಿ ಕನ್ಯೆಯೂ, ಶೋಚನೀಯಳೂ ಆದ ಶಿಖಂಡಿನಿಯು ನಾಚಿಕೆಗೊಂಡಳು.

ತತಃ ಸಾ ಚಿಂತಯಾಮಾಸ ಮತ್ಕೃತೇ ದುಃಖಿತಾವುಭೌ ।
ಇಮಾವಿತಿ ತತಶ್ಚಕ್ರೇ ಮತಿಂ ಪ್ರಾಣವಿನಾಶನೇ ॥೧೯॥

ಅವಳು ನನ್ನ ಸಲುವಾಗಿ ಇವರಿಬ್ಬರೂ ದುಃಖಪಡುತ್ತಿದ್ದಾರೆ ಎಂದು ಚಿಂತಿಸಿ ಪ್ರಾಣತ್ಯಾಗವನ್ನು ಮಾಡಲು ನಿಶ್ಚಯಿಸಿದಳು.

ಏವಂ ಸಾ ನಿಶ್ಚಯಂ ಕೃತ್ವಾ ಭೃಶಂ ಶೋಕಪರಾಯಣಾ ।
ನಿರ್ಜಗಾಮ ಗೃಹಂ ತ್ಯಕ್ತ್ವಾ ಗಹನಂ ನಿರ್ಜನಂ ವನಮ್ ॥೨೦॥

ಯಕ್ಷೇಣರ್ದ್ಧಿಮತಾ ರಾಜನ್ ಸ್ಥೂಣಾಕರ್ಣೇನ ಪಾಲಿತಮ್ ॥೨೧॥

ಎಲೈ ರಾಜನೇ, ಶೋಕಪರಾಯಣಳಾದ ಅವಳು ಹೀಗೆ ನಿಶ್ಚಯಿಸಿ, ಮನೆಯನ್ನು ಬಿಟ್ಟುಹೊರಟು, ಸಂಪದ್ಯುಕ್ತನಾದ ಯಕ್ಷನಾದ ಸ್ಥೂಣಾಕರ್ಣನಿಂದ ರಕ್ಷಿತವಾದ ವನಕ್ಕೆ ಬಂದಳು.

ತದ್ಭಯಾದೇವ ಚ ಜನೋ ವಿಸರ್ಜಯತಿ ತದ್ವನಮ್ ॥೨೨॥

ತತ್ರ ಸ್ಥೂಣಾಸ್ಯಭವನಂ ಸುಧಾಮೃತ್ತಿಕಲೇಪನಮ್ ।
ಲಾಜೋತ್ಥಾಪಿತಧೂಮಾಢ್ಯಮುಚ್ಚಪ್ರಾಕಾರತೋರಣಮ್ ॥೨೩॥

ಸ್ಥೂಣಾಕರ್ಣನ ಭಯದಿಂದಲೇ ಜನರು ಆ ವನಕ್ಕೆ ಹೋಗುತ್ತಿರಲಿಲ್ಲ. ಅಲ್ಲಿ ಸುಣ್ಣ-ಮೃತ್ತಿಕೆಗಳಿಂದ ಲೇಪಿತವಾದ, ಅರಳುಗಳಿಂದ ಉಂಟಾದ ಧೂಮದಿಂದ ಕೂಡಿದ, ಒಳ್ಳೆಯ ಪ್ರಾಕಾರತೋರಣಗಳಿದ್ದ ಸ್ಥೂಣಾಕರ್ಣನ ಗೃಹವಿದ್ದಿತು.

ತತ್ ಪ್ರವಿಶ್ಯ ಶಿಖಂಡೀ ಸಾ ದ್ರುಪದಸ್ಯಾತ್ಮಜಾ ನೃಪ ।
ಅನಶ್ನತೀ ಬಹುತಿಥಂ ಶರೀರಮುದಶೋಷಯತ್ ॥೨೪॥

ಎಲೈ ರಾಜನೇ, ದ್ರುಪದನ ಮಗಳಾದ ಆ ಶಿಖಂಡಿನಿಯು ಅದನ್ನು ಪ್ರವೇಶಿಸಿ ಬಹಳ ದಿನಗಳ ಕಾಲ ಆಹಾರವನ್ನು ಸೇವಿಸದೆ ಶರೀರವನ್ನು ಒಣಗಿಸಿದಳು.

ದರ್ಶಯಾಮಾಸ ತಾಂ ಯಕ್ಷಃ ಸ್ಥೂಣೋ ಮದ್ಧಕ್ಷಸಂಯುತಃ ॥೨೫॥

ಕಿಮರ್ಥೋಽಯಂ ತವಾರಂಭಃ ಕರಿಷ್ಯೇ ಬ್ರೂಹಿ ಮಾಚಿರಮ್ ॥೨೬॥

ಕಂದುಬಣ್ಣದ ಕಣ್ಣುಗಳನ್ನು ಹೊಂದಿದ್ದ ಆ ಸ್ಥೂಣಾಕರ್ಣನು ಅವಳಿಗೆ ದರ್ಶನವನ್ನು ಕೊಟ್ಟು, ಏತಕ್ಕೆ ಹೀಗೆ ಮಾಡುತ್ತಿದ್ದೀಯೆ? ನಿನ್ನ ಸಂಕಲ್ಪವನ್ನು ನೆರವೇರಿಸುವೆನು, ಬೇಗ ಹೇಳು ಎಂದು ಹೇಳಿದನು.

ಅಶಕ್ಯಮಿತಿ ಸಾ ಯಕ್ಷಂ ಪುನಃ ಪುನರುವಾಚ ಹ ।
ಕರಿಷ್ಯಾಮೀತಿ ವೈ ಕ್ಷಿಪ್ರಂ ಪ್ರತ್ಯುವಾಚಾಥ ಗುಹ್ಯಕಃ ॥೨೭॥

ಅವಳು ಯಕ್ಷನನ್ನು ಕುರಿತು, ಅದು ಸಾಧ್ಯವಿಲ್ಲ ಎಂದು ಪುನಃ ಪುನಃ ಹೇಳಿದಳು. ಆ ಯಕ್ಷನಾದರೂ ನಾನು ಮಾಡುವೆನು ಎಂದು ಶೀಘ್ರವಾಗಿ ಉತ್ತರವನ್ನು ಕೊಟ್ಟನು.

ಧನೇಶ್ವರಸ್ಯಾನುಚರೋ ವರದೋಽಸ್ಮಿ ನೃಪಾತ್ಮಜೇ ।
ಅದೇಯಮಪಿ ದಾಸ್ಯಾಮಿ ಬ್ರೂಹಿ ಯತ್ ತೇ ವಿವಕ್ಷಿತಮ್ ॥೨೮॥

ಎಲೌ ರಾಜಕುಮಾರಿಯೇ, ನಾನು ಕುಬೇರನ ಅನುಚರ. ನಿನಗೆ ವರವನ್ನು ಕೊಡುತ್ತೇನೆ. ಕೊಡಲು ಸಾಧ್ಯವಿಲ್ಲದಿದ್ದರೂ ಕೊಡುವೆನು. ನಿನ್ನ ಮನಸ್ಸಿನಲ್ಲಿರುವ ಆಸೆಯನ್ನು ಹೇಳು (ಎಂದು ಕೇಳಿದನು).

ಭೀಷ್ಮಃ

ತತಃ ಶಿಖಂಡೀ ತತ್ ಸರ್ವಮಖಿಲೇನ ನ್ಯವೇದಯತ್ ।
ತಸ್ಮೈ ಯಕ್ಷಪ್ರಧಾನಾಯ ಸ್ಥೂಣಾಕರ್ಣಾಯ ಭಾರತ ॥೨೯॥

ಭೀಷ್ಮ– ಎಲೈ ಭಾರತನೇ, ಆಗ ಯಕ್ಷಶ್ರೇಷ್ಠನಾದ ಆ ಸ್ಥೂಣಾಕರ್ಣನಿಗೆ ಶಿಖಂಡಿನಿಯು ನಡೆದ ಎಲ್ಲ ವೃತ್ತಾಂತವನ್ನೂ ತಿಳಿಸಿದಳು.

ಆಪನ್ನೋ ಮೇ ಪಿತಾ ಯಕ್ಷ ನಚಿರಾದ್ ವಿನಶಿಷ್ಯತಿ ।
ಅಭಿಯಾಸ್ಯತಿ ಸಕ್ರೋಧೋ ದಶಾರ್ಣಾಧಿಪತಿರ್ಹಿ ತಮ್ ॥೩೦॥

ಮನ್ನಿಮಿತ್ತಂ ಮಹಾಬಾಹೋ ಸ ಹೇಮಕವಚೋ ನೃಪಃ ॥೩೧॥

ಎಲೈ ಯಕ್ಷನೇ, ನನ್ನ ತಂದೆಯು ಆಪತ್ತಿಗೆ ಒಳಗಾಗಿದ್ದಾನೆ. ಶೀಘ್ರವಾಗಿ ನಾಶವನ್ನು ಹೊಂದುವನು. ಎಲೈ ಮಹಾಬಾಹುವೇ, ದಶಾರ್ಣಾಧಿಪತಿಯಾದ ಹೇಮಕವಚ ರಾಜನು ನನ್ನ ನಿಮಿತ್ತದಿಂದ ಕ್ರೋಧದಿಂದ ಕೂಡಿದವನಾಗಿ ಅವನ ಮೇಲೆ ದಂಡೆತ್ತಿ ಬರುತ್ತಿದ್ದಾನೆ.

ತಸ್ಮಾದ್ ರಕ್ಷಸ್ವ ಮಾಂ ಯಕ್ಷ ಮಾತರಂ ಪಿತರಂ ಚ ಮೇ ॥೩೨॥

ಪ್ರತಿಜ್ಞಾತೋ ಹಿ ಭವತಾ ದುಃಖಪ್ರತಿಶಮೋ ಮಮ ।
ಭವೇಯಂ ಪುರುಷೋ ಯಕ್ಷ ತತ್ಪ್ರಸಾದಾದನಿಂದಿತಃ ॥೩೩॥

ಎಲೈ ಯಕ್ಷನೇ, ಆದ್ದರಿಂದ ನನ್ನನ್ನೂ ಮತ್ತು ನನ್ನ ತಂದೆ-ತಾಯಿಯರನ್ನೂ ರಕ್ಷಿಸು. ನೀನು ನನ್ನ ದುಃಖವನ್ನು ನಾಶಮಾಡುವೆನೆಂದು ಪ್ರತಿಜ್ಞೆ ಮಾಡಿದ್ದೀಯೆ. ಆದ್ದರಿಂದ ಎಲೈ ಯಕ್ಷನೇ, ನಿನ್ನ ಅನುಗ್ರಹದಿಂದ ನಾನು ನಿರ್ದುಷ್ಟನಾದ ಪುರುಷನಾದೇನು.

ಯಾವದೇವ ಸ ರಾಜಾ ವೈ ನೋಪಯಾತಿ ಪುರಂ ಮಮ ।
ತಾವದೇವ ಮಹಾಯಕ್ಷ ಪ್ರಸಾದಂ ಕುರು ಗುಹ್ಯಕ ॥೩೪॥

ಎಲೈ ಮಹಾಯಕ್ಷನೇ, ಗುಹ್ಯಕನೇ, ಆ ರಾಜನು ನಮ್ಮ ಪಟ್ಟಣಕ್ಕೆ ಬರುವಷ್ಟರಲ್ಲಿ ನೀನು ನನಗೆ ಅನುಗ್ರಹವನ್ನು ಮಾಡು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ತ್ರಿನವತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ತ್ರಯೋವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ನಾಲ್ಕನೆಯ ಅಧ್ಯಾಯ

ಶಿಖಂಡಿಯ ಪುಂಸ್ತ್ವ ಪ್ರಾಪ್ತಿ.

ಭೀಷ್ಮಃ

ಶಿಖಂಡಿವಾಕ್ಯಂ ಶ್ರುತ್ವಾऽಥ ಸ ಯಕ್ಷೋ ಭರತರ್ಷಭ ।
ಪ್ರೋವಾಚ ಮನಸಾ ಚಿಂತ್ಯ ದೈವೇನೋಪನಿಪೀಡಿತಃ ॥೧॥

ಭವಿತವ್ಯಂ ಯಥಾ ತದ್ಧಿ ಮಮ ದುಃಖಾಯ ಕೌರವ ॥೨॥

ಭೀಷ್ಮ– ಎಲೈ ಕೌರವನೇ, ಭರತರ್ಷಭನೇ, ಶಿಖಂಡಿಯ ವಾಕ್ಯವನ್ನು ಕೇಳಿದ ಯಕ್ಷನು ಮನಸ್ಸಿನಿಂದ ಚಿಂತಿಸಿ, ದೈವಪ್ರೇರಿತನಾಗಿ ನನ್ನ ದುಃಖಕ್ಕೋಸ್ಕರವಾಗಿ ಹೀಗೆ ಆಗಬೇಕಾಗಿದೆ ಎಂದು ಹೇಳಿದನು.

ಸ್ಥೂಣಾಕರ್ಣಃ

ಭದ್ರೇ ಕಾಮಂ ಕರಿಷ್ಯಾಮಿ ಸಮಯಂ ತು ನಿಬೋಧ ಮೇ ॥೩॥

ಸ್ವಂ ತೇ ಪುಂಸ್ತ್ವಂ ಪ್ರದಾಸ್ಯಾಮಿ ಸ್ತ್ರೀತ್ವಂ ಧಾರಯಿತಾಸ್ಮಿ ತೇ ।
ಕಂಚಿತ್ ಕಾಲಂ ತು ತೇ ದಾಸ್ಯೇ ಪುಂಲಿಂಗಂ ಸ್ವಮಿದಂ ತವ ॥೪॥

ಆಗಂತವ್ಯಂ ತ್ವಯಾ ಕಾಲೇ ಸತ್ಯಂ ಚೈವ ವದಸ್ವ ಮೇ ॥೫॥

ಸ್ಥೂಣಾಕರ್ಣ– ಮಂಗಳಸ್ವರೂಪಳೇ, ನಿನ್ನ ಆಸೆಯನ್ನು ನೆರವೇರಿಸುವೆನು. ನನ್ನ ನಿಬಂಧನೆಯನ್ನು ಕೇಳು. ನನ್ನ ಪುಂಸ್ತ್ವವನ್ನು ನಿನಗೆ ಕೊಟ್ಟು ನಿನ್ನ ಸ್ತ್ರೀತ್ವವನ್ನು ನಾನು ಧರಿಸುವೆನು. ಈ ನನ್ನ ಪುಂಸ್ತ್ವವನ್ನು ನಿನಗೆ ಸ್ವಲ್ಪ ಕಾಲದವರೆಗೆ ಮಾತ್ರ ಕೊಡುವೆನು. ನೀನು ಸ್ವಲ್ಪ ಕಾಲದ ಮೇಲೆ ಹಿಂದಿರುಗಬೇಕು. ನನಗೆ ವಚನವನ್ನು ಕೊಡು.

ಪ್ರಭುಃ ಸಂಕಲ್ಪಸಿದ್ಧೋಽಸ್ಮಿ ಕಾಮರೂಪೀ ವಿಹಂಗಮಃ ।
ಮತ್ಪ್ರಸಾದಾತ್ ಪುರಂ ಚೈವ ತ್ರಾಹಿ ಬಂಧೂಂಶ್ಚ ಕೇವಲಮ್ ॥೬॥

ನಾನು ಸಂಕಲ್ಪಸಿದ್ಧನಾದ, ಕಾಮರೂಪವನ್ನು ಧರಿಸುವ, ಆಕಾಶ ಸಂಚಾರಿಯಾದ ಪ್ರಭುವಾದವನು. ನನ್ನ ಅನುಗ್ರಹದಿಂದ ನಿನ್ನ ಪಟ್ಟಣವನ್ನೂ ಮತ್ತು ಬಂಧುಗಳನ್ನೂ ರಕ್ಷಿಸು.

ಸ್ತ್ರೀಲಿಂಗಂ ಧಾರಯಿಷ್ಯಾಮಿ ತವೇದಂ ಪಾರ್ಥಿವಾತ್ಮಜೇ ।
ಸತ್ಯಂ ಮೇ ಪ್ರತಿಜಾನೀಹಿ ಕರಿಷ್ಯಾಮಿ ಪ್ರಿಯಂ ತವ ॥೭॥

ಎಲೌ ರಾಜಕುಮಾರಿಯೇ, ನಿನ್ನ ಈ ಸ್ತ್ರೀಲಿಂಗವನ್ನು ನಾನು ಧರಿಸುವೆನು. ನಿನಗೆ ಪ್ರಿಯವನ್ನು ಮಾಡುವೆನು. ನನಗೆ ಸತ್ಯವಚನವನ್ನು ಪ್ರತಿಜ್ಞೆ ಮಾಡು.

ಶಿಖಂಡೀ

ಪ್ರತಿದಾಸ್ಯಾಮಿ ಭಗವನ್ ಪುಲ್ಲಿಂಗಂ ತವ ಸುವ್ರತ ।
ಕಿಂಚಿತ್ಕಾಲಾಂತರಂ ಸ್ತ್ರೀತ್ವಂ ಧಾರಯಸ್ವ ನಿಶಾಚರ ॥೮॥

ಶಿಖಂಡೀ– ಎಲೈ ಸುವ್ರತನೇ, ಪೂಜ್ಯನೇ, ನಿನಗೆ ಪುಲ್ಲಿಂಗವನ್ನು ಸ್ವಲ್ಪ ಕಾಲದ ನಂತರ ಹಿಂದಿರುಗಿಸುವೆನು. ಎಲೈ ನಿಶಾಚರನೇ, ಸ್ತ್ರೀತ್ವವನ್ನು ಧರಿಸು.

ಪ್ರತಿಯಾತೇ ದಶಾರ್ಣೇ ತು ಪಾರ್ಥಿವೇ ಹೇಮವರ್ಮಣಿ ।
ಕನ್ಯೈವ ಹಿ ಭವಿಷ್ಯಾಮಿ ಪುರುಷಸ್ತ್ವಂ ಭವಿಷ್ಯಸಿ ॥೯॥

ದಶಾರ್ಣಾಧಿಪತಿಯಾದ ಹಿರಣ್ಯವರ್ಮನು ಹಿಂದಿರುಗಿದ ಮೇಲೆ ನಾನು ಕನ್ಯೆಯಾಗುವೆನು. ನೀನು ಪುರುಷನಾಗುವಿ.

ಇತ್ಯುಕ್ತ್ವಾ ಸಮಯಂ ತತ್ರ ಚಕ್ರಾತೇ ತಾವುಭೌ ನೃಪ ।
ಅನ್ಯೋನ್ಯಸ್ಯಾನಭಿದ್ರೋಹೇ ತೌ ಸಂಕ್ರಾಮಯತುಸ್ತದಾ ॥೧೦॥

ಎಲೈ ರಾಜನೇ, ಹೀಗೆ ಹೇಳಿ ಅವರಿಬ್ಬರೂ ಪರಸ್ಪರ ದ್ರೋಹವನ್ನು ಮಾಡದಿರಲು ಒಪ್ಪಂದವನ್ನು ಮಾಡಿಕೊಂಡು, ಲಿಂಗಗಳನ್ನು ವ್ಯತ್ಯಾಸ ಮಾಡಿಕೊಂಡರು.

ಸ್ತ್ರೀಲಿಂಗಂ ಧಾರಯಾಮಾಸ ಸ್ಥೂಣಕೋ ಯಕ್ಷೋಽಥ ಭಾರತ ।
ಯಕ್ಷರೂಪಂ ಚ ತದ್ದೀಪ್ತಂ ಶಿಖಂಡೀ ಪ್ರತ್ಯಪದ್ಯತ ॥೧೧॥

ಎಲೈ ಭಾರತನೇ, ಯಕ್ಷನಾದ ಸ್ಥೂಣಾಕರ್ಣನು ಆಗ ಸ್ತ್ರೀಲಿಂಗವನ್ನು ಧರಿಸಿದನು. ಶಿಖಂಡಿಯು ಪ್ರಕಾಶಮಾನವಾದ ಯಕ್ಷರೂಪವನ್ನು ಹೊಂದಿದಳು.

ತತಃ ಶಿಖಂಡೀ ಪಾಂಚಾಲ್ಯಃ ಪುಂಸ್ತ್ವಮಾಸಾದ್ಯ ಭಾರತ ।
ವಿವೇಶ ನಗರಂ ಹೃಷ್ಟಃ ಪಿತರಂ ಚ ಸಮಾಸದತ್ ॥೧೨॥

ಎಲೈ ಭಾರತನೇ, ಅನಂತರ ಪಾಂಚಾಲಕುಮಾರಿಯಾದ ಶಿಖಂಡಿಯು ಪುಂಸ್ತ್ವವನ್ನು ಹೊಂದಿ, ಸಂತೋಷದಿಂದ ನಗರವನ್ನು ಪ್ರವೇಶಿಸಿ, ತಂದೆಯ ಬಳಿಗೆ ಬಂದನು.

ಯಥಾವೃತ್ತಂ ತು ತತ್ಸರ್ವಮಾಚಖ್ಯೌ ದ್ರುಪದಸ್ಯ ತತ್ ।
ಮಾತುಶ್ಚ ರಹಿತೇ ರಾಜನ್ ಪ್ರಸಾದಂ ಯಕ್ಷಜಂ ತದಾ ॥೧೩॥

ಎಲೈ ರಾಜನೇ, ಯಕ್ಷನು ತನಗೆ ಮಾಡಿದ ಅನುಗ್ರಹವೆಲ್ಲವನ್ನೂ ನಡೆದಂತೆಯೇ ದ್ರುಪದನಿಗೂ ಮತ್ತು ತನ್ನ ತಾಯಿಗೂ ಏಕಾಂತದಲ್ಲಿ ತಿಳಿಸಿದನು.

ದ್ರುಪದಸ್ತಸ್ಯ ತಚ್ಛ್ರುತ್ವಾ ಹರ್ಷಮಾಹಾರಯತ್ ಪರಮ್ ।
ಸಭಾರ್ಯಸ್ತಚ್ಚ ಸಸ್ಮಾರ ಮಹೇಶ್ವರವಚಸ್ತದಾ ॥೧೪॥

ಅದನ್ನು ಕೇಳಿದ ದ್ರುಪದನು ಪತ್ನಿಯ ಜೊತೆಯಲ್ಲಿ ಬಹಳ ಸಂತೋಷವನ್ನು ಹೊಂದಿ ರುದ್ರದೇವರ ಮಾತುಗಳನ್ನು ಆಗ ಸ್ಮರಿಸಿದನು.

ತತಃ ಸಂಪ್ರೇಷಯಾಮಾಸ ದಶಾರ್ಣಾಧಿಪತೇರ್ನೃಪಃ ।
ಪುರುಷೋಽಯಂ ಮಮ ಸುತಃ ಶ್ರದ್ದಧಾತು ಭವಾನಿತಿ ॥೧೫॥

ಅನಂತರ ದ್ರುಪದರಾಜನು ನನ್ನ ಮಗನು ಪುರುಷನೇ. ನನ್ನ ಮಾತನ್ನು ನೀನು ನಂಬು ಎಂದು ಹೇಳಿ ದಶಾರ್ಣಾಧಿಪತಿಯ ಸಮೀಪಕ್ಕೆ ಒಬ್ಬ ದೂತನನ್ನು ಕಳುಹಿಸಿದನು.

ಅಥ ದಾಶಾರ್ಣಕೋ ರಾಜಾ ಸಹಸಾऽಭ್ಯಾಗಮತ್ ತದಾ ।
ಪಾಂಚಾಲರಾಜಂ ದ್ರುಪದಂ ದುಃಖಿಶೋಕಸಮನ್ವಿತಃ ॥೧೬॥

ಅನಂತರ ದಶಾರ್ಣರಾಜನು ದುಃಖಿಶೋಕ ಸಮನ್ವಿತನಾಗಿ ಇದ್ದಕ್ಕಿದ್ದಂತೆಯೇ ಪಾಂಚಾಲರಾಜನಾದ ದ್ರುಪದನ ಬಳಿಗೆ ಬಂದನು.

ತತಃ ಕಾಂಪಿಲ್ಯಮಾಸಾದ್ಯ ದಶಾರ್ಣಾಧಿಪತಿಸ್ತತಃ ।
ಪ್ರೇಷಯಾಮಾಸ ಸತ್ಕೃತ್ಯ ದೂತಂ ಬ್ರಹ್ಮವಿದಾಂ ವರಮ್ ॥೧೭॥

ದಶಾರ್ಣಾಧಿಪತಿಯು ದ್ರುಪದನ ರಾಜಧಾನಿಯಾದ ಕಾಂಪಿಲ್ಯಕ್ಕೆ ಬಂದು, ವೇದವಿದ್ವಾಂಸನಾದ ಒಬ್ಬ ಬ್ರಾಹ್ಮಣನನ್ನು ಸತ್ಕರಿಸಿ, ಅವನನ್ನು ದೂತನನ್ನಾಗಿ ದ್ರುಪದನ ಬಳಿಗೆ ಕಳುಹಿಸಿದನು.

ಬ್ರೂಹಿ ಮದ್ವಚನಾದ್ ದೂತ ಪಾಂಚಾಲ್ಯಂ ತಂ ನೃಪಾಧಮಮ್ ॥

ಯನ್ಮೇ ಕನ್ಯಾಂ ಸ್ವಕನ್ಯಾರ್ಥೇ ವೃತವಾನಸಿ ದುರ್ಮತೇ ।
ಫಲಂ ತಸ್ಯಾವಲೇಪಸ್ಯ ದ್ರಕ್ಷ್ಯಸ್ಯದ್ಯ ನ ಸಂಶಯಃ ॥೧೯॥

ಎಲೈ ದೂತನೇ, ಆ ರಾಜಾಧಮನಾದ ಪಾಂಚಲ್ಯರಾಜನನ್ನು ಕುರಿತು– ಎಲೈ ದುರ್ಮತಿಯೇ, ನಿನ್ನ ಕನ್ಯೆಯ ಸಲುವಾಗಿ ನನ್ನ ಪುತ್ರಿಯನ್ನು ವರಿಸಿದೆಯಷ್ಟೆ! ಈ ದುರಹಂಕಾರದ ಫಲವನ್ನು ಈ ದಿನ ನೋಡುವಿ. ಇದರಲ್ಲಿ ಸಂಶಯವಿಲ್ಲ ಎಂದು ನಾನು ಹೇಳಿದೆನೆಂದು ಹೇಳುವವನಾಗು (ಎಂದು ಹೇಳಿದನು).

ಏವಮುಕ್ತಶ್ಚ ತೇನಾಸೌ ಬ್ರಾಹ್ಮಣೋ ರಾಜಸತ್ತಮ ।
ದೂತಃ ಪ್ರಯಾತೋ ನಗರಂ ದಾಶಾರ್ಣನೃಪಚೋದಿತಃ ॥೨೦॥

ತತ ಆಸಾದಯಾಮಾಸ ಪುರೋಧಾ ದ್ರುಪದಂ ಪುರೇ ॥೨೧॥

ಎಲೈ ರಾಜಶ್ರೇಷ್ಠನೇ, ಹೀಗೆ ಹೇಳಲ್ಪಟ್ಟ ಆ ಬ್ರಾಹ್ಮಣನು, ದಾಶಾರ್ಣರಾಜನಿಂದ ಪ್ರೇರಿತನಾಗಿ ಶೀಘ್ರವಾಗಿ ದ್ರುಪದನ ಬಳಿಗೆ ಬಂದನು.

ತಸ್ಮಿನ್ ಪಾಂಚಾಲಕೋ ರಾಜಾ ಗಾಮರ್ಘ್ಯಂ ಚ ಸುಸತ್ಕೃತಮ್ ।
ಪ್ರಾಪಯಾಮಾಸ ರಾಜೇಂದ್ರ ಸಹ ತೇನ ಶಿಖಂಡಿನಾ ॥೨೨॥

ಎಲೈ ರಾಜೇಂದ್ರನೇ, ಪಾಂಚಾಲರಾಜನಾದ ದ್ರುಪದನು ಅವನಿಗೆ ಶಿಖಂಡಿಯ ಜೊತೆಯಲ್ಲಿ ಗೋವು, ಅರ್ಘ್ಯ , ಪಾದ್ಯಗಳನ್ನು ಕೊಟ್ಟು ಚೆನ್ನಾಗಿ ಪೂಜಿಸಿದನು.

ತಾಂ ಪೂಜಾಂ ನಾಭ್ಯನಂದತ್ ಸ ವಾಕ್ಯಂ ಚೇದಮುವಾಚ ಹ ।
ಯದುಕ್ತಂ ತೇನ ವೀರೇಣ ರಾಜ್ಞಾ ಕಾಂಚನವರ್ಮಣಾ ॥೨೩॥

ಆ ಪುರೋಹಿತನು ಆ ಪೂಜೆಗೆ ಸಂತೋಷಪಡದೆ ವೀರನಾದ ಹಿರಣ್ಯವರ್ಮನು ಹೇಳಿದ ಈ ಮಾತುಗಳನ್ನು ಹೇಳಿದನು.

ಯತ್ ತೇಽಹಮಧಮಾಚಾರ ದುಹಿತ್ರಾಽಸ್ಮ್ಯಭಿವಂಚಿತಃ ।
ತಸ್ಯ ಪಾಪಸ್ಯ ಕರ್ಮಣಾತ್ ಫಲಂ ಪ್ರಾಪ್ನುಹಿ ದುರ್ಮತೇ ॥೨೪॥

ಎಲೈ ಅಧಮನಡತೆಯುಳ್ಳವನೇ, ನಿನ್ನ ಮಗಳಿಂದ ನಾನು ವಂಚನೆಗೆ ಒಳಗಾಗಿದ್ದೇನೆ. ಎಲೈ ದುರ್ಮತಿಯೇ, ಆ ಪಾಪವನ್ನು ಮಾಡಿದುದರಿಂದ ಅದರ ಫಲವನ್ನು ಹೊಂದು.

ದೇಹಿ ಯುದ್ಧಂ ನರಪತೇ ಮಮಾದ್ಯ ರಣಮೂರ್ಧನಿ ।
ಉದ್ಧರಿಷ್ಯಾಮಿ ಸದ್ಯಸ್ತ್ವಾಂ ಸಾಮಾತ್ಯಸುತಬಾಂಧವಮ್ ॥೨೫॥

ಎಲೈ ರಾಜನೇ, ನನಗೆ ಯುದ್ಧವನ್ನು ಕೊಡು. ಈ ದಿನ ನಾನು ಘೋರವಾದ ಯುದ್ಧದಲ್ಲಿ ತಕ್ಷಣದಲ್ಲಿಯೇ ಅಮಾತ್ಯಸುತಬಾಂಧವರಿಂದ ಸಹಿತನಾದ ನಿನ್ನನ್ನು ನಿರ್ಮೂಲಗೊಳಿಸುವೆನು.

ತದುಪಾಲಂಭಸಂಯುಕ್ತಂ ಶ್ರಾವಿತಃ ಕಿಲ ಪಾರ್ಥಿವ ।
ದಶಾರ್ಣಪತಿದೂತೇನ ಮಂತ್ರಿಮಧ್ಯೇ ಪುರೋಧಸಾ ॥೨೬॥

ಅಬ್ರವೀದ್ ಭರತಶ್ರೇಷ್ಠ ದ್ರುಪದಃ ಪ್ರಣಯಾದ್ ವಚಃ ॥೨೭॥

ಎಲೈ ಭರತಶ್ರೇಷ್ಠನೇ, ದಶಾರ್ಣಾಧಿಪತಿಯ ದೂತನಾದ ಪುರೋಹಿತನಿಂದ ಮಂತ್ರಿಗಳ ಮಧ್ಯದಲ್ಲಿ ಈ ನಿಂದಾವಚನಗಳನ್ನು ಕೇಳಿದ ದ್ರುಪದನು ಅವನನ್ನು ಕುರಿತು ಸ್ನೇಹದಿಂದ ಮಾತನಾಡಿದನು.

ಯದಾಹ ಮಾಂ ಭವಾನ್ ಬ್ರಹ್ಮನ್ ಸಂಬಂಧಿವಚನಾದ್ ವಚಃ ।
ಅಸ್ಯೋತ್ತರಂ ಪ್ರತಿವಚೋ ದೂತೋ ರಾಜ್ಞೋ ವದಿಷ್ಯತಿ ॥೨೮॥

ಎಲೈ ಬ್ರಾಹ್ಮಣನೇ, ನನ್ನ ಸಂಬಂಧಿಯ ಆದೇಶದಂತೆ ನೀನು ನನಗೆ ಯಾವ ಮಾತುಗಳನ್ನು ಆಡಿದ್ದೀಯೋ ಅದಕ್ಕೆ ಉತ್ತರವನ್ನು ನನ್ನ ದೂತನು ದಶಾರ್ಣಾಧಿಪತಿಗೆ ಕೊಡುವನು (ಎಂದು ಹೇಳಿದನು).

ಭೀಷ್ಮಃ

ತತಃ ಸಂಪ್ರೇಷಯಾಮಾಸ ದ್ರುಪದೋಽಪಿ ಮಹಾತ್ಮನೇ ।
ಹಿರಣ್ಯವರ್ಮಣೇ ದೂತಂ ಬ್ರಾಹ್ಮಣಂ ವೇದಪಾರಗಮ್ ॥೨೯॥

ಭೀಷ್ಮ– ಅನಂತರ ದ್ರುಪದನು ಮಹಾತ್ಮನಾದ ಹಿರಣ್ಯವರ್ಮನಿಗೆ ವೇದಪಾರಂಗತನಾದ ಒಬ್ಬ ಬ್ರಾಹ್ಮಣನನ್ನು ದೂತನನ್ನಾಗಿ ಕಳುಹಿಸಿದನು.

ಸಮಾಗಮ್ಯ ತು ರಾಜಾಽಸೌ ದಶಾರ್ಣಾಧಿಪತಿಸ್ತದಾ ।
ತದಾವ್ಯಮಾದದೇ ರಾಜನ್ ಯದುಕ್ತಂ ದ್ರುಪದೇನ ಹ ॥೩೦॥

ಆಗ ದಶಾರ್ಣಾಧಿಪತಿಯು ಆ ದೂತನ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ದೂತನು ಹೇಳಿದ ವಾಕ್ಯವನ್ನು ಸ್ವೀಕರಿಸಿದನು.

ಆಗಮಃ ಕ್ರಿಯತಾಂ ವ್ಯಕ್ತಂ ಕುಮಾರೋಽಯಂ ಸುತೋ ಮಮ ।
ಮಿಥ್ಯೈತದುಕ್ತಂ ಕೇನಾಪಿ ತನ್ನ ಶ್ರದ್ದೇಯಮಿತ್ಯುತ ॥೩೧॥

ಚೆನ್ನಾಗಿ ಪರೀಕ್ಷೆ ಮಾಡಿ ನೋಡು. ನನ್ನ ಮಗನು ಕುಮಾರನೇ. ನಿನಗೆ ಯಾರೋ ಸುಳ್ಳನ್ನು ಹೇಳಿದ್ದಾರೆ. ಅದನ್ನು ನಂಬಬೇಡ (ಎಂಬ ದೂತನ ಮಾತನ್ನು ಸ್ವೀಕರಿಸಿದನು).

ಭೀಷ್ಮಃ

ತತಃ ಸ ರಾಜಾ ದ್ರುಪದಸ್ಯ ಶ್ರುತ್ವಾ
ವಿಮರ್ದನಾರ್ಥಂ ಯುವತೀರ್ವರಿಷ್ಠಾಃ ।
ಸಂಪ್ರೇಷಯಾಮಾಸ ಸುಚಾರುರೂಪಾಃ
ಶಿಖಂಡಿನಂ ಸ್ತ್ರೀ ಪುಮಾನ್ ವೇತಿ ವೇತ್ತುಮ್ ॥೩೨॥

ಭೀಷ್ಮ– ಆಗ ದಶಾರ್ಣಾಧಿಪತಿಯು ದ್ರುಪದನ ಮಾತುಗಳನ್ನು ಕೇಳಿ ಶ್ರೇಷ್ಠರಾದ, ಸುಂದರಿಯರಾದ ಯುವತಿಯರನ್ನು ಶಿಖಂಡಿಯು ಕನ್ಯೆಯೋ ಅಥವಾ ಪುರುಷನೋ ಎಂದು ತಿಳಿದುಕೊಳ್ಳಲು, ಅವನ ದೇಹವನ್ನು ವಿಮರ್ದನೆ ಮಾಡುವ ಸಲುವಾಗಿ ಕಳುಹಿಸಿಕೊಟ್ಟನು.

ತಾಃ ಪ್ರೇಷಿತಾಸ್ತತ್ತ್ವಭಾವಂ ವಿದಿತ್ವಾ
ಪ್ರೀತ್ಯಾ ರಾಜ್ಞೇ ತಚ್ಚಶಂಸುರ್ಹಿ ಸರ್ವಮ್ ।
ಶಿಖಂಡಿನಂ ಪುರುಷಂ ಕೌರವೇಂದ್ರ
ದಶಾರ್ಣರಾಜಾಯ ಮಹಾನುಭಾವಮ್ ॥೩೩॥

ಆ ಯುವತಿಯರು ನಿಜಾಂಶವನ್ನು ತಿಳಿದು, ಸಂತೋಷದಿಂದ ದಶಾರ್ಣಾಧಿಪತಿಯಾದ ರಾಜನಿಗೆ ಮಹಾನುಭಾವನಾದ ಶಿಖಂಡಿಯು ಪುರುಷನೆಂದು ಹೇಳಿದರು.

ತತಃ ಕೃತ್ವಾ ತು ರಾಜಾ ಸ ಆಗಮಂ ಪ್ರೀತಿಮಾನಥ ।
ಸಂಬಂಧಿನಾ ಸಮಾಗಮ್ಯ ಹೃಷ್ಟೋ ಮಾಸಮುವಾಸ ಹ ॥೩೪॥

ಅನಂತರ ದಶಾರ್ಣರಾಜನು ಪರೀಕ್ಷೆಯಿಂದ ವಿಷಯವನ್ನು ತಿಳಿದು ಸಂತೋಷಗೊಂಡವನಾಗಿ, ದ್ರುಪದನ ಜೊತೆಯಲ್ಲಿ ಸಮಾಗಮವನ್ನು ಹೊಂದಿ, ಒಂದು ತಿಂಗಳಕಾಲ ಸಂತೋಷದಿಂದ ವಾಸಮಾಡಿದನು.

ಶಿಖಂಡಿನೇ ಚ ಮುದಿತಃ ಪ್ರಾದಾದ್ ವಿತ್ತಂ ಜನೇಶ್ವರಃ ।
ಹಸ್ತಿನೋಽಶ್ವಾಂಶ್ಚ ಗಾಶ್ಚೈವ ದಾಸೀರ್ಬಹುಶತಾಸ್ತಥಾ ॥೩೫॥

ಪೂಜಿತಶ್ಚ ಪ್ರತಿಯಯೌ ನಿಮಂತ್ರ್ಯ ತನಯಾಂ ಕಿಲ ॥೩೬॥

ಆ ರಾಜನು ಸಂತೋಷದಿಂದ ಶಿಖಂಡಿಗೆ ವಿತ್ತವನ್ನೂ, ಗಜಗಳನ್ನೂ, ಅಶ್ವಗಳನ್ನೂ, ಗೋವುಗಳನ್ನೂ, ಅನೇಕ ಶತಸಂಖ್ಯೆಯ ದಾಸಿಯರನ್ನೂ ಕೊಟ್ಟನು. ದ್ರುಪದನಿಂದ ಪೂಜಿಸಲ್ಪಟ್ಟು ಮಗಳನ್ನು ಆಹ್ವಾನ ಮಾಡಿ ಅವನು ಹಿಂದಿರುಗಿದನು.

ವಿನೀತಕಿಲ್ಬಿಷೇ ಪ್ರೀತೇ ಹೇಮವರ್ಮಣಿ ಪಾರ್ಥಿವೇ ।
ಪ್ರತಿಯಾತೇ ದಶಾರ್ಣೇ ತು ಹೃಷ್ಟರೂಪಾ ಶಿಖಂಡಿನೀ ॥೩೭॥

ಹಿರಣ್ಯಕವಚರಾಜನು ಉಂಟಾಗಿದ್ದ ಕಲ್ಮಶವನ್ನು ಕಳೆದುಕೊಂಡು, ಸಂತೋಷದಿಂದ ಹಿಂದಿರುಗುತ್ತಿರಲು ಶಿಖಂಡಿನಿಯು ಸಂತೋಷಗೊಂಡಳು.

ಕಸ್ಯಚಿತ್ತ್ವಥ ಕಾಲಸ್ಯ ಕುಬೇರೋ ನರವಾಹನಃ ।
ಲೋಕಯಾತ್ರಾಂ ಪ್ರಕುರ್ವಾಣಃ ಸ್ಥೂಣಸ್ಯಾಗಾನ್ನಿವೇಶನಮ್ ॥೩೮॥

ಸ್ವಲ್ಪ ಸಮಯದ ನಂತರ ನರವಾಹನನಾದ ಕುಬೇರನು ಲೋಕಸಂಚಾರವನ್ನು ಮಾಡುತ್ತಾ ಸ್ಥೂಣಾಕರ್ಣನ ಬಿಡಾರದ ಸಮೀಪಕ್ಕೆ ಬಂದನು.

ಸ ತದ್ಗೃಹಸ್ಯೋಪರಿ ವರ್ತಮಾನ
ಆಲೋಕಯಾಮಾಸ ಧನಾಧಿಗೋಪ್ತಾ ।
ಸ್ಥೂಣಸ್ಯ ಯಕ್ಷಸ್ಯ ವಿವೇಶ ವೇಶ್ಮ
ಸ್ವಲಂಕೃತಂ ಮಾಲ್ಯಗುಣೈರ್ವಿಚಿತ್ರೈಃ ॥೩೯॥

ಲಾಜೈಶ್ಚ ಗಂಧೈಶ್ಚ ತಥಾ ವಿತಾನೈಃ
ಅಭ್ಯರ್ಚಿತಂ ಧೂಪನಧೂಪಿತಂ ಚ ।
ಧ್ವಜೈಃ ಪತಾಕಾಭಿರಲಂಕೃತಂ ಚ
ಭಕ್ಷ್ಯಾನ್ನಪೇಯಾಮಿಷದತ್ತಮೋದಮ್ ॥೪೦॥

ಧನಾಧಿಪತಿಯಾದ ಕುಬೇರನು ಅವನ ಗೃಹದ ಮೇಲ್ಭಾಗದಲ್ಲಿ ನಿಂತು, ವಿಚಿತ್ರವಾದ ಮಾಲೆಗಳಿಂದ ಚೆನ್ನಾಗಿ ಅಲಂಕೃತವಾದ ಸ್ಥೂಣಾಕರ್ಣನ ಮನೆಯನ್ನು ನೋಡಿ ಅದನ್ನು ಪ್ರವೇಶಿಸಿದನು. ಅದು ಲಾಜದಿಂದ ಉಂಟಾದ ಗಂಧದಿಂದಲೂ, ಸುವರ್ಣಗಳಿಂದಲೂ, ಧೂಪಗಳಿಂದಲೂ, ಧ್ವಜಪತಾಕೆಗಳಿಂದಲೂ ಅಲಂಕೃತವಾಗಿ ಭಕ್ಷ್ಯ, ಅನ್ನ, ಪೇಯಗಳನ್ನು ಹೊಂದಿ ಸಂತೋಷವನ್ನು ಕೊಡುವುದಾಗಿದ್ದಿತು.

ತತ್ ಸ್ಥಾನಂ ತಸ್ಯ ದೃಷ್ಟ್ವಾ ತು ಸರ್ವತಃ ಸಮಲಂಕೃತಮ್ ।
ಮಣಿರತ್ನಸುವರ್ಣಾನಾಂ ಮಾಲಾಭಿಃ ಪರಿಪೂರಿತಮ್ ॥೪೧॥

ನಾನಾಕುಸುಮಗಂಧಾಢ್ಯಂ ಸಿಕ್ತಸಮ್ಮೃಷ್ಟಶೋಭಿತಮ್ ।
ಅಥಾಬ್ರವೀದ್ ಯಕ್ಷಪತಿಸ್ತಾನ್ ಯಕ್ಷಾನನುಗಾಂಸ್ತದಾ ॥೪೨॥

ಮಣಿರತ್ನಸುವರ್ಣಗಳ ಮಾಲೆಗಳಿಂದ ತುಂಬಿದ್ದ, ಅನೇಕ ಪುಷ್ಪಗಂಧಗಳಿಂದ ಕೂಡಿದ, ತೊಳೆದು ಸಾರಿಸಿ ಶೋಭಿಸುತ್ತಿದ್ದ, ಎಲ್ಲ ಕಡೆಗಳಲ್ಲಿಯೂ ಅಲಂಕೃತವಾಗಿದ್ದ ಆ ಸ್ಥಾನವನ್ನು ನೋಡಿ ಯಕ್ಷಾಧಿಪತಿಯಾದ ಕುಬೇರನು ತನ್ನ ಅನುಚರರಾದ ಯಕ್ಷರನ್ನು ಕುರಿತು ಆಗ ಮಾತನಾಡಿದನು.

ಸ್ವಲಂಕೃತಮಿದಂ ವೇಶ್ಮ ಸ್ಥೂಣಸ್ಯಾಮಿತವಿಕ್ರಮಾಃ ।
ನೋಪಸರ್ಪತಿ ಮಾಂ ಚೈವ ಕಸ್ಮಾದದ್ಯ ಸ ಮಂದಧೀಃ ॥೪೩॥

ಎಲೈ ಅಮಿತವಿಕ್ರಮರೇ, ಸ್ಥೂಣನ ಈ ಗೃಹವು ಚೆನ್ನಾಗಿ ಅಲಂಕೃತವಾಗಿದೆ. ಆದರೆ ಆ ಮಂದಬುದ್ಧಿಯವನು ಈ ದಿನ ನನ್ನ ಬಳಿಗೆ ಏಕೆ ಬರುತ್ತಿಲ್ಲ?

ಯಸ್ಮಾಜ್ಜಾನನ್ ಸ ಮಂದಾತ್ಮಾ ಮಾಮಸೌ ನೋಪಸರ್ಪತಿ ।
ತಸ್ಮಾತ್ ತಸ್ಮೈ ಮಹಾದಂಡೋ ಧಾರ್ಯಃ ಸ್ಯಾದಿತಿ ಮೇ ಮತಿಃ॥೪೪॥

ಮಂದಾತ್ಮನಾದ ಅವನು, ನಾನು ಇಲ್ಲಿಗೆ ಬಂದಿದ್ದೇನೆಂದು ತಿಳಿದರೂ ನನ್ನ ಸಮೀಪಕ್ಕೆ ಬರುತ್ತಿಲ್ಲ. ಆದ್ದರಿಂದ ಅವನಿಗೆ ಮಹಾದಂಡವನ್ನು ವಿಧಿಸಬೇಕೆಂದು ನನ್ನ ಅಭಿಪ್ರಾಯ.

ಯಕ್ಷಾಃ

ದ್ರುಪದಸ್ಯ ಸುತಾ ರಾಜನ್ ರಾಜ್ಞೋ ಜಾತಾ ಶಿಖಂಡಿನೀ ।
ತಸ್ಯಾ ನಿಮಿತ್ತೇ ಕಸ್ಮಿಂಶ್ಚಿತ್ ಪ್ರಾದಾತ್ ಪುರುಷಲಕ್ಷಣಮ್ ॥೪೫॥

ಯಕ್ಷಾ– ಎಲೈ ರಾಜನೇ, ದ್ರುಪದರಾಜನಿಂದ ಹುಟ್ಟಿದ ಶಿಖಂಡಿನಿಯು ಕನ್ಯೆಯಾಗಿ ಹುಟ್ಟಿದ್ದಳು. ಯಾವುದೋ ಕಾರಣಕ್ಕಾಗಿ ಅವಳಿಗೆ ಅವನು ತನ್ನ ಪುರುಷಲಕ್ಷಣವನ್ನು ನೀಡಿದನು.

ಅಗ್ರಹೀಲ್ಲಕ್ಷಣಂ ಸ್ತ್ರೀಣಾಂ ಸ್ತ್ರೀಭೂತಾ ತಿಷ್ಠತೇ ಗೃಹೇ ।
ನೋಪಸರ್ಪತಿ ತೇನಾಸೌ ಸವ್ರೀಡಃ ಸ್ತ್ರೀಸ್ವರೂಪವಾನ್ ॥೪೬॥

ಅವನು ಸ್ತ್ರೀಲಕ್ಷಣವನ್ನು ಸ್ವೀಕರಿಸಿ ಸ್ತ್ರೀಯಾಗಿ ಮನೆಯಲ್ಲಿದ್ದಾನೆ. ಸ್ತ್ರೀ ಶರೀರವನ್ನು ಧರಿಸಿದ ಅವನು ನಾಚಿಕೆಯಿಂದ ನಿನ್ನ ಬಳಿಗೆ ಬರುತ್ತಿಲ್ಲ.

ಏತಸ್ಮಾತ್ ಕಾರಣಾದ್ ರಾಜನ್ ಸ್ಥೂಣೋ ನ ತ್ವಾऽದ್ಯ ಪಶ್ಯತಿ ।
ಶ್ರುತ್ವಾ ಕುರು ಯಥಾ ನ್ಯಾಯ್ಯಂ ವಿಮಾನಮಿಹ ತಿಷ್ಠತಾಮ್ ॥೪೭॥

ಎಲೈ ರಾಜನೇ, ಆ ಕಾರಣದಿಂದ ಸ್ಥೂಣನು ಈ ದಿನ ನಿನ್ನನ್ನು ನೋಡುತ್ತಿಲ್ಲ. ಈ ವಿಷಯವನ್ನು ಕೇಳಿ ನೀನು ನಿನ್ನ ನ್ಯಾಯದಂತೆ ವರ್ತಿಸು. ವಿಮಾನವು ಇಲ್ಲಿಯೇ ಇರಲಿ.

ಭೀಷ್ಮಃ

ಆನೀಯತಾಂ ಸ್ಥೂಣ ಇತಿ ತತೋ ಯಕ್ಷಾಧಿಪೋऽಬ್ರವೀತ್ ।
ಕರ್ತಾಸ್ಮಿ ನಿಗ್ರಹಂ ತಸ್ಯ ಪ್ರತ್ಯುವಾಚ ಪುನಃ ಪುನಃ ॥೪೮॥

ಭೀಷ್ಮ– ಯಕ್ಷಾಧಿಪನಾದ ಕುಬೇರನು ಅವರನ್ನು ಕುರಿತು, ಸ್ಥೂಣನನ್ನು ಇಲ್ಲಿಗೆ ಕರೆತನ್ನಿ. ನಾನು ಅವನಿಗೆ ನಿಗ್ರಹವನ್ನು ಮಾಡುವೆನು ಎಂದು ಪುನಃ ಪುನಃ ಉಚ್ಚರಿಸಿದನು.

ಸೋऽಭ್ಯಗಚ್ಛತ ಯಕ್ಷೇಂದ್ರಮಾಹೂತಃ ಪೃಥಿವೀಪತೇ ।
ಸ್ತ್ರೀಸ್ವರೂಪೋ ಮಹಾರಾಜ ತಸ್ಥೌ ವ್ರೀಡಾಸಮನ್ವಿತಃ ॥೪೯॥

ತಂ ಶಶಾಪಾಥ ಸಂಕ್ರುದ್ಧೋ ಧನದಃ ಕುರುನಂದನ ॥೫೦॥

ಏವಮೇವ ಭವತ್ವಸ್ಯ ಸ್ತ್ರೀತ್ವಂ ಪಾಪಸ್ಯ ಗುಹ್ಯಕಾಃ ॥೫೧॥

ಎಲೈ ರಾಜನೇ, ಪೃಥಿವೀಪತಿಯೇ, ಆಹ್ವಾನ ಮಾಡಲ್ಪಟ್ಟ ಸ್ಥೂಣನು ಸ್ತ್ರೀ ರೂಪವನ್ನು ಧರಿಸಿ, ಯಕ್ಷೇಂದ್ರನಾದ ಕುಬೇರನ ಬಳಿಗೆ ಬಂದು ನಾಚಿಕೆಯಿಂದ ನಿಂತನು. ಎಲೈ ಕುರುನಂದನನೇ, ಕೋಪಗೊಂಡ ಕುಬೇರನು ಎಲೈ ಗುಹ್ಯಕರೇ, ಇವನಿಗೆ ಈ ಸ್ತ್ರೀತ್ವವು ಹೀಗೆಯೇ ಮುಂದುವರಿಯಲಿ ಎಂದು ಹೇಳಿದನು.

ತತೋಽಬ್ರವೀದ್ ಯಕ್ಷಪತಿರ್ಮಹಾತ್ಮಾ
ಯಸ್ಮಾದದಾಸ್ತ್ವಮತ್ಯೇಹ ಯಕ್ಷಾನ್ ।
ಶಿಖಂಡಿನೋ ಲಕ್ಷಣಂ ಪಾಪಬುದ್ಧೇ
ಸ್ತ್ರೀಲಕ್ಷಣಂ ಚಾಗ್ರಹೀಃ ಪಾಪಕರ್ಮನ್ ॥೫೨॥

ಅಪ್ರವೃತ್ತಂ ಸುದುರ್ಬುದ್ಧೇ ಯಸ್ಮಾದೇತತ್ ತ್ವಯಾ ಕೃತಮ್ ।
ತಸ್ಮಾದದ್ಯಪ್ರಭೃತ್ಯೇವ ಸ್ತ್ರೀ ತ್ವಂ ಸಾ ಪುರುಷಸ್ತಥಾ ॥೫೩॥

ಮಹಾತ್ಮನಾದ ಯಕ್ಷಪತಿಯು ಅವನನ್ನು ಕುರಿತು ಎಲೈ ಪಾಪಬುದ್ಧಿಯೇ, ಪಾಪಕರ್ಮವನ್ನು ಮಾಡಿದವನೇ, ನೀನು ಎಲ್ಲ ಯಕ್ಷರಿಗೂ ಅವಮಾನವನ್ನು ಮಾಡಿ ಶಿಖಂಡಿಯ ಸ್ತ್ರೀಲಕ್ಷಣವನ್ನು ತೆಗೆದುಕೊಂಡೆಯಷ್ಟೆ! ಎಲೈ ದುರ್ಬುದ್ಧಿಯೇ, ಹಿಂದೆ ಯಾರೂ ಮಾಡದಿದ್ದ ಈ ಕಾರ್ಯವನ್ನು ನೀನು ಮಾಡಿದುದರಿಂದ ಈ ದಿನದಿಂದ ನೀನು ಸ್ತ್ರೀಯಾಗಿಯೇ ಇರುವಿ, ಶಿಖಂಡಿಯು ಪುರುಷನಾಗಿಯೇ ಇರುತ್ತಾನೆ (ಎಂದು ಹೇಳಿದನು).

ತತಃ ಪ್ರಸಾದಯಾಮಾಸುರ್ಯಕ್ಷಾ ವೈಶ್ರವಣಂ ಕಿಲ ।
ಸ್ಥೂಣಸ್ಯಾರ್ಥೇ ಕುರುಷ್ವಾಂತಂ ಶಾಪಸ್ಯೇತಿ ಪುನಃ ಪುನಃ ॥೫೪॥

ಆಗ ಯಕ್ಷರು ಸ್ಥೂಣಾಕರ್ಣನ ಸಲುವಾಗಿ ಕುಬೇರನನ್ನು ಕುರಿತು, ಈ ಶಾಪಕ್ಕೆ ವಿಮೋಚನೆಯನ್ನು ಕೊಡು ಎಂದು ಪುನಃ ಪುನಃ ಹೇಳುತ್ತಾ ಅವನನ್ನು ಪ್ರಸನ್ನಗೊಳಿಸಿದರು.

ತತೋ ಮಹಾತ್ಮಾ ಯಕ್ಷೇಂದ್ರಃ ಪ್ರತ್ಯುವಾಚಾನುಗಾಮಿನಃ ।
ಸರ್ವಾನ್ ಯಕ್ಷಗಣಾಂಸ್ತಾತ ಶಾಪಸ್ಯಾಂತಚಿಕೀರ್ಷಯಾ ॥೫೫॥

ಹತೇ ಶಿಖಂಡಿನಿ ರಣೇ ಸ್ವಂ ರೂಪಂ ಪ್ರತಿಪತ್ಸ್ಯತೇ ।
ಸ್ಥೂಣೋ ಯಕ್ಷೋ ನಿರುದ್ವೇಗೋ ಭವತ್ವಿತಿ ಮಹಾಮನಾಃ ॥೫೬॥

ಆಗ ಮಹಾತ್ಮನಾದ ಕುಬೇರನು ತನ್ನ ಅನುಚರರಾದ ಎಲ್ಲಾ ಯಕ್ಷಗಣಗಳನ್ನು ಕುರಿತು, ಶಾಪದ ಅಂತವನ್ನು ಮಾಡುವ ಉದ್ದೇಶದಿಂದ, ಶಿಖಂಡಿಯು ಯುದ್ಧದಲ್ಲಿ

ಹತನಾದಾಗ ಸ್ಥೂಣಾಕರ್ಣನು ತನ್ನ ನಿಜರೂಪವನ್ನು ಪಡೆಯುವನು. ಧೈರ್ಯಶಾಲಿಯಾದ ಸ್ಥೂಣಾಕರ್ಣನು ಉದ್ವೇಗರಹಿತನಾಗಲಿ ಎಂದು ಹೇಳಿದನು.

ಇತ್ಯುಕ್ತ್ವಾ ಭಗವಾನ್ ದೇವೋ ಯಕ್ಷರಾಜಃ ಸುಪೂಜಿತಃ ।
ಪ್ರಯಯೌ ಸಹಿತಃ ಸರ್ವೈರ್ನಿಮೇಷಾಂತರಚಾರಿಭಿಃ ॥೫೭॥

ಹೀಗೆ ಹೇಳಿ ಪೂಜ್ಯನಾದ ಯಕ್ಷರಾಜನು ಅಲ್ಲಿ ಪೂಜಿತನಾಗಿ, ಎಲ್ಲಾ ನಿಶಾಚರರ ಜೊತೆಯಲ್ಲಿ ಹೊರಟು ಹೋದನು.

ಸ್ಥೂಣಸ್ತು ಶಾಪಂ ಸಂಪ್ರಾಪ್ಯ ತತ್ರೈವ ನ್ಯವಸನ್ ತದಾ ।
ಸಮಯೇ ಚಾಗಮತ್ ತೂರ್ಣಂ ಶಿಖಂಡೀ ತಂ ಕ್ಷಪಾಚರಮ್ ॥೫೮॥

ಸ್ಥೂಣಾಕರ್ಣನು ಶಾಪವನ್ನು ಪಡೆದು ಅಲ್ಲಿಯೇ ವಾಸಮಾಡಿದನು. ಸೂಕ್ತವಾದ ಸಮಯದಲ್ಲಿ ಶಿಖಂಡಿಯು ನಿಶಾಚರನ ಬಳಿಗೆ ಬಂದನು.

ಸೋಽಭಿಗಮ್ಯಾಬ್ರವೀದ್ ವಾಕ್ಯಂ ಪ್ರಾಪ್ತೋಽಸ್ಮಿ ಭಗವನ್ನಿತಿ ।
ತಮಬ್ರವೀತ್ ತತಃ ಸ್ಥೂಣಃ ಪ್ರೀತೋಽಸ್ಮೀತಿ ಪುನಃ ಪುನಃ ॥೫೯॥

ಅವನು ಸ್ಥೂಣನ ಬಳಿಗೆ ಹೋಗಿ, ಪೂಜ್ಯನೇ ನಾನು ಬಂದಿದ್ದೇನೆ ಎಂದು ಹೇಳಿದನು. ಆಗ ಸ್ಥೂಣನು ಅವನನ್ನು ಕುರಿತು ನನಗೆ ಸಂತೋಷವಾಗಿದೆ ಎಂದು ಪುನಃ ಪುನಃ ಹೇಳಿದನು.

ಆರ್ಜವೇನಾಗತಂ ದೃಷ್ಟ್ವಾ ರಾಜಪುತ್ರಂ ಶಿಖಂಡಿನಮ್ ।
ಸರ್ವಮೇವ ಯಥಾವೃತ್ತಮಾಚಚಕ್ಷೇ ಶಿಖಂಡಿನೇ ॥೬೦॥

ತನ್ನ ಮಾತಿನಂತೆ ನೇರವಾಗಿ ಬಂದ, ರಾಜಪುತ್ರನಾದ ಶಿಖಂಡಿಯನ್ನು ನೋಡಿ ಅವನಿಗೆ ಸ್ಥೂಣನು ನಡೆದ ಎಲ್ಲ ವೃತ್ತಾಂತವನ್ನೂ ತಿಳಿಸಿದನು.

ಯಕ್ಷಃ

ಶಪ್ತೋ ವೈಶ್ರವಣೇನಾಹಂ ತ್ವತ್ಕೃತೇ ಪಾರ್ಥಿವಾತ್ಮಜ ।
ಗಚ್ಛೇದಾನೀಂ ಯಥಾಕಾಮಂ ಚರ ಲೋಕಾನ್ ಯಥಾಸುಖಮ್ ॥

ಯಕ್ಷ- ಎಲೈ ರಾಜಕುಮಾರನೇ, ನಾನು ನಿನ್ನ ಸಲುವಾಗಿ ಕುಬೇರನಿಂದ ಶಾಪಕ್ಕೆ ಒಳಗಾದೆನು. ನಿನಗೆ ಇಷ್ಟವಾದಂತೆ ಹೋಗಿ ಸುಖವಾಗಿ ಲೋಕವನ್ನು ಸಂಚರಿಸು.

ದಿಷ್ಟಮೇತತ್ ಪುರಾ ಮನ್ಯೇ ನ ಶಕ್ಯಮತಿವರ್ತಿತುಮ್ ।
ಗಮನಂ ತವ ಚೇತೋ ಹಿ ಪೌಲಸ್ತ್ಯಸ್ಯ ಚ ದರ್ಶನಮ್ ॥೬೨॥

ಇಲ್ಲಿಂದ ನಿನ್ನ ನಿರ್ಗಮನ ಮತ್ತು ಕುಬೇರನ ದರ್ಶನ ಇವೆರಡೂ ದೈವಸಂಕಲ್ಪಿತವೆಂದು ನಾನು ತಿಳಿಯುತ್ತೇನೆ. ಇದನ್ನು ಮೀರಲು ಸಾಧ್ಯವಿಲ್ಲ.

ಭೀಷ್ಮಃ

ಏವಮುಕ್ತಃ ಶಿಖಂಡೀ ತು ಸ್ಥೂಣಯಕ್ಷೇಣ ಭಾರತ ।
ಕ್ಷಿಪ್ರಂ ಜಗಾಮ ನಗರಂ ಹರ್ಷೇಣ ಮಹತಾ ವೃತಃ ॥೬೩॥

ಭೀಷ್ಮ- ಎಲೈ ಭಾರತನೇ, ಹೀಗೆ ಸ್ಥೂಣಾಕರ್ಣನ ಮಾತನ್ನು ಕೇಳಿದ ಶಿಖಂಡಿಯು ಬಹಳ ಹರ್ಷದಿಂದ ಕೂಡಿ ಶೀಘ್ರವಾಗಿ ನಗರಕ್ಕೆ ಹೋದನು.

ಪೂಜಯಾಮಾಸ ವಿವಿಧೈರ್ಗಂಧಮಾಲ್ಯೈರ್ಮನೋರಮೈಃ ।
ದ್ವಿಜಾತೀನ್ ದೇವತಾಶ್ಚೈವ ಚೈತ್ಯಾನಥ ಚತುಷ್ಪಥಾನ್ ॥೬೪॥

ಅವನು ಬ್ರಾಹ್ಮಣರನ್ನೂ, ದೇವತೆಗಳನ್ನೂ, ದೇವತಾ ಮಂದಿರಗಳನ್ನೂ ಮತ್ತು ಚತುಷ್ಪಥಗಳನ್ನೂ ಸುಂದರವಾದ ವಿವಿಧಗಂಧಮಾಲೆಗಳಿಂದ ಪೂಜಿಸಿದನು.

ದ್ರುಪದಃ ಸಹ ಪುತ್ರೇಣ ಸಿದ್ಧಾರ್ಥೇನ ಶಿಖಂಡಿನಾ ।
ಮುದಂ ಚ ಪರಮಾಂ ಲೇಭೇ ಪಾಂಚಾಲ್ಯಃ ಸಹ ಬಾಂಧವೈಃ ॥೬೫॥

ಪಾಂಚಾಲರಾಜನಾದ ದ್ರುಪದನು ಶಿಖಂಡಿಯು ಕೃತಕೃತ್ಯನಾದುದನ್ನು ನೋಡಿ ಅವನ ಮತ್ತು ಬಂಧುಗಳ ಜೊತೆಯಲ್ಲಿ ಬಹಳ ಸುಖವನ್ನು ಹೊಂದಿದನು.

ಶಿಷ್ಯಾರ್ಥಂ ಪ್ರದದೌ ಚಾಥ ದ್ರೋಣಾಯ ಕುರುಪುಂಗವ ।
ಶಿಖಂಡಿನಂ ಮಹಾರಾಜ ಪುತ್ರಂ ಸ್ತ್ರೀಪೂರ್ವಿಣಂ ತಥಾ ॥೬೬॥

ಎಲೈ ಮಹಾರಾಜನೇ, ಕುರುಪುಂಗವನೇ, ಹಿಂದೆ ಕನ್ಯೆಯಾಗಿದ್ದ ಆ ಶಿಖಂಡಿಯನ್ನು ದ್ರೋಣರಿಗೆ ಶಿಷ್ಯನನ್ನಾಗಿ ಕೊಟ್ಟನು.

ಪ್ರತಿಪೇದೇ ಚತುಷ್ಪಾದಂ ಧನುರ್ವೇದಂ ನೃಪಾತ್ಮಜಃ ।
ಶಿಖಂಡೀ ಸಹ ಯುಷ್ಮಾಭಿರ್ಧೃಷ್ಟದ್ಯುಮ್ನಶ್ಚ ಪಾರ್ಷತಃ ॥೬೭॥

ರಾಜಕುಮಾರನಾದ ಶಿಖಂಡಿಯು ನಿಮ್ಮ ಮತ್ತು ದ್ರುಪದನ ಮಗನಾದ ಧೃಷ್ಟದ್ಯುಮ್ನನ ಜೊತೆಯಲ್ಲಿ ನಾಲ್ಕು ಅಂಶಗಳಿಂದ ಕೂಡಿದ ಧನುರ್ವೇದವನ್ನು ಕಲಿತನು.

ಮಮ ತ್ವೇತಚ್ಚರಾಸ್ತಾತ ಯಥಾವತ್ ಪ್ರತ್ಯವೇದಯನ್ ।
ಜಡಾಂಧಬಧಿರಾಕಾರಾ ಯೇ ಮುಕ್ತಾ ದ್ರುಪದೇ ಮಯಾ ॥೬೮॥

ಎಲೈ ಪ್ರೀತಿಪಾತ್ರನೇ, ದ್ರುಪದನಲ್ಲಿ ನಾನು ನಿಯೋಜಿಸಿದ ಜಡಾಂಧಬಧಿರರಂತೆ ನಟಿಸುವ ಗೂಢಚಾರರು ನನಗೆ ಈ ಎಲ್ಲಾ ವಿಷಯವನ್ನೂ ಸರಿಯಾಗಿ ಹೇಳಿದರು.

ಏವಮೇವ ಮಹಾರಾಜ ಸ್ತ್ರೀ ಪುಮಾನ್ ದ್ರುಪದಾತ್ಮಜಃ ।
ಸ ಸಂಭೂತಃ ಕುರುಶ್ರೇಷ್ಠ ಶಿಖಂಡೀ ರಥಸತ್ತಮಃ ॥೬೯॥

ಎಲೈ ಮಹಾರಾಜನೇ, ಕುರುಶ್ರೇಷ್ಠನೇ, ಹೀಗೆ ದ್ರುಪದನ ಮಗಳಾಗಿ ಜನಿಸಿದ ಅವಳು ಪುರುಷನಾಗಿ ಶಿಖಂಡಿಯಾಗಿ ರಥಶ್ರೇಷ್ಠನಾದನು.

ಜ್ಯೇಷ್ಠಾ ಕಾಶೀಪತೇಃ ಕನ್ಯಾ ಅಂಬಾ ನಾಮೇತಿ ವಿಶ್ರುತಾ ।
ದ್ರುಪದಸ್ಯ ಕುಲೇ ಜಾತಾ ಶಿಖಂಡೀ ಭರತರ್ಷಭ ॥೭೦॥

ಎಲೈ ಭರತರ್ಷಭನೇ, ಕಾಶಿರಾಜನ ಜ್ಯೇಷ್ಠಪುತ್ರಿಯಾಗಿ ಪ್ರಸಿದ್ಧಳಾದ ಅಂಬೆಯು ದ್ರುಪದನ ವಂಶದಲ್ಲಿ ಶಿಖಂಡಿಯಾಗಿ ಜನಿಸಿದಳು.

ನಾಹಮೇನಂ ಧನುಷ್ಪಾಣಿಂ ಯುಯುತ್ಸುಂ ಸಮುಪಸ್ಥಿತಮ್ ।
ಮುಹೂರ್ತಮಪಿ ಪಶ್ಯೇಯಂ ಪ್ರಹರೇಯಂ ನ ಚಾಪ್ಯುತ ॥೭೧॥

ವ್ರತಮೇತನ್ಮಮ ಸದಾ ಪೃಥಿವ್ಯಾಮಪಿ ವಿಶ್ರುತಮ್ ॥೭೨॥

ಅವನು ಧನುಷ್ಪಾಣಿಯಾಗಿ ಯುದ್ಧವನ್ನು ಮಾಡಲು ಬಂದರೆ ನಾನು ಒಂದು ಮುಹೂರ್ತವೂ ಅವನನ್ನು ನೋಡುವುದೂ ಇಲ್ಲ ಮತ್ತು ಅವನ ಮೇಲೆ ಪ್ರಹಾರವನ್ನೂ ಮಾಡುವುದಿಲ್ಲ. ಇದು ನಾನು ಸದಾ ಧರಿಸಿರುವ ವ್ರತ. ಇದು ಭೂಮಿಯಲ್ಲಿ ಪ್ರಖ್ಯಾತವಾಗಿದೆ.

ಸ್ತ್ರಿಯಾಂ ಸ್ತ್ರೀಪೂರ್ವಕೇ ಚಾಪಿ ಸ್ತ್ರೀನಾಮ್ನಿ ಸ್ತ್ರೀಸ್ವರೂಪಿಣಿ ।
ನ ಮುಂಚೇಯಮಹಂ ಬಾಣಮಿತಿ ಕೌರವನಂದನ ॥೭೩॥

ಎಲೈ ಕೌರವನಂದನನೇ, ಸ್ತ್ರೀಯ ಮೇಲಾಗಲೀ, ಹಿಂದೆ ಸ್ತ್ರೀಯಾಗಿದ್ದವನ ಮೇಲಾಗಲೀ, ಸ್ತ್ರೀನಾಮವನ್ನು ಧರಿಸಿದವನ ಮೇಲಾಗಲೀ ಅಥವಾ ಸ್ತ್ರೀ ದೇಹವನ್ನು ಧರಿಸಿದವನ ಮೇಲಾಗಲೀ ನಾನು ಬಾಣಗಳನ್ನು ಬಿಡುವುದಿಲ್ಲ.

ನ ಹನ್ಯಾಮಹಮೇತೇನ ಕಾರಣೇನ ಶಿಖಂಡಿನಮ್ ।
ಏತತ್ ತತ್ತ್ವಮಹಂ ವೇದ ಜನ್ಮ ತಾತ ಶಿಖಂಡಿನಃ ॥೭೪॥

ಎಲೈ ಪ್ರೀತಿಪಾತ್ರನೇ, ಈ ಕಾರಣದಿಂದ ನಾನು ಶಿಖಂಡಿಯನ್ನು ಕೊಲ್ಲಲಾರೆ. ಶಿಖಂಡಿಯ ಜನ್ಮದ ಈ ಸತ್ಯಾಂಶವನ್ನು ನಾನು ತಿಳಿದಿದ್ದೇನೆ.

ಅತೋ ನೈನಂ ಹನಿಷ್ಯಾಮಿ ಸಮರೇಷ್ವಾತತಾಯಿನಮ್ ।
ಯದಿ ಭೀಷ್ಮಃ ಸ್ತ್ರಿಯಂ ಹನ್ಯಾತ್‌ಸಂತಃ ಕುರ್ಯುಃ ವಿಗರ್ಹಣಾಮ್ ॥
ನೈನಂ ತಸ್ಮಾದ್ಧನಿಷ್ಯಾಮಿ ದೃಷ್ಟ್ವಾಽಪಿ ಸಮರೇ ಸ್ಥಿತಮ್ ॥೭೬॥

ಆದ್ದರಿಂದ ಯುದ್ಧದಲ್ಲಿ ಶಸ್ತ್ರಧಾರಿಯಾದ ಅವನನ್ನು ಕೊಲ್ಲುವುದಿಲ್ಲ. ಭೀಷ್ಮನು ಒಬ್ಬ ಸ್ತ್ರೀಯನ್ನು ಕೊಂದರೆ ಸಜ್ಜನರು ನಿಂದಿಸಿಯಾರು! ಆದ್ದರಿಂದ ಯುದ್ಧದಲ್ಲಿ ನಿಂತ ಶಿಖಂಡಿಯನ್ನು ನೋಡಿದರೂ ಅವನನ್ನು ಕೊಲ್ಲುವುದಿಲ್ಲ.

ಸಂಜಯಃ

ಏತಚ್ಛ್ರುತ್ವಾ ತು ಕೌರವ್ಯೋ ರಾಜಾ ದುರ್ಯೋಧನಸ್ತದಾ ।
ಮುಹೂರ್ತಮಿವ ಸ ಧ್ಯಾತ್ವಾ ಭೀಷ್ಮೇ ಯುಕ್ತಮಮನ್ಯತ ॥೭೭॥

ಸಂಜಯ– ಇದನ್ನು ಕೇಳಿದ ಕೌರವರಾಜನಾದ ದುರ್ಯೋಧನನು ಒಂದು ಮುಹೂರ್ತದ ಕಾಲ ಚಿಂತಿಸಿ ಭೀಷ್ಮರು ಹೇಳುವುದು ಸರಿಯಾಗಿದೆ ಎಂದು ತಿಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಚತುರ್ನವತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೈದನೆಯ ಅಧ್ಯಾಯ

ದುರ್ಯೋಧನನಿಂದ ಭೀಷ್ಮಾದಿಗಳು ವಿಜಯಕ್ಕಾಗಿ ಅಪೇಕ್ಷಿಸಿದ ಕಾಲದ ಪ್ರಶ್ನೆ. ಅವರ ಉತ್ತರ.

ಸಂಜಯಃ

ಪ್ರಭಾತಾಯಾಂ ತು ಶರ್ವರ್ಯಾಂ ಪುನರೇವ ಸುತಸ್ತವ ।
ಮಧ್ಯೇ ಸರ್ವಸ್ಯ ಸೈನ್ಯಸ್ಯ ಪಿತಾಮಹಮಪೃಚ್ಛತ ॥೧॥

ಸಂಜಯ– ರಾತ್ರಿಯು ಕಳೆದು ಪ್ರಾತಃಕಾಲವು ಬರಲು ನಿನ್ನ ಪುತ್ರನು ಎಲ್ಲಾ ಸೈನ್ಯದ ಮಧ್ಯದಲ್ಲಿ ಭೀಷ್ಮರನ್ನು ಕೇಳಿದನು.

ಪಾಂಡವೇಯಸ್ಯ ಗಾಂಗೇಯ ಯದೇತತ್ ಸೈನ್ಯಮುತ್ತಮಮ್ ।
ಪ್ರಭೂತನರನಾಗಾಶ್ವಂ ಮಹಾರಥಸಮಾಕುಲಮ್ ॥೨॥

ಭೀಮಾರ್ಜುನಪ್ರಭೃತಿಭಿರ್ಮಹೇಷ್ವಾಸೈರ್ಮಹಾತ್ಮಭಿಃ ।
ಲೋಕಪಾಲಸಮೈರ್ಗುಪ್ತಂ ಧೃಷ್ಟದ್ಯುಮ್ನಪುರೋಗಮೈಃ ॥೩॥

ಅಪ್ರಧೃಷ್ಯಮನಾವಾರ್ಯಮುದ್ಧೂತಮಿವ ಸಾಗರಮ್ ।
ಸೇನಾಸಾಗರಮಕ್ಷೋಭ್ಯಮಪಿ ದೇವೈರ್ಮಹಾಹವೇ ॥೪॥

ಕೇನ ಕಾಲೇನ ಗಾಂಗೇಯ ಕ್ಷಪಯೇಥಾ ಮಹಾದ್ಯುತೇ ॥೫॥

ಎಲೈ ಗಾಂಗೇಯರೇ, ಮಹಾದ್ಯುತಿಯೇ, ಅಧಿಕ ಸಂಖ್ಯೆಯ ನರನಾಗಾಶ್ವವುಳ್ಳ, ಮಹಾರಥರಿಂದ ನಿಬಿಡವಾದ, ಭೀಮಾರ್ಜುನರೇ ಮೊದಲಾದ ಮಹಾಧನುರ್ಧಾರಿಗಳಾದ ಮಹಾತ್ಮರಿಂದ ರಕ್ಷಿತವಾದ, ಲೋಕಪಾಲಸಮಾನರಾದ ಧೃಷ್ಟದ್ಯುಮ್ನ ಮೊದಲಾದವರಿಂದ ರಕ್ಷಿತವಾದ, ಸೋಲಿಸಲು ಅಥವಾ ನಿವಾರಿಸಲು ಅಸಾಧ್ಯವಾದ, ಉಕ್ಕಿದ ಸಮುದ್ರದಂತಿರುವ, ದೇವತೆಗಳಿಂದಲೂ ಮಹಾಯುದ್ಧದಲ್ಲಿ ಅಲುಗಾಡಿಸಲು ಸಾಧ್ಯವಿಲ್ಲದ ಪಾಂಡವರ ಸೈನ್ಯಸಾಗರವನ್ನು ಎಷ್ಟು ಕಾಲದಲ್ಲಿ ನೀವು ವಿನಾಶ ಮಾಡುವಿರಿ?

ಆಚಾರ್ಯೋ ವಾ ಮಹೇಷ್ವಾಸಃ ಕೃಪೋ ವಾ ಸುಮಹಾಬಲಃ ।
ಕರ್ಣೋ ವಾ ಸಮರಶ್ಲಾಘೀ ದ್ರೌಣಿರ್ವಾ ದ್ವಿಜಸತ್ತಮಃ ॥೬॥

ದಿವ್ಯಾಸ್ತ್ರವಿದುಷಃ ಸರ್ವೇ ಭವಂತೋ ಹಿ ಬಲೇ ಮಮ ॥೭॥

ಅಥವಾ ಮಹಾಧನುರ್ಧಾರಿಗಳಾದ ದ್ರೋಣರೂ, ಮಹಾಬಲಿಷ್ಠರಾದ ಕೃಪರೂ, ಯಾವಾಗಲೂ ಯುದ್ಧವನ್ನು ಬಯಸುವ ಕರ್ಣ, ಬ್ರಾಹ್ಮಣಶ್ರೇಷ್ಠರಾದ ಅಶ್ವತ್ಥಾಮರು ಹೀಗೆ ನನ್ನ ಸೈನ್ಯದಲ್ಲಿರುವ ನೀವೆಲ್ಲರೂ ದಿವ್ಯಾಸ್ತ್ರಗಳನ್ನು ತಿಳಿದವರು (ನೀವು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತೀರಿ?)

ಏತದಿಚ್ಛಾಮ್ಯಹಂ ಜ್ಞಾತುಂ ಪರಂ ಕೌತೂಹಲಂ ಹಿ ಮೇ ।
ಹೃದಿ ನಿತ್ಯಂ ಮಹಾಬಾಹೋ ವಕ್ತುಮರ್ಹಸಿ ತನ್ಮಮ ॥೮॥

ಎಲೈ ಮಹಾಬಾಹುವೇ, ಇದನ್ನು ತಿಳಿಯಲು ನಾನು ಬಯಸುತ್ತೇನೆ. ಈ ವಿಷಯದಲ್ಲಿ ಯಾವಾಗಲೂ ನನ್ನ ಮನಸ್ಸಿನಲ್ಲಿ ಕುತೂಹಲವಿದೆ. ಅದನ್ನು ನೀವು ಹೇಳಬೇಕು.

ಅನೇನಾಹಂ ವಿಧಾನೇನ ಸನ್ನದ್ಧಃ ಸತತೋತ್ಥಿತಃ ।
ಕ್ಷಪಯೇಯಂ ಮಹತ್ ಸೈನ್ಯಂ ಕೇನ ಕಾಲೇನ ಭಾರತ ॥೯॥

ಎಲೈ ಭಾರತರೇ, ಈ ರೀತಿಯಲ್ಲಿ ಸಜ್ಜಾಗಿರುವ, ಸತತ ಉತ್ಸಾಹಶೀಲನಾದ ನಾನು ಎಷ್ಟು ಸಮಯದಲ್ಲಿ ಪಾಂಡವರ ಸೈನ್ಯವನ್ನು ನಾಶ ಮಾಡುವೆನು?

ಭೀಷ್ಮಃ

ಅನುರೂಪಂ ಕುರುಶ್ರೇಷ್ಠ ತ್ವಯ್ಯೇತದ್ ಪೃಥಿವೀಪತೇ ।
ಬಲಾಬಲಮಮಿತ್ರಾಣಾಂ ತೇಷಾಂ ಯದಿಹ ಪೃಚ್ಛಸಿ ॥೧೦॥

ಭೀಷ್ಮ– ಎಲೈ ಕುರುಶ್ರೇಷ್ಠನೇ, ಪೃಥಿವೀಪತಿಯೇ, ಶತ್ರುಗಳ ಬಲಾಬಲವನ್ನು ತಿಳಿದುಕೊಳ್ಳಲು ಏನು ಪ್ರಶ್ನೆ ಮಾಡುತ್ತಿದ್ದೀಯೋ ಅದು ನಿನಗೆ ಅನುಗುಣವಾಗಿದೆ.

ಶೃಣು ರಾಜನ್ ಮಮ ರಣೇ ಯಾ ಶಕ್ತಿಃ ಪರಮಾ ಭವೇತ್ ।
ಶಸ್ತ್ರವೀರ್ಯಂ ರಣೇ ಯಚ್ಚ ಭುಜಯೋಶ್ಚ ಮಹಾಭುಜ ॥೧೧॥

ಎಲೈ ರಾಜನೇ, ಮಹಾಭುಜನೇ, ಯುದ್ಧದಲ್ಲಿ ನನ್ನ ಪರಮಶಕ್ತಿಯನ್ನೂ, ಶಸ್ತ್ರವೀರ್ಯವನ್ನೂ ಮತ್ತು ಭುಜಬಲವನ್ನೂ ಕೇಳುವವನಾಗು.

ಆರ್ಜವೇನೈವ ಯುದ್ಧೇನ ಯೋದ್ಧವ್ಯ ಇತರೋ ಜನಃ ।
ಮಾಯಾಯುದ್ಧೇನ ಮಾಯಾವೀ ಇತ್ಯೇತದ್ ಧರ್ಮನಿಶ್ಚಿತಮ್ ॥೧೨॥

ನೇರವಾಗಿ ಯುದ್ಧಮಾಡುವವನ ಜೊತೆಯಲ್ಲಿ ನೇರವಾಗಿಯೇ ಯುದ್ಧವನ್ನು ಮಾಡಬೇಕು. ಮಾಯಾ ಯುದ್ಧವನ್ನು ಮಾಡುವವನ ಜೊತೆಯಲ್ಲಿ ಮಾಯಾ ಯುದ್ಧವನ್ನೇ ಮಾಡಬೇಕು ಎಂಬುದು ಧರ್ಮದ ನಿಶ್ಚಯ.

ಹನ್ಯಾಮಹಂ ಮಹಾಭಾಗ ಪಾಂಡವಾನಾಮನೀಕಿನೀಮ್ ।
ದಿವಸೇ ದಿವಸೇ ಕೃತ್ವಾ ಭಾಗಾನ್ ಭಾಗಾಧಿಕಂ ಮಮ ॥೧೩॥

ಎಲೈ ಮಹಾನುಭಾವನೇ, ಪಾಂಡವರ ಸೈನ್ಯವನ್ನು ಹತ್ತುಸಾವಿರ ಹತ್ತುಸಾವಿರದ ಭಾಗಗಳನ್ನಾಗಿ ಮಾಡಿ ಪ್ರತಿದಿವಸವೂ ಆ ಹತ್ತುಸಾವಿರ ಭಾಗಕ್ಕಿಂತಲೂ ಅಧಿಕವಾದ ಸಂಖ್ಯೆಯ ಯೋಧರನ್ನು ಕೊಲ್ಲುವೆನು.

ರಾಜ್ಞಾಂ ತು ದಶಸಾಹಸ್ರಂ ಕೃತ್ವಾ ಭಾಗಂ ಮಹಾದ್ಯುತೇ ।
ಸಹಸ್ರಂ ರಥಿನಾಮೇಕಭಾಗೋ ಮತೋ ಮಮ ॥೧೪॥

ಎಲೈ ಮಹಾದ್ಯುತಿಯೇ, ಹತ್ತುಸಹಸ್ರ ರಾಜರ ಭಾಗ ಮತ್ತು ಸಹಸ್ರ ರಥಿಗಳ ಒಂದುಭಾಗ ಇವಿಷ್ಟು ಒಂದು ದಿನದಲ್ಲಿ ನನ್ನ ಭಾಗವೆಂದು ತಿಳಿಯುತ್ತೇನೆ.

ಅನೇನಾಹಂ ವಿಧಾನೇನ ಸನ್ನದ್ಧಃ ಸತತೋತ್ಥಿತಃ ।
ಕ್ಷಪಯೇಯಂ ಮಹತ್ ಸೈನ್ಯಂ ಕಾಲೇನಾನೇನ ಭಾರತ ॥೧೫॥

ಎಲೈ ಭಾರತನೇ, ಈ ರೀತಿಯಾಗಿ ಸಜ್ಜಾಗಿ, ಸತತ ಪ್ರಯತ್ನಶೀಲನಾಗಿ ನಾನು ಆ ದೊಡ್ಡಸೈನ್ಯವನ್ನು ಅಷ್ಟು ಕಾಲದಲ್ಲಿ (ಒಂದು ದಿನಕ್ಕೆ ಇಷ್ಟರಂತೆ ಏಳು ಅಕ್ಷೋಹಿಣಿಗಳನ್ನು ವಿನಾಶ ಮಾಡಲು ಬೇಕಾದ ಕಾಲದಲ್ಲಿ) ದೊಡ್ಡ ಸೈನ್ಯವನ್ನು ನಾಶ ಮಾಡುವೆನು.

ಮುಂಚೇಯಂ ಯದಿ ಶಸ್ತ್ರಾಣಿ ಮಹಾಂತಿ ಸಮರೇ ಸ್ಥಿತಃ ।
ಶತಸಾಹಸ್ರಘಾತೀನಿ ಹನ್ಯಾಂ ಮಾಸೇನ ಭಾರತ ॥೧೬॥

ಎಲೈ ಭಾರತನೇ, ನಾನು ದೊಡ್ಡ ಯುದ್ಧದಲ್ಲಿ ನೂರು ಸಹಸ್ರ ಸೈನಿಕರನ್ನು ಕೊಲ್ಲುವ ಶಸ್ತ್ರಗಳನ್ನು ಪ್ರಯೋಗಿಸಿದರೆ ಒಂದು ತಿಂಗಳಿನಲ್ಲಿ ಪಾಂಡವರ ಸೈನ್ಯದಲ್ಲಿ ಎಲ್ಲರನ್ನೂ ಕೊಲ್ಲುವೆನು.

ಸಂಜಯಃ

ಶ್ರುತ್ವಾ ಭೀಷ್ಮಸ್ಯ ತದ್ವಾಕ್ಯಂ ರಾಜಾ ದುರ್ಯೋಧನಸ್ತತಃ ।
ಪರ್ಯಪೃಚ್ಛತ ರಾಜೇಂದ್ರ ದ್ರೋಣಮಂಗಿರಸಾಂ ವರಮ್ ॥೧೭॥

ಸಂಜಯ– ಭೀಷ್ಮರ ಆ ವಾಕ್ಯವನ್ನು ಕೇಳಿ ಎಲೈ ರಾಜೇಂದ್ರನೇ, ದುರ್ಯೋಧನನು ಆಂಗಿರಸ ಪ್ರವರರಾದ ದ್ರೋಣರನ್ನು ಪ್ರಶ್ನೆ ಮಾಡಿದನು.

ಆಚಾರ್ಯ ಕೇನ ಕಾಲೇನ ಪಾಂಡುಪುತ್ರಸ್ಯ ಸೈನಿಕಾನ್ ।
ನಿಹನ್ಯಾ ಇತಿ ತಂ ದ್ರೋಣಃ ಪ್ರತ್ಯುವಾಚ ಹಸನ್ನಿವ ॥೧೮॥

ಆಚಾರ್ಯರೇ, ಎಷ್ಟು ಕಾಲದಲ್ಲಿ ಪಾಂಡವರ ಸೈನ್ಯವನ್ನು ನಾಶಮಾಡುವಿರಿ? ಎಂಬ ಪ್ರಶ್ನೆಗೆ ದ್ರೋಣರು ನಗುತ್ತಾ ಉತ್ತರವನ್ನು ನೀಡಿದರು.

ಸ್ಥವಿರೋಽಸ್ಮಿ ಮಹಾಬಾಹೋ ಮಂದಪ್ರಾಣವಿಚೇಷ್ಟಿತಃ ।
ಶಸ್ತ್ರಾಗ್ನಿನಾ ನಿರ್ದಹೇಯಂ ಪಾಂಡವಾನಾಮನೀಕಿನೀಮ್ ॥೧೯॥

ಎಲೈ ಮಹಾಬಾಹುವೇ, ನಾನು ವೃದ್ಧನಾಗಿದ್ದೇನೆ. ನನ್ನ ಪ್ರಾಣಶಕ್ತಿಯು ದುರ್ಬಲವಾಗಿದೆ. ಪಾಂಡವರ ಸೈನ್ಯವನ್ನು ಶಸ್ತ್ರಾಗ್ನಿಯಿಂದ ಸುಟ್ಟೇನು!

ಯಥಾ ಭೀಷ್ಮಃ ಶಾಂತನವೋ ಮಾಸೇನೇತಿ ಮತಿರ್ಮಮ ।
ಏಷಾ ಮೇ ಪರಮಾ ಶಕ್ತಿರೇತನ್ಮೇ ಪರಮಂ ಬಲಮ್ ॥೨೦॥

ಭೀಷ್ಮರು ಹೇಳಿದಂತೆ ಒಂದು ತಿಂಗಳಿನಲ್ಲಿ ಎಂದು ನನ್ನ ಅಭಿಪ್ರಾಯ. ಇದು ನನ್ನ ಪರಮಾವಧಿಶಕ್ತಿ ಮತ್ತು ಬಲ.

ಸಂಜಯಃ

ದ್ವಾಭ್ಯಾಮೇವ ತು ಮಾಸಾಭ್ಯಾಂ ಕೃಪಃ ಶಾರದ್ವತೋಽಬ್ರವೀತ್ ।
ದ್ರೌಣಿಸ್ತು ದಶರಾತ್ರೇಣ ಪ್ರತಿಜಜ್ಞೇ ಬಲಕ್ಷಯಮ್ ॥೨೧॥

ಕರ್ಣಸ್ತು ಪಂಚರಾತ್ರೇಣ ಪ್ರತಿಜಜ್ಞೇ ಮಹಾಸ್ತ್ರವಿತ್ ॥೨೨॥

ಸಂಜಯ– ಶಾರದ್ವತರಾದ ಕೃಪರು ಎರಡು ತಿಂಗಳಿನಲ್ಲಿ ಎಂದು ಹೇಳಿದರು. ಅಶ್ವತ್ಥಾಮರು ಪಾಂಡವರ ಸೈನ್ಯವಿನಾಶವನ್ನು ಹತ್ತುದಿನದಲ್ಲಿ ಮಾಡುವೆನು ಎಂದು ಪ್ರತಿಜ್ಞೆ ಮಾಡಿದರು. ಮಹಾಸ್ತ್ರವೇತ್ತನಾದ ಕರ್ಣನು ಐದು ದಿನದಲ್ಲಿ ಎಂದು ಪ್ರತಿಜ್ಞೆ ಮಾಡಿದನು.

ತಚ್ಛ್ರುತ್ವಾ ಸೂತಪುತ್ರಸ್ಯ ವಾಕ್ಯಂ ಸಾಗರಗಾಸುತಃ ।
ಜಹಾಸ ಸಸ್ವನಂ ಹಾಸಂ ವಾಕ್ಯಂ ಚೇದಮುವಾಚ ಹ ॥೨೩॥

ಸೂತಪುತ್ರನ ಆ ಮಾತನ್ನು ಕೇಳಿದ ಗಾಂಗೇಯರಾದ ಭೀಷ್ಮರು ಗಟ್ಟಿಯಾಗಿ ನಕ್ಕು ಈ ಮಾತನ್ನು ಆಡಿದರು.

ನ ಹಿ ಯಾವದ್ ರಣೇ ಪಾರ್ಥಂ ಬಾಣಶಂಖಧನುರ್ಧರಮ್ ।
ವಾಸುದೇವಸಮಾಯುಕ್ತಂ ರಥೇನೋದ್ಯಂತಮುದ್ಯತಮ್ ॥೨೪॥

ಸಮಾಗಚ್ಛಸಿ ರಾಧೇಯ ತ್ವಂ ನೈವಮವಮನ್ಯಸೇ ।
ಶಕ್ಯಮೇವಂ ಚ ಭೂಯಶ್ಚ ತ್ವಯಾ ವಕ್ತುಂ ಯಥೇಷ್ಟತಃ ॥೨೫॥

ಎಲೈ ರಾಧೇಯನೇ, ನೀನು ಯಾವಾಗ ಯುದ್ಧದಲ್ಲಿ ಬಾಣಶಂಖಧನುರ್ಧರನಾದ ಕೃಷ್ಣನಿಂದ ಸಹಿತನಾದ, ಶ್ರೇಷ್ಠವಾದ ರಥದಿಂದ ಸನ್ನದ್ಧನಾದ ಅರ್ಜುನನ ಸಮಾಗಮವನ್ನು ಹೊಂದುತ್ತೀಯೋ ಆಗ ಹೀಗೆ ಇನ್ನೊಬ್ಬರನ್ನು ಅವಮಾನ ಮಾಡುವುದಿಲ್ಲ. ನೀನು ನಿನ್ನ ಮನಸ್ಸಿಗೆ ಬಂದಂತೆ ಹೀಗೆ ಅಥವಾ ಇದಕ್ಕಿಂತಲೂ ಹೆಚ್ಚಿನ ಪ್ರತಾಪವನ್ನು ಹೇಳಬಹುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಪಂಚನವತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತಾರನೆಯ ಅಧ್ಯಾಯ

ಯುಧಿಷ್ಠಿರನ ಮುಂದೆ ಅರ್ಜುನನಿಂದ ತನ್ನ ಸಾಮರ್ಥ್ಯದ ಕಥನ.

ಸಂಜಯಃ

ಏತಚ್ಛ್ರುತ್ವಾ ತು ಕೌಂತೇಯಃ ಸರ್ವಾನ್ ಭ್ರಾತೄನುಪಹ್ವರೇ ।
ಆಹೂಯ ಭರತಶ್ರೇಷ್ಠ ಇದಂ ವಚನಮಬ್ರವೀತ್ ॥೧॥

ಸಂಜಯ– ಇದನ್ನು ಕೇಳಿದ ಭರತಶ್ರೇಷ್ಠನಾದ ಯುಧಿಷ್ಠಿರನು ತನ್ನ ಎಲ್ಲಾ ತಮ್ಮಂದಿರನ್ನು ಏಕಾಂತದಲ್ಲಿ ಕರೆದು ಈ ಮಾತನ್ನು ಆಡಿದನು.

ಯುಧಿಷ್ಠಿರಃ

ಧಾರ್ತರಾಷ್ಟ್ರಸ್ಯ ಸೈನ್ಯೇಷು ಯೇ ಚಾರಪುರುಷಾ ಮಮ ।
ತೇ ಪ್ರವೃತ್ತಿಂ ಪ್ರಯಚ್ಛಂತಿ ಮಮೇಮಾಂ ವ್ಯುಷಿತಾಂ ನಿಶಾಮ್ ॥೨॥

ಯುಧಿಷ್ಠಿರ– ದುರ್ಯೋಧನನ ಸೈನ್ಯದಲ್ಲಿ ನಾನು ನಿಯೋಜಿಸಿರುವ ಗೂಢಚಾರರು ನಿನ್ನೆ ರಾತ್ರಿ ಅಲ್ಲಿ ನಡೆದ ವೃತ್ತಾಂತವನ್ನು ನನಗೆ ತಿಳಿಸಿದ್ದಾರೆ.

ದುರ್ಯೋಧನಃ ಕಿಲಾಪೃಚ್ಛದಾಪಗೇಯಂ ಮಹಾವ್ರತಮ್ ।
ಕೇನ ಕಾಲೇನ ಪಾಂಡೂನಾಂ ಹಂತಾ ಸೇನಾಮಿತಿ ಪ್ರಭೋ ॥೩॥

ದುರ್ಯೋಧನನು ಮಹಾವ್ರತರಾದ ಭೀಷ್ಮರನ್ನು ಕುರಿತು ಪ್ರಭುವೇ, ಎಷ್ಟು ಕಾಲದಲ್ಲಿ ಪಾಂಡವರ ಸೈನ್ಯವನ್ನು ನಾಶಮಾಡುವಿರಿ ಎಂದು ಕೇಳಿದನಷ್ಟೆ!

ಮಾಸೇನೇತಿ ಚ ತೇನೋಕ್ತೋ ಧಾರ್ತರಾಷ್ಟ್ರಃ ಸುದುರ್ಮತಿಃ ।
ತಾವತಾ ಚಾಪಿ ಕಾಲೇನ ದ್ರೋಣೋऽಪಿ ಪ್ರತಿಜಜ್ಞಿವಾನ್ ॥೪॥

ಅವರು ಸುದುರ್ಮತಿಯಾದ ದುರ್ಯೋಧನನಿಗೆ ಒಂದು ತಿಂಗಳಿನಲ್ಲಿ ಎಂದು ಹೇಳಿದರು. ದ್ರೋಣರೂ ಸಹ ಅಷ್ಟೇ ಕಾಲದಲ್ಲಿ ಎಂದು ಪ್ರತಿಜ್ಞೆಯನ್ನು ಮಾಡಿದರು.

ಗೌತಮೋ ದ್ವಿಗುಣಂ ಕಾಲಮುಕ್ತವಾನಿತಿ ನಃ ಶ್ರುತಮ್ ।
ದ್ರೌಣಿಸ್ತು ದಶರಾತ್ರೇಣ ಪ್ರತಿಜಜ್ಞೇ ಮಹಾಸ್ತ್ರವಿತ್ ॥೫॥

ಕೃಪಾಚಾರ್ಯರು ಅದರ ಎರಡರಷ್ಟು ಕಾಲವನ್ನು ಹೇಳಿದರು ಎಂದು ನಾನು ಕೇಳಿದ್ದೇನೆ. ಮಹಾಸ್ತ್ರವೇತ್ತರಾದ ಅಶ್ವತ್ಥಾಮರು ಹತ್ತುದಿನಗಳಲ್ಲಿ ಎಂದು ಪ್ರತಿಜ್ಞೆ ಮಾಡಿದರು.

ತಥಾ ದಿವ್ಯಾಸ್ತ್ರವಿತ್ ಕರ್ಣಃ ಸಂಪೃಷ್ಟಃ ಕುರುಸಂಸದಿ ।
ಪಂಚಭಿರ್ದಿವಸೈರ್ಹಂತುಂ ಸಸೈನ್ಯಂ ಪ್ರತ್ಯಜಾನತ ॥೬॥

ಹಾಗೆಯೇ ಕುರುಸಭೆಯಲ್ಲಿ ದಿವ್ಯಾಸ್ತ್ರವೇತ್ತನಾದ ಕರ್ಣನನ್ನು ಕೇಳಿದಾಗ ಐದು ದಿನಗಳಲ್ಲಿ ನಮ್ಮ ಸೈನ್ಯದ ವಿನಾಶವನ್ನು ಅವನು ಪ್ರತಿಜ್ಞೆ ಮಾಡಿದನು.

ತಸ್ಮಾದಹಮಪೀಚ್ಛಾಮಿ ಶ್ರೋತುಮರ್ಜುನ ತತ್ತ್ವತಃ ।
ಕಾಲೇನ ಕಿಯತಾ ಶತ್ರೂನ್ ಕ್ಷಪಯೇರಿತಿ ಸಂಯುಗೇ ॥೭॥

ಆದ್ದರಿಂದ ನಾನೂ ಸಹ ಇದನ್ನು ಸರಿಯಾಗಿ ತಿಳಿಯಲು ಬಯಸುತ್ತೇನೆ. ಎಲೈ ಅರ್ಜುನನೇ, ಎಷ್ಟು ಕಾಲದಲ್ಲಿ ಈ ಯುದ್ಧದಲ್ಲಿ ಶತ್ರುಗಳ ಸೈನ್ಯವನ್ನು ನಾಶಪಡಿಸುವಿ?

ಸಂಜಯಃ

ಏವಮುಕ್ತೋ ಗುಡಾಕೇಶಃ ಪಾರ್ಥಿವೇನ ಧನಂಜಯಃ ।
ವಾಸುದೇವಂ ಸಮೀಕ್ಷ್ಯೇದಂ ವಚನಂ ಪ್ರತ್ಯಭಾಷತ ॥೮॥

ಸಂಜಯ– ಹೀಗೆ ಯುಧಿಷ್ಠಿರನಿಂದ ಕೇಳಲ್ಪಟ್ಟ ಧನಂಜಯನು ಕೃಷ್ಣನನ್ನು ನೋಡುತ್ತಾ ಈ ಪ್ರತ್ಯುತ್ತರವನ್ನು ಕೊಟ್ಟನು.

ಸರ್ವ ಏತೇ ಮಹಾತ್ಮಾನಃ ಕೃತಾಸ್ತ್ರಾಶ್ಚಿತ್ರಯೋಧಿನಃ ।
ಅಸಂಶಯಂ ಮಹಾರಾಜ ಹನ್ಯುರೇವ ಬಲಂ ತವ ॥೯॥

ಎಲೈ ಮಹಾರಾಜನೇ, ಅವರೆಲ್ಲರೂ ಮಹಾತ್ಮರು ಮತ್ತು ಅಸ್ತ್ರವಿದ್ಯೆಯನ್ನು ಬಲ್ಲವರು ಮತ್ತು ಚಿತ್ರಯೋಧಿಗಳು. ನಿಸ್ಸಂಶಯವಾಗಿ ನಿನ್ನ ಸೈನ್ಯವನ್ನು ಕೊಲ್ಲುವರು.

ಅಪೈತು ತೇ ಮನಸ್ತಾಪೋ ಯಥಾ ಸತ್ಯಂ ಬ್ರವೀಮ್ಯಹಮ್ ।
ಹನ್ಯಾಮೇಕರಥೇನೈವ ವಾಸುದೇವಸಹಾಯವಾನ್ ॥೧೦॥

ಸಾಮರಾನಪಿ ಲೋಕಾಂಸ್ತ್ರೀನ್ ಸರ್ವಾನ್ ಸ್ಥಾವರಜಂಗಮಾನ್ ।
ಭೂತಂ ಭವ್ಯಂ ಭವಿಷ್ಯಚ್ಚ ನಿಮೇಷಾದಿತಿ ಮೇ ಮತಿಃ ॥೧೧॥

ಆದರೆ ನಿನ್ನ ಮನಸ್ಸಿನ ತಾಪವು ದೂರವಾಗಲಿ. ಏಕೆಂದರೆ ನಾನು ಸತ್ಯವನ್ನು ಹೇಳುತ್ತೇನೆ. ನಾನು ಕೃಷ್ಣನ ಸಹಾಯವನ್ನು ಹೊಂದಿ, ಒಂದು ರಥದಲ್ಲಿ ಕುಳಿತು ದೇವತೆಗಳಿಂದ ಕೂಡಿದ ಮೂರುಲೋಕಗಳನ್ನೂ, ಎಲ್ಲಾ ಸ್ಥಾವರಜಂಗಮಗಳನ್ನೂ, ಭೂತಭವಿಷ್ಯತ್‌ವರ್ತಮಾನಗಳನ್ನೂ ಒಂದು ನಿಮಿಷದಲ್ಲಿ ಸಂಹರಿಸುವೆನೆಂದು ನನ್ನ ಅಭಿಪ್ರಾಯ.

ಯತ್ತದ್ ಘೋರಂ ಪಶುಪತಿಃ ಪ್ರಾದಾದಸ್ತ್ರಂ ಮಹನ್ಮಮ ।
ಕೈರಾತೇ ದ್ವಂದ್ವಯುದ್ಧೇ ತು ತದಿದಂ ಮಯಿ ವರ್ತತೇ ॥೧೨॥

ಕಿರಾತನ ಜೊತೆಯಲ್ಲಿ ನಡೆದ ಘೋರವಾದ ದ್ವಂದ್ವ ಯುದ್ಧದಲ್ಲಿ ಪಶುಪತಿಯು ನೀಡಿದ ಘೋರವಾದ ಈ ಪಾಶುಪತಾಸ್ತ್ರವು ನನ್ನಲ್ಲಿದೆ.

ಯದ್ ಯುಗಾಂತೇ ಪಶುಪತಿಃ ಸರ್ವಭೂತಾನಿ ಸಂಹರನ್ ।
ಪ್ರಯುಂಕ್ತೇ ಪುರುಷವ್ಯಾಘ್ರ ತದಿದಂ ಮಯಿ ವರ್ತತೇ ॥೧೩॥

ಎಲ್ಲ ಪ್ರಾಣಿಗಳನ್ನೂ ಸಂಹರಿಸುವ ಪಶುಪತಿಯು ಯುಗಾಂತದಲ್ಲಿ ಯಾವ ಪಾಶುಪತಾಸ್ತ್ರವನ್ನು ಪ್ರಯೋಗಿಸುವನೋ, ಎಲೈ ಪುರುಷವ್ಯಾಘ್ರನೇ, ಅಂತಹ ಈ ಅಸ್ತ್ರವು ನನ್ನ ಬಳಿ ಇದೆ.

ತನ್ನ ಜಾನಾತಿ ಗಾಂಗೇಯೋ ನ ದ್ರೋಣೋ ನ ಚ ಗೌತಮಃ ।
ನ ತು ದ್ರೋಣಸುತೋ ರಾಜನ್ ಕುತ ಏವ ತು ಸೂತಜಃ ॥೧೪॥

ಭೀಷ್ಮರಾಗಲೀ, ದ್ರೋಣರಾಗಲೀ, ಕೃಪರಾಗಲೀ ಅಥವಾ ಅಶ್ವತ್ಥಾಮರಾಗಲೀ ಆ ಅಸ್ತ್ರವನ್ನು ತಿಳಿದಿಲ್ಲ. ಇನ್ನು ಕರ್ಣನು ಎಲ್ಲಿಂದ ತಿಳಿಯಬೇಕು?

ನ ತು ಯುಕ್ತಂ ರಣೇ ಜೇತುಂ ದಿವ್ಯೈರಸ್ತ್ರೈಃ ಪೃಥಗ್‌ಜನಮ್ ।
ಆರ್ಜವೇನೈವ ಯುದ್ಧೇನ ವಿಜೇಷ್ಯಾಮೋ ವಯಂ ಪರಾನ್ ॥೧೫॥

ಸಾಧಾರಣ ಯೋಧರ ಮೇಲೆ ಯುದ್ಧದಲ್ಲಿ ಜಯಿಸಲು ದಿವ್ಯಾಸ್ತ್ರಗಳನ್ನು ಪ್ರಯೋಗಿಸಬಾರದು. ನೇರವಾದ ಯುದ್ಧದಿಂದಲೇ ನಾವು ಶತ್ರುಗಳನ್ನು ಗೆಲ್ಲುವೆವು.

ತಥೇಮೇ ಪುರುಷವ್ಯಾಘ್ರಾಃ ಸಮಸ್ತಾಸ್ತವ ಪಾರ್ಥಿವ ।
ಸರ್ವೇ ದಿವ್ಯಾಸ್ತ್ರವಿದ್ವಾಂಸಃ ಸರ್ವೇ ಯುದ್ಧಾಭಿನಂದಿನಃ ॥೧೬॥

ವೇದಾಂತಾವಭೃಥಸ್ನಾತಾಃ ಸರ್ವ ಏತೇऽಪರಾಜಿತಾಃ ।
ನಿಹನ್ಯುಃ ಸಮರೇ ಸೇನಾಂ ದೇವಾನಾಮಪಿ ಪಾಂಡವ ॥೧೭॥

ಎಲೈ ರಾಜನೇ, ಹಾಗೆ ಇಲ್ಲಿ ನಿನ್ನ ಬಳಿಗೆ ಬಂದಿರುವ ಪುರುಷವ್ಯಾಘ್ರರೆಲ್ಲರೂ ದಿವ್ಯಾಸ್ತ್ರಗಳನ್ನು ಹೊಂದಿದವರು, ಎಲ್ಲರೂ ಯುದ್ಧಪ್ರೇಮಿಗಳು, ವೇದದಲ್ಲಿ ಹೇಳಿದ ಕರ್ಮಗಳನ್ನು ಮಾಡಿ, ಅವಭೃಥಸ್ನಾನವನ್ನು ಮಾಡಿದವರು ಮತ್ತು ಅಪರಾಜಿತರು. ಎಲೈ ಪಾಂಡವನೇ, ಇವರು ದೇವತೆಗಳ ಸೈನ್ಯವನ್ನೂ ಕೊಂದಾರು!

ಶಿಖಂಡೀ ಯುಯುಧಾನಶ್ಚ ಧೃಷ್ಟದ್ಯುಮ್ನಶ್ಚ ಪಾರ್ಷತಃ ।
ಭೀಮಸೇನೋ ಯಮೌ ಚೋಭೌ ಯುಧಾಮನ್ಯೂತ್ತಮೌಜಸೌ ॥೧೮॥

ವಿರಾಟದ್ರುಪದೌ ಚೋಭೌ ಭೀಷ್ಮದ್ರೋಣಸಮೌ ಯುಧಿ ।
ಶಂಖಶ್ಚೈವ ಮಹಾಬಾಹುರ್ಘಟಿಂಬಶ್ಚ ಮಹಾಬಲಃ ॥೧೯॥

ಶಿಖಂಡಿ, ಯುಯುಧಾನ, ದ್ರುಪದನ ಮಗನಾದ ಧೃಷ್ಟದ್ಯುಮ್ನ, ಭೀಮಸೇನ, ನಕುಲ-ಸಹದೇವರು, ಯುಧಾಮನ್ಯು ಮತ್ತು ಉತ್ತಮೌಜರು, ಯುದ್ಧದಲ್ಲಿ ಭೀಷ್ಮ-ದ್ರೋಣರಿಗೆ ಸಮರಾದ ವಿರಾಟ-ದ್ರುಪದರು, ಮಹಾಬಾಹುವಾದ ಶಂಖ, ಮಹಾಬಲನಾದ ಘಟೋತ್ಕಚ;

ಪುತ್ರೋऽಸ್ಯಾಂಜನಪರ್ವಾ ತು ಮಹಾಬಲಪರಾಕ್ರಮಃ ।
ಶೈನೇಯಶ್ಚ ಮಹಾಬಾಹುಃ ಸಹಾಯೋ ರಣಕೋವಿದಃ ॥೨೦॥

ಮಹಾಬಲಪರಾಕ್ರಮವುಳ್ಳ ಘಟೋತ್ಕಚಪುತ್ರನಾದ ಅಂಜನಪರ್ವ, ಮಹಾಬಾಹುವೂ, ರಣಕೋವಿದನೂ, ನಮ್ಮ ಸಹಾಯನೂ ಆದ ಸಾತ್ಯಕಿ (ಎಲ್ಲರೂ ಸಮರ್ಥರಾಗಿದ್ದಾರೆ).

ಅಭಿಮನ್ಯುಶ್ಚ ಬಲವಾನ್ ದ್ರೌಪದ್ಯಾಃ ಪಂಚ ಚಾತ್ಮಜಾಃ ।
ಸ್ವಯಂ ಚಾಪಿ ಸಮರ್ಥೋಽಸಿ ತ್ರೈಲೋಕ್ಯೋತ್ಸಾದನೇಽಪಿ ಚ ॥೨೧॥

ಬಲಿಷ್ಠನಾದ ಅಭಿಮನ್ಯು, ದ್ರೌಪದಿಯ ಐದುಮಕ್ಕಳು ಮತ್ತು ನೀನೂ ಸಹ ಮೂರುಲೋಕಗಳನ್ನೂ ಅಳಿಸಿಹಾಕುವುದಕ್ಕೆ ಸಮರ್ಥನಾಗಿದ್ದೀಯೆ.

ಕ್ರೋಧಾದ್ ಯಂ ಪುರುಷಂ ಪಶ್ಯೇಸ್ತಥಾ ಶಕ್ರಸಮದ್ಯುತೇ ।
ಸ ಕ್ಷಿಪ್ರಂ ನ ಭವೇದ್ ವ್ಯಕ್ತಮಿತಿ ತ್ವಾಂ ವೇದ್ಮಿ ಕೌರವ ॥೨೨॥

ಎಲೈ ಇಂದ್ರನಿಗೆ ಸಮಾನವಾದ ಕಾಂತಿಯುಳ್ಳ ಕೌರವನೇ, ನೀನು ಯಾವ ಪುರುಷನನ್ನು ಕ್ರೋಧದಿಂದ ನೋಡುವಿಯೋ ಅವನು ಕ್ಷಿಪ್ರವಾಗಿ ಮರಣವನ್ನು ಹೊಂದುವನು. ಈ ನಿನ್ನ ಸಾಮರ್ಥ್ಯವನ್ನು ನಾನು ತಿಳಿದಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್
ಉದ್ಯೋಗಪರ್ವಣಿ ಷಣ್ಣವತ್ಯುತ್ತರಶತತಮೋಽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಷಡ್‌ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೇಳನೆಯ ಅಧ್ಯಾಯ

ದುರ್ಯೋಧನನಿಂದ ಮೂರುಭಾಗವನ್ನಾಗಿ ಮಾಡಿ ಸೇನೆಯ ಪ್ರಸ್ಥಾನ. ಎಲ್ಲರ ಶಿಬಿರ ಪ್ರವೇಶ.

ವೈಶಂಪಾಯನಃ

ತತಃ ಪ್ರಭಾತೇ ವಿಮಲೇ ಧಾರ್ತರಾಷ್ಟ್ರೇಣ ಚೋದಿತಾಃ ।
ದುರ್ಯೋಧನೇನ ರಾಜಾನಃ ಪ್ರಯಯುಃ ಪಾಂಡವಾನ್ ಪ್ರತಿ ॥೧॥

ವೈಶಂಪಾಯನ– ಅನಂತರ ನಿರ್ಮಲವಾದ ಪ್ರಾತಃಕಾಲದಲ್ಲಿ ಧೃತರಾಷ್ಟ್ರ ಪುತ್ರನಾದ ದುರ್ಯೋಧನನಿಂದ ಪ್ರೇರಿತರಾದ ರಾಜರು ಪಾಂಡವರಿಗೆ ಎದುರಾಗಿ ಹೋದರು.

ಆಪ್ಲಾವ್ಯ ಶುಚಯಃ ಸರ್ವೇ ಸ್ರಗ್ವಿಣಃ ಶುಕ್ಲವಾಸಸಃ ।
ಗೃಹೀತಶಸ್ತ್ರಾ ಧ್ವಜಿನಃ ಸ್ವಸ್ತಿ ವಾಚ್ಯ ಹುತಾಗ್ನಯಃ ॥೨॥

ಸರ್ವೇ ಬ್ರಹ್ಮವಿದಃ ಶೂರಾಃ ಸರ್ವೇ ಸುಚರಿತವ್ರತಾಃ ।
ಸರ್ವೇ ಧರ್ಮಕೃತಶ್ಚೈವ ಸರ್ವೇ ಚಾಹಿತಲಕ್ಷಣಾಃ ॥೩॥

ಎಲ್ಲರೂ ಸ್ನಾನವನ್ನು ಮಾಡಿ ಶುದ್ಧರಾಗಿ, ಮಾಲೆಗಳನ್ನು ಧರಿಸಿ, ಶುಕ್ಲವಸ್ತ್ರಗಳನ್ನು ಧರಿಸಿ, ಅಗ್ನಿಕಾರ್ಯವನ್ನು ಮಾಡಿ, ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಿಕೊಂಡು, ಶಸ್ತ್ರಗಳನ್ನು ಮತ್ತು ಧ್ವಜಗಳನ್ನು ಹಿಡಿದು ಬ್ರಹ್ಮಜ್ಞಾನಿಗಳೂ, ಶೂರರೂ, ಒಳ್ಳೆಯ ವ್ರತವನ್ನು ಆಚರಿಸಿದವರೂ, ಧರ್ಮವನ್ನು ಆಚರಿಸಿದವರೂ, ಲಕ್ಷಣವಂತರೂ ಆದ ಎಲ್ಲರೂ (ಹೊರಟರು).

ಆಹವೇಷು ಪರಾನ್ ಲೋಕಾನ್ ಜಿಗೀಷಂತೋ ಮಹಾಬಲಾಃ ।
ಏಕಾಗ್ರಮನಸಃ ಸರ್ವೇ ಶ್ರದ್ದಧಾನಾಃ ಪರಸ್ಯ ಚ ॥೪॥

ವಿಂದಾನುವಿಂದಾವಾವಂತ್ಯೌ ಕೇಕಯಾ ಬಾಹ್ಲಿಕೈಃ ಸಹ ।
ಪ್ರಯಯುಃ ಸರ್ವ ಏವೈತೇ ಭಾರದ್ವಾಜಪುರೋಗಮಾಃ ॥೫॥

ಯುದ್ಧದಲ್ಲಿ ಪರಲೋಕವನ್ನು ಗೆಲ್ಲಲು ಆಶಿಸಿ, ಮಹಾಬಲರಾದ ಅವರೆಲ್ಲರೂ ಏಕಾಗ್ರಚಿತ್ತದಿಂದ ಒಬ್ಬರಲ್ಲೊಬ್ಬರು ವಿಶ್ವಾಸವನ್ನು ಮಾಡುತ್ತಾ (ಹೊರಟರು). ಅವಂತಿದೇಶದ ವಿಂದಾನುವಿಂದರು, ಕೇಕಯರು, ಬಾಹ್ಲಿಕರು ಇವರೆಲ್ಲರೂ ದ್ರೋಣರನ್ನು ಮುಂದೆ ಮಾಡಿಕೊಂಡು ಹೊರಟರು.

ಅಶ್ವತ್ಥಾಮಾ ಶಾಂತನವಃ ಸೈಂಧವೋಽಥ ಜಯದ್ರಥಃ ।
ದಾಕ್ಷಿಣಾತ್ಯಾಃ ಪ್ರತೀಚ್ಯಾಶ್ಚ ಪಾರ್ವತೀಯಾಶ್ಚ ಯೇ ನೃಪಾಃ ॥೬॥

ಗಾಂಧಾರರಾಜಃ ಶಕುನಿಃ ಪ್ರಾಚ್ಯೋದೀಚ್ಯಾಶ್ಚ ಸರ್ವಶಃ ।
ಶಕಾಃ ಕಿರಾತಾ ಯವನಾಃ ಶಿಬಯೋಽಥ ವಸಾತಯಃ ॥೭॥

ಸ್ವೈಃ ಸ್ವೈರನೀಕೈಃ ಸಹಿತಾಃ ಪರಿವಾರ್ಯ ಮಹಾರಥಾಃ ॥೮॥

ಏತೇ ಮಹಾರಥಾಃ ಸರ್ವೇ ದ್ವಿತೀಯೇ ನಿರ್ಯಯುರ್ಬಲೇ ॥೯॥

ಅಶ್ವತ್ಥಾಮರು, ಭೀಷ್ಮರು, ಸಿಂಧುರಾಜನಾದ ಜಯದ್ರಥ, ದಕ್ಷಿಣದೇಶದ ಪಶ್ಚಿಮದೇಶದ ಮತ್ತು ಪರ್ವತ ಪ್ರಾಂತದ ರಾಜರು, ಗಾಂಧಾರ ರಾಜನಾದ ಶಕುನಿ, ಪೂರ್ವ ಮತ್ತು ಉತ್ತರ ದಿಕ್ಕಿನ ಎಲ್ಲ ರಾಜರು, ಶಕರು, ಕಿರಾತರು, ಯವನರು, ಶಿಬಿಗಳು, ವಸಾತಿಗಳು – ಈ ಮಹಾರಥರಾದ ಎಲ್ಲರೂ ತಮ್ಮ ತಮ್ಮ ಸೈನ್ಯದ ಗುಂಪುಗಳಿಂದ ಕೂಡಿ, ಅವರಿಂದ ಸುತ್ತುವರಿಯಲ್ಪಟ್ಟು ಸೈನ್ಯದ ಎರಡನೆಯ ಭಾಗದಲ್ಲಿ ಸಾಗಿದರು.

ಕೃತವರ್ಮಾ ಸಹಾನೀಕಃ ತ್ರಿಗರ್ತಶ್ಚ ಮಹಾರಥಃ ।
ದುರ್ಯೋಧನಶ್ಚ ನೃಪತಿರ್ಭ್ರಾತೃಭಿಃ ಪರಿವಾರಿತಃ ॥೧೦॥

ಶಲೋ ಭೂರಿಶ್ರವಾಃ ಶಲ್ಯಃ ಕೌಸಲ್ಯೋಽಥ ಬೃಹದ್ಬಲಃ ।
ಏತೇ ಪಶ್ಚಾದವರ್ತಂತ ಧಾರ್ತರಾಷ್ಟ್ರಪುರೋಗಮಾಃ ॥೧೧॥

ಸೈನ್ಯದಿಂದ ಸಹಿತನಾದ ಕೃತವರ್ಮ, ಮಹಾರಥನಾದ ತ್ರಿಗರ್ತ, ತಮ್ಮಂದಿರಿಂದ ಸಹಿತನಾದ ದುರ್ಯೋಧನ, ಶಲ, ಭೂರಿಶ್ರವ, ಶಲ್ಯ, ಕೋಸಲದೇಶದ ರಾಜನಾದ ಬೃಹದ್ಬಲ ಇವರೆಲ್ಲರೂ ದುರ್ಯೋಧನನನ್ನು ಮುಂದೆ ಮಾಡಿಕೊಂಡು ಹಿಂದಿನಿಂದ (ಮೂರನೆಯ ಭಾಗದಲ್ಲಿ) ನಡೆದರು.

ತೇ ಸಮೇತ್ಯ ಯಥಾನ್ಯಾಯಂ ಧಾರ್ತರಾಷ್ಟ್ರಾ ಮಹಾಬಲಾಃ ।
ಕುರುಕ್ಷೇತ್ರಸ್ಯ ಪಶ್ಚಾರ್ಧೇ ವ್ಯವಾತಿಷ್ಠಂತ ದಂಸಿತಾಃ ॥೧೨॥

ಮಹಾಬಲರಾದ ದುರ್ಯೋಧನಾದಿಗಳು ನ್ಯಾಯಕ್ಕೆ ಅನುಗುಣವಾಗಿ ಜೊತೆಯಲ್ಲಿ ಹೋಗಿ ಕವಚಗಳನ್ನು ಧರಿಸಿ, ಕುರುಕ್ಷೇತ್ರದ ಹಿಂದಿನ ಭಾಗದ ಅರ್ಧದಲ್ಲಿ ಎಂದರೆ ಪೂರ್ವಭಾಗದಲ್ಲಿ ನೆಲೆಸಿದರು (ವಾದಿರಾಜರು).

ದುರ್ಯೋಧನಸ್ತು ಶಿಬಿರಂ ಕಾರಯಾಮಾಸ ಭಾರತ ।
ಯಥೈವ ಹಸ್ತಿನಪುರಂ ದ್ವಿತೀಯಂ ಸಮಲಂಕೃತಮ್ ॥೧೩॥

ಎಲೈ ಭಾರತನೇ, ದುರ್ಯೋಧನನು ಅಲಂಕೃತವಾದ ಇನ್ನೊಂದು ಹಸ್ತಿನಪುರದಂತಿರುವ ಶಿಬಿರವನ್ನು ಮಾಡಿಸಿದನು.

ನ ವಿಶೇಷಂ ವಿಜಾನಂತಿ ಪುರಸ್ಯ ಶಿಬಿರಸ್ಯ ವಾ ।
ಕುಶಲಾ ಅಪಿ ರಾಜೇಂದ್ರ ನರಾ ನಗರವಾಸಿನಃ ॥೧೪॥

ಎಲೈ ರಾಜೇಂದ್ರನೇ, ಕುಶಲರಾದ ನಗರವಾಸಿಗಳಾದ ಮನುಷ್ಯರೂ ಸಹ ಪಟ್ಟಣಕ್ಕೂ ಮತ್ತು ಶಿಬಿರಕ್ಕೂ ಯಾವ ವ್ಯತ್ಯಾಸವನ್ನೂ ಕಾಣುತ್ತಿರಲಿಲ್ಲ.

ತಾದೃಶಾನ್ಯೇವ ದುರ್ಗಾಣಿ ರಾಜ್ಞಾಮಪಿ ಮಹೀಪತಿಃ ।
ಕಾರಯಾಮಾಸ ಕೌರವ್ಯಃ ಶತಶೋಽಥ ಸಹಸ್ರಶಃ ॥೧೫॥

ರಾಜನಾದ ದುರ್ಯೋಧನನು ರಾಜರಿಗೂ ಸಹ ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ ಅಂತಹದೇ ದುರ್ಗಗಳನ್ನು ಮಾಡಿಸಿದನು.

ಪಂಚಯೋಜನವಿಸ್ತೀರ್ಣಂ ಮಂಡಲಂ ತದ್ರಣಾಜಿರಮ್ ।
ಸೇನಾನಿವೇಶಾಂಸ್ತೇ ರಾಜನ್ನಾವಿಶನ್ ಶತಸಂಘಶಃ ॥೧೬॥

ಎಲೈ ರಾಜನೇ, ಐದು ಯೋಜನ ವರ್ತುಲಾಕಾರವಾಗಿ ವಿಸ್ತಾರವಾಗಿದ್ದ ಆ ರಣಭೂಮಿಯನ್ನು ಅವರು ನೂರರ ಸಮೂಹಗಳಲ್ಲಿ ಪ್ರವೇಶ ಮಾಡಿ ನೆಲೆಸಿದರು.

ತತ್ರ ತೇ ಪೃಥಿವೀಪಾಲಾ ಯಥೋತ್ಸಾಹಂ ಯಥಾಬಲಮ್ ।
ವಿವಿಶುಃ ಶಿಬಿರಾಣ್ಯತ್ರ ದ್ರವ್ಯವಂತಿ ಸಹಸ್ರಶಃ ॥೧೭॥

ಅಲ್ಲಿ ಆ ರಾಜರು ತಮ್ಮ ಬಲಕ್ಕೆ, ತಮ್ಮ ಅಭಿರುಚಿಗೆ ತಕ್ಕಂತೆ ಎಲ್ಲ ಸಲಕರಣೆಗಳಿಂದ ಕೂಡಿದ ಸಹಸ್ರಾರು ಶಿಬಿರಗಳನ್ನು ಪ್ರವೇಶಿಸಿದರು.

ತೇಷಾಂ ದುರ್ಯೋಧನೋ ರಾಜಾ ಸಸೈನ್ಯಾನಾಂ ಮಹಾತ್ಮನಾಮ್ ।
ವ್ಯಾದಿದೇಶ ಸಬಾಹ್ಯಾನಾಂ ಭಕ್ಷ್ಯಭೋಜ್ಯಮನುತ್ತಮಮ್ ॥೧೮॥

ದುರ್ಯೋಧನನು ಸೈನ್ಯದಿಂದ ಸಹಿತರಾದ ಆ ಮಹಾತ್ಮರಿಗೆ ಮತ್ತು ಹೊರಗಿನವರಿಗೂ ಮತ್ತು ಅಶ್ವ-ಗಜ-ಮನುಷ್ಯರಿಗೂ ಸಹ ಶ್ರೇಷ್ಠವಾದ ಭಕ್ಷ್ಯ-ಭೋಜ್ಯಗಳನ್ನು ಒದಗಿಸಿದನು.

ಸನಾಗಾಶ್ವಮನುಷ್ಯಾಣಾಂ ಯೇ ಚ ಶಿಲ್ಪೋಪಜೀವಿನಃ ।
ಯೇ ಚಾನ್ಯೇಽನುಗತಾಸ್ತತ್ರ ಸೂತಮಾಗಧವಂದಿನಃ ॥೧೯॥

ವಣಿಜೋ ಗಣಕಾಶ್ಚಾರಾ ಯೇ ಚೈವ ಪ್ರೇಕ್ಷಕಾ ಜನಾಃ ।
ಸರ್ವಾಂಸ್ತಾನ್ ಕೌರವೋ ರಾಜಾ ವಿಧಿವತ್ ಪರ್ಯರಕ್ಷತ ॥೨೦॥

ಯಾರು ಕುಶಲಕರ್ಮಿಗಳೋ ಮತ್ತು ಅಲ್ಲಿಗೆ ಪ್ರಾಪ್ತರಾದ ಸೂತಮಾಗಧವಂದಿಗಳೋ ಅವರಿಗೂ ವರ್ತಕರು, ವೇಶ್ಯೆಯರು, ಗೂಢಚಾರರು, ಪ್ರೇಕ್ಷಕರು ಎಲ್ಲರನ್ನೂ ವಿಧಿಗೆ ಅನುಗುಣವಾಗಿ ಕೌರವ ರಾಜನಾದ ದುರ್ಯೋಧನನು ರಕ್ಷಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಸಪ್ತನವತ್ಯುತ್ತರಶತತಮೋಽಧ್ಯಾಯಃ ॥

॥ ಆಂಬೋಪಾಖ್ಯಾನಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನೂರ ತೊಂಬತ್ತೆಂಟನೆಯ ಅಧ್ಯಾಯ

ಯುಧಿಷ್ಠಿರನಿಂದಲೂ ಸೈನ್ಯವನ್ನು ಮೂರುಭಾಗವಾಗಿ ಮಾಡಿ ಕುರುಕ್ಷೇತ್ರಕ್ಕೆ ಪ್ರಸ್ಥಾನ.

ವೈಶಂಪಾಯನಃ

ತಥೈವ ರಾಜಾ ಕೌಂತೇಯೋ ಧರ್ಮಪುತ್ರೋ ಯುಧಿಷ್ಠಿರಃ ।
ಧೃಷ್ಟದ್ಯುಮ್ನಮುಖಾನ್ ವೀರಾನ್ ಚೋದಯಾಮಾಸ ಭಾರತ ॥೧॥

ವೈಶಂಪಾಯನ– ಎಲೈ ಭಾರತನೇ, ಹಾಗೆಯೇ ಕುಂತೀಪುತ್ರನಾದ, ಧರ್ಮಪುತ್ರನಾದ ಯುಧಿಷ್ಠಿರನು ಧೃಷ್ಟದ್ಯುಮ್ನ ಮೊದಲಾದ ತನ್ನ ವೀರರನ್ನು ಪ್ರಚೋದಿಸಿದನು.

ಚೇದಿಕಾಶಿಕರೂಶಾನಾಂ ನೇತಾರಂ ದೃಢವಿಕ್ರಮಮ್ ।
ಸೇನಾಪತಿಮಮಿತ್ರಘ್ನಂ ಧೃಷ್ಟಕೇತುಮಥಾದಿಶತ್ ॥೨॥

ಚೇದಿಗಳು, ಕಾಶಿ-ಕರೂಶರು ಇವರಿಗೆ ನೇತಾರನಾಗಿ ದೃಢವಿಕ್ರಮನೂ, ಶತ್ರುಸಂಹಾರಕನೂ, ಸೇನಾಪತಿಯೂ ಆದ ಧೃಷ್ಟಕೇತುವನ್ನು ನೇಮಿಸಿದನು.

ವಿರಾಟಂ ದ್ರುಪದಂ ಚೈವ ಯುಯುಧಾನಂ ಶಿಖಂಡಿನಮ್ ।
ಪಾಂಚಾಲ್ಯೌ ಚ ಮಹೇಷ್ವಾಸೌ ಯುಧಾಮನ್ಯೂತ್ತಮೌಜಸೌ ॥೩॥

ತೇ ಶೂರಾಶ್ಚಿತ್ರವರ್ಮಾಣಃ ತಪ್ತಕುಂಡಲಧಾರಿಣಃ ।
ಆಜ್ಯಾವಸಿಕ್ತಾ ಜ್ವಲಿತಾ ಧಿಷ್ಣ್ಯೇಷ್ವಿವ ಹುತಾಶನಾಃ ॥೪॥

ಅಶೋಭಂತ ಮಹೇಷ್ವಾಸಾ ಗ್ರಹಾಃ ಪ್ರಜ್ವಲಿತಾ ಇವ ॥೫॥

ವಿರಾಟ-ದ್ರುಪದರೂ, ಯುಯುಧಾನ, ಶಿಖಂಡಿ, ಮಹಾಧನುರ್ಧಾರಿಗಳಾದ ಪಾಂಚಾಲ ದೇಶದ ಯುಧಾಮನ್ಯು ಮತ್ತು ಉತ್ತಮೌಜರೂ ಶೂರರಾದ ಇವರೆಲ್ಲರೂ ವಿಚಿತ್ರವಾದ ಕವಚಗಳನ್ನು ಧರಿಸಿ, ತಪ್ತಕುಂಡಲಗಳನ್ನು ಧರಿಸಿ, ಕುಂಡಗಳಲ್ಲಿರುವ ಆಜ್ಯಸಿಕ್ತವಾದ ಅಗ್ನಿಗಳಂತೆ ಪ್ರಕಾಶಿಸುತ್ತಾ, ಪ್ರಜ್ವಲಿಸುವ ಗ್ರಹಗಳಂತೆ ಮಹಾಧನುರ್ಧಾರಿಗಳಾಗಿ ಅವರು ಶೋಭಿಸಿದರು.

ಅಥ ಸೈನ್ಯಂ ಯಥಾಯೋಗಂ ಪೂಜಯಿತ್ವಾ ನರರ್ಷಭಃ ।
ದಿದೇಶ ತಾನ್ಯನೀಕಾನಿ ಪ್ರಯಾಣಾಯ ಮಹೀಪತಿಃ ॥೬॥

ಅನಂತರ ನರಶ್ರೇಷ್ಠನಾದ ಯುಧಿಷ್ಠಿರನು ಆ ಸೈನ್ಯವನ್ನು ಯಥಾಯೋಗ್ಯವಾಗಿ ಪೂಜಿಸಿ ಪ್ರಯಾಣವನ್ನು ಮಾಡಲು ಆದೇಶಿಸಿದನು.

ಅಭಿಮನ್ಯುಂ ಬೃಹಂತಂ ಚ ದ್ರೌಪದೇಯಾಂಶ್ಚ ಸರ್ವಶಃ ।
ಧೃಷ್ಟದ್ಯುಮ್ನಮುಖಾನೇತಾನ್ ಪ್ರಾಹಿಣೋತ್ ಪಾಂಡುನಂದನಃ ॥೭॥

ಪಾಂಡುನಂದನನಾದ ಅವನು ಅಭಿಮನ್ಯು, ಬೃಹಂತ, ದ್ರೌಪದಿಯ ಮಕ್ಕಳು ಇವರನ್ನು ಧೃಷ್ಟದ್ಯುಮ್ನನನ್ನು ಮುಂದೆ ಮಾಡಿ ಮೊದಲು ಕಳುಹಿಸಿದನು.

ಭೀಮಂ ಚ ಯುಯುಧಾನಂ ಚ ಪಾಂಡವಂ ಚ ಧನಂಜಯಮ್ ।
ದ್ವಿತೀಯಂ ಪ್ರೇಷಯಾಮಾಸ ಬಲಸ್ಕಂಧಂ ಯುಧಿಷ್ಠಿರಃ ॥೮॥

ಯುಧಿಷ್ಠಿರನು ಭೀಮಸೇನ, ಯುಯುಧಾನ, ಅರ್ಜುನ ಇವರನ್ನು ಸೈನ್ಯದ ಎರಡನೆಯ ಭಾಗವಾಗಿ ಕಳುಹಿಸಿದನು.

ಭಾಂಡಂ ಸಮಾರೋಪಯತಾಂ ಚರತಾಂ ಸಂಪ್ರಧಾವತಾಮ್ ।
ಹೃಷ್ಟಾನಾಂ ತತ್ರ ಯೋಧಾನಾಂ ಶಬ್ದೋ ದಿವಮಿವಾಸ್ಪೃಶತ್ ॥೯॥

ಆಗ ರಥಗಳಿಗೆ ಯುದ್ಧೋಪಕರಣಗಳನ್ನು ನಿಯೋಜಿಸುವ, ಸಂಚರಿಸುವ, ಸಂತೋಷದಿಂದ ಓಡಾಡುವ ಯೋಧರ ಶಬ್ದವು ಆಕಾಶವನ್ನು ಮುಟ್ಟಿತು.

ಸ್ವಯಮೇವ ತತಃ ಪಶ್ಚಾದ್ ವಿರಾಟದ್ರುಪದಾನ್ವಿತಃ ।
ಅಥಾಪರೈರ್ಮಹೀಪಾಲೈಃ ಸಹ ಪ್ರಾಯಾನ್ ಮಹಾಬಲಃ ॥೧೦॥

ಮಹಾಬಲನಾದ ಯುಧಿಷ್ಠಿರನು ಹಿಂಭಾಗದಲ್ಲಿ ವಿರಾಟ-ದ್ರುಪದರಿಂದಲೂ ಉಳಿದ ರಾಜರಿಂದಲೂ ಸಹಿತನಾಗಿ ತಾನೇ ನಡೆದನು.

ಭೀಮಧನ್ವಾऽऽಯತೀ ಸೇನಾ ಧೃಷ್ಟದ್ಯುಮ್ನೇನ ಪಾಲಿತಾ ।
ಗಂಗೇವ ಪೂರ್ಣಾ ಸ್ತಿಮಿತಾ ಸ್ಯಂದಮಾನಾ ವ್ಯದೃಶ್ಯತ ॥೧೧॥

ಧೃಷ್ಟದ್ಯುಮ್ನನಿಂದ ಪಾಲಿತವಾದ, ಭಯಂಕರವಾದ ಮತ್ತು ವಿಸ್ತಾರವಾದ ಆ ಸೈನ್ಯವು ಪೂರ್ಣಪ್ರವಾಹದಿಂದ ಹರಿಯುವ ಗಂಗೆಯಂತೆ ಕಂಡುಬಂದಿತು.

ತತಃ ಪುನರನೀಕಾನಿ ನ್ಯಯೋಜಯತ ಬುದ್ಧಿಮಾನ್ ।
ಮೋಹಯನ್ ಧೃತರಾಷ್ಟ್ರಸ್ಯ ಪುತ್ರಾಣಾಂ ಬುದ್ಧಿನಿಶ್ಚಯಮ್ ॥೧೨॥

ಮೇಧಾವಿಯಾದ ಯುಧಿಷ್ಠಿರನು ದುರ್ಯೋಧನಾದಿಗಳ ಬುದ್ಧಿಗೆ ಮೋಹವನ್ನು ಉಂಟುಮಾಡುತ್ತಾ ಪುನಃ ತನ್ನ ಸೈನ್ಯವನ್ನು ನಿಯೋಜಿಸಿದನು.

ದ್ರೌಪದೇಯಾನ್ ಮಹೇಷ್ವಾಸಾನಭಿಮನ್ಯುಂ ಚ ಭಾರತ ।
ನಕುಲಂ ಸಹದೇವಂ ಚ ಸರ್ವಾಂಶ್ಚೈವ ಪ್ರಭದ್ರಕಾನ್ ॥೧೩॥

ದಶ ಚಾಶ್ವಸಹಸ್ರಾಣಿ ದ್ವಿಸಹಸ್ರಾಣಿ ದಂತಿನಾಮ್ ।
ಅಯುತಂ ಚ ಪದಾತೀನಾಂ ರಥಾನ್ ಪಂಚಶತಂ ತಥಾ ॥೧೪॥

ಭೀಮಸೇನಂ ಚ ದುರ್ಧರ್ಷಂ ಪ್ರಥಮಂ ಪ್ರಾದಿಶದ್ ಬಲಮ್ ।

ಎಲೈ ಭಾರತನೇ, ದ್ರೌಪದಿಯ ಐದುಮಕ್ಕಳು, ಮಹಾಧನುರ್ಧಾರಿಯಾದ ಅಭಿಮನ್ಯು, ನಕುಲ-ಸಹದೇವರು, ಎಲ್ಲಾ ಪ್ರಭದ್ರಕರು, ಹತ್ತುಸಾವಿರ ಅಶ್ವಗಳು, ಎರಡುಸಾವಿರ ಗಜಗಳು, ಹತ್ತುಸಾವಿರ ಪದಾತಿಗಳು, ಐದುನೂರು ರಥಗಳು ಮತ್ತು ದುರ್ಧರ್ಷನಾದ ಭೀಮಸೇನ ಇವರನ್ನು ಸೈನ್ಯದ ಮೊದಲ ಭಾಗವಾಗಿ ಕಳುಹಿಸಿದನು.

ಮಧ್ಯಮೇ ಚ ವಿರಾಟಂ ಚ ಜಯತ್ಸೇನಂ ಚ ಮಾಗಧಮ್ ॥೧೫॥

ಮಹಾರಥೌ ಮಹಾತ್ಮಾನೌ ಯುಧಾಮನ್ಯೂತ್ತಮೌಜಸೌ ।
ವೀರ್ಯವಂತೌ ಮಹಾತ್ಮಾನೌ ಗದಾಕಾರ್ಮುಕಧಾರಿಣೌ ॥೧೬॥

ಅನ್ವಯಾತಾಂ ತದಾ ಮಧ್ಯೇ ವಾಸುದೇವಧನಂಜಯೌ ॥೧೭॥

ಮಧ್ಯಭಾಗದಲ್ಲಿ ವಿರಾಟ, ಮಗಧದೇಶದ ಜಯತ್ಸೇನ, ಮಹಾರಥರೂ ಮತ್ತು ಮಹಾತ್ಮರೂ ಆದ ಯುಧಾಮನ್ಯು ಮತ್ತು ಉತ್ತಮೌಜರು- ಪರಾಕ್ರಮಶಾಲಿಗಳಾದ ಅವರು ಗದಾಕಾರ್ಮುಕಧಾರಿಗಳಾಗಿದ್ದರು- ಮತ್ತು ಕೃಷ್ಣಾರ್ಜುನರು ಮಧ್ಯಭಾಗದಲ್ಲಿ ಮುಂದೆ ನಡೆದರು.

ಬಭೂವುರತಿಸಂರಬ್ಧಾಃ ಕೃತಪ್ರಹರಣಾ ನರಾಃ ।
ತೇಷಾಂ ವಿಂಶತಿಸಾಹಸ್ರಾ ಹಯಾಃ ಶೂರೈರಧಿಷ್ಠಿತಾಃ ॥೧೮॥

ಆ ಯೋಧರು ಬಹಳ ಕೋಪದಿಂದ ಕೂಡಿದವರಾಗಿ ಎಲ್ಲ ಶಸ್ತ್ರಗಳನ್ನು ಬಲ್ಲವರಾಗಿದ್ದರು. ಅವರಲ್ಲಿ ಇಪ್ಪತ್ತು ಸಾವಿರ ಶೂರರು ಅಶ್ವಾರೋಹಿಗಳಾಗಿದ್ದರು.

ಪಂಚ ನಾಗಸಹಸ್ರಾಣಿ ರಥವಂಶಾಶ್ಚ ಸರ್ವಶಃ ॥೧೯॥

ಪದಾತಯಶ್ಚ ಯೇ ಶೂರಾಃ ಕಾರ್ಮುಕಾಸಿಗದಾಧರಾಃ ।
ಸಹಸ್ರಶೋऽನ್ವಯುಃ ಪಶ್ಚಾದಗ್ರತಶ್ಚ ಸಹಸ್ರಶಃ ॥೨೦॥

ಐದುಸಹಸ್ರ ಗಜಗಳು ಮತ್ತು ರಥಗಳ ಸಮೂಹಗಳು ಅವರಿಗೆ ಎಲ್ಲ ಕಡೆಯಲ್ಲೂ ಇದ್ದವು. ಅವರ ಮುಂಭಾಗದಲ್ಲಿ ಮತ್ತು ಹಿಂದುಗಡೆ ಧನುಸ್ಸು, ಖಡ್ಗ ಮತ್ತು ಗದೆಗಳನ್ನು ಧರಿಸಿದ, ಶೂರರಾದ ಪದಾತಿಗಳು ಸಹಸ್ರ ಸಂಖ್ಯೆಯಲ್ಲಿ ನಡೆದರು.

ಯುಧಿಷ್ಠಿರೋ ಯತ್ರ ಸೈನ್ಯೇ ಯತ್ರ ಚೈವ ಚ ಫಲ್ಗುನಃ ।
ತತ್ರ ತೇ ಪೃಥಿವೀಪಾಲಾ ಭೂಯಿಷ್ಠಂ ಪರ್ಯವಸ್ಥಿತಾಃ ॥೨೧॥

ತತ್ರ ನಾಗಸಹಸ್ರಾಣಿ ಹಯಾನಾಮಯುತಾನಿ ಚ ॥೨೨॥

ಯಾವ ಸೈನ್ಯದ ಭಾಗದಲ್ಲಿ ಯುಧಿಷ್ಠಿರನಿದ್ದನೋ, ಅರ್ಜುನನಿದ್ದನೋ ಅಲ್ಲಿ ರಾಜರು ಅಧಿಕ ಸಂಖ್ಯೆಯಲ್ಲಿ ಇದ್ದರು. ಅಲ್ಲಿ ಸಹಸ್ರಾರು ಗಜಗಳೂ ಮತ್ತು ಹತ್ತಾರು ಸಾವಿರ ಅಶ್ವಗಳೂ ಇದ್ದವು.

ಚೇಕಿತಾನಃ ಸ್ವಸೈನ್ಯೇನ ಮಹತಾ ಪಾರ್ಥಿವರ್ಷಭಃ ।
ಧೃಷ್ಟಕೇತುಶ್ಚ ಚೇದೀನಾಂ ಪ್ರಣೇತಾ ತತ್ರ ವಾಹಿನೀಮ್ ॥೨೩॥

ಅಲ್ಲಿ ಪಾರ್ಥಿವಶ್ರೇಷ್ಠನಾದ ಚೇಕಿತಾನನು ತನ್ನ ಸೈನ್ಯಕ್ಕೂ ಮತ್ತು ಚೇದಿಯ ಅಧಿಪತಿಯಾದ ಧೃಷ್ಟಕೇತುವು ತನ್ನ ಸೈನ್ಯಕ್ಕೂ ನಾಯಕರಾಗಿದ್ದರು.

ಸಾತ್ಯಕಿಶ್ಚ ಮಹೇಷ್ವಾಸೋ ವೃಷ್ಣೀನಾಂ ಪ್ರವರೋ ರಥಃ ।
ವೃತಃ ಶತಸಹಸ್ರೇಣ ರಥಾನಾಂ ಪ್ರಾಣದದ್ ಬಲೀ ॥೨೪॥

ಮಹಾಧನುರ್ಧಾರಿಯಾದ, ವೃಷ್ಣಿಶ್ರೇಷ್ಠನಾದ, ರಥಪ್ರವರನಾದ, ಬಲಿಷ್ಠನಾದ ಸಾತ್ಯಕಿಯು ರಥಸಹಸ್ರಗಳಿಂದ ಸುತ್ತುವರಿಯಲ್ಪಟ್ಟು ಸಿಂಹನಾದವನ್ನು ಮಾಡಿದನು.

ಕ್ಷತ್ರದೇವಬ್ರಹ್ಮದೇವೌ ರಥಸ್ಥೌ ಪುರುಷರ್ಷಭೌ ।
ಜಘನಂ ಪಾಲಯಂತೌ ಚ ಪೃಷ್ಠತೋಽನುಪ್ರಜಗ್ಮತುಃ ॥೨೫॥

ಭಕ್ಷ್ಯಂ ಭೋಜ್ಯಂ ಚ ಯತ್ ಕಿಂಚಿದ್ ಯಾನಂ ಯುಗ್ಯಂ ಚ ಸರ್ವಶಃ ॥

ಪುರುಷಶ್ರೇಷ್ಠರಾದ ಕ್ಷತ್ರದೇವ ಮತ್ತು ಬ್ರಹ್ಮದೇವರು ರಥದಲ್ಲಿ ಕುಳಿತು ಸೈನ್ಯದ ಹಿಂಭಾಗವನ್ನು ರಕ್ಷಿಸುತ್ತಾ ಮೂರನೆಯ ಭಾಗದಲ್ಲಿ ಅವರನ್ನು ಹಿಂಬಾಲಿಸಿದರು.

ಭಕ್ಷ್ಯ-ಭೋಜ್ಯಗಳೂ, ವಾಹನಗಳೂ, ಅಶ್ವ ಮೊದಲಾದ ನೊಗಕ್ಕೆ ಹೂಡುವ ಪ್ರಾಣಿಗಳೂ ಎಲ್ಲವೂ ಅದರ ಜೊತೆಯಲ್ಲಿ ಹೋದವು.

ತತ್ರ ನಾಗಸಹಸ್ರಾಣಿ ಹಯಾನಾಮಯುತಾನಿ ಚ ।
ಫಲ್ಗು ಸರ್ವಂ ಕಲತ್ರಂ ಚ ಯತ್ ಕಿಂಚಿತ್ ಕೃಶದುರ್ಬಲಮ್ ॥೨೭॥

ಕೋಶಸಂಚಯವಾಹಾಶ್ಚ ಕೋಷ್ಠಾಗಾರಾಸ್ತಥೈವ ಚ ।
ಗಜಾನೀಕೇನ ಸಂಗೃಹ್ಯ ಶನೈಃ ಪ್ರಾಯಾದ್ ಯುಧಿಷ್ಠಿರಃ ॥೨೮॥

ಅಲ್ಲಿ ಸಹಸ್ರಾರು ಗಜಗಳು, ಹತ್ತಾರು ಸಾವಿರ ಅಶ್ವಗಳು, ಎಲ್ಲ ಹಗುರವಾದ ಪದಾರ್ಥಗಳು, ಪತ್ನಿಯರು, ಕೃಶವೂ ದುರ್ಬಲವೂ ಆದ ಎಲ್ಲಾ ವಸ್ತುಗಳು, ಕೋಶಸಂಚಯಗಳು, ವಾಹನಗಳು, ಕೋಷ್ಠಾಗಾರಗಳು ಇವೆಲ್ಲವನ್ನೂ ಗಜಗಳ ಸಮೂಹದ ಮೇಲೆ ಹೊರಿಸಿಕೊಂಡು ಯುಧಿಷ್ಠಿರನು ಮೆಲ್ಲನೆ ನಡೆದನು.

ತಮನ್ವಯಾತ್ ಸತ್ಯಧೃತಿಃ ಸೌಚಿತ್ತಿರ್ಯುದ್ಧದುರ್ಮದಃ ।
ಶ್ರೇಣಿಮಾನ್ ವಸುದಾನಶ್ಚ ಪುತ್ರಃ ಕಾಶ್ಯಸ್ಯ ವೈ ವಿಭುಃ ॥೨೯॥

ಸತ್ಯಧೃತಿ, ಯುದ್ಧದುರ್ಮದನಾದ ಸೌಚಿತ್ತಿ, ಶ್ರೇಣಿಮಾನ್, ವಸುದಾನ ಮತ್ತು ಕಾಶಿರಾಜನ ಪುತ್ರನಾದ ವಿಭು ಎಲ್ಲರೂ ಅವನನ್ನು ಹಿಂಬಾಲಿಸಿದರು.

ರಥಾಧಿಪತಿಸಾಹಸ್ರಾ ಯೇ ತೇಷಾಮನುಯಾಯಿನಃ ।
ಹಯಾನಾಂ ನವ ಕೋಟ್ಯಶ್ಚ ಮಹತಾಂ ಕಿಂಕಿಣೀಕಿನಾಮ್ ॥೩೦॥

ಗಜಾ ವಿಂಶತಿಸಾಹಸ್ರಾ ಈಶಾದಂತಾಃ ಪ್ರಹಾರಿಣಃ ।
ಕುಲೀನಾ ಭಿನ್ನಕರಟಾ ಮೇಘಾ ಇವ ವಿಸರ್ಪಿಣಃ ॥೩೧॥

ಸಹಸ್ರ ರಥಾಧಿಪತಿಗಳು ಅವರನ್ನು ಹಿಂಬಾಲಿಸಿದರು. ಕಿಂಕಿಣಿಯ ಮಾಲೆಗಳನ್ನು ಹೊಂದಿದ್ದ ಒಂಬತ್ತುಕೋಟಿ ಅಶ್ವಗಳ ದೊಡ್ಡ ಗುಂಪು ಅವರನ್ನು ಹಿಂಬಾಲಿಸಿತು. ಬಾಣದಷ್ಟು ಉದ್ದವಾದ ದಂಡವುಳ್ಳ, ಪ್ರಹಾರಶೀಲವಾದ, ಒಳ್ಳೆಯ ಕುಲದಲ್ಲಿ ಜನಿಸಿದ, ಕುಂಭಸ್ಥಲದಿಂದ ಮದೋದಕವನ್ನು ಸುರಿಸುವ ಇಪ್ಪತ್ತು ಸಹಸ್ರ ಆನೆಗಳು ಮೋಡಗಳಂತೆ ಚಲಿಸಿದವು.

ಷಷ್ಟಿನಾಗಸಹಸ್ರಾಣಿ ದಶಾನ್ಯಾನಿ ಚ ಭಾರತ ।
ಯುಧಿಷ್ಠಿರಸ್ಯ ಯಾನ್ಯಾಸನ್ ಯುಧಿ ಸೈನ್ಯೇ ಮಹಾತ್ಮನಃ ॥೩೨॥

ಕ್ಷರಂತ ಇವ ಜೀಮೂತಾಃ ಪ್ರಭಿನ್ನಕರಟಾಮುಖಾಃ ।
ರಾಜಾನಮನ್ವಯುಃ ಪಶ್ಚಾತ್ ಚಲಂತ ಇವ ಪರ್ವತಾಃ ॥೩೩॥

ಎಲೈ ಭಾರತನೇ, ಮಹಾತ್ಮನಾದ ಯುಧಿಷ್ಠಿರನ ಸೈನ್ಯದಲ್ಲಿ ಇದ್ದ ಅರವತ್ತು ಸಹಸ್ರ ಗಜಗಳು, ಇನ್ನೂ ಹತ್ತುಸಾವಿರ ಗಜಗಳು, ಅವು ಮಳೆಯನ್ನು ಸುರಿಸುವ ಮೋಡಗಳಂತೆ ಕುಂಭಸ್ಥಲಗಳಿಂದ ಮದೋದಕವನ್ನು ಸುರಿಸುತ್ತಾ ಚಲಿಸುವ ಪರ್ವತಗಳಂತೆ ರಾಜನನ್ನು ಹಿಂಬಾಲಿಸಿದವು.

ಏವಂ ತಸ್ಯ ಬಲಂ ಭೀಷ್ಮಂ ಕುಂತೀಪುತ್ರಸ್ಯ ಧೀಮತಃ ॥೩೪॥

ತಥಾ ರಥಸಹಸ್ರಾಣಿ ಪದಾತೀನಾಂ ಚ ಭಾರತ ॥೩೫॥

ಯದಾಶ್ರಿತ್ಯಾಥ ಯುಯುಧೇ ಧಾರ್ತರಾಷ್ಟ್ರಂ ಸುಯೋಧನಮ್ ।

ಎಲೈ ಭಾರತನೇ, ಹೀಗೆ ಮೇಧಾವಿಯಾದ ಕುಂತೀಪುತ್ರನ ಸೈನ್ಯವು ರಥಸಹಸ್ರಗಳಿಂದಲೂ, ಪದಾತಿಗಳಿಂದಲೂ ಕೂಡಿ ಭಯಂಕರವಾಗಿದ್ದಿತು. ಅಂತಹ ಸೈನ್ಯವನ್ನು ಆಶ್ರಯಿಸಿ ಅವನು ಧೃತರಾಷ್ಟ್ರನ ಪುತ್ರನಾದ ದುರ್ಯೋಧನನ ಜೊತೆಯಲ್ಲಿ ಯುದ್ಧವನ್ನು ಮಾಡಿದನು.

ತತೋಽನ್ಯೇ ಶತಶಃ ಪಶ್ಚಾತ್ ಸಹಸ್ರಾಯುತಶೋ ನರಾಃ ॥೩೬॥

ನರ್ದಂತಃ ಪ್ರಯಯುಸ್ತೇಷಾಮನೀಕಾನಿ ಸಹಸ್ರಶಃ ॥೩೭॥

ಇದಲ್ಲದೆ ಹಿಂಭಾಗದಲ್ಲಿ ಯೋಧರು ನೂರರ ಸಂಖ್ಯೆಯಲ್ಲಿ, ಸಾವಿರದ ಸಂಖ್ಯೆಯಲ್ಲಿ, ಹತ್ತುಸಾವಿರದ ಸಂಖ್ಯೆಯಲ್ಲಿ ಗರ್ಜಿಸುತ್ತಾ ತಮ್ಮ ಸೈನ್ಯದ ಜೊತೆಯಲ್ಲಿ ನಡೆದರು.

ತತ್ರ ಭೇರೀಸಹಸ್ರಾಣಿ ಶಂಖಾನಾಮಯುತಾನಿ ಚ ।
ವಾದಯಂತಿ ಸ್ಮ ಸಂಹೃಷ್ಟಾಃ ಸಹಸ್ರಾಯುತಶೋ ನರಾಃ ॥೩೮॥

ಅಲ್ಲಿ ಸಾವಿರ ಭೇರಿಗಳು ಬಾರಿಸಲ್ಪಡುತ್ತಿದ್ದವು. ಹತ್ತುಸಾವಿರ ಶಂಖಗಳು ಊದಲ್ಪಡುತ್ತಿದ್ದವು. ಸಹಸ್ರಸಂಖ್ಯೆಯಲ್ಲಿ, ಹತ್ತುಸಹಸ್ರ ಸಂಖ್ಯೆಯಲ್ಲಿ ಯೋಧರೆಲ್ಲರೂ ಸಂತೋಷದಿಂದ ಕೂಡಿದ್ದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಮ್ ಉದ್ಯೋಗಪರ್ವಣಿ ಅಷ್ಟನವತ್ಯುತ್ತರಶತತಮೋऽಧ್ಯಾಯಃ ॥

॥ ಅಂಬೋಪಾಖ್ಯಾನಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಉದ್ಯೋಗಪರ್ವದಲ್ಲಿ ನೂರ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು.

॥ಸಮಾಪ್ತಮ್ ಅಂಬೋಪಾಖ್ಯಾನಪರ್ವ ॥

॥ ಸಮಾಪ್ತಮ್ ಉದ್ಯೋಗಪರ್ವ ॥

॥ಶ್ರೀಮದ್ವೇಶಾರ್ಪಣಮಸ್ತು ॥

★ ★ ★ ★ ★

ಮನೀಷಿಣಾಂ ಸತ್ತ್ವವಿಚ್ಛೇದನಾಯ
ವಿಧೀಯತೇ ಸತ್ಸು ವೃತ್ತಿಃ ಸದೈವ ।
ಅಬ್ರಹ್ಮಣ್ಯಾಃ ಸಂತಿ ತು ಯೇ ನ ವೈದ್ಯಾಃ
ಸರ್ವೋಚ್ಛೇದಂ ಸಾಧು ಮನ್ಯೇತ ತೇಭ್ಯಃ ॥

ವಿವೇಕಿಗಳಾದವರಿಗೆ ಅವರ ಬುದ್ಧಿಯು ದುರ್ಬುದ್ಧಿಯಿಂದ ವಿಚ್ಛೇದನವನ್ನು ಪಡೆಯದಿರಲು ಯಾವಾಗಲೂ ಸಜ್ಜನರ ವೃತ್ತಿಯು ಶಾಸ್ತ್ರದಲ್ಲಿ ಹೇಳಲ್ಪಡುತ್ತದೆ. ಯಾರು ಬ್ರಾಹ್ಮಣ ದ್ವೇಷಿಗಳೋ, ಯಾರು ವೇದವಿರೋಧಿಗಳೋ ಅವರ ಸರ್ವನಾಶವನ್ನು ಸತ್ಕರ್ಮವೆಂದೇ ತಿಳಿಯಬೇಕು.

ISBN : 978-93-81807-69-9